
ಸಿಖ್‌ರ ಇತಿಹಾಸ

ಆಗುಂಬೆ ಎಸ್. ನಟರಾಜ್







ಸಿಖ್ಖರ ಇತಿಹಾಸ

ಲೇಖಕರು
ಆಗುಂಬೆ ಎಸ್. ನಟರಾಜ್

ಹಂಸ ಪ್ರಕಾಶನ
947, 3ನೇ ಮುಖ್ಯರಸ್ತೆ,
ವಿಜಯನಗರ, ಬೆಂಗಳೂರು – 560 040.

Sikh's History

By Agumbe S. Nataraj

Published by
Hamsa Prakashana
947, 3rd Main Road,
Vijayanagara, Bangalore - 560 040.
Ph : 080-23383004

Edition : 2011

ಮೊದಲ ಮುದ್ರಣ : **2011**

ಪುಟಗಳು : **8+352**

ಬೆಲೆ : ರೂ. **200/-**

ಉಪಯೋಗಿಸಿದ ಕಾಗದ : **70** ಜಿಎಸ್‌ಎಂ ಎನ್.ಎಸ್. ಮ್ಯಾಪ್‌ಲಿಥೋ

ಮುದ್ರಣ
ದೇವತಾ ಎಂಟರ್‌ಪ್ರೈಸಸ್
ನಂ. 1807/9, 5ನೇ ಮುಖ್ಯರಸ್ತೆ,
11ನೇ ಅಡ್ಡರಸ್ತೆ, ಹಂ ನಗರ,
ಬೆಂಗಳೂರು - 560 040.
ಮೊಬೈಲ್ : 9448737645

ಅರ್ಪಣೆ

ಪೂಜ್ಯ ತಂದೆ-ತಾಯಿಯರ
ದಿವ್ಯ ಸ್ಮರಣೆಗೆ

If You don't know history, you don't know anything.
You're a leaf that doesn't know it's part of a tree.

- Michael Crichton -

ನಿಮಗೆ ಇತಿಹಾಸದ ಬಗ್ಗೆ ಅರಿವಿಲ್ಲದಿದ್ದರೆ, ನಿಮಗೆ ಏನೂ ಅರಿವಿಲ್ಲದಂತೆ.
ಒಂದು ಮರದ ಎಲೆ ತಾನು ಅದರ ಒಂದು ಭಾಗವೆಂದು
ಅರಿಯದ ತರಹ ನೀನಾಗುವೆ.

ಮುನ್ನುಡಿ

ನಾನು 80ರ ದಶಕದಲ್ಲಿ ದೆಹಲಿಯಲ್ಲಿ ನೌಕರಿ ಮಾಡುತ್ತಿದ್ದಾಗ, ಒಬ್ಬ ಸಿಖ್ ಮಹಾಶಯನ ಗೆಳೆತನವಾಯಿತು. ನನಗೆ ಇತಿಹಾಸದಲ್ಲಿ ಆಸಕ್ತಿ ಇದ್ದ ಸಂಗತಿ ಅರಿತ ಆತ ನನಗೆ ಒಂದು ಪುಸ್ತಕ ಉಡುಗರೆಯಾಗಿ ಕೊಟ್ಟ. ಪುಸ್ತಕದ ಹೆಸರು **'The History of Sikh People'** ಎಂದಾಗಿತ್ತು. ಲೇಖಕರ ಹೆಸರು ಡಾ. ಗೋಪಾಲ್ ಸಿಂಗ್. ಅವರು ಗೋವಾದ ರಾಜ್ಯಪಾಲರಾಗಿ ನಿವೃತ್ತರಾಗಿದ್ದರು. ಸುಮಾರು 600 ಪುಟಗಳನ್ನು ಹೊಂದಿದ ಆ ಬೃಹತ್ ಗ್ರಂಥ ಸಿಖ್‌ರ ಇತಿಹಾಸದ ಬಗ್ಗೆ ರಚಿಸಿದ ಸಂಶೋಧನಾ ಕೃತಿಯಾಗಿತ್ತು. ನಾನು ಬಹಳ ಉತ್ಸುಕತೆಯಿಂದ ಆ ಗ್ರಂಥವನ್ನು ಓದಿ ಮುಗಿಸಿದೆ. ಪಂಜಾಬ್‌ನ ಇತಿಹಾಸದ ಬಗ್ಗೆ ಅಲ್ಪ ಸ್ವಲ್ಪ ಜ್ಞಾನವಿದ್ದ ನನಗೆ ಆ ಗ್ರಂಥ ಅತ್ಯುಮೂಲ್ಯ ವಿವರಗಳನ್ನು ಒದಗಿಸಿತ್ತು. ಗ್ರಂಥ ಓದಿದ ಮೇಲೆ ನನಗೆ ಪಂಜಾಬ್‌ನ ಪ್ರಖ್ಯಾತ ಐತಿಹಾಸಿಕ ಸ್ಥಳಗಳನ್ನು ನೋಡುವ ಬಯಕೆ ಉಂಟಾದರೂ ಅದನ್ನು ಪೂರೈಸಲಾಗಲಿಲ್ಲ, ಯಾಕೆಂದರೆ ಇಂಧಿರಾ ಗಾಂಧಿಯ ಹತ್ಯಯಾದ ನಂತರ ಪಂಜಾಬ್ ಆತಂಕವಾದಿಗಳ ಮತ್ತು ಕೋಮುವಾದಿಗಳ ಹಿಡಿತಕ್ಕೆ ಸಿಲುಕಿ ಗಲಭೆ, ದಂಗೆ, ಹಿಂಸಾಚಾರಗಳಿಂದ ನರಳುತ್ತಿತ್ತು, ಹೀಗಾಗಿ ನನಗೆ ಪಂಜಾಬ್‌ನ್ನು ಪ್ರವಾಸ ಮಾಡಿ ಸಿಖ್‌ರ ಪವಿತ್ರ ಗುರುದ್ವಾರಗಳಾಗಲೀ ಅವರು ಎಸಗಿದ ತ್ಯಾಗ ಬಲಿದಾನಗಳ ಸ್ಥಳಗಳಾಗಲೀ ನೋಡಲು ಸಾಧ್ಯವಾಗಲಿಲ್ಲ. ಆದರೆ ಸಿಖ್‌ರ ಮೇಲೆ ಎಸಗಿದ ಅತ್ಯಾಚಾರ, ಹಿಂಸಾಚಾರ, ಕೊಲೆ ಇತ್ಯಾದಿಗಳನ್ನು ಕುರಿತ ಒಂದು ಆತ್ಮಚರಿತ್ರಾತ್ಮಕ ಕಾದಂಬರಿ 'ಆತಂಕ' ವನ್ನು ರಚಿಸಿದೆ. ದೆಹಲಿಯಲ್ಲಿ ಜರುಗಿದ ಸಿಖ್ ಹಾತ್ಯಾಕಾಂಡ ಅಂದಿನ ದೆಹಲಿ ಚರಿತ್ರೆ ಮತ್ತು ನನ್ನ ವೈಯಕ್ತಿಕ ಜೀವನಾನುಭವಗಳನ್ನು ವಿವರಿಸಿದ ಕಾದಂಬರಿ ಇದಾಗಿದೆ. ಅದು ಏನೇ ಇದ್ದರೂ ದೆಹಲಿಯಿಂದ ಸ್ವಂತ ಊರಿಗೆ ಹಿಂದಿರುಗಿದ 20 ವರ್ಷಗಳ ನಂತರ ಪಂಜಾಬ್‌ನ ಸಿಖ್‌ರ ಇತಿಹಾಸ ರಚಿಸುವ ಆಸೆ ಮಾತ್ರ ನನ್ನ ಹೃದಯದಲ್ಲಿ ಹಿಂಗದೆ ಇದ್ದುದರಿಂದ 2010 ರಲ್ಲಿ ನಾನು ಪಂಜಾಬ್‌ನ ಪ್ರವಾಸ ಮಾಡಲು ನಿಶ್ಚಯಿಸಿದೆ. ಅದಕ್ಕಾಗಿ ತಯಾರಿ ನಡೆಸಿದೆ. ಹೊಸದಾಗಿ ಪರಿಚಯವಾದ ಒಬ್ಬ ಮಿತ್ರ ನನ್ನೊಂದಿಗೆ ಬರಲು ಒ ್ಪದ, ಆದರೆ ಆತನಿಗೆ ಇತಿಹಾಸದ ಮೇಲೆ ಆಸಕ್ತಿ ಇಲ್ಲದಿದ್ದರೂ ಹಳೇ ನಾಣ್ಯ ದಾಖಲೆ ಇತ್ಯಾದಿಗಳನ್ನು ಕಲೆ ಹಾಕುವ ಹವ್ಯಾಸ ಇರಿಸಿಕೊಂಡಿದ್ದ. 'ಕೋಷ ಓದು ದೇಶ ಸುತ್ತು'ವ ಗಾದೆ ನಂಬಿದರೂ ಅದನ್ನು ಪರಿಪಾಲಿಸುವದರಲ್ಲಿ ನಂಬಿಕೆ ಇರಿಸಿಕೊಳ್ಳದ ಕನ್ನಡಿಗನಾಗಿದ್ದ. ಆತ ಪಂಜಾಬ್ ನೋಡುವ ಅಭಿಲಾಷೆ ತೋರದಿದ್ದರೂ ದೆಹಲಿಯನ್ನು ನೋಡುವ ಆಸೆ ಹೊಂದಿದ್ದರಿಂದ ನನ್ನೊಂದಿಗೆ ಬರಲು ಒಂದು ಶರತ್ತು ವಿಧಿಸಿದ. ದೆಹಲಿ, ಆಗ್ರಾ, ಜಯಪುರ ನಗರಗಳನ್ನು ಅವನಿಗೆ ತೋರಿಸಿದ್ದಲ್ಲಿ ಪಂಜಾಬ್ ಪ್ರವಾಸ ಮಾಡಲು ತಯಾರಿದ್ದ. ನಾನು ಅಸ್ತು ಎಂದೆ ನಾವು ದೆಹಲಿಗೆ ಪಯಣಿಸಿ ಅಲ್ಲಿನ ಒಂದು ಸುಸಜ್ಜಿತ ಹೋಟೆಲ್‌ನಲ್ಲಿ ತಂಗಿದವು. ಮಾರನೆಯ ದಿನ ಅವನನ್ನು ಕರೆದುಕೊಂಡು ದೆಹಲಿಯ ಪ್ರಸಿದ್ಧ ಕುತುಬ್ ಮಿನಾರ್ ನೋಡಲು ಕರೆದೊಯ್ದೆ.

'ನೋಡಿ ಇದೇ ಕುತುಬ್ ಮಿನಾರ್, ಇದೇ 'ಖುವತ್ತಲ್ ಇಸ್ಲಾಮ್'. ಈ ಮಸೀದಿಯನ್ನು 27 ಜೈನ್ ಹಿಂದೂ ಮಂದಿರಗಳ ಅವಶೇಷಗಳಿಂದ ನಿರ್ಮಿಸಿದ ಕೀರ್ತಿ ಕುತ್ಬದ್ದೀನ್ ಐಬಕ್‌ನದಾಗಿದೆ' ಎಂದು ವಿವರಿಸಲು ಯತ್ನಿಸಿದೆ. ಆದರೆ, ನನ್ನ ಮಾತುಗಳಿಗೆ ಬೆಲೆ ನೀಡದ ನನ್ನ ಸ್ನೇಹಿತ ತಾನು ಹೊಸದಾಗಿ ಕೊಂಡಿದ್ದ ಬೆಲೆ ಬಾಳುವ ಮೊಬೈಲ್ ಕ್ಯಾಮರಾದಿಂದ ಚಿತ್ರ ತೆಗೆಯಲಾರಂಭಿಸಿದ್ದ.

ಸ್ವಾಮಿ ನನ್ನ ಮಾತುಗಳನ್ನು ಕೇಳಿ. ಇತಿಹಾಸ ಸ್ವಲ್ಪ ತಿಳಿದುಕೊಳ್ಳಿ. ಚಿತ್ರ ಆಮೇಲೆ 'ತೆಗೆಯಿರಿ' ಎಂದೆ. 'ನಿಮ್ಮ ದಾರಿ ನಿಮಗೆ, 'ನನ್ನ ದಾರಿ ನನಗೆ. ನಿಮ್ಮ ಚರಿತ್ರೆ ಯಾರಿಗೆ ಬೇಕಾಗಿದೆ? ಫೋಟೋ ತೆಗೆದು ಕೊಳ್ಳಲು ಅಡ್ಡಿ ಮಾಡಬೇಡಿ'. ಸ್ನೇಹಿತನ ಮಾತುಗಳನ್ನು ಕೇಳಿದ ನಾನು ನಿಂತಲ್ಲೇ ಕುಸಿದೆ. ಅವನ ಪಾಡಿಗೆ ಅವನನ್ನು ಬಿಟ್ಟು ನಾನು ಅಲ್ಲೇ ಸುತ್ತಾಡಿದೆ.

ದೆಹಲಿಯ ಆಗ್ರಾ ಮತ್ತು ಜಯಪುರ ನಗರಗಳನ್ನು ಪ್ರವಾಸ ಮಾಡಿದ ಮೇಲೆ ನಾವು ಅಮೃತಸರಕ್ಕೆ ಪ್ರಯಾಣಿಸಿದೆವು. ಅಲ್ಲಿ ಪ್ರಸಿದ್ಧ ಸ್ವರ್ಣ ಮಂದಿರ ಎಂದೇ ಪ್ರಸಿದ್ಧವಾದ ಐತಿಹಾಸಿಕ ಗುರುದ್ವಾರವನ್ನು ನೋಡಲು ಹೋದಾಗ ನನ್ನ ಸ್ನೇಹಿತ ಒಳಗೆ ಬರಲು ನಿರಾಕರಿಸಿದ. ಕಾರಣ ಕೇಳಿದಾಗ ಇಷ್ಟವಿಲ್ಲವೆಂದು ನುಡಿದು ಹೊರಗೆ ಅವನನ್ನು ನಿಲ್ಲಿಸಿ, ನಾನು ಒಳಗೆ ಹೋಗಿ ಪ್ರಾರ್ಥನೆ ಸಲ್ಲಿಸಿ, ಫೋಟೋ ಹಿಡಿದು ಹೊರಗೆ ಬಂದಾಗ, ಸ್ನೇಹಿತ ನಿಂತ ಜಾಗದಲ್ಲೇ ನಿಂತಿದ್ದ !

ಹೋಟೆಲ್‌ಗೆ ಹಿಂದಿರುಗಿದಾಗ ಅವನಿಗೆ ನಾನು ಕ್ಯಾಮರಾದಲ್ಲಿ ಫೋಟೋ ಹಿಡಿದ ಗುಡಿಯ ಚಿತ್ರವನ್ನು ತೋರಿಸಿದಾಗ ಅವನು ಚಕಿತಗೊಂಡ. 'ಇದೇ ಏನು ಗೋಲ್ಡನ್ ಟೆಂಪಲ್'? ಎಂದು ಕೇಳಿದ. 'ಹೌದು ಎಂದೆ'. 'ಅಯ್ಯೋ, ನಾನು ಅದನ್ನು ನೋಡಬೇಕು. ಹೋಗೋಣ ಬನ್ನಿರಿ' ಎಂದು ಕಾಡಿದ.

ಇಂತಹ ಸ್ನೇಹಿತನನ್ನು ಕರೆದುಕೊಂಡು ಪಂಜಾಬ್‌ನಲ್ಲಿ ಒಂದು ವಾರ ಪ್ರಯಾಣಿಸಿದೆ.

ನನ್ನ ಪಂಜಾಬ್‌ನ ಸುತ್ತಾಟದಲ್ಲಿ ಅಮೃತಸರದ ಪ್ರಸಿದ್ಧ ಸ್ವರ್ಣ ಮಂದಿರದ ಜೊತೆಗೆ ಐತಿಹಾಸಿಕ ಜಲಿಯಾನ್‌ವಾಲಾಬಾಗ್, ದುರ್ಗಾಮಂದಿರದ ಜೊತೆಗೆ ಪ್ರಸಿದ್ಧ ಮಾರುಕಟ್ಟೆಗಳು ಇತ್ಯಾದಿಗಳನ್ನು ನೋಡಿದೆವು. ಅಮೃತಸರದಿಂದ ಹೊರಟ ನಾವು ತರನ್ ತರನ್, ಗುರುದಾಸ್‌ಪುರ ಎಲ್ಲವನ್ನು ನೋಡಿದೆವು. ಗುರು ಗೋವಿಂದ ಸಿಂಗ್‌ರು ಸ್ಥಾಪಿಸಿದ ಖಾಲ್ಸಾ ಸಂಘಟನೆಯ ಸ್ಥಳವಾದ ಆನಂದ್‌ಪುರ ಸಾಹಿಬ್‌ನ್ನು ನೋಡಿ ಧನ್ಯವಾದೆ. ಶಾಪಗ್ರಸ್ಥ ನಗರ ಸರ್‌ಹಿಂದ್ ನೋಡಿ ಅಲ್ಲಿ ಸುತ್ತಾಡಿದೆವು. ಅಲ್ಲೇ ನಿರ್ಮಿಸಿದ ಐತಿಹಾಸಿಕ ಗುರುದ್ವಾರವನ್ನು ನೋಡಿದೆ. ಸಿಖ್‌ರ ಪರಮ ಮಿತ್ರನಾಗಿ ಹೊರ ಹೊಮ್ಮಿ ಅವರಿಗೆ ಹಾನಿ ಮಾಡದೆ ಉಳಿದುಕೊಂಡ ಮಲೇರ್‌ಕೋಟ್ಲಾ ನಗರವನ್ನು ಮತ್ತು ಅಲ್ಲಿನ ನಾವಾಬನ ಅರಮನೆಯನ್ನು ನೋಡಿ ಸಂತೋಷ ಪಟ್ಟೆವು.

ಮಹಾರಾಜ ರಣಜಿತ್‌ಸಿಂಗ್ ನಿರ್ಮಿಸಿದ ಪ್ರಸಿದ್ಧ ,ಲ್ಲೋರ್ ಕೋಟೆಯನ್ನು ನೋಡಿ ಆನಂದಗೊಂಡೆ. ಕೋಟೆಯೊಳಗೆ ಬ್ರಿಟಿಷ್‌ರು ಪ್ರಾರಂಭಿಸಿದ ಪೋಲೀಸ್ ಅಕಾಡೆಮಿ ಮತ್ತು ವಸ್ತು ಪ್ರದರ್ಶನ ಮಳಿಗೆಗಳನ್ನು ನೋಡಿದೆ.

ಪಾಟಿಯಾಲಾ ನಗರಕ್ಕೆ ತೆರಳಿ ಅಲ್ಲಿದ್ದ ಪ್ರಸಿದ್ಧ ಅರಮನೆಯನ್ನು ಕಂಡು ಆನಂದ ಪಟ್ಟೆ ಅದು ಈಗ ಸ್ಪೋರ್ಟ್ಸ್ ಅಕಾಡೆಮಿಯನ್ನಾಗಿ ಪರಿವರ್ತಿಸಿದ್ದಾರೆ.

ಪಂಜಾಬ್‌ನ ಪ್ರವಾಸ ಮಾಡಿ ಮುಗಿಸಿದ ನಾನು ಗ್ರಂಥ ರಚನೆ ಮಾಡಲು ಪ್ರಾರಂಭಿಸಿದಾಗ ಕೇವಲ ಒಂದೇ ಒಂದು ಗ್ರಂಥದ ಆದಾರ ಪಡೆದು ಗ್ರಂಥ ರಚಿಸುವುದಕ್ಕೆ ಅಡ್ಡ ಬಂದಿತು. ಆಗ ನನ್ನ ಮಗ ಹರೀಶ್ ನನ್ನ ಸಹಾಯಕ್ಕೆ ಬಂದು ನನಗೆ ಗ್ರಂಥರಾಶಿಗಳನ್ನು ಕೊಂಡು ನನ್ನ ಮುಂದೆ ಇರಿಸಿದ. ಅವನ್ನ ಓದಿ ಮುಗಿಸಲು ಹಲವಾರು ತಿಂಗಳೇ ಬೇಕಾಯಿತು ಆದರೆ ಹಲವು ಉಪಯುಕ್ತ ಸಂಗತಿಗಳು ಟಿಪ್ಪಣಿಗಳು, ವಿಶೇಷತೆಗಳು, ನನ್ನ ಗಮನಕ್ಕೆ ಬಂದು ನನ್ನ ಗ್ರಂಥ ರಚನೆಗೆ ಅವು ಸಹಕಾರಿಯಾದವು.

ಪ್ರಾಯಶಃ ಕನ್ನಡದಲ್ಲಿ ಸಿಖ್‌ರ ಇತಿಹಾಸದ ಬಗ್ಗೆ ಯಾವುದೇ ಗ್ರಂಥ ರಚನೆಯಾಗಿಲ್ಲವೆಂಬ ವಿಷಯ ನನಗೆ ಅರಿವಾಗಿದ್ದರ ಪ್ರಯುಕ್ತ ಈ ಗ್ರಂಥ ರಚನೆ ಒಂದು ಪ್ರಬಲ ಕಾರಣವಾಗಿದ್ದರೂ ನನಗೆ ಪ್ರವಾಸ ಸಾಹಿತ್ಯ ರಚನೆಯಲ್ಲಿ ವಿಶೇಷ ಆಸಕ್ತಿ ಇರುವ ಕಾರಣವೂ ಈ ಗ್ರಂಥ ರಚನೆಗೆ ಒಂದು ಪ್ರಬಲ ಕಾರಣವೂ ಒಂದಾಗಿದೆ. ಅದು ಹೇಗಿದ್ದರೂ ಈ ಗ್ರಂಥವನ್ನು ರಚಿಸಿ ಕನ್ನಡಿಗರ ಮುಂದೆ ಇರಿಸಿದ್ದೇನೆ. ಸಹೃದಯ ಓದುಗರು ಇದನ್ನು ಓದಿ ತಮ್ಮ ಟೀಕೆ ಟಪ್ಪಣಿ ನೀಡಿದರೆ ನಾನು ಧನ್ಯನಾಗುತ್ತೇನೆ.

ನನ್ನ ಈ ಗ್ರಂಥವನ್ನು ಅಚ್ಚುಕಟ್ಟಾಗಿ ಅಚ್ಚುಮಾಡಿದ ದೇವತಾ ್ರಿಂಟ್ಸ್‌ನ ಶ್ರೀ ರಾಮಪ್ಪನವರಿಗೆ ನಾನು ಅಭಾರಿಯಾಗಿದ್ದೇನೆ.

ತಮ್ಮವನೇ ಆದ
ಆಗುಂಬೆ ಎಸ್. ನಟರಾಜ್

ಇದೇ ಲೇಖಕರ ಇತರ ಕೃತಿಗಳು

1. ಇದು ದಿಲ್ಲಿ! ಇದು ದೆಹಲಿ! (ಪ್ರವಾಸ ಕಥನ)
2. ಬಾತುಕೋಳಿ (ಕಾದಂಬರಿ)
3. ಆತಂಕ (ಕಾದಂಬರಿ)
4. ಚಕ್ಕಂದ (ಹನಿಗವನಗಳು)
5. ರಸನಿಮಿಷ
6. ರಸವೈಚಾರಿಕತೆ
7. ಜೀವನ ಚರಿತ್ರಾವಳಿ ಭಾಗ – 1
8. ಜೀವನ ಚರಿತ್ರಾವಳಿ ಭಾಗ – 2
9. ಜೀವನ ಚರಿತ್ರಾವಳಿ ಭಾಗ – 3
10. ದಿಲ್ಲೀಯಿಂದ ತಾಮ್ಡಿ ಸುಲ್ಲಾಗೆ
11. ಇದು ಕಾಶಿ! ಇದು ವಾರಣಾಸಿ!
12. ಸರ್ದಾರ್ ವಲ್ಲಭಭಾಯಿ ಪಟೇಲ್
13. ರಾಣಿ ವಿಕ್ಟೋರಿಯಾ
14. ಫ್ಲಾರೆನ್ಸ್ ನೈಟಿಂಗೇಲ್
15. Secularism
16. ರಾಷ್ಟ್ರೀಯತೆಯಿಂದ ಮತಾಂಧತೆಗೆ – ಒಂದು ಪಯಣ
17. ದಿಲ್ಲೀ ದಂಗೆ ಮತ್ತು ಇತರ ಕತೆಗಳು
18. ಮೊಹಮ್ಮದ್ ಪೈಗಂಬರ್ ಮತ್ತು ಖಲೀಫರು
19. ಹೊರನಾಡಿನ ಮೂರು ಕರ್ನಾಟಕ ರಾಜ್ಯಗಳು(4ನೇ ಮುದ್ರಣ)

ಗುರು ನಾನಕ್ (೧೪೬೯–೧೫೩೯)

"ರಾಮ ಎಂದು ನಿನ್ನನ್ನು ಕರೆಯುವರು ಕೆಲವರು,
ಖುದಾ ಎನ್ನುವರು ಕೆಲವರು,
ನಿನ್ನ ಸೇವೆಯನ್ನು ಮಾಡುವರು ಗೋಸಾಯಿಗಳು,
'ಅಲ್ಲಾ' ಎಂದು ಸೇವೆಗೈವರು ಇತರರು
ಆದರೆ, ಓ ಕರುಣಾಳು ದೇವಾ, ನೀನೊಬ್ಬನೇ ಕಾರಣ ಮತ್ತು ಕರ್ತ.
ಆದ್ದರಿಂದ ನನ್ನನ್ನು ನಿನ್ನ ದಯೆಯಿಂದ ಹರಸು ಕರುಣಾಳು.
ಪವಿತ್ರ ಯಾತ್ರಾಸ್ಥಳಕ್ಕೆ ಹೋಗುವರು ಕೆಲವರು,
ಹಜ್‌ಯಾತ್ರೆ ಮಾಡುವರು ಕೆಲವರು,
ನೈವೇದ್ಯವನ್ನು ಅರ್ಪಿಸುವರು ಕೆಲವರು,
ಇನ್ನು ಕೆಲವರು ನಿನಗೆ ಬಾಗಿ ನಮಸ್ಕರಿಸುವರು.
ವೇದಗಳನ್ನು ಓದುವರು ಕೆಲವರು,
ಇತರ ಕೆಲವರು ಷೆಮ್ ವಂಶದ ಗ್ರಂಥಗಳನ್ನು ಓದುವರು
ಬಿಳಿ ಬಣ್ಣದ ಉಡುಪನ್ನು ಧರಿಸುವರು ಕೆಲವರು,
ಇತರರು ಧರಿಸುವರು ನೀಲಿ ಬಣ್ಣದ ಉಡುಪನ್ನು
ತುರ್ಕಿಯರೆಂದು ಕರೆದರು ಕೆಲವರನ್ನ,
ಇತರರನ್ನು ಕರೆದರು ಹಿಂದೂಗಳೆಂದು.
ದೇವಲೋಕವನ್ನು ಅಪೇಕ್ಷಿಸುವರು ಕೆಲವರು
ಇನ್ನು ಕೆಲವರು ಅಪೇಕ್ಷಿಸುವರು ಸ್ವರ್ಗವನ್ನು
ನಾನಕ್ ಹೇಳುತ್ತಾನೆ, "ಯಾರು ದೇವರ ಇಚ್ಛೆಯನ್ನು ಪಡೆಯವರೋ
ಆತನೊಬ್ಬನೇ ಅರಿಯುವವನು ರಹಸ್ಯಮಯ, ಪ್ರಯತ್ನಶಕ್ತಿ ದೇವರನ್ನು"

– ಗುರು ನಾನಕ್

'ನನ್ನ ದೇವರು ವೇದದಲ್ಲಾಗಲಿ ಅಥವಾ ಸಮೆಟಿಕ್ ಗ್ರಂಥಗಳಲ್ಲಾಗಲೀ (ಮಧ್ಯ ಪ್ರಾಚ್ಯದ ಧರ್ಮಗಳಾದ ಯಹೂದಿ, ಕ್ರಿಶ್ಚಿಯನ್ ಮತ್ತು ಇಸ್ಲಾಮ್) ಅಲ್ಲ, ಯಾಕೆಂದರೆ ಅವನು ಅವೆರಡಕ್ಕಿಂತಲೂ ದೂರವಾಗಿದ್ದಾನೆ, ಅವನು ಜೀವಂತ ಪ್ರತ್ಯಕ್ಷವಾಗಿದ್ದಾನೆ' ಎಂದು ಸಾರಿದ ಗುರು ನಾನಕ್ ಸಿಖ್ ಧರ್ಮದ ಪ್ರಪ್ರಥಮ ಸ್ಥಾಪಕ ಮತ್ತು ಧರ್ಮಗುರು.

ಗುರುನಾನಕ್‌ನ ಜನ್ಮ ಏಪ್ರಿಲ್ ೧೫, ೧೪೬೯ರಂದು ಈಗಿನ ಪಾಕಿಸ್ಥಾನದ ಪಂಜಾಬ್ ಪ್ರಾಂತ್ಯದ ತಲವಾಂಡಿ ರೇ ಭೋ ಎಂಬ ಹಳ್ಳಿಯಲ್ಲಿ ಆಯಿತು.[೧]

೧. P 140 The Rigveda and the History of India by David Frawley

ಭಾರತ ದೇಶದಲ್ಲಿರುವ ಪಶ್ಚಿಮ 'ಪಂಜಾಬ್' ಪ್ರಾಂತ್ಯದ ಹೆಸರು. ಋಗ್ವೇದದಲ್ಲಿ ಉಲ್ಲೇಖಗೊಂಡಿರುವುದನ್ನು (ಪಂಚ-ಅಪ) ಎಂದು ಐದು ನದಿಗಳ ನಾಡು ಎಂದು ಹೆಸರುವಾಸಿಯಾಗಿದೆ. ಆದರೆ "ಗಾಂಧಾರಾ"[೨] ಎಂಬ ಹೆಸರು ಋಗ್ವೇದ ಮತ್ತು ಅಥರ್ವವೇದಗಳಲ್ಲಿ ಉಲ್ಲೇಖಗೊಂಡಿದೆ.

ಅರಾಬಿಕ್ ಭಾಷೆಯಲ್ಲಿ 'ಪಂಜಾಬ್' ಎಂದರೆ ಐದು ನದಿಗಳ ನಾಡು ಎಂಬ ಅರ್ಥ ಬರುತ್ತದೆ ಎಂದಿದ್ದಾರೆ. (ಪಾಂಚ್-೫, ಅಬ್-ನದಿ)

ಅವನ ತಂದೆಯ ಹೆಸರು ಮೆಹ್ತಾ ಕೂಲೂ ಎಂದಾಗಿದ್ದು, ಆತ ಪಂಜಾಬ್‌ನ ಪ್ರಸಿದ್ಧ ಈ ಖಾತ್ರೀ ಜಾತಿಗೆ ಸೇರಿದವನಾಗಿದ್ದ.[೩]

ಖಾತ್ರಿಗಳು ಕ್ಷತ್ರಿಯರಾಗಿದ್ದು, ಅವರಲ್ಲಿ ಓದು ಬರಹ ವೇದಗ್ರಂಥಗಳ ಅಭ್ಯಾಸ ಮಾಡಿ, 'ವೇದಿ'(ಬೇದಿ) ಎಂಬ ಉಪಜಾತಿಗೆ ಸೇರಿದವರೂ ಇದ್ದರು. ಇಂತಹ ಉಪಜಾತಿಗೆ ಸೇರಿದ ಮೆಹ್ತಾ ಕಾಲೂ, ಹಳ್ಳಿಯ ಮುಸ್ಲಿಮ್ ಜಮೀನ್ದಾರರ ಬಳಿ ಕಾರಕೂನನಾಗಿ ದುಡಿಯುತ್ತಿದ್ದ. ಕಾಲೂ ಮೆಹ್ತಾನಿಗೆ ಒಬ್ಬ ಹೆಣ್ಣು ಮಗಳಿದ್ದು, ಆಕೆಯ ಹೆಸರು ನಾನಕೀ ಎಂದು ಕರೆದು, ಮುಂದೆ ಅವಳನ್ನು ಜಯರಾಮ್‌ನೆಂಬ ಸರಕಾರೀ ಗುಮಾಸ್ತನಿಗೆ ಕೊಟ್ಟು ಲಗ್ನ ಮಾಡಿಕೊಡಲಾಯಿತು.

ಆರು ವರ್ಷಗಳಾಗಿದ್ದಾಗ ನಾನಕ್‌ನಿಗೆ ಒಬ್ಬ ಪಂಡಿತನಿಂದ ವಿದ್ಯಾಭ್ಯಾಸ ಮಾಡಿಸಲಾಯಿತು. ಪಂಡಿತ ನಾನಕನಿಗೆ ಗುರುಮುಖಿ, ದೇವನಾಗರಿಯ ಬರವಣಿಗೆ ಮತ್ತು ಓದುವುದನ್ನು ಕಲಿಸಿ ಅವುಗಳ ಮುಖಾಂತರ ಗಣಿತ ಮತ್ತು ಇತರ ವಿಷಯಗಳ ಪರಿಚಯ ಮತ್ತು ಅಭ್ಯಾಸ ಮಾಡಿಸಿದ. ಹಲವು ವರ್ಷಗಳ ನಂತರ, ನಾನಕನಿಗೆ ಒಬ್ಬ ಮುಸ್ಲಿಂ ಮೌಲ್ವಿಯಿಂದ ಇಸ್ಲಾಮ್ ಧರ್ಮ ಮತ್ತು ಸಂಸ್ಕೃತಿಗಳ ಅಭ್ಯಾಸ ಮಾಡಿಸಲಾಯಿತು. ಇದರಿಂದ ನಾನಕನಿಗೆ ಹಿಂದೂ ಮತ್ತು ಇಸ್ಲಾಮ್ ಧರ್ಮಗಳ ಅರಿವು ಬಾಲ್ಯದಲ್ಲೇ ಆಗಿ, ಅವುಗಳ ತಾತ್ಪರ್ಯ ಮನದಟ್ಟಾಗಿ, ಮುಂದೆ ಪ್ರಚಾರ ಮಾಡಿ ಪ್ರಸಿದ್ಧ ಪಡಿಸಿದ 'ಸಿಖ್' ಧರ್ಮಕ್ಕೆ ಅವು ತಳಹದಿಯಾಯಿತು.

೧೩ನೆಯ ವಯಸ್ಸಿನಲ್ಲಿ ವಾಡಿಕೆಯಂತೆ ನಾನಕನಿಗೆ ಯಜ್ಞೋಪವೀತ ದೀಕ್ಷೆ ನೀಡಲು ಅವರ ತಂದೆ ನಿರ್ಧರಿಸಿದ. ಅದಕ್ಕಾಗಿ ಒಂದು ದಿನವನ್ನು ಗೊತ್ತುಮಾಡಿ, ಸಮಾರಂಭ ಏರ್ಪಡಿಸಿ, ಬಂಧು ಮಿತ್ರರನ್ನು ಆಮಂತ್ರಿಸಿದ. ಆದರೆ, ಆ ಸಮಾರಂಭದಲ್ಲಿ

---

೨. Hindu Polity by K P Jaiswal.

೩. P 49 The Sikhs by A H Bingley - 'The Khatris are staunch Hindus and it is somewhat singular that while giving a religion and priests to the Sikhs, they themselves are comparatively seldom of that persuation. The Khatris are a very fine, fair and handsome race, and are generally very well educated'.

ಭಾಗವಹಿಸಿ, ಜನಿವಾರವನ್ನು ಧರಿಸಲು ಒಪ್ಪದೆ. ತಂದೆ ಮತ್ತು ಪುರೋಹಿತರ ಆಜ್ಞೆ, ಅನುರೋಧ ಮತ್ತು ಬೇಡಿಕೆಗಳನ್ನು ತಿರಸ್ಕರಿಸಿದ ಬಾಲಕ ನಾನಕ್.

'ಜನಿವಾರವನ್ನು ಧರಿಸಲು ತಿರಸ್ಕರಿಸಿ, ಯಾವ ದಾರವನ್ನು ಧರಿಸಲು ಸಿದ್ಧನಾಗಿದ್ದೀಯ?' ಎಂದು ಪುರೋಹಿತ ಕೇಳಿದ್ದಕ್ಕೆ ಬಾಲಕ ನಾನಕ್ ಈ ರೀತಿ ಉತ್ತರಿಸಿದ :

ಕರುಣೆ ಹತ್ತಿಯದಾದರೆ,
ಮತ್ತು ಸಂತೃಪ್ತಿ ದಾರವಾದರೆ,
ಮತ್ತು ಸಂಯಮವು ಗಂಟಾದರೆ,
ಮತ್ತು ಸತ್ಯವು ಹೆಣೆದ ದಾರವಾದರೆ'

(ಜನಿವಾರ ಹತ್ತಿಯ ನೂಲಿನಿಂದ ಹೆಣೆದು, ಮಧ್ಯದಲ್ಲಿ ಒಂದು ಗಂಟು ಹಾಕಲ್ಪಡುತ್ತದೆ.) ೪

ಜನಿವಾರ ಧರಿಸಿದ ಯಾರೇ ಒಬ್ಬ ಉಚ್ಚ ಕುಲದ ವ್ಯಕ್ತಿ ಅಸತ್ಯ ನುಡಿದು, ಸುಳ್ಳಿನ ಜಾಡು ಹಿಡಿದು, ಕಳ್ಳತನ, ಕೊಲೆ ಸುಲಿಗೆ ಮಾಡಿದರೇನು ಫಲ? ಎಂದು ನಾನಕ್ ಸಾರಿ, ಜನಿವಾರವನ್ನು ಧರಿಸಲು ತಿರಸ್ಕರಿಸಿದ. ೫

ಶ್ರೀ ಗೋಪಾಲ್ ಸಿಂಗ್, ತಮ್ಮ ಗ್ರಂಥದಲ್ಲಿ ನಾನಕ್‌ನ ಮೇಲೆ ರಚಿಸಲಾದ ಜೀವನ ಚರಿತ್ರೆ 'ಜನಮ್ ಸಖೀ' ಯಲ್ಲಿ ಪ್ರಚುರಪಡಿಸಲಾದ ಹಲವಾರು ಘಟನಾವಳಿಗಳನ್ನು ನಮೂದಿಸಿದ್ದರೂ ಅವು ಸಾಕಷ್ಟು ನಂಬಲರ್ಹ ಎಂದಿದ್ದಾರೆ. ೬

---

೪. P. 16-18 The Sikh Religion by Macauliffe

೫. P 37 The History of Sikh People by Gopal Singh

೬. Early Sikh Tradition by McLeod.

Janam Sakhis, hagiographic accounts of the life of Nanak - They are commonly defined 'Biography of Guru Nanak' which is not true. They are tradition in precisely the same as the Hadits, and although they lack some of the features associated with their Muslim counterpart. . .. .'

ಕರ್ನಾಟಕದ ಬಸವಧರ್ಮದಲ್ಲಿ ಈ ರೀತಿ ಧರ್ಮವನ್ನು ಪ್ರತಿಪಾದಿಸುವುದನ್ನು ನಾವು ಕಾಣಬಹುದಾಗಿದೆ.

'Basava does not deny the world and man, for he says that world is the workshop of God and man is his handwork. His religion is centred around man, the divine man. Human personality is not a mean thing, its value is great since it can come in union with divine personality. There

ಮಗನ ಮಾತುಗಳನ್ನು ಕೇಳಿದ ತಂದೆಗೆ ಕೋಪ ಉಕ್ಕೇರಿತು. ಸೊಕ್ಕಿನ ಮಗನಿಗೆ

---

are enough possibalities in man and his duty or religion consists in expressing them fully. The higher self of man is to be realised and the lower self subimated. Love is the best expression of the true self and all the virtues that emanate from love such as kindness, charity, sympathy and non-violence are to be welcomed. These virtues are to be realised though self-effort and the service of man or 'Dasoha' This is the sum and substance of Basava's Religion,. . . .'

(P 55 Sri Basava. A prophet by Sri Kumara swamiji)

ನಾನಕ್‌ನ ಧಾರ್ಮಿಕ ತತ್ತ್ವ ವಿಚಾರಗಳಲ್ಲಿ ಮೊದಲನೆಯದಾಗಿ, ದೇವರ ಅಸ್ತಿತ್ವ ಮತ್ತು ಅವನ ಗುಣವಿಚಾರಗಳ ಬಗ್ಗೆ, ಅವನು ಈ ರೀತಿ ಸಾರಿದ; ದೇವನೊಬ್ಬ, ಆದರೆ ಅವನು ನಿರಂಕಾರ, ಅಕಾಲ, ಅಲಖ್. ಆದರೆ ಮುಕ್ತಿಯನ್ನು ನಂಬಿ ಪ್ರತಿಪಾದಿಸಿದ ನಾನಕ್, ದೇವರು ಕರುಣಾಮಯಿ, ಮುಕ್ತಿದಾಯಕ, ಕಾಣದಿದ್ದರೂ, ಆತ ಸರ್ವವ್ಯಾಪಿ, ಎಲ್ಲೆಲ್ಲೂ ಇರುವವ. ಯಾವ ಮನುಷ್ಯ ಮುಕ್ತಿಗಾಗಿ ಪರಿತಪಿಸುತ್ತಾನೋ, ಅವನಿಗೆ ದೇವರು ಪ್ರತ್ಯಕ್ಷನಾಗುತ್ತಾನೆ. ಕಣ್ಣಿದ್ದರೂ ಕುರುಡರಂತೆ ವರ್ತಿಸಿ, ಅಜ್ಞಾನದಿಂದಿರುವ ಮನುಷ್ಯರಿಗೆ ದೇವರು ಕಾಣುವುದಿಲ್ಲ.

ಎರಡನೆಯದಾಗಿ, ನಾನಕ್ ಮಾನವನ ಸ್ವಭಾವ, ಗುಣಗಳ ಬಗ್ಗೆ ತನ್ನ ವಿಚಾರಗಳನ್ನು ಈ ರೀತಿ ಸಾರುತ್ತಾನೆ: ಮಾನವ ಸ್ವಭಾವತಃ ಕುರುಡನಾಗಿ ದೇವರ ಅರಿವನ್ನು ಕಾಣುವುದಿಲ್ಲ. ಮೋಕ್ಷದ ಅಭಿಲಾಷೆ ಹೊತ್ತರೂ, ಅದನ್ನು ಎಲ್ಲಿ ಹೇಗೆ ಪಡೆಯಬೇಕೆಂಬ ಅರಿವು ಇಲ್ಲದೆ ಪೇಚಾಡುತ್ತಾನೆ. ಮಂದಿರ, ಮಸೀದಿಗಳಲ್ಲಿ, ಮೋಕ್ಷಕ್ಕೆ ಪ್ರಾರ್ಥನೆ ಸಲ್ಲಿಸಿ, ಅಜ್ಞಾನದಿಂದ ನರಳುತ್ತಾನೆ. ಇದನ್ನೇ 'ಮಾಯಾ' ಎಂದು ಕರೆದ ನಾನಕ್. ಅವನ ವಿಚಾರಗಳಲ್ಲಿ 'ಮಾಯಾ' ಎಂದರೆ ವಿಶ್ವವೇ ಮಾಯೆಯಲ್ಲ ಭ್ರಮೆಯಲ್ಲ. ಆದರೆ ಈ ವಿಶ್ವದ ಮೌಲ್ಯಗಳೇ ಮಾಯೆ ಎಂದು ಸಾರಿದ. ಮಾನವ ಈ ಪ್ರಾಪಂಚಿಕ ಮೌಲ್ಯಗಳನ್ನು ಸತ್ಯವೆಂದು ಬಗೆದು, ಅವನ್ನು ಅಂಗೀಕರಿಸಿ, ಮುಕ್ತಿ ಪಡೆಯಲು ಹೆಣಗುವುದೇ 'ಮಾಯೆ' ಎಂದು ಸಾರಿದನು.

ಹಾಗಾದರೆ ಬೇರೆ ಉಪಾಯವೇನು?

ನಾನಕ್ ಮುಕ್ತಿ ಪಡೆಯಲು ಹಲವಾರು ಮಾರ್ಗಗಳಿವೆ ಎಂದನು. ಆದರೆ, ಅವನ ಪ್ರಕಾರ ಗುರುವಿನ ಬಾಯಿಯಿಂದ ಹೊರಬಂದ 'ಶಬ್ದ' ಸಾಕ್ಷಾತ್ ದೇವರಿಂದ ಹೊರಬಂದ ಸಂದೇಶಗಳಾಗಿದ್ದು, ಅದರ ಮುಖಾಂತರ ತನ್ನ ಅಸ್ತಿತ್ವವನ್ನು ಬಹಿರಂಗಪಡಿಸುತ್ತಾನೆ. ಈ ದೈವಾಂಶ 'ಶಬ್ದ' ಗುರುವಿನ ಮುಖಾಂತರ ಶಿಷ್ಯನಿಗೆ ಪ್ರಕಟವಾಗಿ, ಆತನಿಗೆ ದೈವದ 'ಹುಕುಂ' ದೊರೆಯುತ್ತದೆ. ಅವನಿಗೆ ಮುಕ್ತಿ ದೊರೆಯುತ್ತದೆ. ಮುಕ್ತಿ ಎಂದರೆ ಪರಮ ಆನಂದ. (harmony)

ಈ ಸುಖಶಾಂತಿ ದೊರೆಯಬೇಕಾದರೆ, ಭಗವಂತನ ನಾಮಸ್ಮರಣೆ, ನಾಮಜಪ ಮಾಡಬೇಕು.

ಬುದ್ಧಿ ಕಲಿಸಲು ಅವನನ್ನು ದನ ಮೇಯಿಸುವ ಮತ್ತು ಕಾಯುವ ಕೆಲಸಕ್ಕೆ ಹಾಕಿದ. ಬಾಲಕ ನಾನಕ್ ದನ ಕಾಯುವ ಬದಲು, ಅರಳಿ ಮರದ ಕೆಳಗೆ ಕುಳಿತು ದೇವರ ಧ್ಯಾನ ಮಾಡತೊಡಗಿದ. ದನಗಳು ಹೊಲಗದ್ದೆಗಳಿಗೆ ನುಗ್ಗಿ ಬೆಳೆದು ನಿಂತ ಪೈರುಗಳನ್ನು ತಿಂದು ಧ್ವಂಸ ಮಾಡಿದವು ! ಹೊಲಗಳ ಯಜಮಾನನ ದೂರನ್ನು ಆಲಿಸಿದ ನಾನಕನ ತಂದೆ, ಅವರಿಗಾದ ನಷ್ಟವನ್ನು ತುಂಬಿದ.

ದನ ಕಾಯುವ ಕೆಲಸಕ್ಕೆ ನಾನಕ್ ಲಾಯಕ್ಕಲ್ಲ ಎಂದು ಅರಿತ ಅವನ ತಂದೆ, ಅವನನ್ನು ವ್ಯಾಪಾರ ಮಾಡುವ ಕಾಯಕಕ್ಕೆ ನೇಮಿಸಿ, ಅವನಿಗೆ ಸ್ವಲ್ಪ ಹಣ ನೀಡಿ ಹತ್ತಿರದ ಮಾರುಕಟ್ಟೆಗೆ ದಿನಸಿ ಖರೀದಿಸಲು ಕಳುಹಿಸಿದ. ನಾನಕ್ ಮಾರುಕಟ್ಟೆಗೆ ಸಾಗುವ ಮಧ್ಯದಲ್ಲಿ ತನಗೆ ಎದುರಾದ ಬಡಬಗ್ಗರಿಗೆ ಆ ಹಣವನ್ನು ದಾನಮಾಡಿ, ದಾರಿಯ ಬದಿಯಲ್ಲಿದ್ದ ಮರದ ಬುಡದಲ್ಲಿ ಧ್ಯಾನ ಮಾಡುತ್ತ ಕುಳಿತ. ತಂದೆ ಅವನನ್ನು ಹುಡುಕುತ್ತ ಬಂದಾಗ ಅವನಿಗೆ ಕಂಡಿದ್ದು ಬಾಲಕ ಧ್ಯಾನ ಮಾಡುತ್ತಾ

ಈ ನಾಮಜಪ ಮಾತ್ರ ಅತ್ಯಂತ ಮನಃಪೂರ್ವಕ. ಏಕಾಗ್ರತೆ, ಶಾಂತಿಯುತವಾಗಿ ಮಾಡಬೇಕು. ಆಗ ಮಾನವ ಸಂಪೂರ್ಣ ಪರಮ ಆನಂದ ಪಡೆದು, ಮುಕ್ತಿ ಪಡೆಯುತ್ತಾನೆ. ಮುಕ್ತಿ ಪಡೆಯುವ ಈ ಸ್ಥಿತಿಗೆ ತಲಪುವವರು, ಅದನ್ನು ಅನುಭವಿಸುವವರೆಗೆ ಅರಿವು ಆಗುತ್ತದೆ. ಇದೇ ನಾನಕ ಪ್ರತಿಪಾದಿಸಿದ ಸಾಕ್ಷಾತ್ಕಾರ. (P 296 The Cultural History of India - Sikhism by McLeod.)

ಬಸವ ಸಿದ್ಧಾಂತ ನಾನಕ್‌ನ ಸಿದ್ಧಾಂತಕ್ಕೆ ಹತ್ತಿರವಾಗಿದ್ದರೂ, ಅದು ಮೋಕ್ಷ ದೊರೆಯಲು, ಭಕ್ತಮಾರ್ಗವನ್ನು ಅನುಸರಿಸಲು ಹೇಳಿದ. ನಾನಕ ಉಪದೇಶಿಸಿದ ತರಹ ಏಕಮಾತ್ರ 'ನಾಮ' ಸ್ಮರಣೆಯಿಂದ ಜಪಮಾಡಿ, ದೈವತ್ವ ಪಡೆಯಬಹುದೆಂಬುದಾಗಿ ಸಾರಿದರೆ, ಬಸವಣ್ಣ ಎಂಟು ಮಾರ್ಗ 'ಅಷ್ಟಾವರಣ'ಗಳ ಉಪಾಯ ಸೂಚಿಸಿದ್ದಾರೆ. ಅವು ಇಂತಿವೆ : ಗುರು, ಲಿಂಗ, ಜಂಗಮ, ಪ್ರಸಾದ, ಪಾದೋದಕ, ವಿಭೂತಿ, ರುದ್ರಾಕ್ಷಿ ಮತ್ತು ಮಂತ್ರ. ಇದರೊಂದಿಗೆ 'ಪಂಚಾಚಾರ'ಗಳಾದ 'ಲಿಂಗಾಚಾರ, ಸದಾಚಾರ, ಶಿವಾಚಾರ, ಭೃತ್ಯಾಚಾರ ಮತ್ತು ಗಣಾಚಾರ.

ಮೋಕ್ಷ ಸಂಪಾದನೆಗೆ ಭಕ್ತಿಮಾರ್ಗ ಅತ್ಯಂತ ಮುಖ್ಯವಾಗಿದ್ದು, ಅದನ್ನು 'ಸತ್‌ಸ್ಥಳ ಸಿದ್ಧಾಂತ' ಎಂದು ಕರೆಯಲಾಗಿದೆ. ಈ ಭಕ್ತಿಮಾರ್ಗವನ್ನು ಆರು ವಿಧದಲ್ಲಿ ವಿಂಗಡಿಸಲಾಗಿದೆ– ಭಕ್ತಸ್ಥಳ, ಮಹೇಶ್ವರಸ್ಥಳ, ಪ್ರಸಾದಿಸ್ಥಳ, ಪ್ರಾಣಲಿಂಗೇಶ್ವರ, ಶರಣಸ್ಥಳ ಮತ್ತು ಐಕ್ಯಸ್ಥಳ. ಈ ಆರು ಮೆಟ್ಟಿಲು ದಾರಿಯಲ್ಲಿ ಸಾಗಿದರೆ, ಕೊನೆಯ 'ಐಕ್ಯಸ್ಥಳ'ವೇ ಪ್ರಮುಖವಾದುದಾಗಿದೆ. ಮೊದಲು ಮೂರು ಸ್ಥಳಗಳು ಕರ್ಮಮಾರ್ಗಗಳದಾಗಿದ್ದರೆ, ಇತರ ಎರಡು ಜ್ಞಾನಮಾರ್ಗವಾಗಿರುತ್ತದೆ.

ಯಾವುದೇ ಮಾರ್ಗದಲ್ಲಿ ಸಾಗಿದರೂ, ಇಷ್ಟಲಿಂಗದ ಭಕ್ತಿ ಆರಾಧನೆ ಅವಶ್ಯಕ. ಬಸವತತ್ವದಲ್ಲಿ ನಾನಕ ಸಾರಿದ ಏಕೈಕ ಮಾರ್ಗವಾದ ಭಕ್ತಿಪೂರ್ವಕ 'ನಾಮಸ್ಮರಣೆ'ದ ಬದಲು, ಸತ್‌ಸ್ಥಳ ಸಿದ್ಧಾಂತದ ಪ್ರಕಾರ ಕರ್ಮ, ಜ್ಞಾನ ಮತ್ತು ಭಕ್ತಿಮಾರ್ಗಗಳ ಸಮ್ಮಿಶ್ರತೆಯಿಂದ ಶಿವನಲ್ಲಿ ಐಕ್ಯತೆ ಕಂಡುಕೊಳ್ಳಬಹುದಾಗಿದೆ. (P 315 Basava Goraknath by Hiranmaya)

ಕುಳಿತ ದೃಶ್ಯ! ಹಣವನ್ನು ಏನು ಮಾಡಿದೆ ಎಂಬ ತಂದೆಯ ಪ್ರಶ್ನೆಗೆ ನಾನಕ್ ಉತ್ತರಿಸಿದ. "ಅಪ್ಪಾ ! ನೀನು 'ಲಾಭದ ವ್ಯಾಪಾರ' (ಸಚ್ಚಾ ಸದಾ) ಮಾಡೆಂದು ಕೇಳಿದ್ದಕ್ಕೆ ಈ ವಿಶ್ವದಲ್ಲಿ ಬಡಬಗ್ಗರಿಗೆ ಮತ್ತು ಸಂತರಿಗೆ ದಾನ ಮಾಡಿ ಅವರಿಂದ ಹರಸಿಕೊಳ್ಳುವ ಪುಣ್ಯ ಪಡೆದುಕೊಳ್ಳುವ ಲಾಭಕ್ಕಿಂತ ಇನ್ನೇನು ಲಾಭ ದೊರೆಯಬೇಕು?"

ಬಾಲಕನ ಉತ್ತರದಿಂದ ಕೋಪಗೊಂಡ ತಂದೆ ಮಗನಿಗೆ ಎರಡು ಬಾರಿಸಿ ತೃಪ್ತಿ ಪಟ್ಟುಕೊಂಡ.

ಬಾಲಕ ನಾನಕ್ ಲೌಕಿಕ ಪ್ರಪಂಚದಿಂದ ದೂರವಾಗಿ ಆಧ್ಯಾತ್ಮದೆಡೆಗೆ ಸಾಗಿ, ಧ್ಯಾನಾಸಕ್ತನಾಗಿ ಕಾಲ ಕಳೆಯುವುದನ್ನು ನೋಡಿದ ತಂದೆ, ಅವನ ಮನಸ್ಥಿತಿಯ ವ್ಯತ್ಯಾಸದಿಂದ ಆರೋಗ್ಯ ಕುಂಠಿತವಾಗತೊಡಗಿದೆ ಎಂದು ಬಗೆದು, ಒಬ್ಬ ವೈದ್ಯ ಪಂಡಿತನನ್ನು ಕರೆದು ಬಾಲಕನ ಆರೋಗ್ಯದ ಬಗ್ಗೆ ತಪಾಸಣೆ ಮಾಡಿಸಿದ. ವೈದ್ಯ ಬಾಲಕ ನಾನಕನ ತಪಾಸಣೆ ಮಾಡುವಾಗ, ನಾನಕ್ ನಕ್ಕು ವೈದ್ಯನಿಗೆ ಹೇಳಿದ. 'ನನ್ನ ಬಗ್ಗೆ ತಪಾಸಣೆ ಮಾಡುವ ಬದಲು, ನಿನ್ನ ಬಗ್ಗೆ ತಪಾಸಣೆ ಮಾಡಲು ಒಳಿತು. ನನಗೆ ದೇವರ ಮೇಲಿನ ಪ್ರೇಮ ಜ್ವರ ಹಿಡಿದಿದೆ. ಅದನ್ನು ನಿವಾರಿಸಲು ಆ ದೇವರಿಗೆ ತಿಳಿದಿದೆ !'

ನಾನಕನ ತಂದೆಗೆ ದಿಕ್ಕು ತೋಚದಂತಾಯಿತು. ಮಗನ ಮದುವೆ ಮಾಡಿದರೆ ಅವನು ಸುಧಾರಿಸಬಹುದೆಂದು ಎಣಿಸಿ ಅವನಿಗೆ 'ಸುಲಖನಿ' ಎಂಬ ಕನ್ಯೆಯೊಂದಿಗೆ ಲಗ್ನ ಮಾಡಿದ. ಆ ಲಗ್ನದಿಂದ ನಾನಕ್ ಗೃಹಸ್ಥಾಶ್ರಮ ಸೇರಿ ಎರಡು ಮಕ್ಕಳ ತಂದೆಯಾದ. ಲಗ್ನವಾದಾಗ ನಾನಕನ ವಯಸ್ಸು ೧೪ ಅಥವಾ ೧೬ ಆಗಿರಬಹುದು ಎಂಬುದು ಇತಿಹಾಸಕಾರರ ಅಭಿಪ್ರಾಯ.[೧೦] (ಕೆಲವರ ಅಭಿಪ್ರಾಯದಂತೆ ಲಗ್ನವಾದಾಗ ಅವನ ವಯಸ್ಸು ೧೮ ಆಗಿತ್ತು.)

ಮದುವೆಯಾದ ನಾನಕ್ ಹೆಂಡತಿ ಮಕ್ಕಳನ್ನು ಸಾಕುವ ಜವಾಬ್ದಾರಿ ಹೊರಬೇಕಾಯಿತು. ಅದಕ್ಕಾಗಿ ಅವನು ನೌಕರಿ ಮಾಡಲೇಬೇಕಾದ ಪರಿಸ್ಥಿತಿ ಉಂಟಾಯಿತು. ಅವನ ಸಹಾಯಕ್ಕೆ ಅವನ ಭಾವನಂಟ ಜೈರಾಮ್ ಬಂದ. ನಾನಕ್‌ಗೆ ನವಾಬ ದೌಲತ್‌ಖಾನ್ ಲೋದಿಯ ಬಳಿ ಜೈರಾಮ್ ಈಗಾಗಲೇ ನೌಕರಿ ಮಾಡುತ್ತಿದ್ದು, ತನ್ನ ನಿಷ್ಠತೆ, ಪ್ರಾಮಾಣಿಕತೆ ಮತ್ತು ಒಳ್ಳೆಯ ನಡೆವಳಿಕೆಗೆ ಹೆಸರು ಗಳಿಸಿದ್ದರಿಂದ, ಆತನ ಶಿಫಾರಸಿನ ಮಾತುಗಳಿಗೆ ಬೆಲೆ ನೀಡಿದ ಲೋಧಿ ನಾನಕ್‌ಗೆ ನೌಕರಿ ನೀಡಿದ. ಜಲಂಧರ್ ಪ್ರದೇಶದ ರಾಜಧಾನಿಯಾಗಿದ್ದ ಸುಲ್ತಾನ್‌ಪುರದಲ್ಲಿ ನೌಕರಿ ಹಿಡಿದ ನಾನಕ್ ತನ್ನ ಹೆಂಡತಿ ಮತ್ತು ಇಬ್ಬರು ಮಕ್ಕಳೊಂದಿಗೆ ಸಂಸಾರ ಮಾಡಲು ಪ್ರಾರಂಭಿಸಿದ.

---

೧೦. P. 41 The History of Sikhs People by Gopal Singh.

[ಸುಲ್ತಾನಪುರ ಲೋಧಿಗೆ ಈ ಹೆಸರು ಬರಲು ಕಾರಣ ಪಂಜಾಬ್‌ನ ಪಠಾಣ ರಾಜ್ಯಪಾಲ ವಾಲಿ ಮೊಹಮ್ಮದ್ ಖಾನ್‌ನ ಪುತ್ರ ಸುಲ್ತಾನ್ ಖಾನ್‌ನೆಂಬವನಿಂದ. ಈ ಪ್ರಾಚೀನ ನಗರದ ಹೆಸರು 'ಸಾರ್ವಮಾನಪುರ'ವೆಂದಾಗಿತ್ತು. ಕ್ರಿಸ್ತಪೂರ್ವದಲ್ಲೇ ಬೌದ್ಧ ಮತ ಸ್ವೀಕರಿಸಿದ ಇಲ್ಲಿನ ಪ್ರಜೆಗಳು ಅದನ್ನು ಪ್ರಸಿದ್ಧಿಗೆ ತಂದರು. ಆದರೆ, ಘಸ್ನಿ ಮೊಹಮ್ಮದ್‌ನ ದಂಡಯಾತ್ರೆಯಲ್ಲಿ ಈ ನಗರ ನಾಶವಾಗಿ ನಿರ್ಜನವಾಯಿತು. ಪುನಃ ಲೋಧಿ ೧೬ನೆಯ ಶತಮಾನದಲ್ಲಿ, ಪುನರ್‌ಜೀವನ ಪಡೆದು, ದಿಲ್ಲಿ ಮತ್ತು ಲಾಹೋರ್ ನಗರಗಳನ್ನು ಜೋಡಿಸುವ ಹೆದ್ದಾರಿಯಲ್ಲಿ ಪ್ರಸಿದ್ಧಿ ಪಡೆಯಿತು. ಮುಸ್ಲಿಮ್ ಆಳ್ವಿಕೆಯಲ್ಲಿ ಅನೇಕ ಮದರಸಾಗಳನ್ನು ಸ್ಥಾಪಿಸಲಾಯಿತು. ಔರಂಗಜೇಬ್ ಮತ್ತು ದಾರಾಶಿಕೊ ಅಲ್ಲಿ ಶಿಕ್ಷಣ ಪಡೆದರೆಂಬ ಪ್ರತೀತಿ ಇದೆ.

೧೭೭೭ರಲ್ಲಿ, ಸರದಾರ್ ಫತೇ ಸಿಂಗ್ ಈ ನಗರವನ್ನು ಕಪೂರ್‌ಥಾಲಾ ರಾಜ್ಯಕ್ಕೆ ಸೇರಿಸಿಕೊಂಡ. ಈ ನಗರದಲ್ಲಿ ಗುರುನಾನಕ್ ೧೪ ವರ್ಷಗಳ ಕಾಲ ಕಳೆದಿದ್ದನ್ನು ಇತಿಹಾಸಕಾರರು ಸ್ಮರಿಸಿದ್ದಾರೆ. ಅವನ ನೆನಪಿನಲ್ಲಿ ಶ್ರೀ ಬೆರ್‌ಸಾಹಿಬ್. ಭೂರಾ ಸಾಹಿಬ್, ಶ್ರೀ ಸಂತ ಘಾಟ್, ಶ್ರೀ ಹನ್ ಸಾಹಿಬ್, ಶ್ರೀ ಕೋಥ್ರೀ ಸಾಹಿಬ್, ಶ್ರೀ ಗುರು ಕಾ ಬಾಗ್. ಶ್ರೀ ಅಂತರಾತ್ಮ ಗುರುದ್ವಾರಗಳನ್ನು ನಿರ್ಮಿಸಿ, ಈ ನಗರವನ್ನು ಶೃಂಗರಿಸಿ, ಪುಣ್ಯಸ್ಥಳವನ್ನಾಗಿ ಮಾಡಿದ್ದಾರೆ ಸಿಖ್ಖರು.]

P 2 Brief History of Sulthan Lodhi by Gurudwara Sri Bersahib publication.

* * * *

ಇದೇ ಸಮಯದಲ್ಲಿ ಅವನಿಗೆ ಮರ್ದಾನನ ಪರಿಚಯವಾಯಿತು. ಈ ಮುಸ್ಲಿಮ್ ಒಬ್ಬ ವಾದ್ಯ ನುಡಿಸುವ ವ್ಯಕ್ತಿಯಾಗಿದ್ದು, ಲೋಧಿಯ ಬಳಿ ನೌಕರಿ ಹಿಡಿದು ನಾನಕ್ ಹಾಡುವಾಗ, ಅವನಿಗೆ ತನ್ನ ವಾದ್ಯ ನುಡಿಸಿ ಸಾಥ್‌ನೀಡುವ ಅಭ್ಯಾಸ ಮಾಡಿಕೊಂಡ.

ಸುಮಾರು ಹತ್ತು ವರ್ಷಗಳ ಕಾಲ ನವಾಬ್ ದೌಲತ್ ಖಾನ್ ಲೋಧಿಯ ಬಳಿ ನೌಕರಿ ಮಾಡಿ ಹೆಸರು ಗಳಿಸಿದ ನಾನಕ್. ಒಂದು ದಿನ ಬೆಳಿಗ್ಗೆ ನದಿಯಲ್ಲಿ ಸ್ನಾನ ಮಾಡುವಾಗ ನಾನಕ್ ನೀರಿನಲ್ಲಿ ಮುಳುಗಿದ. ಮೂರು ದಿನಗಳ ನಂತರ ಅವನು ಪುನಃ ಕಾಣಿಸಿದಾಗ ಅವನಲ್ಲಿ ಮಹತ್ತರ ಬದಲಾವಣೆ ಆಗಿತ್ತು. ಅವನಿಗೆ ದೇವರ ಸಾಕ್ಷಾತ್ಕಾರವಾಗಿ 'ಏಕತ್ವ', 'ನಾಮ', 'ದಾನ', 'ಸ್ನಾನ', 'ಸೇವಾ' ಮತ್ತು 'ಸ್ಮರಣೆ' ನಾನಕ್‌ಗೆ ಮಾಡುವಂತೆ ದೇವರು ಅಣತಿ ನೀಡಿದ. 'ಪರಬ್ರಹ್ಮ ಪರಮೇಶ್ವರ'ನಾದ ದೇವರು ನಾನಕ್‌ನಿಗೆ 'ಗುರುದೇವ' ನೆಂದು ಹೇಳಿ 'ಯಾರನ್ನು ಅವನು ಹರಸಿತ್ತಾನೋ ಅವರಿಗೆ ದೇವರು ಹರಸುವಂತಾಗುತ್ತದೆ' ಎಂದು ಹರಸಿ ಅಂತರ್ಧಾನನಾಗುತ್ತಾನೆ.[೧೨]

ನಾನಕ್ ಬದಲಾಗಿದ್ದ. ಅವನಿಗೆ ದೇವರ ಸಾಕ್ಷಾತ್ಕಾರವಾಗಿತ್ತು. ಅವನು ತನ್ನಲ್ಲಿದ್ದ ಬಟ್ಟೆಬರೆ ವಸ್ತುಗಳನ್ನು ದಾನಮಾಡಿ, ತನ್ನ ಅನುಯಾಯಿ ಮರ್ದಾನನೊಂದಿಗೆ ಫಕೀರನಂತೆ ಊರು ತ್ಯಜಿಸಿದ. ಸುದ್ದಿ ಅರಿತ ನವಾಬ ಅವನನ್ನು ಹುಡುಕಿ ಕರೆತಂದ.

---

೧೨. P 44 The History of Sikhs by Gopal Singh

ಅವನ ಎಲ್ಲಾ ಪ್ರಶ್ನೆಗಳಿಗೆ ನಾನಕನ ಉತ್ತರ ಒಂದೇ ಆಗಿತ್ತು : 'ಹಿಂದೂ[೧೩] ಅಥವ ಮುಸ್ಲಿಮ್ ಯಾರೂ ಇಲ್ಲ !' (ನಾ ಕೊ ಹಿಂದೂ, ನಾ ಮುಸಲ್ಮಾನ್)

ನಾನಕ್ ಫಕೀರನಾಗಿ ಸರ್ವ ಪರಿತ್ಯಾಗಿಯಾಗಿರುವ ಸಂಗತಿ ಅರಿತ ನವಾಬ್, ಜನರಿಗೆ ಅವನು ಫಕೀರನಾಗಿದ್ದಾನೆಂದು ಹೇಳಿ ಅವನಿಗೆ ತೊಂದರೆ ನೀಡಬಾರದೆಂದು ಆದೇಶಿಸಿದ. ಆದರೆ ನಗರದ ಖಾಜಿ ಮಾತ್ರ ಸುಮ್ಮನೆ ಕೂಡಲಿಲ್ಲ. ನಾನಕನ ಘೋಷಣೆ – 'ಹಿಂದೂ ಅಥವ ಮುಸ್ಲಿಮ್ ಯಾರೂ ಇಲ್ಲ' ಧರ್ಮವಿರೋಧಿ ಘೋಷಣೆಯಾಗಿದೆ. ನಾನಕನನ್ನು ಕರೆತಂದು ವಿಚಾರಣೆ ನಡೆಸಬೇಕು ಎಂದು ಖಾಜಿ ದೂರಿದ. ನವಾಬ್ ದೌಲತ್‌ಖಾನ್ ಲೋಧಿ ನಾನಕ್‌ನನ್ನು ತನ್ನ ಆಸ್ಥಾನಕ್ಕೆ ಕರೆಸಿ ವಿಚಾರಣೆ ನಡೆಸಿದ. ಅವನ ಹೇಳಿಕೆ : 'ನಾ ಕೊ ಹಿಂದೂ, ನಾ ಮುಸಲ್ಮಾನ್' ಅರ್ಥ ಕೇಳಿದ. ಆಗ ನಾನಕ್ ಈ ರೀತಿ ವಿವರಣೆ ನೀಡಿದ :

"ಮುಸ್ಲಿಮ್‌ನಾಗುವುದು ಬಹಳ ಕಷ್ಟಕರ; ಯಾರು ದೇವರ ಧರ್ಮದಲ್ಲಿ ಅತ್ಯಂತ ವಿಶ್ವಾಸ ಇಟ್ಟುಕೊಂಡು, ಅಹಂಭಾವದ ಕೊಳೆಯನ್ನು ಇಜರೆದು (ಸತ್ಯ) ತೆಗೆದು ಸ್ವಚ್ಛಗೊಂಡು, ದೈವೇಚ್ಛೆಗೆ ತಲೆಬಾಗಿ, ಹುಟ್ಟು ಸಾವುಗಳ ಬಗ್ಗೆ ಅವಿಶ್ವಾಸವನ್ನು ತೊಡೆದು, ಮತ್ತು ಪ್ರತಿ ಜೀವಿಗಳ ಬಗ್ಗೆ ಕರುಣೆ ತೋರಿಸುವವನೋ ಅಂತಹವನನ್ನು ಸತ್ಯವಂತನಾದ ಮುಸ್ಲಿಮ್‌ನೆಂದು ಕರೆಯಬಹುದು."

ನಾನಕ್ ಮುಂದುವರೆದು ಈ ರೀತಿ ಸಾರಿದ :

"ಒಬ್ಬ ಮುಸ್ಲಿಮ್‌ನಿಗೆ ನಿಜವಾದ ಮಸೀದಿ ಕರುಣೆಯಾಗಿರಬೇಕು; ಅವನ ಪ್ರಾರ್ಥನೆ ಮಾಡಲು ಉಪಯೋಗಿಸುವ ಚಾಪೆ ದೇವರಲ್ಲಿ ಅನನ್ಯ ವಿಶ್ವಾಸವಾಗಿರಬೇಕು ಮತ್ತು ಅವನ ನಿಷ್ಠಾವಂತ ಜೀವನಕ್ರಮ ಖುರಾನ್ ಆಗಿರಬೇಕು; ದೈನ್ಯತೆ ಅವನ ಮರ್ಮಾಂಗ ಕತ್ತರಿಸುವ ಆಚರಣೆ ಆಗಬೇಕು ಮತ್ತು ಸಂಯಮ ಅವನ ಉಪವಾಸದ ಆಚರಣೆ ಆಗಬೇಕು. ಕಾಬಾ ಅವನ ಒಳ್ಳೆಯ ಕಾಯಕವಾಗಬೇಕು ಮತ್ತು ಸತ್ಯ ಅವನ ಪ್ರವಾದಿಯಾಗಬೇಕು ಮತ್ತು ದೇವರ ಮೇಲಿನ ಆಸರೆ ಅವನ ಕಲೀಮ ಮತ್ತು ನಮಾಜ್ ಆಗಿರಬೇಕು".

ದೌಲತ್‌ಖಾನ್ ಲೋದಿ ನಾನಕ್‌ನ ಮಾತುಗಳನ್ನು ಕೇಳಿ ಮೂಕನಾದ. ನಾನಕ್‌ನನ್ನು ವಿಚಾರಣೆಗೆ ಮುಂದುವರೆಸದಿರಲು ಕಾರಣ ಕೇಳಿದ ಖಾಜಿಗೆ ಸುಮ್ಮನಿರುವಂತೆ ಆದೇಶಿಸಿದ. ಆದರೆ ಖಾಜಿ ನಾನಕ್ ಒಬ್ಬ ನಿಷ್ಠಾವಂತ ಮುಸ್ಲಿಮ್‌ನ ಆಚರಣೆ ಮತ್ತು ನಂಬಿಕೆಗಳ ವಿಶ್ಲೇಷಣೆ ಮಾಡಿದ ಮೇಲೆ ಅವನು ಇಸ್ಲಾಮ್‌ನ ಭಕ್ತನಾಗಿರಬೇಕು ಎಂದು ಎಣಿಸಿ, ಅವನನ್ನು ಮಸೀದಿಗೆ ಬಂದು ತನ್ನೊಂದಿಗೆ ನಮಾಜ್ ಮಾಡಲು ಆಮಂತ್ರಿಸಿದ. ನಾನಕ್ ಅವನ ಮಾತಿಗೆ ಒಪ್ಪಿ, ಅವನೊಂದಿಗೆ ಮಸೀದಿಗೆ ತೆರಳಿದ. ಆದರೆ ಅಲ್ಲಿ ಪ್ರಾರ್ಥನೆ ಮಾಡದೆ ಸುಮ್ಮನೆ ನಸುನಗುತ್ತಾ

೧೩. P 37 The Sikh Religion by Mac Cauliffe

ನಿಂತ. ಅದನ್ನು ಕಂಡ ಖಾಜಿ ಕೆರಳಿದ. ನವಾಬ್‌ನ ಬಳಿ ತೆರಳಿ, ನಾನಕ್‌ನ ನಡತೆಯ ಬಗ್ಗೆ ದೂರಿಟ್ಟ. 'ನಾನು ಪ್ರಾರ್ಥಿಸುತ್ತಿರುವಾಗ, ನಾನಕ್ ಸುಮ್ಮನೆ ನಗುತ್ತಾ ನಿಂತು ನನ್ನನ್ನು ಅಪಹಾಸ್ಯಮಾಡಿದ." ನವಾಬ್, ನಾನಕ್‌ನನ್ನು ಪ್ರಶ್ನಿಸಿದಾಗ, ಅವನು ಈ ರೀತಿ ಉತ್ತರಿಸಿದ : 'ನಾನು ಅವನನ್ನು ಅಪಹಾಸ್ಯ ಮಾಡಲು ನಗಲಿಲ್ಲ. ಆದರೆ ಖಾಜಿಯ ಪ್ರಾರ್ಥನೆಯನ್ನು ದೇವರು ಸ್ವೀಕರಿಸಲಿಲ್ಲ. ಯಾಕೆಂದರೆ, ಖಾಜಿ ಪ್ರಾರ್ಥಿಸುತ್ತಿರುವಾಗ, ತನ್ನ ಕುದುರೆ ಒಂದು ಎರಿಯನ್ನು ಹತ್ತಿದ್ದು, ಅದು ಬಳಿಯ ಬಾವಿಯಲ್ಲಿ ಬೀಳಬಹುದೆಂಬ ಆತಂಕ ಅವನ ಮನಸ್ಸನ್ನು ಆವರಿಸಿತ್ತು".

ನಾನಕ್‌ನ ಮಾತುಗಳನ್ನು ಕೇಳಿದ ಖಾಜಿಗೆ ವಿಸ್ಮಯವಾಯಿತು. ಯಾಕೆಂದರೆ ಅವನು ನಿಜವನ್ನು ನುಡಿದಿದ್ದ ! ಆತ ನಾನಕನ ಕಾಲಿಗೆ ಬಿದ್ದು, 'ದೇವರ ಕೃಪೆ ಅವನಿಗೆ ಒಲಿದಿದೆ' ಎಂದು ಹೇಳಿದ. ನವಾಬ್‌ನಾದರೋ, 'ನಾನಕ್ ಸತ್ಯವನ್ನು ಪಡೆದಿದ್ದಾನೆ. ಅವನನ್ನು ಪ್ರಶ್ನಿಸುವುದು ಧರ್ಮಬಾಹಿರವಾಗುವುದು' ಎಂದು ಹೇಳಿ ಅವನ ಕಾಲಿಗೆ ಬಿದ್ದ. ತನ್ನ ಸಕಲ ಐಶ್ವರ್ಯ, ಪದವಿ ಎಲ್ಲವನ್ನು ನಾನಕನಿಗೆ ನೀಡುವುದಾಗಿ ಘೋಷಿಸಿದ. ಆದರೆ ನಾನಕ್ ಮಾತ್ರ ಸರ್ವತ್ಯಾಗ ಮಾಡಿ ಫಕೀರನಾಗಿದ್ದ. ಯಾವ ಧನ, ದೌಲತ್ತು ಈ ದೌಲತ್‌ಖಾನ್ ಲೋಧಿಯಿಂದ ಪಡೆಯುವ ಆಸೆ ಹೊಂದಿರಲಿಲ್ಲ. ಅವನು ಊರು ಕೇರಿ ತ್ಯಜಿಸಿ, ಪರಿತ್ಯಾಗಿಯಾಗಿ ಹೊರಟ. [೧೪]

---

೧೪ P 162 Storia Do Mogor by Nicolo Manuchi "Travelling is a teacher of many things and he who wanders without learning anything can only be said to have the head of an ass' ಇಟಲಿ ದೇಶದ ಮನೂಚಿ ಭಾರತದಲ್ಲಿ ಔರಂಗಜೇಬ್‌ನ ಕಾಲದಲ್ಲಿ ಸಂಚರಿಸಿ ಅದ್ಭುತವಾದ ಬಹು ಉಪಯುಕ್ತ ಪ್ರವಾಸ ಕಥನ ರಚಿಸಿದ್ದಾನೆ.

ಅಧ್ಯಾಯ - ೨

'ಯಾವುದೂ ಶಾಶ್ವತವಿಲ್ಲದಿರುವಾಗ,
ಯಾರು ಒಂದೇ ಸ್ಥಳದಲ್ಲಿ ಸ್ಥಿರವಾಗಿರುವರು ?
ನಾನಿರುವ ಕಡೆ, ಅದು ನನ್ನೊಂದಿಗೆ ಇದ್ದಾಗ,
ನಾನು ಅದೇ ಸ್ಥಳದಲ್ಲಿರುವೆನು.
ಹೌದು, ದೇವರೊಬ್ಬನೆ ಸ್ಥಿರ: ಆದ್ದರಿಂದ
ಅವನೊಂದಿಗೆ ಇರುವೆನು.
ಯಾಕೆಂದರೆ ವಿಶ್ವ ಅಸ್ಥಿರ, ಆಕಾಶ ಅಸ್ಥಿರ,
ದಿನ ಅಸ್ಥಿರ, ರಾತ್ರಿ ಅಸ್ಥಿರ, ಚಂದ್ರ ಅಸ್ಥಿರ,
ಸೂರ್ಯ ಅಸ್ಥಿರ, ನಕ್ಷತ್ರಗಳು ಅಸ್ಥಿರ,
ರಾಜರು ಅಸ್ಥಿರ, ಪೀರರು ಅಸ್ಥಿರ, ಯಕ್ಷಾದಿಗಳು ಅಸ್ಥಿರ
ಸಾಧುಸಂತರು ಅಸ್ಥಿರ, ಮನುಷ್ಯರು ಅಸ್ಥಿರ
ಗ್ರಂಥಗಳು ಅಸ್ಥಿರ, ವಿಧಿಯಾಚರಣೆಗಳು ಅಸ್ಥಿರ
ಹೌದು, ದೇವರೊಬ್ಬನೇ ಸ್ಥಿರ ಅಥವಾ ಅವನ ನಾಮ.'

– ನಾನಕ್

ನಾನಕ್‌ನ ತಿರುಗಾಟ, ಪ್ರಾಚೀನ ಭಾರತದ ಸಂನ್ಯಾಸಿಗಳು, ಸ್ವಾಮಿಗಳು, ಜ್ಞಾನಿಗಳು, ಅವಧೂತರು, ಗುರುಗಳು ಜರುಗಿಸಿದ ರೀತಿಯದಾಗಿತ್ತು. ೧

ಸಂಸಾರದ ಜಂಜಾಟ ತ್ಯಜಿಸಿ, ಪರಿವ್ರಾಜಕನಾಗಿ ಜಗತ್ತನ್ನು ಸಂಚರಿಸಿ, ಸಂಪಾದಿಸಿದ ಜ್ಞಾನವನ್ನು ಬಲ್ಲವರೊಂದಿಗೆ ವಿವಿಧ ಧರ್ಮಗಳ ಸಂತ ಜ್ಞಾನಿಗಳೊಂದಿಗೆ ಮತ್ತು ಯೋಗಿಗಳೊಂದಿಗೆ ಚರ್ಚಿಸಿ ಜ್ಞಾನಾರ್ಜನೆ ಮಾಡಿಕೊಳ್ಳುವ ಕಾರ್ಯಕ್ಕೆ ನಾನಕ್ ಕೈ ಹಾಕಿದ. ನಾನಕ್‌ನ ತಿರುಗಾಟದಲ್ಲಿ ಅವನ ಶಿಷ್ಯ ಡೋಲಕ್ ನುಡಿಸುವ ಬಡ ಮುಸ್ಲಿಮ್ ಮರ್ದಾನಾ ಕೂಡ ಹೊರಟಿದ್ದ.

ನಾನಕ್ ತನ್ನ ತಿರುಗಾಟದಲ್ಲಿ, ಯಾರನ್ನು ಬೇಡದೆ, ಕಾಡದೆ, ಊರು ಕೇರಿಗಳನ್ನು ಸುತ್ತುಬಳಸಿ, ಕಾಡು ಮೇಡುಗಳಲ್ಲಿ ಸಂಚರಿಸಿ, ಹಣ್ಣು ಹಂಪಲುಗಳನ್ನು ಸೇವಿಸಿ, ತನ್ನ ದಣಿವು ನೀಗಿಕೊಳ್ಳುವ ಅಭ್ಯಾಸ ಮಾಡಿಕೊಂಡಿದ್ದ. ಶಿಷ್ಯ ಮರ್ದಾನಾನಿಗೆ

---

೧. P 24 The Later Mughals by William Irving '. . . .There is nothing in what is told about him that might not be applied to every Hindu religious mendicant'

ಮಾತ್ರ ಗುರುವಿನ ಈ ರೀತಿ ಸರಿಬರಲಿಲ್ಲ. ಹೊಟ್ಟೆಬಟ್ಟೆ ಕಟ್ಟಿ ಸಂಚರಿಸುವುದಾದರೂ ಹೇಗೆ ಎಂಬ ಪ್ರಶ್ನೆ ಅವನನ್ನು ಕಾಡುತ್ತಿತ್ತು. ನಾನಕ್‌ನಾದರೋ, ದೈವಿಕ ದಾರಿ ಹಿಡಿದು, ಸಾಧನೆ ಮಾಡುವ ಕಾರ್ಯದಲ್ಲಿರುವಾಗ, ಹೊಟ್ಟೆ ಹೊರೆಯುವ ಕೆಲಸಕ್ಕೆ ಕೈಹಾಕಿ, ಅದಕ್ಕಾಗಿ ಬೇಡುವ, ಕಾಡುವ ಕಾರ್ಯ ಮಾಡುವುದು ಸರ್ವವನ್ನೂ ತ್ಯಜಿಸಿದವನಿಗೆ ಸೂಕ್ತವಲ್ಲ ಎಂಬ ನಿಲುವು ಹೊತ್ತು, ಮರ್ದಾನಾನಿಗೆ ಸೂಕ್ತ ಬುದ್ಧಿವಾದ ಹೇಳುತ್ತಿದ್ದ. ಆದರೂ ಒಮ್ಮೆ ತಿರುಗಾಟದಲ್ಲಿದ್ದಾಗ ಮರ್ದಾನಾ ನಾನಕ್‌ನ ಅಪ್ಪಣೆ ಪಡೆದು ಅವರು ತಂಗಿದ್ದ ಕಾಡಿನ ಬದಿಯಲ್ಲಿದ್ದ ಹಳ್ಳಿಗೆ ತೆರಳಿದ. ಹಳ್ಳಿಯ ಜನರು ತಮ್ಮ ಹಳ್ಳಿಗೆ ಒಬ್ಬ ಬೈರಾಗಿ ಬಂದಿದ್ದಾನೆಂದು ಅರಿತು, ಮರ್ದಾನಾನಿಗೆ ಹರ್ಷದಿಂದ ಉಪಚರಿಸಿ ಅವನಿಗೆ ಅನೇಕ ಉಪಾಹಾರಗಳನ್ನು ನೀಡಿ ಸತ್ಕರಿಸಿದರು. ಮರ್ದಾನಾ ಅವನ್ನು ಕೂಡಿ ಗಂಟು ಕಟ್ಟಿ ನಾನಕ್‌ನ ಬಳಿ ಬಂದು ಗಂಟನ್ನು ಅವನ ಮುಂದೆ ಇರಿಸಿ ಸಂಗತಿ ತಿಳಿಸಿದನು. ನಾನಕ್ ನಗುತ್ತಾ, 'ಯಾಕೆ ನನ್ನ ಆದೇಶವನ್ನು ಪರಿಪಾಲಿಸದೆ, ಜನರಿಂದ ಬೇಡಿ ಈ ಉಪಾಹಾರಗಳನ್ನು ತಂದಿದ್ದೀಯಾ?' ಎಂದು ವಿಚಾರಿಸಿದಾಗ, ಮರ್ದಾನಾ ನಡೆದ ಸಂಗತಿ ಅರುಹಿದ. ಅದಕ್ಕೆ ನಾನಕ್ ಆ ಗಂಟನ್ನು ಬಿಸುಟುವಂತೆ ಆಜ್ಞೆ ನೀಡಿದ. ಒಲ್ಲದ ಮನಸ್ಸಿನಿಂದ ಮರ್ದಾನಾ ಗಂಟನ್ನು ಬಿಸಾಡಿದ. ಆಗ ನಾನಕ್, ತನ್ನ ಉಪದೇಶವನ್ನು ಈ ರೀತಿ ಹೇಳಿದ :

'ಯಾರು ತಮ್ಮ ನ್ಯಾಯಯುತವಾಗಿ ಸಂಪಾದಿಸಿದ ಹಣ ಮತ್ತು ವಸ್ತುಗಳನ್ನು ದೀನ ದಲಿತರಿಗೆ ದಾನ ಮಾಡುತ್ತಾರೋ, ಅವು ಗುರು ಮತ್ತು ದೇವರನ್ನು ಸೇರುತ್ತವೆ ಮತ್ತು ಯಾರು ಅವನ್ನು ಸ್ವೀಕರಿಸುವರೋ ಅವರು ತಮಗೆ ಅವಶ್ಯಕತೆಗೆ ತಕ್ಕಷ್ಟು ಮಾತ್ರ ಸ್ವೀಕರಿಸಬೇಕು.'

ನಾನಕ್‌ನ ಈ ಉಪದೇಶ ಮರ್ದಾನಾನ ಮೇಲೆ ಬಲವಾದ ಪರಿಣಾಮ ಬೀರಿತು. ಕಷ್ಟಪಟ್ಟು ಸಂಪಾದಿಸಿದ ಹಣವನ್ನು ದಾನ ಮಾಡಿದರೆ ಅದು ಕೊಡುವವನಿಗೂ ಮತ್ತು ಸ್ವೀಕರಿಸುವವನಿಗೂ ತೃಪ್ತಿ ಮತ್ತು ಸಂತೋಷ ನೀಡುವುದಷ್ಟೇ ಅಲ್ಲದೆ, ಅದರಿಂದ ಪ್ರತಿ ಮನುಷ್ಯನಿಗೂ ಸ್ವಾಭಿಮಾನದ ಕಿಚ್ಚು ಅವನ ಹೃದಯದಲ್ಲಿ ಹಬ್ಬಿಸುವುದು ಎಂಬ ಮಹತ್ತರ ಸಂದೇಶ ನಾನಕ್‌ನಿಂದ ಹೊರಬಂದಿದ್ದು ಅಪೂರ್ವವಾಗಿತ್ತು.

ನಾನಕ್ ಈಗಿನ ಪಾಕಿಸ್ತಾನದ ಮುಲ್ತಾನ್ ನಗರದ ಬಳಿ ಇರುವ ತುಲಂಬಾ (ಇದನ್ನು ಈಗ ಮಖ್‌ದೂಮ್‌ಪುರ ಎಂದು ಕರೆಯಲಾಗಿದೆ.) ಎಂಬ ಹಳ್ಳಿಗೆ ಬಂದಾಗ ಅವನ ಕಣ್ಣುಗಳಿಗೆ ದಾರಿಯ ಬದಿಯಲ್ಲಿ ಕುಳಿತ ಒಬ್ಬ ಬೈರಾಗಿ ಕಾಣಿಸಿದನು. ಆ ಬೈರಾಗಿ ಒಬ್ಬ ಡಕಾಯಿತನಾಗಿದ್ದ. ಅವನು ಮುಸ್ಲಿಮ್ ಶೇಖ್‌ನಾಗಿದ್ದು, ಹೆಸರನ್ನು ಮಾತ್ರ 'ಸಜ್ಜನ್' ಎಂದು ಇಟ್ಟುಕೊಂಡಿದ್ದ. ಅವನು ಹಿಂದುಗಳಿಗೆ ಒಂದು ಗುಡಿ ಕಟ್ಟಿಸಿ, ಮುಸ್ಲಿಮರಿಗೆ ಒಂದು ಮಸೀದಿ ಕಟ್ಟಿಸಿ, ಯಾತ್ರಿಕರನ್ನು ಆಹ್ವಾನಿಸಿ, ಅಲ್ಲಿ ರಾತ್ರಿ ತಂಗುವ ವ್ಯವಸ್ಥೆ ಮಾಡಿದ್ದ. ಯಾತ್ರಿಕರ ಮನ ಒಲಿಸಿ, ಅವರು ರಾತ್ರಿ ಗುಡಿ ಮತ್ತು ಮಸೀದಿಗಳಲ್ಲಿ ತಂಗುವ ಹಾಗೆ ಮಾಡಿ, ಅವರು ನಿದ್ರಿಸುವಾಗ, ಅವರ ಕತ್ತು

ಕುಯಿದು ಬಳಿಯಲ್ಲಿದ್ದ ಹಾಳುಬಾವಿಗೆ ಎಸೆದು, ಅವರ ವಸ್ತುಗಳನ್ನು ದೋಚುತ್ತಿದ್ದ. ಬೆಳಿಗ್ಗೆ ಎದ್ದೊಡನೆ, ಕೈಯಲ್ಲಿ ಜಪಮಾಲೆ ಹಿಡಿದು ರಾತ್ರಿ ಯಾವ ಯಾತ್ರಿಕನ ಹತ್ಯೆ ಮಾಡಲಿ ಎಂದು ಯೋಚಿಸಿ, ಜಪ ಮಾಡುತ್ತಾ ಕುಳಿತಿರುತ್ತಿದ್ದ. ೨

ನಾನಕ್ ಯಾತ್ರೆ ಮಾಡುತ್ತಾ ಅವನ ಬಳಿ ಬಂದಾಗ, ಶೇಖ್ ಸಜ್ಜನ್‌ನಿಗೆ ಆನಂದವಾಯಿತು. ಯಾಕೆಂದರೆ, ನಾನಕ್‌ನ ದಿವ್ಯ ತೇಜಸ್ಸು ಅವನ ನಡೆನುಡಿ ಮುಖದ ಗಂಭೀರ ಹಾವಭಾವ, ಅವನನ್ನು ಒಬ್ಬ ಶ್ರೀಮಂತ ಯಾತ್ರಿಕನೆಂಬ ಭ್ರಮೆ ತರುತ್ತಿತ್ತು. ಶೇಖ್ ಸಜ್ಜನ್ ಅವರನ್ನು ಆದರದಿಂದ ಬರಮಾಡಿಕೊಂಡು ರಾತ್ರಿ ಅಲ್ಲಿ ತಂಗಲು ಕೋರಿದ. ಅವನ ಕೋರಿಕೆಯನ್ನು ಮನ್ನಿಸಿದ ನಾನಕ್ ರಾತ್ರಿ ಅಲ್ಲೇ ತಂಗಿದ. ಮಲಗುವ ಮುನ್ನ ನಾನಕ್ ವಾಡಿಕೆಯಂತೆ, ದೇವರನಾಮ ಹಾಡಲು ಶುರು ಹಚ್ಚಿದ. ಮರ್ದಾನಾ ತನ್ನ ಢೋಲಕ್ ಹಿಡಿದು ನಾನಕ್‌ನ ಗಾನಕ್ಕೆ ನುಡಿಸತೊಡಗಿದ. ನಾನಕನ ಗಾನ ಕೇಳಿ ಅನೇಕ ಯಾತ್ರಿಕರು ಅವನ ಮುಂದೆ ಕುಳಿತು ಕೇಳತೊಡಗಿದರು. ಶೇಖ್ ಸಜ್ಜನ್ ಕೂಡ ನಾನಕನ ಸಮೀಪದಲ್ಲೇ ಕುಳಿತು ಗಾನವನ್ನು ಆಲೈಸತೊಡಗಿದ. ನಾನಕ್ ಹಾಡಿನ ಸಾಲುಗಳಲ್ಲಿ ಮಹತ್ವದ ನೈತಿಕ ಮೌಲ್ಯಗಳ ಅಂಶಗಳು ಅಡಕವಾಗಿದ್ದವು. 'ಮಣ್ಣು ಹತ್ತಿದ ಹಿತ್ತಾಳೆ ಪಾತ್ರೆಯನ್ನು ತಿಕ್ಕಿ, ತೊಳೆದರೆ ಮಾತ್ರ ಅದು ಹೊಳೆಯುತ್ತದೆ; ಸ್ನೇಹಿತರ ನೈಜ ಸ್ನೇಹ ಅರಿವಾಗುವುದು ಅವರು ದೇವರ ಆಸ್ಥಾನದಲ್ಲಿ ನೆರೆದಾಗ ತಮ್ಮ ನಿಜತ್ವ ಬಯಲಾಗುವುದು; ಹಾಳು ಸುರಿಯುವ ಭವ್ಯಭವನದ ಹೊರಮೈಯನ್ನು ಸುಣ್ಣಬಣ್ಣಗಳಿಂದ ಬಳಿದರೆ ಏನು ಉಪಯೋಗ? ಬಕಪಕ್ಷಿಗಳು ಯಾತ್ರಿಕರಂತೆ, ನದೀ ದಡದಲ್ಲಿ ಜಪ ಮಾಡುತ್ತಾ ಕುಳಿತಿದ್ದರೂ ತಮ್ಮ ತಣಿಸಲಾಗದ ಹಸಿವನ್ನು ನೀಗಿಸಿಕೊಳ್ಳಲು, ಅವುಗಳ ಕಣ್ಣುಗಳು ಅಮಾಯಕ ಪ್ರಾಣಿಯ ಬಲಿ ತೆಗೆದುಕೊಳ್ಳಲು ನೋಡುತ್ತಿರುತ್ತವೆ; ಗಿಮಲ್ ವೃಕ್ಷ ಎಲೆ, ಹೂ, ಹಣ್ಣುಗಳಿಂದ ತುಂಬಿದ್ದರೂ, ಅವುಗಳಿಂದ ಯಾವ ಉಪಯೋಗವಿಲ್ಲ; ಕುರುಡನೊಬ್ಬ ತಲೆ ಮೇಲೆ ಹೊರೆ ಹೊತ್ತು ಬೆಟ್ಟವನ್ನೇ ಏರಲು ಶ್ರಮಿಸಿದರೆ, ಕಣ್ಣು ಕಾಣಿಸದ ಅವನು ಹೇಗೆ ತಾನೆ ಏರಲು ಸಾಧ್ಯ?'

'ನಮ್ಮ ಚಾಣಾಕ್ಷತನ ಮತ್ತು ಹುಸಿ ಒಳ್ಳೆಯತನಗಳು ಉಪಯೋಗಕ್ಕೆ ಬರಲಾರವು. ದೇವರ ಪ್ರೀತಿಯೊಂದೇ ನಮ್ಮನ್ನು ಕಾಪಾಡಬಲ್ಲದು ಮತ್ತು ನಮ್ಮ ಕಾಲುಗಳಿಗೆ ತೊಡಿಸಿದ ಬೇಡಿಗಳನ್ನು ಕಿತ್ತು ಎಸೆಯಬಲ್ಲದು.' ೩

ನಾನಕ್‌ನ ಮನ ಕಲುಕುವ ಗಾನವನ್ನು ಕೇಳಿದ ಶೇಖ್ ಸಜ್ಜನ್‌ನ ಹೃದಯದಲ್ಲಿ ಮಿಂಚಿನ ಹೊಡೆತ ಹೊಡೆದ ಹಾಗೆ ಅವನಲ್ಲಿ ಬದಲಾವಣೆ ಕಾಣಿಸತೊಡಗಿತು. ಅವನ ಮನಃಪರಿವರ್ತನೆಯಾಗಿ ತನ್ನ ಪೂರ್ವೇತಿಹಾಸದ ಕುಕಾರ್ಯಗಳನ್ನು ಎಸಗಿದ್ದರ

---

೨. P 46-7 The Sikh Religion by Macauliffe

೩. P 73 The History of Sikh people by G. Singh

ಬಗ್ಗೆ ನಾಚಿಕೆಯಾಗಿ, ನಾನಕ್‌ನ ಕಾಲಿಗೆ ಎರಗಿ ಶರಣಾದ. ತನ್ನ ಪಾಪಕಾರ್ಯಗಳಿಂದ ಮುಕ್ತಿ ದೊರೆಯಲು ಏನು ಮಾಡಬೇಕೆಂದು ಕೇಳಿಕೊಂಡ. ನಾನಕ್. ಅವನು ಪಡೆದ ಸಕಲ ಆಸ್ತಿ ಪಾಸ್ತಿ ಧನ ದ್ರವ್ಯಗಳನ್ನು ಬಡವರಿಗೆ ಹಂಚಿ ದೇವರ ಭಕ್ತನಾಗೆಂದು ಹೇಳಿದ. ನಾನಕನ ಆದೇಶವನ್ನು ಶೇಖ್ ಚಾಚೂ ತಪ್ಪದೆ ಪಾಲಿಸಿ, ನಾನಕ್‌ನ ಅನನ್ಯ ಭಕ್ತನಾದ. ನಾನಕ್‌ನ ಅನುಯಾಯಿಯಾಗಿ ಅವನು ಪ್ರಸಿದ್ಧಿ ಪಡೆದ. ಜನರು ಶೇಖ್‌ನ ಪರಿವರ್ತನೆಯನ್ನು ನಾನಕ್ ಎಸಗಿದ ಪವಾಡವೆಂದು ಪರಿಗಣಿಸಿ, ಅವನನ್ನು ಭಕ್ತಿಯಿಂದ ಆರಾಧಿಸಿದರು.

ನಾನಕ್, ತನ್ನ ಯಾತ್ರೆಯನ್ನು ಮುಂದುವರಿಸಿ, ಸೈಯದ್‌ಪುರ್ (ಈಗ ಗುಜ್ರನ್‌ವಾಲಾ ಜಿಲ್ಲೆಯ ಎಮಿನಾಬಾದ್) ದಲ್ಲಿ ಒಬ್ಬ ಕೀಳುಜಾತಿಯ ಬಡಗಿಯ ಮನೆಯಲ್ಲಿ ತಂಗಿದ. ಒಬ್ಬ ಕ್ಷತ್ರಿಯ ಸಂತನೊಬ್ಬ ಕೀಳು ಜಾತಿಯವನ ಮನೆಯಲ್ಲಿ ತಂಗಿರುವ ವಿಷಯ ಉಚ್ಚಕುಲದ ಮಲಿಕ್ ಭಾಗೋ ಎಂಬ ಪಟ್ಟಣದ ಪಟೇಲನ ಕಿವಿಗೆ ಬಿದ್ದಾಗ ಅವನು ವಿಸ್ಮಯಗೊಂಡ. ತನ್ನ ಮನೆಯಲ್ಲಿ ಒಂದು ಭೋಜನಕೂಟ ಏರ್ಪಡಿಸಿ, ಹೆಸರಾಂತ ಸಾಧುಸಂತರನ್ನು ಆಹ್ವಾನಿಸಿದಂತೆ ಬಡಗಿಯ ಮನೆಯಲ್ಲಿ ತಂಗಿದ್ದ ನಾನಕ್‌ನನ್ನು ಆಹ್ವಾನಿಸಿದ. ಆದರೆ ನಾನಕ್ ಆ ಆಹ್ವಾನವನ್ನು ಸ್ವೀಕರಿಸಿದೆ ಹೇಳಿದ : 'ಕೀಳರಲ್ಲಿ ಕೀಳು ಜಾತಿಯವರಿದ್ದಾರೆ. ನಾನಕ್ ಅವರ ಸಹಭಾಗತ್ವಕ್ಕೆ ಮಣಿದಿದ್ದಾನೆ. ಉಚ್ಚಕುಲದ ಮಹಾನ್‌ರೊಂದಿಗೆ ಸ್ಪರ್ಧೆಗೆ ಇಳಿಯುವುದಿಲ್ಲ.'

ನಾನಕ್‌ನ ಉತ್ತರದಿಂದ ಪಟೇಲ ಕೆರಳಿದ. ಅವನು ತನ್ನ ಸೇವಕರನ್ನು ನಾನಕ್‌ನ ಬಳಿ ಕಳುಹಿಸಿ, ಅವನನ್ನು ಬಲವಂತವಾಗಿ ಎಳೆದು ತರುವಂತೆ ಆಜ್ಞಾಪಿಸಿದ. ಸೇವಕರು ನಾನಕ್‌ನನ್ನು ಕರೆದು ತಂದು ಪಟೇಲನ ಮುಂದೆ ನಿಲ್ಲಿಸಿದರು. ಅವನಿಗೆ ಭೋಜನಶಾಲೆಗೆ ಕರೆದೊಯ್ದು ಭೋಜನ ನೀಡಿದಾಗ, ನಾನಕ್ ಭೋಜನ ಮಾಡಲು ತಿರಸ್ಕರಿಸಿದ. ನೆರೆದಿದ್ದ ಗಣ್ಯ ವ್ಯಕ್ತಿಗಳು ಮತ್ತು ಸಾಧು ಸಂತರ ಮುಂದೆ ಊಟ ಮಾಡಲು ತಿರಸ್ಕರಿಸಿ, ಅವಮಾನ ಮಾಡಿ, ಒಬ್ಬ ಕೇವಲ ಕೀಳು ಜಾತಿಯ ಬಡಗಿಯ ಮನೆಯಲ್ಲಿ ಆತಿಥ್ಯ ಸ್ವೀಕರಿಸಲು ಕಾರಣವಾದರೂ ಏನು ಎಂದು ಪಟೇಲ ಪ್ರಶ್ನಿಸಿದಾಗ, ನಾನಕ್ ಈ ರೀತಿ ಉತ್ತರಿಸಿದ :

'ನಿನ್ನ ಆಹಾರ ರಕ್ತದಿಂದ ಕೂಡಿದೆ. ಆದರೆ ಆ ಬಡಗಿ ಲಾಲೋವಿನ ಆಹಾರ ಜೇನುತುಪ್ಪ ಮತ್ತು ಹಾಲಿನಿಂದ ಕೂಡಿದಷ್ಟು ರುಚಿಕರವಾಗಿದೆ.'

ಈ ರೀತಿಯ ಭಾವನೆ ವ್ಯಕ್ತಪಡಿಸುವ ಅರ್ಥವಾದರೂ ಏನು ಎಂಬ ಪ್ರಶ್ನೆಗೆ ನಾನಕ್ ಉತ್ತರಿಸಿದ :

'ಬಡಗಿ ಲಾಲೋ ತನ್ನ ಹಣೆಯ ಬೆವರಿನಿಂದ ಹಣ ಸಂಪಾದನೆ ಮಾಡುತ್ತಾನೆ ಮತ್ತು ಅದರಿಂದ ಅವನು ತನ್ನ ಯಥಾಶಕ್ತಿ ದಾರಿಹೋಕರರಿಗೆ, ಬಡವರಿಗೆ ಮತ್ತು ಸಂತರಿಗೆ ದಾನ ಮಾಡುತ್ತಾನೆ. ಆದರೆ ನೀನಾದರೋ ಕೆಲಸವಿಲ್ಲದೆ, ಲಂಚ

ರಿಶವತ್ತಿನಿಂದ, ಕ್ರೌರ್ಯದಿಂದ, ಅಧಿಕಾರ ಚಲಾಯಿಸಿ, ಜನರ ರಕ್ತ ಹೀರಿ ಹಣ ಸಂಪಾದಿಸುತ್ತಿದ್ದೀಯಾ. ಈ ಹಣದ ನೆರವಿನಿಂದ ತಯಾರಿಸಿದ ಆಹಾರ ಅಮಾಯಕ ಬಡ ಜನರ ರಕ್ತದಿಂದ ಹೀರಲ್ಪಟ್ಟಿದೆ.'

ನಾನಕ್‌ನ ಮಾತುಗಳು ಅವನ ಮರ್ಮಕ್ಕೆ ಪೆಟ್ಟು ಬಿದ್ದು ಪಟೇಲ ಭಾಗೋ ಅವಮಾನ ನಾಚಿಕೆಗಳಿಂದ ತತ್ತರಿಸಿದ.

ನಾನಕ್ ಆಗಿನ ಕಾಲದಲ್ಲಿ ಬಹು ಪ್ರಚಲಿತವಿದ್ದ ಕೀಳು ಜಾತಿಯ ಮೇಲಿದ್ದ ಅಸಡ್ಡೆ, ಅಸಹಕಾರ, ಜಿಗುಪ್ಸೆಗಳನ್ನು ತೊಡೆದು ಹಾಕಿ, ತನ್ನ ಅಪೂರ್ವ ಕೆಚ್ಚಿನಿಂದ ಅನಿಷ್ಟ ಜಾತಿ ಪದ್ಧತಿ ಮತ್ತು ಆಡಳಿತಾಧಿಕಾರಿಗಳ ವಿರುದ್ಧ ಕಹಳೆ ಊದಿದ್ದ.

ಸೈಯದ್‌ಪುರದಿಂದ ನಿರ್ಗಮಿಸಿದ ನಾನಕ್ ಪ್ರಸಿದ್ಧ ಯಾತ್ರಾಸ್ಥಳ ಕುರುಕ್ಷೇತ್ರಕ್ಕೆ ತೆರಳಿದ. ಅವನು ಆ ಸ್ಥಳಕ್ಕೆ ಬಂದು ಸೇರಿದಾಗ, ಸೂರ್ಯಗ್ರಹಣದ ದಿನವಾಗಿತ್ತು. ಅಂದು ಅಸಂಖ್ಯಾತ ಜನರು ಜಾತ್ರೆಗಾಗಿ ಸೇರಿದ್ದರು. ಕೆಲವು ಇತಿಹಾಸಕಾರರು ನಾನಕ್, ತನಗೆ ಅರ್ಪಿಸಿದ ಜಿಂಕೆಯ ಮಾಂಸದ ಭಕ್ಷ ಸೇವಿಸಿದ್ದನ್ನು ಕಂಡ ಕೆಲವು ಅನುಯಾಯಿಗಳು ವಿರೋಧ ವ್ಯಕ್ತಪಡಿಸಿದ್ದಕ್ಕೆ, ಅವನು ಸೂಕ್ತ ಉತ್ತರ ನೀಡಿ ಅವರ ಶಂಕೆ ವಿರೋಧಗಳನ್ನು ಶಮನ ಮಾಡಲು ಯತ್ನಿಸಿದ್ದನ್ನು ದಾಖಲಿಸಿದ್ದಾರೆ. ಯಾರೇ ಭಕ್ತರು ಪ್ರೀತಿ, ವಿಶ್ವಾಸದಿಂದ ಯಾವುದೇ ಬಗೆಯ ಆಹಾರವನ್ನು ನೀಡಿದಾಗ, ಅದನ್ನು ಸ್ವೀಕರಿಸುವುದು ಸಂತನ ಕಾರ್ಯವಾಗಿರುತ್ತದೆ. ಅನಾದಿ ಕಾಲದಿಂದಲೂ ಮಾಂಸಾಹಾರವನ್ನು ತಿನ್ನುವ ಕಾರ್ಯವನ್ನು ಮಾನವ ಮಾಡುತ್ತಲೇ ಇದ್ದಾನೆ. ಅದು ಸ್ವಾಭಾವಿಕವಾಗಿದೆ. ಆದರೆ ಯಾವ ಶಾಕಾಹಾರಿ ಮಾಂಸವನ್ನೂ ಸೇವಿಸದೆ, ಹೇಸಿಗೆ ಪಡುವವನಾಗಿದ್ದು, ತನ್ನ ಸಹಜೀವಿಯ ಹತ್ಯೆ ಮಾಡಿ ಅವನ ರಕ್ತ ಹೀರುವುದಕ್ಕಿಂತ ಮಾಂಸಾಹಾರಿಯಾಗುವುದರಲ್ಲಿ ತಪ್ಪೇನಿದೆ? ಎಂದು ಪ್ರಶ್ನಿಸಿದ ನಾನಕ.

ನಾನಕ್ ಕುರುಕ್ಷೇತ್ರದಿಂದ ಸಮೀಪದ ಇತಿಹಾಸ ಪ್ರಸಿದ್ಧ ಐತಿಹಾಸಿಕ ನಗರ ಪಾನೀಪತ್‌ಗೆ ತಲಪಿದ. ಆ ನಗರದಲ್ಲಿ ಒಬ್ಬ ಸೂಫೀ ಸಂತ, ಅಬು ಅಲಿ ಖಲಂದರ್, ಶೌ ಶರಾಫ್ ಎಂಬ ಹೆಸರಿನಿಂದ ಪ್ರಸಿದ್ಧ ಪಡೆದು ಒಂದು ಮಠ ಸ್ಥಾಪಿಸಿದ್ದ. ಅವನ ಶಿಷ್ಯನಾದ ಒಬ್ಬ ಅವನ ಹೆಸರನ್ನೇ ಹೊಂದಿದವನನ್ನು ನಾನಕ್ ಭೇಟಿ ಮಾಡಿದ. ಶೌ ಶರಾಫ್, ನಾನಕ್‌ನ ಸಾಮಾನ್ಯ ಪೋಷಾಕು, ನಡೆ ನುಡಿ ಕಂಡು ವಿಸ್ಮಯಗೊಂಡು ಕೇಳಿದ : 'ಒಬ್ಬ ಫಕೀರನಾಗಿ, ಸಾಮಾನ್ಯ ಲೌಕಿಕ ಜನರು ಉಡುವಂತಹ ಉಡುಪನ್ನು ಧರಿಸಿ, ಸನ್ಯಾಸಿ ಸಂತರು ತಲೆ ಬೋಳಿಸಿಕೊಳ್ಳುವಂತೆ ಮುಂಡನ ಮಾಡಿಸಿಕೊಳ್ಳದೆ ಇದ್ದೀಯ'? ನಾನಕ್ ನಸುನಗುತ್ತಾ ಉತ್ತರಿಸಿದ: 'ತನ್ನ ಮನಸ್ಸನ್ನು ಬೋಳಿಸಿ ಹರಿತ ಮಾಡಿಕೊಳ್ಳಬೇಕೆ ಹೊರತು ತಲೆಯನ್ನಲ್ಲ ! ಮಣ್ಣಿನ ದೈನ್ಯತೆ ಹೊಂದಿರುವ ರೀತಿಯಲ್ಲಿ ಮನಸ್ಸನ್ನು ಹರಿತಗೊಳಿಸುವುದೇ ಸತ್ಯಮಾರ್ಗ.' ನಾನಕ್ ತಾನು ಧರಿಸಿದ್ದ ಉಡುಪಿನ ಬಗ್ಗೆ ಈ ರೀತಿ ವಿವರಿಸಿದ : 'ವೈಭವೋಪೇತ ಜೀವನ ಮತ್ತು ಅಹಂಭಾವ ತ್ಯಜಿಸಿ,

ತನ್ನ ಶಿರವನ್ನು ದೇವಿಗೆ ಒಪ್ಪಿಸಿದರೆ, ಯಾವುದೇ ಉಡುಪು ಧರಿಸಿದರೂ ಅದು ಪವಿತ್ರ ದಿರುಸಾಗುತ್ತದೆ.' ೪

ನಾನಕ್ ತನ್ನ ಜಾತಿ ಮತ್ತು ಪಂಗಡಗಳ ಬಗ್ಗೆ ಪ್ರಶ್ನಿಸಿದಾಗ, 'ನಾನು ಸತ್ಯಮಾರ್ಗದ ಪಂಗಡಕ್ಕೆ ಸೇರಿದ್ದೇನೆ. ನನ್ನ ಜಾತಿ ಅಗ್ನಿ ಮತ್ತು ಗಾಳಿಗಳಾಗಿವೆ. ನಾನು, ವೃಕ್ಷ ಮತ್ತು ನೆಲದ ತರಹ ಜೀವಿಸುತ್ತೇನೆ, ಯಾಕೆಂದರೆ ಅವುಗಳ ಹಾಗೆ ನಾನು ಕತ್ತರಿಸಿ ತುಂಡಾಗುವ ರೀತಿ ಮತ್ತು ಅಗೆದು ತೆಗೆದ ರೀತಿಯಲ್ಲಿ ಬಾಳುತ್ತೇನೆ. ನದಿಯ ತರಹ, ಅದರ ಮೇಲೆ ಹೂ ಅಥವಾ ಮಣ್ಣು ಎರಚಿದರೂ ವಿಚಲಿತನಾಗುವುದಿಲ್ಲ. ಶ್ರೀಗಂಧದ ತರಹ ಒಂಟಿಯಾಗಿ ಜೀವಿಸಿದರೂ ಸುವಾಸನೆ ಬೀರುವ ರೀತಿಯಲ್ಲಿ ಜೀವಿಸಲು ಬಯಸುತ್ತೇನೆ.' ಎಂದು ತನ್ನ ಜೀವನಕ್ರಮವನ್ನು ವಿವರಿಸಿದ. ೫

ಒಬ್ಬ ದರ್ವಿಶ್ (ಮುಸ್ಲಿಮ್ ಫಕೀರ) ಹೇಗೆ ಜೀವನ ಸಾಗಿಸಬೇಕು ಎಂಬ ಆ ಸೂಫಿ ಮುಸ್ಲಿಮ್‌ನ ಪ್ರಶ್ನೆಗೆ, ನಾನಕ್ ಉತ್ತರಿಸಿದ: 'ಯಾರು ಬದುಕಿದ್ದಾಗಲೇ ಸತ್ತಂತೆ (ನಿರ್ಲಿಪ್ತತೆ) ಇರುತ್ತಾರೋ; ಎಚ್ಚರವಾಗಿದ್ದಾಗ, ಮಲಗಿದಂತೆ (ಧ್ಯಾನ ಮಾಡುತ್ತ) ಮತ್ತು ತನ್ನದನ್ನು ದೋಚುವುದನ್ನು ಅರಿಯುವವನಾಗಿರಬೇಕು. ಯಾರು ಸುಖ ದುಃಖವನ್ನು ಏಕರೀತಿಯಲ್ಲಿ ಸ್ವಾಗತಿಸುತ್ತಾನೋ, ಮತ್ತು ದುಃಖ ನುಂಗಿ ಕ್ರೋಧಗೊಳ್ಳದೆ, ಯಾವ ವಸ್ತುಗಳಿಗೂ ಆಸೆ ಪಡೆಯದೆ, ಮತ್ತು ಗರ್ವ ಪಡೆಯದೆ ಇರುವನೋ ಅವನೇ ದರ್ವಿಶ್‌ನಾಗುತ್ತಾನೆ. ಯಾರು ದೇವರ ಧ್ಯಾನದಲ್ಲಿ ದೇವರ ನುಡಿಗಳನ್ನು ಕೇಳುತ್ತಾ ಮತ್ತೇನನ್ನೂ ಕೇಳದೆ, ಪ್ರತಿಯೊಂದು ವಸ್ತುವಿನಲ್ಲೂ ದೇವರ ಇರುವಿಕೆ ಮತ್ತು ಇಲ್ಲದಿರುವಿಕೆಯಲ್ಲಿ ಅವನನ್ನು ಕಾಣುತ್ತಾನೋ ಅವನೇ ದರ್ವಿಶ್ ಆಗುತ್ತಾನೆ.' ೬

ಶೌ ಶರಾಫ್ ನಾನಕ್‌ನ ವಚನಗಳನ್ನು ಕೇಳಿ ಅತ್ಯಂತ ಸಂತುಷ್ಟನಾಗಿ, ಅವನ ಕಾಲುಗಳಿಗೆ ಎರಗಿ ನಾನಕ್‌ನನ್ನು ದೈವಾಂಶಸಂಭೂತನೆಂದು ಸಾರಿದ.

ಪಾನಿಪತ್‌ನಿಂದ ಪಯಣಿಸಿದ ನಾನಕ್ ಮುಸ್ಲಿಮ್ ಚಕ್ರಾಧಿಪತ್ಯದ ರಾಜಧಾನಿ

---

೪. P 13 The Sikh Religion by Macauliffe 'Four stages of sufism; Shariat the law, or external ceremonies; Tariqat, walking in God's way; Marafat, divine Knowledge; haqiqat, certainty or Union with God. Many learned natives of India believe that the Sufi system is based on vedantha'

5. P 49 Sikh Religion by Macauliffe 'There are four ways by which with the repetition of God's name men may reach him. The first is holy companionship, the second truth, the third contentment and the fourth restraint of the senses.'

6. P 55 The Sikh Religion by Macauliffe

ದೆಹಲಿಗೆ ಬಂದು ತಲುಪಿದ. ನಗರದ ಹೊರವಲಯದಲ್ಲಿ ಬಾದ್‌ಶಹಾನಿಗೆ ಸೇರಿದ ಒಂದು ಆನೆ ಮರಣ ಹೊಂದಿದ್ದು ಅದರ ಪಾಲಕರು ಆನೆಯ ಮರಣದಿಂದ ನೌಕರಿ ಕಳೆದುಕೊಳ್ಳುವ ಸಂಭವವಿದ್ದರಿಂದ ಅವರು ಕಂಗಾಲಾಗಿದ್ದರು. ನಗರಕ್ಕೆ ಒಬ್ಬ ಸಂತನ ಆಗಮನ ಕೇಳಿದ ಅವರು ಅವನಿಂದ ತಮಗೆ ಉಪಕಾರವಾಗಬಹುದೆಂಬ ಆಸೆಯಿಂದ ನಾನಕ್‌ನ ಬಳಿ ತೆರಳಿ, ಸತ್ತ ಆನೆಯನ್ನು ತಮ್ಮ ದೈವಶಕ್ತಿ ಪವಾಡಗಳಿಂದ ಬದುಕಿಸಬೇಕೆಂದು ಕೇಳಿಕೊಂಡರು. ನಾನಕ್ ಅವರ ಕೋರಿಕೆಗೆ, 'ಜೀವನ್ಮರಣ ದೇವರ ಕೈಲಿದೆ. ಯಾವ ಮನುಷ್ಯನಿಗೂ ದೇವರ ನಾಟಕದ ಮಧ್ಯೆ ಪ್ರವೇಶಿಸುವಂತಿಲ್ಲ. ಅವನಿಂದ ಏನು ಬಂದರೂ ಅದನ್ನು ಪಡೆದುಕೊಂಡು ಸುಖಿಸಬೇಕು. ಎಲ್ಲಿಯವರೆಗೆ ಮನುಷ್ಯನಲ್ಲಿ ಜೀವವಿರುವುದೋ ಅಲ್ಲಿಯವರೆಗೆ ದೇವರಲ್ಲಿ ತನ್ನ ಒಳ್ಳೆಯದಕ್ಕೆ ಪ್ರಾರ್ಥಿಸಬೇಕು. ಆದರೆ ಯಾವಾಗ ದೇವರು ಮನುಷ್ಯನ ಜೀವ ತೆಗೆಯಲಿಚ್ಛಿಸುತ್ತಾನೋ ಆಗ ಅವನು ಅದಕ್ಕೆ ಸಂತೋಷದಿಂದ ತಲೆಬಾಗಬೇಕು.' ಎಂದು ಉಪದೇಶಿಸಿದ.

ಕೆಲವು ಇತಿಹಾಸಕಾರರು ನಾನಕ್ ಸತ್ತ ಆನೆಯನ್ನು ಬದುಕಿಸಿದ ಕತೆ ನೀಡಿರುತ್ತಾರೆ. ಆದರೆ ನಾನಕ್ ಯಾವ ಪವಾಡ, ಜಾದೂ ಮೇಲೆ ನಂಬಿಕೆ ಇಟ್ಟುಕೊಳ್ಳದ ಕಾರಣ ಈ ಕತೆಯನ್ನು ನಂಬಲು ಕಷ್ಟವೆಂದಿದ್ದಾರೆ. ೭, ೮

ನಾನಕ್ ದೆಹಲಿಯಿಂದ ಹರಿದ್ವಾರಕ್ಕೆ ಪಯಣಿಸಿ, ಅಲ್ಲಿ ಹರಿಯುತ್ತಿರುವ ಗಂಗಾ ನದಿಯ ದಡದಲ್ಲಿ ತಂಗಿದ. ಅಲ್ಲಿ ಜರುಗಿದ ಪ್ರಸಿದ್ಧ ಘಟನೆಯನ್ನು ಇತಿಹಾಸಕಾರರು ನಮೂದಿಸಿ, ಇತಿಹಾಸದ ಪುಟಗಳಲ್ಲಿ ಅ ಕಥೆಯನ್ನು ಪ್ರಸಿದ್ಧಗೊಳಿಸಿದ್ದಾರೆ.

ಯಾತ್ರಿಕರು ಗಂಗಾ ನದಿಯ ನೀರನ್ನು ತಮ್ಮ ಕೈಯ ಬಸುಗೆಯಲ್ಲಿ, ಪಾತ್ರೆಗಳಲ್ಲಿ ಹಿಡಿದು ಪೂರ್ವ ದಿಕ್ಕಿಗೆ ತರ್ಪಣ ಕೊಡುವ ಅಭ್ಯಾಸದಲ್ಲಿ ತೊಡಗಿದ್ದನ್ನು ಕಂಡ ನಾನಕ್ ಕಾರಣವನ್ನು ಕೇಳಿದ. ಸತ್ತು ಸ್ವರ್ಗಸ್ಥರಾಗಿರುವ ತಮ್ಮ ಪಿತೃಗಳಿಗೆ ನೀರು ನೀಡುವ ಮೂಲಕ ತರ್ಪಣ ಎಸಗುತ್ತಿರುವುದಾಗಿ ಅವರು ಉತ್ತರಿಸಿದಾಗ, ನಾನಕ್ ತನ್ನ ಕೈ ಬಸುಗೆಯಲ್ಲಿ ನದೀ ನೀರನ್ನು ಹಿಡಿದು ಪಶ್ಚಿಮ ದಿಕ್ಕಿಗೆ ಅದನ್ನು ಎಸೆಯತೊಡಗಿದ. ಅವನ ಆ ಕಾಯಕ ಕಂಡ ಯಾತ್ರಿಕರು ಕಾರಣ ಕೇಳಿದಾಗ, ನಾನಕ್ ಉತ್ತರಿಸಿದ : 'ನಾನು ಪಶ್ಚಿಮದಿಕ್ಕಿನಲ್ಲಿರುವ ನನ್ನ ಹೊಲ ಗದ್ದೆಗಳಿಗೆ ನೀರನ್ನು ಹಾಯಿಸುತ್ತಿದ್ದೇನೆ'. ಅವನ ಮಾತುಗಳನ್ನು ಕೇಳಿ ಯಾತ್ರಿಕರು ನಕ್ಕು. 'ನೀನು ಬೆಳೆದು ದೊಡ್ಡವನಾದರೂ, ತಲೆ ಬಲಿತಿದ್ದರೂ ನೀನು ಹಾಯಿಸಿದ ನೀರು ದೂರದಲ್ಲಿರುವ ನಿನ್ನ ಹೊಸ ಗದ್ದೆಗಳನ್ನು ಸೇರಲಾರವು ಎನ್ನುವಷ್ಟು ಅರಿಯಲಾರದವನಾಗಿದ್ದೀಯಲ್ಲಾ?.' 'ನೀವು ಎಂತಹ ವಿಚಿತ್ರ ಜನರು? ನಾನು

---

೭. P 7 The History of Sikhs people by G.Singh

೮. P 56 The Sikh Religion by Macauliffe

ಹಲವಾರು ಮೈಲಿ ದೂರವಿರುವ ನನ್ನ ಹೊಲ ಗದ್ದೆಗಳಿಗೆ ಇಲ್ಲಿಂದ ನೀರು ಹಾಯಿಸಲ ಸಾಧ್ಯವಾದರೆ ನೀವು ಸ್ವರ್ಗಲೋಕದಲ್ಲಿರುವ ನಿಮ್ಮ ಪಿತೃಗಳಿಗೆ ಹೇಗೆ ನೀರುಣಿಸುವಿರಿ?'

'ಯಾರು ದೇವರನ್ನು ತಮ್ಮ ಮನಸ್ಸಿನಲ್ಲಿಟ್ಟು ನ್ಯಾಯಮಾರ್ಗದಲ್ಲಿ ನಡೆಯುವರೋ, ಅವರ ಆತ್ಮಕ್ಕೆ ಇಹ ಮತ್ತು ಪರ ಪ್ರಪಂಚಗಳಲ್ಲಿ ಶಾಂತಿ ದೊರಕುವುದು. ಅವರು ದೇವರನ್ನು ಸಂತುಷ್ಟಗೊಳಿಸಲು ಯಾವುದೇ ಆಚಾರ ಎಸಗಬೇಕಾಗಿಲ್ಲ.' ೯

ಅನಿಷ್ಟ ಆಚಾರ ಅನಾಚಾರಗಳ ಬಗ್ಗೆ ನಾನಕ್ ಕಿಡಿಕಾರಿ, ಜನರ ಮುಗ್ಧ, ಮೂಢನಂಬಿಕೆಗಳ ಬಗ್ಗೆ ತನ್ನ ವಿಚಾರಗಳನ್ನು ನಿರ್ಭಯವಾಗಿ ಹೊರಹಾಕಿ ಪ್ರಸಿದ್ಧಿ ಪಡೆದ.

ಒಮ್ಮೆ ಒಬ್ಬ ಬ್ರಾಹ್ಮಣನ ಮನೆಯ ಅಡಿಗೆ ಕೋಣೆಗೆ ಅಪ್ಪಣೆಯಿಲ್ಲದೆ ಹೊಕ್ಕಾಗ, ಮಡಿ ಮೈಲಿಗೆಯ ಭ್ರಮೆಯಿಂದ ಬೇಯುತ್ತಿದ್ದ ಬ್ರಾಹ್ಮಣ ತನ್ನ ಅಡುಗೆ ಮನೆಯೊಳಗೆ ಹೊಕ್ಕ ನಾನಕನ ಕೃತ್ಯವನ್ನು ನೋಡಿ ಕೆರಳಿ ಕೆಂಡವಾದ. ಅಡುಗೆ ಕೋಣೆಯನ್ನು ಮೈಲಿಗೆ ಮಾಡಿದ್ದಕ್ಕೆ ನಾನಕ್‌ನನ್ನು ನಿಂದಿಸಿದ. ಆಗ ನಾನಕ್ ಹೇಳಿದ : 'ನಿನ್ನ ಅಡುಗೆಕೋಣೆ ಈಗಾಗಲೇ ಕೆಳಜಾತಿಯವರ ಕೋಪಾಗ್ನಿಯಿಂದ ಮೈಲಿಗೆಯಾಗಿರುವಾಗ ನನ್ನ ಆಗಮನದಿಂದ ಅದು ಮೈಲಿಗೆ ಹೇಗೆ ಆಗುವುದು?'. ಅವನ ಮಾತುಗಳನ್ನು ಕೇಳಿದ ಬ್ರಾಹ್ಮಣ ಮತ್ತಷ್ಟು ಕೆರಳಿದ. ನಾನಕ್ ಅವನ ಕೆರಳುವಿಕೆಯನ್ನು ಕಂಡು ಹೇಳಿದ : 'ಕೀಳುಜಾತಿಯ ದೋಲಕ್ ಬಾರಿಸುವ ಹೆಣ್ಣೇ ಅಜ್ಞಾನ; ಕಸಾಯಿಖಾನೆ ಹೆಣ್ಣೇ ಕ್ರೂರತನ; ಕಸಗುಡಿಸುವವಳೇ ಚಾಡಿಹೇಳುವ ಹೃದಯ; ಮತ್ತು ಕೋಪವೇ ಮನಸ್ಸನ್ನು ಹಾಳುಗೆಡಿಸುವ ಚಂಡಾಲ. 'ಓ ಬ್ರಾಹ್ಮಣ, ನಾಲ್ಕು ಕೀಳು ಜಾತಿಯವರು ನಿನ್ನ ಮನಸ್ಸನ್ನು ಒಳಗಿನಿಂದಲೇ ಮೈಲಿಗೆ ಮಾಡುವಾಗ, ಕೇವಲ ನಾಲ್ಕು ಗೋಡೆಗಳಿಂದ ನಿನ್ನ ಅಡುಗೆಮನೆಯನ್ನು ಮೈಲಿಗೆಯಾಗುವುದನ್ನು ತಪ್ಪಿಸಿಕೊಳ್ಳಲಾರೆ.'

ನಾನಕ್ ಆ ಬ್ರಾಹ್ಮಣನಿಗೆ 'ಸತ್ಯಪರಿಪಾಲನೆ, ಸ್ಮರಣೆ ಮತ್ತು ಸತ್ಕಾರ್ಯಗಳಿಂದ ಗೋಡೆ ನಿರ್ಮಿಸಿ, ದೇವರ ಹೆಸರನ್ನು ಶುಚಿಸ್ನಾನವನ್ನಾಗಿ ಮಾಡಿದರೆ ದೇವರನ್ನು ಸಂತುಷ್ಟಗೊಳಿಸಬಹುದು' ಎಂದು ಉಪದೇಶಿಸಿದನು.

ನಾನಕ್ ಹರಿದ್ವಾರದಿಂದ ಪಯಣಿಸಿ, ಹಿಂದೂಗಳ ಪ್ರಸಿದ್ಧ ಯಾತ್ರಾಸ್ಥಳ ವೃಂದಾವನವನ್ನು ತಲುಪಿದ. ಅಲ್ಲಿ ಭಕ್ತರು ಕೃಷ್ಣನನ್ನು ಭಜನೆ, ನರ್ತನ ಇತ್ಯಾದಿಗಳಿಂದ ತಮ್ಮ ಆನಂದಕ್ಕಾಗಿ ಹಾಡಿ ನರ್ತಿಸುವವರನ್ನು ಕಂಡು ವಿಸ್ಮಯನಾದ. ಯಾರು ದೇವರನ್ನು ಭಯ ಭಕ್ತಿಯಿಂದ ಪೂಜಿಸುವುದಿಲ್ಲವೋ, ಅವರಿಗೆ ಕೇಡು ತಪ್ಪಿದ್ದಲ್ಲ ಎಂದು ತನ್ನ ಒಂದು ಹಾಡಿನ ಮೂಲಕ ವ್ಯಕ್ತಪಡಿಸಿದ.

ನಾನಕ್, ತನ್ನ ವೇಶಭೂಷಣದಲ್ಲಿ ಬದಲಾವಣೆ ತಂದು ಮಾವಿನ ಹಣ್ಣಿನ

---

೯. P 78 The History of Sikh People by G. Singh

ಬಣ್ಣದ ಒಂದು ಮೇಲುಡುಪು ಧರಿಸಿದ. ಅದರ ಮೇಲೆ ಒಂದು ಬಿಳೀ ಬಣ್ಣದ ಹೊದಿಕೆಯನ್ನು ಏರಿಸಿದ. ತಲೆಗೆ, ಮುಸ್ಲಿಮ್ ಖಲಂದರ್‌ಗಳು ಧರಿಸುವ ರೀತಿಯಲ್ಲಿ ಪೇಟವನ್ನು ಧರಿಸಿದ. ಹಣೆಗೆ ಸಾಧು ಸಂತರು ಹಾಕಿಕೊಳ್ಳುವ ಹಳದಿ ಬೊಟ್ಟನ್ನು ಹಾಕಿಕೊಂಡ. ಕೊರಳಿಗೆ ಮೂಳೆಗಳ ಹಾರ ಧರಿಸಿದ. ಅವನ ಪೋಶಾಕು ಅರ್ಧ ಹಿಂದೂ ಮತ್ತು ಅರ್ಧ ಮುಸ್ಲಿಮರು ಧರಿಸುವ ಉಡುಪಾಗಿತ್ತು. ಅದು ಹಿಂದೆಂದೂ ಯಾರೂ ಧರಿಸಿದ ಉಡುಪಾಗಿತ್ತು.

ನಾನಕ್ ವೃಂದಾವನದಿಂದ ಗೋರಖ್‌ಮಾತಾ ಎಂಬ ಯೋಗಿಗಳ ಯಾತ್ರಾಸ್ಥಳವನ್ನು ತಲುಪಿದ. ರಸ್ತೆಬದಿಯಲ್ಲಿದ್ದ ಒಂದು ಒಣಗಿ ನಿಂತ ಪುರಾತನ ಅರಳೀಮರದ ಬುಡದಲ್ಲಿ ಕುಳಿತ. ಕೆಲವೇ ಸಮಯದಲ್ಲಿ ಮರದಲ್ಲಿ ರೆಂಬೆಗಳಲ್ಲಿ ಎಲೆ ಚಿಗುರತೊಡಗಿದ್ದನ್ನು ನೋಡಿದ ಜನರು ಆಶ್ಚರ್ಯಚಕಿತರಾಗಿ, ನಾನಕ್ ಆ ಮರದ ಬುಡದಲ್ಲಿ ಕುಳಿತ ಪುಣ್ಯದಿಂದಲೇ ಸಾಯುತ್ತಿದ್ದ ಮರ ಪುನಃ ಚಿಗುರಗೊಡಗಿತು ಎಂದು ನಂಬಿ ಅವನನ್ನು ಭಯಭಕ್ತಿಯಿಂದ ನಮಿಸಿ, ಅವನು ಎಸಗಿದ ಪವಾಡದ ಗುಣಗಾನ ಮಾಡತೊಡಗಿದರು.

ಇದೇ ಸಮಯದಲ್ಲಿ ಕೆಲವು ಸಿದ್ದರು ನಾನಕನನ್ನು ಭೇಟಿ ಮಾಡಿ ಅವನೊಂದಿಗೆ ಸಂವಾದ ಹೂಡಿದರು. ನಾನಕ್‌ನ ಕುಲಗೋತ್ರ ಮತ್ತು ಅವನ ಗುರುವಿನ ಬಗ್ಗೆ ಪ್ರಶ್ನೆಗಳನ್ನು ಹಾಕಿದಾಗ ನಾನಕ್ ತನ್ನ ಶಿಷ್ಯ ಮರ್ದಾನನಿಗೆ ಡೋಲಕ್ ಬಾರಿಸುವಂತೆ ಹೇಳಿ, ಹಾಡಿನ ಮೂಲಕ ಉತ್ತರ ಹೇಳತೊಡಗಿದ.

'ಓ ದೇವಾ, ಒಂದು ತಕ್ಕಡಿ ಅಥವಾ ಅದನ್ನು ಹಿಡಿಯವನು ಅಥವಾ ನಿನ್ನನ್ನು ಪರೀಕ್ಷಿಸುವವನಿದ್ದಾನೆಯೆ?'

'ನಿನ್ನ ಬೆಲೆ ಕಟ್ಟುವವನು ಇದ್ದಾನೆಯೆ? ನಿನ್ನಲ್ಲಿ ಬುದ್ಧಿ ಕಂಡುಹಿಡಿಯುವ ಗುರು ಇದ್ದಾನೆಯೆ?'

'ಓ ಪ್ರೀತಿಯೇ, ನಾನು ನಿನ್ನ ಎಲ್ಲೆಯನ್ನು ಅರಿತಿಲ್ಲ.'

'ಯಾಕೆಂದರೆ, ನೀನು ಈ ಭೂಮಿ, ನೀರು, ಪಾತಾಳ ಮತ್ತು ಆಕಾಶಗಳಲ್ಲಿ ಆವರಿಸಿರುತ್ತೀಯಾ ಮತ್ತು ಇಹದಲ್ಲಿದ್ದೀಯಾ'

ನಾನಕ್‌ನ ಉತ್ತರದಿಂದ ಸಿದ್ಧಿಗಳು ಸಂತುಷ್ಟರಾದರು. ಅವರು ಪುನಃ ಅವನನ್ನು ದೇವರನ್ನು ಅರಿಯುವ, ಕಾಣುವ, ಸಾಕ್ಷಾತ್ಕರಿಸುವ ಬಗೆ ಹೇಗೆ ಎಂದು ಪ್ರಶ್ನಿಸಿದಾಗ, ಅವನು ತನ್ನ ಈ ಕವನದ ಮುಖಾಂತರ ಉತ್ತರಿಸಿದ :

'ಮನಸ್ಸು ಒಂದು ತಕ್ಕಡಿ, ಅದು ತೂಕವನ್ನು ಮತ್ತು ದೇವರ ದಾಸನಾದ ತೂಕವನ್ನೂ ಅಳೆಯುವವನನ್ನು ಅರಿಯುತ್ತದೆ. ಹೃದಯದೊಳಗೆ ಇರುವ ದೇವರನ್ನು ತೂಕ ಹಾಕಿ, ನೋಡಿ ಮತ್ತು ಧ್ಯಾನಿಸಬೇಕು. ಹೌದು ! ಅವನೇ ಸ್ವತಃ ತಕ್ಕಡಿ, ಅವನ

ನಾಲಿಗೆ ಅವನ ತೂಕ, ಅವನ ತೂಕ ಮಾಡುವವ ಮತ್ತು ಅವನೇ ಸ್ವತಃ ತನ್ನನ್ನು ತಾನೇ ಕಾಣುವ ಮತ್ತು ಸಾಕ್ಷಾತ್ಕರಿಸುವ ಮತ್ತು ತನ್ನನ್ನು ತಾನೇ ವ್ಯವಹರಿಸುವವ.'

ಆದರೆ ಯಾರು ಕುರುಡನಾಗಿದ್ದಾನೆಯೋ ಮತ್ತು ಕೆಳಮಟ್ಟದವನಾಗಿದ್ದಾನೆಯೋ ಮತ್ತು ದೇವರ ರೀತಿಯಲ್ಲಿ ಅಪರಚಿತನಾಗಿದ್ದಾನೆಯೋ. ಮನಸ್ಸನ್ನು ತಳಮಳಗೊಂಡಿಸಿರುತ್ತಾನೆಯೋ, ಹೇಗೆ ತಾನೆ ಅವನು ಮತ್ತು ಅವನ ಸಂಗಡಿಗರು ದೇವರ ಅಸ್ತಿತ್ವ ಅಥವಾ ವಿಸ್ತಾರತ್ವವನ್ನು ಅರಿಯಬಲ್ಲರು ? ೧೦, ೧೧

ಯೋಗಿ ಸಿದ್ಧರು, ನಾನಕ್‌ನ ವಿಶ್ಲೇಷಣೆ, ನಿರೂಪಗಳನ್ನು ಒಪ್ಪಿದರೂ, ಅವರು ದೇವರನ್ನು ಯೋಗದ ಮೂಲಕ ಸಮಾಧಿಸ್ಥಿತಿ ಸಿದ್ಧಿಸಲು ನಾನಕ್‌ನಿಗೆ ಸಲಹೆ ನೀಡಿದರು. ಆಗ ನಾನಕ್ ಪುನಃ ತನ್ನ ಗಾನಾಮೃತದ ಮೂಲಕ ಯೋಗದ ಬಗ್ಗೆ ಪ್ರವಚನ ನೀಡಿ ಅದರ ಬಗ್ಗೆ ಅಮೋಘ ಜ್ಞಾನ ಪ್ರದರ್ಶಿಸಿದ.

'ಯೋಗವೆಂದರೆ ತೇಪೆ ಹಾಕಿದ ಉಡುಪಲ್ಲ,
ಯೋಗಿಯ ಊರುಕೋಲಲ್ಲ,
ದೇಹವನ್ನು ಬೂದಿಯಿಂದ ಬಳಿದುಕೊಂಡಿದ್ದಲ್ಲ,
ಅಥವಾ ಕಿವಿಗಳಿಗೆ ಕುಂಡಲಗಳನ್ನು ಏರಿಸಿಕೊಂಡಿದ್ದಲ್ಲ,
ಅಥವಾ ಶಂಖವನ್ನು ಊದುವುದಲ್ಲ.'

'ಲೋಕದ ಕಲ್ಮಶಗಳಲ್ಲಿ ಬದುಕಿ ಸಾಗುವವನಾಗಿದ್ದರೂ
ನಿರ್ಲಿಪ್ತನಾಗಿ ಮತ್ತು ನಿಶ್ಕಳಂಕವಾಗಿ ಜೀವಿಸುವವನೇ ಯೋಗಿ'

'ಯೋಗ ಕೇವಲ ಹೆಸರಲ್ಲಿ ನಿಂತು ಅಡಗಿಲ್ಲ;
ಯಾಕೆಂದರೆ ಯೋಗಿಯೊಬ್ಬ
ಪ್ರತಿಯೊಬ್ಬ ಮನುಷ್ಯನನ್ನೂ ಸರಿಸಮಾನವೆಂದು ಬಗೆಯುವವನು;
ಮತ್ತು ಜೀವದಿಂದ್ದರೂ ಮರಣಿಸಿದಂತಿರುತ್ತಾನೆ,
ಮತ್ತು ನುಡಿಸಿದ ಸಂಗೀತ ಸುಧೆಯನ್ನು ಆಲೈಸುತ್ತಾನೆ.
ಶಂಖೆಯನ್ನು ದೂರೀಕರಿಸಿ ಮತ್ತು ಮನಸ್ಸಿನ ತಳಮಳ
ಗಳನ್ನು ನಿಶ್ಚಲಿಸಿದಾಗ, ಅವನು ಅಭಯಾವಸ್ಥೆಯನ್ನು ಸೇರುತ್ತಾನೆ.

ಜೇನುತುಪ್ಪ ಸುರಿಯುವುದು ಮನಸ್ಸಿನ ಮೇಲೆ
ಮತ್ತು ಆದರೊಳಗೆ ಕಂಡುಕೊಳ್ಳುವನ ಸಮತೋಲನ,
ಮತ್ತು ತನ್ನನ್ನು ತಾನೇ ಅರಿಯುವವನಾಗುತ್ತಾನೆ.'

---

೧೦. P 81 The History of Sikhs people by G. Singh

೧೧. P 60 The Sikh Religion by Macauliffe

ನಿಜವಾದ ಯೋಗಿಗಳು ಯಾರು ಮತ್ತು ಹೇಗೆ ದೈವತ್ವ ಪಡೆಯುವವರಾಗುವರು ಎಂದು ವರ್ಣಿಸಿದ ನಾನಕ್, ನೆರೆದಿದ್ದ ಯೋಗಿಗಳ ಮನಸ್ಸನ್ನು ಸೂರೆಗೊಂಡಿದ್ದ. ಬೂದಿ ಬಳಿದುಕೊಂಡು, ಕಮಂಡಲು ಹಿಡಿದು, ಸಮಚಿತ್ತನಾಗದೆ, ಸುತ್ತಾಡುವ ಯೋಗಿ ದಿಟವಾದ ಯೋಗಿಯಲ್ಲ ಎಂಬ ನಾನಕ್‌ನ ನಿರ್ಣಯ ಸಮಯೋಚಿತವಾಗಿತ್ತು. ಸೋಮಾರಿಯಾಗಿ, ಊರೂರು ಅಲೆದು, ಭಿಕ್ಷೆ ಬೇಡಿ, ತಾನು ಯೋಗಿ ಎಂದು ಹೇಳಿಕೊಂಡು, ಜನರಿಗೆ ಮಂಕುಬೂದಿ ಎರಚಿ ಜೀವನ ಸಾಗಿಸುವ ಯೋಗಿಗಳ ಬಗ್ಗೆ ನಾನಕ್ ನುಡಿದ ವಾಕ್ಯಗಳು ಸರ್ವಕಾಲಕ್ಕೂ ಅಮೃತವಾಕ್ಯಗಳಾಗಿವೆ.

ನಾನಕ್ ತನ್ನ ಅನುಯಾಯಿ ಮರ್ದಾನಾನೊಂದಿಗೆ ಹಿಂದೂಗಳ ಪರಮಪವಿತ್ರಕ್ಷೇತ್ರ ವಾರಣಾಸಿಗೆ ಪಯಣಿಸಿದ. ವಾರಣಾಸಿಯಲ್ಲಿ ಅವನ ಭೇಟಿ ಪ್ರಸಿದ್ಧ ಪಂಡಿತ ಚತುರದಾಸ್‌ನೊಂದಿಗೆ ಗಂಗಾ ನದಿಯ ತಟದಲ್ಲಿ ಆಯಿತು. ನಾನಕನು ಧರಿಸಿದ್ದ ವಿಚಿತ್ರ ಉಡುಪು ಅವನ ಗಮನ ಸೆಳೆಯಿತು. ತುಳಸೀಮಾಲೆ ಧರಿಸದ, ಕೈಯಲ್ಲಿ ಜಪಮಾಲೆ ಹಿಡಿಯದ, ಸಾಲಿಗ್ರಾಮ ಇರಿಸಿಕೊಳ್ಳದ ನಾನಕ್‌ನನ್ನು ಕಂಡು ಚತುರದಾಸ್ ಕೇಳಿದ : 'ನೀನು ಎಂತಹ ಗುರು? ಕಾಶಿಗೆ ಬಂದು ಹೇಗೆ ಮೋಕ್ಷ ಪಡೆಯುವೆ?'

ಚತುರದಾಸನ ವ್ಯಂಗ್ಯದ ಪ್ರಶ್ನೆಗೆ ನಾನಕ್ ಉತ್ತರಿಸಿದ :

'ಬಂಜರು ಭೂಮಿಗೆ ನೀರುಡಿಸುವವ
ತನ್ನ ಜೀವನವನ್ನು ಹಾಳುಗೆಡುವವ
ಬ್ರಾಹ್ಮಣ, ದೇವರನ್ನು ಆರಾಧಿಸು.
ಋಜುಮಾರ್ಗವೇ ತುಳಸೀಮಾಲೆ,
ಮತ್ತು ದೇವರ ಕೃಪೆಗಾಗಿ, ಅವನ ಪ್ರೀತಿಯ
ನಾವೆಯಲ್ಲಿ ಧ್ಯಾನಿಸಿ ಸಾಗು
ಆಗ ನಿನ್ನನ್ನು ದಡಕ್ಕೆ ಪಾರುಮಾಡುವನು'

ನಾನಕ್‌ನ ಉಪದೇಶ ಕೇಳಿದ ಚತುರದಾಸ ಕೆಲವು ಪ್ರಶ್ನೆಗಳನ್ನು ಹಾಕಿದ.

'ಒಬ್ಬ ವ್ಯಕ್ತಿಯ ಮನಸ್ಸು ದುರಾಸೆ ಮತ್ತು ಕ್ರೋಧಾಗ್ನಿಗಳಿಂದ ತುಂಬಿದ್ದರೆ, ಅವನ್ನು ಹೋಗಲಾಡಿಸುವುದು ಹೇಗೆ?

ನಾನಕ್ ಉತ್ತರಿಸಿದ : 'ದುರಾಸೆ ಮತ್ತು ಕ್ರೋಧಾಗ್ನಿಗಳನ್ನು ಹೊಲ ಉಳುವ ನೇಗಿಲನ್ನಾಗಿ ಪರಿವರ್ತಿಸಬಹುದು. ಅವು ಶಕ್ತಿಗಳಾಗಿವೆಯಷ್ಟೆ ಅವು ಮನುಷ್ಯನ ಮೇಲೆ ಸವಾರಿಮಾಡುವ ಬದಲು, ಅವನು ಅವುಗಳ ಮೇಲೆ ಸವಾರಿ ಮಾಡಬೇಕು.'

ಆದರೆ ಕರ್ಮದ ಬಗ್ಗೆ ನಾನಕ್‌ನ ಅಭಿಪ್ರಾಯ ಕೇಳಿದಾಗ, ನಾನಕ್ ಉತ್ತರಿಸಿದ : 'ದೇವರ ಕೃಪೆಯಿಂದ ಮಾನವ ತನ್ನ ಹಿಂದಿನ ಪಾಪಕರ್ಮಗಳನ್ನು ನಾಶಮಾಡಬಹುದು. ದೇವರ ಕೃಪೆ ಪಡೆಯುವುದಾದರೂ ಹೇಗೆ? ಅದು ಸಂಪೂರ್ಣ ನಿಸ್ವಾರ್ಥ ಸಮರ್ಪಣೆ ಮತ್ತು ದೈವೇಚ್ಛೆ, ಜ್ಞಾನ ಮತ್ತು ವಿಧೇಯತೆಗಳಿಂದ

ದೊರೆಯುವುದು.

'ಜ್ಞಾನ ಪಡೆಯಲು ಮತ್ತು ಅದಕ್ಕಾಗಿ ವಿದ್ಯಾಭ್ಯಾಸ ಮಾಡಬೇಕಾಗಿದ್ದರಿಂದ, ಜನ ಕಾಶಿಗೆ ಬರುತ್ತಾರೆ. ಹೀಗಿರುವಾಗ, ವಿದ್ಯಾಭ್ಯಾಸ ಮಾಡದೆ ಜ್ಞಾನ ಸಂಪಾದಿಸುವುದಾದರೂ ಹೇಗೆ?' ಪಂಡಿತ ಚತುರದಾಸನ ಪ್ರಶ್ನೆಗೆ, ನಾನಕ್ ತನ್ನ ಜ್ಞಾನ ಪ್ರದರ್ಶಿಸಿದ : 'ಜ್ಞಾನ ಪಡೆಯುವುದು ಅರಿಯುವಂತಾಗುವುದಿಲ್ಲ. ಬುದ್ಧಿಶಕ್ತಿ ಯಾವಾಗಲೂ ವಿವೇಕದೆಡೆಗೆ ದಾರಿ ತೋರಿಸುವುದಿಲ್ಲ. ಯಾಕೆಂದರೆ ದೇಹ ಬಲಹೀನವಾಗಿರುತ್ತದೆ ಮತ್ತು ಹೃದಯ ಕೂಡ ಕೇಡನ್ನು ತಡೆಹಿಡಿಯಲು ಕ್ಷೀಣವಾಗಿರುತ್ತದೆ. ಆದ್ದರಿಂದಲೇ ಪ್ರತಿಯೊಬ್ಬರೂ ಇಬ್ಬರು ತಾಯಿಯರಾದ ಆಕಾಂಕ್ಷೆ ಮತ್ತು ಆಸೆಗಳನ್ನು ಮತ್ತು ಇಬ್ಬರು ತಂದೆಯರಾದ ಆಸಕ್ತಿ ಮತ್ತು ಅಸೂಯೆಗಳನ್ನು ಹೊಂದಿರುತ್ತಾರೆ."

"ಹಾಗಾದರೆ ಮನುಷ್ಯನಿಗೆ ಮುಕ್ತಿ ಪಡೆಯುವ ಲಕ್ಷಣಗಳೇನು?'

ಚತುರದಾಸ್‌ನ ಪ್ರಶ್ನೆಗೆ ನಾನಕ್ ಉತ್ತರಿಸಿದ :

'ಎಲ್ಲೆಡೆ ದೇವರು ಆವರಿಸಿದ್ದು ತನ್ನ ಸುತ್ತ ಇದ್ದವೆಲ್ಲಾ ಕೇವಲ ಮಾಯೆ ಎಂದು ಅರಿತವ ಮುಕ್ತಿ ಪಡೆಯಲು ಸಾಧ್ಯವಾಗುತ್ತದೆ. ಆದರೆ ಅಂತಹವನ ಮಹತ್ತರ ಗುರುತು ಅವನ ಹೃದಯದಲ್ಲಿರುವ ಕರುಣಾಮೃತವಾಗಿದೆ.'

ವೇದಾಂತ ತತ್ವವನ್ನು ಸಾರಿದ ನಾನಕ್ ಗೌತಮ ಬುದ್ಧನ ಪ್ರತಿ ಜೀವಿಗಳ ಬಗ್ಗೆ ಕರುಣೆ ಇಡುವ ತತ್ತ್ವವನ್ನು ವೇದಾಂತಿಯ ಹೃದಯದಲ್ಲಿ ತಾಗುವಂತೆ ಸಾರಿದ. ದೇವರನ್ನು ಒಲಿಸಿ, ಅವನನ್ನು ಸಾಕ್ಷಾತ್ಕರಿಸಲು ಪ್ರೀತಿಯೊಂದೇ ಎಂದು ನಾನಕ್ ಸಾರಿದ. ದೇವರನ್ನು ಪ್ರೀತಿಸುವವ ಪ್ರತೀ ಜೀವಿಯನ್ನು ಪ್ರೀತಿಸುವವನಾಗುತ್ತಾನೆ. ಸೂಫೀ ತತ್ವದ ತಿರುಳನ್ನು ತನ್ನ ತತ್ವದಲ್ಲಿ ಸೇರಿಸಿ, ಸಾರಿದ ನಾನಕ್ ತನ್ನ ವಿಶಾಲ ಮನೋಧರ್ಮದ ಸಾರವನ್ನು ತೋರ್ಪಡಿಸಿದ.

ಬ್ರಾಹ್ಮಣ ಚತುರದಾಸ, ನಾನಕ್‌ನ ಭಕ್ತನಾದ. ಅವನ ಶಿಷ್ಯನಾಗಿ ಅವನ ಪಾದಗಳಿಗೆ ಎರಗಿದ. ೧೨

ನಾನಕ್ ವಾರಣಾಸಿಯಿಂದ ಪಯಣಿಸಿ ಸನಿಹದಲ್ಲೇ ಇರುವ ಪ್ರಸಿದ್ಧ ಯಾತ್ರಾಸ್ಥಳ ಗಯಾಗೆ ಬಂದು ಸೇರಿದ. ಆ ಯಾತ್ರಾಸ್ಥಳದಲ್ಲಿ ಹಿಂದೂಗಳು ತಮ್ಮ ಪಿತೃಗಳಿಗೆ ಪಿಂಡದಾನ ಮಾಡುವ ಶ್ರಾದ್ಧಕರ್ಮವನ್ನು ಆಚರಿಸುವ ಪವಿತ್ರ ಸ್ಥಳವಾಗಿದೆಯಷ್ಟೆ. ನಾನಕ್‌ನನ್ನು ಕಂಡ ಬ್ರಾಹ್ಮಣನೊಬ್ಬ ಅವನ ಪಿತೃಗಳ ಶ್ರಾದ್ಧಕರ್ಮ ಮಾಡುವಂತೆ ಕೇಳಿಕೊಂಡ. ಆದರೆ ಅದಕ್ಕೆ ಉತ್ತರರೂಪವಾಗಿ ನಾನಕ್ ತಾನು ರಚಿಸಿದ ಪದ್ಯದ ಮೂಲಕ ಆ ಬ್ರಾಹ್ಮಣನ ಆದೇಶವನ್ನು ನಿರಾಕರಿಸಿದ.

'ದೇವರ ನಾಮವೇ ನನ್ನ ಮಣ್ಣಿನ ಹಣತೆ,

---

೧೨. P 63 The Sikh Religion by Macauliffe

ಅದರಲ್ಲಿ ಕಾಯುವ ಎಣ್ಣೆಯೇ ಶೋಕ
ನಾನು ಎಷ್ಟು ಬಾರಿ ಹಣತೆಯನ್ನು ಉರಿಸುವನೋ
ಅಷ್ಟು ಬಾರಿ ಎಣ್ಣೆ ಉರಿಯುತ್ತದೆ.
ಅದರಿಂದ ನೋಡು ನಾನು ಸಾವಿನ ಸಂಕಟದಿಂದ ಪಾರಾಗುವೆ.'

'ದೇವರ ನಾಮವೇ ಪುನಃ ಅನ್ನದ ಪಿಂಡವಾಗಿದೆ,
ಎಲೆಗಳ ದೊನ್ನೆ ಕರ್ಮಾದಿಗಳ ಕಾರ್ಯಗಳಾಗಿವೆ,
ಮತ್ತು ಪವಿತ್ರ ನದಿಗಳಾಗಿವೆ ತರ್ಪಣಗಳು.'

'ಮನುಷ್ಯರು ದೇವರಿಗೆ ನೀಡುವ ದಾನಗಳನ್ನು
ಬ್ರಾಹ್ಮಣ ತಿನ್ನುತ್ತಾನೆ, ಅದರ ಬದಲು
ತನ್ನ ಆತ್ಮಕ್ಕೆ ಶಾಂತಿಯನ್ನು ಇಹಪರದಲ್ಲಿ
ನೀಡೆಂದು ಕೋರಬೇಕು, ಯಾಕೆಂದರೆ ದೇವರ
ಪ್ರೀತಿಯೊಂದೇ ನಿಜವಾದ ಪ್ರೀತಿ.'

ನಾನಕ್ ತನ್ನ ಸಂಚಾರವನ್ನು ಮುಂದುವರೆಸಿದ. ದಾರಿಯ ಮಧ್ಯದಲ್ಲಿ ಒಂದು ಹಳ್ಳಿಯಲ್ಲಿ ತಂಗಿದಾಗ, ಒಬ್ಬ ಭಕ್ತ ಅವನನ್ನು ಕಂಡು ಸತ್ಕರಿಸಿದ. ಇನ್ನೊಬ್ಬ ಭಕ್ತ ನಾನಕ್‌ನನ್ನು ಅನುಸರಿಸದೆ, ಕೆಟ್ಟದಾರಿ ಹಿಡಿದ. ಒಮ್ಮೆ ಆತ ತನ್ನ ಪ್ರೇಯಸಿಯ ಮನೆಗೆ ಹೋಗುವಾಗ, ದಾರಿಯಲ್ಲಿ ಒಂದು ಕುಡಿಕೆ ಸಿಕ್ಕಿತು. ಕುಡಿಕೆಯ ಬಾಯಿ ತೆರೆದು ನೋಡಿದಾಗ, ಅದರ ತುಂಬಾ ಇದ್ದಲುಗಳಿದ್ದವು. ಆದರೆ ಇದ್ದಲನ್ನು ಕೆಳಗೆ ಚೆಲ್ಲುವಾಗ ಅವನಿಗೆ ಒಂದು ಚಿನ್ನದ ಮೊಹರು ದೊರಕಿತು. ಅದನ್ನು ಕಂಡು ಆನಂದದಿಂದ ಆತ ಕುಣಿದಾಡಿದ. ನಾನಕ್‌ನ ಇನ್ನೊಬ್ಬ ನಿಷ್ಠಾವಂತ ಭಕ್ತ ಗುರುವನ್ನು ಸತ್ಕರಿಸಿ, ಅವರಿಗೆ ಅವನ ಸೇವೆಯನ್ನು ಮಾಡಿ ಉಪದೇಶಗಳನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದರೂ, ಅವನಿಗೆ ಅದೇ ಸಮಯದಲ್ಲಿ ಒಂದು ವಿಷದ ಮುಳ್ಳು ಅವನ ಕಾಲಿಗೆ ಚುಚ್ಚಿ ನೋವು ಅನುಭವಿಸಿದ. ಆಗ ಅವನಿಗೆ ತನ್ನ ಸ್ಥಿತಿ ಮತ್ತು ಚಿನ್ನದ ಮೊಹರು ದೊರೆತ ಇನ್ನೊಬ್ಬ ಭಕ್ತನ ಸ್ಥಿತಿ ಕಂಡು ಆಶ್ಚರ್ಯಗೊಂಡ. ಗುರು ನಾನಕ್‌ನನ್ನು ಕೇಳಿದ : 'ತಮ್ಮ ದಾರಿಯಲ್ಲಿ ಸಾಗಿದ ನನಗೆ ವಿಷದ ಮುಳ್ಳು ಚುಚ್ಚಿದರೆ, ಈ ಕೆಟ್ಟದಾರಿ ಹಿಡಿದ ಭಕ್ತನಿಗೆ ಚಿನ್ನದ ಮೊಹರು ದೊರೆಯಿತಲ್ಲ !'

ಗುರು ನಾನಕ್ ಶಿಷ್ಯನ ಪ್ರಶ್ನೆಗೆ ನಕ್ಕು ಉತ್ತರಿಸಿದ :

'ದೇವರ ದಾರಿಯಲ್ಲಿ ಸಾಗಿ ತನ್ನ ಹೃದಯವನ್ನು ಸಂತೃಪ್ತಿ ಮತ್ತು ಆನಂದದಿಂದ ಇರಿಸಿಕೊಂಡಿರುವದನ್ನು ಕೇಳಿ ಅರಿತುಕೋ. ಇನ್ನೊಬ್ಬ ಭಕ್ತನನ್ನು ಆತ ತನ್ನ ಹೃದಯದಲ್ಲಿ ಶಾಂತಿ ಇಟ್ಟುಕೊಂಡಿರುವನೇ ಅಥವಾ ದುರಾಸೆ ಮತ್ತು ಅತಿ ಭೋಗಾಸಕ್ತಿ ಇರಿಸಿಕೊಂಡಿರುವನೇ ಎಂಬುದನ್ನು ಕೇಳು. ಸುಖ ಸಂಪತ್ತುಗಳು ಒಬ್ಬ ವ್ಯಕ್ತಿಗೆ ಸಂತೃಪ್ತಿಯ ಜೀವನ ತಂದುಕೊಡುವುದಿಲ್ಲ. ಆದರೆ ಅವನ ಹೃದಯಕ್ಕೆ ಸ್ಥಿರತೆ ಮತ್ತು ಸಮತೂಕಸ್ಥಿತಿಗಳೇ ಸುಖ ನೀಡುವ ವಸ್ತುಗಳು. ನಿನ್ನ ಸ್ನೇಹಿತಭಕ್ತ ತನಗೆ

ದೊರೆತ ಸಂತೋಷವನ್ನು ಕಳೆದುಕೊಂಡ ಕೂಡಲೇ ಅವನು ದುಃಖಿಪೀಡಿತನಾಗುತ್ತಾನೆ. ಆದರೆ ನೀನಾದರೋ, ನಿನಗೆ ದೊರೆತಿರುವ ಐಶ್ವರ್ಯ (ಹೃದಯದಲ್ಲಿರುವ ಶಾಂತಿ ಸಮಾಧಾನ) ಕಳೆದುಕೊಳ್ಳುವುದಿಲ್ಲ, ಅದು ಸುಟ್ಟು ಭಸ್ಮವಾಗದೆ, ನೀರಿನಲ್ಲಿ ಮುಳುಗುವುದೂ ಇಲ್ಲ ಮತ್ತು ಅದು ನಿನ್ನ ಬಳಿ ಇರುತ್ತದೆ. ಯಾರು ತಾತ್ಕಾಲಿಕ ಸುಖಕ್ಕಾಗಿ ಹಾತೊರೆಯುತ್ತಾರೋ, ಅವರು ಶಾಶ್ವತ ಸುಖವನ್ನು ಪಡೆಯಲಾರರು.'

ನಾನಕ್ ತನ್ನ ಪ್ರಯಾಣವನ್ನು ಮುಂದುವರೆಸಿ ಒಂದು ಹಳ್ಳಿಯನ್ನು ತಲುಪಿದ. ಆ ಹಳ್ಳಿಯ ಜನರು ಅವನಿಗೆ ಆದರಪೂರ್ವಕವಾಗಿ ಸತ್ಕರಿಸಿದರು. ನಾನಕ ಅವರನ್ನು ಹೃತ್ಪೂರ್ವಕವಾಗಿ ಹರಿಸಿದ: 'ನೀವೆಲ್ಲರೂ ಚದುರಿಹೋಗಿರಿ'. ಆ ಹಳ್ಳಿಯಿಂದ ತೆರಳಿದ ನಾನಕ್, ಮುಂದಿನ ಹಳ್ಳಿ ತಲುಪಿದಾಗ, ಅಲ್ಲಿ ಅವನಿಗೆ ಸ್ವಾಗತ ದೊರೆಯಲಿಲ್ಲ. ನಾನಕ್ ಅವರಿಗೆ ಶಾಪ ನೀಡಿದ. 'ನೀವೆಲ್ಲಿದ್ದೀರೋ ಅಲ್ಲೇ ಇರುವಂತಾಗಿರಿ' ನಾನಕ್‌ನ ಶಿಷ್ಯ ಮರ್ದಾನನಿಗೆ ಗುರುವಿನ ನುಡಿಗಳು ಸೋಜಿಗ ತಂದಿತು. 'ಗುರುಗಳೇ ! ಯಾರು ನಿಮ್ಮನ್ನು ಪ್ರೀತಿ ವಿಶ್ವಾಸಗಳಿಂದ ಸತ್ಕರಿಸಿದರೋ ಅವರಿಗೆ ಚದುರುವಂತೆ ಹರಿಸಿದಿರಿ. ಆದರೆ ನಿಮಗೆ ಯಾರು ಕೆಟ್ಟದಾಗಿ ನಡೆದುಕೊಂಡರೋ ಅವರಿಗೆ ತಮ್ಮ ಮನೆ ಮಠ ತೊರೆಯದೇ ಇದ್ದಲ್ಲೇ ಇರುವಂತೆ ಹರಿಸಿದಿರಿ. ಇದೆಂತಹ ನ್ಯಾಯ?' ನಾನಕ್ ನಕ್ಕು ಉತ್ತರಿಸಿದ : 'ಓ ಮರ್ದಾನಾ ! ಯಾರು ಇತರರನ್ನು ಸತ್ಕರಿಸಿ ಪುಣ್ಯಕಟ್ಟಿಕೊಳ್ಳುವರೋ ಅವರು ಎಲ್ಲಾ ಕಡೆ ಚದುರಿ ತಮ್ಮ ಉದಾತ್ತ ನಡೆನುಡಿಗಳ ಉದಾಹರಣೆ ನೀಡಿ ಇತರರು ಅವರಂತೆ ಪಾಠ ಕಲಿಯುವರು. ಆದರೆ ಈ ಹಳ್ಳಿಯ ಜನರು ತಮ್ಮ ಅನಾಗರೀಕ ನಡೆನುಡಿಗಳಿಂದ ನರಳುತ್ತಾ ಇದ್ದಲ್ಲೇ ಇದ್ದರೆ, ಇತರರಿಗೆ ಇವರ ನಡೆತೆಗಳ ಉದಾಹರಣೆ ತಾಕದೆ ಅವರು ಕ್ಷೇಮದಿಂದಿರಬಹುದಲ್ಲವೇ?'

ನಾನಕ್, ಮರ್ದಾನನೊಂದಿಗೆ ಪೂರ್ವ ಭಾರತದ ಬಂಗಾಳ ಪ್ರಾಂತ್ಯಕ್ಕೆ ಬಂದು ಅಲ್ಲಿಂದ ನೆರೆಯ ಅಸ್ಸಾಮ್ ಪ್ರಾಂತ್ಯಕ್ಕೆ ಬಂದು ಸೇರಿದ. ಇತಿಹಾಸಕಾರರು, ನಾನಕ್ ಮತ್ತು ಮರ್ದಾನಾ ಅಲ್ಲಿನ ಪ್ರಸಿದ್ಧ ಸೌಂದರ್ಯರಾಣಿ ನೂರ್ ಶಾಳ ಸ್ನೇಹಪಾಶಕ್ಕೆ ಸಿಕ್ಕಿಹಾಕಿಕೊಂಡ ಪ್ರಸಂಗವನ್ನು ನೀಡಿದ್ದಾರೆ. ಆದರೆ ಈ ಸುಂದರಿ ನೂರ್ ಶಾಳ ಕುಲವೃತ್ತಾಂತ ಅವಳ ಚರಿತ್ರೆ ಇತ್ಯಾದಿಗಳನ್ನು ನೀಡದಿರುವುದು ವಿಸ್ಮಯ ತರುವಂತಾಗಿದೆ. ಅದು ಹೇಗಿದ್ದರೂ, ಮರ್ದಾನಾ ಮಾತ್ರ ಈ ನೂರ್ ಶಾಳ ಸೌಂದರ್ಯಪಾಶಕ್ಕೆ ಸಿಕ್ಕಿಹಾಕಿಕೊಂಡು, ಕಣ್ಮರೆಯಾದ. ಗುರು ನಾನಕ್ ಮರ್ದಾನಾನನ್ನು ಹುಡುಕಿಕೊಂಡು ಹೊರಟು, ನೂರ್ ಶಾಳ ಮನೆಗೆ ತಲುಪಿದಾಗ, ಅವನನ್ನು ತನ್ನ ಪ್ರೇಮಪಾಶದಲ್ಲಿ ಸಿಕ್ಕಿಸಿಕೊಳ್ಳಲು ಪ್ರಯತ್ನಿಸಿದಳು ನೂರ್ ಶಾ. ಆದರೆ ನಾನಕ್ ಮಾತ್ರ ಅವಳ ಬಲೆಗೆ ಬೀಳದೆ ತನ್ನ ಉದಾತ್ತ ಗಾನಾಮೃತಗಳಿಂದ ಅವಳಿಗೆ ಆಧ್ಯಾತ್ಮದ ಉಪದೇಶ ನೀಡಿ ಅವಳ ಮನಸ್ಸನ್ನು ದೇವರ ಕಡೆಗೆ ತಿರುಗಿಸಿದ. ೧೩

---

೧೩. P 73 The Sikh Religion by Macauliffe

ನಾನಕ್, ಅಸ್ಸಾಮ್ ಪ್ರಾಂತ್ಯದಿಂದ ಹಿಂದಿರುಗಿ, ಒರಿಸ್ಸಾದ ಪ್ರಸಿದ್ಧ ಯಾತ್ರಾಸ್ಥಳವಾದ ಜಗನ್ನಾಥನ ಪುರಿಗೆ ಬಂದ. ಗುಡಿಯ ದೇವರಾದ ಜಗನ್ನಾಥನಿಗೆ, ಅಲ್ಲಿನ ಪೂಜಾರಿಗಳು ಚಿನ್ನದ ಆರತಿತಟ್ಟೆಯಲ್ಲಿ ಕರ್ಪೂರದ ಆರತಿಯನ್ನು ಮಾಡುವ ದೃಶ್ಯ ಕಂಡ ನಾನಕ್ ಅವರನ್ನು ಪ್ರಶ್ನಿಸಿದ. 'ಇದನ್ನು ಯಾಕೆ ಮಾಡುವಿರಿ?' 'ದೇವರಿಗೆ ನಮ್ಮ ಗೌರವಪೂರ್ಣ ವಂದನೆ ಅರ್ಪಿಸುವ ಈ ವಿಧಾನವನ್ನು ಮಾಡುತ್ತಿದ್ದೇವೆ' ಎಂದು ಅವರು ಉತ್ತರಿಸಿ, ನಾನಕ್‌ನನ್ನೂ ಅದರಲ್ಲಿ ಭಾಗವಹಿಸಲು ಕೇಳಿಕೊಂಡರು. ನಾನಕ್ ಅವರ ಪ್ರಾರ್ಥನೆಗೆ ಉತ್ತರವಾಗಿ ಈ ಹಾಡನ್ನು ಹೇಳಿ ತೃಪ್ತನಾಗುತ್ತಾನೆ.

'ಆಕಾಶವೇ ಚಿನ್ನದ ಆರತಿತಟ್ಟೆ,
ಸೂರ್ಯ ಚಂದ್ರರೇ ಹಣತೆ ಬುಟ್ಟಿ,
ಅದರೊಳಗೆ ಹೊಳೆಯುವುದೇ ಆಭರಣಗಳಂತೆ
ಕಾಣುವ ನಕ್ಷತ್ರಗಳು
ಮಲೆ ಪರ್ವತದ ಶ್ರೀಗಂಧ ಸುತ್ತಲೂ
ಪಸರಿಸುವುದು ತನ್ನ ಪರಿಮಳವ
ಭೂಮಿಯ ಸಕಲ ಪುಷ್ಪಗಳ ಸುವಾಸನೆ
ಯನ್ನು ಹರಡುವುದು ಗಾಳಿ
ಈ ರೀತಿ ನಿನ್ನ ಪೂಜೆಗೈವುದು ಓ ಭಯನಾಶನೆ.
ಸಾವಿರ ಕಣ್ಣುಳ್ಳವನೇ, ಆದರೂ ನಿನಗೆ ಇದೆಯೋ ಕಣ್ಣುಗಳು?
ಸಾವಿರ ಆಕಾರವುಳ್ಳವನೇ, ಆದರೂ ನಿನಗೆ ಆಕಾರವಿದೆಯೊ?
ಸಾವಿರ ಪಾದಗಳುಳ್ಳವನೇ, ಆದರೂ ನಿನಗೆ ಪಾದಗಳಿವೆಯೊ?
ಸಾವಿರ ವಾಸನೆ ಹಿಡಿಯುವ ಮೂಗುಗಳಿವೆ, ಆದರೂ ನಿನಗೆ ಮೂಗಿದೆಯೊ?
ಓ ಅದ್ಭುತಗಳಲ್ಲಿ ಅದ್ಭುತ !
ಸರ್ವ ಹೃದಯಗಳನ್ನು ಬೆಳಗಿಸುವ ಬೆಳಕು,
ಮತ್ತು ಅದು ಗುರುವಿನ ಉಪದೇಶಗಳಿಂದ ಪ್ರತ್ಯಕ್ಷವಾಗುವುದು ಓ ಜನರೇ,
ಯಾವುದು ದೇವರನ್ನು, ಸುಪ್ರೀತಗೊಳಿಸುವುದೋ
ಅದೇ ಆರಾಧನೆ !
ಕೃಷ್ಣಜೇನುಹುಳದ ತರಹ, ನನ್ನ ಮನಸ್ಸು ದೇವರ
ತಾವರೆಹೂವಿನ ಪಾದಗಳ ಜೇನುತುಪ್ಪಕ್ಕಾಗಿ ಹಾತೊರೆಯುತ್ತದೆ,
ಮತ್ತು ಕರೆದು ಹಾಡುತ್ತದೆ;
'ಓ ದೇವ, ಕೋಗಿಲೆ ಎಂಬ ಈ ನಾನಕ್‌ನನ್ನು, ನಿನ್ನ
ಕರುಣಾಮೃತದ ವರ್ಷಧಾರೆಯಿಂದ,
ನಿನ್ನ ನಾಮದೊಳಗೆ ಮುಳಗಲಿ ಎಂದು ಹರಸು !'

ಇದೇ ಪುರಿ ಕ್ಷೇತ್ರದಲ್ಲಿ, ನಾನಕ್ ಮತ್ತೊಬ್ಬ ಬ್ರಾಹ್ಮಣನ ಭೇಟಿಯಾದ. (ಇತಿಹಾಸಕಾರರು ಪುರಿಕ್ಷೇತ್ರವನ್ನು ಮಾರ್ಚ್, ಏಪ್ರಿಲ್ ೧೫೦೮ರಲ್ಲಿ ನಾನಕ್ ಪ್ರವಾಸ ಮಾಡಿದನೆಂದು ದಾಖಲಿಸಿದ್ದಾರೆ.) ೧೪

ಈ ಬ್ರಾಹ್ಮಣನಾದರೋ, ತನ್ನ ಕಣ್ಣು ಮತ್ತು ಮೂಗಿಗೆ ಬಟ್ಟೆ ಕಟ್ಟಿಕೊಂಡು, ಪ್ರಾಪಂಚಿಕ ವಾಸನೆಗಳಿಂದ ದೂರವಿದ್ದು ಕೇವಲ ದೇವರ ಆರಾಧನೆ ಮಾಡಿ ಕಾಲ ಕಳೆಯುವ ಅಭ್ಯಾಸ ಮಾಡಿಕೊಂಡಿದ್ದ. ಈ ಉಪಾಯದಿಂದ ಅವನು ಮನಸ್ಸನ್ನು ಕೇಂದ್ರೀಕರಿಸುವ ಮತ್ತು ಇತರರ ಗುಟ್ಟುಗಳನ್ನು ಕಂಡುಹಿಡಿಯುವ ಸಾಮರ್ಥ್ಯ ಪಡೆದಿರುವುದಾಗಿ ಸಾರಿಕೊಂಡಿದ್ದ. ನಾನಕ್ ಅವನನ್ನು ಪರೀಕ್ಷಿಸುವ ಸಲುವಾಗಿ ಕಣ್ಣು ಮುಚ್ಚಿಕೊಂಡಿದ್ದ ಆತನ ಮುಂದೆ ಇರಿಸಿಕೊಂಡಿದ್ದ ನೀರಿನ ಹೂಜಿಯನ್ನು ಮೆಲ್ಲನೆ ತೆಗೆದು ತನ್ನ ಹಿಂದೆ ಬಚ್ಚಿಟ್ಟು ಆತನಿಗೆ ಹೂಜಿ ಎಲ್ಲಿಟ್ಟಿರುವೆ ಎಂದು ಪ್ರಶ್ನಿಸಿದ. ಆ ಬ್ರಾಹ್ಮಣ ನಾನಾ ಊಹಾಪೋಹದ ಹೇಳಿಕೆ ನೀಡಿ ತಡಕಾಡಿದ. ಅಂತಿಮವಾಗಿ ಸೋಲನ್ನಪ್ಪಿದ. ಆಗ ನಾನಕ್ ಒಂದು ಹಾಡಿನ ಮುಖಾಂತರ ಅವನಿಗೆ ಉಪದೇಶ ನೀಡಿದ.

ಕಾಲದ ಮುಖ್ಯ ಪ್ರಭಾವವನ್ನು ಅರಿತಿಲ್ಲ ಜನ,
ಯೋಗದ ಸತ್ಯಾಂಶ ಅರಿತಿಲ್ಲ ಅವರು,
ಅಥವಾ ಸತ್ಯದ ಪಥ ಅರಿವಿಲ್ಲ.

ಪವಿತ್ರ ಕ್ಷೇತ್ರಗಳನ್ನು ಅಶುದ್ಧದಿಂದ ಕೆಡಿಸಲಾಗಿವೆ;
ಇದೋ ! ವಿಶ್ವವನ್ನೇ ಈ ರೀತಿಯಲ್ಲಿ ಮುಳುಗಿಸಲಾಗಿದೆ.
ಕಲಿಯುಗದಲ್ಲಿ, ದೇವರ ಪ್ರೀತಿಯಿಂದಲೇ ಮೋಕ್ಷ ದೊರೆಯುವುದು.
ತಮ್ಮ ಕಣ್ಣುಗಳನ್ನು ಮೂಗನ್ನು ಮುಚ್ಚಿಕೊಂಡು
ವ್ಯರ್ಥವಾಗಿ ಮೂರು ಲೋಕಗಳನ್ನು ನೋಡುವುದಾಗಿ ಹೇಳುತ್ತಾರೆ,
ಆದರೆ, ತಮ್ಮ ಬೆನ್ನ ಹಿಂದೆ ಇರುವುದನ್ನು ನೋಡಲಾರರು
ಅವರು
ಓ ಯಾವ ಪವಾಡವಿದು ? ೧೫

ಪುರಿ ನಗರದಿಂದ ನಾನಕ್ ಪಂಜಾಬ್ ಪ್ರಾಂತ್ಯಕ್ಕೆ ಹಿಂದಿರುಗಿದ. ಪಾಕ್ ಪಾಟ್ಟಾನ್ ಎಂಬ ಹೆಸರಾಂತ ನಗರದಲ್ಲಿರುವ ೧೩ನೆಯ ಶತಮಾನದ ಸೂಫಿ ಸಂತ ಶೇಖ್ ಫರೀದುದ್ದೀನ್ ಗಂಜ್–ಇ–ಶಾಕಾರ್‌ನ ಪವಿತ್ರ ಸಮಾಧಿಗೆ ತೆರಳಿ ಅಲ್ಲಿನ ಆಡಳಿತಗಾರ ಶೇಖ್ ಇಬ್ರಾಹಿಮ್‌ನನ್ನು(ಬ್ರಹ್ಮ ಎಂದು ಕರೆದಿದ್ದಾನೆ ಮೆಕಾಫ್) ಭೇಟಿ ಮಾಡಿದ.

---

೧೪. P 91 The History of the Sikh people by G.Singh

೧೫.. P 92 The History of Sikh People by Gopal Singh

ನಾನಕ್‌ನ ಲೌಕಿಕ ಪೋಷಾಕು ನೋಡಿದ ಶೇಖ್‌ನಿಗೆ ಆಶ್ಚರ್ಯವಾಯಿತು. ಗುರು, ಸಂತ ಎಂದು ತಿರುಗಾಡುತ್ತಿದ್ದ ನಾನಕ್ ಗೃಹಸ್ಥರು ಉಡುವ ಉಡುಪನ್ನು ಧರಿಸಿದ್ದನ್ನು ಕಂಡು, ನಾನಕ್‌ನಿಗೆ ಹೇಳಿದ : 'ಪ್ರಪಂಚವನ್ನು ಅಥವಾ ದೇವರನ್ನು ಆಸೆ ಪಡಬೇಕು. ಎರಡು ನಾವೆಗಳಲ್ಲಿ ತಮ್ಮ ಪಾದಗಳನ್ನು ಇರಿಸಿದಾತ ಮುಳುಗುವುದು ಖಂಡಿತ.'

ನಾನಕ್, ಶೇಖ್‌ನ ಮಾತುಗಳಿಗೆ ಉತ್ತರಿಸಿದ : 'ಎರಡನ್ನೂ ಏಕೆ ಉಪಯೋಗಿಸಬಾರದು? ಒಂದರಲ್ಲಿ ತಮ್ಮ ವಸ್ತುವನ್ನು (ದೇಹ) ಇರಿಸಿ, ಇನ್ನೊಂದರಲ್ಲಿ ತಮ್ಮ ಆತ್ಮವನ್ನು ಇರಿಸಬಹುದು. ಅಂತಹವರಿಗೆ, ಯಾವ ಆಕಸ್ಮಿಕ ಮುಳುಗುವಿಕೆ ಇಲ್ಲ, ಯಾವ ನಷ್ಟವಿಲ್ಲ; ನಾವೆಯನ್ನಾಗಲೀ ಅಥವಾ ನೀರನ್ನಾಗಲೀ ಕಾಣುವುದಿಲ್ಲ. ಅವರು ದೇವರು ಸರ್ವವ್ಯಾಪಿಯಾದ ಸತ್ಯವಸ್ತುವನ್ನು ಏಕಕಾಲದಲ್ಲಿ ಬಯಸುತ್ತಾರೆ.'

ಶೇಖ್‌ನೊಂದಿಗೆ ಆಧ್ಯಾತ್ಮಿಕ ವಿಷಯದಲ್ಲಿ ಚರ್ಚಿಸಿ, ಅವನ ಮನಸ್ಸನ್ನು ಗೆದ್ದು ಸಂಭ್ರಮಿಸಿದ.

ದೇವರನ್ನು ಒಲಿಸಿಕೊಳ್ಳಲು ಉಪವಾಸವಿದ್ದು ಸತತವಾಗಿ ಧ್ಯಾನ ಮಾಡುವ ಕಾರ್ಯವನ್ನು ನಾನಕ್ ಸಹಿಸಲಿಲ್ಲ. ಈ ದಿಸೆಯಲ್ಲಿ ಶೇಖ್ ಇಬ್ರಾಹಿಮ್ ಹೊಟ್ಟೆ ಹಸಿದರೂ, ಅದನ್ನು ತೋರ್ಪಡಿಸಿಕೊಳ್ಳದೆ ಉಪವಾಸವಿದ್ದು, ದೇವರ ಧ್ಯಾನ ಮಾಡುವುದು ಕಪಟತನ ಎಂದು ಜರಿದ. ನಾನಕ್, 'ಒಬ್ಬ ವ್ಯಕ್ತಿ ತನ್ನ ಜೀವನಕ್ಕೆ ಬೇಕಾಗುವ ಆಹಾರ ವಸ್ತುಗಳನ್ನು ತ್ಯಜಿಸುವುದು ಪಾಪಕರ' ಎಂದ. 'ಸುಖ ಸಂತೋಷಕ್ಕಾಗಿ ಹಾತೊರೆದು ಹಂಬಲಿಸಬಾರದು. ಆದರೆ ದೇವರಿಂದ ಏನೇ ಸುಖ ಸಂಪತ್ತುಗಳು ಬಂದಾಗ ಅವನ್ನು ಕೃತಜ್ಞತೆಯಿಂದ ಸ್ವೀಕರಿಸಬೇಕು. ಉಪವಾಸದಿಂದ ಆಧ್ಯಾತ್ಮಿಕ ಸುಖ ದೊರೆಯುವುದಿಲ್ಲ. ಆಧ್ಯಾತ್ಮಿಕ ಪಥದಲ್ಲಿ ಸಾಗಬೇಕಾದರೆ, ಉಪವಾಸ ಮತ್ತಿತರ ಐಹಿಕ ಸುಖಗಳ ತ್ಯಾಗಗಳಿಂದಲ್ಲ, ಸ್ವಾರ್ಥತ್ಯಾಗ, ಸಂತೃಪ್ತಿ, ಕರುಣೆ ಮತ್ತು ದೈನ್ಯತೆಗಳಿಂದ' ಎಂದು ನಾನಕ್ ಸಾರಿದ. ೧೬

ನಾನಕ್ ತನ್ನ ಸಂಗಡಿಗ ಮರ್ದಾನನೊಂದಿಗೆ ಸಂಚಾರ ಮುಂದುವರೆಸಿದ. ಅವರು ಒಂದು ಮರುಭೂಮಿಯ ಅಂಚಿಗೆ ಸೇರಿದಾಗ, ತಿನ್ನಲು ಆಹಾರ ದೊರಕದೆ ಸಂಕಟಪಟ್ಟರು. ಹಸಿವಿನಿಂದ ಕಂಗಾಲಾದ ಮರ್ದಾನ ನಾನಕ್‌ನನ್ನು ಆಹಾರಕ್ಕಾಗಿ ಬೇಡಿದ. ಆಗ ನಾನಕ್ ಸನಿಹದ ಕಾಡುಗಿಡಗಳಲ್ಲಿ ಕಾಣಸಿಗುವ ಹಣ್ಣುಗಳನ್ನು ಕಿತ್ತು ತಿನ್ನಲು ಸಲಹೆ ನೀಡಿದ. ಆದರೆ ಆ ಹಣ್ಣುಗಳನ್ನು ತನ್ನ ಹೊಟ್ಟೆ ತುಂಬಿಸಿಕೊಳ್ಳುವಷ್ಟು ಮಾತ್ರ ತಿನ್ನಬೇಕಲ್ಲದೆ, ಅವನ್ನು ಮಿತಿಮೀರಿ ತಿನ್ನಬಾರದೆಂದು ಹೇಳಿದನು. ಗುರುವಿನ ಅಣತಿಯಂತೆ ಮರ್ದಾನಾ ಕಾಡುಗಿಡಗಳ ಹಣ್ಣುಗಳನ್ನು ಕಿತ್ತು ತಿಂದಿದ್ದಲ್ಲದೆ, ಮಿಕ್ಕಿದ್ದನ್ನು ಬುಟ್ಟಿ ಕಟ್ಟಿ ತಂದಿರಿಸಿಕೊಂಡನು. ಮಾರನೆಯ ಬೆಳಿಗ್ಗೆ, ಹೊಟ್ಟೆ ಹಸಿಯತೊಡಗಿದಾಗ,

---

೧೬ P 88 The Sikh Religion by Mecauliffe

ಹೊತ್ತು ತಂದ ಹಣ್ಣುಗಳನ್ನು ತಿಂದು ಮುಗಿಸಿದ. ಸ್ವಲ್ಪ ಸಮಯದನಂತರ ಮರ್ದಾನಾ ಹೊಟ್ಟೆನೋವಿನಿಂದ ಬಳಲಿ ಒದ್ದಾಡಿದ.

ಗುರು ನಾನಕ್ ಅವನ ಸ್ಥಿತಿಯನ್ನು ನೋಡಿ ಮರುಗಿದ. ಆಗ ನುಡಿದ ಅವನು ನುಡಿಮುತ್ತುಗಳು ಇಂದಿಗೂ ಪ್ರಸ್ತುತವಾಗಿವೆ :

'ಮರ್ದಾನಾ! ಮನುಷ್ಯ ನರಳುವುದೇ ಈ ಬಗೆಯಿಂದ. ಅವನು ತನಗೆ ಬೇಕಾಗುವುದನ್ನು ಈ ಕ್ಷಣಕ್ಕೆ ಕೋರುತ್ತಾನಲ್ಲದೆ, ನಾಳೆ ಮತ್ತು ಮರು ದಿನಗಳಿಗಾಗಿ ಕೋರುತ್ತಾನೆ. ದೇವರನ್ನು ನಂಬದೆ, ತನ್ನನ್ನೇ ನಂಬಿ ಕೋರಿ ಕೋರಿ ನರಳುತ್ತಾನೆ. ಹೀಗಾಗಿ ತಾನು ಯಾವ ಆಹಾರವನ್ನು ಕೂಡಿಡುತ್ತಾನೆಯೋ ಅದು ಕದ್ದಿಲ್ಲದಿದ್ದರೂ ಅದು ಇನ್ನೊಬ್ಬರ ಈರ್ಷೆಗೆ ತುತ್ತಾಗದಿದ್ದರೂ, ಅದು ಹಳಸಿ ತನ್ನದಲ್ಲದಂತಾಗುತ್ತದೆ. ಆದ್ದರಿಂದ ಯಾರೇ ಆಗಲಿ, ಮಿಕ್ಕಿದ್ದನ್ನು ತಿನ್ನುವವರು ನರಳುತ್ತಾರೆ."೧೬೮

ಮರ್ದಾನಾ ಮಾತ್ರ ಗುರುವಿನೊಂದಿಗೆ ಸಂಚರಿಸಿ, ಹಸಿವಿನಿಂದ ಸಂಕಟಪಡುವ ಪರಿಸ್ಥಿತಿಗೆ ಹೊಂದಿಕೊಳ್ಳುವ ಸ್ಥಿತಿಯಲ್ಲಿರದೆ, ಗುರುವಿನಿಂದ ವಿದಾಯ ಪಡೆದು ತನ್ನೂರಿಗೆ ಹಿಂದಿರುಗಿದ. ಮರ್ದಾನನಿಗೆ ತಾನು ತಂಗಿರುವ ಸ್ಥಳವನ್ನು ಯಾರಿಗೂ ಅರುಹಬಾರದೆಂದು ಆದೇಶ ನೀಡಿದ. ಅವನ ಆದೇಶ ಪಾಲಿಸಿದ ಮರ್ದಾನಾ ತಾಲ್‌ವಂಡೀಗೆ ಹಿಂದಿರುಗಿದ. ಅಲ್ಲಿ ವಾಸಿಸುತ್ತಿದ್ದ ನಾನಕ್‌ನ ತಾಯಿ ಮರ್ದಾನಾ ಊರಿಗೆ ಹಿಂದಿರುಗಿದ ಸಂಗತಿ ತಿಳಿದು ಅವನಲ್ಲಿಗೆ ಬಂದು ನಾನಕ್‌ನ ಬಗ್ಗೆ ವಿಚಾರಿಸಿದಳು. ಆದರೆ ಗುರುವಿನ ಆದೇಶವನ್ನು ಮರೆಯದ ಮರ್ದಾನಾ ನಾನಕ್ ತಂಗಿದ್ದ ಸ್ಥಳವನ್ನು ತಿಳಿಸದೆ ಮೌನ ಆಚರಿಸಿದ. ಮಗನನ್ನು ಕಾಣುವ ಆಸೆಯಿಂದ ತಾಯಿ ಮರ್ದಾನಾನ ಚಲನವಲನಗಳ ಮೇಲೆ ಗಮನ ಹರಿಸಿದಳು. ಕೆಲವು ದಿನಗಳ ಬಳಿಕ ಮರ್ದಾನಾ ನಗರದಿಂದ ಹೊರಬಿದ್ದಾಗ ತಾಯಿ ಅವನಿಗೆ ಅರಿಯದಂತೆ ಹಿಂಬಾಲಿಸಿದಳು. ಮರ್ದಾನಾ ಗುರು ನಾನಕ್ ತಂಗಿದ್ದ ಸ್ಥಳಕ್ಕೆ ಬಂದಾಗ, ಅವನನ್ನು ಗೌಪ್ಯವಾಗಿ ಹಿಂಬಾಲಿಸಿದ ನಾನಕ್‌ನ ತಾಯಿಗೆ ಮಗನ ದರ್ಶನವಾಗಿ ಅತ್ಯಂತ ಸಂತೋಷವಾಗಿ ಅವನನ್ನು ಹಿಡಿದು ಆನಂದಭಾಷ್ಪ ಸುರಿಸಿದಳು. ತಾಯಿಯ ದರ್ಶನದಿಂದ ಸಂತೋಷಗೊಂಡ ನಾನಕ್ ಕೂಡ ಕಣ್ಣೀರುಗರೆದ. ತಾಯಿ ತಂದ ಸಿಹಿ ತಿನುಸುಗಳನ್ನು ತಿನ್ನದೆ ಒಲ್ಲೆ ಎಂದ. ದೇವರನ್ನು ನಂಬಿದವ, ಆರಾಧಿಸುವವ, ಧ್ಯಾನಿಸುವವ, ಎಲ್ಲಾ ಬಗೆಯ ಸಿಹಿಯ ರುಚಿಯನ್ನು ಸೇವಿಸುವವನಾಗಿರುತ್ತೇನೆ ಎಂದು ಹೇಳಿದ.

ನಾನಕ್‌ನ ಇರುವಿಕೆಯನ್ನು ಅರಿತ ಅವನ ತಂದೆ ಕಾಲೂ, ಅವನ ಬಳಿ ಓಡಿಬಂದ. ಮಗನನ್ನು ಫಕೀರ್‌ನ ಪೋಶಾಕಿನಲ್ಲಿ ಕಂಡ ಅವನ ಮನಸ್ಸು ಸಂಕಟದಿಂದ ಪೇಚಾಡಿತು.

---

೧೬೮. P 94 The Sikh Religion by Mecauliffe

ಒಗೆಬಗೆಯ ರೀತಿಯಲ್ಲಿ ಅವನನ್ನು ತನ್ನೂರಿಗೆ ಹಿಂದಿರುಗಿ, ಎಲ್ಲರಂತೆ ಜೀವನ ಸಾಗಿಸುವಂತೆ ಬೇಡಿದ, ಕಾಡಿದ. ಆದರೆ ನಾನಕ್ ಮಾತ್ರ ಅಚಲನನಾಗಿ ಕುಳಿತಿದ್ದ. ತಂದೆ ತಾಯಿಯರ ಯಾವ ಆಜ್ಞೆ, ಉಪದೇಶ, ಬೇಡಿಕೆಗಳಿಗೆ ಸೊಪ್ಪು ಹಾಕದೆ, 'ದೇವರ ನಾಮವನ್ನು ಉಚ್ಚರಿಸುವುದೇ ನನ್ನ ಮನೆ, ದೇವರ ಕೃಪೆಯೇ ನನ್ನ ಕುಟುಂಬ ಮತ್ತು ನನ್ನ ದೇವನೇನು ಆದೇಶವೀಯುತ್ತಾನೆಯೋ ಅದನ್ನು ಪಾಲಿಸುತ್ತೇನೆ.' ಎಂದು ಸಾರಿದ.

ಹತಾಶರಾದ ತಂದೆತಾಯಿಯುವರು ದುಃಖಿತಪ್ತರಾಗಿ, ತಮ್ಮ ಊರಿಗೆ ಹಿಂದಿರುಗಿದಾಗ, ನಾನಕ್ ಆ ಸ್ಥಳದಿಂದ ಮರ್ದಾನನೊಂದಿಗೆ ನಿರ್ಗಮಿಸಿದ. ಪುನಃ ಪಾಕ್‌ಪಟನ್‌ಗೆ ಬಂದಾಗ ಶೇಖ್ ಇಬ್ರಾಹಿಮ್ ಅವನನ್ನು ಸಂಪರ್ಕಿಸಿದ. ಅವರ ಮಧ್ಯ ತಾತ್ವಿಕ ತರ್ಕ ಜರುಗಿತು. ಶೇಖ್ ಇಬ್ರಾಹಿಮ್ ಕೆಲವು ಪ್ರಶ್ನೆಗಳನ್ನು ಹಾಕಿದ. 'ಅದು ಯಾವ ಪದ, ಯಾವ ಸದ್ಗುಣವನ್ನು ಆಕರ್ಷಿಸಿ, ಪ್ರೇಮಿಯ ಹೃದಯವನ್ನು ಸೂರೆಗೊಳ್ಳುತ್ತದೆ?'

ನಾನಕ್ ಉತ್ತರಿಸುತ್ತಾನೆ :'ದೈನ್ಯತೆಯ ಆ ಪದಸ್ಮರಣೆಯೇ ಸದ್ಗುಣ, ಸಭ್ಯತೆಯೇ ದೇವರ ಹೃದಯವನ್ನು ಸೂರೆಗೊಳ್ಳುತ್ತದೆ.'

ಇಬ್ರಾಹಿಮ್ ಪ್ರಶ್ನಿಸಿದ : 'ಇತರರ ರಕ್ತ ಹೀರಿ ಜೀವಿಸುವ ಲೌಕಿಕ ಮನುಷ್ಯನನ್ನು ಹೇಗೆ ದೇವ ಸಹಿಸುತ್ತಾನೆ?'

ನಾನಕ ಶ್ಲೋಕದ ಮುಖಾಂತರ ಈ ರೀತಿ ಉತ್ತರಿಸಿದ.

'ಶ್ರೇಷ್ಠತೆಯ ಒರೆಯಲ್ಲಿ ಸತ್ಯದ 'ಕತ್ತಿ'ಯನ್ನು ಒಬ್ಬ ಇಟ್ಟರೆ, ಮತ್ತು ಅದರಿಂದ ಒಬ್ಬನ 'ಕತ್ತ'ನ್ನು ಕಡಿದರೆ, ಕೃಪಣತೆಯ 'ರಕ್ತ'ವನ್ನು ಹರಿಸಬಹುದು ಮತ್ತು ಅದರಿಂದ ದೇವರು ಧನ್ಯನಾಗುವನು.'

'ದೇವರನ್ನು ಒಲಿಸಲು, ಸೇರಲು ಮಧ್ಯವರ್ತಿಯ ಅವಶ್ಯಕತೆ ಇದೆಯೊ?'

ಇಬ್ರಾಹಿಮ್‌ನ ಪ್ರಶ್ನೆಗೆ ನಾನಕ್ ಉತ್ತರಿಸಿದ: 'ಶುದ್ಧಾತ್ಮವೇ ಮಧ್ಯವರ್ತಿ, ದೇವರೇ ಗುರು ಮತ್ತು ಯಾರು ತಮ್ಮ ಆತ್ಮವನ್ನು ದೇವರಿಗೆ ಸಮರ್ಪಿಸುವರೋ ಅವರು ದೇವರಂತಾಗುವರು' ೧೭

ಪಾಕ್‌ಪಟ್ಟನ್ ನಗರದಿಂದ ನಿರ್ಗಮಿಸಿದ ನಾನಕ್ ಗೊವಿಂದವಾಲ್ ನಗರಕ್ಕೆ ತಲುಪಿದ. ನಗರದ ಹೊರವಲಯದಲ್ಲಿ ವಾಸಿಸುತ್ತಿದ್ದ ಒಬ್ಬ ಕುಷ್ಠರೋಗಿಯ ಮನೆಯಲ್ಲಿ ತಂಗಿ ಅವನನ್ನು ಉಪಚರಿಸತೊಡಗಿದ. ಆಗ ಅ ರೋಗಿ ನಾನಕನಿಗೆ ಒಂದು ಪ್ರಶ್ನೆ ಹಾಕಿದ.

---

೧೭. P 97-98 The History fo Sikh people by G. Singh.

'ಓ ಗುರು, ಮನುಷ್ಯ ಹೇಗೆ ರೋಗವನ್ನು ಅಂಟಿಸಿಕೊಳ್ಳುತ್ತಾನೆ?'

'ದೇವರನ್ನು ಮರೆಯುವದರಿಂದ, ಯಾಕೆಂದರೆ ರೋಗ ದೇಹದಲ್ಲಿರುವುದಿಲ್ಲ. ಅದು ಮನಸ್ಸಿನಲ್ಲಿದೆ. ಮನುಷ್ಯ ತನ್ನ ದೇಹದ ರೋಗವನ್ನು ಗುಣಪಡಿಸಿಕೊಳ್ಳಬಲ್ಲ. ಅದರೆ ದೇವರೇ ಅವನ ಆತ್ಮದ ರೋಗವನ್ನು ಗುಣಪಡಿಸಬಲ್ಲ. ಯಾರ ಆತ್ಮ ಆರೋಗ್ಯವಾಗಿದೆಯೋ ಆತ ತನ್ನ ದೇಹದ ರೋಗವನ್ನು ಅಲಕ್ಷ್ಯ ಮಾಡುತ್ತಾನೆ. ಯಾರು ತನ್ನ ದೇಹದ ಮೇಲೆ ಭರವಸೆ ಇಟ್ಟಿರುತ್ತಾನೆಯೋ, ಆತ ತನ್ನ ಆತ್ಮವನ್ನು ನೋವಿಗೀಡುಮಾಡುತ್ತಾನೆ' ಎಂದು ಸಾರಿದ ನಾನಕ್.

ಪಂಜಾಬ್ ಪ್ರಾಂತ್ಯದ ಮಧ್ಯಭಾಗದಲ್ಲಿ ನಾನಕ್ ತನ್ನ ಸಂಚಾರವನ್ನು ಮುಂದುವರೆಸಿ, ಸಯ್ಯದ್‌ಪುರವೆಂಬ ನಗರಕ್ಕೆ ಬಂದು ತಲುಪಿದ. ಅಲ್ಲಿ ಅವನು ತನ್ನ ಶಿಷ್ಯ ಭಾಯಿ ಲಾಲೋಟಿಯನ್ನು ಭೇಟಿ ಮಾಡಿದ. ಆಗ ದೆಹಲಿಯನ್ನು ಆಳುತ್ತಿದ್ದ ಪಠಾನ್ ಸುಲ್ತಾನ್ ಇಬ್ರಾಹಿಮ್ ಲೋಧಿಯ ದಬ್ಬಾಳಿಕೆಯಿಂದ ಹೆಚ್ಚಾಗಿ ಜನರು ಆಪತ್ತಿನಲ್ಲಿದ್ದರು. ಸಾಮಾನ್ಯ ಜನರು ಹೆದರಿ ಕಂಗಾಲಾಗಿದ್ದರು. ಆ ದಿನಗಳಲ್ಲಿ ಇಬ್ರಾಹಿಮ್ ಲೋಧಿ ತನ್ನ ಕ್ರೂರ ಆಡಳಿತದಲ್ಲಿ, ಜನರನ್ನು ಹಿಂಸಿಸಿ, ಸುಲಿಗೆ ಮಾಡಿ ಅವರನ್ನು ವಿದ್ರೋಹದ ದಾರಿಯತ್ತ ಎಳೆಯುತ್ತಿದ್ದ.*

[* ಇಬ್ರಾಹಿಮ್ ಲೋಧಿ (೧೫೧೫–೧೯೨೫) ದೆಹಲಿಯ ಸುಲ್ತಾನನಾಗಿ ಆಳಿದ ಆಫ್ಘನ್ ಸಂಜಾತನಾಗಿದ್ದ. ತಂದೆ ಸಿಕಂದರ್ ಲೋದಿಯ ತರಹ ತನ್ನ ಬುಡಕಟ್ಟಿನವರನ್ನು ಆಧರಿಸಿ, ಬೆಂಬಲಿಸಲಿಲ್ಲ. ಅಪನಂಬಿಕೆ, ಅಮಾಯಕತ್ವಗಳಿಂದ ನರಳಿದ ಇಬ್ರಾಹಿಮ್ ಲೋಧಿ, ತನ್ನ ಸಮೀಪದ ಬಂಧುಗಳನ್ನು ಹಿಡಿದು, ಹಿಂಸಿಸಿ, ಸೆರೆಮನೆಯಲ್ಲಿರಿಸಿ ಕೊಲೆ ಮಾಡಲು ತನ್ನ ಸಮಯ, ಸಾಮರ್ಥ್ಯ, ಸಂಪತ್ತು ವಿನಿಯೋಗಿಸಿದ. ಅವನ ಉಪಟಳ ತಾಳಲಾರದೆ, ಅವನ ಬಂಧು ಪಂಜಾಬ್‌ನ ರಾಜ್ಯಪಾಲ ದೌಲತ್‌ಖಾನ್ ಲೋಧಿ ಕಾಬೂಲ್‌ನಲ್ಲಿ ನೆಲೆಯೂರಿದ್ದ ಮೊಘಲ್ ದೊರೆ ಬಾಬರ್‌ನಿಗೆ ಭಾರತದ ಮೇಲೆ ದಂಡೆತ್ತಿ ಬರುವಂತೆ ಆಹ್ವಾನ ನೀಡಿದ. ಅವನ ಆಹ್ವಾನ ಸ್ವೀಕರಿಸಿದ ಬಾಬರ್, ಇತಿಹಾಸ ಪ್ರಸಿದ್ಧ ಪಾಣಿಪತ್‌ನಲ್ಲಿ ಇಬ್ರಾಹಿಮ್ ಲೋಧಿಯನ್ನು ಸೋಲಿಸಿ, ದೆಹಲಿಯಲ್ಲಿ ಮೊಘಲ್ ವಂಶದ ಆಳ್ವಿಕೆಯನ್ನು ಸ್ಥಾಪಿಸಿದ. (೧೫೨೫)]

ಭಾಯಿ ಲಾಲೋ, ಪಠಾನ್ ಸುಲ್ತಾನ್‌ರ ಹಿಂಸಾತ್ಮಕ ದಬ್ಬಾಳ್ವಿಕೆಯ ಬಗ್ಗೆ ಗುರುನಾನಕನ ಬಳಿ ದೂರು ಇತ್ತಾಗ, ನಾನಕ್ ಬಾಬರ್‌ನ ಆಕ್ರಮಣದ ಭವಿಷ್ಯ ನುಡಿಯನ್ನು ತನ್ನ ಗಾನದ ಮುಖಾಂತರ ವ್ಯಕ್ತಪಡಿಸಿದ. ಆ ಗಾನಸುಧೆ ಇತಿಹಾಸ ಪ್ರಸಿದ್ಧವಾಗಿದೆ.

'ಓ ಲಾಲೋ, ನನಗೆ ಅರುಹಿದ ದೈವವಾಣಿಯನ್ನು ಹೇಳುವೆನು
ಪಾಪವನ್ನು ಹೊತ್ತ ಮದುವೆಯ ಮೆರವಣಿಗೆಯೊಂದಿಗೆ
ಬಾಬರ್ ಇಲ್ಲಿಗೆ ತ್ವರೆಯಿಂದ ಬರುತ್ತಿದ್ದಾನೆ ಮತ್ತು

ವಧುವಿನ ಹಸ್ತವನ್ನು (ನಮ್ಮ ತಾಯಿನಾಡು) ತನ್ನ
ಹಿರಿದ ಕತ್ತಿಯನ್ನು ತೋರಿಸಿ, ಕೇಳುವನು.
ಜನರು ಧರ್ಮವನ್ನು ತ್ಯಜಿಸಿರುವರು ಯಾಕೆ
ನಾಚಿಕೆಯ ಪ್ರಜ್ಞೆಯನ್ನು ಸಹ ತ್ಯಜಿಸಿರುವರು,
ಮತ್ತು ಅಸತ್ಯ ನಡೆದಾಡುತ್ತಿದೆ
ಬ್ರಾಹ್ಮಣರು ಮತ್ತು ಖಾಜಿಗಳಲ್ಲಿ, ಆದರೆ
ದೆವ್ವದ ಅವತಾರವೇ ಈ ವಿವಾಹವನ್ನು ನಡೆಸಿಕೊಡುವರು.
ಸ್ತ್ರೀಯರು, ಹಿಂದೂ ಅಥವಾ ಮುಸ್ಲಿಮ್, ತಮ್ಮ
ಆಕ್ರಂದನ ನಡೆವೆ
ಈ 'ವಿವಾಹ ಹಾಡು'ಗಳನ್ನು ಹಾಡುವರು.
ಪುರುಷರು ತಮ್ಮ ಕೊಲೆಗೆಡುಕರ ಹಾಡನ್ನು
ಹಾಡುವರು, ಮತ್ತು ತಮ್ಮ ಹಣೆಗಳಿಗೆ
ರಕ್ತದ ಕೇಸರಿ ಬೊಟ್ಟನ್ನು
ತೊಟ್ಟುಕೊಳ್ಳುವರು.
ರಕ್ತ ಮಾಂಸಗಳ ನಗರದಲ್ಲಿ ನಾನಕ್ ಗಾನದ ಮೂಲಕ ದೇವರ
ಸ್ತುತಿ ಮಾಡುವನು.
ಮತ್ತು ಯಾವ ದೇವನ ನ್ಯಾಯ ಸತ್ಯವಾಗಿದೆಯೋ, ಪ್ರತಿಯೊಬ್ಬನ
ಕಾರ್ಯವನ್ನು ನಿರ್ಧರಿಸುವನೋ
ಆ ದೇವ ಪ್ರತ್ಯೇಕವಾಗಿ ಕುಳಿತು ನಮ್ಮೆಲ್ಲರನ್ನೂ
ಅವಲೋಕಿಸುವನು.
ಆಗ ನೋಡಿ ನಮ್ಮ ದೇಹಗಳು ನುಚ್ಚು ನೂರಾಗುವುವು
ಮತ್ತು ಹಿಂದೂಸ್ಥಾನಕ್ಕೆ ನಾನು ಸಾರಿದ್ದು ಅರಿವಾಗುವುದು. (ಆದಿಗ್ರಂಥ)
೧೮

ನಾನಕ್‌ನ ಭವಿಷ್ಯವಾಣಿ ನಿಜವಾಗುತ್ತದೆ. ಕೆಲವೇ ದಿನಗಳ ಬಳಿಕ, ಮಂಗೋಲ್ ಸುಲ್ತಾನ್ ಬಾಬರ್ ಭಾರತದ ಮೇಲೆ ದಂಡೆತ್ತಿ ಬಂದ. ಪಂಜಾಬ್‌ನ್ನು ಆಕ್ರಮಿಸಿ, ಸಯ್ಯದ್‌ಪುರ ನಗರವನ್ನು ಸೂರೆ ಮಾಡಿ, ಜನರ ಹತ್ಯೆ ಮಾಡಿದ ಮತ್ತು ಬದುಕುಳಿದ ಕೆಲವರನ್ನು ಸೆರೆ ಹಿಡಿದ. ಕೆಲವು ಇತಿಹಾಸಕಾರರ ಪ್ರಕಾರ ಬಾಬರ್, ನಾನಕ್ ಮರ್ದಾನಾರನ್ನು ಸೆರೆ ಹಿಡಿದು, ಸೆರೆಮನೆಗೆ ತಳ್ಳಿದನು. ಬೀಸುವ ಕಲ್ಲಿನಲ್ಲಿ ಅಕ್ಕಿ ಗೋಧಿ ಕುಟ್ಟಿ ಪುಡಿಮಾಡುವ ಕೆಲಸ ನಾನಕ್‌ನಿಂದ ಮಾಡಿಸಿಕೊಳ್ಳಲಾಯಿತು. ನಾನಕ್‌ನಿಗೆ ಮಾತ್ರ ಆ ಕೆಲಸದಿಂದ ಸಂತೋಷವಾಗಿತ್ತು. ಯಾಕೆಂದರೆ ಕ್ರೂರ

೧೮. P 93 The History fo Sikh people by G. Singh.

ಆಫ್ಘನ್ ಪಠಾಣರ ದಬ್ಬಾಳಿಕೆಯ ಆಳ್ವಿಕೆ ಸಮಾಪ್ತಗೊಂಡು, ಮಂಗೋಲ್ ವಂಶದ ಬಾಬರ್‌ನ ಆಡಳಿತ ಪ್ರಾರಂಭಗೊಂಡು ದೇಶದಲ್ಲಿ ಶಾಂತಿ ರಕ್ಷಣೆ ಪ್ರಜೆಗಳಿಗೆ ದೊರೆಯುತ್ತದೆ ಎಂದು ನಾನಕ್ ತನ್ನ ಅಷ್ಟಪದಿಗಳ (ಆದಿಗ್ರಂಥ) ಮುಖಾಂತರ ಅದನ್ನು ವ್ಯಕ್ತಪಡಿಸಿದನೆಂದು ಇತಿಹಾಸಕಾರರ ಹೇಳಿಕೆ. ೧೯

ಈ ಸುದ್ದಿ ಬಾಬರ್‌ನ ಕಿವಿಗಳಿಗೆ ಮುಟ್ಟಿದಾಗ, ಅವನು ಬಾಬರ್‌ನ್ನು ಕರೆಸಿ, ಅವನು ಸೆರೆವಾಸದ ಸಂಕಷ್ಟದಲ್ಲಿ ಸಂತೋಷಪಡುವ ಕಾರಣವನ್ನು ವಿಚಾರಿಸಿದ. ಆಗ ನಾನಕ್ ತನ್ನ ಅಷ್ಟಪದಿಗಳ ಮುಖಾಂತರ ಆಳುವವರು ಪ್ರಜೆಗಳ ಮೇಲೆ ದಬ್ಬಾಳಿಕೆ ನಡೆಸಿದಾಗ, ದೇವರ ಕ್ರೋಧಕ್ಕೆ ಸಿಲುಕಿ ನಾಶವಾಗುವುದು ಸ್ವಾಭಾವಿಕ. ಈಗ ಪಠಾನ್‌ರ ದಬ್ಬಾಳಿಕೆಯನ್ನು ನಾಶಮಾಡಲು ಬಾಬರ್‌ನ್ನು ಕಳುಹಿಸಿದ್ದು, ಕ್ರಮೇಣ ಪ್ರಜೆಗಳ ಮೇಲಿನ ದಬ್ಬಾಳಿಕೆ, ಹಿಂಸೆ, ಅನಾಚಾರ ಬಾಬರ್‌ನೇನಾದರೂ ಕೈಗೊಂಡರೆ, ಅವನೂ ಕೂಡ ದೇವರ ಕ್ರೋಧಕ್ಕೆ ಗುರಿಯಾಗುವುದು ಖಂಡಿತ ಎಂದು ಹೇಳುತ್ತಾನೆ.

ನಾನಕ್ ಬಾಬರ್‌ನ್ನು ಸಂಧಿಸಿ ಸಂವಾದ ಜರುಗಿಸುವ ವೃತ್ತಾಂತ ಕೇವಲ ಅವನ ಈ ಎರಡು ಅಷ್ಟಪದಿಗಳ ಮುಖಾಂತರ ದೊರೆತಿದ್ದು, ಅದರ ವಿವರ ಇತರ ಇತಿಹಾಸಕಾರರ ಅಥವಾ ಗ್ರಂಥಗಳಿಂದ ದೊರೆತಿಲ್ಲದಿದ್ದರೂ ಸಿಖ್‌ರ ಇತಿಹಾಸದಲ್ಲಿ ಅದು ಪ್ರಾಮುಖ್ಯತೆ ಪಡೆದುಕೊಂಡಿದೆ. ೨೦

ಬಾಬರ್‌ನ ಆತ್ಮಕಥೆ 'ಬಾಬರ್ ನಾಮ'ದಲ್ಲಿ ಎಲ್ಲೂ ಗುರುನಾನಕ್‌ನ ವಿಷಯವನ್ನು ಪ್ರಸ್ತಾಪಿಸಿಲ್ಲದಿರುವುದನ್ನು ಕಾಣಬಹುದಾಗಿದೆ. ದೌಲತ್‌ಖಾನ್ ಲೋಧಿ ಗುರುನಾನಕ್‌ನೊಂದಿಗೆ ಇರಿಸಿದ್ದ ಸಂಬಂಧದ ಬಗ್ಗೆ ಕೂಡ ಯಾವ ವಿವರವೂ ಇಲ್ಲ. ಆದರೆ ಸಂಪ್ರದಾಯ ಮತ್ತು ನಂಬಿಕೆಗಳ ಪ್ರಕಾರ, ಗುರು ನಾನಕ್ ತನ್ನ ಪ್ರವಾಸದಲ್ಲಿ ಬಾಬರ್‌ನ್ನು ಭೇಟಿಮಾಡಿ ತನ್ನ ಸಿದ್ಧಾಂತವನ್ನು ನುಡಿದು, ಅವನ ಮನಸ್ಸನ್ನು ಆಫ್ಘನ್ನರ ವಿರುದ್ಧ ಕ್ರಮ ಜರುಗಿಸುವಂತೆ ಮಾಡಿದ ಎನ್ನಲಾಗಿದೆ.

ಕೆಲವು ಇತಿಹಾಸಕಾರರ ಪ್ರಕಾರ, ನಾನಕ್‌ನನ್ನು ಬಂಧಿಸಿದ್ದು ಬಾಬರ್‌ನಾಗಿಲ್ಲದೆ, ದಿಲ್ಲಿ ಸುಲ್ತಾನ್ ಇಬ್ರಾಹಿಮ್ ಲೋಧಿ ಎಂದು ನಂಬಲಾಗಿದೆ. ಅದು ಹೇಗಾದರೂ ಇದ್ದರೂ, ಬಾಬರ್ ಮಾತ್ರ ಪಂಜಾಬ್‌ನ್ನು ಆಕ್ರಮಿಸಿ, ಸಯ್ಯದ್‌ಪುರವನ್ನು ಕೊಳ್ಳೆ ಹೊಡೆದು ಅಲ್ಲಿನ ಪ್ರಜೆಗಳ ಹತ್ಯೆ ಮಾಡಿದ್ದು ಐತಿಹಾಸಿಕ ಸತ್ಯವಾಗಿದೆ. ಇದೇ ಸಮಯದಲ್ಲಿ ನಾನಕ್‌ನ ಒಂದು ಅತ್ಯಂತ ಕುತೂಹಲಕಾರಕ ಆದರೆ ಪ್ರಮುಖ ಉಪಕತೆಯನ್ನು ಉದಾಹರಿಸಿದ್ದಾರೆ ಇತಿಹಾಸಕಾರರು.

ಸಯ್ಯದ್‌ಪುರಕ್ಕೆ ಭೇಟಿ ನೀಡುವ ಸಂದರ್ಭದಲ್ಲಿ ನಾನಕ್ ಮತ್ತು ಮರ್ದಾನಾ

---

೧೯. P 102-103 The History fo Sikh people by G. Singh.

೨೦. P 461 (N) Babar nama

ಆ ನಗರವನ್ನು ಸಮೀಪಿಸುವಾಗ, ನಾಶಗೊಂಡ ನಗರದಲ್ಲಿ ಬದುಕುಳಿದ ನಾಗರೀಕರ ನರಳಾಟ, ಗೋಳಾಟ, ಆಕ್ರಂದನ ಶಬ್ದವನ್ನು ಆಲೈಸಿದ ಮರ್ದಾನಾ ಗುರು ನಾನಕ್‌ನನ್ನು ಯಾಕೆ ಕೆಲವೇ ದೋಷಿಗಳೊಂದಿಗೆ ಸಾವಿರಾರು ಅಮಾಯಕ ನಿರ್ದೋಷಿಗಳ ಹತ್ಯೆ ಮಾಡಲಾಗುತ್ತದೆ ಎಂದು ಕೇಳಿದ. ಆಗ ನಾನಕ್ ಮರ್ದಾನಾನಿಗೆ ಬಳಿಯಲ್ಲಿದ್ದ ಒಂದು ಅಶ್ವತ್ಥ ಮರದ ಬುಡದಲ್ಲಿ ವಿಶ್ರಮಿಸಿಕೊಳ್ಳಲು ಹೇಳಿದ. ನಾನಕ್‌ನ ಆದೇಶದಂತೆ, ಮರ್ದಾನಾ ಮರದ ಬುಡದಲ್ಲಿ ಮಲಗಿ ವಿಶ್ರಮಿಸಿದನು. ತೂಕಡಿಕೆ ಬಂದು ನಿದ್ರಿಸಿದ. ಮರದ ಮೇಲಿನಿಂದ ಒಂದು ಜೇನುಹನಿ ಅವನ ಪಾದದ ಮೇಲೆ ಬಿತ್ತು. ಅದರಿಂದ ಆಕರ್ಷಿತಗೊಂಡ ಹುಳ, ಇರುವೆಗಳ ತಂಡ ಬಂದವು. ಆಗ ಅವನಿಗೆ ಒಂದು ಇರುವೆ ಕಚ್ಚಿ ಎಚ್ಚರಿಸಿತು. ನಿದ್ರೆಯಿಂದ ಎಚ್ಚರಗೊಂಡ ಮರ್ದಾನಾ ತನ್ನ ಕೈಯಿಂದ ತನ್ನ ಪಾದಗಳಿಗೆ ಮುತ್ತಿದ್ದ ಇರುವೆಗಳನ್ನು ಹಿಸುಕಿ ಕೊಂದು ಹಾಕಿದ. ಅದನ್ನು ನೋಡಿದ ನಾನಕ್ ಹೇಳಿದ : 'ಈಗ ನಿನಗೆ ಅರಿವಾಗಿರಬೇಕಲ್ಲವೆ ಮರ್ದಾನಾ ಯಾಕೆ ನಿರ್ದೋಷಿಗಳು ದೋಷಿಗಳ ಜೊತೆಗೆ ನೋವನ್ನುಣ್ಣುವರೆಂದು.' ೨೧

ಒಂದು ಪುಟ್ಟ ಕೆಟ್ಟ ಇರುವೆ ಕಚ್ಚಿದ್ದಕ್ಕೆ ನೂರಾರು ನಿರ್ದೋಷಿ ಇರುವೆಗಳ ಸಂಹಾರ ಮಾಡಿದ್ದ ಉದಾಹರಣೆ ನೀಡಿ ನಾನಕ್ ಮನುಷ್ಯನ ವಿನಾಕಾರಣ ಮತ್ತೊಬ್ಬರ ಹತ್ಯೆ ಮಾಡುವ ದುಷ್ಟಬುದ್ಧಿಯ ವಿಚಾರವನ್ನು ವ್ಯಕ್ತಪಡಿಸಿದ್ದು ಅತ್ಯಂತ ಮಹತ್ವವುಳ್ಳದ್ದಾಗಿದೆ ಎಂದರು ಇತಿಹಾಸಕಾರರು..

ಆದರೆ, ಪಂಜಾಬ್‌ನ ರಾಜ್ಯಪಾಲ ದೌಲತ್‌ಖಾನ್ ಲೋಧಿಯ ಆಮಂತ್ರಣ ಸ್ವೀಕರಿಸಿ, ಭಾರತದ ಮೇಲೆ ದಂಡೆತ್ತಿ ಬಂದ ಬಾಬರ್, ಪಠಾಣ ಸುಲ್ತಾನರ ತರಹ ದಬ್ಬಾಳಿಕೆ, ಹಿಂಸೆ, ಕ್ರೂರತೆ ತೋರಿಸಿ, ಅಮಾಯಕ ಪ್ರಜೆಗಳ ಹತ್ಯೆ ಜರುಗಿಸಿದ. ೨೨

["The Patans also are an intractable race. they are Mohamatens, who formerly inhabited a country in the vicinity of the Ganges, toward Bengal. Before the invasion of India by the Moghals the Patans had rendered themselves formidable in several places. Their power was felt principally at —many of the neighbouring Rajas being their tributaries. Even the menials and carriers of water belonging to that nation are high spirited and war-like. 'If it be not so, may I never ascend the throne of Delhi,' is the usual Phraseology of a patan when wishing to enforce the truth of any assertion. They hold the Indians, —gentiles and

---

೨೧. P 118 The Sikh Religion by Macauliffe

Mongols, in the atmost contempt and recollecting the consider-ation in which they were formerly held in India, they mortally hate the Moghals by whom their fathers were dispossed of great principalities and driven to the mountains far from Delhi and Agra. In these mountains some Patans established themselves as petty sovereigns or Rajas; but without any great power.'

(P 206 Travels in the Mughal Empires by Bernier)

ಇಂದಿಗೂ ಪಠಾನರು ಇತರ ಯಾವುದೇ ಜನಾಂಗದವರನ್ನು, ಮುಸ್ಲಿಮರಾಗಲೀ ಅಥವಾ ಹಿಂದೂಗಳಾಗಲೀ, ದ್ವೇಷಿಸುವುದನ್ನು ಕಾಣಬಹುದು. ಆತ್ಮಾಹುತಿ ಹೋರಾಟಗಾರರು ಮುಸ್ಲಿಮ್ ಪಾಕಿಸ್ತಾನದಲ್ಲಿ, ಹಿಂಸಾಚಾರ, ಕೊಲೆ ಎಸಗುತ್ತಿರುವುದು ಇತರರು ಅವರ ಮೇಲಿನ ದ್ವೇಷಸಾಧನೆಯನ್ನು ತಮ್ಮನ್ನು ತಮ್ಮ ನಾಡಿನಿಂದ ಕಿತ್ತು ಓಡಿಸುತ್ತಿರುವರೆಂಬ ನಂಬಿಕೆ, ತಮ್ಮ ಸ್ವಾತಂತ್ರ್ಯ ಕಸಿದುಕೊಂಡು ತಮ್ಮನ್ನು ಆಳುತ್ತಿರುವ, ಹೋರಾಡುತ್ತಿರುವೆ ಮತ್ತು ಕ್ಷುಲ್ಲಕ ಕಾರಣಗಳಿಗೆ ಅವರಲ್ಲಿ ರಕ್ತ ಚೆಲ್ಲುವ ಸಂಸ್ಕೃತಿ ಕಾಣಬಹುದಾಗಿದೆ.]

ಅದನ್ನು ಕಂಡು ಮರುಗಿದ ನಾನಕ್, ತನ್ನ ಅಷ್ಟಪದಿಯ ಮೂಲಕ ಬಾಬರ್‌ನ ಆಕ್ರಮಣ, ಅದರಿಂದಾದ ಕಷ್ಟನಷ್ಟ, ಊರು, ಗುಡಿಗಳ ನಾಶ, ಹಿಂದೂ ಮುಸ್ಲಿಮ್‌ರ ಹತ್ಯೆ, ಎಲ್ಲದಕ್ಕೂ ದೇವರ ಇಚ್ಛೆಯೇ ಕಾರಣವೆಂದು ಹಲುಬಿ ತನ್ನ ಅಸಹಾಯಕತೆ, ತನ್ನವರ ಮತ್ತು ತನ್ನ ದೇಶದ ದುರ್ದೆಶೆಗಳಿಗೆ ವಿಧಿಯೇ (ಹಣೆಯ ಬರಹ) ಕಾರಣವೆಂದು ಹಾಡಿದ. (ಆದಿಗ್ರಂಥ)

ವಿವಿಧ ದಾಳೀಕಾರರಿಂದ ಉತ್ತರ ಭಾರತ, ಅದರಲ್ಲೂ ಭಾರತದ ಹೆಬ್ಬಾಗಿಲೆಂದು ಹೆಸರುವಾಸಿಯಾದ ಪಂಜಾಬ್ ಪ್ರಾಂತ್ಯ ಅನಾದಿಕಾಲದಿಂದಲೂ ದಾಳಿಗೆ ತುತ್ತಾಗಿ, ಊರು ನಾಶ, ಅಮಾಯಕ ಪ್ರಜೆಗಳ ಹತ್ಯೆ ಜರುಗಿ, ರಕ್ತಪಾತದಿಂದ ನೆಲ ಕೆಂಪಾಗಿ, ಐದು ನದಿಗಳಿಂದ ನಳನಳಿಸುವ ನಾಡಾದರೂ (ಪಂಜಾಬ್ – ಐದು ನದಿಗಳು ಹರಿಯುವ ನಾಡು – ಪಾಂಚ್+ಅಬ್ = ಐದು ನದಿ – 'ಅಬ್' ಎಂದರೆ ಅರಾಬಿಕ್ ಭಾಷೆಯಲ್ಲಿ ನದಿ, ಹೊಳೆ ಎಂಬ ಅರ್ಥ ಬರುತ್ತದೆ.) ಹಿಂಸಾಚಾರ, ಕ್ರೌರ್ಯಗಳಿಂದ ತಾಂಡವಾಡುವ ನೆಲವಾಗಿದೆ.

ನಾನಕ್ ತನ್ನ ನಾಡು ಪರಕೀಯರ ದಾಳಿಯಿಂದ ಸಿಲುಕಿ, ನಲುಗಿ, ನಾಶದತ್ತ ಸಾಗುವ ದೃಶ್ಯನೋಡಿ ಮನನೊಂದು ತನ್ನ ಅಷ್ಟಪದಿಗಳ ಮೂಲಕ ಹಾಡಿ ತನ್ನ ದುಃಖವನ್ನು ತೋಡಿಕೊಂಡಿದ್ದು ಅತಿಶಯವೇನೂ ಆಗಿರಲಿಲ್ಲ.

ಸಯ್ಯದ್‌ಪುರದಿಂದ ಈಗಿನ ಪಾಕಿಸ್ತಾನದ ನಗರ ಸಿಯಾಲ್‌ಕೋಟ್‌ಗೆ ತೆರಳಿದ ನಾನಕ್, ಅಲ್ಲಿ ಒಂದು ಕಾಡುಮರ (ಪಂಜಾಬಿಯಲ್ಲಿ ಅದನ್ನು 'ಬಾಚ – ದಿ –

ಬೇರ್' ಎಂದು ಕರೆಯಲಾಗಿದೆ.) ದ ಕೆಳಗೆ ಕುಳಿತು ಆರಾಮಿಸಿದ. ಅವನ ಶಿಷ್ಯ ಮರ್ದಾನಾನನ್ನು ಊರೊಳಗೆ ತೆರಳಿ ಪ್ರತಿಯೊಂದು ಅಂಗಡಿಗೆ ಹೋಗಿ, ಒಂದು ಕಾಸಿಗೆ ಸತ್ಯ ಮತ್ತು ಇನ್ನೊಂದು ಕಾಸಿಗೆ ಅಸತ್ಯವನ್ನು ಖರೀದಿಸಬೇಕೆಂದು ಆದೇಶಿಸಿದ. ಗುರುವಿನ ಆದೇಶ ಕೇಳಿದ ಮರ್ದಾನಾ ನಗಾಡಿದ. ಆದರೆ ಗುರುವಿನ ಆದೇಶವನ್ನು ತಳ್ಳಿಹಾಕದೆ, ಆತ ನಗರದ ಮಾರುಕಟ್ಟೆ ಪ್ರವೇಶಿಸಿದ. ಅಲ್ಲಿದ್ದ ಅಂಗಡಿಗಳಲ್ಲಿ ಸತ್ಯಸತ್ಯಗಳನ್ನು ಖರೀದಿಸಲು ಅವುಗಳ ಮಾಲಿಕರಿಗೆ ಪ್ರಶ್ನೆಗಳನ್ನು ಹಾಕಿದ. ಅವರು ಈ ಗ್ರಾಹಕನೊಬ್ಬ ಹುಚ್ಚ ಎಂದು ಬಗೆದು ಅವನನ್ನು ಲೇವಡಿ ಮಾಡಿದರು. ಕೊನೆಗೆ ಒಬ್ಬ ಅಂಗಡಿಯವ ಮಾತ್ರ ಮರ್ದಾನಾನ ಪ್ರಶ್ನೆಗೆ, ಜೀವನ ಅಸತ್ಯವಾಗಿದೆ, ಸಾವು ದಿಟವೆಂದು ನಿನ್ನ ಗುರುವಿಗೆ ಹೇಳು ಎಂದು ಉತ್ತರಿಸಿದ. ಮರ್ದಾನಾ ತಂದ ಉತ್ತರದಿಂದ ಸಂತುಷ್ಟನಾದ ಗುರು ನಾನಕ್, 'ಈ ಭಾವನಾತ್ಮಕ ಆತ್ಮವನ್ನು ನೋಡಲು ಅಪೇಕ್ಷಿಸುತ್ತೇನೆ. ಆತ ಸತ್ಯವನ್ನು ಅರಿತಿದ್ದಾನೆ ಎಂದು ತೋರುತ್ತದೆ' ಎಂದು ಹೇಳಿದಾಗ, 'ಮೂಲಾ' ಎಂಬ ಹೆಸರಿನ ಆ ಅಂಗಡಿಯ ಯಜಮಾನನನ್ನು ತನ್ನ ಬಳಿ ಕರೆಸಿಕೊಂಡು, ಆತನನ್ನು ತನ್ನ ಪ್ರವಾಸದಲ್ಲಿ ಭಾಗಿಯಾಗುವಂತೆ ಕೇಳಿಕೊಂಡ. ಅವನ ಅಣತಿಯಂತೆ 'ಮೂಲಾ' ನಾನಕ್‌ನೊಂದಿಗೆ ಯಾತ್ರೆ ಮಾಡಿದ. ಆದರೆ, ಅವನಿಗೆ ಯಾತ್ರೆ ಸುಖಮಯನಾಗಿರದೆ, ನಾನಕನ ಸಹವಾಸ ತೊರೆದು ತನ್ನ ಹಿಂದಿನ ಜೀವನಕ್ರಮಕ್ಕೆ ಹಿಂದಿರುಗಿದ. ಸಿಯಾಲ್‌ಕೋಟ್‌ಗೆ ಮತ್ತೊಮ್ಮೆ ನಾನಕ್ ಬಂದಾಗ, 'ಮೂಲಾ' ತನ್ನ ಹೆಂಡತಿಯ ಅಸಹಕಾರದಿಂದ ನಾನಕ್‌ನನ್ನು ಭೇಟಿ ಮಾಡದೆ, ಮನೆಯಲ್ಲೇ ಉಳಿದ. ಒಬ್ಬ ವಿಶ್ವಾಸಿ ಭಾವನಾತ್ಮಕ ಶಿಷ್ಯನನ್ನು ಪಡೆಯದೆ ನಾನಕ್ ಬೇಸರಪಟ್ಟ. 'ಒಬ್ಬ ಮನುಷ್ಯ, ಜೀವನ ಅಸತ್ಯ, ಸಾವು ದಿಟ ಎಂದು ಸಾರಿ, ಜೀವನವನ್ನು ತೊರೆದು ಸತ್ಯದ ದಾರಿ ಹಿಡಿಯುದವ ಸಾವನ್ನು ತಪ್ಪಿಸಿಕೊಳ್ಳಲಾರ !' ಎಂದು ನಾನಕ್ ಬೇಸರದಿಂದ ನುಡಿದ ಕೆಲವೇ ದಿನಗಳಲ್ಲಿ ಆ ಮೂಲಾ ಎಂಬವ ಹಾವಿನಿಂದ ಕಚ್ಚಿಸಿಕೊಂಡು ಸಾವಿಗೀಡಾದ. ೨೩

ಸಿಯಾಲ್‌ಕೋಟ್ ನಗರದಿಂದ ಪಯಣಿಸಿದ ನಾನಕ್ ಮಿಥಾನ್‌ಕೋಟ್ ನಗರಕ್ಕೆ ತಲುಪಿದ. ಅಲ್ಲಿ ಮಿಯಾಂಮೀಠಾ ಎಂಬ ಮುಸ್ಲಿಮ್ ಸೂಫೀ ಸಂತ ವಾಸಿಸುತ್ತಿದ್ದ. ಅಹಂಭಾವದಿಂದ ಬೀಗುತ್ತಿದ್ದ ಆತ ನಾನಕ್ ತನ್ನೂರಿಗೆ ಬಂದಿರುವ ಸಂಗತಿ ತಿಳಿದು, ಆತನನ್ನು ಭೇಟಿ ಮಾಡಿ ಅವನನ್ನು ತರ್ಕದಲ್ಲಿ ತೊಡಗಿಸಿ, ನಾನಕ್‌ನನ್ನು ನಿಂಬೆಹಣ್ಣನ್ನು ಹಿಸುಕಿಹಾಕುವಂತೆ, ಸೋಲಪ್ಪುವಂತೆ ಮಾಡುವೆನೆಂದು ಜಂಬ ಕೊಚ್ಚಿದ. ನಾನಕ್‌ನನ್ನು ಭೇಟಿ ಮಾಡಿ ಅವನೊಂದಿಗೆ ಸಂಭಾಷಣೆ ಜರುಗಿಸಿದ.

'ಓ ನಾನಕ್ ಎರಡು ವಿಷಯಗಳಲ್ಲಿ ಮನುಷ್ಯ ಒಪ್ಪುವುದಾದರೆ ಮಾತ್ರ ದೇವರು ಅವನನ್ನು ಮನ್ನಿಸುತ್ತಾನೆ; ಒಂದನೆಯದು ಸ್ವಯಂ ದೇವರು ಮತ್ತು ಎರಡನೆಯದು ಅವನ ಪ್ರವಾದಿ. ಆದರೆ ನೀನು ದೇವರನ್ನು ಒಪ್ಪಿದರೂ, ಎರಡನೆಯದಾದ,

೨೩. P 109 History of Sikh People by G.Singh

ಪ್ರವಾದಿಯನ್ನು ಒಪ್ಪುವುದಿಲ್ಲ ಮತ್ತು ಖುರಾನ್‌ನನ್ನು ಓದುವುದಿಲ್ಲ. ಹೇಗೆ ನಿನಗೆ ಮುಕ್ತಿ ದೊರಕುತ್ತದೆ?'

ನಾನಕ್ ಉತ್ತರಿಸುತ್ತಾನೆ : 'ಉತ್ತಮ ಮಾರ್ಗದ ಖುರಾನ್‌ನನ್ನು ನಾನು ಓದುತ್ತೇನೆ ಮತ್ತು ದೇವರ ಆಶ್ರಯದಲ್ಲಿ ಜೀವಿಸುವುದರಿಂದ ಇನ್ನೊಬ್ಬರ ಆಶ್ರಯ ಬೇಕಾಗಿಲ್ಲ. ಯಾಕೆಂದರೆ ಯಾರು ಒಬ್ಬನನ್ನು ಪ್ರೀತಿಸುವನೋ ಆತ ಮತ್ತೊಬ್ಬನನ್ನು ಪ್ರೀತಿಸುವುದಿಲ್ಲ.'

ಮೀಠಾ ಮಿಯಾಂ ಪುನಃ ನಾನಕ್‌ನನ್ನು ಪ್ರಶ್ನಿಸಿದ.

'ಹಣತೆಯನ್ನು ಉರಿಸಲು ಎಣ್ಣೆ ಬೇಡವೆ?' ಖುರಾನ್‌ನ ನೆರವಿಲ್ಲದೆ ವ್ಯಕ್ತಿಯ ಅಂತರಾತ್ಮವನ್ನು ಹೇಗೆ ಬೆಳಗಿಸಬಹುದು ಎಂಬ ಅರ್ಥ ಬರುವಂತೆ ಮಿಯಾಂ ಪ್ರಶ್ನೆ ಹಾಕಿದ.

ಅವನ ಪ್ರಶ್ನೆಗೆ ನಾನಕ್ ಉತ್ತರಿಸಿದ :

'ಹಣತೆ (ದೇಹ)ಯೊಳಗೆ ಬುದ್ಧಿಯ ಎಣ್ಣೆಯಿದ್ದರೆ, ದೇವರ ಭಯದ ಎಣ್ಣೆಬತ್ತಿಯನ್ನು ಸತ್ಯದ ಬೆಂಕಿಯಿಂದ ಉರಿಸಿದರೆ, ನಮ್ಮ ಅಂತರಾತ್ಮವನ್ನು ಅದರ ಬೆಳಕು ಚೆಲ್ಲುತ್ತದೆ ಮತ್ತು ದೇವರನ್ನು ನೋಡುತ್ತೇವೆ. ಯಾರು ತನ್ನ ಜೀವಿತ ಕಾಲದಲ್ಲಿ ಇನ್ನೊಬ್ಬರ ಸೇವೆಗೈಯ್ಯುತ್ತಾರೆಯೋ ಅವರಿಗೆ ದೇವರ ಸಮ್ಮುಖದಲ್ಲಿ ಸ್ಥಾನ ದೊರಕುವುದು.'

ಮಿಯಾಂ ಮೀಠಾ ಪ್ರಶ್ನೆಯನ್ನು ಹಾಕುವುದನ್ನು ಮುಂದುವರೆಸಿದ :

'ಬುದ್ಧಿ ಎಂದರೇನು? ದೇವರ ಬಗ್ಗೆ ಭಯಪಡುವುದು ಹೇಗೆ? ಸತ್ಯದೀಪವನ್ನು ಹೇಗೆ ಹಚ್ಚುವುದು? ಸತ್ಯವೆಂದರೇನು?'

ಮೀಠಾನ ಪ್ರಶ್ನೆಗಳ ಸುರಿಮಳೆಗೆ ನಾನಕ್ ಸಾವಕಾಶವಾಗಿ ಉತ್ತರಿಸಿದ :

'ಪ್ರೀತಿಸುವುದೇ ಬುದ್ಧಿವಂತಿಕೆ; ಸಂಪೂರ್ಣ ದೈನ್ಯದ ಸಮರ್ಪಣೆ ದೇವರಿಗೆ ಭಯಪಡುವುದು; ಅವನನ್ನು ನಂಬುವುದೇ ಸತ್ಯದೀಪವನ್ನು ಉರಿಸುವುದು; 'ದೇವರು ಎಲ್ಲೆಡೆ ಮತ್ತು ಎಲ್ಲರಲ್ಲೂ ಇದ್ದಾನೆ ಎಂಬ ಸತ್ಯವನ್ನು ಅರಿಯುವುದೇ ನಿಜವಾದದ್ದು.'

ಅಂತಿಮವಾಗಿ ಮಿಯಾಂ, 'ದೇವರಿಗೆ ಅತಿ ಪವಿತ್ರವಾದ ಮತ್ತು ಪ್ರೀತಿಪಾತ್ರವಾದ ಅವನ ಹೆಸರೇನು?' ಎಂದು ಕೇಳಿದ್ದಕ್ಕೆ ನಾನಕ್ ಉತ್ತರಿಸಿದ :

'ಒಬ್ಬ ವ್ಯಕ್ತಿಗೆ ಬಳಕೆಯಾಗಿದ್ದ ಯಾವುದೇ ಹೆಸರು ! ನಿನಗೆ ಅದು 'ಅಲ್ಲಾ' ಆಗಿದೆ.'

ನಾನಕ್ 'ಅಲ್ಲಾ' ಎಂದು ಮೂರು ಬಾರಿ ಉಚ್ಚರಿಸಿ, ಮಿಯಾನನ್ನು ಬೀಳ್ಕೊಟ್ಟ. ಮಿಯಾಂ ಮೀಠಾ ನಾನಕ್‌ನ ಮಾತುಗಳಿಂದ ಪ್ರಭಾವಿತನಾಗಿ, ತನ್ನ ಅಹಂ ಭಾವಗಳಿಂದ ದೂರವಾದ. ೨೪

---

೨೪. P 109 The History of Sikh Peop,e by G.Singh

ಗುರು ನಾನಕ್ ತನ್ನ ಪ್ರವಾಸವನ್ನು ಮುಂದುವರೆಸಿ, ಪಂಜಾಬ್‌ನ ಪ್ರಸಿದ್ಧನಗರ ಲಾಹೋರ್ (ಈಗಿನ ಪಾಕಿಸ್ತಾನದ ಪಂಜಾಬ್ ರಾಜಧಾನಿ) ನ್ನು ತಲುಪಿದ. ನಗರದ ಒಬ್ಬ ಧನಿಕ ದುನೀಚಂದ್, ಆ ದಿನ ತನ್ನ ದಿವಂಗತ ತಂದೆಯ ಪುಣ್ಯತಿಥಿಯ ದಿನವಾಗಿದ್ದರಿಂದ ಒಂದು ಭೋಜನಕೂಟ ಏರ್ಪಡಿಸಿದ್ದ. ಅಷ್ಟೇ ಅಲ್ಲದೆ, ಅವನು ತನ್ನ ಮನೆಯ ಮುಂದೆ ಅನೇಕ ಬಣ್ಣ ಬಣ್ಣದ ಬಾವುಟಗಳನ್ನು ನೆಟ್ಟಿದ್ದ. ಒಂದೊಂದು ಬಾವುಟ ಅವನಲ್ಲಿದ್ದ ಸಾವಿರಾರು ಧನ ದ್ರವ್ಯಗಳ ಪ್ರತೀಕವಾಗಿದ್ದವೆಂದು ನಾನಕ್‌ನಿಗೆ ತಿಳಿಸಿದರು ಕೆಲವು ಆಪ್ತರು. ಧನಿಕ, ಗುರು ನಾನಕ್ ನಗರಕ್ಕೆ ಬಂದಿರುವ ವಿಷಯ ಅರಿತು ಅವನಿಗೆ ತನ್ನ ಮನೆಗೆ ಬರಲು ಆಹ್ವಾನ ನೀಡಿದ. ನಾನಕ್ ಆಹ್ವಾನವನ್ನು ಸ್ವೀಕರಿಸಿದ. ಆದರೆ ಒಂದು ಶರತ್ತನ್ನು ಹಾಕಿದ. ಧನಿಕ ತನ್ನ ಒಂದು ಪ್ರಶ್ನೆಯನ್ನು ಉತ್ತರಿಸಿದರೆ ತಾನು ಸತ್ಕಾರಕೂಟದಲ್ಲಿ ಭಾಗವಹಿಸುವುದಾಗಿ ಹೇಳಿದ. ಪ್ರಶ್ನೆ ಹೀಗಿತ್ತು : 'ನನ್ನ ಬಳಿ ನನಗೆ ಬಹಳ ಪ್ರಿಯವಾದ ಒಂದು ಗುಂಡುಸೂಜಿ ಇದೆ. ಆ ಸೂಜಿಯನ್ನು ಈಗ ನೀನು ಜೋಪಾನವಾಗಿಟ್ಟು ನಿನ್ನ ಮುಂದಿನ ಜನ್ಮದಲ್ಲಿ ಆ ಸೂಜಿಯನ್ನು ನನಗೆ ನೀಡುವಂತಾದರೆ, ನಾನು ನಿನ್ನ ಭೋಜನ ಸ್ವೀಕರಿಸುವೆ.' ಆಶ್ಚರ್ಯಚಕಿತಗೊಂಡ ಆ ಧನಿಕ, 'ಹೇಗೆ ತಾನೆ ಒಬ್ಬ ಸತ್ತ ಮೇಲೆ ವಸ್ತುಗಳನ್ನು ಕೊಂಡೊಯ್ಯಬಲ್ಲ?' ಎಂದು ಹೇಳಿದ.

ನಾನಕ್ ಉತ್ತರಿಸಿದ : 'ಒಂದು ಪುಟ್ಟ ಗುಂಡು ಸೂಜಿಯನ್ನು ಕೊಂಡೊಯ್ಯಲು ಅಸಾಧ್ಯವಾದರೆ, ಹೇಗೆ ತಾನೆ ನೀನು ಬಾಗಿಲ ಮುಂದೆ ಪ್ರದರ್ಶನಕ್ಕೆ ಇಟ್ಟಿರುವ ಐಶ್ವರ್ಯವನ್ನು ಕೊಂಡೊಯ್ಯಬಲ್ಲೆ?'

ಧನಿಕ ದುನೀಚಂದ್ ನಾಚಿಕೆಯಿಂದ ಮೂಕನಾದ. ಅವನು ತನ್ನ ಆಡಂಬರದ, ಧನಧಾನ್ಯದ ಪ್ರದರ್ಶನವನ್ನು ನಿಲ್ಲಿಸಿದ. ಗುರು ನಾನಕ್‌ನ ಅಣತಿಯಂತೆ, ಬಡಬಗ್ಗರಿಗೆ ಧನಧಾನ್ಯ ಹಂಚಿದ. ಅಂದಿನಿಂದ ದೇವರ ಧ್ಯಾನಾಸಕ್ತನಾಗಿ ದೀನ ದಲಿತರ ಸೇವೆ ಮಾಡಲು ಪ್ರಾರಂಭ ಮಾಡಿದ. ೨೫

ಗುರು ನಾನಕ್, ರಾವಿ ನದಿಯ ಪಶ್ಚಿಮದ ದಡದ ಮೇಲಿರುವ ಈಗಿನ ಕಾರ್ತಾರ್‌ಪುರಕ್ಕೆ ತಲಪಿದ.ಈ ನಗರವನ್ನು ಕ್ರಿ.ಶ. ೧೫೨೬ರಲ್ಲಿ ಗುರುನಾನಕ್ ತನ್ನ ತಿರುಗಾಟದಲ್ಲಿ ಸ್ಥಾಪಿಸಿದನೆಂದು ಕೆಲವು ಇತಿಹಾಸಕಾರರ ಅಭಿಪ್ರಾಯವಿದೆ.

ಈ ಸ್ಥಳದಲ್ಲೇ ಮುಂದೆ ಪ್ರಸಿದ್ಧಿ ಪಡೆದ 'ಬಾಬಾ ಬುಡ್ಡಾ' (ಸಂತ ಹಿರಿಯ)ನ ಪರಿಚಯವಾಯಿತು. ಬಾಬಾ ಬುಡ್ಡಾ ತನ್ನ ೭ನೆಯ ವಯಸ್ಸಿನಲ್ಲಿ ಗುರುವನ್ನು ಭೇಟಿಮಾಡಲು ದಿನವಹೀ ಬರುತ್ತಿದ್ದ. ಅವನ ಆಸಕ್ತಿ ನೋಡಿ, ಒಂದು ದಿನ ಗುರು ಕೇಳಿದ : 'ಇಷ್ಟು ಎಳೆ ವಯಸ್ಸಿನಲ್ಲಿ ನನ್ನನ್ನು ಕಂಡು ಸೇವೆ ಮಾಡಲು ಯಾಕೆ

---

೨೫. P 119 History of Sikh People by G.Singh

ಬರುತ್ತಿದ್ದೀಯ?' ಬಾಲಕ ಉತ್ತರಿಸಿದ. "ನನ್ನ ತಾಯಿ ಬೆಂಕಿಯನ್ನು ಉರಿಸುವಾಗ ಮರದ ತುಂಡುಗಳನ್ನು ಉರಿಸುವ ಕಾರ್ಯವನ್ನು ನೋಡಿದ್ದೇನೆ. ಸಣ್ಣಪುಟ್ಟ ಮರದ ತುಂಡುಗಳು ಬಲು ಬೇಗ ಹತ್ತಿ ಉರಿಯುವುದನ್ನು ಕಂಡಿದ್ದೇನೆ. ಒಬ್ಬ ವ್ಯಕ್ತಿಯ ಜೀವನ ಯಾವಾಗ ಕೊನೆಗೊಳ್ಳುವುದು ಎಂಬುವುದು ಅರಿವಾಗುವುದು ಕಷ್ಟ ಎಂಬುದು ನನಗೆ ತಿಳಿಯಿತು. ಆದ್ದರಿಂದ ದೇವರ ದಾರಿ ಹಿಡಿದು ಸಾಗುವ ಕೆಲಸ ಅತಿ ಶೀಘ್ರದಲ್ಲಿ ಮಾಡುವುದು ಒಳಿತು ಎಂದು ಅರಿತನು."

ಗುರು ನಾನಕ್. ಬಾಲಕನ ಮಾತುಗಳನ್ನು ಕೇಳಿ ಅತ್ಯಂತ ಸಂಪ್ರೀತನಾದ. ಇದೇ ಬಾಲಕ ಮುಂದೆ 'ಬಾಬಾ ಬುಡ್ಡಾ' ಎಂದು ಹೆಸರು ಪಡೆದು ಕ್ರಮೇಣ ನಾನಕ್‌ನ ಉತ್ತರಾಧಿಕಾರಿಗಳ ಅಧಿಕಾರ ವಚನ ನೀಡುವ ಕಾರ್ಯಮಾಡಿ ಪ್ರಸಿದ್ಧಿ ಪಡೆದ.

ಕಾರ್ತಾರಪುರದಲ್ಲಿ ತನ್ನ ಆಶ್ರಮ ಸ್ಥಾಪಿಸಿದ ನಾನಕ್, ತನ್ನ ವಿಚಿತ್ರ ಉಡುಪುಗಳನ್ನು ತ್ಯಜಿಸಿದ. ಗೃಹಸ್ಥರು ಧರಿಸುವ ಉಡುಪು ತೊಟ್ಟು, ಸಾಮಾನ್ಯನಂತೆ ಜೀವನ ಸಾಗಿಸಿದ. ಹೊಲದಲ್ಲಿ ರೈತನಾಗಿ ದುಡಿದು, ಧಾನ್ಯ ಬೆಳೆದ. ಆಶ್ರಮದಲ್ಲಿ ಉಚಿತ ಭೋಜನದ ಏರ್ಪಾಡು ಮಾಡಿದ. ಅವನನ್ನು ಕಾಣಲು ಬಂದ ಆಸಕ್ತರಿಗೆ ಉಣಬಡಿಸಿದ. ಅಂದಿನಿಂದಲೇ ಜಾರಿಗೆ ಬಂದಿತು. 'ಲಂಗರ್' ಪದ್ಧತಿ. ಪ್ರತಿಯೊಂದು ಗುರುದ್ವಾರಗಳಲ್ಲಿ ಇಂದಿಗೂ ಕಾಣಬರುವ ಉಚಿತ ಭೋಜನ ನೀಡುವ 'ಲಂಗರ' ಭೋಜನಾಲಯದ ಪದ್ಧತಿ, ಜಾತಿ ಧರ್ಮದ ಬೇಧಭಾವವಿಲ್ಲದ ಸರ್ವರಿಗೂ ಉಚಿತ ಭೋಜನ ನೀಡುವ ಪದ್ಧತಿ ಪ್ರಾಯಶಃ ಭಾರತದಲ್ಲಿ ಪ್ರಥಮ ಬಾರಿಗೆ ಜಾರಿಗೆ ಬಂದಿದ್ದು ಗುರುನಾನಕ್‌ನಿಂದ ಪ್ರಾರಂಭಗೊಂಡಿತು ಎಂದರು ಇತಿಹಾಸಕಾರರು. ೨೬

ಕಾರ್ತಾರಪುರದಲ್ಲಿ ತನ್ನ ಆಶ್ರಮ ಆರಂಭಿಸಿ, ಸಾರ್ವಜನಿಕರಿಗೆ ಉಚಿತ ಭೋಜನ ನೀಡುವ ವ್ಯವಸ್ಥೆ (ಲಂಗರ್) ಪ್ರಾರಂಭ ಮಾಡಿದ ಸಮಯದಲ್ಲಿ ಒಬ್ಬ ಬ್ರಾಹ್ಮಣ ಪ್ರವಾಸಿಯ ಆಗಮನವಾಯಿತು. ಶುದ್ಧ ಶಾಕಾಹಾರಿ, ಸಂಪ್ರದಾಯಸ್ಥ ಬ್ರಾಹ್ಮಣ ನಾನಕ್‌ನ ಬಳಿ ಬಂದು ಭೋಜನ ಮಾಡಲು ಅಪೇಕ್ಷಿಸಿದ. ಅವನನ್ನು 'ಲಂಗರ್'ನಲ್ಲಿ ಭೋಜನ ಮಾಡಲು ಹೇಳಿದ ನಾನಕ್. ಬ್ರಾಹ್ಮಣ ತನ್ನ ಸಾಂಪ್ರದಾಯಕ್ಕೆ ಒಗ್ಗದ ಸಾಮೂಹಿಕ ಭೋಜನಶಾಲೆಯಲ್ಲಿ ಇತರರು ತಯಾರಿಸಿದ ಭೋಜನ ಮಾಡಲು ನಿರಾಕರಿಸಿದ. ಪಾತ್ರೆ, ದಿನಿಸು, ಒಲೆ ಇತ್ಯಾದಿಗಳನ್ನು ನೀಡಿದರೆ, ತಾನೇ ಸ್ವತಃ ಆಹಾರ ತಯಾರಿಸಿ ಉಂಡುವೆನು ಎಂದು ತಿಳಿಸಿದ್ದಕ್ಕೆ ನಾನಕ್ ಸಮ್ಮತಿಸಿ, ಅವೆಲ್ಲವನ್ನು ಪೂರೈಸಿದ. ಬ್ರಾಹ್ಮಣ ಒಲೆ ತಯಾರಿಸಲು, ನೆಲ ಅಗೆದು, ಅದರೊಳಗೆ ಕಟ್ಟಿಗೆ ಉರಿಸಿ, ಮೇಲೆ ಪಾತ್ರೆ ಇಟ್ಟು ಧಾನ್ಯ ಬೇಯಿಸಲು ತಯಾರಿ ನಡೆಸಿದ. ನೆಲ ಅಗೆದಷ್ಟು ಅದರಿಂದ ಹುಳ ಹುಪ್ಪಟೆ. ಇರುವೆ. ಗೆದ್ದಲು ಹೊರಬರತೊಡಗಿದವು.

---

೨೬. P 41 History of Sikh People by G.Singh

ಅಹಿಂಸಾವಾದಿ ಬ್ರಾಹ್ಮಣ ಅವುಗಳ ಮಾರಣ ಹೋಮ ಮಾಡಲು ಮನಸ್ಸು ಒಪ್ಪದೆ, ಮತ್ತೊಂದು ಕಡೆ ನೆಲ ಅಗೆದು ಒಲೆ ತಯಾರಿಸಲು ಪ್ರಾರಂಭಿಸಿದ. ಆದರೆ ಅಲ್ಲೂ ಅವನಿಗೆ ಜಂತು ಹುಳುಗಳು ಎದುರಾದವು. ಹತಾಶನಾಗಿ ಬ್ರಾಹ್ಮಣ ಹಸಿದು ಕುಳಿತ. ಅವನ ಸ್ಥಿತಿಯನ್ನು ನೋಡಿ ನಾನಕ್ ಕನಿಕರಗೊಂಡು ನುಡಿದ :

'ಇತರರು ತಯಾರಿಸಿದ ಆಹಾರದಿಂದ ನಾವು ಮೈಲಿಗೆಗೊಳ್ಳುವುದಿಲ್ಲ. ಆದರೆ ನಮ್ಮ ಕೆಟ್ಟ ಮನಸ್ಸಿನಿಂದ ಮೈಲಿಗೆಗೊಳ್ಳುತ್ತೇವೆ'. ೨೭

ನಾನಕ್‌ನಿಗೆ ಪ್ರೀತಿಪಾತ್ರರಾದ ಇಬ್ಬರು ಶಿಷ್ಯರಿದ್ದರು. ಅವರ ಹೆಸರು ಮಾಲೋ ಮತ್ತು ಭಾಗೋ ಎಂದಾಗಿತ್ತು. ಅವರು ಧ್ಯಾನ ಮತ್ತು ತಪಸ್ಸು ಮಾಡಿ ದೇವರ ಸಾಕ್ಷಾತ್ಕಾರ ಮಾಡುವುದರಲ್ಲಿ ನಂಬಿಕೆ ಇಟ್ಟುಕೊಂಡಿದ್ದರು. ನಾನಕ್‌ನನ್ನು ಆ ವಿಷಯದಲ್ಲಿ ಅವನ ಅಭಿಪ್ರಾಯ ಕೇಳಿದಾಗ ಅವನು ಈ ರೀತಿ ನುಡಿದನು :

'ದೇಹ ದಂಡಿಸಿ, ದೇವರತ್ತ ಒಲಿಸಿಕೊಳ್ಳುವುದು ಶ್ರೇಯಸ್ಸಲ್ಲ. ಯಾಕೆಂದರೆ, ಈ ದೇಹ ದೇವರ ಗುಡಿಯಾಗಿರುವಾಗ, ಅದನ್ನು ದಂಡಿಸಿದರೆ, ದೇವರನ್ನು ದಂಡಿಸಿದಂತೆ. ಮನದಾಸೆಯನ್ನು ದಂಡಿಸಬೇಕೇ ವಿನಹ, ದೇಹವನ್ನಲ್ಲ. ಮನಸ್ಸನ್ನು ದೇವರ ಮೇಲೆ ಏಕಾಗ್ರತೆಯಿಂದ ಇರಿಸಿ ನಾವು ಎಸಗುವ ಕಾರ್ಯವನ್ನು ಮಾಡಬೇಕು. ಯಾರನ್ನು ಹಿಂಸಿಸದೆ, ಸರ್ವರಿಗೂ ಸೇವೆಗೈದು, ತಾನು ಮಾಡುವ ಯಾವುದೇ ಒಳ್ಳೆಯ ಕಾರ್ಯದಲ್ಲಿ, ದೈನ್ಯತೆಯಿಂದ ದೇವರ ಧ್ಯಾನದಲ್ಲಿ ತೊಡಗಿದಂತಹವರ ಮನಸ್ಸು ಪವಿತ್ರವಾಗಿರುತ್ತದೆ ಮತ್ತು ಅವರು ಪವಿತ್ರವಾಗಿರುತ್ತಾರೆ.'

ಗುರುನಾನಕ್ ಕಾರ್ತಾರ್‌ಪುರದಿಂದ ಪುನಃ ತನ್ನ ತಿರುಗಾಟವನ್ನು ಪ್ರಾರಂಭಿಸಿದ. ಈಗ ಆತನ ದೃಷ್ಟಿ ದಕ್ಷಿಣ ಭಾರತದೆಡೆಗೆ ಹರಿದು, ತನ್ನ ಇಬ್ಬರು ಜಾಟ್ ಶಿಷ್ಯಂದಿರಾದ ಸೈದೋ ಮತ್ತು ಘೀಹೋ ಎಂಬವರೊಂದಿಗೆ ಪ್ರವಾಸ ಕೈಗೊಂಡ. ದಾರಿಯ ಮಧ್ಯದಲ್ಲಿ ಒಂದು ಜಿನಾಲಯ ಅವನ ಕಣ್ಣಿಗೆ ಬಿದ್ದು, ಅದರ ಮುಖ್ಯಸ್ಥ 'ಅನ್‌ಭೀ' ಎಂಬಾತನ ಪರಿಚಯವಾಗುತ್ತದೆ. (ಜಿನಾಲಯದ ಸ್ಥಳವಾಗಲಿ, ಅದರ ಮುಖ್ಯಸ್ಥನ ವಿವರಗಳನ್ನು ಇತಿಹಾಸಕಾರರು ನೀಡಿಲ್ಲದಿದ್ದರೂ, ಗುರುವಿನೊಂದಿಗೆ ಜರುಗಿದ ಕಥೆಯ ವಿವರಣೆ ನೀಡಿರುತ್ತಾರೆ.)

ಜಿನಮತಾವಲಂಬಿಯಾದ ಆತ, ಅಹಿಂಸಾವ್ರತವನ್ನು ಆಚರಿಸುತ್ತಿದ್ದ. ನಾನಕ್‌ನ ಸಾತ್ವಿಕತೆಯನ್ನು ಪರೀಕ್ಷಿಸುವ ಸಲುವಾಗಿ ಜಿನಭಕ್ತ ಅನ್‌ಭೀ ನಾನಕ್‌ನನ್ನು ಪ್ರಶ್ನಿಸಿದ: 'ಹಳೆಯ ಅಥವಾ ಹೊಸ ದವಸ ಧಾನ್ಯ ಉಪಯೋಗಿಸುವೆಯೊ? ಫಲವನ್ನು ಪಡೆಯಲು ಗಿಡಮರಗಳನ್ನು ಅಲ್ಲಾಡಿಸುವೆಯೊ? ಹೀಗೆ ಮಾಡಿದರೆ ನೀನು ಜೀವಾತ್ಮಗಳನ್ನು ನಾಶಪಡಿಸುತ್ತೀಯಾ ಮತ್ತು ನಿನ್ನನ್ನು ಸಂತನೆಂದು ಕರೆಯಲಾಗುವುದಿಲ್ಲ!'

---

೨೭. P 132 The Sikh Religion by Macauliffe

ಆಗ ನಾನಕ್ ಉತ್ತರಿಸಿದ : 'ಜಲದಿಂದ ೧೪ ಹರಳುಗಳು ದೊರೆಯುತ್ತವೆ; ನದಿ ದಡದ ಮೇಲೆ ಪ್ರಸಿದ್ಧ ಹಿಂದೂ ಪವಿತ್ರ ಯಾತ್ರಾಸ್ಥಳಗಳಿವೆ; ನಮ್ಮನ್ನು ಸ್ವಚ್ಛಗೊಳಿಸುವುದು ನೀರು, ನಮಗೆ ಜೀವನವನ್ನು ನೀಡುವ ತಣ್ಣಗಿನ ಹರಿದಾಡುವ ನೀರನ್ನು ಹೇಗೆ ನಾವು ತಿರಸ್ಕರಿಸಬಹುದು? ಇನ್ನು ಜೀವವನ್ನು ನಾಶಮಾಡುವ ವಿಷಯದಲ್ಲಿ ಹೇಳುವುದಾದರೆ, ಜೀವವಿಲ್ಲದ ಯಾವ ವಸ್ತುವಿದೆ? ಹೂ ಎಲೆಗಳಿಗೆ ಜೀವವಿದೆ, ಅದೇ ರೀತಿ ಜಲದಲ್ಲಿದೆ, ಅದೇ ರೀತಿ ಧಾನ್ಯದಲ್ಲಿದೆ, ಹಾಲು ಮೊಸರಿನಲ್ಲಿದೆ. ಬುದ್ಧಿಶಕ್ತಿಯಿಂದಲೇ ಒಬ್ಬ ವ್ಯಕ್ತಿ ವಿಮೋಚನೆ ಪಡೆಯುತ್ತಾನೆ, ದೇವರ ಕೃಪೆಯಿಂದ ನೀಡಿದ ಯಾವುದೇ ರೀತಿಯ ಆಹಾರವನ್ನು ದೂರವಿಡುವುದರಿಂದಲ್ಲ !'

ಕಟ್ಟಾ ಅಹಿಂಸಾವ್ರತ ಪಾಲಿಸುವವರ ಪಾಲಿಗೆ ಅವರು ಜರುಗಿಸುವ ಆಹಾರ ಪದ್ಧತಿಯ ಬಗ್ಗೆ ನಾನಕ್‌ನ ಹಿತವಚನ ಅನರೂಪವಾಗಿತ್ತು. ಸ್ವಚ್ಛ, ರುಚಿಕರವಾದ ಯಾವುದೇ ಆಹಾರ ಸೇವಿಸುವುದರಲ್ಲಿ ಮಾನವನಿಗೆ ಯಾವ ದಿಗ್‌ಬಂಧನವೂ ಇಲ್ಲ ಎಂದು ಹೇಳಿ ನಾನಕ್ ಆಹಾರ ಸೇವನೆಯಲ್ಲಿ ಯಾವ ಕಟ್ಟುಪಾಡು ಸಲ್ಲದು ಎಂದ. ಆದರೆ, ನಾನಕ್ ತನ್ನ ಪ್ರವಾಸದಲ್ಲಿ ಒಬ್ಬ ದೈತ್ಯಮಾನವ, ನರಭಕ್ಷಕನನ್ನು ಭೇಟಿಮಾಡಿದಾಗ, ಅವನ ಜೀವನಕ್ರಮವನ್ನೇ ಬದಲಿಸಿದ ವೃತ್ತಾಂತವನ್ನು ಇತಿಹಾಸಕಾರರು ಅರುಹಿದ್ದಾರೆ. ಆ ನರಭಕ್ಷಕ, ನಾನಕ್‌ನ ಅಭೂತಪೂರ್ವ ತೇಜಸ್ಸು, ಅವನ ಶಾಂತಮುದ್ರತೆ ಅವನು ನುಡಿದ ಗಾನಾಮೃತಗಳಿಗೆ ಮಾರು ಹೋಗಿ, ನಾನಕ್‌ನ ಭಕ್ತನಾಗಿ ಪರಿವರ್ತಿಸಿದ.

ಗುರುನಾನಕ್‌ನ ಪ್ರವಾಸ ದಕ್ಷಿಣ ಭಾರತದ ತಮಿಳುನಾಡಿನ ಪ್ರಾಂತ್ಯಗಳಲ್ಲಿ ಪ್ರಾರಂಭವಾಗಿ, ಪ್ರಸಿದ್ಧ ಹಿಂದೂ ಯಾತ್ರಾಸ್ಥಳವಾದ ರಾಮೇಶ್ವರದಲ್ಲಿ ಕೊನೆಗೊಂಡಿತು. ಅಲ್ಲಿಂದ ಅವನು ಸಮುದ್ರ ದಾಟಿ, ಶ್ರೀಲಂಕಾ (ಸಿಲೋನ್) ದ್ವೀಪಕ್ಕೆ ಸಾಗಿದ. ಉತ್ತರ ಶ್ರೀಲಂಕಾದಲ್ಲಿ ಹಿಂದೂ ತಮಿಳರು ಪ್ರಬಲಾಗಿರುವ ಜಾಫ್ನಾ ಪ್ರದೇಶದಲ್ಲಿ ಸಂಚರಿಸಿದ ಎಂದು ಇತಿಹಾಸಕಾರರ ಅಭಿಪ್ರಾಯವಿರುತ್ತದೆ. ಕೆಲವು ಅಭಿಪ್ರಾಯದ ಪ್ರಕಾರ, ನಾನಕ್ ಅಲ್ಲಿ ಆಳುತ್ತಿದ್ದ ಶಿವನಾಭನೆಂಬ ರಾಜನನ್ನು ಭೇಟಿಯಾದ. ಆದರೆ ಶ್ರೀಲಂಕಾದ ಇತಿಹಾಸದ ಪುಟಗಳಲ್ಲಿ 'ಶಿವನಾಭ'ನೆಂಬ ರಾಜನ ಹೆಸರು ಕಾಣಬರದಿರುವ ಕಾರಣ, ಅದನ್ನು ನಂಬಲು ಪ್ರಯಾಸಕರವೆಂದಿದ್ದಾರೆ. ಆದರೆ ಆ ಸಮಯದಲ್ಲಿ ಶ್ರೀಲಂಕಾದ ಆಳರಸರಾ ರಾಜ ಧರ್ಮ ಪರಾಕ್ರಮಬಾಹು ಎಂಬ ರಾಜನೊಂದಿಗೆ ನಾನಕ್ ಭೇಟಿಯಾಗಿದ್ದನ್ನು ಕೆಲವು ಇತಿಹಾಸಕಾರರು ಬೆಳಕಿಗೆ ತಂದಿರುತ್ತಾರೆ.೨೮

ನಾನಕ್‌ನ ದಕ್ಷಿಣ ಭಾರತದ ಪ್ರವಾಸದ ಗುರುತನ್ನು ರಾಮೇಶ್ವರ, ಗುಂಟೂರು, ಕಂಚೀಪುರಂ, ತಿರುವನ್ನಾಮಲೈ, ತಿರುಚಿ, ಬೀದರ್, ನಾಂದೇಡ್, ಬ್ರೋಚ್‌ನಗರಗಳಲ್ಲಿ ನಿರ್ಮಿಸಿದ ಗುರುದ್ವಾರಗಳು ಮತ್ತು ಉದಾಸೀ ಮಠಗಳನ್ನು ಉದಹರಿಸುತ್ತಾರೆ ಇತಿಹಾಸಕಾರರು.

---

೨೮. P 115 (FN) History of Sikh people by G.Singh

ದಕ್ಷಿಣ ಭಾರತದ ಪ್ರವಾಸದಿಂದ ಪಂಜಾಬ್‌ಗೆ ಹಿಂದಿರುಗಿದ ನಾನಕ್ ಅಚಲ-ವತಾಲಾ ಎಂಬ ಸ್ಥಳದಲ್ಲಿ ಯೋಗಿಗಳು ಜರುಗಿಸುತ್ತಿದ್ದ ಶಿವರಾತ್ರಿ ಜಾತ್ರೆಗೆ ತೆರಳಿದ. ನಾನಕ್ ಸಾಮಾನ್ಯರು ಧರಿಸುವಂತಹ ಉಡುಪು ಧರಿಸಿ ಅಲ್ಲಿಗೆ ಬಂದರೂ, ಈಗಾಗಲೇ ಸಾಕಷ್ಟು ಹೆಸರುವಾಸಿಯಾಗಿದ್ದ ಗುರುವನ್ನು ಕಂಡ ಯಾತ್ರಿಕರು ಪುಳಕಿತರಾಗಿ ಅವನ ಬಳಿ ಸಾರಿ, ದರ್ಶನ ಪಡೆದು ಆನಂದಿತರಾದರು. ಅಲ್ಲಿ ನೆರೆದಿದ್ದ ಯೋಗಿಗಳಿಗೆ ನಾನಕ್‌ನಿಗೆ ದೊರೆತ ಗೌರವ, ಪ್ರೀತಿ, ಮಮತೆಗಳನ್ನು ನೋಡಿ ಈರ್ಷೆ ಉಂಟಾಯಿತು. ಯೋಗಿಗಳ ಮುಖ್ಯಸ್ಥನಾಗಿದ್ದ ಭಂಗಾರನಾಥ್ ಎಂಬಾತ ನಾನಕ್‌ನ ಬಳಿ ಸಾಗಿ ಹೇಳಿದ : 'ಬಾಲಕನೇ ! ಹಾಲಿನಲ್ಲಿ ಹುಳಿ ಹಿಂಡಿ ಮೊಸರು ಮಾಡಿದ್ದಾದರೂ ಏಕೆ? ಇದರಲ್ಲಿ ಯಾವ ಬೆಣ್ಣೆಯನ್ನು ನೀನು ಕಡೆಯಲಾರೆ! (ಗ್ರಹಸ್ಥನ ವೇಶದಲ್ಲಿ ಬಂದು ನೀನು ಒಬ್ಬ ಸಂತನೆಂದುಕೊಂಡು ಯಾವ ತರಹದ ಜ್ಞಾನವನ್ನು ಪಡೆದು ಹಂಚಲಾರೆ.)

ನಾನಕ್ ಅವನ ಪ್ರಶ್ನೆಗೆ ಉತ್ತರಿಸಿದ :

'ಯಾರ ತಾಯಿ (ಗುರು) ಜ್ಞಾನಿಯಾಗಿರುತ್ತಾಳೆಯೋ, ಕಾಲನ್ನು ತೊಳೆಯುತ್ತಾಳೆ, ಅದನ್ನು (ಮನಸ್ಸನ್ನು)ಕಡಿಯುವುದಿಲ್ಲ. ಸಂಸಾರ ತ್ಯಾಗಮಾಡಿ, ಯಾರು ಅದಕ್ಕೆ ಶಾಪವಿಕ್ಕುವರೋ, ಅವರು ಗ್ರಹಸ್ಥರ ಬಾಗಿಲುಗಳಿಗೆ ತೆರಳಿ ಭಿಕ್ಷೆ ಬೇಡಲಾರರು. (ನೀವು ಯೋಗಿಗಳು ಮಾಡುವ ರೀತಿ) ಯಾರು ಇಲ್ಲಿ (ಈ ಜೀವನದಲ್ಲಿ) ಏನೂ ಮಾಡುವುದಿಲ್ಲವೋ, ಪರಲೋಕದಲ್ಲಿಯೂ ಏನೂ ಮಾಡುವುದಿಲ್ಲ.'

ಗುರು ನಾನಕ್‌ನ ಉತ್ತರದಿಂದ ಆಶ್ಚರ್ಯಚಕಿತರಾದ ಯೋಗಿಗಳು ತಮ್ಮ ಯೋಗ ಚಮತ್ಕಾರಗಳ ಪ್ರದರ್ಶನದಿಂದ ಅವನನ್ನು ಆಕರ್ಷಿಸಲು ಪ್ರಯತ್ನಿಸಿದರು. ಆದರೆ, ಅವರ ಯಾವುದೇ ಪ್ರಯತ್ನಗಳು ನಾನಕ್‌ನ ಮೇಲೆ ಪರಿಣಾಮ ಬೀರದೆ ಅವನು ನಿಶ್ಚಿಲನಾಗಿ ಕುಳಿತ.

ಚಮತ್ಕಾರಗಳು, ಕೈಚಳಕಗಳು ಮತ್ತು ಪವಾಡಗಳನ್ನು ನಂಬದ ನಾನಕ್ 'ದೇವರನ್ನು ತಿರಸ್ಕರಿಸುವುದೇ ಪವಾಡಗಳ ಉದ್ದೇಶ. ಆದರೆ ದೇವರನಾಮ ಮತ್ತು ಪುಣ್ಯಪುರುಷರ ಸಹವಾಸಗಳನ್ನು ನಂಬುತ್ತೇನೆ' ಎಂದು ಸಾರಿದ.

ಯೋಗಿಗಳ ಅಭ್ಯಾಸಗಳನ್ನು ನಂಬದ ನಾನಕ್ ಅವರ ಸಂಘಕ್ಕೆ ಸೇರುವಂತೆ ಅವರ ಅನುರೋಧವನ್ನೂ ತಿರಸ್ಕರಿಸಿದ.

'ಹರಿದ ತೇಪೆ ಹಾಕಿದ ಮೇಲಂಗಿಯಿಂದಲ್ಲ, ಕಿವಿಗೆ ಕುಂಡಲ ಧರಿಸಿ ಅಥವಾ ಜೋಳಿಗೆ ಚೀಲ ಧರಿಸಿದದಂದಲ್ಲ, ಯೋಗಿಯ ದಂಡದಿಂದಲ್ಲ ಜಿಂಕೆಯ ಕೊಂಬಿನಿಂದಲ್ಲ ಒಬ್ಬ ವ್ಯಕ್ತಿ ನಿಜವಾದ ಯೋಗಿಯಾಗಬಲ್ಲ. ಯೋಗಿ ಎಂದರೆ, ಯಾರು ತನ್ನ ಐದು ಭಾವೋದ್ರೇಕಗಳನ್ನು ಹಿಡಿದಿಟ್ಟುಕೊಳ್ಳುವನೋ, ಸ್ವಲ್ಪ ಹೊತ್ತು ಮಾತ್ರ ನಿದ್ರಿಸಿ ಮತ್ತು ಮಿತ ಆಹಾರ ಸೇವಿಸುವನೋ ಮತ್ತು ದೇವರ ಧ್ಯಾನಾಸಕ್ತನಾಗಿರುತ್ತಾನೋ, ಆಸೆಗಳನ್ನು ಹತ್ತಿಕ್ಕಿ ಬುದ್ಧಿಮಾತುಗಳನ್ನು ನುಡಿದು, ತನ್ನ ದೇಹ ಮತ್ತು ಮನಸ್ಸುಗಳನ್ನು

ಪವಿತ್ರವಾಗಿಟ್ಟುಕೊಂಡಿರುವನೋ, ಮತ್ತು ದೇವರಿಂದ ಏನು ದೊರೆತರೂ ಅದನ್ನು ಒಳ್ಳೆಯದೆಂದು ಬಗೆಯುತ್ತಾನೋ, ಅವನೇ ಯೋಗಿ. ಆಗ, ದೇವರ ದಿವ್ಯಗಾನಸುಧೆ ಅವನನ್ನು ಆವರಿಸುತ್ತದೆ' (ಗುರುಗ್ರಂಥ ಸಾಹಿಬ್)

ನಾನಕ್‌ನ ಸಂಚಾರ ಕಾಶ್ಮೀರದ ಕಡೆ ಸಾಗಿತು. ನಾನಕ್ ತನ್ನೊಂದಿಗೆ ಹಸ್ಸೂ ಎಂಬ ಕಮ್ಮಾರ ಮತ್ತು ಸಿದಾನ್ ಎಂಬ ನೇಯ್ಗೆಯವರನ್ನು ಕರೆದೊಯ್ದು. ಕಾಶ್ಮೀರದ ರಾಜಧಾನಿ ಶ್ರೀನಗರದಲ್ಲಿ ಬ್ರಹ್ಮದಾಸ್ ಎಂಬ ಪ್ರಸಿದ್ಧ ಪಂಡಿತನನ್ನು ಭೇಟಿ ಮಾಡಿದ. ಬ್ರಹ್ಮದಾಸ್ ತನ್ನ ಪಾಂಡಿತ್ಯವನ್ನು ಪ್ರದರ್ಶಿಸಲು ಹಲವಾರು ಸಂಸ್ಕೃತ ಗ್ರಂಥಗಳನ್ನು ಹೊತ್ತು ತಂದ. ಅವನ ಕತ್ತಿನಲ್ಲಿ ಸಾಲಿಗ್ರಾಮವಿರುವ ಹಾರ ಶೋಭಿಸುತ್ತಿತ್ತು. ನಾನಕ್‌ನಾದರೋ ಕಾಲಿಗೆ ಚರ್ಮದ ಚಡಾವು ಹಾಕಿದ್ದ. ದೇಹವನ್ನು ಹಗ್ಗದಿಂದ ಬಿಗಿದು ಕಟ್ಟಿಕೊಂಡಿದ್ದ. ಹಣೆಗೆ ಮಾತ್ರ ಹಿಂದೂ ಭಕ್ತಾದಿಗಳು ಇಟ್ಟುಕೊಳ್ಳುವ ಹಾಗೆ ಕುಂಕುಮದ ಬೊಟ್ಟು ಇಟ್ಟುಕೊಂಡಿದ್ದ. ನಾನಕ್‌ನ ಪೋಶಾಕನ್ನು ನೋಡಿದ ಬ್ರಹ್ಮದಾಸ್ ಚಕಿತಗೊಂಡು ಕೇಳಿದ. 'ಎಂತಹ ಫಕೀರ ನೀನು? ಧರ್ಮ ನಿಶಿದ್ಧವಾದರೂ ನೀನು ಚರ್ಮದ ಚಡಾವು ಧರಿಸಿದ್ದೀಯಾ. ದೇಹದ ತುಂಬ ಹಗ್ಗ ಬಿಗಿದುಕೊಂಡಿದ್ದೀಯಾ? ನಿನ್ನ ದಾರಿ ಯಾವುದು?'

ನಾನಕ್ ತನ್ನ ಪ್ರಸಿದ್ಧ ಗಾನದ ಮೂಲಕ ಉತ್ತರವನ್ನು ನೀಡಿದ. ಆ ಗಾನಾಮೃತ ಋಗ್ವೇದದ ಪ್ರಸಿದ್ಧ ಮಂತ್ರದಲ್ಲಿರುವ ಸಾರಾಂಶ ಅಡಕವಾಗಿದೆ ಎಂದಿದ್ದಾರೆ ಇತಿಹಾಸಕಾರರು.

'ಸೃಷ್ಟಿಪೂರ್ವದಲ್ಲಿ ಕಗ್ಗತ್ತಲಿದ್ದು, ಎಲ್ಲೆಲ್ಲೂ ಅವ್ಯವಸ್ಥೆಯ ಮೇಲೆ ಅವ್ಯವಸ್ಥೆ.
ಆಗ ಭೂಮಿ ಆಕಾಶ ಇರಲಿಲ್ಲ, ಏನೂ ಇರಲಿಲ್ಲ,
ಆದರೆ ದೇವರ ವರ್ಣನಾತೀತ ಮತ್ತು ಅದ್ಭುತ ದೈವಸಂಕಲ್ಪ ಇತ್ತು.
ದಿನ ರಾತ್ರಿಯಾಗಲಿ, ಸೂರ್ಯ ಚಂದ್ರರಾಗಲಿ ಇರದೆ
ಕೇವಲ ದೇವ ಶೂನ್ಯದಲಿ ತನ್ನ ಮೇಲೆ ಚಿಂತಿಸುತ್ತಾ ಇದ್ದ.
ಗಾಳಿ ಅಥವಾ ನೀರಾಗಲಿ ಇರಲಿಲ್ಲ; ಸೃಷ್ಟಿಯ ಉಗುಮವಾಗಲಿ
ಅಥವಾ ವಾಕ್‌ಶಕ್ತಿಯಾಗಲಿ ಇರಲಿಲ್ಲ.
ಸೃಷ್ಟಿಯಾಗಲಿ, ನಾಶವಾಗಲಿ, ಹುಟ್ಟು ಸಾವುಗಳಾಗಲಿ ಇರಲಿಲ್ಲ
ಸಮುದ್ರವಿಲ್ಲ, ನದಿಗಳಿಲ್ಲ, ಖಂಡಗಳಿಲ್ಲ, ನರಕಗಳಿಲ್ಲ
ಸ್ವರ್ಗಗಳಿಲ್ಲ, ವಿಶ್ವವಿಲ್ಲ, ಪಾತಾಳವಿಲ್ಲ,
ಬ್ರಹ್ಮವಿಲ್ಲ, ಶಿವನಿಲ್ಲ, ವಿಷ್ಣುವಿಲ್ಲ, ಆದರೆ ನನ್ನ ಒಬ್ಬನೇ ದೈವವಿರುವವ.
ಯಾವ ಆಚಾರಗಳಿಲ್ಲ, ತಪಸ್ಸುಗಳಿಲ್ಲ, ಪವಿತ್ರ ಗ್ರಂಥಗಳಿಲ್ಲ.
ಮಂತ್ರಘೋಶಗಳಿಲ್ಲ, ಚಮತ್ಕಾರಗಳಿಲ್ಲ, ಹಲವಾರು ದಾರಿಗಳಿಲ್ಲ
ಯಾವ ಜಾತಿಗಳಿಲ್ಲ, ಗರ್ವವಿಲ್ಲ, ಸಾವಿಗೆ ಜೀವವಿಲ್ಲ,

ಮನುಷ್ಯನಿಲ್ಲ, ಆತ್ಮವಿಲ್ಲ, ಪ್ರಜೆಗಳಿಲ್ಲ, ರಾಜನಿಲ್ಲ
ದೇವ ಇಚ್ಛಿಸಿದಾಗ, ಆವಾಗ ಮತ್ತು ಹೇಗೆ ಬೇಕೋ
ಹಾಗೆ ವಿಶ್ವವನ್ನು ನಾವು ಕಾಣುವ
ಮತ್ತು ನಂಬುವ ಹಾಗೆ ಸೃಷ್ಟಿಸಿದ. ೨೯

ಗುರು ನಾನಕ್‌ನ ಉಪದೇಶವಾಗಲೀ, ಅವನು ಬ್ರಹ್ಮದಾಸ್‌ನ ಪ್ರಶ್ನೆಗೆ ನೀಡಿದ ವಿವರಣೆಯಾಗಲಿ ಆ ಬ್ರಾಹ್ಮಣನಿಗೆ ತೃಪ್ತಿ ನೀಡಲಿಲ್ಲ. ತಾನು ಪಂಡಿತಶ್ರೇಷ್ಠನೆಂಬ ಅವನ ಅಹಂಕಾರ ಕುಂದದೆ, ಗುರು ನಾನಕ್‌ನಿಗೆ ತಲೆ ಬಾಗಲಿಲ್ಲ. ನಾನಕ್‌ನಿಗೆ ಅದರ ಅರಿವಾಗಿ, ಬ್ರಾಹ್ಮಣನಿಗೆ ಒಬ್ಬ ಗುರುವಿನ ಅಗತ್ಯವಿರುವುದಾಗಿ ಹೇಳಿ, ಅವನು ಹತ್ತಿರದ ಕಾಡಿಗೆ ಹೋಗಿ ಅಲ್ಲಿ ಇರುವ ನಾಲ್ಕು ಫಕೀರರನ್ನು ಕಂಡು, ಅವರನ್ನು ವಿಚಾರಿಸಿದರೆ, ಅವನಿಗೆ ಸೂಕ್ತ ಗುರುವಿನ ಪತ್ತೆ ನೀಡುವರೆಂದ. ಬ್ರಹ್ಮದಾಸ್ ನಾನಕ್‌ನ ಆದೇಶ ಪಡೆದು, ನಾಲ್ಕು ಫಕೀರರನ್ನು ಹುಡುಕಿಕೊಂಡು ಹೊರಟ. ಅವನಿಗೆ ಕಾಡಿನಲ್ಲಿ ಅವರ ಪತ್ತೆಯಾದಾಗ, ಅವರು ಅವನು ಬಂದ ಕಾರಣ ಅರಿತು, ಸನಿಹದಲ್ಲಿರುವ ಗುಡಿಗೆ ತೆರಳಿದರೆ, ಅಲ್ಲಿ ಒಬ್ಬ ಗುರುವಿನ ಸಾನಿಧ್ಯ ದೊರಕುವುದೆಂದರು. ಅವರು ಹೇಳಿದಂತೆ, ಬ್ರಹ್ಮದಾಸ್ ಆ ಗುಡಿಗೆ ತೆರಳಿದಾಗ, ಅಲ್ಲಿ ಒಬ್ಬ ಸುಂದರ ಸ್ತ್ರೀಯನ್ನು ನೋಡಿದ. ಆ ಸ್ತ್ರೀಯಾದರೋ ಬ್ರಹ್ಮದಾಸ್‌ನ ಪರಿಚಯ ಮಾಡಿಕೊಳ್ಳದೆ ಅವನನ್ನು ನಿಂದಿಸತೊಡಗಿದಳು. ವಾಪಸ್ಸು ಓಡಿಬಂದ ಬ್ರಾಹ್ಮಣನನ್ನು ಕಂಡ ಆ ಫಕೀರರು, ಅವನನ್ನು ಸಮಾಧಾನಪಡಿಸಿ, ಆ ಸ್ತ್ರೀ 'ಮಾಯಾ' ಯಾಗಿದ್ದಾಳೆ ಮತ್ತು 'ನಿನ್ನ ಹೃದಯ ಅವಳಲ್ಲಿ ನೆಟ್ಟಿದ್ದರಿಂದ ನಿನಗೆ ಶಾಂತಿ, ನೆಮ್ಮದಿ ದೊರಕಲಿಲ್ಲ' ಎಂದು ಹೇಳಿ ಅವನನ್ನು ನಾನಕ್‌ನ ಬಳಿ ಹಿಂದಿರುಗಲು ಉಪದೇಶಿಸಿದರು. ನಾನಕ್‌ನ ಬಳಿ ಹಿಂದಿರುಗಿದ ಬ್ರಹ್ಮದಾಸ್‌ನನ್ನು ಕಂಡ ನಾನಕ್ ನುಡಿದ : 'ಅಧ್ಯಯನ ಜ್ಞಾನವಲ್ಲ. ಜ್ಞಾನ, ಅನುಭವದಿಂದ ದೊರಕುತ್ತದೆ. ಆಧ್ಯಾತ್ಮಿಕ ಶ್ರದ್ಧೆಯಿಂದ ಪಡೆದ ಅನುಭವ ನಿರ್ಲಿಪ್ತತೆ ಮತ್ತು ದೈನ್ಯತೆಯಿಂದ ಕೂಡಿದರೆ, ದೇವರ ಕೃಪೆಗೆ ಪಾತ್ರವಾಗುತ್ತದೆ.'

ನಾನಕ್‌ನ ಉಪದೇಶದಿಂದ ಬ್ರಹ್ಮದಾಸ್‌ನ ಅಹಂಕಾರ ನಾಶವಾಗಿ, ಆತ ತನ್ನ ಜೀವನವನ್ನು ನಿರ್ಲಿಪ್ತತೆ ಮತ್ತು ದೇವರ ಧ್ಯಾನದಿಂದ ಪರೋಪಕಾರ ಮಾಡಿ ಕೃತಾರ್ಥನಾದ. ೩೦ ೩೧

---

೨೯. P 119 History of Sikh people by G. Singh

೩೦. P 120 History of Sikh people by G. Singh

೩೧. P 163 The Sikh Religion by Macauliffe

ಶ್ರೀನಗರದಿಂದ ಗುರು ನಾನಕ್, ಅತ್ಯಂತ ಪ್ರಯಾಸಕರವಾದ ಟಿಬೆಟ್ ಮತ್ತು ಕೈಲಾಸ್ ಪರ್ವತಗಳ ಪ್ರವಾಸ ಮಾಡಿದ. ಕೈಲಾಸ ಪರ್ವತ ಪ್ರದೇಶದಲ್ಲಿ ವಾಸ ಮಾಡುತ್ತಿದ್ದ ಸಿದ್ಧರ ಸಂದರ್ಶನ ಮಾಡಿದ. ನಾನಕ್ ಸಿದ್ಧರೊಂದಿಗೆ ಜರುಗಿಸಿದ

ಸಂವಾದಗಳ ಕೋಶವನ್ನು ತನ್ನ 'ಸಿದ್ದಗೋಷ್ಠಿ'ಯಲ್ಲಿ ದಾಖಲಿಸಿರುತ್ತಾನೆ ಎಂದು ಇತಿಹಾಸಕಾರರ ಹೇಳಿಕೆಯಾಗಿದೆ. ಈ 'ಸಿದ್ಧ ಗೋಷ್ಠಿ' ನಾನಕ್ ಪ್ರತಿಪಾದಿಸಿದ ತತ್ವಸಾರವನ್ನೊಳಗೊಂಡಿದೆ ಎಂದು ಹೇಳಲಾಗಿದೆ. ಅದರ ಒಂದು ತುಣುಕು ಹೀಗಿದೆ:

ಸಿದ್ಧರ ಒಂದು ಪ್ರಶ್ನೆ "ಸಮುದ್ರದ ತರಹ ಈ ವಿಶ್ವವಾಗಿದೆ. ಅದನ್ನು ಈಜಿ ಪಾರಾಗಲು ಅಸಾಧ್ಯ. ಅದನ್ನು ದಾಟಿ ಸಾಗಲು ಪ್ರಯತ್ನಿಸುವವ ಮುಳುಗಿ ಹೋಗುವನು. ಅದು ನಿನಗೆ ಅರಿವಿದೆಯಲ್ಲವೆ?

ನಾನಕ್‌ನ ಉತ್ತರ ಹೀಗಿದೆ :

'ಕಮಲ ಪುಷ್ಪ ಅಥವ ಬಾತುಕೋಳಿಯ ತರಹ ನಾನು ನೀರಿನಲ್ಲಿ ವಾಸಿಸುತ್ತೇನೆ, ಆದ್ದರಿಂದ ನಾನು ಮುಳುಗುವುದಿಲ್ಲ. ಯಾರು ದೇವರ ಧ್ಯಾನದಲ್ಲಿ ಈ ಆಶಾ ಪ್ರಪಂಚದ ಮಧ್ಯದಲ್ಲಿ ಆಸೆಯನ್ನು ತ್ಯಜಿಸಿ ಜೀವಿಸುತ್ತಾರೋ ಅವರು ದುಃಖದಿಂದ ಪಾರಾಗುತ್ತಾರೆ. ಅಂತಹವರಿಗೆ ಆಗಮನ ಅಥವಾ ನಿರ್ಗಮನದ ಬವಣೆ ಇರುವುದಿಲ್ಲ.'

ಕೈಲಾಸ ಪರ್ವತದಿಂದ ಹಿಂದಿರುಗುವಾಗ, ಗುರು ನಾನಕ ಕಾಶ್ಮೀರದ ಪ್ರಸಿದ್ಧ ಮುಸ್ಲಿಮ್ ಯಾತ್ರಾಸ್ಥಳವಾದ 'ಹಸ್ಸನ್ ಅಬ್ದಾಲ್'ಗೆ ಭೇಟಿ ನೀಡಿದ ವಿವರಣೆ ನೀಡಿರುತ್ತಾರೆ ಕೆಲವು ಇತಿಹಾಸಕಾರರು. ಆದರೆ ಅಲ್ಲಿ ನಾನಕ್ ಜರುಗಿಸಿದ ಒಂದು ಪವಾಡದ ಬಗ್ಗೆ ಜಿಜ್ಞಾಸೆ ಇದ್ದುದರಿಂದ, ಅದಕ್ಕೆ ಹೆಚ್ಚು ಮಹತ್ವ ನೀಡಿರುವುದಿಲ್ಲ ಪ್ರಮುಖ ಇತಿಹಾಸಕಾರರು. ಯಾಕೆಂದರೆ, ಪವಾಡವನ್ನು ನಂಬದ ನಾನಕ್ ಅಲ್ಲಿ ಒಂದು ಬಂಡೆಯನ್ನು ಜರುಗಿಸಿ ನೀರನ್ನು ಬರಿಸಿದ್ದು ಕೇವಲ ಊಹಾಪೋಹವಾಗಿದೆ ಎಂದರು.

ನಾನಕ್‌ನ ಅಂತಿಮ ಯಾತ್ರೆ ಮುಸ್ಲಿಮ್‌ರಿಗೆ ಪವಿತ್ರ ಯಾತ್ರಾಸ್ಥಳವಾದ ಅರೇಬಿಯಾದ ಮೆಕ್ಕಾ ನಗರಕ್ಕೆ ಜರುಗಿಸಿದ್ದಾಗಿದೆ. ಈ ಯಾತ್ರೆಯಲ್ಲಿ ಅವನೊಂದಿಗೆ ಮರ್ದಾನಾ ಕೂಡ ಭಾಗವಹಿಸಿದ. ಕೇವಲ ಮುಸ್ಲಿಮರು ಮಾತ್ರ ಮೆಕ್ಕಾಗೆ ಯಾತ್ರಿಸಬಹುದಾಗಿದ್ದರಿಂದ ನಾನಕ್ ಒಬ್ಬ ಮುಸ್ಲಿಮ್ ಧರಿಸುವ ಉಡುಪು ಧರಿಸಿ ಯಾತ್ರಿಸಿದ. ಒಬ್ಬ ಮುಸ್ಲಿಮ್ ಬೈರಾಗಿಯ ತರಹ ಒಂದು ಕೈಯಲ್ಲಿ ಮಣ್ಣಿನ ಕುಡಿಕೆ, ಕಂಕಳಲ್ಲಿ ಪವಿತ್ರಗ್ರಂಥ ಮತ್ತು ಒಂದು ಪ್ರಾರ್ಥನೆ ಮಾಡಲು ಉಪಯೋಗಿಸುವ ಚಾಪೆಯನ್ನು ಹಿಡಿದು ಯಾತ್ರಿಸಿದ. ಕೆಲವು ಇತಿಹಾಸಕಾರರ ಪ್ರಕಾರ, ನಾನಕ್ ಮಿಥಾನ್‌ಕೋಟ್, ಸುಕ್ಕೂರ್, ರೋಹ್ರೀ, ಶಿಖಾರೀಪುರ, ಲಾರ್‌ಖಾನಾ, ಹೈದರಾಬಾದ್ (ಸಿಂಧ್), ಥಟ್ಟಾ. ಹೀಮಗ್ಲಾಜ್ ಮತ್ತು ಕರಾಚಿ, ಮುಖಾಂತರ ಪಯಣಿಸಿ, ಕರಾಚಿಯ ಬಂದರ್‌ನಲ್ಲಿ ಮೆಕ್ಕಾಗೆ ತೆರಳುವ ಒಂದು ನಾವೆಯಲ್ಲಿ ಪ್ರಯಾಣ ಬೆಳೆಸಿದ.

ದೂರದ ಪಯಣದಿಂದ ಬಳಲಿ ಬೆಂಡಾದ ನಾನಕ್, ಮೆಕ್ಕಾಗೆ ತಲುಪಿದ ಕೂಡಲೇ ಒಂದು ತಂಗುದಾಣದಲ್ಲಿ ತಂಗಿದ. ರಾತ್ರಿ ಮಲಗಿದಾಗ, ತನ್ನ ಪಾದಗಳನ್ನು ಪವಿತ್ರ ಕಾಬಾಗುಡಿಯ ದಿಕ್ಕಿನಲ್ಲಿರಿಸಿ ನಿದ್ರಿಸಿದ. ಅದನ್ನು ನೋಡಿದ ಒಬ್ಬ ಅರಬ್ಬೀ ಯಾತ್ರಿಕ, ಸಿಟ್ಟಿನಿಂದ ನಾನಕ್‌ನಿಗೆ ಒಂದು ಒದೆ ನೀಡಿ ಹೇಳಿದ :

'ದೇವರ ಗುಡಿಯ ದಿಕ್ಕಿನಲ್ಲಿ ನಿನ್ನ ಕಾಲನ್ನು ಇರಿಸಿದ್ದು ನಿನಗೆ ಅರಿವಾಗಲಿಲ್ಲವೆ?' ಆಗ ನಾನಕ್ ಉತ್ತರಿಸಿದ : 'ದೇವರ ಗುಡಿ ಇಲ್ಲದಿರುವ ದಿಕ್ಕಿಗೇ ನನ್ನ ಪಾದಗಳನ್ನು ಸರಿಸು.' ಅರಬ್ಬೀ, ನಾನಕ್‌ನ ಪಾದಗಳನ್ನು ಕಾಬಾ ಗುಡಿಯ ಎದುರು ದಿಕ್ಕಿಗೆ ಹಿಡಿದು ಎಳೆದ. ಆದರೆ ಅವನು ಕಾಲನ್ನು ಎಳೆದ ದಿಕ್ಕಿನಲ್ಲಿ ದೇವರ ದಿವ್ಯ ಪ್ರತಿಭೆ ಕಾಣಿಸಿದಾಗ, ಅವನು ಅತಿಪ್ರಭನಾದ. 'ಅಲ್ಲಾ ಅಲ್ಲಾ' ಎಂದು ಕೂಗಿದ. 'ಈತ ಒಬ್ಬ ಪವಾಡಪುರುಷ' ಎಂದು ಕೊಂಡಾಡಿದ.

ಹಿಂದೂಸ್ತಾನದಿಂದ ಒಬ್ಬ ಪವಾಡಪುರುಷ ಬಂದಿರುವ ಸುದ್ದಿ ಹರಡಿ, ಜನ ನಾನಕ್‌ನ ಬಳಿ ಜಮಾಯಿಸಿದರು. ಬಂದವರು ನಾನಕ್‌ನಿಗೆ ಹಲವಾರು ಪ್ರಶ್ನೆಗಳನ್ನು ಹಾಕಿದರು.

'ಹಿಂದೂ ಅಥವ ಮುಸಲ್ಮಾನ ಉತ್ತಮನೊ?' ಎಂಬ ಒಬ್ಬನ ಪ್ರಶ್ನೆಗೆ ನಾನಕ್ ಉತ್ತರಿಸಿದ.

'ಯಾರು ಒಳಿತನ್ನು ಮಾಡುವರೋ ದೇವರಲ್ಲಿ ಜೀವಿಸುವರೋ ಅವರೇ ಉತ್ತಮರು. ಯಾಕೆಂದರೆ, ಒಳಿತನ್ನು ಮಾಡದಿದ್ದರೆ, ಸಂಕಟಕ್ಕೆ ಈಡಾಗುವರು'

'ನೀವು ರಂಜಾನ್ ತಿಂಗಳಲ್ಲಿ ಉಪವಾಸ ವ್ರತ ಕೈಗೊಳ್ಳುವಿರಾ?' ಎಂಬ ಪ್ರಶ್ನೆಗೆ ನಾನಕ್ ಉತ್ತರಿಸಿದ :

'ನಾನು ದಿನವಹೀ ಉಪವಾಸ ಕೈಗೊಳ್ಳುತ್ತೇನೆ. ದೇವರನೊಬ್ಬನ ಮೇಲೆ ಏಕಾಗ್ರತೆ ಇಟ್ಟುಕೊಂಡು, ಮತ್ತೊಬ್ಬನ ಮೇಲೆ ಇರಿಸದೆ, ಉಪವಾಸ ವ್ರತ ಕೈಗೊಳ್ಳುತ್ತೇನೆ. ಕರುಣೆಯನ್ನು ಆರಾಧಿಸುತ್ತೇನೆ ಮತ್ತು ಅತಿಯಾಸೆಯನ್ನು ತ್ಯಜಿಸುತ್ತೇನೆ. ಈ ರೀತಿ ಉಪವಾಸ ಕೈಗೊಳ್ಳುವೆ.'

'ಪವಿತ್ರ ಖುರಾನ್‌ನನ್ನು ಪಠಿಸುವೆಯಾ?'

'ಪಠಿಸುವುದಿಲ್ಲ. ದೇವರ ಆದೇಶವನ್ನು ಪಾಲಿಸುವೆ. ಯಾರು ಓದುತ್ತಾರೋ, ಆದರೆ ಮನಸ್ಸನ್ನು ನಿಶ್ಚಲಗೊಳಿಸುವುದಿಲ್ಲವೋ, ಅವರ ಆತಂಕ ದೂರವಾಗುವುದಿಲ್ಲ. ಆದರೆ ಯಾರು ಪ್ರೀತಿಸುವರೋ, ಅವರು ಆರಾಧಿಸುವುದಲ್ಲದೆ ಬೇರೇನು ಮಾಡರು. ಪರಸ್ಪರ ಹೋರಾಡುವವರು ದೇವರನ್ನು ಆರಾಧಿಸಿದರೆ ಹೇಗೆ ತಾನೆ ದೇವರನ್ನು ಹೊಂದಲು ಸಾಧ್ಯ?'

ನಾನಕ್‌ನ ಮೆಕ್ಕಾ ಯಾತ್ರೆಯ ಬಗ್ಗೆ ಸಾಕಷ್ಟು ಭಿನ್ನಾಭಿಪ್ರಾಯಗಳು ಇತಿಹಾಸಕಾರರಲ್ಲಿ ಇದ್ದರೂ ಯಾವ ಮುಸ್ಲಿಮ್ ಚರಿತ್ರಕಾರರಾಗಲೀ, ಸಾಹಿತಿಗಳಾಗಲೀ, ನಾನಕ್‌ನ ಮೆಕ್ಕಾ ಯಾತ್ರೆ ಬಗ್ಗೆ ತಮ್ಮ ವಿರೋಧ ಅಥವಾ ಅಲ್ಲಗಳೆಯುವ ಪ್ರಯಾಸ ಮಾಡಿರುವುದು ಒಂದು ವಿಶೇಷವಾಗಿದೆ. ೩೨ ೩೩

ಮೆಕ್ಕಾಯಾತ್ರೆಯ ನಂತರ, ನಾನಕ್ ಮದೀನಾ ನಗರವನ್ನು ಮುಟ್ಟಿದ. ಅನಂತರ

ಪ್ರಸಿದ್ಧ ನಗರ ಬಾಗ್ದಾದ್‌ನ್ನು ತಲುಪಿದ. ಊರ ಹೊರಗೆ ದೇವರಿಗೆ ಪ್ರಾರ್ಥನೆ ಸಲ್ಲಿಸುವಾಗ ಉಚ್ಛ ಸ್ವರದಲ್ಲಿ 'ಕೋಟ್ಯಾಂತರ ಅಧೋಲೋಕ ಮತ್ತು ಬಾಹ್ಯಾಕಾಶ ಪ್ರದೇಶಗಳಿವೆ ಮತ್ತು ಯಾರೊಬ್ಬರೂ ಅದರ ಮಿತಿಯನ್ನು ಕಂಡುಹಿಡಿದಿಲ್ಲ. ದೇವರಿಗೊಬ್ಬನಿಗೆ ಅರಿತಿದೆ. ಅದರ ಇತಿಮಿತಿ ಎಷ್ಟು ಎಂಬುದು' ಎಂದು ಕೂಗಿದೆ.

ನಾನಕ್‌ನ ಪ್ರಾರ್ಥನಾ ವಿಧಿಯಾಚರಣೆ ಕಂಡು ಕೇಳಿದ ಮುಸ್ಲಿಮ್ ಮುಲ್ಲಾಗಳಿಗೆ ಕ್ರೋಧ ಉಂಟಾಯಿತು. ಇಸ್ಲಾಮ್‌ನಲ್ಲಿ ಏಳು ಸ್ವರ್ಗಗಳ ಅಸ್ತಿತ್ವದ ಬಗ್ಗೆ ಸಾರಿರುವುದನ್ನು ನಂಬಿರುವ ಅವರಿಗೆ ನಾನಕ್‌ನ ಉವಾಚ ಅವಾಚ್ಯವಾಗಿತ್ತು. ಅವರು ನಾನಕ್‌ನೊಂದಿಗೆ ಜಗಳಕ್ಕೆ ನಿಂತರು. ಆದರೆ ಪಟ್ಟು ಬಿಡದ ನಾನಕ್ ಪುನಃ ತನ್ನ ವಾದವನ್ನು ಮಂಡಿಸಿದ. ಯಾರೇ ವಿಶ್ವಾಸಿಗಳು ದೇವರ ಶಕ್ತಿ ಸಾಮರ್ಥ್ಯದ ಇತಿ ಮಿತಿಗಳನ್ನು ಇದುವರೆಗೂ ಕಂಡಿರುವುದಿಲ್ಲ ಮತ್ತು ಅವರ ಪ್ರಯತ್ನ ಕೂಡ ಅಂತಿಮವಾಗಿ ವ್ಯರ್ಥಗೊಳ್ಳುವುದು ಖಂಡಿತ ಎಂದು ಸಾರಿದ.

ನಾನಕ್ ಬಾಗ್ದಾದ್‌ನಲ್ಲಿ ತಂಗಿದ ಸ್ಥಳವನ್ನು ಇಂದಿಗೂ ಇತಿಹಾಸಕಾರರು ಗುರುತಿಸಿರುತ್ತಾರೆ. ಆ ಸ್ಥಳದಲ್ಲಿ ಒಂದು ಪೂಜಾವಿಗ್ರಹ ನಿರ್ಮಿಸಿ, ಅವನ ಹೆಸರನ್ನು ಅಮರವಾಗಿಸಿರುತ್ತಾರೆ. ಅದರ ಕುರುಹಾಗಿ, ಟರ್ಕಿ ಭಾಷೆಯಲ್ಲಿ ಕೆತ್ತಲಾದ ಒಂದು ಶಿಲಾಶಾಸನವೊಂದು ಇಂದಿಗೂ ಕಾಣ ಸಿಗುತ್ತದೆ ಎಂದಿದ್ದಾರೆ. ೩೪

ಮೆಕ್ಕಾ, ಮದೀನ ಮತ್ತು ಬಾಗ್ದಾದ್ ನಗರಗಳ ಯಾತ್ರೆ ಮುಗಿಸಿದನಂತರ, ನಾನಕ್ ಭಾರತಕ್ಕೆ ಹಿಂದಿರುಗಿದ. ಪಂಜಾಬ್ ಪ್ರಾಂತ್ಯದ ರಾವಿ ನದಿಯ ಬಲದಂಡೆಯ ಮೇಲೆ ಇರುವ ಕಾರ್ತಾರ್‌ಪುರದಲ್ಲಿ ನೆಲೆಸಿದ. ಅವನು ತನ್ನ ಯಾತ್ರಿಕರ ಉಡುಪನ್ನು ಧರಿಸಿದ. ಈಗಾಗಲೇ ಕಾರ್ತಾರ್‌ಪುರದಲ್ಲಿ ನೆಲೆಸಿದ್ದ ಅವನ ಹೆಂಡತಿ ಮತ್ತು ಮಗ ಲಕ್ಷ್ಮೀದಾಸ್‌ನೊಂದಿಗೆ ರೈತಾಪಿ ಜೀವನ ಸಾಗಿಸುತ್ತಿದ್ದಳು. ನಾನಕ್‌ನ ಇನ್ನೊಬ್ಬ ಮಗ, ಶ್ರೀಚಂದ್ ಎಂಬಾತ ತಂದೆಯಂತೆ ಸಂನ್ಯಾಸಿ ಜೀವನ ಸಾಗಿಸಿದ್ದ.

ನಾನಕ್ ಹಿಂದಿರುಗಿದ ಸುದ್ದಿ ಅರಿತ ಜನರು ನಾನಾ ಕಡೆಯಿಂದ ಕಾರ್ತಾರ್‌ಪುರಕ್ಕೆ ಧಾವಿಸಿದರು. ನಾನಕ್‌ನ ದರ್ಶನ ಪಡೆದು ಆಶೀರ್ವಾದ ಪಡೆದರು.

ಇದೇ ಸಮಯದಲ್ಲಿ, ನಾನಕ್‌ನ ಪ್ರೀತಿಯ ನಿಷ್ಠಾವಂತ ಮುಸ್ಲಿಮ್ ಶಿಷ್ಯ

---

೩೨. P 124 History of Sikh people by G. Singh

೩೩. P 175 The Sikh Religion by Macauliffe

೩೪. P 12 History of Sikh people by G. Singh

ಮರ್ದಾನಾನ ಮರಣ ಉಂಟಾಯಿತು. (ಅವನ ಮರಣದ ತಾರೀಖಾಗಲಿ ಇಸವಿಯಾಗಲಿ ಇತಿಹಾಸಕಾರರು ನಮೂದಿಸಿಲ್ಲ.) ೩೫

ನಾನಕ್, ಮರ್ದಾನಾನ ಮಗನನ್ನ ತನ್ನ ಬಳಿ ಕರೆದು ತನ್ನ ಬಳಗಕ್ಕೆ ಸೇರಿಸಿಕೊಂಡ. ಅವನು ಮರ್ದಾನಾನಂತೆ, ನಾನಕ್ ಹಾಡುಗಾರಿಕೆಯಲ್ಲಿ ಡೋಲಕ್ ಬಾರಿಸುವನಾಗಿ ಹೊರಹೊಮ್ಮಿದ.

ಇದೇ ಸಮಯದಲ್ಲಿ, ಭಾಯಿ ಲೆಹ್ನಾ ಎಂಬಾತ ನಾನಕ್‌ನ ಅತ್ಯಂತ ನಿಕಟ, ನಿಷ್ಠಾವಂತ ಶಿಷ್ಯನಾಗಿ ಹೊರಹೊಮ್ಮಿದ. ಲೆಹ್ನಾ, ಪ್ರಸಿದ್ಧಯಾತ್ರಾಸ್ಥಳವಾದ ವೈಷ್ಣೋದೇವಿಯ ಗುಡಿಗೆ ಪ್ರವಾಸದಲ್ಲಿದ್ದಾಗ, ಸಿಖ್ ಭಕ್ತನೊಬ್ಬ ಆತನಿಗೆ ನಾನಕ್‌ನ್ನು ಭೇಟಿಯಾಗುವಂತೆ ಅನುರೋಧಿಸಿದರ ಪ್ರಯುಕ್ತ, ಒಂದು ರಾತ್ರಿ ಕಾರ್ತಾರ್‌ಪುರದಲ್ಲಿ ತಂಗಿ, ನಾನಕ್‌ನ ದರ್ಶನ ಪಡೆದ. ಆದರೆ ನಾನಕ್‌ನ ಪ್ರವಚನ, ನಡೆನುಡಿ ಆಡಳಿತ ಕಂಡ ಲೆಹ್ನಾ ಅಲ್ಲೇ ತಂಗಿದ, ಸಂಪೂರ್ಣವಾಗಿ ನಾನಕ್‌ನ ಭಕ್ತನಾಗಿ ಪರಿವರ್ತನೆಗೊಂಡ. ಇದು ಜರುಗಿದ್ದು ಕ್ರಿ ಶ ೧೫೩೨ ರಲ್ಲಿ ಎಂಬುದಾಗಿ ಇತಿಹಾಸಕಾರರ ಹೇಳಿಕೆ. ೩೬

ನಾನಕ್ ತನ್ನ ಶಿಷ್ಯರ ಸ್ವಾಮಿನಿಷ್ಠೆಯನ್ನು ಅವನ ತತ್ವವಿಚಾರಗಳನ್ನು ಸಂಪೂರ್ಣವಾಗಿ ಒಪ್ಪಿ ಅನುಸರಿಸುವ ಅವರ ನಂಬಿಕೆಯನ್ನು ಪರೀಕ್ಷಿಸಲು ಹಲವಾರು ಪ್ರಯೋಗಗಳನ್ನು ಮಾಡಿದ್ದನ್ನು ಇತಿಹಾಸಕಾರರು ನಮೂದಿಸಿರುತ್ತಾರೆ. ಅವುಗಳಲ್ಲಿ ಈ ಕತೆ ಕುತೂಹಲಕರವಾಗಿದೆ.

ಒಮ್ಮೆ ನಾನಕ್ ಒಬ್ಬ ಕಾಡುಮನುಷ್ಯನ ತರಹ ಪೋಶಾಕು ಧರಿಸಿ, ಕೈಯಲ್ಲಿ ಒಂದು ಚಾಕು ಹಿಡಿದು, ಬೇಟೆ ನಾಯಿಗಳೊಂದಿಗೆ, ಕಾಡಿನೊಳಗೆ ನುಸುಳಿದ. ಅವನ ಅವತಾರ ನೋಡಿದ ಅನೇಕ ಶಿಷ್ಯಂದಿರು ಭಯಭೀತರಾಗಿ ಓಡಿದರು. ಇನ್ನು ಕೆಲವರು ಅವನನ್ನು ಅನುಸರಿಸಿದರೂ, ದಾರಿಯಲ್ಲಿ ಚೆಲ್ಲಿದ ತಾಮ್ರದ ನಾಣ್ಯಗಳನ್ನು ನೋಡಿ, ಅವನ್ನು ಆರಿಸಿಕೊಂಡು ಹಿಂದಿರುಗಿದರು. ಇನ್ನು ಕೆಲವರು ನಾನಕ್‌ನನ್ನು ಹಿಂಬಾಲಿಸಿದರು. ಆದರೆ ಅವರಿಗೆ ದಾರಿಯಲ್ಲಿ ಬೆಳ್ಳಿ ನಾಣ್ಯಗಳು ಕಂಡ ಕ್ಷಣ, ಅವನ್ನು ಆರಿಸಿ ಊರಿಗೆ ವಾಪಸ್ಸಾದರು. ಅಂತಿಮವಾಗಿ ಲೆಹ್ನಾ ಮತ್ತು ಇತರ ಇಬ್ಬರು ಸಿಖ್ಖರು ಉಳಿದರು. ಅವರು ನಾನಕ್‌ನನ್ನು ಹಿಂಬಾಲಿಸಿದಾಗ, ಕಾಡಿನ ಮಧ್ಯ ಒಂದು ಬೆಂಕಿ ಉಗುಳುವ ಸ್ಥಳ ಕಾಣಿಸಿತು. ಹತ್ತಿರ ಬಂದಾಗ ಅವರಿಗೆ ಅರಿವಾಯಿತು ಅದು ಒಂದು ಚಿತಾಗಾರವೆಂದು. ಅದರಲ್ಲಿ ಒಂದು ಶವ ಬೆಂಕಿಯಲ್ಲಿ ಹತ್ತಿ ಉರಿಯುತ್ತಿತ್ತು. ನಾನಕ್ ಚಿತೆಯ ಬಳಿ ನಿಂತು ಕೂಗುತ್ತಿದ್ದ ! 'ಯಾರು ನನ್ನೊಂದಿಗೆ ಇರಲು ಇಷ್ಟಪಡುವರೋ ಅವರು ಈ ಶವವನ್ನು ಕಿತ್ತು ತಿನ್ನಬೇಕು!' ಅವನ ಬೊಬ್ಬೆ ಹೊಡೆಯುವಿಕೆ, ಉರಿಯುತ್ತಿರುವ ಶವದ ದೃಶ್ಯ ಭಯಾನಕವಾಗಿತ್ತು.

---

೩೫. P 182 The Sikh Religion - Macauliffe 'The body was thrown into river Ravi and caused sohila to be read and 'Kara parshad' distributed'

೩೬. P 130 History of Sikh People by G.Singh

ಆ ಭಯಾನಕ ದೃಶ್ಯ ಕಂಡ ಇಬ್ಬರು ಸಂಗಡಿಗರು ಕಾಲಿಗೆ ಬುದ್ಧಿ ಹೇಳಿದರು. ಆದರೆ ಸ್ವಲ್ಪವೂ ವಿಚಲಿತಗೊಳ್ಳದೆ ನಿಂತಿದ್ದ ಲೆಹ್ನಾ 'ನಾನು ಗುರುವಿನ ಆಜ್ಞೆಯನ್ನು ಪಾಲಿಸಿದೆನು" ಎಂದು ಹೇಳಿ ಶವವನ್ನು ತಿನ್ನಲು ಮುಂದಾದ. ಗುರು ನಾನಕ್ ಆಗ ಅವನನ್ನು ತಡೆದು ಹೇಳಿದ: 'ಸಾಕು. ಎಷ್ಟು ಮಂದಿ ನನ್ನ ಹಾದಿಯನ್ನು ತುಳಿಯುವರು ಎಂಬುದು ಈಗ ನನಗೆ ಮನವರಿಕೆಯಾಗಿದೆ.'

ಲೆಹ್ನಾನನ್ನು ಬಹಳವಾಗಿ ಪರೀಕ್ಷಿಸಿಯಾದ ಮೇಲೆ ನಾನಕ್, ಅವನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಿದ. ಅವನ ಸ್ವಂತ ಮಕ್ಕಳು ಅವಿಧೇಯರಾಗಿ, ಅವನ ದಾರಿ ತುಳಿಯದೆ, ತಮ್ಮದೇ ಹಾದಿ ಹುಡುಕಿ ಹೋಗಿದ್ದರಿಂದ ಮತ್ತು ಅವನ ಇತರ ಶಿಷ್ಯಂದಿರು ಸಂಪೂರ್ಣವಾಗಿ ನಾನಕ್‌ನನ್ನು ಹಿಂಬಾಲಿಸದೆ ಇದ್ದ ಕಾರಣ, ನಾನಕ್ ಲೆಹ್ನಾನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಲು ನಿರ್ಧರಿಸಿ, ಭಾಯಿ ಬುಡ್ಡಾನನ್ನು ಕರೆದು, ಲೆಹ್ನಾನನ್ನು ಕೂರಿಸಿ, ಅವನ ಹಣೆಗೆ ಕುಂಕುಮದ ತಿಲಕವಿಟ್ಟು, ಐದು ಕಾಸುಗಳನ್ನು ಮತ್ತು ಒಂದು ತೆಂಗಿನಕಾಯಿಯನ್ನು ಅವನ ಮುಂದೆ ಇರಿಸಿ, ತಾನು ಹುಟ್ಟು ಹಾಕಿದ ಪಂಥದ ಗದ್ದಗೆಯನ್ನು ಅವನಿಗೆ ಬಿಟ್ಟುಕೊಟ್ಟ. ಕ್ರಮೇಣ ಸಿಖ್ಖರ ಗುರುಗಳು ಗದ್ದುಗೆಗೆ ಏರಲು ಈ ಪದ್ಧತಿಯನ್ನು ಜಾರಿಗೆ ತರಲಾಯಿತು.

ಲೆಹ್ನಾನನ್ನು ಪಂಥದ ಮುಖ್ಯಸ್ಥನನ್ನಾಗಿ ನೇಮಿಸಿದ ನಾನಕ್ ತನ್ನ ಪತ್ನಿಯ ವಿರೋಧ ಎದುರಿಸಬೇಕಾಯಿತು. ಅವಳು ತನ್ನ ಇಬ್ಬರು ಮಕ್ಕಳನ್ನು ಅವನ ಮುಂದೆ ಇರಿಸಿ, 'ನನ್ನ ಮತ್ತು ಇವರ ಗತಿ ಏನು?' ಎಂದು ಕೇಳಿದಳು. ಆಗ ನಾನಕ್ ಉತ್ತರಿಸಿದ: 'ದೇವರಿಗೆ ಶರಣಾಗು. ದೈವೇಚ್ಛೆಯಂತೆ ನಾನು ಮಾಡಿದ್ದೇನೆ'

ಇದೇ ಸಮಯದಲ್ಲಿ ಗುರು ನಾನಕ್ ತನ್ನ ಪ್ರಸಿದ್ಧ ಗಾನವನ್ನು ಹಾಡಿ ಜನಮನ ತಣಿಸಿದ. ಆ ಪದದಲ್ಲಿ ದೈವೇಚ್ಛೆಯಂತೆ ಆತ್ಮ ದೇಹವನ್ನು ತ್ಯಜಿಸುತ್ತದೆ. ಆಗ ಸ್ನೇಹಿತರು ಬಂಧುಗಳು, ಬದುಕಿ ಉಳಿದವರು, ಅಳಿದವನ ಬಗ್ಗೆ ಶೋಕವನ್ನು ಆಚರಿಸುವರು. ಆದರೆ ಈ ಲೋಕ ಕ್ಷಣಿಕ, ಈ ಜೀವನ ಕ್ಷಣಿಕ, ನಾವು ಕೇವಲ ಅತಿಥಿಗಳಂತೆ ಬಾಳಿ ಬದುಕಿ ಕಣ್ಮರೆಯಾಗುವಂತಹುದು; ಹಾಗೆ ಜೀವ ತ್ಯಜಿಸುವವ ಪರಲೋಕದಲ್ಲಿ ಸದ್ಗುಣಗಳನ್ನು ಸತ್ಕಾರ್ಯಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವರಷ್ಟೆ. ಪುನಃ ನಾನಕ್, ಅದೇ ಸಮಯದಲ್ಲಿ 'ಸೋಹಿಲಾ' (ದೇವರ ಆರಾಧನೆ) ಎಂಬ ಪದವನ್ನು ತನ್ನ ಶಿಷ್ಯರಿಗೆ ಹಾಡಿ ತೋರಿಸಿ, ಅದನ್ನು ಅವರು ರಾತ್ರಿ ನಿದ್ರಿಸುವ ಮುನ್ನ ಹಾಡುವ ಅಭ್ಯಾಸ ಮಾಡುವಂತೆ ಆದೇಶಿಸಿದನು.

'ಸಮಚಿತ್ತಗ್ರಹದಲ್ಲಿ ಕುಳಿತ ದೇವನ ಗುಣಗಾನ ಮಾಡಿ ಹಾಡು,
ನನ್ನ ಕೆಚ್ಚೆದೆಯ ದೇವರ ಹಾಡು ಮನಸ್ಸನ್ನು
ಗೂಡಿಗೆ ತರುತ್ತದೆ, ಹೌದು.
ಯಾರ ಕೊಡುಗೆಯ ಬೆಲೆ ಕಟ್ಟಲಾರದೋ,

ಹೇಗೆ ತಾನೇ ಅವನ ಬೆಲೆ ಕಟ್ಟಲಾದೀತು, ನೀಡುವದಾತನಾಗಿರುವಾಗ?
ವರ್ಷ, ತಿಂಗಳ, ಘಂಟೆಗಳ ಲಗ್ನ ನಿಶ್ಚಯವಾಗಿದೆ.
ಹೊಸ್ತಿಲ ಮೇಲೆ ಎಣ್ಣೆ ಸುರಿಸಿರಿ ನನ್ನ ಸಂಗಾತಿಗಳೆ,
ನನ್ನ ಪ್ರೇಮಿಯನ್ನು ಭೇಟಿ ಮಾಡಲು ನನಗೆ ಹಾರೈಸಿರಿ.

ಪ್ರತಿಯೊಬ್ಬರ ಮನೆಗೆ, ಈ ದಿನ ಅಥವಾ ನಾಳೆ ದೂರದಿಂದ ಕರೆ ಬರುವುದು
ನಿಮ್ಮ ದೇವರನ್ನು ಹೃದಯದಲ್ಲಿ ತೆರೆದಿಡಿ. ಯಾಕೆಂದರೆ, ಆ ದಿನ ಎಲ್ಲರಿಗೂ
ಬಂದೇ ಬರುವುದು'

ನಾನಕ್, ತನ್ನ ಈ ಪ್ರಸಿದ್ಧವಾದ ಬೀಳ್ಕೊಡಿಗೆಯ ಹಾಡನ್ನು ಹಾಡಿ ತಾನು ನೇಮಿಸಿದ ಉತ್ತರಾಧಿಕಾರಿಯಾದ ಲೆಹ್ನಾ (ಅವನಿಗೆ ಗುರು ಅಂಗದ್ ಎಂದು ಕರೆದರು) ನಿಗೆ ನಮಸ್ಕರಿಸಿ, ಅವನಿಗೆ 'ಪದಗಳ ಗ್ರಂಥ' ವನ್ನು ಅರ್ಪಿಸಿ, ಸಮಾಧಿಸ್ಥಿತಿಗೆ ತೆರಳಿದ. ಅವನ ಮರಣ ಸೋಮವಾರ, ಸೆಪ್ಟೆಂಬರ್ ತಿಂಗಳು, ಕ್ರಿ.ಶ. ೧೫೩೯ರಲ್ಲಿ ಆಯಿತು ಎಂದಿದ್ದಾರೆ ಇತಿಹಾಸಕಾರರು. ೩೭

ನಾನಕ್ ಜೀವಿಸಿರುವಾಗಲೇ, ಹಿಂದೂ ಮುಸ್ಲಿಮರು ಅವನ ಶಿಷ್ಯರಾಗಿದ್ದು, ಹಿಂದೂಗಳು ಅವನನ್ನ ಸಂತನೆಂದು, ಮುಸ್ಲಿಮರು ಅವನನ್ನು ತಮ್ಮ 'ಖಲಂದರ್' ಎಂದು ಕರೆದುಕೊಂಡು, ಅವನ ಹಿಂಬಾಲಕರಾಗಿದ್ದರು. ಆದರೆ ಅವನು ಮರಣಿಸಿದ ನಂತರ ಅವನ ಶವಸಂಸ್ಕಾರವನ್ನು ತಮ್ಮ ತಮ್ಮ ಪದ್ಧತಿಯಂತೆ ಜರುಗಿಸಲು ಜಂಜಾಟ ಶುರುವಾದಾಗ, ಅವರ ಮುಖಂಡರು ಒಂದು ಒಪ್ಪಂದಕ್ಕೆ ಬಂದರು. ಶವದ ಮೇಲೆ ರಾತ್ರಿ ಹೂವಿನ ಹಾರವಿರಿಸಿ, ಬೆಳಗ್ಗೆ ನೋಡಿದಾಗ, ಯಾರ ಹಾರ ಬಾಡಿರುವುದಿಲ್ಲವೋ ಅವರಿಗೆ ಅವರ ಧರ್ಮಾನುಸಾರ ಸಂಸ್ಕಾರ ಮಾಡಬೇಕೆಂದು ಹೇಳಿದರು. ಅದೇ ರೀತಿ ಮಾಡಿದಾಗ, ಇಬ್ಬರೂ ಇರಿಸಿದ ಹೂಹಾರಗಳು ಬಾಡಿರಲಿಲ್ಲ ! ಆಗ ಶವದ ಮೇಲೆ ಹೊದ್ದಿಸಿದ ಬಟ್ಟೆಯನ್ನು ಸರಿಸಿದಾಗ, ದೇಹ ಕಾಣೆಯಾಗಿದ್ದು ಅವರಿಗೆ ಆಶ್ಚರ್ಯವಾಗಿತ್ತು. ಅವರು ಬಟ್ಟೆಯನ್ನು ಸಮನಾಗಿ ಹಂಚಿಕೊಂಡು, ಅರ್ಧ ಸುಟ್ಟು, ಇನ್ನು ಅರ್ಧವನ್ನು ಹೂಳಿ ತೃಪ್ತಿಪಟ್ಟುಕೊಂಡರು. ೩೮

ಹೀಗೆ ಅಂತ್ಯವಾಯಿತು ಸಿಖ್ ಮತದ ಸ್ಥಾಪಕ ನಾನಕ್‌ನ ಸಾರ್ಥಕ ಜೀವನ.

---

೩೭. P 132 History of Sikh people by G.Singh

೩೮. P 570 The Delhi Sultanate, Pub. Bharatiya vidya Bhavan

ಅಧ್ಯಾಯ ೩

ನಾನಕ್‌ನ ಧರ್ಮವಿಚಾರದಲ್ಲಿ, ದೇವರ ಸ್ಥಾನದಲ್ಲಿ, ಅವನ ಹೆಸರಿನಲ್ಲಿ, ಅವನ ನಿರಂತರ ಸೇವೆಯಲ್ಲಿ ಜೀವನಾನುಭವ ಗಳಿಸಿ ತನ್ನ ಜೀವನವನ್ನು ಸಾರ್ಥಕಗೊಳಿಸುವುದೇ ನಿಜವಾದ ಧರ್ಮ ಎಂದಾಗಿದೆ. ಅವನ ಧರ್ಮದಲ್ಲಿ ನಿಶ್ಚಿತವಾದ ಆಚಾರ, ನಂಬಿಕೆ ಅಥವಾ ಶಾಸ್ತ್ರಗಳಿರುವುದಿಲ್ಲ ಎಂದಿದ್ದಾರೆ ವಿದ್ವಾಂಸರು.

ಧರ್ಮ ಅಥವಾ ಮತವನ್ನು ಅರ್ಥೈಸುವುದಾದರೆ, ದೇವರೊಂದಿಗೆ ಮನುಷ್ಯನ ಸಂಬಂಧವನ್ನು ಏರ್ಪಡಿಸುವುದು ಅಥವಾ ಪ್ರಯತ್ನಿಸುವುದು ಅಥವ ಈಗಾಗಲೇ ಏರ್ಪಟ್ಟಿರುವುದರ ಬಗ್ಗೆ ಅರಿಯುವುದೇ ಆಗಿದೆ. ನಾನಕ್‌ನ ಧರ್ಮದಲ್ಲಿ, ದೇವರನ್ನು ನಂಬುವ, ಅವನು ಅಸ್ಥಿತ್ವದಲ್ಲಿರುವ ಯಾವುದೇ ಧರ್ಮದ ದೇವರನ್ನು ಅಥವಾ ಅವನನ್ನು ಅಂಗೀಕರಿಸಲ್ಪಟ್ಟ ಹೆಸರನ್ನು ತನ್ನ ದೇವರೆಂದು ಅಂಗೀಕರಿಸಲಿಲ್ಲ. ಅದೇ ರೀತಿ, ಒಬ್ಬ ಗುರುವನ್ನು ತನ್ನ ಗುರುವೆಂದು ಅಂಗೀಕರಿಸಲಿಲ್ಲ. ಆದರೆ ನಾನಕ್ ತನ್ನ ಪದಗಳಲ್ಲಿ, ಗೋಷ್ಠಿಗಳಲ್ಲಿ 'ನಾಮ'ದ ಪದವನ್ನು ಬಳಕೆಗೆ ತಂದು ದೇವರ ಹೆಸರು ಅಥವಾ 'ನಾಮ'ವನ್ನು ಜಪಿಸಿ, ಮೋಕ್ಷ ಸಾಧಿಸಬಹುದೆಂದನು. ನಾಮಜಪ ಮಾತ್ರ ಸಲ್ಲದು, ಪ್ರೇಮದ ದಾರಿಯಲ್ಲಿ ಒಲಿಸಿಕೊಂಡು ಮೋಕ್ಷ ಪಡೆಯಬಹುದೆಂದನು.

ನಾಥ ಸಂಪ್ರದಾಯದವರು ಅಲಖ (ಅಲಕ್ಷ) ನಾಮದ ಜಪ ಮಾಡಿ ದೇವರ ಧ್ಯಾನ ಮಾಡುವ ಅಭ್ಯಾಸವಿರಿಸಿಕೊಂಡಿರುತ್ತಾರೆ. ನಾನಕ್‌ನ ಈ ಮಂತ್ರ ಅಥವಾ ಪದ ನಾಥ ಸಂಪ್ರದಾಯದವರ ಮಂತ್ರ ಅಥವಾ ಜಪದ ರೀತಿಯಲ್ಲಿಯೋ ದೇವರ ಧ್ಯಾನ ಮಾಡುವ ಅಭ್ಯಾಸ ಇರಿಸಿಕೊಳ್ಳುವದಲ್ಲದೆ, ಅವನು ಪ್ರತಿಪಾದಿಸುವ ತತ್ವದ ಸಾರಾಂಶವೂ ಆಗಿದೆ.

'ಏಕ ಓಂ ಸತ್ತನಾಮ ಕರ್ತಾಪುರುಖ ।
ನಿರ್ಭವ ನಿರ್ಭಯ ನಿರಂಕಾರ ॥
ಅಕಾಲ ಮೂರುತಿ ಆದಿ ಸತ್ತ, ಜುಗಾದಿ ಸತ್ತ
ಹೈ ಭೀ ಸತ್ತ, ನಾನಕ ಹೋಗೋ ಸತ್ತ ॥

ನಾನಕ್‌ನ ಪ್ರಕಾರ, ದೇವರ ಆಜ್ಞೆ ಅಥವಾ 'ಹುಕುಂ' ಎಂಬುದು ಇದೆ. ದೇವರ ಆಜ್ಞೆಯ ಪ್ರಕಾರ ಸಕಲ ಪ್ರಕೃತಿ ತನ್ನ ಕಾರ್ಯ ಎಸಗುತ್ತಿದೆ. ನಾವು ಅದಕ್ಕಾಗಿ ಹೆದರಬೇಕಾಗಿಲ್ಲ. ಆದರೆ ಹೆದರಬೇಕಾಗಿದ್ದುದು ನಮ್ಮ ಅಂತರಂಗ ಅಹಂಕಾರಕ್ಕೆ. ಯಾಕೆಂದರೆ, ಈ 'ಅಹಂ' ಸತತವಾಗಿ ದೇವರ ಆಜ್ಞೆ ಅಥವಾ ಪ್ರಕೃತಿ ನಿಯಮಗಳನ್ನು ಉಲ್ಲಂಘಿಸಿ, "ನೈತಿಕ ನಿಯಮಾವಳಿ'ಗಳನ್ನು ಬದಿಗೊತ್ತಿ ನಮ್ಮನ್ನು ಪಾಪಕೂಪಕ್ಕೆ ಎಳೆಯುತ್ತದೆ. ಯಾರು ತನ್ನ 'ಅಹಂ'ನ್ನು ಅದುಮಿ ಹಿಡಿದು, ದೈವಾಜ್ಞೆಗೆ

ತಲೆಬಾಗುತ್ತಾನೋ, ಅವನು ಸಿದ್ಧಿಸುತ್ತಾನೆ. ಈ ಕಾರ್ಯದಲ್ಲಿ ಸಫಲಗೊಂಡ ಯಾರು, ಯಾವಾಗಲೂ ತನ್ನ ಪವಿತ್ರ ಸಂಗಾತಿ, ಸಾಧು ಸಂತರೊಂದಿಗೆ ಸಹವಾಸ ಮಾಡಿ, ಗುರುವಿನ ನಾಮ ಜಪಿಸಿ ಅಥವಾ 'ಸತ್ಯ'ವನ್ನು ಪ್ರತಿಪಾದಿಸಿ, ಹಾಡಿ, ನಲಿದು ಜೀವನ ಸಾಗಿಸುವನೋ ಅಂತಹವನು ಸಾಕ್ಷಾತ್ಕಾರ ಗಳಿಸುವನು. ೧

ಪ್ರಸಿದ್ಧ ಸಾಹಿತಿ ಜಾರ್ಜ್ ಥಾಮ್ಸನ್‌ನ ಪ್ರಕಾರ, ಧರ್ಮ ಅಥವಾ ಮತ ಎಂದರೆ, 'ಪ್ರಪಂಚವು ಪ್ರಕೃತಿಗಿಂತ ಮಿಗಿಲಾದ ಒಂದು ಶಕ್ತಿಯ ಅಥವಾ ನಿರ್ವಾಹಕನ ನಿಯಂತ್ರಣಕ್ಕೆ ಒಳಪಟ್ಟಿದೆ. ಆ ಶಕ್ತಿಯು ಅಥವಾ ನಿರ್ವಾಹಕನ ಮೇಲೆ ಪ್ರಾರ್ಥನೆಯಿಂದಲೂ, ಯಜ್ಞದಂತಹ ಕ್ರಿಯೆಯಿಂದಲೂ ಪ್ರಭಾವ ಬೀರಲು ಸಾಧ್ಯವಿದೆ. ಅದನ್ನು ಜ್ಞಾನದಿಂದಲ್ಲ, ನಂಬಿಕೆಯಿಂದ ಮಾತ್ರ ಅರಿಯಲು ಸಾಧ್ಯ; ಈ ಗ್ರಹಿಕೆಗಳ ತಳಹದಿಯ ಮೇಲೆ ಆಧಾರ ಹೊಂದಿರುವ ಕ್ರಿಯೆಗಳ ಮತ್ತು ನಂಬಿಕೆಗಳ ಒಂದು ಪದ್ಧತಿಯೇ ಧರ್ಮ ಅಥವಾ ಮತ. .'

ಹಿಂದೂಗಳು ನಂಬುವ 'ಕರ್ಮ'ವನ್ನು, ಆತ್ಮಗಳ ನಿರಂತರ ವಲಸೆ, ಹುಟ್ಟು ಸಾವುಗಳ ನಿರಂತರ ಘಟನಾವಳಿಗಳನ್ನು ನಂಬಿದ ನಾನಕ್. ಆದರೆ ಹಿಂದೂಗಳು ನಂಬುವ ತ್ರಿಮೂರ್ತಿಗಳು, ಅವತಾರಗಳು, ಯೋಗಗಳು, ವೈರಾಗ್ಯ, ಮೂಢನಂಬಿಕೆಗಳು, ಧರ್ಮಾಚರಣೆಗಳು, ವಿಧಿಯಾಚರಣೆಗಳು ಇತ್ಯಾದಿಗಳನ್ನು ನಾನಕ್ ತಿರಸ್ಕರಿಸಿದ.

ಹಿಂದೂ ಧರ್ಮದ ಕರ್ಮ ತತ್ತ್ವವಾದ ನಾವು ಮಾಡುವ ಕರ್ಮಫಲವನ್ನು ನಮ್ಮ ಮುಂದಿನ ಜನ್ಮಗಳಲ್ಲಿ ಅನುಭವಿಸುವಂತಾಗಿ, ಅಂತಿಮವಾಗಿ ನಾವು ಮಾಡಿದ ಪುಣ್ಯಕಾರ್ಯದ ಫಲವಾಗಿ ಹುಟ್ಟು ಸಾವುಗಳ ಬಂಧನದಿಂದ ಬಿಡುಗಡೆ, ಮುಕ್ತಿ ಅಥವಾ ಮೋಕ್ಷ ಪಡೆಯುವಂತರಾಗುತ್ತೇವೆ ಎಂಬ ತತ್ತ್ವವನ್ನು ನಂಬಿದ ನಾನಕ್, ಮನುಷ್ಯನ ಪುನರ್ಜನ್ಮ ತಾನು ಮಾಡಿದ ಪಾಪಕರ್ಮದಿಂದ ಉಂಟಾಗಿರದೆ, ಅದು ಅವನು ಮುಕ್ತಿ ಪಡೆಯಲು ಒಂದು ಮೆಟ್ಟಿಲಾಗಿ, ಕ್ರಮೇಣ ಅದನ್ನೇರಿ ಉನ್ನತ ಶಿಖರವನ್ನೇರಿ, ದೈವತ್ವವನ್ನು ಪಡೆಯುವುದಾಗಿದೆ ಎಂದು ಸಾರಿದ. ಆ ಪದವಿ ಅಥವಾ ಸ್ಥಾನವನ್ನು, ನಾನಕ್, 'ಗುರುಮುಖ್' ಅಥವಾ ದೇವಮಾನವನೆಂದು ಕರೆದ. ಆಗ ತನ್ನ 'ಅಹಂ'ನಲ್ಲಿ ಮಾನವ ನರಕ ಅಥವಾ ಸ್ವರ್ಗಗಳನ್ನು ಕಂಡುಕೊಳ್ಳುತ್ತಾನೆ.

'ಪಾಪ ಮಾಡಿ ಮಾನವ ಜನ್ಮ ಪಡೆಯುವಂತಹದಾಗುವುದಿಲ್ಲ. ಮಾನವ ದೇಹದ ಮೂಲಕ ದೈವತ್ವ ಪಡೆಯುವ ಉದ್ದೇಶ ದೇವರಿಗಿದೆ. ಆದ್ದರಿಂದಲೇ ಅವನ ನಾಮವನ್ನು ನಮ್ಮ ದೇಹದಲ್ಲಿರಿಸಿ, ಅದರ ಉಪಯೋಗದಿಂದಲೇ ದೇವರ ಆಜ್ಞೆ, ನ್ಯಾಯಗಳನ್ನು ಪ್ರಕಟಿಸಿದ್ದಾನೆ.'

---

೧. P 297 A Cultural History of India by Dr. A.L. Basham (ed) Sikhism by Hew McLeod

ಈ ಮಾನವ ದೇಹ ಪಾಪದ ಕೋಶವಾಗಿರದೆ, ಅದು ಸತ್ಯ ದೇವರ ಗುಡಿ ಎಂದು ಸಾರಿದ ನಾನಕ್ ಈ ದೇಹವನ್ನು ಕೇವಲ ಸತ್ಯಶೋಧನೆಗೋಸ್ಕರ ಉಪಯೋಗಿಸದೆ, ಅದನ್ನು ಸಾಮಾಜಿಕ ಸೇವೆಯಲ್ಲೂ ಉಪಯೋಗಿಸಬೇಕೆಂಬ ನಿಲುವನ್ನು ನಾನಕ್ ಹೊಂದಿದನು. 'ಯಾರು ತಮ್ಮನ್ನು ಮುಕ್ತಿಗೊಳಿಸಿಕೊಳ್ಳುವರೋ ತಮ್ಮ ಇರುವಿಕೆಯಿಂದ ಇತರರನ್ನು ಮುಕ್ತಿಗೊಳಿಸುವರು. ಈ ಮುಕ್ತಿಗೊಳಿಸುವ ಸಾಧನವನ್ನು 'ಸಹಜಯೋಗ' ಎಂದು ಕರೆಯಲಾಯಿತು. ಈ ಸಹಜಯೋಗ ಭಕ್ತಿಯೋಗ, ಜ್ಞಾನಯೋಗ, ಕರ್ಮಯೋಗಗಳ ಸಮ್ಮಿಶ್ರದಿಂದ ಉಂಟಾಗಿದೆ ಎನ್ನುತ್ತಾರೆ.

ಮಾನವ ದೇಹವನ್ನು ಒಂದು ದೇವರು ಗುಡಿ ಎಂದು ಕರೆದ ನಾನಕ್, ಲಿಂಗ ಬೇಧ ಮಾಡದೆ, ಸಕಲರೂ ಮುಕ್ತಿ ಪಡೆಯಬಹುದೆಂದ. ದೇವರ ಮೇಲಿನ ಅನನ್ಯ ಭಕ್ತಿಯಿಂದ ಪಡೆಯಬಹುದೆಂದರೂ, ಸಾಮಾಜಿಕ ಜೀವನದಿಂದ ಹೊರಬಂದು, ದಿನನಿತ್ಯ ಕಾರ್ಯಗಳನ್ನು ಮಾಡದೆ, ತನ್ನನ್ನು ಸಂಪೂರ್ಣವಾಗಿ ದೇವರಿಗೆ ಸಮರ್ಪಿಸಿಕೊಂಡು, ಆರಾಧಿಸಿ, ಮೋಕ್ಷ ಪಡೆಯಬೇಕಾಗಿಲ್ಲವೆಂದ. ಭಕ್ತಿಮಾರ್ಗ ಹಿಡಿದರೂ, ದೇಹ ಮನಸ್ಸು ದಂಡಿಸಬೇಕಾಗಿಲ್ಲ. ಲೌಕಿಕ ಜೀವನ ಜರುಗಿಸಿ, ಅದರಲ್ಲಿ ಆಧ್ಯಾತ್ಮಿಕತೆಯ ರಸವಿಕ್ಕಿ, ಭಕ್ತಿಭಾವನೆ, ನೈತಿಕ ಮೌಲ್ಯಗಳ ಪರಿಪಾಲನೆ ಮಾಡಿದರೆ, ದೈವತ್ವ ಪಡೆಯಬಹುದು ಎಂದು ಸಾರಿದ. ನಾನಕ್‌ನ ಪಾಲಿಗೆ, ನೈತಿಕತೆ ಇಲ್ಲದೆ, ಆಧ್ಯಾತ್ಮಿಕ ಜೀವನ ಸಾಗಿಸುವುದು ಅಸಾಧ್ಯವಾಗಿತ್ತು.

ನಾನಕ್ ದೇವರ ಅಸ್ತಿತ್ವವನ್ನು ಒಪ್ಪಿದರೂ ಮಾನವ, ದೇವರ ಸ್ವರೂಪವೆಂದರೂ, ದೈವತ್ವವನ್ನು ಪಡೆಯುವುದು ಮಾನವನ ಅಂತರಂಗದಲ್ಲಿದೆ ಎಂದು ಬೋಧಿಸಿದರೂ, ಈ ಬ್ರಹ್ಮಾಂಡ, ಈ ಭೂಮಿ, ಈ ಆಕಾಶಗಳೆಲ್ಲವೂ ಶೂನ್ಯವೆಂದೊಪ್ಪಲಿಲ್ಲ ಅಥವಾ ಅದು **'ಮಾಯೆ'** ಎಂದು ಸಾರಿದ್ದನ್ನು ಒಪ್ಪಲಿಲ್ಲ. ದೇವರು ಎಲ್ಲೆಡೆ ಇದ್ದು, ಅವನು ಯಾರ ಸ್ವತ್ತು ಆಗಿಲ್ಲದೆ, ಅವನು ಕೇವಲ ಮಾನವಾಕೃತಿಯಾಗಿಲ್ಲದೆ, ಸ್ವರ್ಗವಾಸಿಯಾಗಿದ್ದನಲ್ಲದೆ ಅಥವಾ ಯಾವುದೇ ನಿಶ್ಚಿತ ವಾಸಸ್ಥಳದಲ್ಲಿ ಇರುವನಲ್ಲದೆ, ಅವನು ಎಲ್ಲೆಲ್ಲೂ ಇದ್ದು ಕಾಲ ಮತ್ತು ಕಾಲಾತೀತವಾಗಿರುತ್ತಾನೆ ಎಂದು ಸಾರಿದ. ೨, ೩

ಯಾರು ದೇವರ ಸಹಜ ಸ್ಥಿತಿಯನ್ನು ಅವನ ನೈತಿಕ ಹಾಗೂ ಆಧ್ಯಾತ್ಮಿಕ ಆಜ್ಞಾಸಾರಗಳನ್ನು ಒಪ್ಪಿ ಪಾಲಿಸುವರೋ, ಅವರು ಸತ್, ಶಾಂತಿ, ಆನಂದವನ್ನು ಕಂಡುಕೊಳ್ಳುವರು.

---

೨. P 296 The Cultural History of Sikhs by Macauliffe

೩. P 41 History of Sikhs by Cunningham - 'Nana' - 'Nanak's reform was in immediate effect religious and moral only; believers were regarded as 'Sikhs' or disciples, not as subjects.. . . .'

ಕವಿ ನಾನಕ್

ನಾನಕ್ ತನ್ನನ್ನು ತಾನೇ ಒಬ್ಬ 'ಶಾಯರ್ ಎಂದರೆ 'ಕವಿ' ಎಂದು ಕಂಡುಕೊಂಡ. ಭಾಷೆ ಪಂಜಾಬಿ ಎಂದಾಗಿದ್ದರೂ ಅದು ಆಗಿನ ಕಾಲಕ್ಕೆ 'ಸಾಧು ಭಾಷೆ' ಎಂದು ಕರೆಯಲಾಗಿತ್ತು. ಉತ್ತರ ಭಾರತದ ಸಾಧು ಸಂತರು ಬಳಸಿದ ಮಿಶ್ರ ಭಾಷೆಯಾಗಿತ್ತು ಎಂದರು ಇತಿಹಾಸಕಾರರು. ೨

ಶುದ್ಧ ಶಾಸ್ತ್ರೀಯ ಶೈಲಿಯನ್ನು ಉಪಯೋಗಿಸದೆ ಸ್ವತಂತ್ರ ಕವಿತೆ ಮತ್ತು ಶೂನ್ಯ ಕವಿತೆ ಶೈಲಿಯನ್ನು ಉಪಯೋಗಿಸಿದ ಭಾರತದ ಪ್ರಥಮ ಕವಿ ಎಂದು ಹೇಳಲಾಗಿದೆ. ಯಾವ ರೀತಿಯ ಶಿಷ್ಠ ಛಂದಸ್ಸುಗಳ ಮೊರೆ ಹೋಗದೆ ಸರಳ,ಶುದ್ಧ, ನೈಜ ಕಾವ್ಯ ರಚಿಸಿದ ಕೀರ್ತಿ ನಾನಕ್‌ನದು.

"ಸರ್ ಫಿಲಿಪ್ ಸಿಡ್ನಿ ತನ್ನ 'ಡಿಫೆನ್ಸ್'ನಲ್ಲಿ ಕವಿ ಮತ್ತು ಕಾವ್ಯವನ್ನು ಕುರಿತು, 'ಅರಿಸ್ಟಾಟಲ್ ಹೇಳಿದ ಹಾಗೆ ಕಾವ್ಯ ಒಂದು ಅನುಕರಣ ಕಲೆ, ರೂಪಕದ ಭಾಷೆಯಲ್ಲಿ ಹೇಳುವುದಾದರೆ, ಶಿಕ್ಷಣ ಮತ್ತು ಆನಂದವನ್ನು ತನ್ನ ಅಂತಿಮ ಉದ್ದೇಶವನ್ನಾಗುಳ್ಳ ಚಿತ್ರಗಳ ಮುಖಾಂತರ ಮಾತನಾಡುವ ಕಲೆ, ಕೇವಲ ಛಂದೋಬದ್ಧವಾಗಿ ಬರೆಯುವುದರಿಂದ ಮತ್ತು ಅವುಗಳ ಮುಖಾಂತರ ಆನಂದದಾಯಕ ಶಿಕ್ಷಣವನ್ನು ಕೊಡುವುದರಿಂದ ಕವಿ ಎನಿಸಿಕೊಳ್ಳುತ್ತಾನೆ' ೩

ಕೇವಲ ಛಂದೋಬದ್ಧವಾಗಿ ನಾನಕ್ ತನ್ನ ಕವಿತೆಗಳನ್ನು ರಚಿಸದೆ, ನೀತಿ, ಅನೀತಿಯ, ಒಳ್ಳೆಯದು, ಕೆಟ್ಟದ್ದರ ಪ್ರತಿಮೆಗಳನ್ನು ಸೃಷ್ಟಿ ಮಾಡಿ ರಚಿಸಿದ್ದನ್ನು ಇತಿಹಾಸಕಾರರು ದಾಖಲಿಸಿದ್ದಾರೆ.

'ಓ ಕರೀ ಜಿಂಕೆಯೇ, ಯಾಕೆ ಈ ತೋಟದ
ಸುಂದರತೆಗೆ ಆಕರ್ಷಗೊಂಡಿದ್ದೀಯಾ?
ಕೇಡಿನ ಹಣ್ಣುರಸದ ಸಿಹಿ ತಾತ್ಕಾಲಿಕ,
ಅದು ನೀಡುತ್ತದೆ ನೋವು ಅನಂತರ. . . .'

ಸುಂದರ ವಧು ಮತ್ತು ವರರ ರೂಪಕವನ್ನು ಪುನಃ ಪುನಃ ತನ್ನ ಕಾವ್ಯಗಳಲ್ಲಿ ಉಪಯೋಗಿಸಿ, ತನ್ನ ಸಿದ್ಧಾಂತವನ್ನು ಸರಳ, ಸುಂದರ ಕಾವ್ಯಗಳ ಮುಂಖಾಂತರ ಸೃಷ್ಟಿಸಿ, ನಾನಕ್.ಕವಿಯಾಗಿ ಹೊರಹೊಮ್ಮಿದ್ದಾನೆ.

---

೨. P 50 Early Sikh Tradition by McLeod 'Sadhakkari or sant Bhasha, the language of saints. It served as a linguafranca for devotional works of the sant tradition, religious movement which spread over much of Northern India during late medieval and early modern period.'

೩. P 112 ಪಾಶ್ಚಾತ್ಯ ವಿಮರ್ಶೆಯ ಪಕ್ಷಿನೋಟ – ಜಿ. ಶಂಕರಯ್ಯ

ಪ್ರಸಿದ್ಧ ಅಮೆರಿಕನ್ ದಾರ್ಶನಿಕ ಥೋರೋ ಸಾರಿದ ಹಾಗೆ,

'Chastity is the flowering of man and what are called Genius, Heroism, Holiness and the like, are but various fruits which succeed it. Man flows at once to God when the channel of purity is open. By turns our purity inspires and our impurity casts us down. He is blessed who is assured that the animal is dying out in him day by day and the divine being established.. . .' (Thoreau)

(P 267 —— Civil Disobedience by Thoreau)

* * *

ನಾನಕ್ ಮತ್ತು ಕಬೀರ್ ಭಕ್ತಿಪಂಥವನ್ನು ಹುಟ್ಟು ಹಾಕಿದರೂ ಈರ್ವರಲ್ಲಿ ಪ್ರತ್ಯೇಕತೆ ಇರುವುದನ್ನು ಇತಿಹಾಸಕಾರರು ಕಂಡುಕೊಂಡಿದ್ದಾರೆ. ಕಬೀರ್ ತನ್ನ ದೋಹೆಗಳಲ್ಲಿ ಹಿಂದೂ ದೇವ ದೇವತೆಯರ ಬಗ್ಗೆ ಉದಾಸೀನ ತೋರಿಸಿದರೂ, ಅವರ ನಾಮೋಚ್ಚರಣೆಗಳನ್ನು ಮಾಡಿ, ಕೆಳದರ್ಜೆಯ ಹಿಂದೂ ಜಾತಿಯವರ ಮನಸ್ಸನ್ನು ಗೆದ್ದ. ಅವರು ಅವನ ದಾರಿ ಹಿಡಿದು, ಒಂದು ಪ್ರತ್ಯೇಕ ಪಂಥವನ್ನು ಹುಟ್ಟುಹಾಕಿದರು. ಅದನ್ನು 'ಕಬೀರ್ ಪಂಥ' ಎಂದು ಕರೆಯಲಾಗಿದೆ.

ಆದರೆ ನಾನಕ್‌ನ ಹಿಂಬಾಲಕರಲ್ಲಿ, ಹಿಂದೂ ಅಥವಾ ಮುಸ್ಲಿಮರ ಆಚಾರ ವಿಚಾರಗಳ, ಪದ್ಧತಿಗಳ, ಸಂಸ್ಕಾರಗಳ, ನಡೆತೆ ನಡೆವಳಿಕೆಗಳ ಆಚರಣೆಗಳನ್ನು ತೊಡೆದುಹಾಕಿ, ಪ್ರತ್ಯೇಕವಾದ ಅಂತರಂಗ ಮತ್ತು ಬಹಿರಂಗ ಪದ್ಧತಿಗಳನ್ನು ಪಾಲಿಸುವುದರ ಮೂಲಕ, ತಮ್ಮ ಪ್ರತ್ಯೇಕ ಧಾರ್ಮಿಕ ಹಾಗೂ ಸಾಮಾಜಿಕ ಸಮಾಜದ ನಿರ್ಮಾಪಕರಾದರು. ೫

'ಪರಿಶುದ್ಧತೆ, ಮಾನವನನ್ನು ಅರಳಿಸುತ್ತದೆ. ಅದರಿಂದಲೇ ಪ್ರತಿಭೆ, ಕೆಚ್ಚು, ಪವಿತ್ರತೆ ಮುಂತಾದ ಗುಣಗಳು ಫಲಗಳಾಗಿ ಹೊರಹೊಮ್ಮುತ್ತವೆ. ಯಾವಾಗ ನಿರ್ಮಲ ನಾಲೆ ತೆರೆಯುತ್ತದೆಯೋ ಆಗ ಮನುಷ್ಯ ಆ ಕ್ಷಣವೇ ದೇವರೆಡೆಗೆ ಸಾಗುತ್ತಾನೆ. ಕ್ರಮವಾಗಿ, ನಮ್ಮ ಶುದ್ಧತೆ ಪ್ರಚೋದಿಸುತ್ತದೆ ಮತ್ತು ಅಶುದ್ಧತೆ ಕೆಳಗೆ ಬೀಳಿಸುತ್ತದೆ. ಯಾರಿಗೆ, ತನ್ನಲ್ಲಿರುವ ಪಶುತ್ವ ಮರಣಿಸುತ್ತದೆಯೋ ಮತ್ತು ದೈವತ್ವ ಪ್ರತಿಷ್ಠಾನಗೊಳ್ಳುತ್ತಿದೆಯೋ ಎಂದು ಅರಿವಾಗುತ್ತಿದೆಯೋ ಆತನು ಧನ್ಯನಾಗುತ್ತಾನೆ.'

ನಾನಕ್ ದೈವತ್ವ ಪಡೆದ ಪುಣ್ಯಪುರುಷ ಎಂದು ಸಾರಬಹುದು.

---

೫. P 312 A History of India - Romila Thapar

ಅಧ್ಯಾಯ ೪
ಗುರು ಅಂಗದ್ ದೇವ್ (ಕ್ರಿ.ಶ. ೧೫೦೪-೧೫೫೨)

'ಅಂತಿಮವಾಗಿ ಮನುಷ್ಯನಿಗೆ ಎರಡೇ ಎರಡು ವಸ್ತುಗಳು ಮನುಷ್ಯನಿಗೆ ಸಾರ್ಥಕಯೋಗ್ಯವಾಗುವುವು - ಒಂದನೆಯದಾಗಿ ನಿರಂತರವಾಗಿ ದೇವರ ನೆನಪು ಮತ್ತು ಎರಡನೆಯದಾಗಿ ನಿಸ್ವಾರ್ಥತೆ'

ಗುರು ಅಂಗದ್ ದೇವನ ಜನನ ಮಟ್ಟೇ-ದಿ-ಸರಾಯಿ ಎಂಬ ಹಳ್ಳಿಯಲ್ಲಿ (ಪಂಜಾಬ್‌ನ ಫಿರೋಜ್‌ಪುರ ಜಿಲ್ಲೆಯ ಮುಕ್ತಸರ್ ಎಂಬ ನಗರದ ಸಮೀಪ) ೧೫೦೪ರಲ್ಲಿ ಆಯಿತು ಎಂದಿದ್ದಾರೆ ಇತಿಹಾಸಕಾರರು. ಅವನ ಜನ್ಮನಾಮ ಲೆಹ್ನಾ ಎಂದಾಗಿತ್ತು. ಅವನ ತಂದೆಯ ಹೆಸರು ಭಾಯಿಫೇರೂ ಮತ್ತು ತಾಯಿಯ ಹೆಸರು ರಾಮೋ ಎಂದಾಗಿತ್ತು. ಅವನು ಪಂಜಾಬ್‌ನ ಪ್ರಸಿದ್ಧ ಖಾತ್ರೀ ಕ್ಷತ್ರಿಯ ಪಂಗಡಕ್ಕೆ ಸೇರಿದ್ದ. ತಂದೆ ಫೇರೂ ಹಲವಾರು ಬಾರಿ ತನ್ನ ವಸತಿಯನ್ನು ಹುಟ್ಟೂರಿನಿಂದ ಬದಲಾಯಿಸಿ, ಕೊನೆಗೆ ಅಮೃತಸರ್ ಜಿಲ್ಲೆಯ ಖದೂರ್-ಸಾಹಿಬ್ ಎಂಬ ಹಳ್ಳಿಯಲ್ಲಿ ನೆಲಸಿದ.

ಬಾಲ್ಯದಿಂದಲೇ ಲೆಹ್ನಾ ಆಧ್ಯಾತ್ಮಿಕ ಜೀವನಕ್ಕೆ ವಾಲಿದ್ದ. ಕಾಲಕ್ಕೆ ತಕ್ಕ ಹಾಗೆ ಬಹಳ ಬೇಗ ಅವನ ವಿವಾಹ ಜರುಗಿತು. ಅವನ ಹೆಂಡತಿ ಖಿವೀ ಎಂಬಾಕೆ ಎರಡು ಗಂಡು ಮಕ್ಕಳು - ದಾತು ಮತ್ತು ದಾಸೂ ಮತ್ತು ಒಂದು ಹೆಣ್ಣು ಮಗಳು - ಅಮ್ರೋಗೆ ಜನ್ಮ ನೀಡಿ ಕೃತಾರ್ಥಳಾದಳು.

ಖಾದುರ್‌ನಲ್ಲಿದ್ದಾಗಲೇ ಲೆಹ್ನಾ, ಶಿವಾಲೀ ಬೆಟ್ಟದಲ್ಲಿದ್ದ ಪ್ರಸಿದ್ಧ ಹಿಂದೂ ಯಾತ್ರಾಸ್ಥಳವಾದ ಜ್ವಾಲಾಮುಖಿಗೆ ಯಾತ್ರೆ ಮಾಡಿ, ಭಕ್ತಿಯಿಂದ ದೇವಿ ದುರ್ಗಾಳನ್ನು ಪೂಜಿಸುವ ಕ್ರಮ ಇರಿಸಿಕೊಂಡ. ಒಂದು ಬಾರಿ ಅಲ್ಲಿಗೆ ಯಾತ್ರಿಸುವಾಗಲೇ ಒಬ್ಬ ಸಿಖ್‌ನ ಉಪದೇಶದಿಂದ ನಾನಕ್‌ನನ್ನು ಭೇಟಿ ಮಾಡಿ ಅವನ ಅನನ್ಯ ಭಕ್ತನಾದ. ನಾನಕ್ ತನ್ನ ಮರಣ ಸನ್ನಿಹಿತವಾದಾಗ, ಅವನಿಗೆ ಉತ್ತರಾಧಿಕಾರ ನೀಡಿದ್ದಲ್ಲದೆ, ತನ್ನ ದೇಹದ ಅಂಗದಂತಿದ್ದ ಲೆಹ್ನಾನಿಗೆ 'ಅಂಗದ್' ಎಂದು ನಾಮಧೇಯ ನೀಡಿದ. ಅಂದಿನಿಂದ ಲೆಹ್ನಾ 'ಗುರು ಅಂಗದ್ ದೇವ್' ನಾಗಿ ಸಿಖ್‌ರ ಗುರುವಾಗಿ ಪರಿಣಮಿಸಿದ.

ಗುರುವಾಗಿ ನೇಮಕಗೊಂಡ ಲೆಹ್ನಾ ಮಾತ್ರ ಕಾರ್ತಾರ್‌ಪುರದಲ್ಲಿ ತಂಗಲಿಲ್ಲ. ತನ್ನೂರಾದ ಖದೂರ್‌ಗೆ ತೆರಳಿದ. ಅಲ್ಲೇ ಅಜ್ಞಾತವಾಸ ಮಾಡಿದ. ಅದಕ್ಕೆ ಕಾರಣ ಪ್ರಾಯಶಃ ಗುರು ನಾನಕ್‌ನ ಸಂತತಿಯವರಿಂದ ಈರ್ಶೆ, ವಿರೋಧ ಹಗೆತನ ಕಂಡುಕೊಂಡಿದ್ದರಿಂದ ಎಂದು ಕೆಲವು ಇತಿಹಾಸಕಾರರ ನಂಬಿಕೆ. ಇನ್ನೊಂದು ಕಾರಣ, ಗುರು ನಾನಕ್‌ನ ಮರಣ ಅವನ ಮೇಲೆ ಬಲವಾದ ಪರಿಣಾಮ ಬೀರಿ,

ಅಜ್ಞಾತವಾಗಿ ಉಳಿಯುವ ಬಯಕೆ ಅವನನ್ನು ತನ್ನೂರಿಗೆ ತೆರಳುವಂತೆ ಮಾಡಿತು. ಅದು ಏನೇ ಆಗಿದ್ದರೂ, ಕೇವಲ ಹಾಲು ನೀರು ಕುಡಿದು ಅಂಗದ್ ದೇವ ಜೀವನ ಸಾಗಿಸಿದ.

ಸ್ವಲ್ಪ ದಿನಗಳ ನಂತರ, ಗುರು ಅಂಗದ್ ಅಜ್ಞಾತವಾಸವನ್ನು ತ್ಯಜಿಸಿ ಗುರುವಿನ ಆದ್ಯ ಕರ್ತವ್ಯವನ್ನು ಮಾಡುವಂತೆ ಸಿಖ್ಖರ ಕೆಲವು ಪ್ರಮುಖ ಶಿಷ್ಯರು ಅಂಗದ್‌ನ ಬಳಿ ಬಂದು ಅವನ ಮನ ಒಲಿಸಿದರು. ಅವರಲ್ಲಿ ಭಾಯಿ ಬುಡ್ಡಾ ಪ್ರಮುಖನಾಗಿದ್ದ. ಶಿಷ್ಯರ ಅನುರೋಧವನ್ನು ಮನ್ನಿಸಿದ ಗುರು ಅಂಗದ್‌ದೇವ ಅಜ್ಞಾತವಾಸವನ್ನು ತ್ಯಜಿಸಿ, ಗುರು ನಾನಕ್‌ನ ಮೇಲ್ಪಂಕ್ತಿಯನ್ನು ಪರಿಪಾಲಿಸಿದ. ಬೆಳಗಿನ ಜಾವ ಎದ್ದು, ತಣ್ಣೀರ ಸ್ನಾನ ಮಾಡಿ, ಧ್ಯಾನ ಮಾಡಿ, ಗುರು ಮಂತ್ರ ಜಪಿಸಿ, ಹಾಡುಗಾರರೊಂದಿಗೆ ದಾಸಪದ ಹಾಡಿ ಪ್ರಾತಃ ಕಾಲದ ನಿತ್ಯಕರ್ಮ ಪ್ರಾರಂಭಿಸಿದ. ಇದರೊಂದಿಗೆ, ದೀನ ದಲಿತರ ಸೇವೆ, ಕುಷ್ಠರೋಗಿಗಳ ಉಪಚಾರ, ಯಾತ್ರಿಕರಿಗೆ ಊಟೋಪಚಾರ ಮಾಡಿ, ಸಾಯಂಕಾಲ ದೇವರ ನಾಮಗಳನ್ನು ಹಾಡುವ ಕಾರ್ಯ ಪ್ರಾರಂಭಿಸಿದ.

ಗುರು ಅಂಗದ್ ದೇವ, ಗುರು ನಾನಕ್‌ನ ಉಪದೇಶಗಳನ್ನು ಅಕ್ಷರಶಃ ಪಾಲಿಸಿ, ಜನರ ಮನ್ನಣೆ ಆದರ ಗಳಿಸಿದ. ಗುರು ನಾನಕ್‌ನ ಪ್ರಸಿದ್ಧ ಉಪದೇಶ– ಒಬ್ಬ ವ್ಯಕ್ತಿ ತನ್ನ ಬೆವರು ಸುರಿಸಿ ಕಷ್ಟಪಟ್ಟು ದುಡಿದ ಹಣ ಸಂಪಾದಿಸಿದ್ದನ್ನು ತನಗೆ ಬೇಕಾದಷ್ಟನ್ನು ಮಾತ್ರ ಇರಿಸಿ, ಮಿಕ್ಕಿದ್ದನ್ನು ದಾನ ಮಾಡುವ ಕ್ರಮವನ್ನು ಕಟ್ಟುನಿಟ್ಟಾಗಿ ಮಾಡಿದ. ಸ್ವತಃ ದುಡಿದು, ಹಣ ಸಂಪಾದಿಸುವ ಕಾರ್ಯ ಮಾಡಿದ. ಶಿಷ್ಯಂದಿರು, ಯಾತ್ರಿಕರು ಮತ್ತು ಇತರರು ಯಾರೆ ನೀಡಿದ ದಾನವನ್ನು 'ಲಂಗರ್'ನ ಉಪಯೋಗಕ್ಕೆ ಉಪಯೋಗಿಸಿದ.

ಗುರು ಅಂಗದ್‌ನ ದೈನ್ಯತೆ ಎಷ್ಟು ಅಪರೂಪದ್ದಾಗಿತ್ತು ಎಂದರೆ, ಇತಿಹಾಸಕಾರರು ಒಂದು ದೃಷ್ಟಾಂತವನ್ನು ಹೇಳಿರುತ್ತಾರೆ. ಗುರುವಿನ ಶಿಷ್ಯನೊಬ್ಬ, ಗುರುವಿನ ಅಡುಗೆ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ. ಅವನಿಗೆ ತಾನು ಮಾಡುತ್ತಿರುವ ಕಾರ್ಯದ ಬಗ್ಗೆ ಒಣಹೆಮ್ಮೆ ತಲೆದೋರಿ, ಗುರುವಿನ ಆಜ್ಞೆಯನ್ನು ಮಾತ್ರ ಪಾಲಿಸಿ, ಗುರುವಿನ ಮಿಕ್ಕ ಯಾರೇ ಸಂಗಾತಿ ಅಥವಾ ಶಿಷ್ಯಂದಿರ ಆದೇಶ ಕೋರಿಕೆಗಳನ್ನು ಪಾಲಿಸುತ್ತಿರಲಿಲ್ಲ. 'ನಿಮ್ಮ ಸೇವೆಗೆ ನಾನು ಸರ್ವಸಿದ್ಧ, ಆದರೆ ಇತರ ಎಲ್ಲಾ ತರಹದ ಜನರ ಸೇವೆ ನಾನು ಮಾಡಲೊಲ್ಲೆ' ಎಂದು ಗುರುವಿನ ಆದೇಶವನ್ನು ನಿರಾಕರಿಸುತ್ತಿದ್ದ. ಗುರುವಿಗೆ ಆಘಾತವಾಯಿತು. ಇಂತಹ ಜಂಬದ ಕೋಳಿ ಶಿಷ್ಯನನ್ನು ಸಹಿಸಲಾಗಲಿಲ್ಲ. 'ಕೇವಲ ನನ್ನ ಆಜ್ಞೆಯನ್ನು ಪಾಲಿಸುವಂತಹನಾದರೆ, ನನ್ನ ಒಂದು ಆಜ್ಞೆಯನ್ನು ನೀನು ಪಾಲಿಸು' ಎಂದು ಹೇಳಿ 'ಹಾಗಾದರೆ, ನೀನು ಬೆಂಕಿಯಲ್ಲಿ ಬಿದ್ದು ಸಾಯಿ' ಎಂದು ಹೇಳಿದ! ಗುರುವಿನ ಆಜ್ಞೆಯನ್ನು ಮೀರಲಾಗದೆ, ಆತ ಕಾಡಿಗೆ ತೆರಳಿದ. ಒಣ ಕಟ್ಟಿಗೆಯನ್ನು ಕಡಿದು ಅದರ ಮೇಲೆ ಕುಳಿತು ಬೆಂಕಿ ಉರಿಸಿ ಸಾಯಲು ಸಿದ್ಧತೆ

ನಡೆಸಿದ. ಆದರೆ, ಅದೇ ಸಮಯಕ್ಕೆ ಒಬ್ಬ ಆಗುಂತಕ ಬಂದ. ಅವನೊಬ್ಬ ದರೋಡೆಕೋರನಾಗಿದ್ದ. ಅವನ ಆ ಅಡುಗೆಯವನ ಸ್ಥಿತಿ ಕಂಡು ಕಾರಣ ಅರಿತು, ಗುರು ಅಂಗದ್‌ನ ಪ್ರಖ್ಯಾತಿಯನ್ನು ಅರಿತಿದ್ದ ಆತ ತನ್ನ ಸಕಲ ಪಾಪ ಕರ್ಮಗಳಿಗೆ ತಾನೇ ಖುದ್ದಾಗಿ ಬೆಂಕಿ ಏರಿ ಪ್ರಾಣತ್ಯಾಗ ಮಾಡಿ, ಪಾಪನಾಶನ ಮಾಡಿಕೊಳ್ಳಬಹುದೆಂದು ಎಣಿಸಿದ. ಅದರಂತೆ, ಆ ದರೋಡೆಕೋರ ಬಾಣಸಿಗನಿಗೆ ಹೇಳಿದ. 'ಗುರುವಿನ ಆಜ್ಞೆಯನ್ನು ನೀನು ಪಾಲಿಸಬೇಕಾಗಿಲ್ಲ ನಿನ್ನ ಬದಲಿಗೆ ನಾನು ಆ ಕೆಲಸ ಮಾಡುವೆನು. ನಾನು ಈಗ ತಾನೆ ಕಳ್ಳತನ ಮಾಡಿದ ಈ ಚಿನ್ನ ಆಭರಣಗಳನ್ನು ನಿನಗೆ ನೀಡುತ್ತೇನೆ. ಅವನ್ನು ಮಾರಿ ಜೀವಮಾನವಿಡೀ ನೀನು ಸುಖವಾಗಿ ಇರಬಹುದು. ನಾನು ಮಾಡಿದ ಪಾಪಕರ್ಮಕ್ಕೆ ಪ್ರಾಣತ್ಯಾಗ ಮಾಡಿ ಪ್ರಾಯಶ್ಚಿತ್ತ ಮಾಡಿಕೊಂಡು, ಗುರುವಿನ ಆಜ್ಞೆಯನ್ನು ಪಾಲಿಸುತ್ತೇನೆ.'

ದರೋಡೆಕಾರನ ಕೋರಿಕೆಗೆ ಬಾಣಸಿಗ ಸಂತೋಷಪಟ್ಟು, ಅವನು ನೀಡಿದ ಆಭರಣಗಳನ್ನು ಪಡೆದು ನಗರದತ್ತ ನಡೆದ. ಇತ್ತ ಕಳ್ಳ ಬೆಂಕಿ ಏರಿ ಪ್ರಾಣಬಿಟ್ಟ, ಅತ್ತ ನಗರ ಸೇರಿದ ಬಾಣಸಿಗ, ಆಭರಣಗಳನ್ನು ಮಾರುವಾಗ ಸಿಕ್ಕಿಬಿದ್ದ. ಅವನನ್ನು ಹಿಡಿದ ರಾಜ್ಯಾಧಿಕಾರಿಗಳು ವಿಚಾರಣೆ ನಡೆಸಿ, ಗಲ್ಲಿಗೆ ಏರಿಸಿದರು. ಈ ಸಂಗತಿ ಗುರು ಅಂಗದ್‌ನ ಕಿವಿಗೆ ಬಿದ್ದಾಗ, ಅಹಂಭಾವಗಳಿಗೆ ಮತ್ತು ವಕ್ರಬುದ್ಧಿಗಳಿಗೆ ಇಹಪರಗಳಲ್ಲಿ ಪುಣ್ಯ ದೊರಕುವುದಿಲ್ಲ' ಎಂದು ಸಾರಿದ. ೧

ಇತಿಹಾಸಕಾರರು ಗುರು ಅಂಗದ್‌ನ ದೈನ್ಯಭಾವನೆ, ನಮ್ರತೆ, ನಿಗರ್ವತೆ, ದಾರಿದ್ರ್ಯಸುಖ, ನಿರಹಂಕಾರಭಾವನೆ, ಇತ್ಯಾದಿಗಳನ್ನು ಪ್ರತಿಪಾದಿಸುವ ವ್ಯಕ್ತಿತ್ವ ಮತ್ತು ಅದರ ವ್ಯತಿರಿಕ್ತವಾಗಿ ಗರ್ವ, ದುರಭಿಮಾನ, ಅಹಂಕಾರ ಇತ್ಯಾದಿಗಳನ್ನು ಹೊರಹೊಮ್ಮಿಸುವವರ ವಿರುದ್ಧ ತೀಕ್ಷ್ಣ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವ ಮತ್ತೊಂದು ಕತೆಯನ್ನು ನೀಡಿದ್ದಾರೆ.

ಸತ್ತಾ ಮತ್ತು ಬಲವಂದ್ ಎಂಬ ಇಬ್ಬರು ಸಂಗೀತಗಾರರು ಗುರು ಅಂಗದ್‌ನ ಆಶ್ರಯದಲ್ಲಿದ್ದರು. ಅವರಿಗೆ ತಾವು ಉತ್ತಮ ಸಂಗೀತಗಾರರು ಮತ್ತು ತಮ್ಮ ಸಂಗೀತ ಸುಧೆಯನ್ನು ಆಲೈಸಲು ಗುರುವಿನ ಆಶ್ರಮಕ್ಕೆ ಜನರು, ಭಕ್ತರು ಮತ್ತು ಯಾತ್ರಿಕರು ಧಾವಿಸಿ ಬರುತ್ತಿದ್ದಾರೆ ವಿನಃ ಗುರುವಿನ ದರ್ಶನಕ್ಕಾಗಲೀ ಅಥವ ಉಪದೇಶಕ್ಕಾಗಲೀ ಅಲ್ಲ ಎಂಬ ನಿಲುವನ್ನು ಹೊತ್ತು ಅಹಂಕಾರದಿಂದ ಬೀಗುತ್ತಿದ್ದರು. ಒಮ್ಮೆ ತಮ್ಮ ಮಗಳ ಲಗ್ನಕಾರ್ಯಕ್ಕೆ ಗುರುವಿನಿಂದ ಹಣದ ಸಹಾಯ ಕೇಳಿದಾಗ, ಗುರು ಅದನ್ನು ನೀಡದಿದ್ದಕ್ಕೆ ಕೋಪಗೊಂಡು, ಗುರುವಿನ ಮೇಲೆ ಇಲ್ಲಸಲ್ಲದ ಆರೋಪ ಮಾಡಿ, ತಮ್ಮ ಸಂಗೀತದ ಸವಿಯನ್ನು ಸವಿಯಲೆಂದೇ ಜನರು ಬಂದು ಕಾಣಿಕೆ ಅರ್ಪಿಸುತ್ತಿರುವಾಗ, ಈ ಗುರು ಅದರ ಉಪಯೋಗ ಮಾಡಿಕೊಂಡು ತಮಗೆ ಹಣ

೧. P 152 History of The Sikhs people by G.Singh

ಕೊಡಲು ನಿರಾಕರಿಸುತ್ತಿದ್ದಾರೆ ಎಂದು ಜನರೊಂದಿಗೆ ದೂರು ಇತ್ತು, ಆಶ್ರಮದ ಒಳಗೆ ಮತ್ತು ಹೊರಗೆ ಅವರು ಗುರುವಿನ ವಿರುದ್ಧ ವಾಕ್‌ಸಮರ ಹೂಡಿದರು. ಭಾಯಿ ಮರ್ದಾನಾನಂತಹ ಒಬ್ಬ ಉದ್ಧಾಮ ಸಂಗೀತಗಾರನಿಂದಲೇ ಗುರು ನಾನಕ್‌ರು ಪ್ರಸಿದ್ಧಿಗೆ ಬಂದರು ಎಂದು ಗುರು ನಾನಕ್‌ನನ್ನು ನಿಂದಿಸಿದಾಗ, ಗುರು ಅಂಗದ್‌ರಿಗೆ ತಮ್ಮ ಗುರುಗಳ ಮೇಲಿನ ಅವಹೇಳನ ಮಾತುಗಳನ್ನು ಕೇಳಿ, ಅತಂತ ದುಃಖಪೀಡಿತರಾದರು. ಅವರು ಸಂಗೀತಗಾರರನ್ನು ಆಶ್ರಮದಿಂದ ಹೊರಗಟ್ಟಿದರು. ಅವರ ಸಂಗೀತವನ್ನು ಆಲೈಸುವುದನ್ನು ನಿರ್ಬಂಧಿಸಿದರು. ಸಂಗೀತಗಾರರಿಗೆ ಜೀವನ ಸಾಗಿಸುವುದು ಕಷ್ಟಸಾಧ್ಯವಾಯಿತು. ಜನಸಾಮಾನ್ಯರು ಅವರನ್ನು ದೂರವಿಟ್ಟರು. ಸಂಗೀತಗಾರರು ಕಂಗೆಟ್ಟು, ಗುರು ಅಂಗದ್‌ನ ಬಳಿ ಬಂದು ಕ್ಷಮೆ ಬೇಡಿದರು. ಆದರೆ ಗುರುವಿನ ಮನಸ್ಸು ಕರಗಲಿಲ್ಲ. ಅವರು ಸಂಗೀತಗಾರರನ್ನು ದೂರವಿಟ್ಟರು. ಆಗ, ಲಾಹೋರ್‌ನಗರದಲ್ಲಿದ್ದ ಗುರುವಿನ ಭಕ್ತ ಭಾಯಿ ಲಧಾನ ಬಳಿ ತೆರಳಿ, ತಮ್ಮ ಬವಣೆಯನ್ನು ಹೇಳಿಕೊಂಡು, ತಮ್ಮ ಪರವಾಗಿ ಗುರು ಅಂಗದ್‌ರ ಮನಸ್ಸನ್ನು ಬದಲಾಯಿಸುವಂತೆ ಪುನಃ ತಮ್ಮನ್ನು ಆಶ್ರಮಕ್ಕೆ ಬರಮಾಡಿ ತಮ್ಮ ಸಂಗೀತ ಕಾರ್ಯಕ್ರಮವನ್ನು ಪುನರಾರಂಭಿಸಲು ಕೇಳಿಕೊಂಡರು. ಅವರ ಸ್ಥಿತಿಗತಿ ಮತ್ತು ಅವರ ಕಳಕಳಿಯ ಅಹವಾಲನ್ನು ಕೇಳಿ ಕನಿಕರಗೊಂಡ ಭಾಯಿ ಲಧಾ, ತನ್ನ ತಲೆಯನ್ನು ಬೋಳಿಸಿಕೊಂಡು, ಮುಖವನ್ನು ಕಪ್ಪು ಬಣ್ಣದಿಂದ ಬಳಿದುಕೊಂಡು, ಒಂದು ಕತ್ತೆಯ ಮೇಲೆ ಕುಳಿತು ಖದೂರ್‌ಗೆ ತೆರಳಿದ. ಅವನ ಉದ್ದೇಶ ಸಂಗೀತಗಾರರ ಪರವಾಗಿ ತಾನೇ ಪ್ರಾಯಶ್ಚಿತ್ತ ಮಾಡಿಕೊಂಡು ಗುರು ಅಂಗದ್‌ನ ಕ್ಷಮೆ ಯಾಚಿಸುವುದಾಗಿತ್ತು. ಭಾಯಿ ಲಧಾ ಒಬ್ಬ ಪರೋಪಕಾರಿಯಾಗಿದ್ದ. ಆತ ಬಡ ಬಗ್ಗರಿಗೆ ಉದಾರ ಸಹಾಯ ಮಾಡಿ ಹೆಸರು ಗಳಿಸಿದ್ದ. ಈ ಸಂಗೀತಗಾರರ ಅನುರೋಧಕ್ಕೆ ಮರುಕಗೊಂಡು ಅವನು ಪ್ರಾಯಶ್ಚಿತ್ತದ ಕಾರ್ಯ ಕೈಗೊಂಡಿದ್ದ.

ಗುರು ಅಂಗದ್ ಭಾಯಿ ಲಧಾನ ಪ್ರಾಯಶ್ಚಿತ್ತದ ಕ್ರಮವನ್ನು ಕಂಡು, ಕನಿಕರಗೊಂಡು, ಸಂಗೀತಗಾರರನ್ನು ಕ್ಷಮಿಸಿದ. ಸಂಪ್ರೀತರಾದ ಸಂಗೀತಗಾರರು ಇಂದಿಗೂ ಪ್ರಸಿದ್ಧಿಯಾಗಿರುವ, 'ಸತ್ತೇ – ಬಲವಂದ್ – ದಿ –ವರ" ಎಂಬ ಹಾಡನ್ನು ರೂಪಿಸಿ, ಗುರು ನಾನಕ್‌ನನ್ನು ಭಜಿಸಿ, ಹಾಡಿದರು. ಸಂಗೀತಗಾರರು ಐದನೆ ಗುರುವಿನ ಕಾಲದವರೆಗೂ ಬದುಕಿ ಬಾಳಿ, ಪ್ರತಿಯೊಬ್ಬ ಗುರುವಿನ ಮೇಲೆ ಪದಗಳನ್ನು ರಚಿಸಿ ಅಮರರಾದರು. ಅವರ ಪದಗಳನ್ನು ಗುರು ಗ್ರಂಥದಲ್ಲಿ ಸೇರಿಸಿ ಅವನ್ನು ಇಂದಿಗೂ ಗುರುದ್ವಾರಗಳಲ್ಲಿ ಹಾಡಲಾಗುತ್ತದೆ ಎಂದಿದ್ದಾರೆ ಇತಿಹಾಸಕಾರರು. ೨

ಗುರು ಅಂಗದ್‌ನ ಪ್ರಸಿದ್ಧಿ ಎಲ್ಲೆಲ್ಲೂ ಹರಡಿ, ಹಿಂದೂ ಉಚ್ಚ ಕುಲದವರ ಕಂಗೆಣ್ಣಿಗೆ, ಈರ್ಷೆಗೆ ಅವನು ಗುರಿಯಾದ. ಇದರೊಂದಿಗೆ ಒಬ್ಬ ಸಂನ್ಯಾಸಿ ತಪಸ್ವಿ (ಆತನ ಹೆಸರನ್ನು ಇತಿಹಾಸಕಾರರು ನಮೂದಿಸಿರುವುದಿಲ್ಲ) ಗುರು ಅಂಗದ್‌ನ

---

೨. P 153 History of sikhs by G.Singh

ಏಳಿಗೆ ಕಂಡು ಸಹಿಸದೇ ಅಸಹನೆಯಿಂದ ನರಳಿದ. ಅವನ ಶಿಷ್ಯಂದಿರು ಮತ್ತು ಭಕ್ತರು ಅವನನ್ನು ತೊರೆದು, ಗುರು ಅಂಗದ್‌ನ ಭಕ್ತರಾಗಿದ್ದನ್ನು ಕಂಡು ಅವನು ಕರುಬಿದ. ಜಾತಿ ಮತ ಬೇಧವಿಲ್ಲದೆ, ಸರ್ವರೂ ಗುರು ಅಂಗದ್‌ನ ಅಂಗಳಕ್ಕೆ ಧಾವಿಸಿ ಅವನ ವಿಚಾರಧಾರೆಗೆ, ನಯ ವಿನಯ ನಡೆವಳಿಕೆಗಳಿಗೆ ಎಲ್ಲಕ್ಕೂ ಮಿಗಿಲಾಗಿ, ದೈನ್ಯತೆಗೆ ಮಾರುಹೋಗಿದ್ದನ್ನು ಕಂಡು ಸಹಿಸಲಿಲ್ಲ. ಮೇಲು ಕೀಳು ಎಂಬ ಭಾವನೆಯನ್ನು ತೆಗೆದುಹಾಕಿ, ಮಾನವರೆಲ್ಲಾ ಒಂದೇ, ಒಂದೇ ಜಾತಿ, ಒಂದೇ ಕುಲ, ಒಂದೇ ಧರ್ಮ, ಒಂದೇ ದೇವರು ಎಂಬ ಗುರು ಅಂಗದ್‌ನ ಸಾರುವಿಕೆ ಎಲ್ಲರನ್ನು ಆಕರ್ಷಿಸಿದ್ದು ಅವನು ಕ್ರೋಧಗೊಳ್ಳದಂತೆ ಮಾಡಿತು. ಜನ ಹಿಂಡು ಹಿಂಡಾಗಿ ಅವನ ಬಳಿ ಬಂದು, ಅವನು ನೀಡುತ್ತಿದ್ದ ಉಪದೇಶ, ಜಾತಿ ಬೇಧವಿಲ್ಲದೆ ಅವನು ನೀಡುತ್ತಿದ್ದ ಊಟ ಉಪಚಾರ ಎಲ್ಲವೂ ಅವನ ಹೊಟ್ಟೆ ಉರಿಯುವಂತೆ ಮಾಡಿತು.

ಉಚ್ಚ ಕುಲದವರು ಮತ್ತು ಅನಾಮಧೇಯ ತಪಸ್ವಿ, ಗುರು ಅಂಗದ್‌ನ ಪ್ರಖ್ಯಾತ ಮತ್ತು ಪ್ರಸಿದ್ಧಿಗಳಿಗೆ ಧಕ್ಕೆ ತರಲು ಸಮಯ ಕಾದರು. ಆ ವರ್ಷ ಮಳೆ ಬರದೆ, ರೈತಾಪಿ ಜನರು ತ್ರಾಸ ಪಟ್ಟರು. ಅದನ್ನೇ ತಪಸ್ವಿ ಉಪಯೋಗಿಸಿಕೊಂಡು, ಗುರು ಅಂಗದ್ ಜಾತಿ ಬೇಧ ಮರೆತು, ಧರ್ಮ ಮರೆತು, ಧರ್ಮಪ್ರಚಾರ ಮಾಡದ್ದರಿಂದ ಮಳೆ ಕಾಣೆಯಾಗಿದೆ, ಅದಕ್ಕೆ ಉಪಾಯವೆಂದರೆ ಅವನು ಹಳ್ಳಿಯಿಂದ ಕಾಲ್ತೆಗೆದರೆ, ಮಳೆ ಹುಯಿದು ರೈತಾಪಿ ಜನರಿಗೆ ಅನುಕೂಲವಾಗುತ್ತದೆ ಎಂದು ಸುದ್ದಿ ಹರಡಿದರು. ಇದನ್ನು ನಂಬಿದ ಹತಾಶರಾಗಿದ್ದ ಜಾಟ್ ರೈತರು, ಗುರು ಅಂಗದ್‌ನ ಬಳಿ ಬಂದು, ಹಳ್ಳಿ ತೊರೆದು ಹೋಗುವಂತೆ ಪ್ರಾರ್ಥಿಸಿದರು. ತನ್ನ ನಿರ್ಗಮನದಿಂದ ಮಳೆ ಹುಯಿದು ನೆಲ ತೊಯ್ದರೆ ತನ್ನ ವಿರೋಧವಿಲ್ಲವೆಂದು ಹೇಳಿ ಗುರು ಅಂಗದ್ ಹಳ್ಳಿ ತೊರೆದು ನಡೆದ. ಆದರೆ ಮಳೆ ಮಾತ್ರ ಬರಲಿಲ್ಲ. ರೈತಾಪಿ ಜನರು ಕೋಪದಿಂದ ಕುದಿದರು. ತಪಸ್ವಿಯ ಮಾತುಕೇಳಿ ಗುರು ಅಂಗದ್‌ನನ್ನು ಹೊರಹಾಕಿದ್ದಕ್ಕೆ ಬೇಸರಪಟ್ಟರು. ಸುಳ್ಳು ಹೇಳಿಕೆ ನೀಡಿದ ತಪಸ್ವಿಯನ್ನು ಹಿಡಿದು ಅವನಿಗೆ ಹೊಡೆದು ಕೊಲ್ಲಲಿಕ್ಕೆ ತೀರ್ಮಾನಿಸಿದರು. ಆಗ ಗುರು ಅಂಗದ್‌ನ ಆಪ್ತ ಶಿಷ್ಯ ಅಮರ್‌ದಾಸ್‌ನೆಂಬುವ ಮಧ್ಯಸ್ಥಿಕೆಗೆ ಬಂದು, ಆ ತಪಸ್ವಿಯನ್ನು ಸಾಯಿಸುವ ಬದಲು, ರೈತರು ತಮ್ಮ ನೇಗಿಲುಗಳಿಗೆ ಅವನನ್ನು ಕಟ್ಟಿ ತಮ್ಮ ಹೊಲ ಗದ್ದೆಗಳನ್ನು ಊಳಿದರೆ, ಅದರ ಫಲವಾಗಿ ಮಳೆ ಬರುವುದೆಂದು ಅವರನ್ನು ನಂಬಿಸಿದ. ರೈತರು ಅವನ ಮಾತನ್ನು ನಂಬಿ, ತಪಸ್ವಿಯನ್ನು ನೇಗಿಲಿಗೆ ಕಟ್ಟಿ ಹೊಲ ಊಳಿದರು. ಆಗ ಮಳೆ ಸುರಿದಾಗ ಎಲ್ಲರೂ ಆಶ್ಚರ್ಯಪಟ್ಟರು.

ಆದರೆ ಗುರು ಅಂಗದ್ ಮಾತ್ರ ತನ್ನ ಶಿಷ್ಯ ಅಮರ್‌ದಾಸ ಕೈಗೊಂಡ ಅವಮಾನವೀಯ ಕೃತ್ಯ ಸಹಿಸಲಿಲ್ಲ. ಅವನಿಗೆ ಛೀಮಾರಿ ಹಾಕಿದ. 'ನೀನು ಭೂಮಿಯ ತರಹ ವಿಪತ್ತನ್ನು ಎದುರಿಸಬೇಕು, ಪರ್ವತದ ತರಹ ದೃಢತೆಯನ್ನು ತೋರಿಸಬೇಕು, ನದಿಯ ತರಹ ಕರುಣೆಯನ್ನು ತೋರಿಸಬೇಕು. ಜ್ಞಾನಿ ಮತ್ತು ಪವಿತ್ರಾತ್ಮರಿಗೆ,

ದೈನ್ಯತೆ ಮತ್ತು ಸಮದೃಷ್ಟಿಯನ್ನು ಸುಖ ದುಃಖಗಳಲ್ಲಿ ಕಾಣದಿದ್ದರೆ, ಅವರು ಕ್ಷಮಾರ್ಹರಾಗಿರುವುದಿಲ್ಲ.' ೩

'...Cultivate poverty like Garden herb, like sage. Do not trouble yourself much to get new things, whether clothes or friends. Turn the old; return to them. Things do not change; we change. Sell your clothes and keep your thoughts....' (Thoreau) (P 377 Walden and Civil Disobedience by Thoreau)

ಪ್ರಸಿದ್ಧ ಅಮೆರಿಕನ್ ದಾರ್ಶನಿಕ ಥೋರೋ, ತೋಟದ ಒಂದು ಬಳ್ಳಿಯನ್ನು ಬೆಳೆಸುವ ತರಹ ದಾರಿದ್ರ್ಯವನ್ನು ಬೆಳೆಸಬೇಕೆಂದು ಪ್ರತಿಪಾದಿಸಿದ ಹಾಗೆ ಗುರು ಅಂಗದ್ ಕೂಡ ದಾರಿದ್ರ್ಯ, ದೈನ್ಯತೆ, ನಿಗರ್ವತೆಗಳನ್ನು ಸಾಕಿ ಬೆಳೆಸಿ ಪ್ರಸಿದ್ಧಿ ಪಡೆದ.

ಅಮರ್‌ದಾಸ್‌ನಿಗೆ ಗುರುವಿನ ಮಾತುಗಳನ್ನು ಕೇಳಿ, ತನ್ನ ಕಾರ್ಯದ ಬಗ್ಗೆ ಬೇಸರಗೊಂಡು, ಗುರುವಿನ ಕ್ಷಮೆ ಬೇಡಿದ. ಕರುಣಾಮಯಿ ಗುರು ಅಂಗದ್ ಆತನಿಗೆ ಕ್ಷಮೆ ನೀಡಿದ.

ಗುರು ಅಂಗದ್‌ನ ಪರಮ ಶಿಷ್ಯನಾಗಿದ್ದ ಅಮರ್‌ದಾಸ್ ವೃದ್ಧರಾಗಿದ್ದರೂ, ಗುರುವಿನ ಸೇವೆಯನ್ನು ಪ್ರೀತಿಯಿಂದ ಭಕ್ತಿಯಿಂದ ಹೃದಯತುಂಬ ಮಾಡುತ್ತಿದ್ದ. ಚಳಿ ಗಾಳಿ ಲೆಕ್ಕಿಸದೆ ನದಿಯಿಂದ ನೀರು ತಂದು, ಲಂಗರ್‌ನಲ್ಲಿ, ಆಶ್ರಮದಲ್ಲಿ ಅದನ್ನು ಉಪಯೋಗಿಸಿ ಕಾರ್ಯ ಮಾಡುವುದಲ್ಲದೆ ಗುರುವಿನ ಸಕಲ ಕಾರ್ಯಗಳಲ್ಲೂ ನೆರವಾಗುತ್ತಿದ್ದ. ಆತನ ನಿಸ್ವಾರ್ಥ ಸೇವೆಯನ್ನು ಗುರುತಿಸಿದ ಗುರು ಅಂಗದ್ ಪ್ರತಿ ವರ್ಷ ಅವನಿಗೆ ಪೇಟವನ್ನು ತಲೆಗೆ ಕಟ್ಟಿ, ತನ್ನ ಅಭಿಮಾನ ವ್ಯಕ್ತಪಡಿಸುತ್ತಿದ್ದರೆ, ಆ ಪರಮ ಭಕ್ತ ತಲೆಯ ಮೇಲೆ ಇರಿಸುತ್ತಿದ್ದ ಆ ಪೇಟವನ್ನು ತೆಗೆಯದೆ, ಮರುವರ್ಷ ಪುನಃ ಗುರು ಹಾಕಿದ ಪೇಟವನ್ನು ಅದೇ ಪೇಟದ ಮೇಲೆ ಧರಿಸಿ ಓಡಾಡುತ್ತಿದ್ದ. ಈ ರೀತಿ ೧೨ ವರ್ಷಗಳ ಕಾಲ, ಪೇಟಗಳನ್ನು ಧರಿಸಿ, ಅಮರ್‌ದಾಸ್ ಗುರುವಿನ ಗುಲಾಮನಾಗಿ ಮೆರೆದ. ಅವನ ಆ ಕೃತ್ಯ ಮತ್ತು ಪೇಟ ಧರಿಸುತ್ತಿದ್ದ ಅವತಾರ ಕಂಡು ಜನರು ಅಪಹಾಸ್ಯ ಮಾಡಿ ನಗುತ್ತಿದ್ದರಂತೆ ! ೪

---

೩. P 154 History of Sikh People by G, Singh
೪. P 40 The Sikh Religion by Macauliffe

'When Amar Das`s sore foot`s blood dropped on a costly dress worn by Guru, it was sucked clean by Amar Das'- 'As the stain hath vanished His dress, so by thy favour hath, impurity from my mind'

ಇದೇ ಸಮಯದಲ್ಲಿ ಗುರು ಅಂಗದ್, ಬಿಯಾಸ್ ನದಿಯ ದಡದ ಮೇಲೆ ಒಂದು ನಗರ ನಿರ್ಮಿಸಲು ತನ್ನ ಒಬ್ಬ ಧನಿಕ ಶಿಷ್ಯ ಗೋಬಿಂದ್‌ಗೆ ಅಪ್ಪಣೆ ನೀಡಿದ. ಅವನ ಆದೇಶದಂತೆ ಒಂದು ನವನಗರವನ್ನು ಅಲ್ಲಿ ಕಟ್ಟಿದ ಗೋಬಿಂದ. ಆ ನಗರಕ್ಕೆ ತನ್ನ ಹೆಸರನ್ನು ನೀಡುವ ಬದಲು ಗುರು ಆ ಧನಿಕ ಗೋಬಿಂದ್‌ನ ಹೆಸರನ್ನೇ ನೀಡಿದ. ಇಂದಿಗೂ ಆ ನಗರಕ್ಕೆ 'ಗೋಬಿಂದ್‌ವಾಲ್' ಎಂದು ಹೆಸರನ್ನು ನೀಡಿ ಅಲ್ಲಿ ಒಂದು ಗುರುದ್ವಾರ ಕಟ್ಟಿಸಿ, ಅಮರವಾಗಿಸಿರುತ್ತಾರೆ. ಗೋವಿಂದ್‌ವಾಲ್ ನಗರದಲ್ಲಿ ವಸತಿ ಹೂಡಿದ ಅಮರ್‌ದಾಸ್, ಗುರು ಅಂಗದ್‌ನ ಹಳ್ಳಿಗೆ ದಿನವಹೀ ರಾತ್ರಿ ಕಾಲುನಡಿಗೆಯಲ್ಲಿ ಯಾತ್ರಿಸಿ ತನ್ನ ಗುರುಭಕ್ತಿಯನ್ನು ತೋರಿಸಿದ. ಆ ಕಾರ್ಯವನ್ನು ನೋಡಿದ ಜನರಿಂದ ಅಪಹಾಸ್ಯಕ್ಕೆ ಈಡಾದರೂ, ಅಮರ್‌ದಾಸ್ ಮಾತ್ರ ತನ್ನ ಗುರುಭಕ್ತಿಯನ್ನು ನಿಲ್ಲಿಸಲಿಲ್ಲ.

ಗುರು ಅಂಗದ್ ದೇವ್, ತನ್ನ ವೃದ್ಧ ಶಿಷ್ಯ ಅಮರ್‌ದಾಸ್‌ನ ಅನನ್ಯ ಭಕ್ತಿ, ಅಚಲವಾದ ಶ್ರದ್ಧೆ, ಕ್ರಿಯಾಶೀಲತೆಗಳಿಗೆ ಮಾರುಹೋದ.

ಒಂದು ದಿನ ಗುರು ಅಂಗದ್ ದೇವ್, ಪ್ರಾರ್ಥನಾಸಭೆಯಲ್ಲಿ ನೆರೆದಿದ್ದ ಭಕ್ತರನ್ನು ಉದ್ದೇಶಿಸಿ ಹೇಳಿದ :

'ಯಾರನ್ನು ನೀವು ಮನೆ ಮಠವಿಲ್ಲದವ, ಗೌರವಾನ್ವಿತವಿಲ್ಲದವ ಮತ್ತು ಆಧಾರವಿಲ್ಲದವ ಎಂಬುವರೋ, ಆತನೇ ಮನೆಯಿಲ್ಲದವರಿಗೆ ಮನೆಯುಳ್ಳವನಾಗಿ, ಅಗೌರವರಿಗೆ ಗೌರವವುಳ್ಳವನಾಗಿ ಮತ್ತು ಆಸರೆಯಿಲ್ಲದವರಿಗೆ ಆಸರೆಯುಳ್ಳವನಾಗಿರುವನು.'

ಗುರು ಅಂಗದ್ ದೇವ ಮರಣಿಸುವ ಮುನ್ನ ಭಾಯಿ ಬುಡ್ಡಾನನ್ನು ಕರೆಸಿದ. ಅಮರ್‌ದಾಸ್‌ಗೆ ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಲು ಸಂಪ್ರದಾಯದಂತೆ ನೂತನ ಗುರುವಿನ ಮುಂದೆ ತಲೆಬಾಗಿ ನಿಂತು ಐದು ತಾಮ್ರದ ಕಾಸುಗಳನ್ನು ಮತ್ತು ತೆಂಗಿನ ಕಾಯಿಗಳನ್ನು ಅವನ ಮುಂದೆ ಇರಿಸಿ, ತನ್ನ ನಂತರ ಗುರುವಿನ ಪಟ್ಟ ಅಮರ್‌ದಾಸ್‌ನಿಗೆ ನೀಡುವ ಕಾರ್ಯ ಮಾಡಿದ. ಭಾಯಿ ಬುಡ್ಡಾ, ಗುರು ಅಂಗದ್‌ನ ಆದೇಶದಂತೆ, ಅಮರ್‌ದಾಸನ ಹಣೆಗೆ ಕುಂಕುಮದ ತಿಲಕವಿಟ್ಟು ಗುರುವಿನ ಪಟ್ಟವನ್ನು ದೃಢೀಕರಿಸಿದ. ೫

ಗುರು ಅಮರ್‌ದಾಸ್ ಗುರುವಿನ ಪಟ್ಟವನ್ನು ಕ್ರಿ.ಶ. ೧೫೫೨, ಮಾರ್ಚ್ ೨೯ ರಂದು ಅಲಂಕರಿಸಿದ. ಆಗ ಆತನ ವಯಸ್ಸು ೭೨ ಆಗಿತ್ತು.

---

೫. P 43 The Sikh Religion by Macauliffe.

ಅಧ್ಯಾಯ ೫
ಗುರು ಅಮರ್‌ದಾಸ್ (ಕ್ರಿ.ಶ. ೧೪೭೯ – ೧೫೭೪)

'ಯಾರು ವಿಶ್ವವನ್ನು ಪಡೆಯಲೆತ್ನಿಸುವರೋ
ಅವರು ತನ್ನ ಹೃದಯವನ್ನು ಸುಡುವರು
ಆದರೆ ಯಾರು ತನ್ನದೆಲ್ಲವನ್ನೂ ಸಮರ್ಪಿಸುವರೋ
ಆತ ಸ್ವಚ್ಛಂದರಾಗುವರು ಮತ್ತು ಒಬ್ಬ
ರಾಜನನ್ನು ಕೂಡ ನಾಚಿಸುವರು'

– ಕಬೀರ್

ಅಮರ್‌ದಾಸ್‌ನ ಜನ್ಮ ಅಮೃತಸರದ ಸಮೀಪದ ಹಳ್ಳಿ ಬಾಸರ್ಕೆ ಎಂಬಲ್ಲಿ ಕ್ರಿ.ಶ. ೧೪೭೯, ಮೇ ೫ ರಂದು ಆಯಿತು. ಖತ್ರೀ ಪಂಗಡದಲ್ಲಿ ಜನ್ಮ ತಳೆದ ಅವನು ತಂದೆ ತೇಜ್ ಭಾನ್ ಮತ್ತು ತಾಯಿ ಭಕ್ತದೇವಿಯವರ ಹಿರಿಯ ಮಗನಾಗಿದ್ದ. ತಂದೆಯ ತರಹ ರೈತಾಪಿ ಮತ್ತು ವ್ಯಾಪರೋದ್ಯಮಗಳಲ್ಲಿ ತೊಡಗಿ, ಎಳೆಯ ವಯಸ್ಸಿನಲ್ಲಿಯೇ ಲಗ್ನವಾಗಿ, ಎರಡು ಗಂಡು, ಎರಡು ಹೆಣ್ಣುಮಕ್ಕಳ ತಂದೆಯಾದರೂ, ಆಧ್ಯಾತ್ಮದ ಬಗ್ಗೆ ಒಲವು ತೋರಿಸಿದ. ವೈಷ್ಣವ ಮತವನ್ನು ಅವಲಂಬಿಸಿ, ಗಂಗಾ ನದಿಯ ಸ್ನಾನ ಮಾಡುವ, ಪವಿತ್ರ ದಿನಗಳಲ್ಲಿ ಉಪವಾಸವಿದ್ದು ದೇವರ ಧ್ಯಾನದಲ್ಲಿ ತೊಡಗಿಸಿಕೊಂಡ ಅಮರ್‌ದಾಸ್ ಅತ್ಯಂತ ಪರಿಶುದ್ಧ ಹಾಗೂ ಧಾರ್ಮಿಕ ವ್ಯಕ್ತಿಯಾಗಿ ಪರಿಣಮಿಸಿದ್ದ.

ಗುರು ಅಂಗದ್‌ನ ಮಗಳನ್ನು, ಅಮರ್‌ದಾಸ್‌ನ ಸಹೋದರನ ಮಗನಿಗೆ ಕೊಟ್ಟು ಲಗ್ನವಾದ್ದರಿಂದ, ಆಗಾಗ ಅವರ ಮನೆಗೆ ಹೋಗಿ ಬಂದಿದ್ದರಿಂದ, ಗುರು ಅಂಗದ್‌ನ ಪರಿಚಯವಾಗಿ, ಕ್ರಮೇಣ ಗುರುವಿನ ಅನನ್ಯ ಭಕ್ತನಾದ. ಗುರು ಅಂಗದ್‌ನ ಭಕ್ತನಾಗಿ, ಅವನ ಸೇವೆ ಮಾಡಿದ ಅಮರ್ ದಾಸ್‌ನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಿದ ಗುರುವಿಗೆ ಅವನು ಮರಣಿಸಿದ ನಂತರವೂ, ಅಮರ್‌ದಾಸ್ ಅತ್ಯಂತ ಭಕ್ತಿಪೂರ್ವಕವಾಗಿ ತನ್ನ ಗುರು ಹಾಕಿದ ಪರಿಪಾಠಗಳನ್ನು, ಪರಂಪರೆಯನ್ನು, ಆಚರಣೆಯನ್ನು ಚಾಚೂ ತಪ್ಪದೆ ಪಾಲಿಸಿದ.

ಗುರು ಅಮರ್‌ದಾಸ್, ವೈಯಕ್ತಿಕವಾಗಿ, ಅತ್ಯಂತ ಸರಳ ಜೀವನ ಕ್ರಮವನ್ನು ಪರಿಪಾಲಿಸಿದ. ಒಣರೊಟ್ಟಿ, ನೀರುಗಳ ಮಿತ ಆಹಾರ ಸೇವಿಸುವ ಪರಿಪಾಠ ಇರಿಸಿ, ಸ್ವತಃ ಸರಳ ಉಡುಪು ಧರಿಸಿ ಇತರರಿಗೆ ಮಾದರಿಯಾದ.

ಗುರು ಅಮರ್‌ದಾಸ್‌ನ ಪ್ರಖ್ಯಾತಿ ಹರಡಿ, ಜನ ತಂಡೋಪತಂಡವಾಗಿ

ಗೋಬಿಂದವಾಲ್ ನಗರಕ್ಕೆ ಬರಲಾರಂಭಿಸಿದಷ್ಟೇ ಅಲ್ಲದೆ, ಅನೇಕರು ಅಲ್ಲೇ ಬೀಡು ಬಿಟ್ಟರು. ಆದರಿಂದ ನಗರ ಬೆಳೆದು ಹೆಸರುವಾಸಿಯಾಯಿತು. ಗುರುವಿನ ಪ್ರಖ್ಯಾತಿ ಹರಡಿ, ನೆರೆಯ ಕಾಂಗ್ರಾ ರಾಜ್ಯದ ಮಹಾರಾಜನ ಕಿವಿಗೆ ಬಿದ್ದು, ಆತ ಗುರುವಿನ ದರ್ಶನಕ್ಕೆ ಬಂದಾಗ, ಗುರು ಅವನಿಗೆ ಆಶ್ರಮದ ಲಂಗರ್‌ನಲ್ಲಿ ಸಾಮಾನ್ಯ ಭಕ್ತರೊಂದಿಗೆ ಭೋಜನ ಸ್ವೀಕರಿಸಿದರೆ ಮಾತ್ರ ಅವನಿಗೆ ತನ್ನ ದರ್ಶನ ನೀಡುವೆನು ಎಂದಾಗ, ಉಪಾಯ ಕಾಣದ ರಾಜ, ಸಾಮಾನ್ಯರಂತೆ, ಲಂಗರ್‌ನಲ್ಲಿ ಕುಳಿತು ಊಟ ಮಾಡಿದ್ದು ಚರಿತ್ರಾರ್ಹವಾಗಿತ್ತು ಎಂದರು ಇತಿಹಾಸಕಾರರು.

ಗುರು ಅಂಗದ್ ದೇವನ ಮಗ ದಾತು ಎಂಬಾತ, ಖಿದೂರ್‌ನಲ್ಲಿ ಕುಳಿತು ತಾನೇ ಗುರುವಿನ ಉತ್ತರಾಧಿಕಾರಿ ಎಂದು ಕರೆದುಕೊಂಡ. ಆದರೆ ಅವನ ಗುರುತ್ವವನ್ನು ಅಲಕ್ಷಿಸಿದರು ಸಿಖ್‌ರು. ಗುರು ಅಮರ್‌ದಾಸನ್ನು ಕಾಣಲು ಬಂದ ಕೆಲವು ಭಕ್ತರು, ದಾತುವನ್ನು ಕಂಡಾಗ, ಅವನನ್ನು ಅಲಕ್ಷಿಸಿ, ಗೋಬಿಂದ್‌ವಾಲ್‌ಗೆ ತೆರಳಿ, ಅಲ್ಲಿದ್ದ ಗುರು ಅಮರ್‌ದಾಸ್‌ನಿಗೆ ತಮ್ಮ ವಿಶ್ವಾಸ ಪ್ರೀತಿ ವ್ಯಕ್ತಪಡಿಸಿದರು. ಸುದ್ದಿ ತಿಳಿದ ದಾತು ಕುಪಿತಗೊಂಡ. ಗುರು ಅಮರ್‌ದಾಸ್‌ನನ್ನು ಕಂಡು, ಅವನನ್ನು ಗುರುವಿನ ಗಾದಿಯಿಂದ ಇಳಿಸಿ ತಾನೇ ಅರ್ಹಗುರುವೆಂದು ತಿಳಿಸಬೇಕೆಂದು ಗೋಬಿಂದ್‌ವಾಲ್‌ಗೆ ಧಾವಿಸಿದ. ಅಲ್ಲಿ, ಗುರು ಅಮರ್‌ದಾಸ್ ಗುರುಸ್ಥಾನದಲ್ಲಿ ಕುಳಿತು ಸಕಲ ರಾಜಮರ್ಯಾದೆ ಸ್ವೀಕರಿಸುವ ದೃಶ್ಯ ನೋಡಿದ ದಾತುವಿನ ಕೋಪ ಮಿಗಿಲೇರಿ, ಕುಳಿತ ಗುರುವನ್ನು ಒದ್ದು ಗದ್ದುಗೆಯಿಂದ ಕೆಳಗೆ ಬೀಳಿಸಿದ. ಅವಮಾನಿತನಾದರೂ, ವೃದ್ಧ ಅಮರ್‌ದಾಸ್, ಸಮಾಧಾನದಿಂದ, ಬಿದ್ದಲ್ಲಿಂದ ಸಾವರಿಸಿಕೊಂಡು ಮೇಲೆದ್ದು, 'ನಾನು ವೃದ್ಧನಾಗಿದ್ದೇನೆ. ನನ್ನ ಮೂಳೆಗಳು ಗಟ್ಟಿಯಾಗಿವೆ. ಆದರೆ ಒದ್ದ ನಿನ್ನ ಕಾಲುಗಳಿಗೆ ನೋವಾಗಿರಬಹುದು' ಎಂದು ಹೇಳಿ, ದಾತುವಿನೊಂದಿಗೆ ಕದನಕ್ಕೆ ಇಳಿಯದೆ, ಊರು ತ್ಯಜಿಸಿ ತನ್ನ ಸ್ವಂತ ಹಳ್ಳಿ ಬಸರ್ಕೆಗೆ ತೆರಳಿದ. ಅಲ್ಲೇ ಒಂದು ಸಣ್ಣ ಮನೆಯಲ್ಲಿ ಉಳಿದು ಧ್ಯಾನದಲ್ಲಿ ತನ್ನನ್ನು ತೊಡಗಿಸಿಕೊಂಡ.

ಸ್ವಯಂ ಗುರುವಿನ ಪಟ್ಟ ಸ್ವೀಕರಿಸಿದ ದಾತು ಬಹುಕಾಲ ಗುರುವಾಗಿ ಬಾಳಲಿಲ್ಲ. ಅವನಿಗೆ ದೊರೆತ ಅಲ್ಪ ಸ್ವಲ್ಪ ಕಾಣಿಕೆಗಳನ್ನು, ದ್ರವ್ಯಸಾಮಗ್ರಿಗಳನ್ನು ಒಟ್ಟುಹಾಕಿ ತನ್ನೂರಿಗೆ ವಾಪಸ್ಸಾಗುವ ಮನಸ್ಸು ಮಾಡಿ, ಗೋಬಿಂದ್‌ವಾಲ್‌ನಿಂದ ಖಿದೂರಿಗೆ ಹೊರಟ. ದಾರಿಯ ಮಧ್ಯದಲ್ಲಿ ಅವನನ್ನು ಹಿಡಿದ ದರೋಡೆಕೋರರು, ಅವನಿಗೆ ಥಳಿಸಿ ಕಾಲನ್ನು ಊನ ಮಾಡಿ, ಅವನಿಂದ ಸಕಲ ದ್ರವ್ಯ ದೋಚಿದರು. ೧

ಇತ್ತ ಗುರು ಅಮರ್‌ದಾಸ್‌ನನ್ನು ಹುಡುಕುತ್ತಾ ಬಂದ ಭಾಯಿ ಬುಡ್ಡಾ ಮತ್ತು ಇತರ ಭಕ್ತರು, ಬಸರ್ಕೆಗೆ ಬಂದು ಅವನು ತಂಗಿದ್ದ ಮನೆಗೆ ಬಂದರು. ಅಲ್ಲಿ ಮನೆಬಾಗಿಲ ಮೇಲೆ ಬರೆದ ಬರಹ ನೋಡಿ ಆಶ್ಚರ್ಯಗೊಂಡರು. ಯಾಕೆಂದರೆ,

---

೧. P 44 The Sikh Religion by Macauliffe

ಅಲ್ಲಿ 'ಯಾರು ಈ ಬಾಗಿಲನ್ನು ತೆರೆಯಲೆತ್ನಿಸುತ್ತಾರೋ, ಅವರನ್ನು ನಾನು ನನ್ನ ಭಕ್ತನೆಂದು ತಿಳಿಯುವುದಿಲ್ಲ' ಎಂದು ಬರೆಯಲಾಗಿತ್ತು. ಆಗ, ನೆರೆದಿದ್ದವರು ಉಪಾಯ ಕಾಣದೆ ನಿರುತ್ಸಾಹ, ದುಗುಡ, ಆತಂಕಗಳಿಂದ ನಿಂತರು. ಭಾಯಿ ಬುಡ್ಡಾ ಒಂದು ಉಪಾಯ ಹುಡುಕಿದ. ಮನೆಯ ಹಿಂಬದಿಗೆ ತೆರಳಿ, ಅದರ ಹಿಂಬಾಗಿಲನ್ನು ಮುರಿದು ಒಳಗೆ ಹೋಗಿ ಗುರುವನ್ನು ಕಂಡ. ಮುಂಬಾಗಿಲನ್ನು ತೆರೆಯದೆ ಹಿಂಬಾಗಿಲನ್ನು ತೆರೆದಿದ್ದು, ಗುರುವಿನ ಆದೇಶ ಪಾಲಿಸಿದಂತಾಗಿತ್ತು ಅವನ ಪಾಲಿಗೆ. ಅವರು ಗೋಬಿಂದ್‌ವಾಲ್‌ಗೆ ಹಿಂದಿರುಗಲು ಗುರುವಿನ ಮನವೊಲಿಸಿದರು. ಗುರು ವಾಪಸ್ಸು ಬಂದ ದಿನವನ್ನು ಇಂದಿಗೂ ಅಲ್ಲಿನ ಭಕ್ತರು ಹಬ್ಬವನ್ನಾಚರಿಸುವ ಸಾಂಪ್ರದಾಯವನ್ನು ಹುಟ್ಟು ಹಾಕಿದ್ದಾರೆ. ೨

ಗೋಬಿಂದ್‌ವಾಲ್ ಪ್ರಸಿದ್ಧಿ ಪಡೆದು, ಜನ ವಸತಿಯಿಂದ ನಗರ ಬೆಳೆಯಿತು. ಹಿಂದೂ, ಸಿಖ್‌ರೊಂದಿಗೆ ಮುಸ್ಲಿಮ್ ಪಠಾಣರು ಅಲ್ಲಿಗೆ ವಲಸೆ ಬಂದು, ವ್ಯಾಪಾರೋದ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಪಠಾಣರು ಸುಮ್ಮನೆ ಕುಳಿತು ತಮ್ಮ ಉದ್ಯೋಗದಲ್ಲಿ ತೊಡಗದೆ, ಸಿಖ್‌ರ ಏಳಿಗೆಯನ್ನು ಕಂಡು ಕರುಬತೊಡಗಿದರು. ಸಣ್ಣಪುಟ್ಟ ಕಾರಣಗಳಿಗೆ ಅವರೊಂದಿಗೆ ಕಲಹ ಪ್ರಾರಂಭಿಸಿದರು. ಒಮ್ಮೆ ಸನ್ಯಾಸಿಗಳ ಗುಂಪೊಂದು ನಗರಕ್ಕೆ ಬಂದಾಗ, ಅವರೊಂದಿಗೆ ಕಲಹ ಹೂಡಿ, ಸಾವು ನೋವು ಉಂಟುಮಾಡಿದರು. ಗುರು ಅಮರ್‌ದಾಸ್ ಮಾತ್ರ, ತನ್ನ ಶಿಷ್ಯಂದಿರಿಗೆ ಪ್ರೀತಿ, ಸ್ಥೈರಣೆ, ಕರುಣೆ ಮತ್ತು ದೈನ್ಯತೆ ಉಪದೇಶಿಸುವುದನ್ನು ಮಾಡುವುದನ್ನು ತಪ್ಪಿಸಲಿಲ್ಲ. ಪಠಾಣರ ಉದ್ರೇಕ, ತೀಕ್ಷ್ಣ ಕಠೋರ ನಡೆಗಳು ಅವರನ್ನು ರೊಚ್ಚಿಗೆಬ್ಬಿಸದೆ, ಸ್ಥೈರಣೆಯಿಂದಿರಲು ಉಪದೇಶಿಸಿದರು. ಆದರೆ, ಪಠಾಣರ ಸೊಕ್ಕು ಮುರಿಯಲು ಹೆಚ್ಚು ಸಮಯ ಬೇಕಾಗಿರಲಿಲ್ಲ. ದಿಲ್ಲೀ ದರ್ಬಾರ್‌ನ ದ್ರವ್ಯ ಸಾಮಗ್ರಿಗಳನ್ನು ಹೊತ್ತು ಒಂದು ತುಕುಡಿ ಗೋಬಿಂದ್‌ವಾಲ್‌ದ ಪಠಾಣ ಇಲಾಖೆಯ ಸಮೀಪ ಬಂದಾಗ, ಪಠಾಣರು ಅದಕ್ಕೆ ತಡೆಹಾಕಿ ದ್ರವ್ಯವನ್ನು ದೋಚಿದರು. ದಿಲ್ಲಿ ಅಧಿಕಾರಿಗಳಿಗೆ ಸುದ್ದಿ ಅರಿತಾಗ, ಅವರು ಒಂದು ಬಲಿಷ್ಠ ಸೈನ್ಯದ ತುಕಡಿಯನ್ನು ಗೋಬಿಂದ್‌ವಾಲ್‌ಗೆ ಕಳುಹಿಸಿ, ಪಠಾಣರನ್ನು ಹಿಡಿದು ಹಿಂಸಿಸಿ ಕೊಂದರು.

'ದೇವರ ರಾಜ್ಯದಲ್ಲಿ ನ್ಯಾಯ ಖಂಡಿತವಾಗಿ ದೊರಕುತ್ತದೆ. ಆದರೆ ಅದಕ್ಕಾಗಿ ಕಾಯಬೇಕು. ನಿರಪರಾಧಿ ಮತ್ತು ಶಾಂತಿಯನ್ನು ಬಯಸುವವರ ದೈನ್ಯತೆ ಮತ್ತು ಸ್ಥೈರಣೆಯ ಬಾಣಗಳು ತಮ್ಮ ಗುರಿಯನ್ನು ಸಾಧಿಸುವವು' ಎಂದು ಗುರು ಅಮರ್‌ದಾಸ್, ಪಠಾಣರಿಗೆ ಆದ ಶಿಕ್ಷೆಯನ್ನು ಕುರಿತು ಹೇಳಿದ.

ಗುರು ಅಮರ್‌ದಾಸನ ಪ್ರಖ್ಯಾತಿ ಹರಡುತ್ತಿದ್ದಾಗ, ಅವನ ಬಗ್ಗೆ ಹಲವಾರು ಕತೆಗಳು ಹುಟ್ಟಿಕೊಂಡು, ಅವನ ಪ್ರಖ್ಯಾತಿ ಹರಡಲು ಕಾರಣವಾದವು.

---

೨. P 161 The History of Sikh People by G.Singh

ಒಮ್ಮೆ ಗುರು ಅಮರ್‌ದಾಸ್, ಕುದುರೆ ಸವಾರಿ ಮಾಡಿ, ಒಂದು ಮನೆಯ ಗೋಡೆಯ ಬದಿಯಲ್ಲಿ ಸಾಗುತ್ತಿದ್ದಾಗ, ಗೋಡೆ ಮುರಿದು ಬೀಳುವ ಸ್ಥಿತಿಯಲ್ಲಿದ್ದುದನ್ನು ಕಂಡು, ಕುದುರೆಯನ್ನು ದೌಡಾಯಿಸಿ ಬೀಳುವ ಗೋಡೆಯಿಂದ ಪಾರಾದ. ಆ ದೃಶ್ಯವನ್ನು ನೋಡಿದ ಅವನ ಶಿಷ್ಯಂದಿರು ವಿಸ್ಮಯಗೊಂಡರು. ತಮಗೆ, ಸಾವಿನ ಭಯವಿರಕೂಡದು ಎಂದು ಉಪದೇಶಿಸಿದ ಗುರು, ಸ್ವತಃ ಪ್ರಾಣಭಯದಿಂದ ಹೆದರಿ ಕುದುರೆಯನ್ನು ದೌಡಾಯಿಸಿದ್ದು, ಅವರಿಗೆ ಅಚ್ಚರಿ ತಂದಿತ್ತು. ಅವರು ಗುರುವನ್ನು ಈ ಬಗ್ಗೆ ಪ್ರಶ್ನಿಸಿದಾಗ, ಗುರು ನೀಡಿದ ಉತ್ತರ ಅತ್ಯಂತ ಸಮರ್ಪಕವಾಯಿತು. 'ಈ ಮಾನವ ದೇಹ ದೇವರ ಒಂದು ಕೃತಿ. ಅದನ್ನು ವಿನಾ ಕಾರಣ ಅನಾವಶ್ಯಕವಾಗಿ ಸಾವಿನ ದವಡೆಗೆ ನೂಕಬಾರದು . . .ಒಬ್ಬ ಬದುಕಿದ್ದು ಸಾಯುವಂತಿರಬೇಕೆಂದರೆ, ಸಾವಿನ ನೆನಪಿದ್ದು ದೇವರಿಗೆ ತನ್ನನ್ನು ಸಮರ್ಪಿಸಿಕೊಂಡಿರಬೇಕೆ ವಿನಃ ವಿನಾಕಾರಣ ದೈಹಿಕ ನಾಶಕ್ಕೆ ಅಣಿಯಾಗಬಾರದು.'

ಅವನ ಭಕ್ತರು ಗುರುವನ್ನು ಯಾವುದೇ ಕೆಲಸಕಾರ್ಯ ಶುರುಮಾಡಲು ಸಕಾಲ, ಘಂಟೆ, ಗಳಿಗೆ ಇತ್ಯಾದಿಗಳನ್ನು ನೋಡಿ ಮಾಡಬೇಕಲ್ಲವೇ ಎಂಬ ಪ್ರಶ್ನೆಗೆ ಗುರು ಅತ್ಯಂತ ತರ್ಕಬದ್ಧ ಉತ್ತರ ನೀಡಿ ಸಮಾಧಾನ ಹೇಳಿದರು.

'ಭವಿಷ್ಯವನ್ನು ಹೇಳುವವರು ಅಥವಾ ಭವಿಷ್ಯದಲ್ಲಿ ಏನಾಗುವುದು ಎಂದು ತಿಳಿಸುವವನು, ಮೂರ್ಖ ಶಿಖಾಮಣಿಗಳು. ಗ್ರಹಗತಿಯ ಸಲಹೆ ಪಡೆಯುವುದು ಕಾಲಹರಣ ಮಾಡುವವರ ಕಾರ್ಯ. ಭವಿಷ್ಯದಲ್ಲಿ ಏನಾಗುವುದು ಎಂದು ಅರಿತರೆ ನಮ್ಮ ಜೀವನ ಅತ್ಯಂತ ಪೀಡನೆಯುಳ್ಳದ್ದಾಗುತ್ತದೆ. ದೈವೇಚ್ಛೆಯಂತೆ ನಮ್ಮ ಆಗುಹೋಗುಗಳಾಗಿರುವಾಗ, ಭವಿಷ್ಯವನ್ನು ನುಡಿಯುವುದು ಅಸಾಧ್ಯ.'

ಧರ್ಮಪ್ರಚಾರಕ್ಕಾಗಿ ಗುರು ಅಮರ್‌ದಾಸ್ ಕೈಗೊಂಡ ಅತಿ ಮುಖ್ಯ ಕೆಲಸವೆಂದರೆ, ದೇಶದಲ್ಲಿ ೨೨ ಧರ್ಮಾಡಳಿತ ಕೇಂದ್ರಗಳನ್ನು ಸ್ಥಾಪಿಸಿದ್ದು. ಆ ಕೇಂದ್ರಗಳ ಆಡಳಿತಗಾರರನ್ನಾಗಿ ೨೨ ಜನರನ್ನು ಆಯ್ಕೆ ಮಾಡಿದ. ಅವರೆಲ್ಲರು ಜಾಟ್ ಸಮುದಾಯಕ್ಕೆ ಸೇರಿದವರಾಗಿದ್ದರು. ಕ್ರಮೇಣ ಅವರಲ್ಲ ಒಬ್ಬ ಮುಸ್ಲಿಂ ಭಕ್ತ ಅಲಾಯಾರ್ ಎಂಬುವವನ್ನು ದಿಲ್ಲಿ ನಗರದ ಧರ್ಮಾಡಳಿತ ಕೇಂದ್ರಕ್ಕೆ ನೇಮಿಸಿದ.

ಗುರು ಅಮರ್‌ದಾಸ್‌ನ ಈ ಕಾರ್ಯ ಧರ್ಮಪ್ರಚಾರಕ್ಕೆ ಅನುಕೂಲಕರವಾಗಿದ್ದರೆ, ಕ್ರಮೇಣ ಅವು ಪರಸ್ಪರ ಕಲಹ, ವೈಮನಸ್ಸು, ಗುಂಪುಗಾರಿಕೆಗಳ ಸಂಸ್ಥೆಗಳಾಗಿ ಬೆಳೆದಿದ್ದು ವಿಷಾದಕರವಾಯಿತು ಎಂದರು ಇತಿಹಾಸಕಾರರು.

ಈ ಧರ್ಮಾಧಿಕಾರಿಗಳನ್ನು 'ಮಸಂದ್' ಎಂದು ಕರೆದರು. ('ಪರ್ಶಿಯನ್ ಮಸನದ್ – ಇ– ಆಲಾ' ಎಂಬ ಪದದಿಂದ ಈ 'ಮಸಂದ್' ಪದ ಉದ್ಭವವಾಯಿತು ಎಂದಿದ್ದಾರೆ.) ಈ ಮಸಂದ್‌ರು ಅತಿ ಹುರುಪಿನಿಂದ ಧರ್ಮ ಪ್ರಚಾರಕರ ಕೆಲಸ ಮಾಡಿ, ಗುರುವಿನ ಖಜಾನೆಯನ್ನು ಕಾಣಿಕೆಗಳಿಂದ ತುಂಬಿದರು.

ಇಂದಿಗೂ ಪ್ರಚಲಿತದಲ್ಲಿರುವ ಮತ್ತು ಆಚರಿಸಲಾಗುತ್ತಿರುವ 'ಬೈಶಾಖಿ' ಮತ್ತು 'ದಿವಾಳೀ' ಹಬ್ಬಗಳ ಆಚರಣೆಯ ಸಂಪ್ರದಾಯವನ್ನು ಗುರು ಅಮರ್‌ದಾಸ್ ತನ್ನ ಅಧಿಕಾರಾವಸ್ಥೆಯಲ್ಲಿ ಜಾರಿಗೆ ತಂದನೆಂದು ಹೇಳಲಾಗಿದೆ. (ಏಪ್ರಿಲ್ ತಿಂಗಳಲ್ಲಿ ಜರುಗುವ ಬೈಶಾಖಿ; ನವೆಂಬರ್ ತಿಂಗಳಲ್ಲಿ ಜರುಗುವ ದಿವಾಳಿ)

ಗೋಬಿಂದ್‌ವಾಲ್‌ನಲ್ಲಿ ೮೪ ಮೆಟ್ಟಿಲುಗಳುಳ್ಳ ಬಾವಿ(ಬಾವ್ಲಿ)ಯನ್ನು ಕಟ್ಟಿಸಿದ ಗುರು ಅಮರ್‌ದಾಸ್ ಹಿಂದೂಗಳು ನಂಬುವ ಹಾಗೆ, ಆ ಮೆಟ್ಟಿಲುಗಳ ಮೇಲೆ ನಿಂತು ಜಪವನ್ನು ಮಾಡಿ ಸ್ನಾನವನ್ನು ಮಾಡಿದರೆ, ಜನನ ಮರಣದಿಂದ ಮುಕ್ತರಾಗುವರು ಎಂದು ಸಾರಿ ಸಿಖ್ಖರಿಗೆ ಆದೇಶ ನೀಡಿದ. ಇಂದಿಗೂ ಸಿಖ್‌ರು ಗೋಬಿಂದ್‌ವಾಲ್‌ಗೆ ಯಾತ್ರಿಸುವಾಗ, ಗುರುವಿನ ಆದೇಶ ಪಾಲಿಸುವರು. ೩

ಗುರು ತನ್ನ ಮಗಳಾದ ಬೀಬಿ ಭಾಣೆಯನ್ನು ಪರಮ ಶಿಷ್ಯ ಜೇಥಾನಿಗೆ ಕೊಟ್ಟು ವಿವಾಹ ಮಾಡಿದ. ಈ ಜೇಥಾ ಲಾಹೋರ್‌ನಗರವಾಸಿಯಾಗಿದ್ದ. ಗುರುವಿನ ಪ್ರಸಿದ್ಧಿ ಅರಿತು, ಗೋಬಿಂದ್‌ವಾಲ್‌ಗೆ ಯಾತ್ರಿಸಿ, ಅಲ್ಲಿನ ಪವಿತ್ರ ವಾತಾವರಣಕ್ಕೆ ಮನಸೋತು, ಅಲ್ಲೇ ತಳ ಊರಿದ್ದ. ಗುರುವಿನ ಪರಮ ಶಿಷ್ಯನಾಗಿ ಪರಿಣಮಿಸಿದ್ದ. ಗುರು ತನ್ನ ಮಗಳನ್ನು ಆತನಿಗೆ ವಿವಾಹ ಮಾಡಿಕೊಟ್ಟಿದ್ದು ಆಶ್ಚರ್ಯದ ಸಂಗತಿಯಾಗಿರಲಿಲ್ಲ. ಯಾಕೆಂದರೆ ಮುಂದೆ ಜೇಥಾ ಗುರುವಿನ ಉತ್ತರಾಧಿಕಾರಿಯಾಗಿ ನೇಮಿಸಲ್ಪಟ್ಟ. ೪

ಗುರು ಅಮರ್‌ದಾಸ್‌ನ ಪ್ರಖ್ಯಾತಿ, ಅವನು ದೇಶದ ಪ್ರಮುಖ ಸ್ಥಳಗಳಲ್ಲಿ ಧರ್ಮಪ್ರಚಾರ ಮಾಡುವುದಕ್ಕೆ ಸ್ಥಾಪಿಸಿದ ಧರ್ಮಸಂಸ್ಥೆಗಳಿಂದ, ಮತ್ತಷ್ಟು ಉನ್ನತಮಟ್ಟಕ್ಕೇರಿ, ಉಚ್ಚಕುಲದ ಬ್ರಾಹ್ಮಣರು ಮತ್ತು ಖಾತ್ರಿಗಳ ಕಣ್ಣುಗಳು ಕೆಂಪಗಾಗಿ, ಅವರು ತಾವು ಇತರ ಜಾತಿಯವರ ಮೇಲೆ ಜರುಗಿಸುತ್ತಿದ್ದ ದರ್ಪ, ಅಧಿಕಾರ, ಅಂಧ ಕಂದಾಚಾರ ಪದ್ಧತಿಗಳಿಗೆ ಸಂಚಕಾರ ಜರುಗಿ ಬಂದಿದ್ದನ್ನು ಅರಿತು, ದಿಲ್ಲಿ ಬಾದ್‌ಶಹ ಅಕ್ಬರ್‌ನಿಗೆ ತಮ್ಮ ಅಹವಾಲನ್ನು ಹೇಳಿಕೊಂಡರು. ಅನಾದಿಕಾಲದಿಂದಲೂ ಆಚರಿಸಿಕೊಂಡು ಬಂದಂತಹ ಧಾರ್ಮಿಕ ನಂಬಿಕೆಗಳನ್ನು ಮತ್ತು ಆಚರಣೆಗಳನ್ನು ಗುರು ಅಮರ್‌ದಾಸ್ ತನ್ನ ನೂತನ ಧರ್ಮದ ಉಪದೇಶಗಳಿಂದ ಜನರ ಮನಸ್ಸನ್ನು ತಪ್ಪು ದಾರಿಗೆ ಎಳೆದೊಯ್ಯುತ್ತಿದ್ದಾನೆ ಎಂದು ಅವರು ದೂರಿತ್ತರು. ೫

ಅಕ್ಬರ್, ಗೋಬಿಂದ್‌ವಾಲ್‌ಗೆ ಭೇಟಿ ನೀಡಿದ್ದರ ಬಗ್ಗೆ ಈ ಇತಿಹಾಸಕಾರ ವಿವರ ನೀಡಿದ್ದಾನೆ.

ಬಾದ್‌ಶಹ ಅಕ್ಬರ್, ವಿಚಾರಣೆ ನಡೆಸಲು ನಿರ್ಧರಿಸಿ, ಗುರು ಅಮರ್ ದಾಸ್‌ಗೆ

---

೩. P 75 The Later Mughals by W. Irvine

೪. P 106 The Sikh Religion by Macauliffe

೫. P 97 The Sikh Religion by Macauliffe

ರಾಜಧಾನಿಗೆ ಬರಲು ಆದೇಶ ನೀಡಿದ. ಆದರೆ ವೃದ್ಧಾಪ್ಯದಿಂದ ನರಳುತ್ತಿದ್ದ ಗುರು ತಮ್ಮ ಪರಮ ಶಿಷ್ಯ ಜೇಥಾನನ್ನು ದಿಲ್ಲಿಗೆ ಕಳುಹಿಸಿದ. ದಿಲ್ಲಿ ಬಾದಶಹಾನ ದರ್ಬಾರ್‌ನಲ್ಲಿ ಹಾಜರ್ ಆದ ಜೇಥಾ ಗುರುವಿನ ಮೇಲೆ ಮಾಡಿದ ಆಪಾದನೆಗಳ ವಿರುದ್ಧ ಸೂಕ್ತ ವಿತರಣೆ ನೀಡಿ, ಗುರು ಎಸಗುತ್ತಿರುವ ಕಾರ್ಯವೈಖರಿ ಮತ್ತು ಉಪದೇಶಗಳ ಸಾರವನ್ನು ಬಾದ್‌ಶಹನಿಗೆ ಮನವರಿಕೆ ಮಾಡಿದ.

'ಹುಟ್ಟು ಮತ್ತು ಜಾತಿ ದೇವರ ಮುಂದೆ ಸಮರ್ಪಿಸಿಕೊಳ್ಳುವುದಂತಲ್ಲ. ತಾನು ಮಾಡುವ ಕಾರ್ಯದಿಂದ ಮನುಷ್ಯನನ್ನು ಅಳೆಯಬೇಕು. ಅಮಾಯಕ ಮನುಷ್ಯರನ್ನು ಮೂಢನಂಬಿಕೆಗಳಿಂದ ನಂಬಿಸಿ ತಪ್ಪುದಾರಿಗೆ ಎಳೆಯುವುದನ್ನು ಧರ್ಮ ಎಂದು ಕರೆದರೆ ದೇವರು ಮತ್ತು ಮಾನವನ ವಿರುದ್ಧ ಎಸಗುವ ಪಾಪಕಾರ್ಯ. ಅನಂತ, ನಿರಾಕಾರ ಮತ್ತು ಅಖಂಡ ದೇವರನ್ನು ಒಂದು ಚಿಹ್ನೆ, ಮೂರ್ತಿ ಅಥವಾ ನಿರರ್ಥಕ ಅಥವಾ ಪ್ರಕೃತಿಯ ನಾಶವಾಗುವಂತಹ ಒಂದು ವಸ್ತುಗಳ ತರಹ ಪೂಜಿಸುವಂತಹದಾಗಲೀ ಅಥವಾ ತಮ್ಮ ಪಾಪಕಾರ್ಯಗಳನ್ನು, ಕರುಣೆಯಿಂದ ಮತ್ತು ಆತ್ಮಸಮರ್ಪಣೆ ಮಾಡಿಕೊಳ್ಳದೆ, ಕೇವಲ ತರ್ಪಣ ನೀಡುವುದರಿಂದಾಗಲೀ, ವಿಶೇಷವಾದ ಆಹಾರ, ಭಾಷೆಗಳು ಮತ್ತು ಉಡುಪುಗಳನ್ನು ಬಳಸುವಂತಾಗಲಿ ಮತ್ತು ಜನಸಾಮಾನ್ಯರನ್ನು, ಮಹಿಳೆಯರನ್ನು ಮೊದಲುಗೊಂಡು, ಇಂತಹದೇ ಆಹಾರವನ್ನು ಸೇವಿಸಬೇಕೆಂದಾಗಲಿ, ಅವರನ್ನು ಅನಾಗರಿಕರನ್ನಾಗಿ ಮಾಡಿ, ಅವರಿಗೆ ಧಾರ್ಮಿಕ ಶಾಸ್ತ್ರಗಳನ್ನು ಓದಿ ಪಠಿಸುವುದಕ್ಕೆ ಅಡ್ಡಿ ಮಾಡುವುದಾಗಲೀ ಅಥವಾ ಯಾವುದೇ ಕಾರ್ಯ ಮಾಡಲಿಕ್ಕೆ ಅಡಚಣೆ ನೀಡುವುದಾಗಲೀ ಮನುಷ್ಯನನ್ನು ಪರಸ್ಪರ ದೂರ ಮಾಡುವುದೇ ಸರಿ. ಇದು ಧರ್ಮವಲ್ಲ. ಮನುಷ್ಯನಿಗೆ ಈ ಪ್ರಪಂಚದ ಮೂಲಕ ತನ್ನ ಆಧ್ಯಾತ್ಮಿಕ ಹಸಿವನ್ನು ನೀಗಿಕೊಳ್ಳಲು ನೀಡದಿರುವುದು ಧರ್ಮವಾಗುವುದಿಲ್ಲ.' ೬

ಅಕ್ಬರ್ ಬಾದ್‌ಶಹಾ, ಜೇಥಾನ ವಿವರಣೆ ಕೇಳಿ ಸಂತುಷ್ಟನಾದ. ಏಕೆಂದರೆ, ಅವನು ಕೂಡ ಮಾನವ ಜನಾಂಗಕ್ಕೆ ಒಂದೇ ಧರ್ಮವಿರಬೇಕು. ಅದು ಎಲ್ಲರ ಹಿತಕ್ಕಾಗಿ, ಎಲ್ಲರ ಒಮ್ಮತವಿದ್ದು, ಜನರು ಸಾಮರಸ್ಯದಿಂದ ಕೂಡಿ ಬಾಳಬೇಕು ಎಂಬ ನಿಲುವನ್ನು ಹೊತ್ತಿದ್ದ. 'ದಿನ್-ಇ-ಇಲಾಹಿ' – ಸರ್ವರಿಗೂ ಒಂದೇ ಧರ್ಮವೆಂಬ ನೂತನ ಧರ್ಮವನ್ನು ಸ್ಥಾಪಿಸಿ ಪ್ರಚಾರ ಮಾಡಬೇಕೆಂಬ ಆಸೆ ಹೊತ್ತಿದ್ದ ಬಾದ್‌ಶಹ ಸರ್ವಧರ್ಮಗಳ ಪ್ರತಿನಿಧಿಗಳನ್ನು ಕರೆಸಿ, ಅವರೊಂದಿಗೆ ಚರ್ಚಿಸಿ, ನೂತನ ಧರ್ಮವನ್ನು ಆಚರಣೆಗೆ ತರುವ ನಿಟ್ಟಿನಲ್ಲಿದ್ದಾಗ, ಸಿಖ್ಖರ ನೂತನ ಮತ ಅವನನ್ನು ಆಕರ್ಷಿಸಿದ್ದರಲ್ಲಿ ಅತಿಶಯೋಕ್ತಿ ಇರಲಿಲ್ಲ ಎಂದರು ಇತಿಹಾಸಕಾರರು. ೭

---

೬. P 106 The Sikh Religion by Macauliffe

೭. P 197 History of Sikh People by G.Singh

ಬ್ರಾಹ್ಮಣರ ಮತ್ತು ಖಾತ್ರೀಗಳ ಅಹವಾಲುಗಳನ್ನು ನಿರಾಕರಿಸಿದ ಬಾದ್‌ಶಹಾ ಗುರು ಅಮರ್‌ದಾಸ್‌ಗೆ ಮನ್ನಣೆ ನೀಡಿದ. ಸಂತುಷ್ಟನಾದ ಗುರು ತನ್ನ ಪೂರ್ವಿಕ ಗುರುಗಳ ಪರಂಪರೆಯ ಮೇರೆ ಪ್ರಸಿದ್ಧ ಹಿಂದೂ ಧಾರ್ಮಿಕ ಕ್ಷೇತ್ರಗಳ ಯಾತ್ರೆ ಕೈಗೊಂಡ. ಬಾದ್‌ಶಾಹ ಅಕ್ಬರ್ ಗುರುವಿನ ಯಾತ್ರೆಗೆ ಯಾವ ಅಡಚಣೆ ನೀಡದೆ, ಕ್ಷೇತ್ರಗಳಿಗೆ ಯಾತ್ರಿಸುವ ವಿನಾಯಿತಿ ನೀಡಿದ. ಇದರಿಂದ ಇತರ ಹಿಂದೂ ಯಾತ್ರಿಕರು, ತಾವು ಗುರುವಿನ ಹಿಂಬಾಲಕರು ಎಂದು ಕರೆದುಕೊಂಡು ಕರನೀಡುವುದನ್ನು ತಪ್ಪಿಸಿಕೊಂಡರು. ಆದರೆ, ಅವರು ಗುರುವಿನ ದೈನ್ಯತೆ, ಆದರ್ಶ, ಉಪದೇಶಗಳಿಂದ ವಂಚಿತರಾಗದೆ, ಕ್ರಮೇಣ ಗುರುವಿನ ಉಪದೇಶಗಳಿಗೆ ಮಾರುಹೋಗಿ, ಅವರಲ್ಲಿ ಅನೇಕರು ಗುರುವಿನ ಶಿಷ್ಯರಾಗಿ ಪರಿವರ್ತನಗೊಂಡರು.

ಗುರು ಅಮರ್‌ದಾಸ್‌ನ 'ಲಂಗರ್'ನಲ್ಲಿ ಎಲ್ಲಾ ಜಾತಿ, ಧರ್ಮ, ಪಂಗಡಗಳಿಂದ ಜನರಿಗೆ ಊಟೋಪಚಾರ ನೀಡಿದ್ದರಿಂದ, ಬಡವ, ನಿರ್ಗತಿಕ ಜನರು ಅದರ ಲಾಭ ಪಡೆದು ಧನ್ಯರಾಗುತ್ತಿದ್ದರು.

ಗುರು ಅಮರ್‌ದಾಸ್ ತನ್ನ ಧರ್ಮಪ್ರಚಾರ ಮತ್ತು ಉಪದೇಶಗಳನ್ನು ಪಂಜಾಬಿ ಭಾಷೆಯಲ್ಲಿ ಮಾಡುತ್ತಿದ್ದುದನ್ನು ಕಂಡ ಬ್ರಾಹ್ಮಣ ಪಂಡಿತರಿಗೆ ಸಹಿಸಲಾಗಲಿಲ್ಲ. ದೇವಭಾಷೆ ಸಂಸ್ಕೃತವನ್ನು ಕಡೆಗಣಿಸಿ, ದೇಸೀಯ ಭಾಷೆಗಳಲ್ಲಿ ಪ್ರವಚನ ಜಗುರುಗಿಸುತ್ತಿದ್ದ ಗುರುವನ್ನು ಒಬ್ಬ ಹೆಸರಾಂತ ಬ್ರಾಹ್ಮಣ ವಿದ್ವಾಂಸ ಪ್ರಶ್ನಿಸಿದ : 'ಜ್ಞಾನಿಗಳು, ಪಂಡಿತರು, ಸಂತರು ಉಪಯೋಗಿಸುವ ಸಂಸ್ಕೃತ ಭಾಷೆಯನ್ನು ಉಪಯೋಗ ಮಾಡದೆ, ಯಾಕೆ ಜನರಿಗೆ ದೇಸೀಯ ಭಾಷೆಯಲ್ಲಿ ಉಪದೇಶ ನೀಡುವಿರಿ?'

ಗುರು ಅಮರ್‌ದಾಸ್ ಉತ್ತರಿಸಿದ : 'ಸಂಸ್ಕೃತ ಗಣ್ಯರಿಗೆ ಸೀಮಿತವಾಗಿದ್ದು, ಅದು ಒಂದು ಆಳವಾದ ಸರ್ವರಿಗೂ ದೊರಕದಂತಹ ಬಾವಿಯ ನೀರಿನಂತೆ ಇದೆ. ಆದರೆ, ಜನ ಸಾಮಾನ್ಯ ಭಾಷೆಯಾದರೋ, ಅದು ಮಳೆನೀರಿನಂತಹ ಸ್ವಚ್ಛ, ಯಥೇಚ್ಛ ಸರ್ವರಿಗೂ ದೊರಕುವ ಭಾಷೆಯಾಗಿದೆ. ನನ್ನ ತತ್ವವಿಚಾರಗಳನ್ನು ಜನಸಮಾನ್ಯರು ಮಾತನಾಡುವ ಭಾಷೆಯ ಮುಖಾಂತರ ಪ್ರಚಾರ ಮಾಡಲು ಇಚ್ಛಿಸುವೆನು. ಯಾಕೆಂದರೆ ಭಾಷೆ ಮುಖ್ಯವಲ್ಲ, ಅದರಲ್ಲಿ ಅಡಗಿರುವ ತಾತ್ಪರ್ಯವೇ ಪವಿತ್ರ ಮತ್ತು ಯೋಗ್ಯವಾದದ್ದು.' ೮

ಗುರು ಅಮರ್‌ದಾಸ್‌ನ ಕಾಲದಲ್ಲಿ ಈಗಿನ ಪ್ರಸಿದ್ಧ ಅಮೃತಸರ ನಗರದ ಅಸ್ಥಿಭಾರ ಹಾಕಲಾಯಿತು. ಗುರು ತನ್ನ ಶಿಷ್ಯ ಜೇಥಾನಿಗೆ ಅಲ್ಲಿ ಒಂದು ಸುಂದರ ಕೊಳವನ್ನು ನಿರ್ಮಿಸಿ ಅದರ ಪಕ್ಕದಲ್ಲಿ ತನಗೋಸ್ಕರ ಮನೆಯನ್ನು ನಿರ್ಮಿಸಬೇಕೆಂದು ಕೇಳಿಕೊಂಡನು. ಗುರುವಿನ ಅಣತಿಯಂತೆ, ಜೇಥಾ, ಜಮೀನುದಾರರಿಂದ ಜಮೀನನ್ನು

---

೮. P 169 History of Sikh People by G.Singh

೭೦೦ ಅಕ್ಬರಿ ನಾಣ್ಯಗಳನ್ನು ನೀಡಿ, ಖರೀದಿಸಿದನು. ಅಲ್ಲಿ ಒಂದು ಕೊಳವನ್ನು ನಿರ್ಮಿಸಿದ. ಆ ಕೊಳಕ್ಕೆ 'ಸಂತೋಖ್‌ಸರ' ಎಂದು ಹೆಸರಿಡಲಾಯಿತು. ಆ ಸ್ಥಳಕ್ಕೆ 'ಗುರು ಚೌಕ್' ಎಂದು ಹೆಸರಿಟ್ಟರೂ, ಅದು 'ರಾಮದಾಸ್‌ಪುರ'ವೆಂದು ಕರೆಸಿಕೊಂಡು, ಕ್ರಮೇಣ 'ಅಮೃತಸರ್' ಎಂದು ಪ್ರಖ್ಯಾತಗೊಂಡಿತು. ೯

ಯಾವುದೇ ಯಾತ್ರಾಸ್ಥಳ ಪುಣ್ಯಸ್ಥಳವನ್ನಾಗಿ ಪರಿವರ್ತಿಸಬೇಕಾದರೆ, ಆ ಜಾಗದಲ್ಲಿ ನೀರಿನ ಕೊಳ ಅಥವಾ ನದಿ, ಸರೋವರ ಅಥವಾ ಸಮುದ್ರ ದಡದಲ್ಲಿರುವುದು ಅನಾದಿಕಾಲದಿಂದಲೂ ಧಾರ್ಮಿಕ ಪದ್ಧತಿಯಾಗಿ ಉಳಿದಿದೆ. ೧೦

ಗುರು ಅಮರ್‌ದಾಸ್ ತನ್ನ ಮರಣ ಸನ್ನಿಹಿತವಾಗಿದ್ದನ್ನು ಅರಿತು, ತನ್ನ ಇಬ್ಬರು ಮಕ್ಕಳು ಮತ್ತು ಇಬ್ಬರು ಅಳಿಯರನ್ನು ಪರೀಕ್ಷೆಗೆ ಗುರಿಮಾಡಿದ. ೧೧

ತನ್ನ ಉತ್ತರಾಧಿಕಾರಿಯಾಗಿ ಅವರಲ್ಲಿ ಕೇವಲ ಅವನ ಅಳಿಯ ಜೇಠಾ ಉತ್ತೀರ್ಣನಾದ ಕಾರಣ, ಅವನನ್ನು ಕ್ರಿ.ಶ. ೧೫೭೪, ಸೆಪ್ಟೆಂಬರ್ ಒಂದರಂದು, ಗದ್ದುಗೆಗೆ ಏರಿಸಿದ. ಸಿಖ್ಖರ ಸಂಪ್ರದಾಯದಂತೆ, ಭಾಯಿ ಬುಡ್ಡಾ ನೂತನ ಗುರುವಿನ ಹಣೆಗೆ ತಿಲಕವನ್ನು ಇಟ್ಟು ಅವನಿಗೆ ಗುರುಪಟ್ಟ ನೀಡಿದ. ಗುರು ಅಮರ್‌ದಾಸ್ ಅವನ ಮುಂದೆ ನಿಂತು, ಕೈ ಜೋಡಿಸಿ, ೫ ಕಾಸುಗಳನ್ನು ಮತ್ತು ಒಂದು ತೆಂಗಿನಕಾಯಿ ಇರಿಸಿ, ಅವನಿಗೆ ಶರಣಾಗಿ ತನ್ನ ಗುರುಪೀಠವನ್ನು ತ್ಯಜಿಸಿ, ಅದನ್ನು ಅವನಿಗೆ ನೀಡುವ ಪದ್ಧತಿಯನ್ನು ನೆರವೇರಿಸಿದ. ಜೇಠಾನಿಗೆ 'ಗುರು ರಾಮ್‌ದಾಸ್' ಎಂಬ ಹೊಸ ಹೆಸರು ನೀಡಲಾಯಿತು.

ಯಥಾಪ್ರಕಾರ, ಗುರು ಅಮರ್‌ದಾಸ್‌ನ ಮಕ್ಕಳಿಗೆ ತಂದೆಯ ಕಾರ್ಯ ಸಹಿಸಲಾಗಲಿಲ್ಲ. ಆದರೆ ಕ್ರಮೇಣ, ಕಿರಿಯ ಮಗನಾದ ಮೋಹ್ರೀ ಎಂಬಾತ ನೂತನ ಗುರುವಿನ ನೇಮಕಕ್ಕೆ ಪ್ರತಿರೋಧ ಮಾಡಲಿಲ್ಲ.

೨೨ ವರ್ಷಗಳ ಕಾಲ ಗುರುಪೀಠ ಅಲಂಕರಿಸಿದ ಗುರು ಅಮರ್‌ದಾಸ್ ೧೫೭೪ರಲ್ಲಿ ಅಸು ನೀಗಿದ. ಆತನ ವಯಸ್ಸು, ೯೫ ಆಗಿತ್ತು ಎಂದಿದ್ದಾರೆ ಇತಿಹಾಸಕಾರರು.

---

೯. P 3 The Sikh Religion vol 3 by Macauliffe

೧೦. P 42-43 Pilgrimage in the Hindu Tradition by Alan Morinis 'It has been noted of places of pilgrimage in India that they are often associated with noteworthy geographical features particularly water'

೧೧. P 143 The Sikh Religion by Macauliffe

ಅಧ್ಯಾಯ ೬

ಗುರು ರಾಮದಾಸ್ (ಕ್ರಿ.ಶ. ೧೫೩೪ – ೧೫೮೧)

'ಅದ್ಭುತವಾದ ಒಳ್ಳೆಯ ಅದೃಷ್ಟದಿಂದ ನಾನು ಗುರು-ಸಂತ್‌ನನ್ನು
ಭೇಟಿ ಮಾಡಿದೆ,
ಮತ್ತು ನನ್ನ ಮನೆಯಲ್ಲಿಯೇ ದೇವರನ್ನು ಕಂಡೆ.
ಒಂದು ಕ್ಷಣವನ್ನೂ ಬಿಡದೆ ಅವನ ಸೇವೆಯನ್ನು ಮಾಡುವೆ ನಾನು
ನಾನಕ್, ನಿನ್ನ ಸೇವಕ ಹೇಳುತ್ತಾನೆ, 'ನಾನು ನಿನ್ನ ಸೇವಕ
ಓ ದೇವಾ !'
–ಗುರು ಅರ್ಜುನ್ ದೇವ್

ಖತ್ರಿ ಪಂಗಡಕ್ಕೆ ಸೇರಿದ ಹರಿದಾಸ್ ಮತ್ತು ಅವನ ಪತ್ನಿ ಅನೂಪ್ ದೇವಿಯರ ಮಗನಾಗಿ ಕ್ರಿ.ಶ. ೧೫೩೪, ಸೆಪ್ಟಂಬರ್ ೨೪ ರಂದು ಜನ್ಮ ತಳೆದ ಜೇಥಾ, ಗುರು ಅಮರ್‌ದಾಸ್‌ನ ಕಿರಿ ಮಗಳು ಬೀಬಿ ಭಾನೀ ಎಂಬಾಕೆಯನ್ನು ಲಗ್ನವಾಗಿ, ಅಳಿಯನಾಗಿ ಮತ್ತು ಶಿಷ್ಯನಾಗಿ ಕ್ರಮೇಣ ಗುರು ರಾಮ್‌ದಾಸ್‌ನೆಂಬ ನಾಮಧೇಯದಿಂದ ಪ್ರಖ್ಯಾತಗೊಂಡ. ಗುರು ಕೇವಲ ೭ ವರ್ಷಗಳ ಕಾಲ ಗುರುವಿನ ಗದ್ದುಗೆ ಏರಿ ಮರಣವನ್ನಪ್ಪಿದ. ಗುರುವಿಗೆ ಪ್ರೀಥಿಯಾ, ಮಹಾದೇವ್ ಮತ್ತು ಅರ್ಜುನದೇವ ಎಂಬ ಹೆಸರಿನ ಮೂರು ಮಕ್ಕಳಿದ್ದರು. ಅವರಲ್ಲಿ ಪ್ರೀಥಿಯಾ ಅಥವಾ ಪ್ರೀಥಿಚಂದ್, ಅಹಂಭಾವಿಯಾಗಿದ್ದು, ಗುರುವಿಗೆ ತಕ್ಕ ಪುತ್ರನಾಗಿ ಪಾತ್ರ ವಹಿಸಿರಲಿಲ್ಲ. ಇನ್ನೊಬ್ಬ ಪುತ್ರ ಮಹಾದೇವ್ ಬಾಲ್ಯದಲ್ಲಿಯೇ ನಿರ್ಲಿಪ್ತ ಜೀವನ ಸಾಗಿಸಿದ. ಕೊನೆಯ ಪತ್ರ ಅರ್ಜುನ್‌ದೇವ್ ಮಾತ್ರ ಗುರುವಿನ ಪ್ರೀತಿಯ ಪುತ್ರನಾಗಿ, ಅವನ ಪರಮ ಶಿಷ್ಯನಾಗಿ ಕಂಗೊಳಿಸಿದ.

ಗುರು ರಾಮದಾಸ್‌ನ ಕಾಲದಲ್ಲಿ, ಸಿಖ್ ಧರ್ಮಪ್ರಚಾರ ಪ್ರಬಲವಾಗಿ ಪ್ರಾರಂಭಗೊಂಡು, ಅವನ ಮಸಂದ್‌ಗಳು, ರಾಷ್ಟ್ರದ ಎಲ್ಲೆಡೆ ಪ್ರವಾಸ ಕೈಗೊಂಡು, ಧರ್ಮಪ್ರಚಾರ ಮಾಡಿದರು. ಗುರು ರಾಮ್‌ದಾಸ್ ಸ್ವತಃ ತನ್ನ ಶಿಷ್ಯಂದರಿಗೆ ಆಧ್ಯಾತ್ಮ ತತ್ವಗಳ ಅಭ್ಯಾಸದೊಂದಿಗೆ, ಲೌಕಿಕ ಪ್ರಪಂಚದ ಆಗು ಹೋಗುಗಳ ಬಗ್ಗೆ, ಇತರ ಜನರ ಸುಖದುಃಖಗಳನ್ನು ಹಂಚಿಕೊಂಡು, ದೀನದಲಿತರ ಸೇವಾ ಕಾರ್ಯಕ್ರಮ ಹಾಕಿಕೊಳ್ಳುವ ಕಾರ್ಯಗಳನ್ನು ಕೈಗೊಂಡ. ಸಾಮಾಜಿಕ ಚಿಂತನೆ ಮತ್ತು ಜನರ ಸುಖದುಃಖಗಳಲ್ಲಿ ಭಾಗಿಯಾದಾಗ ಮಾತ್ರವೇ ಸಿಖ್ಖರು ತಮ್ಮ 'ಅಹಂ'ನ್ನು ತ್ಯಜಿಸಿ, ಆಧ್ಯಾತ್ಮಿಕ ಜೀವನ ಸಾಗಿಸಬಹುದೆಂದು ಸಾರಿದ ಗುರು ರಾಮದಾಸ್.

ಗುರು ರಾಮದಾಸ್‌ನ ಕಾಲದಲ್ಲೇ, ಸಿಖ್ ಧರ್ಮದ ಏಳಿಗೆ ಮತ್ತು ಪ್ರಚಾರಕ್ಕಾಗಿ

ಬಹಳವಾಗಿ ದುಡಿದ ಭಾಯಿ ಗುರುದಾಸ್ ಭಲ್ಲಾನ ಉದಯವಾಯಿತು ಎಂದರು ಇತಿಹಾಸಕಾರರು. ೧

ಗುರು ರಾಮದಾಸ್‌ನ ಹಿರಿಮಗ ತಂದೆಯ ಕಾಲವಾದ ನಂತರ ಗುರುವಿನ ಸ್ಥಾನ ಪಡೆಯಲು ಸಿದ್ಧತೆ ನಡೆಸಿದ. ಆದರೆ ಗುರು ರಾಮದಾಸ್‌ನಿಗೆ ಹಿರಿಮಗನ ಅಹಂಕಾರ, ಹಠಮಾರಿತನ, ಅಧ್ಯಾತ್ಮಿಕತೆಯ ಬಗ್ಗೆ ಇರುವ ತಾತ್ಸಾರಗಳ ಅರಿವಾಗಿದ್ದು, ಅವನು ಗುರುಸ್ಥಾನವನ್ನು ಅವನಿಗೆ ಬಿಟ್ಟುಕೊಡಲು ಮನಸ್ಸು ಮಾಡಲಿಲ್ಲ. ಎರಡನೆಯ ಮಗ ಮಹಾದೇವ ಸನ್ಯಾಸಿಯ ನಿರ್ಲಿಪ್ತತೆಯ ಜೀವನ ಸಾಗಿಸಿದ್ದರಿಂದ, ಗುರುಪೀಠಕ್ಕೆ ಯೋಗ್ಯನಲ್ಲವೆಂಬ ನಿಲುವು ತಳೆದಿದ್ದ. ಮೂರನೆಯ ಮಗ ಅರ್ಜುನ್‌ದೇವ್, ಗುರುವಿಗೆ ಅತ್ಯಂತ ವಿಧೇಯನಾಗಿ, ಆತ್ಮೀಯನಾಗಿ, ಅವನ ಸೇವೆಯನ್ನು ಮನಃಪೂರ್ವಕವಾಗಿ ಮಾಡಿಕೊಂಡಿದ್ದಲ್ಲದೆ, ಆಧ್ಯಾತ್ಮಿಕದ ಕಡೆ ಒಲವು ತೋರಿಸಿ, ಸಿಖ್ ಧರ್ಮದ ಪ್ರತಿಯೊಂದು ಆಚಾರ ವಿಚಾರಗಳಲ್ಲಿ ಆಸಕ್ತಿ ತೋರಿಸಿದ್ದರಿಂದ ಗುರು ರಾಮದಾಸ್ ಅವನನ್ನೇ ಗುರುಪೀಠ ಅಲಂಕರಿಸಲು ಸೂಕ್ತ ಉತ್ತರಾಧಿಕಾರಿ ಎಂದು ತೀರ್ಮಾನಿಸಿದ.

ಈ ಮಧ್ಯ ಒಂದು ಘಟನೆ ಜರುಗಿ, ಗುರುವಿನ ಮೂರನೆ ಮಗ ಅರ್ಜುನ್ ದೇವನಿಗೆ ಧರ್ಮದ ಬಗ್ಗೆ ಇರುವ ಆಸ್ಥೆ, ನಂಬಿಕೆ ಮತ್ತು ಆದರಗಳ ಪರೀಕ್ಷೆ ಜರುಗಿ, ಗುರುವಿಗೆ ಅವನ ಮೇಲಿನ ಪ್ರೀತಿ, ವಿಶ್ವಾಸ ಮತ್ತು ನಂಬಿಕೆಗಳು ದೃಢೀಕರಿಸುವಂತಾಯಿತು.

ಗುರು ರಾಮದಾಸ್‌ನ ಸಮೀಪದ ಬಂಧು, ಲಾಹೋರ್ ವಾಸಿ ಸಹಾರಿಮಲ್ ಎಂಬಾತ ಗುರುವಿನ ಬಳಿ ಬಂದು, ತನ್ನ ಮಗನ ವಿವಾಹ ಸಮಾರಂಭಕ್ಕೆ ಆಮಂತ್ರಣ ನೀಡಿದ. ವೃದ್ಧ ಗುರು, ತನ್ನ ಮೂರನೆಯ ಮಗ ಅರ್ಜುನದೇವ್‌ನನ್ನು ಲಾಹೋರ್‌ಗೆ ಕಳುಹಿಸಿದ. ವಿವಾಹ ಸಮಾರಂಭದಲ್ಲಿ ಭಾಗವಹಿಸಿದ ಮಗ ಹಿಂದಿರುಗಲು ತಂದೆಯ ಆಜ್ಞೆಗಾಗಿ ಕಾದು ಕುಳಿತ. ಆಗಿನ ಕಾಲದಲ್ಲಿ ಪ್ರತಿಯೊಂದು ವಿಷಯದಲ್ಲೂ ತಂದೆ ತಾಯಿಯರ ಆಜ್ಞೆ, ಆದೇಶಗಳಿಗೆ ಕಾದು ಕುಳಿತು ಅವನ್ನು ಪಾಲಿಸುವುದು ಸಾಮಾನ್ಯವಾಗಿತ್ತು. ತಂದೆಗೆ, ಮಗ ಅರ್ಜುನ್‌ದೇವ ಪತ್ರ ಬರೆದು, ಲಾಹೋರ್‌ನಿಂದ ಹಿಂದಿರುಗಲು ಅಪ್ಪಣೆ ಕೇಳಿದ. ಆದರೆ ಆ ಪತ್ರ ತಂದೆಗೆ ತಲುಪದಂತೆ, ಹಿರಿಮಗ ಪ್ರೀಥೀಚಂದ್ ನೋಡಿಕೊಂಡ. ಎರಡನೆಯ ಕಳಕಳಿಯ ಪತ್ರಕ್ಕೂ ತಂದೆಯ ಉತ್ತರ ಬರದಿದ್ದನ್ನು ನೋಡಿದ ಮಗ ಅರ್ಜುನ್‌ದೇವ ಅತೀವನಾಗಿ ಮನ ನೊಂದು ಒದ್ದಾಡಿದ. ಅಂತಿಮವಾಗಿ ಮೂರನೆಯ ಬಾರಿ ಪತ್ರ ಬರೆದು, ಒಬ್ಬ ವಿಶ್ವಾಸಿ ದೂತನ ಸಂಗಡ ಅದನ್ನು ತಂದೆಗೆ ರವಾನಿಸಿದ. ಅರ್ಜುನ್‌ದೇವ ಲಾಹೋರ್‌ನಲ್ಲೇ ಉಳಿದುಬಿಟ್ಟರೆ, ವೃದ್ಧ ತಂದೆಯು ಸಾವಿನ ನಂತರ, ತಾನೇ ಗುರುಪೀಠ

೧. P 173, History of Sikh People by G. Singh

ಅಲಂಕರಿಸಬಹುದೆಂಬ ಆಸೆ ಹೊತ್ತಿದ್ದ ಪ್ರೀಥಿಚಂದ್‌ಗೆ ನಿರಾಸೆಯಾಯಿತು. ಗುರು ರಾಮದಾಸ್‌ನಿಗೆ ಮೂರನೆಯ ಪತ್ರ ದೊರೆತಾಗ, ಅವನು ವಿಷಯ ಅರಿತು, ಪ್ರೀಥೀಚಂದ್‌ನನ್ನು ಕರೆಸಿ ವಿಚಾರಿಸಿದಾಗ, ಸಂಗತಿ ಹೊರಬಿದ್ದಿತು. ಅರ್ಜುನ್‌ದೇವ ಗುರುವಿಗೆ ಬರೆದ ಪತ್ರದಲ್ಲಿ ಗುರುವಿನ ಆಶ್ರಯ, ಸಾನಿಧ್ಯ ಮತ್ತು ಸಹವಾಸ ಸೇವೆಗಳಿಂದ ವಂಚಿತಗೊಂಡು ಅಪಾರವಾಗಿ ದುಃಖಪೀಡಿತವಾಗಿ, ತನ್ನ ದುಃಖವನ್ನು ಪದ್ಯಗಳ ಮುಖೇನ ತೋಡಿಕೊಂಡಿದ್ದ.

'ನನ್ನ ಮನಸ್ಸು ಗುರುವಿನ ದರ್ಶನಕ್ಕಾಗಿ ಹಾತೊರೆಯುತ್ತಿದೆ.
ಕಣ್ಣೀರಿನಿಂದ ತೊಯ್ದ ಕಣ್ಣುಗಳು,ಜಾತಕ ಪಕ್ಷಿಗಳ ಹಾಗೆ ಕಣ್ಣೀರಿಡುತ್ತಿವೆ.
ದಾಹ ಕುಂದುವುದಿಲ್ಲ ಅಥವಾ ಶಾಂತಿ ಹೊಂದುವುದಿಲ್ಲ,
ಪ್ರೀತಿಯ ಸಂತನ ದರ್ಶನವಿಲ್ಲದೆ. . . .'

ಪತ್ರಗಳನ್ನು ಓದಿದ ತಂದೆ ಗುರು ರಾಮದಾಸ್‌ನ ಅಂತಃಕರಣದ ಕಟ್ಟೆ ಒಡೆದು, ಮಗನ ಅತೀವ ಪ್ರೀತಿ ವಿಶ್ವಾಸ ಮತ್ತು ವಿಧೇಯತೆಗಳ ಬಗ್ಗೆ ಅಭಿಮಾನ ಉಕ್ಕಿ ಹರಿದವು. ಒಡನೆಯ ಮಗನನ್ನು ಕರೆಸಿದ. ೨

ಗುರುವಿಗೆ ಈಗ ಮನವರಿಕೆಯಾಗಿತ್ತು ೧೮ ವರ್ಷದ ಮಗ ಅರ್ಜುನದೇವನೇ ತನ್ನ ಉತ್ತರಾಧಿಕಾರಿ ಎಂದು. ಗುರು ಸಾಯುವ ದಿನ, ಕ್ರಿ.ಶ. ೧೫೮೧, ಸೆಪ್ಟೆಂಬರ್ ಒಂದನೆಯ ತಾರೀಖು, ಅರ್ಜುನ್‌ದೇವನಿಗೆ ಗುರುಪೀಠದಲ್ಲಿ ಕುಳ್ಳಿರಿಸಿ, ಕಣ್ಮುಚ್ಚಿದ.

---

೧. P 278 The Sikh Religion by Macauliffe Vol 2

ಗುರು ಅರ್ಜುನ್ ದೇವ್ (ಕ್ರಿ.ಶ. ೧೫೬೩ – ೧೬೦೬)

'ಪವಿತ್ರಸ್ಥಳದಲ್ಲಿದ್ದರೂ, ಶಾಂತಿ ಲಭಿಸುವುದಿಲ್ಲ ಬಕಪಕ್ಷಿಗೆ,
ಎಲ್ಲೆಡೆ ಮಳೆ ಹುಯಿದರೂ, ಒಂದು ಹನಿ ನೀರು ಲಾಲಿಸುವುದಿಲ್ಲ
ಜಾತಕ ಪಕ್ಷಿಗೆ
ಶ್ರೀಗಂಧದ ಮರದ ಬಳಿ ಜೀವಿಸಿದರೂ, ಅದರ ಸುವಾಸನೆ ಹತ್ತುವುದಿಲ್ಲ
ಜಂಬೂ ವೃಕ್ಷಕ್ಕೆ
ಜಿಂಕೆಯ ಹೊಕ್ಕಳಲ್ಲಿ ಸುಗಂಧವಿದ್ದರೂ, ಅದು ಅದರ ಜಾಡು
ಹಿಡಿದು ಎಲ್ಲೆಡೆ ಓಡಾಡುತ್ತದೆ
ನೀಚನ ಮುಖ ಕಪ್ಪಾಗಿ ಉಳಿದರೆ, ಅರ್ಜುನ್ ಗುರು
ನಿಜವಾದ ರಾಜನಾಗಿ ಉಳಿಯುವನು.

ಗೋವಿಂದ್‌ವಾಲ್‌ನಲ್ಲಿ ಕ್ರಿ.ಶ. ೧೫೬೩, ಏಪ್ರಿಲ್ ೧೫ರಂದು ಗುರು ಅಮರ್‌ದಾಸನ ಮೂರನೆಯ ಮಗನಾಗಿ ಜನಿಸಿದ ಅರ್ಜುನ್‌ದೇವ್. ೧೮ನೆಯ ವಯಸ್ಸಿನಲ್ಲೇ ಗುರುಪೀಠ ಅಲಂಕರಿಸಿದ ಅರ್ಜುನ್‌ದೇವ್, ಎಳೆಯದರಲ್ಲೇ ಆಧ್ಯಾತ್ಮಿಕತೆ ಮತ್ತು ಕವಿತೆಗಳನ್ನು ರಚಿಸುವುದರಲ್ಲಿ ತನ್ನನ್ನು ತಾನೇ ತೊಡಗಿಸಿಕೊಂಡ. ಯುವಕ ಅರ್ಜುನ್‌ದೇವ್‌ನಿಗೆ ರಾಮಕೌರ್ ಎಂಬ ಕನ್ಯೆಯೊಂದಿಗೆ ವಿವಾಹವಾದರೂ, ಆಕೆ ಕಾಯಿಲೆಯಿಂದ ನರಳಿ ಸಾವನ್ನಪ್ಪಿದ್ದರಿಂದ, ಎರಡನೆಯ ಬಾರಿ ಅವನು, ಮಿಯೋ ಎಂಬ ಹಳ್ಳಿಯಲ್ಲಿ ವಾಸಿಸುತ್ತಿದ್ದ ಕಿಶನ್‌ಚಂದ್ ಎಂಬಾತನ ಮಗಳು ಗಂಗಾಳನ್ನು ವಿವಾಹವಾದ.

ಗುರುಪೀಠ ಅಲಂಕರಿಸಿದ ಕೂಡಲೆ ಅರ್ಜುನ್‌ದೇವ, ಸಹೋದರ ಪ್ರೀಥಿಚಂದ್‌ನಿಂದ ವಿರೋಧ ಎದುರಿಸಬೇಕಾಯಿತು. ಅವನ ಮನ ಒಲಿಸಲು ಅರ್ಜುನ್‌ದೇವ್, ಆಶ್ರಮಕ್ಕೆ ಸೇರಿದ ಆಸ್ತಿಗಳ ವರಮಾನವನ್ನು ಅವನಿಗೆ ನೀಡಿ, ಅವನನ್ನು ಸಂತೋಷಗೊಳಿಸಲು ಪ್ರಯತ್ನಿಸಿದ. ಆದರೆ, ಪ್ರೀಥಿಯಾ ಅದರಿಂದ ಸಂತೋಷಗೊಳ್ಳದೆ, ಗುರುವಿನ ವಿರುದ್ಧ ಹಗೆತನ ಬೆಳೆಸಿ ಸಮರ ಹೂಡಿದ.

ಗುರು ಅರ್ಜುನ್‌ದೇವ್, ತನ್ನ ತಂದೆಯಿಂದ ಪ್ರಾರಂಭಗೊಂಡ ಸಂತೋಕ್‌ಸರ್ ಮತ್ತು ಅಮೃತಸರ್‌ಗಳ ಸರೋವರಗಳ ನಿರ್ಮಾಣ ಕಾರ್ಯವನ್ನು ಮಾಡಿ ಮುಗಿಸಿದ. ಅಮೃತಸರದ ಮಧ್ಯೆ ಒಂದು ಸುಂದರ ಹರಿಮಂದಿರವನ್ನು ನಿರ್ಮಿಸಲು ನಿರ್ಧಾರ ತೆಗೆದುಕೊಂಡ. ೧

---

೧. P 3 The Sikh Religion by Macauliffe

ಅದರ ಖರ್ಚಿಗೆ, ಶಿಷ್ಯರಿಂದ, ಅವರ ವರಮಾನದಲ್ಲಿ ಹತ್ತನೇ ಭಾಗವನ್ನು ಮಂದಿರದ ನಿರ್ಮಾಣ ಖರ್ಚಿಗೆ ನೀಡುವಂತೆ ಕೋರಿದನು. ಇತರ ಶಿಷ್ಯಂದಿರನ್ನೂ ಪರರಾಜ್ಯಗಳಿಗೆ ಕಳುಹಿಸಿ ಚಂದಾ ವಸೂಲಿ ಮಾಡಿಸಿದನು. ನೆರೆಯ ಮಂಡೀ ನಗರದ ಹಿಂದೂ ರಾಜಪುತ್ರ ರಾಜನಿಂದ ದ್ರವ್ಯ ಹಣವನ್ನು ಕಾಣಿಕೆಯ ರೂಪದಲ್ಲಿ ಸ್ವೀಕರಿಸಿದ. ೨ ೩

ಅಮೃತಸರದ ಸರೋವರದ ಮಧ್ಯ ಹರಿಮಂದಿರದ (ಸ್ವರ್ಣಮಂದಿರವೆಂದು ಈಗ ಕರೆಯಲ್ಪಡುತ್ತದೆ.) ನಿರ್ಮಾಣದ ವೇಳೆಗೆ, ನಗರದ ಇತರ ಕಟ್ಟಡಗಳ ಎತ್ತರಕ್ಕಿಂತ ಮಿಗಿಲಾಗಿ, ಮಂದಿರದ ಕಟ್ಟಡ ನಿರ್ಮಿಸಬೇಕೆಂಬ ಭಕ್ತರ ಸಲಹೆಯನ್ನು ಅರ್ಜುನ್‌ದೇವ್ ನಿರಾಕರಿಸಿದ. ಯಾಕೆಂದರೆ ದೇವರ ಗುಡಿ ದೈನ್ಯತೆಯನ್ನು ಬಿಂಬಿಸುವುದಲ್ಲದೆ ಪ್ರತಿಷ್ಠೆ, ಗರ್ವಗಳನ್ನು ಬಿಂಬಿಸುವುದಿಲ್ಲ ಎಂದು ಹೇಳಿ, ನಗರದ ನೆಲದ ಮಟ್ಟದಲ್ಲಿ ಐದು ಅಡಿ ಕಡಿಮೆ ಇರಿಸಿ ಕಟ್ಟಡ ನಿರ್ಮಿಸಿದನು. ಮುಸ್ಲಿಮ್‌ರು ಮಸೀದಿಗಳಲ್ಲಿ ಮೆಕ್ಕಾದ ಕಡೆ ಮುಖ ಮಾಡಿ ಪ್ರಾರ್ಥಿಸುವ ಹಾಗೆ ಅಥವಾ ಹಿಂದೂಗಳು ಪೂರ್ವಾಭಿಮುಖವಾಗಿ ದೇವರ ಪ್ರತಿಮೆಯನ್ನು ಇರಿಸಿ ಪ್ರಾರ್ಥಿಸುವ ಹಾಗೆ ಮಾಡದೆ, ಗುಡಿಯ ನಾಲ್ಕು ದಿಕ್ಕುಗಳಲ್ಲಿ ಬಾಗಿಲು ಇರಿಸಿ, ಯಾತ್ರಿಕರು ಗುಡಿಯೊಳಗೆ ಹೊಕ್ಕಿ ಯಾವುದೇ ದಿಕ್ಕಿನಲ್ಲಿ ಕುಳಿತು ಪ್ರಾರ್ಥಿಸುವಂತೆ ಯೋಜನೆ ರೂಪಿಸಿದ. 'ಯಾವುದೇ ದಿಕ್ಕಿನಿಂದ ಬಂದ ಯಾವುದೇ ಧರ್ಮ, ಪಂಗಡ ಅಥವಾ ಜಾತಿಯವರು ಈ ಗುಡಿಯಲ್ಲಿ ತಮ್ಮಿಷ್ಟದಂತೆ ಯಾವುದೇ ದಿಕ್ಕಿಗೆ ಬಗ್ಗಿ ನಮಸ್ಕರಿಸುವುದೇ ನನ್ನ ಮತವಾಗಿದೆ' ಎಂದು ಗುರು ಅರ್ಜುನ್ ದೇವ್ ಸಾರಿದ. ೪

---

೨. P 76 The Later Mughals by William Irivine. 'Guru Arjun Dev laid aside the garb of holyman and adopted the state of grandee'

೩. P 49 History of the Sikhs by Cunningham.

'The Guru next reduced to a systematic tax the customary offerings of his converts or adherents, who under his ascendancy, were to be found in every city and province.

. . . . .Thus the Sikhs, says the almost contemporary Mohsun Fanee, became accustomed to a regular Government.'

೪.P 9 (Vol-3) The Sikh Religion by Macauliffe '. . . . . . . What is humble shall be exalted. The more a tree is laden with fruit, the more its branches descend to the earth. By what ever way you approach the temple you must descend eight or ten steps wherefore but the Harimandir be made the lowest edifice of all'

ಗುಡಿ ಮತ್ತು ಸರೋವರಗಳ ನಿರ್ಮಾಣ ಪೂರ್ತಿಯಾದೊಡನೆ, ಗುರು ಸಾರಿದ : "ಈ ಕೊಳದಲ್ಲಿ ಸ್ನಾನ ಮಾಡುವವರು ೬೮ ಪವಿತ್ರ ತೀರ್ಥಗಳಲ್ಲಿ ಸ್ನಾನ ಮಾಡಿದ ಪುಣ್ಯ ಪಡೆಯುವವರು. ಯಾವ ಯಾತ್ರಿಕರು ದೇವರ ಜಪ ಮಾಡಿ ಈ ಸರೋವರದಲ್ಲಿ ಸ್ನಾನ ಮಾಡುವರು, ಅವರಿಗೆ ಮುಕ್ತಿ ದೊರೆತು, ಜನನ ಮರಣಗಳಿಂದ ಪಾರಾಗುವರು' ಎಂದು ಸಾರಿದ ಗುರು ಗುಡಿಯನ್ನು ಸುತ್ತುವರೆದ ಕೊಳದ ಮಹಿಮೆಯನ್ನು ಎತ್ತಿಹಿಡಿದ.

ಅಮೃತಸರದಲ್ಲಿ ನಿರ್ಮಿಸಿದ ನೂತನ ಗುಡಿ ಮತ್ತು ಸರೋವರಗಳ ಪ್ರಸಿದ್ಧಿ ಎಲ್ಲೆಡೆ ಹರಡಿತು. ಸಿಖ್ಖರು ಮತ್ತು ಯಾತ್ರಿಕರು ತಂಡೋಪತಂಡವಾಗಿ ನಗರಕ್ಕೆ ಬರಲಾರಂಭಿಸಿದರು. ಯಾತ್ರಿಕರೊಂದಿಗೆ ವ್ಯಾಪಾರಸ್ಥರು ಮತ್ತು ಇತರ ನಾಗರಿಕರು ನಗರದಲ್ಲಿ ವಾಸ್ತವ್ಯ ಹೂಡಿ, ನಗರದ ಅಭಿವೃದ್ಧಿಗೆ ಶ್ರಮಿಸಿದರು. ವ್ಯಾಪಾರೋದ್ಯಮ ಹೆಚ್ಚಿ, ನಗರ ಬೆಳೆಯಿತು. ನಗರದ ಕೀರ್ತಿ ಹರಡಿದ ಹಾಗೆ, ಗುರುವಿನ ವಿರುದ್ಧ ಪಿತೂರಿ, ಹಗೆತನ, ಈರ್ಷೆ ಕೂಡ ಬೆಳೆಯಿತು. ಮೊಘಲ್ ಸಾಮ್ರಾಜ್ಯದ ಗಣ್ಯ ವ್ಯಕ್ತಿಗಳು, ರಾಜ್ಯಪಾಲರು ಮತ್ತು ಇತರ ಅಧಿಕಾರಿಗಳು ನಗರದ ಏಳಿಗೆಯನ್ನು ಸಹಿಸದೆ ಗುರು ಅರ್ಜುನ್‌ದೇವ್‌ನ ವಿರುದ್ಧ ಪಿತೂರಿ ಹೂಡಿದರು. ಅವರಲ್ಲಿ ಗುರುವಿನ ಸಹೋದರ ಪ್ರೀಥಿಯಾ ಮುಖ್ಯವಾಗಿದ್ದರೆ, ಇತರ ಗಣ್ಯ ವ್ಯಕ್ತಿಗಳು ಹೊರತಾಗಿರಲಿಲ್ಲ. ಇತಿಹಾಸಕಾರರು ಈ ವಿಷಯದಲ್ಲಿ, ಪ್ರಸಿದ್ಧ ಕವಿರಾಜ, ಅಕ್ಬರ್‌ನ ಆಸ್ಥಾನದಲ್ಲಿ ರಾರಾಜಿಸುತ್ತಿದ್ದ ರಾಜಾ ಬೀರಬಲ್‌ನ ಹೆಸರನ್ನು ಉಲ್ಲೇಖಿಸಿದ್ದಾರೆ. ಅಕ್ಬರ್, ಭಾರತ – ಆಫ್ಘನ್ ಗಡಿಯಲ್ಲಿ ಗುಡ್ಡಗಾಡು ಜನರ ಉಪಟಳ ಹೆಚ್ಚಾದಾಗ, ಅವರನ್ನು ಹತ್ತಿಕ್ಕಲು ಒಂದು ಸೈನ್ಯದ ತುಕಡಿಯನ್ನು ರಾಜಾ ಬೀರಬಲ್‌ನ ನೇತೃತ್ವದಲ್ಲಿ ಕಳುಹಿಸಿದ. ಬೀರಬಲ್ ತನ್ನ ಸೈನ್ಯದೊಂದಿಗೆ ಪಂಜಾಬ್ ಪ್ರಾಂತ್ಯವನ್ನು ಪ್ರವೇಶಿಸಿ, ಅಮೃತಸರದ ಮುಖಾಂತರ ಸಂಚರಿಸುವಾಗ, ಅವನಿಗೆ ನಗರದ ಬೆಳವಣಿಗೆ, ಗುರು ನಾನಕ್ ದೇವನ ಉಪದೇಶ, ಅವನ ಪ್ರಖ್ಯಾತಿ ಎಲ್ಲವೂ ಸಾಮ್ರಾಜ್ಯದ ಒಳಿತಿಗೆ ತರವಲ್ಲ ಮತ್ತು ಗುರು ಬೋಧಿಸುವ ತತ್ವ ಹಿಂದೂ ಮುಸ್ಲಿಮರ ದೇವರು ಒಂದೇ, ಜಾತಿ ಮತ ಬೇಧಭಾವವಿಲ್ಲ ಇತ್ಯಾದಿಗಳು ಸಮಾಜದ ಹಿತಕ್ಕೆ ಭಂಗ ತರಬಹುದು ಎಂಬ ನಿಲುವನ್ನು ಹೊತ್ತ. ಅಮೃತಸರದಲ್ಲಿ ಜಮಾಯಿಸಿದ ಯಾತ್ರಿಕರ ಸಮೂಹ ನೋಡಿ, ಅವನಿಗೆ ಒಂದು ಉಪಾಯ ಹೊಳೆಯಿತು. ಯಾತ್ರಿಕರ ಮೇಲೆ ಮತ್ತು ನಗರದ ಹಿಂದೂ ಖಾತ್ರೀ ಪಂಗಡದವರ ಮೇಲೆ ಸುಂಕ ಹೇರಿದರೆ, ರಾಜ್ಯದ ಬೊಕ್ಕಸಕ್ಕೆ ಹಣ ಶೇಖರಣೆಯಾಗುವುದಷ್ಟೇ ಅಲ್ಲದೆ, ಜನರು ಆ ನಗರಕ್ಕೆ ಯಾತ್ರಿಸುವುದನ್ನು ತಪ್ಪಿಸಬಹುದು ಎಂದು ಯೋಚಿಸಿದನು. ಸುಂಕ ಹೇರಿದಾಗ ಜನ ಪ್ರತಿಭಟಿಸಿದರು. ಗುರು ಅರ್ಜುನ್‌ದೇವ್ ಕೂಡ ಪ್ರತಿಭಟಿಸಿದ. ಗುರುವನ್ನು ಹಿಡಿದು ತರಲು ಭಟರನ್ನು ಕಳುಹಿಸಿದಾಗ, ಗುರು ಬರಲು ಒಪ್ಪದ ಕಾರಣ, ರಾಜಾ ಬೀರಬಲ್ ಸುಂಕ ನೀಡದಿದ್ದರೆ, ನಗರವನ್ನು ಧೂಳೀಪಟ ಮಾಡುವನೆಂದು ಹೆದರಿಸಿದ. ಆದರೆ ಅವನ ಹೆದರಿಕೆಗೆ

ಮಣಿಯದ ಗುರು ಎಲ್ಲದಕ್ಕೂ ಸಿದ್ಧವಾಗಿರುವನೆಂದು ಸಾರಿದ. ಆದರೆ ರಾಜಾ ಬೀರಬಲ್ ತಾನು ನುಡಿದಂತೆ ನಗರದ ನಾಶವನ್ನು ಮಾಡುವ ಮೊದಲೇ, ಅವನಿಗೆ ಗಡಿಗೆ ಸಾಗುವಂತೆ ಆದೇಶ ಬಂದು, ಅವನು ತನ್ನ ದಂಡಿನೊಂದಿಗೆ ಗಡಿಗೆ ಸಾಗಿ, ಅಲ್ಲಿ ಗುಡ್ಡಗಾಡು ಯೂಸಫ್‌ಜಾಯ್ ಜನರ ವಿರುದ್ಧ ಕಾಳಗದಲ್ಲಿ ಮಡಿದ. ಅಕ್ಬರ್‌ನ ೭೦೦೦ ಸೈನಿಕರು ಆ ಯುದ್ಧದಲ್ಲಿ ಮಡಿದು, ಸೋಲನ್ನು ಅನುಭವಿಸಿದ್ದನ್ನು ಕೇಳಿ ಅಕ್ಬರ್ ಆಘಾತಗೊಂಡಿದ್ದೇ ಅಲ್ಲದೆ, ತನ್ನ ನೆಚ್ಚಿನ ಸ್ನೇಹಿತ, ನವರತ್ನರಲ್ಲಿ ಒಬ್ಬನಾದ ಬೀರಬಲ್‌ನ ಸಾವು ಅವನಿಗೆ ಅಪಾರವಾದ ದುಃಖ ತಂದಿತು. ೫

ಇತಿಹಾಸ ಪ್ರಸಿದ್ಧ ಬೀರಬಲ್ ಅಕ್ಬರ್ ಆಸ್ಥಾನದ ನವರತ್ನರಲ್ಲಿ ಒಬ್ಬನಾಗಿ ರಾರಾಜಿಸಿದ. ಅಕ್ಬರ್ ಈತನಿಗೆ 'ಕವಿರಾಜ' ಎಂಬ ಬಿರುದು ನೀಡಿ ಗೌರವಿಸಿದ. ಇಂದಿಗೂ ಪ್ರಸಿದ್ಧಿ ಮತ್ತು ಚಾಲನೆಯಲ್ಲಿರುವ 'ಅಕ್ಬರ್ ಬೀರಬಲ್' ಕಥೆಗಳು ಭಾರತೀಯರನ್ನು ರಂಜಿಸುತ್ತಿದೆಯಾದರೂ, ಬೀರಬಲ್‌ನ ಜೀವನ ಚರಿತ್ರೆಯ ಬಗ್ಗೆ ನಮಗೆ ಅರಿತಿರುವುದು ಇತಿಹಾಸಕಾರ ಕವಿ ಮತ್ತು ಆಸ್ಥಾನದಲ್ಲಿದ್ದ ಅಲ್-ಬದೌನೀಯ 'ಮುಂತಕಾಬುತ್-ತವಾರಿಖ್' ಎಂಬ ಗ್ರಂಥದಿಂದ. ಈತನ ಪ್ರಕಾರ ಬೀರಬಲ್‌ನ ನಿನವಾದ ಹೆಸರು 'ಬ್ರಹ್ಮದಾಸ್' ಎಂದಾಗಿದ್ದು, ಆತ ಬ್ರಾಹ್ಮಣನಾಗಿದ್ದ. ಅತ್ಯಂತ ಬಡತನದಿಂದ ಬಳಲುತ್ತಿದ್ದ ಬೀರಬಲ್ ತನ್ನ ಸ್ವಂತ ಪ್ರದೇಶ ಕಾಲ್ಪಿಯಿಂದ ಅಕ್ಬರ್‌ನ ಬಳಿ ಬಂದು ನೌಕರಿ ಹಿಡಿದ. ಹಂತಹಂತವಾಗಿ ಮೇಲೇರಿದ ಬೀರಬಲ್ ತನ್ನ ಜಾಣ್ಮೆ, ಯುಕ್ತಿ, ಕವಿತಾ ಪ್ರತಿಭೆಗಳಿಂದ ಅಕ್ಬರ್‌ನ ಮನ ಗೆದ್ದು, ಅವನ ಆತ್ಮೀಯ ಮಂತ್ರಿಯಾಗಿ ಕಂಗೊಳಿಸಿದ.

ನಾಗರಕೋಟ್‌ನ ಸೈನ್ಯಾಧಿಕಾರಿಯಾಗಿದ್ದ ರಾಜ ಜೈ ಚಂದ್‌ನ ವರ್ತನೆಯಿಂದ ಕಸಿವಿಸಿಗೊಂಡ ಅಕ್ಬರ್, ಗೆಳೆಯ ಮಂತ್ರಿ ಬೀರಬಲ್‌ನಿಗೆ ಆ ಕೋಟೆಯನ್ನು 'ಜಾಗಿರ್' ಆಗಿ ನೀಡಿದ. ಲಾಹೋರ್‌ನ ನವಾಬ್‌ನಾಗಿದ್ದ ಹುಸೈನ್ ಖಲೀ ಖಾನ್‌ನಿಗೆ ನಾಗರ್ಕೋಟ್‌ನ್ನು ವಶಪಡಿಸಿಕೊಂಡು, ಅದನ್ನು ಬೀರಬಲ್‌ನಿಗೆ ನೀಡುವಂತೆ 'ಫರ್ಮಾನ್' ಹೊರಡಿಸಿದ.

---

* P 159, 164, 165, 268, 282, 297

Muntakakabut T. Tawarikh by Al Badowni

P 442-43

Ain-i-Akbari by Abu-L-Fazal Allarri

P 16

The Sikh Religion by Macaulffe 'Birbal was asked to collect tax on Khatris. Sikhs refused stating that they were Sikhs and not Khatris. Birbal threatened to ransack Amritsar.

೫. P 22 The Quintessence of Sikhism by Govind Singh Mansukhani

ಹುಸೇನ್ ಖುಲೀ ಖಾನ್, ಬಾದಶಹಾನ ಆದೇಶದಂತೆ ನಾಗರಕೋಟ್‌ನ್ನು ವಶಪಡಿಸಿಕೊಂಡಿದ್ದಲ್ಲದೆ, ಕೋಟೆಯ ಹೊರಬಾಗಿಲನಲ್ಲಿದ್ದ ಹಿಂದೂ ಗುಡಿಯನ್ನು ಸೂರೆ ಮಾಡಿದ. ಅಲ್ಲಿ ನೆರೆದಿದ್ದ ಲಕ್ಷಾಂತರ ಹಿಂದೂ ಭಕ್ತರನ್ನು ಹಿಂಸಿಸಿ ಸಾವಿಗೀಡು ಮಾಡಿದ. ಕಾರಣ ತಿಳಿದ ಹಿಂದೂಗಳು ಬೀರಬಲ್‌ನಿಗೆ ಶಾಪ ಹಾಕಿದರು. ಯಾವ ಹಿಂದೂ ಮಂತ್ರಿಗೆ ಕೋಟೆಯನ್ನು ನೀಡಲು ಮುಸ್ಲಿಮ್ ಬಾದ್‌ಶಹಾ ಫರ್ಮಾನು ಹೊರಡಿಸಿದನೋ, ಅವನ ಸಲುವಾಗಿ ಸಹಸ್ರಾರು ಹಿಂದೂಗಳು ಪ್ರಾಣ ತೆತ್ತಿದ್ದು ಒಂದು ವಿಪರ್ಯಾಸವಾಗಿತ್ತು.

ಅಕ್ಬರ್ ಹಿಂದೂ ಮುಸ್ಲಿಮ್ ಮತ್ತು ಇತರ ಧಾರ್ಮಿಕ ಪಂಗಡದ ನಾಗರಿಕರನ್ನು ಒಗ್ಗೂಡಿಸಲು 'ದೀನ್–ಇ–ಇಲಾಹಿ' ಎಂಬ ನೂತನ ಧರ್ಮ ಸ್ಥಾಪಿಸಿದ್ದನ್ನು ಇತಿಹಾಸ ಪುಟಗಳಲ್ಲಿ ಕಾಣಬಹುದು. ನೂತನ ಧರ್ಮಕ್ಕೆ ಸೇರಿದವರಲ್ಲಿ ಬೀರಬಲ್‌ನೂ ಒಬ್ಬನಾಗಿದ್ದ. ನೂತನ ಧರ್ಮದ ಅನುಸಾರ, ನಾಲ್ಕು ವಿಧವಾದ ಆಚಾರಗಳನ್ನು ಪಾಲಿಸಬೇಕಾಗಿತ್ತು. ಅವು 'ಹಿಕ್ಮತ್'(ವಿವೇಕತನ), 'ರುಜಜಾಹಿತ್'(ಸ್ಥೈರ್ಯ), 'ಇಫ್ಫತ್'(ಸಂಯಮ), 'ಅದಾಲತ್'(ನ್ಯಾಯ).

ಅಕ್ಬರ್, ತನ್ನ ನೂತನ ಧರ್ಮಾನುಸಾರ, ರಾಜ್ಯದಲ್ಲಿ ಕುಡಿತ, ವ್ಯಭಿಚಾರ ಇತ್ಯಾದಿಗಳನ್ನು ಹತ್ತಿಕ್ಕಲು ಹಲವಾರು ಕ್ರಮಗಳನ್ನು ಕೈಗೊಂಡ. ಆರೋಗ್ಯದ ದೃಷ್ಟಿಯಲ್ಲಿ, ಮದ್ಯದ ವ್ಯಾಪಾರವನ್ನು ಕೆಲವರಿಗೆ ನೀಡಿ ಕಟ್ಟುನಿಟ್ಟಿನ ನೀರಿರೀತಿಯನ್ನು ಆಚರಣೆಗೆ ತಂದ. ವ್ಯಭಿಚಾರವನ್ನು ಹತ್ತಿಕ್ಕಲಾರದೆ, ಊರ ಹೊರಗೆ, 'ಶೈತಾನ್ ಘರ್' ಎಂದು ಕರೆಯಲಾದ ಪ್ರದೇಶದಲ್ಲಿ, ಜಾರೆಯರನ್ನು ನೆಲಸಿ, ಅವರ ಭೇಟಿಗೆ ಅಪ್ಪಣೆ ಚೀಟಿ ಪಡೆಯುವ ವ್ಯವಸ್ಥೆಯನ್ನು ಹುಟ್ಟುಹಾಕಿದ. ಯಾರೂ ನರ್ತಕಿಯರನ್ನು ತಮ್ಮ ಮನೆಗಳಿಗೆ ಕರೆದೊಯ್ದು, ಅವರೊಂದಿಗೆ ರಮಿಸುವುದಾಗಲಿ, ಆನಂದಪಡುವುದಾಗಲಿ ಮಾಡದಂತೆ ನಿರ್ಬಂಧಿಸಿದ. ಒಮ್ಮೆ ಹಲವಾರು ಜಾರಿಣಿಯರನ್ನು ಆಸ್ಥಾನಕ್ಕೆ ಕರೆಸು, ಅವರನ್ನು ಆ ದುಃಖದಾಯಕ, ಅನೀತಿಯ ಕಾರ್ಯಕ್ಕೆ ತಂದವರ ಗಣ್ಯಪುರುಷರ ಹೆಸರನ್ನು ಬಯಲುಪಡಿಸುವಂತೆ ಆಜ್ಞಾಪಿಸಿದಾಗ, ಹಲವಾರು ಆಸ್ಥಾನದ ಗಣ್ಯ ಹೆಸರುಗಳು ಹೊರಬಂದಾಗ, ಅವರನ್ನು ಹಿಡಿದು ಶಿಕ್ಷಿಸಿದ ಅಕ್ಬರ್. ದುರದೃಷ್ಟವಶಾತ್, ನೀತಿವಂತ ಬೀರಬಲ್‌ನ ಹೆಸರು ಅವರ ಬಾಯಿಯಿಂದ ಹೊರಬಿದ್ದಾಗ, ಸುದ್ದಿ ಅರಿತ ಬೀರಬಲ್ ಯಾವ ತಪ್ಪು ಮಾಡದ ತನಗೆ ಈ ಅಪವಾದ ಬಂದೊದಗಿದ ದುರ್ದಶೆಯಿಂದ ನೊಂದು ನಗರ ತ್ಯಜಿಸಿ, ಬೈರಾಗಿಯಾಗಿ ಕಾಡಿಗೆ ಹೋದ. ಆದರೆ, ಆತ್ಮೀಯ ಗೆಳೆಯನ ಮನಸ್ಸು ಅರಿತಿದ್ದ ಅಕ್ಬರ್ ಅವನನ್ನು ಹುಡುಕಿ ವಾಪಸ್ಸು ಕರೆತಂದು, ಅವನನ್ನು ಸಮಾಧಾನ ಮಾಡಿದ.

ಹಿಜ್ರಾ ಶಖೆ ೯೮೯ ರಲ್ಲಿ ಆಫ್ಘನ್ ಬುಡಕಟ್ಟಿನ ವಿದ್ರೋಹವನ್ನು ತಡೆಗಟ್ಟಲು, ಅಕ್ಬರ್, ತನ್ನ ಸೈನ್ಯವನ್ನು ಗಡಿಭಾಗಕ್ಕೆ ಕಳುಹಿಸಿದನು. ಅದರ ಮುಂದಾಳತ್ವವನ್ನು

ತನ್ನ ನೆಚ್ಚಿನ ಗೆಳೆಯ, ಬೀರಬಲ್‌ನಿಗೆ ಒಲ್ಲದ ಮನಸ್ಸಿನಲ್ಲಿ ನೀಡಿದ. ಶತಮಾನಗಳಿಂದ ಸಾತಂತ್ರ್ಯಪ್ರಿಯ ಆಫ್ಘಾನಿಸ್ಥಾನದ ಪಠಾಣರು ಪರಕೀಯರ ವಿರುದ್ಧ ಕಾಳಗ ಜರುಗಿಸಿ, ಮೈಮನ ಪಳಗಿಸಿಕೊಂಡಿದ್ದು, ಅವರ ಹೋರಾಟಕ್ಕೆ, ಕೆಚ್ಚಿಗೆ, ಸಾಮರ್ಥ್ಯಕ್ಕೆ ಅವರು ಜನಿಸಿದ ನೆಲ, ಜಲ, ಹವ ಕೂಡ ಅವರಿಗೆ ನೆರವು, ಬೆಂಬಲ ನೀಡಿದ್ದವು. ಕಡಿದಾದ ಪರ್ವತ ಶ್ರೇಣಿ, ಆಳವಾದ ಕಣಿವೆಗಳು, ಭಯಂಕರ ಕಲ್ಲುಬಂಡೆಗಳಿಂದ ಆವೃತಗೊಂಡ ಪ್ರದೇಶಗಳು, ಎಲ್ಲವೂ ಪಠಾಣರ ಮೈಮನಗಳನ್ನು ಉದಾರವಾಗಿ ಆ ಕಲ್ಲುಬಂಡೆಗಳಷ್ಟೇ ಉಕ್ಕಿನಂತೆ ಗಟ್ಟಿಮಾಡಿದ್ದವು. ಅವರನ್ನು ಮಣಿಸಿ ತಮ್ಮ ಹಿಡಿತದಲ್ಲಿರಿಸಿಕೊಳ್ಳಲು ಯಾರೇ ಆಕ್ರಮಣಕಾರಿ ರಾಜ ಮಹಾರಾಜ, ನವಾಬ್ ಬಾದ್‌ಶಹಾಗೆ ಆಗಿರಲಿಲ್ಲ. ಇದಕ್ಕೆ ಹೊರತಾಗಿರಲಿಲ್ಲ ಬಾದ್‌ಶಹಾ ಅಕ್ಬರ್ ಕೂಡ. ಅಕ್ಬರ ತೆಗೆದುಕೊಂಡ ಸೈನ್ಯಾಚರಣೆ ಅವನ ಅನೇಕ ನಿಷ್ಠಾವಂತ ಬಲಿಷ್ಠ ಸೈನ್ಯಾಧಿಕಾರಿಗಳನ್ನು ಬಲಿ ತೆಗೆದುಕೊಂಡಿತು. ಅದರಲ್ಲಿ ರಾಜಾ ಬೀರಬಲ್ ಕೂಡ ಒಬ್ಬನಾಗಿದ್ದ.

ಗಡಿಭಾಗದ ಕರಾಕರ್ ಕಣಿವೆಯಲ್ಲಿ ಕಾದು ಕುಳಿತಿದ್ದ ಪಠಾಣರು ಬೀರಬಲ್ ಮತ್ತು ಅವರ ಏಳರಿಂದ ೮೦೦೦ ಮೊಘಲ್ ಸೈನಿಕರನ್ನು ಹತ್ಯೆ ಮಾಡಿ, ವಿಜಯ ಸಾಧಿಸಿದರು.]

ನಗರಕ್ಕೆ ಒದಗಿದ್ದ ಗಂಡಾಂತರ ತಪ್ಪಿಸಿಕೊಂಡ ಗುರು ೧೫೮೦ರ ಸುಮಾರಿನಲ್ಲಿ ಪ್ರವಾಸಕಾರ್ಯ ಕೈಗೊಂಡ. ಧರ್ಮಪ್ರಚಾರಕ್ಕಾಗಿ ಕೈಗೊಂಡ ಆ ಪ್ರವಾಸದಲ್ಲಿ, ಗುರು ಖಾರಾ ಎಂಬ ಹಳ್ಳಿಯಲ್ಲಿ ತಂಗಿದ. ಅಲ್ಲಿ ಒಂದು ಜಮೀನು ಕೊಂಡು, ಒಂದು ನಗರವನ್ನು ನಿರ್ಮಿಸಲು ನಿರ್ಧರಿಸಿದ. ಆ ನಗರವನ್ನು 'ತರನ್-ತರನ್' ಎಂದು ಕರೆಯಲಾಯಿತು. ಅಮೃತಸರದಲ್ಲಿ ನಿರ್ಮಿಸಿದ ಗುಡಿ ಮತ್ತು ಸರೋವರಗಳ ರೀತಿಯಲ್ಲೇ ಆ ನಗರದಲ್ಲಿ ಒಂದು ಗುಡಿ ಮತ್ತು ಸರೋವರ ನಿರ್ಮಾಣ ಮಾಡಿದ. ನಿರ್ಮಾಣಕಾರ್ಯಕ್ಕೆ ಇಟ್ಟಿಗೆ ಗೂಡು ಕಟ್ಟಿದಾಗ, ಇಟ್ಟಿಗೆಗಳನ್ನು ಆಗ ನಗರದ ರಾಜ್ಯಪಾಲ ನೂರುದ್ದೀನ್ ಒಂದು ಸರಾಯ್‌ನ್ನು ನಿರ್ಮಿಸಲು ಬಲಪ್ರಯೊಗ ಮಾಡಿ ಉಪಯೋಗಿಸಿದ. ಗುರು, ಅವನ ಪ್ರಯತ್ನಕ್ಕೆ ವಿರೋಧಿಸದೆ, ಶಾಂತಿ ಕಾಪಾಡಿಕೊಂಡ. ಆದರೆ, ಅವನು ಸಾರಿದಂತೆ, ಆ ಸರಾಯ್ ಕ್ರಮೇಣ ಸಿಖ್ ಸೈನಿಕರಿಂದ ನಾಶಗೊಂಡು ಪುನಃ ತರನ್-ತರನ್ ಗುಡಿಯ ನಿರ್ಮಾಣಕ್ಕೆ ಉಪಯೋಗಿಸಲಾಯಿತಂತೆ (ಇದು ಜರುಗಿದ್ದು ಕ್ರಿ.ಶ. ೧೮೮೫ ರಲ್ಲಿ) ೬ .

ತರನ್-ತರನ್ ನಗರ ನಿರ್ಮಾಣ ಮಾಡಿದ ಗುರು, ಜಲಂಧರ್ ಪ್ರದೇಶದಲ್ಲಿ ಪ್ರವಾಸ ಮಾಡಿ, ಈಗಿನ ಕಾರ್ತಾರ್‌ಪುರ ನಗರದ ನಿರ್ಮಾಣಕ್ಕೆ ಕೈ ಹಾಕಿದ. ೭ ಅಲ್ಲಿಂದ ಮುಂದೆ ಸಾಗಿ ಪ್ರಸಿದ್ಧ ಲಾಹೋರ್ ನಗರಕ್ಕೆ ತಲುಪಿದ. ಅಲ್ಲಿ ಕೂಡ ದಬ್ಬೀ ಬಜಾರ್ ಎಂಬ ಸ್ಥಳದಲ್ಲಿ ಒಂದು ಬೃಹತ್ ಬಾವಿ (ಬಾವ್ಲೀ) ಯನ್ನು ನಿರ್ಮಿಸಿದ.

೬. P 179 History of Sikh People by G. Singh

ಆ ನಗರದ ಪ್ರಸಿದ್ಧ ಸೂಫಿ ಸಂತರು ಮತ್ತು ಹಿಂದೂ ಸಂತರು ಗುರುವನ್ನು ಭೇಟಿ ಮಾಡಿ, ಚರ್ಚಿಸಿ ಅವನ ಧರ್ಮಸಾರವನ್ನು ಮೆಚ್ಚಿ ಹರಸಿದರು. ಅವರಲ್ಲಿ ಪ್ರಸಿದ್ಧ ಶಾ ಹುಸೈನ್ ಮತ್ತು ಬುಲ್ಲಾ ಶಾ ಪ್ರಮುಖರಾಗಿದ್ದರು. ಲಾಹೋರ್‌ನಿಂದ ಹೊರಟ ಗುರು, ರವಿ ನದಿಯ ಪಶ್ಚಿಮ ದಡದಲ್ಲಿರುವ ಗುರು ನಾನಕ್ ನಿರ್ಮಿಸಿದ ಕಾರ್ತಾರ್‌ಪುರದ ದೇರಾ ಬಾಬಾ ನಾನಕ್‌ಗೆ ತಲುಪಿದನು. ಅಲ್ಲೇ ಗುರುನಾನಕ್‌ನ ಮಗ ವೃದ್ಧ ಬಾಬಾ ಶ್ರೀಚಂದ್‌ನನ್ನು ಭೇಟಿ ಮಾಡಿದ.

ಅಮೃತಸರಕ್ಕೆ ಹಿಂದಿರುಗಿದ ಗುರು ಅರ್ಜುನ್‌ದೇವ ತನ್ನ ಸಹೋದರ ಪ್ರೀಥಿಯಾನ ವಿರೋಧದ ಕಾರ್ಯವನ್ನು ಎದುರಿಸಬೇಕಾಯಿತು. ಗುರುಪೀಠದ ಸ್ವಾಮ್ಯತ್ವವನ್ನು ಪಡೆಯಲು ಆತ ತನ್ನ ಶಕ್ತಿಮೀರಿ ಹಲವಾರು ಸಾಹಸಗಳನ್ನು ಮಾಡಲು ಶುರು ಮಾಡಿದ. ಮೊಘಲ್ ಸರದಾರನ ಸಹಾಯ ಪಡೆದು ಅಮೃತಸರವನ್ನು ವಶಪಡಿಸಿಕೊಳ್ಳಲು ಪಿತೂರಿ ಹೂಡಿದ. ಮೊಘಲ್ ಸರದಾರ ಸುಲ್ಹೀ ಖಾನ್ ತನ್ನ ಪಡೆಯನ್ನು ಅಮೃತಸರಕ್ಕೆ ನುಗ್ಗಿಸಿದಾಗ, ಉಪಾಯ ಕಾಣದೆ, ಅರ್ಜುನ್‌ದೇವ ನಗರ ತ್ಯಜಿಸಿ ವಡಾಲಿ ಎಂಬ ಹಳ್ಳಿಗೆ ಹೋಗಿ ಅಲ್ಲಿ ನೆಲೆಸಿದ. ಅಲ್ಲೇ ಒಂದು ಬಾವಿ ತೆಗೆಸಿದ. ಅದನ್ನು ಈಗಲೂ 'ಛೆ-ಹರ್ತಾ ಸಾಹಿಬ್' ಎಂದು ಕರೆಯುತ್ತಾರೆ. ಆ ಬಾವಿಯ ನೀರನ್ನು ಎತ್ತಲು ಪರ್ಶಿಯನ್ ಗಾಲಿ ಉಪಯೋಗಿಸುವ ಕ್ರಮದಿಂದ ಆ ಹೆಸರು ನಿಂತಿದೆ ಎಂದರು ಇತಿಹಾಸಕಾರರು. ೮

ಗುರು ಅರ್ಜುನ್‌ದೇವ್ ನಗರ ತ್ಯಜಿಸಿದರೂ, ಅವನ ಮೇಲಿನ ಭಕ್ತಿ, ಪ್ರೀತಿ ವಿಶ್ವಾಸ ಕಡಿಮೆಯಾಗಲಿಲ್ಲ. ಭಕ್ತರು ತಂಡೋಪತಂಡವಾಗಿ ವಡಾಲಿಗೆ ಬರತೊಡಗಿದರು. ಇತ್ತ ತಾನೇ ನಿಜವಾದ ಗುರು ಎಂದು ಸಾರಿಕೊಂಡ ಪ್ರೀಥಿಯಾನನ್ನು ಕಡೆಗಣಿಸಿದರು ಭಕ್ತರು. ಹಗೆತನವನ್ನು ಇರಿಸಿಕೊಂಡ ಪ್ರೀಥಿಯಾ ಗುರು ಅರ್ಜುನ ದೇವ್‌ನನ್ನು ಹತ್ಯೆ ಮಾಡಲು ಅನೇಕ ದುಸ್ಸಾಹಸ ಮಾಡಿದರೂ ಸಫಲಗೊಳ್ಳಲಿಲ್ಲ.

ಗುರುವನ್ನು ಪೀಠದಿಂದ ಇಳಿಸಲು ಪ್ರೀಥಿಯಾ ದಿಲ್ಲಿಯ ಮೊಘಲ್ ದರ್ಬಾರಿಗೆ ದೂರಿಟ್ಟ. ಇಬ್ಬರ ನಡುವಿನ ವಿರಸವನ್ನು ಬಗೆಹರಿಸಲು ಸಹೋದರ ಮಹಾದೇವ್ ಶ್ರಮಿಸಿದರೂ ಅದು ಸಫಲಗೊಳ್ಳಲಿಲ್ಲ.

ಈ ಮಧ್ಯದಲ್ಲಿ ಗುರು ಅರ್ಜುನ್‌ದೇವನಿಗೆ ಪುತ್ರೋತ್ಸವವಾಯಿತು. ಮಗುವಿಗೆ ಹರಗೋವಿಂದ್ ಎಂದು ಹೆಸರಿಡಲಾಯಿತು. ಇದರಿಂದ ಪ್ರೀಥಿಯಾ ಮತ್ತಷ್ಟು ಗಲಿಬಿಲಿಗೊಂಡ. ಗುರುವಿಗೆ ಸಂತಾನವಿಲ್ಲದೆ ಇದ್ದುದರಿಂದ, ಕ್ರಮೇಣ ತಾನೇ ಗುರುಪೀಠದ ಉತ್ತರಾಧಿಕಾರಿಯಾಗಬಹುದೆಂಬ ಆಸೆ ಇಟ್ಟುಕೊಂಡಿದ್ದುದರಿಂದ,

೭. P 26 vol 3 The Sikh Religion by Macauliffe.

೮. P34 (Vol 3) The Sikh Religion by Macauliffe

ಗುರುವಿಗೆ ಪುತ್ರಸಂತಾನವಾಗಿದ್ದು ಅವನಿಗೆ ಅತೀವ ನಿರಾಸೆಯಾಯಿತು. ಸ್ನೇಹಿತ ಸುಲ್ಹೀಖಾನ್‌ನ ನೆರವಿನಿಂದ ದಿಲ್ಲಿ ದರ್ಬಾರ್‌ಗೆ ಗುರುವಿನ ವಿರುದ್ಧ ದೂರಿಟ್ಟರೆ, ಅಕ್ಬರ್ ಬಾದ್‌ಶಹಾ ಅವನ ದೂರನ್ನು ಅಂಗೀಕರಿಸದೆ ಅದನ್ನು ಬದಿಗಿಟ್ಟ. ತನ್ನ ಎಲ್ಲಾ ಪ್ರಯತ್ನಗಳು ವಿಫಲಗೊಂಡಿದ್ದರಿಂದ ನೊಂದ ಪ್ರೀಥಿಯಾ ಕಾಯಿಲೆ ಬಿದ್ದ.

ಗುರು ತನ್ನ ಮಗ ಹರಿಗೋಬಿಂದ್‌ನಿಗೆ ಪಾಠ ಪ್ರವಚನ, ಕುದುರೆ ಸವಾರಿ, ಆಯುಧಗಳ ಉಪಯೋಗ, ಔಷಧೋಪಚಾರದ ವಿದ್ಯೆಗಳ ಜೊತೆಗೆ ಕೃಷಿ, ಸರಕಾರಿ ಮತ್ತು ಸಾರ್ವಜನಿಕ ವ್ಯವಹಾರಗಳ ಬಗ್ಗೆ ವಿದ್ಯಾರ್ಜನೆ ಮಾಡಲು ಶಿಕ್ಷಕರನ್ನು ನೇಮಿಸಿದ.

ಗುರು ಅರ್ಜುನ ದೇವ್ ಅಮೃತಸರದಲ್ಲಿ ಹರಿಮಂದಿರ ನಿರ್ಮಿಸಿ ಕೀರ್ತಿಗಳಿಸಿದರ ಜೊತೆಗೆ, ಅವನು ತೆಗೆದುಕೊಂಡ ಮತ್ತೊಂದು ಮಹತ್‌ಕಾರ್ಯವೆಂದರೆ, ಪೂರ್ವ ಗುರುವರ್ಯರ ಹೇಳಿಕೆಗಳ, ಪದಗಳ, ಅಷ್ಟಪದಿಗಳ ಸಂಗ್ರಹಕಾರ್ಯ ಮಾಡಿ ಅವನ್ನು ಒಂದು ಬೃಹತ್ ಗ್ರಂಥರೂಪದಲ್ಲಿ ಇರಿಸಿದ್ದು. ಗುರು ಅಮರ್‌ದಾಸ್‌ನ ಮಗ ಮೋಹನ್ ಬಳಿ ಗುರುಗಳ ಕೀರ್ತನೆಗಳ ಸಂಗ್ರಹ ಇರುವ ಸಂಗತಿ ಅರಿವಾಗಿ, ಅವನ್ನು ಪಡೆದುಕೊಳ್ಳಲು ಭಾಯಿ ಬುಡ್ಡಾನನ್ನು ಅವನ ಬಳಿ ಕಳುಹಿಸಿದ. ಆತನಾದರೋ ಬಹಳ ಕಷ್ಟಪಟ್ಟು ಮೋಹನ್‌ನ ಮನ ಒಲಿಸಿ ಆ ಗ್ರಂಥಗಳನ್ನು ಪಡೆದುಕೊಂಡು ಗುರು ಅರ್ಜುನದೇವ್‌ನಿಗೆ ಒಪ್ಪಿಸಿದ.

ಗುರು ಅರ್ಜುನ ದೇವ್, ಊರ ಹೊರಗೆ ಒಂದು ಜೋಪಡಿ ಹಾಕಿ ಅದರಲ್ಲಿ ಕುಳಿತು, ದೊರೆತ ಹಲವಾರು ಗುರುಗ್ರಂಥಗಳನ್ನು ಓದಿ, ಸಂಸ್ಕರಿಸಿ, ಅನುಪಯುಕ್ತವಾದದ್ದನ್ನು ಬೇರ್ಪಡಿಸಿ, ನೈಜ ರಚನೆಗಳನ್ನು ಪ್ರತ್ಯೇಕಿಸುವ ಕಾರ್ಯಕ್ಕೆ ಕೈ ಹಾಕಿದ. ಅವನ ಸಹಾಯಕ್ಕೆ ಭಾಯಿ ಗುರುದಾಸ ಎಂಬಾತ ನೇಮಕಗೊಂಡ.

ಈ ಗ್ರಂಥದಲ್ಲಿ ಐದು ಗುರುಗಳ ಪಾಠ ಪ್ರವಚನಗಳಲ್ಲದೆ, ಕೀರ್ತನೆಗಳು, ಅಷ್ಟಪದಿಗಳು, ಪದಗಳು ಸೇರಿಸಲ್ಪಟ್ಟಿವೆ. ಅವುಗಳೊಂದಿಗೆ, ಹಿಂದೂ ಭಕ್ತಿಪಂತದ ಕಬೀರ್‌ದಾಸ್, ಜೈದೇವ, ನಾಮದೇವ್, ದಹ್ನಾ, ರವಿದಾಸ್, ಪಿಂಪಾ ಮತ್ತು ಸ್ವಾಮಿ ರಮಾನಂದ್‌ರ ಕೃತಿಗಳನ್ನು ಸೇರಿಸಲ್ಪಟ್ಟಿವೆ. ಮುಸ್ಲಿಮ್ ಸಂತರಾದ ಫರೀದ್, ಮರ್ದಾನಾ, ಸತ್ತಾ ಮತ್ತು ಬಲವಾಂದ್‌ರ ಕೃತಿಗಳನ್ನು ಸೇರಿಸಲಾಗಿದೆ. ೯

ಪ್ರಸ್ತುತ ಗುರುಗ್ರಂಥದಲ್ಲಿ ೫೮೯೪ ಭಜನಾಕೃತಿಗಳು ಇವೆ ಎಂದಿದ್ದಾರೆ ಇತಿಹಾಸಕಾರರು. ಗುರು ಅರ್ಜುನದೇವ್‌ನದೇ ೨೨೧೬ ಕೃತಿಗಳಿವೆ. ಗುರು ನಾನಕ್‌ನದು ೯೭೬ ಕೃತಿಗಳಿದ್ದರೆ, ಗುರು ಅಂಗದ್‌ನದು ೬೧, ಗುರು ಅಮರ್‌ದಾಸ್ ೯೦೭, ರಾಮದಾಸ್ ೬೭೯, ಗುರು ತೇಘ್ ಬಹದ್ದೂರ ೧೧೮ ಕೃತಿಗಳು.

---

೯. P 184 History of Sikh people by G.Singh

ಗುರು ಗ್ರಂಥವು ಆಯ್ದು ವಿಷಯಗಳ ಪ್ರಕಾರ ವಿಂಗಡಿಸಿ ಜೋಡಿಸದೆ ಹಿಂದೂಸ್ಥಾನೀ ರಾಗಗಳ ಪ್ರಕಾರ ವಿಂಗಡಿಸಿ ಇರಿಸಲಾಗಿದೆ. ಗ್ರಂಥದಲ್ಲಿ ೩೧ ರಾಗಗಳನ್ನು ಆರಿಸಿ ಅವುಗಳ ಪ್ರಕಾರ ಕೀರ್ತನೆ ಅಥವಾ ಪದಗಳನ್ನು ಹಾಡುವ ರೂಢಿಯನ್ನು ತರಲಾಗಿದೆ. ೧೦

ಭಾಯಿ ಬುಡ್ಡಾನನ್ನು ಗ್ರಂಥದ ಪ್ರಥಮ ಗ್ರಂಥೀ (ಮೇಲ್ವಿಚಾರಕ) ಎಂದು ನೇಮಿಸಲಾಯಿತು. ಗುರು ಅರ್ಜುನ್‌ದೇವ್ ಗ್ರಂಥವನ್ನು ಸಾರ್ವಜನಿಕರ ಸಂದರ್ಶನ ಮತ್ತು ಉಪಯೋಗಕ್ಕೆ ಕಾದಿರಿಸಿದ. ಜಾತಿ ಮತ ಬೇಧಭಾವವಿಲ್ಲದೆ, ಯಾರೂ ಗ್ರಂಥವನ್ನು ತೆರೆದು, ಓದಿ ಪಠಿಸಬಹುದಾಗಿತ್ತು.

ಗ್ರಂಥಗಳ ಜೋಡಣೆ ಮತ್ತು ಅದರ ಯಜಮಾನಿಕೆಯನ್ನು ಒಬ್ಬ ಗ್ರಂಥೀಗೆ ನೀಡಿ, ಭಕ್ತರು ಅದನ್ನು ಓದಿ, ಪಠಿಸಿ, ಹಾಡಿ, ಪಾವನರಾಗುವಂತೆ ಗುರು ಮಾಡುತ್ತಿದ್ದ ಉಪದೇಶ, ಅವನ ವಿರೋಧಿಗಳಿಗೆ ಸುಸಮಯ ಸಂದರ್ಭ ಒದಗಿ ಬಂದಿತು ಗುರುವಿನ ತೇಜೋವಧೆ ಮಾಡುವುದಕ್ಕೆ. ವಿರೋಧಿಗಳ ನಾಯಕತ್ವ ಗುರುವಿನ ಸಹೋದರ ಪ್ರೀಥಿಯಾ ವಹಿಸಿಕೊಂಡ. ದಿಲ್ಲಿ ಬಾದ್‌ಶಹಾ ಅಕ್ಬರ್‌ಗೆ ಗ್ರಂಥದಲ್ಲಿ ಇಸ್ಲಾಮ್ ಮತ್ತು ಹಿಂದೂ ಧರ್ಮಗಳ ಬಗ್ಗೆ ಅವಹೇಳನಕಾರಿ, ಅಧರ್ಮೀಯವಾದ ಹೇಳಿಕೆ ಮತ್ತು ಉಪದೇಶಗಳಿದ್ದು, ಅವುಗಳಿಂದ ಪ್ರಭಾವಗೊಂಡ ಸಾಮಾನ್ಯ ಜನರ ಧಾರ್ಮಿಕ ಭಾವನೆಗಳಿಗೆ ಮತ್ತು ಸಾಮಾಜಿಕ ಸಾಮರಸ್ಯಗಳಿಗೆ ಧಕ್ಕೆ ಉಂಟಾಗುತ್ತಿದೆ ಎಂದು ದೂರನ್ನು ಇತ್ತರು. ಅಕ್ಬರ್ ಬಾದ್‌ಶಹಾ ಈಗಾಗಲೇ ಸರ್ವಧರ್ಮ ಹಿತೈಷಿಯಾಗಿ ಮಾನವರಿಗೆ ಒಂದೇ ಧರ್ಮವಿರಬೇಕೆಂಬ ನಿಲುವನ್ನು ಹೊತ್ತಿದ್ದರ ಪರಿಣಾಮ,

---

೧೦. The Gospel of peace by Duncan Greenless

P 121 - The Granth Sahib is collection of devotional hymnsal prayers. In it there is little of explicit Philosophy or ethics; both can be deduced from countless scattered references.

. . . .The Philosophy so carefully and skilfully described by Dr. Sher Singh, differs little from that of Vaishnavas, save in its total rejection of incarnations, idols, and caste, nor does the Guru teach the mechanical repetition of any word or phrase on the grounds of it being God's name or full of magical power. As Dr. Sher Singh says it may indeed be regarded as merging of Advaitha Bhakti (More or less as found in Gnaneshwari) with Sufism. The Ethics of the Guru differs in no real sense from that of every other true religion, stressing as the fundamental sanctions the law of karma and the pleasing of God as the better motive; it teaches that no happiness can be found same in that blissful Lord of Love.'

ಇಸ್ಲಾಮೀ ಉಲೇಮಾಗಳಿಂದ ಪ್ರತಿರೋಧ ಅವನು ಎದುರಿಸುತ್ತಿದ್ದ. ಇಂತಹ ಸಂದರ್ಭದಲ್ಲಿ, ಸಾಮರಸ್ಯವನ್ನು ಕಲಕುವ ಯಾವುದೇ ಸಂಘ ಸಂಘಟನೆಗಳ ಮೇಲೆ ದೂರು ಬಂದಾಗ, ಅವನಿಗೆ ಸುಮ್ಮನೆ ಕುಳಿತಿರಲಾಗಲಿಲ್ಲ. ಗುರು ಅರ್ಜುನ್‌ದೇವನಿಗೆ ದಿಲ್ಲಿಗೆ ಬಂದು ತನ್ನ ಮುಂದೆ ಹಾಜರ್ ಆಗಲು ಕರೆ ನೀಡಿದ. ಬಾದಶಹಾನ ಕರೆಗೆ ಗುರು ಓಗೊಟ್ಟರೂ, ಅವನು ದಿಲ್ಲಿಗೆ ತೆರಳದೆ, ತನ್ನ ಶಿಷ್ಯ ಭಾಯಿ ಗುರುದಾಸ್‌ನನ್ನು ಕಳುಹಿಸಿದ. ಅಕ್ಬರ್‌ನ ಮುಂದೆ ಹಾಜರ್ ಆದ ಭಾಯಿ ಗುರುದಾಸರನ್ನು ಬಾದ್‌ಶಹಾ, ಅವನ ಮನಸ್ಸಿಗೆ ಬಂದಂತೆ ಗ್ರಂಥದ ಹಾಳೆಗಳನ್ನು ತೆಗೆದು, ಅದರಲ್ಲಿದ್ದ ವಿಷಯಗಳ ಬಗ್ಗೆ ತಿಳಿಸುವಂತೆ ಆಜ್ಞಾಪಿಸಿದ. ಅದರಂತೆ, ಭಾಯಿ ಗುರುದಾಸ್, ಗ್ರಂಥದ ಒಂದು ಪುಟವನ್ನು ತೆರೆದು ಅದರಲ್ಲಿದ್ದ ಕವಿತೆಯನ್ನು ಓದಿದನು :

'ನಿನ್ನನ್ನು ರಾಮನೆಂದು ಕರೆಯುವವರು ಕೆಲವರು
ಇನ್ನು ಕೆಲವರು ಖುದಾ ಎನ್ನುವರು
ಆದರೆ, ಓ ದಯಾಮಣಿ ದೇವರೇ,
ನೀನು ಕಾರ್ಯಕಾರಣನಾಗಿದ್ದೀಯಾ
ಆದ್ದರಿಂದ ನಿನ್ನ ದಯೆಯಿಂದ ನನ್ನನ್ನು ಹರಸು
ಓ ಕರುಣಾಮಯಿ !'

ಇದೇ ರೀತಿ ಇನ್ನು ಎರಡು ಮಹತ್ವದ ಏಕತೆ, ದಯಾಗುಣಗಳನ್ನು ಬಿಂಬಿಸುವ ಕೀರ್ತನೆಗಳನ್ನು ಹಾಡಿ, ನುಡಿದಿದ್ದನ್ನು ಆಲೈಸಿದ ಬಾದ್‌ಶಹಾ ಅಕ್ಬರ್ ಸಂತುಷ್ಟನಾದ. 'ದೇವರ ಮೇಲಿನ ಭಕ್ತಿಭಾವ ಮತ್ತು ಪ್ರೀತಿಗಳನ್ನು ಬಿಂಬಿಸುವದಷ್ಟೇ ಅಲ್ಲದೆ, ಇನ್ನು ಯಾವ ತರಹದ ಆಕ್ಷೇಪಣೆ, ದೂಷಣೆಗಳು ಈ ಗ್ರಂಥದಲ್ಲಿ ಕಾಣಬರುವುದಿಲ್ಲ. ಇದು ಒಂದು ಪವಿತ್ರ ಗ್ರಂಥವಾಗಿದೆ' ಎಂದು ಹೇಳಿ ಪ್ರೀಥಿಯಾನ ದೂರನ್ನು ಹತ್ತಿಕ್ಕಿದ. ೧೧

ಅಕ್ಬರ್ ಬಾದ್‌ಶಹಾನ ತೀರ್ಪಿನಿಂದ ನಿರಾಳನಾದ ಗುರು ಅರ್ಜುನ್‌ದೇವ ತನ್ನ ಧಾರ್ಮಿಕ ಚಟುವಟಿಕೆಗಳನ್ನು ಮತ್ತಷ್ಟು ಚುರುಕುಗೊಳಿಸಿದ. ಆದರೆ ದುರದೃಷ್ಟವಶಾತ್, ಅಕ್ಬರ್ ಬಾದ್‌ಶಹಾನ ಮರಣ ೧೭ನೆಯ ಅಕ್ಟೋಬರ್ ೧೬೦೫ರಲ್ಲಿ ಆಯಿತು. ಅವನ ಮಗ ಜಹಂಗೀರ್ ಪಟ್ಟಕ್ಕೆ ಬಂದ. ವಿಷಯಲಂಪಟನಾದ ಈತ ರಾಜ್ಯದ ಮುಸ್ಲಿಮ್ ಉಲೇಮಾಗಳ ಹಿಡಿತಕ್ಕೆ ಸಿಕ್ಕಿಹಾಕಿಕೊಂಡ. ತನ್ನ ಅನೈತಿಕ ಚಟುವಟಿಕೆಗಳಿಗೆ ಅವರಿಂದ ವಿರೋಧ ಬರದಂತೆ, ಅವರ ತಾಳಕ್ಕೆ ಕುಣಿಯತೊಡಗಿದ. ಪಂಜಾಬ್‌ನಲ್ಲಿ ಸಿಖ್‌ರು ಪ್ರಬಲರಾಗಿ, ಅವರ ಧರ್ಮ ಪ್ರಚಾರ ಇಮ್ಮಡಿಸಿ, ಹಿಂದೂಗಳಷ್ಟೇ ಅಲ್ಲದೆ ಮುಸ್ಲಿಮರೂ ಕೂಡ ಅವರ ಪ್ರಭಾವಕ್ಕೆ ಒಳಗಾಗಿದ್ದಾರೆ ಎಂಬ ವಿಷಯ ಸರ್‌ಹಿಂದ್‌ನ

೧೧. P 189 History of Sikh people by G. Singh

ಪ್ರಸಿದ್ಧ ಸುನ್ನೀ ಸಂತ ಶೇಖ್ ಅಹಮದ್ ಸರ್‌ಹಿಂದೀ ಉರುಫ್ ಮುಜಾಹಿದ್ ಅಲಿಫ್ ಸಾನೀ ಎಂಬಾತನಿಂದ ಅರಿತಾಗ ಬಾದ್‌ಶಹಾ ಜಹಾಂಗೀರ್ ಸಿಖ್ಖರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ನಿರ್ಧರಿಸಿದ. ಅವಕಾಶಕ್ಕೆ ಕಾದು ಕುಳಿತ. ೧೨

ಆ ಸಂದರ್ಭ ಒದಗಿ ಬಂದಿದ್ದು ಜಹಂಗೀರ್‌ನ ಮಗ ತಂದೆಯ ವಿರುದ್ಧ ದಂಗೆ ಎದ್ದಾಗ. ಖುಸ್ರೋ ತಂದೆಯ ವಿರುದ್ಧ ವಿದ್ರೋಹ ಎಸಗಿ, ಭಾರತದಿಂದ ಕಾಬೂಲ್ ಕಡೆಗೆ ಪಲಾಯನ ಮಾಡುವಾಗ, ಪಂಜಾಬ್ ಪ್ರಾಂತ್ಯದಲ್ಲಿದ್ದ ಗೋವಿಂದ್‌ವಾಲ್‌ನಲ್ಲಿ ಬಿಡಾರ ಹೂಡಿದ. ಆಗ ಅಲ್ಲಿ ವಾಸವಾಗಿದ್ದ ಗುರು ಅರ್ಜುನದೇವನ ಭೇಟಿಯಾದ. ಗುರುವಿನ ಆಶೀರ್ವಾದ ಬೇಡಿದ ಖುಸ್ರೋ, ಗುರು ಅವನ ಹಣೆಗೆ ತಿಲಕವನ್ನಿಟ್ಟು ಹರಿಸಿದ. ಅದೇ ಗುರುವಿಗೆ ಮುಳುವಾಯಿತು. ಜಹಂಗೀರ್ ತನ್ನ ವೈರಿ, ವಿರೋಧಿ ಮಗ ತನ್ನ ವಿರುದ್ಧ ದಂಗೆ ಎದ್ದು ಸಮರ ಸಾಗಿಸಿ, ಕಾಬೂಲ್ ಕಡೆ ಓಡಿಹೋಗುವಾಗ, ಅವನನ್ನು ಹಿಡಿದು ತರಲು ತಾನು ಶ್ರಮಿಸುತ್ತಿರುವಾಗ, ಗುರು ಅರ್ಜುನದೇವ ಅವನಿಗೆ ಹರಸಿದ್ದು ಅಕ್ಷಮ್ಯ ಅಪರಾಧವಾಗಿತ್ತು. ೧೩

ಖುಸ್ರೋ ತಂದೆಯ ವಿರುದ್ಧ ದಂಗೆ ಎದ್ದು ಸೋತು ಕಾಬೂಲ್‌ನತ್ತ ಓಡಿಹೋಗುವಾಗ, ಜಹಾಂಗೀರ್‌ನ ಪಡೆಗೆ ಸಿಕ್ಕಿಹಾಕಿಕೊಂಡು, ಶಿಕ್ಷೆಗೆ ಗುರಿಯಾದ. ಅವನ ಕಣ್ಣುಗಳನ್ನು ಕೀಳಿಸಿ, ಸೆರೆಮನೆಗೆ ನೂಕಿದ ತಂದೆ ಜಹಂಗೀರ್. (ಕೆಲವು ಇತಿಹಾಸಕಾರರ ಪ್ರಕಾರ ಅವನ ಕಣ್ಣುಗಳಿಗೆ ಶುಶ್ರೂಷೆ ಮಾಡಿ ಗುಣಪಡಿಸಿದನಂತೆ ಒಬ್ಬ ಪರ್ಶಿಯನ್ ವೈದ್ಯ. ಏನೇ ಆದರೂ ಅವನು ಶಿಕ್ಷೆಯನ್ನು ಅನುಭವಿಸಿದ್ದು

---

೧೨. P 72 Tazuk-i-Jahangir by Alexander Rojers

೧೩. P 72 Tuzuk-i-Jahangir by Alexander Rojers

In Gobindwal, which is on the river Biyah (Beas) there was Hindu named Arjun, in the garments of sainthood and sanctity, so much so that he had captured many of the simple hearted Hindus and even of the ignorant and foolish followers of Islam, by his ways and manners and they had loudly sounded the drum of his holiness. They called him Guru, and from all sides stupid people crowded to worship and manifest complete faith in him. For three or four generations (of spiritual successors) they had kept this shop warm. Many times it occurred to me to put a stop to this vain affair or to bring him into the assembly of the people of Islam'.

ನಿಜವಾಗಿತ್ತು.) ೧೪ ೧೫

ಜಹಾಂಗೀರ್ ಬಾದ್‌ಶಹಾ ಮಗನ ಕಣ್ಣು ಕೀಳಿಸಿ ಸೆರೆಮನೆಗೆ ತಳ್ಳಿದ ಮೇಲೆ ಅವನ ಕಣ್ಣುಗಳು, ಖುಸ್ರೂವಿಗೆ ತಿಲಕವನ್ನಿಟ್ಟು ಹರಿಸಿದ ಗುರು ಅರ್ಜುನ್‌ದೇವ್‌ನ ಮೇಲೆ ಬಿತ್ತು. ಈಗಾಗಲೇ ಗುರುವಿನ ಮೇಲೆ ಹಿಂದೂ ಮುಸ್ಲಿಮ್ ಮೂಲಭೂತ ತತ್ವವಾದಿಗಳ ದೂರನ್ನು ಆಲೈಸಿ, ಗುರುವಿನ ವಿರುದ್ಧ ಕ್ರಮ ತೆಗೆದುಕೊಳ್ಳಲು ತೀರ್ಮಾನಿಸಿದ ಮತಾಂಧನಾದ ಜಹಂಗೀರ್, ಗುರುವನ್ನು ಸೆರೆಹಿಡಿದು ತನ್ನ ಮುಂದೆ ಕರೆತರಲು ಯೋಧರನ್ನು ಕಳುಹಿಸಿದ. ಅವನ ವಿಚಾರಣೆ ಜರುಗಿಸಿ, ಅವನಿಗೆ ಮರಣದಂಡನೆ ವಿಧಿಸಿದ. ಅವನ ಸಂಸಾರದವರನ್ನು ಸೆರೆಯಲ್ಲಿರಿಸಿದ ಮತ್ತು ಗುರುವಿನ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿದ. ೧೬

ಗುರು ಅರ್ಜುನ್ ದೇವನ ಮರಣ ಅವನಿಗೆ ನೀಡಿದ ಕ್ರೂರ ಹಿಂಸೆಯಿಂದ ಆಯಿತೆಂದು ಕೆಲವರ ಹೇಳಿಕೆ. ಆದರೆ, ಜಹಂಗೀರ್ ಬಾದ್‌ಶಹಾ ಮಾತ್ರ ತನ್ನ ಆಳ್ವಿಕೆಯ ಮೊದಲ ದಿನಗಳಲ್ಲೇ ಒಬ್ಬ ನಿರಪರಾಧಿ, ಅಮಾಯಕ, ದೈವಭಕ್ತನ ಪ್ರಾಣಹರಣ ಮಾಡಿದ ಕುಖ್ಯಾತಿ ಪಡೆದ. ಒಬ್ಬ ಧರ್ಮಿಷ್ಠ, ಶಾಂತಿಪ್ರಿಯ, ಸರ್ವರ ಸುಖ ಬಯಸಿ, ಎಲ್ಲರಿಗೂ ಸುಖ ಶಾಂತಿ ಬಯಸಿ, ಅವನ ದರ್ಶನ ಪಡೆದು ಆಶೀರ್ವಾದ ಪಡೆಯಲು ಬಂದ ಸರ್ವರಿಗೂ ತಿಲಕವನ್ನಿಟ್ಟು ಹರಿಸಿ ಆಶೀರ್ವಾದ ನೀಡುವ ಸಂಪ್ರದಾಯವಿರಿಸಿಕೊಂಡಿದ್ದ ಗುರುವಿನ ಹತ್ಯೆ ಮಾಡಿ, ಜಹಂಗೀರ್ ಬಾದ್‌ಶಹಾ ಮೂಲಭೂತವಾದಿಗಳ ಭಕ್ತಿ, ಪ್ರೀತಿ, ಆದರ ಗಳಿಸಿಕೊಂಡ. ೧೭ ಅವಟಿಣ ಗುರು ಅರ್ಜುನ್ ದೇವಿನಿಗೆ ಮರಣದಂಡನೆ ವಿಧಿಸಿದರೂ ತನ್ನ ದ್ರೋಹಿ ಮಗ ಖುಸ್ರೋ ಮುಸ್ಲಿಮ್ ಸಂತ ಶೇಖ್ ನಿಜಾಮ್‌ನ ಆಶೀರ್ವಾದ ಪಡೆದಿದ್ದಕ್ಕೆ ಆ ಮುಸ್ಲಿಮ್ ಸಂತನ ಪ್ರಾಣಹರಣ ಮಾಡದೆ, ಅವನನ್ನು ಮೆಕ್ಕಾಗೆ ಅಟ್ಟಿದ. ಜಹಾಂಗೀರ್‌ನ ಪಕ್ಷಪಾತದ ನೀತಿಯಿಂದ ಸಿಖ್‌ರ ಗುರು ಅರ್ಜುನ್ ದೇವ್ ಹುತಾತ್ಮನಾದ.

ಗುರು ಅರ್ಜುನ್ ದೇವ್‌ನ ಮರಣದಂಡನೆಯನ್ನು ಕ್ರಿ.ಶ. ೧೬೦೬ ಮೇ ತಿಂಗಳ ೩೦ ರಂದು ಜರುಗಿಸಲಾಯಿತು. ೧೮

---

೧೪. 14. P 174 Tuzuk-I-Jahangir by Alexander Rojers

೧೫. P 268 Travels in India by Tavernier

೧೬. P 72 Tuzuk-i-Jahangir by Alexander Rojers

೧೭. P 76 Later Moghals by Irvine

೧೮. P 194 History of Sikhs by G.Singh

ಅಧ್ಯಾಯ ೮
ಗುರು ಹರ ಗೋವಿಂದ್ (ಕ್ರಿ.ಶ. ೧೫೯೫ – ೧೬೪೪)

"ಹಿಂದಿನ ಗುರುಗಳು ತಮ್ಮ ಗುಡಿಗಳಲ್ಲಿ ಕುಳಿತಿದ್ದರು,
ಆದರೆ ಇಂದಿನ ಗುರು ಊರೂರು ಅಲೆಯುತ್ತಾನೆ.
ಹಿಂದೆ, ರಾಜರು ಗುರುಗಳಿಗೆ ಗೌರವಾರ್ಪಣೆ ನೀಡುತ್ತಿದ್ದರು;
ಈಗ ರಾಜರು ನಮ್ಮ ಕೋಟೆಗಳ ಮೇಲೆ ಆಕ್ರಮಣ ಮಾಡುತ್ತಿರುವರು.
ಶಿಷ್ಯಂದಿರಿಗೆ ನೆಮ್ಮದಿ ಇಲ್ಲ, ಯಾಕೆಂದರೆ ಗುರು ತುದಿಕಾಲಿನಲ್ಲಿರುವ
ಮತ್ತು ಯಾರಿಗೂ ಹೆದರಿದವನಲ್ಲ.
ಹಿಂದಿನ ಗುರುಗಳು ತಮ್ಮ ಶೈಯ್ಯೆಯಲ್ಲಿ ಕುಳಿತು ಶಾಂತಿಪಾಠ
ಬೋಧಿಸುತ್ತಿದ್ದರು;
ಇಂದಿನ ಗುರು ಬೇಟೆನಾಯಿ ಸಾಕುವನು ಮತ್ತು
ಬೇಟೆಯಾಡುವುದನ್ನು ಪ್ರೀತಿಸುವನು.
ಹಿಂದಿನವರು ಭಕ್ತಿಗೀತೆಗಳನ್ನು ರಚಿಸಿ ಹಾಡುತ್ತಿದ್ದರು
ಇಂದಿನವ ಬೋಧಿಸುವುದೂ ಇಲ್ಲ, ಭಕ್ತಿಗೀತೆಗಳನ್ನು
ಆಲೈಸುವುದಿಲ್ಲ ಮತ್ತು ಹಾಡುವುದಿಲ್ಲ.
ಇಂದಿನವ ಭಕ್ತರನ್ನು ತನ್ನಬಳಿ ಇರಿಸಿಕೊಳ್ಳುವುದಿಲ್ಲ.
ಆದರೆ ನಮ್ಮ ಶತ್ರುಗಳ ಸ್ನೇಹ ಅತಿ ಪ್ರಿಯ ಅವನಿಗೆ
ಆ ಸತ್ಯವನ್ನು ಮರೆಮಾಚಲಸಾಧ್ಯ ಮತ್ತು ಸಿಖ್ಖರು,
ಜೇನುಹುಳುದ ಹಾಗೆ ಅವನ ಪಾದಕಮಲಕ್ಕಾಗಿ ಹಂಬಲಿಸುವರು.
ಅವನು ಸಹಿಸಲಾಗದಿದ್ದನ್ನು ಸಹಿಸುವನು ಮತ್ತು ತನ್ನ ಆತ್ಮವನ್ನು
ಪ್ರತಿಪಾದಿಸುವುದಿಲ್ಲ.

–ಭಾಯಿ ಗುರುದಾಸ್

ಭಾಯಿ ಗುರು ದಾಸ್‌ನ ಈ ಕೀರ್ತನೆ ಗುರು ಹರಗೋವಿಂದ್‌ನ ವ್ಯಕ್ತಿತ್ವವನ್ನು ಸಾರಿ ಹೇಳುತ್ತದೆ ಎನ್ನಬಹುದು.

ಗುರು ಅರ್ಜುನ್ ದೇವ್‌ನ ಹತ್ಯೆಯಾದಾಗ, ಅವನ ಮಗ ಹರ ಗೊಂಬಿಂದ್‌ನಿಗೆ ೧೧ ವರ್ಷ ವಯಸ್ಸಾಗಿತ್ತು. ಅವನು ಗುರುಪೀಠವನ್ನು ಅಲಂಕರಿಸಿದ ಬಗ್ಗೆ ಇತಿಹಾಸಕಾರರಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಯಾಕೆಂದರೆ, ಬಾದ್‌ಶಹಾ ಜಹಂಗೀರ್, ಗುರು ಅರ್ಜುನ್ ದೇವ್ ಮತ್ತು ಅವನ ಮಕ್ಕಳನ್ನು ಸೆರೆ ಹಿಡಿದು ಗ್ವಾಲಿಯರ್ ಕೋಟೆಯಲ್ಲಿ ಬಂಧಿಸಿದನೆಂದು, ಬಾಲಕ ಹರ ಗೋವಿಂದ್‌ನನ್ನು

ಕೊಲ್ಲದೆ, ಹಿಂಸಿಸದೆ, ಕೋಟೆಯಲ್ಲಿ ಬಂಧಿಸಿದ್ದು, ಕ್ರಮೇಣ ಅವನನ್ನು ಬಿಡುಗಡೆ ಮಾಡಿದನೆಂದು ಕೆಲವರ ಅಭಿಪ್ರಾಯವಿದ್ದರೆ, ಇನ್ನು ಕೆಲವರು ಅವನನ್ನು ಬಾದ್‌ಶಹಾ ಬಾಧಿಸದೆ, ಯಾವ ಉಪದ್ರ ನೀಡದೆ ಸುಮ್ಮನೆ ಇರಗೊಟ್ಟು ಎಂಬ ಅಭಿಪ್ರಾಯಪಟ್ಟಿರುತ್ತಾರೆ. ಅದು ಹೇಗಿದ್ದರೂ, ಹರಗೋವಿಂದ್ ಗುರುಪೀಠವೇರಿದ. ಸಿಖ್ ಇತಿಹಾಸಕಾರರ ಪ್ರಕಾರ, ತಂದೆಯ ಹತ್ಯೆಯಾದ ನಂತರ, ಮಗ ಹರಗೋವಿಂದ್‌ನಿಗೆ ಗುರುಪೀಠಾರೋಹಣ ಮಾಡಲಾಯಿತು. ಹರಗೋವಿಂದ್, ಸಂಪ್ರದಾಯವನ್ನು ಮುರಿದು, ತಲೆಗೆ ಉಣ್ಣೆಯ ಮುಂಡಾಸು ಅಥವಾ ಪೇಟ ಧರಿಸುವ ಬದಲು, ಸೊಂಟದ ಎರಡೂ ಬದಿಗಳಲ್ಲಿ ಎರಡು ಕತ್ತಿಗಳನ್ನು ಧರಿಸಿದನಂತೆ. ಒಂದು ಕತ್ತಿ 'ಮಿರಿ' ಅಂದರೆ ಲೌಕಿಕ ಅಧಿಕಾರ ಮತ್ತು 'ಪಿರಿ' ಅಂದರೆ ಆಧ್ಯಾತ್ಮಿಕ ಅಧಿಕಾರಗಳ ಪಟ್ಟ ಹೊಂದಿರುವಿಕೆಯ ಚಿಹ್ನೆಗಳನ್ನು ಬಿಂಬಿಸಿ ತನ್ನ ನೂತನ ಭಾವನೆಯನ್ನು ಪ್ರದರ್ಶನ ಮಾಡಿದ.

ಗುರು ಹರಗೋಬಿಂದ್ ಸಿಖ್‌ರ ಧರ್ಮಾಚರಣೆಗಳಲ್ಲಿ ಮಹತ್ತರ ಬದಲಾವಣೆ ತಂದ. ಆಧ್ಯಾತ್ಮದ ತತ್ವವಿಚಾರಗಳನ್ನು ಆಚರಣೆಗಳನ್ನು ಜಾರಿಗೆ ತಂದ. ಭಕ್ತರು ತನ್ನನ್ನು ಕಂಡು, ಧನ, ಕಾಣಿಕೆ ನೀಡುವ ಬದಲು ಕುದುರೆಗಳನ್ನು ಮತ್ತು ಆಯುಧಗಳನ್ನು ನೀಡಬೇಕೆಂಬ ಆದೇಶ ಹೊರಡಿಸಿದನು. ಕೇವಲ ಆಧ್ಯಾತ್ಮಿಕ ಬಲವೊಂದಿದ್ದರೆ ಸಾಲದು, ದೈಹಿಕ ಹಾಗೂ ಲೌಕಿಕ ಬಲವೂ ಅವಶ್ಯಕ ಎಂಬ ನಿಲುವನ್ನು ಹೊತ್ತ ಗುರು ಹರಗೋಬಿಂದ್ ಸಿಖ್ ಧರ್ಮದ ಆಚರಣೆಯಲ್ಲಿ ಮಹತ್ತರ ಬದಲಾವಣೆಯನ್ನು ತಂದ. ಅವನು ಗುರು ಕೀರ್ತನೆಗಳಿಗೆ ರಣಗೀತೆಯ ರಾಗಗಳ ಸಂಯೋಜನೆ ಮಾಡಿದನೆಂದು ಒಂದು ಅಭಿಪ್ರಾಯವಿದೆ. ಸಿಖ್‌ರು ಬಲಶಾಲಿಯಾಗಿ, ಧೈರ್ಯವಂತರಾಗಿ, ಶಕ್ತಿಯುತರಾಗಿ ತಮ್ಮನ್ನು ತಾವೇ ರಕ್ಷಿಸಿಕೊಳ್ಳುವಂತರಾಗಬೇಕೆಂಬ ಅಭಿಪ್ರಾಯ ಹೊತ್ತ ಹರಗೋಬಿಂದ್ ತನ್ನ ಶಿಷ್ಯಂದರಿಗೆ ಆಯುಧಪಾಣಿಗಳಾಗಿ ಶಸ್ತ್ರಶಿಕ್ಷಣ ದೊರಕಿಸಿಕೊಂಡು, ತಮ್ಮ ದೇಹಗಳಲ್ಲದೆ ದೇಶದ ರಕ್ಷಣೆಗೂ ಸಿದ್ಧರಾಗಬೇಕೆಂಬ ನಿಲುವನ್ನು ಹೊತ್ತ. ಅದರಂತೆ ಸಿಖ್‌ರಿಗೆ ಮಾರ್ಗಸೂಚನೆಗಳನ್ನು ನೀಡಿದ್ದಲ್ಲದೆ, ತಾನೇ ಸ್ವತಃ ಆಯುಧಪಾಣಿಯಾಗಿ, ೫೨ ಅಶ್ವಗಳ ಅಂಗರಕ್ಷಕರನ್ನು ಹೊಂದಿದ. ಕೆಲವೇ ದಿನಗಳಲ್ಲಿ ಅವನು ಒಂದು ಸಾವಿರ ಅಶ್ವಗಳ ಒಂದು ಅಶ್ವದಳ ರೂಪಿಸಿದ. ಅವರಲ್ಲಿ ಪ್ರಮುಖರಾಗಿ ಜಾಟ್ ಸಮುದಾಯಕ್ಕೆ ಸೇರಿದವರಾಗಿದ್ದರು.

ಗುರು ಹರಗೋಬಿಂದ್‌ನಲ್ಲಿ ಕಂಡುಬಂದ ವಿನೂತನ ಮನೋಭಾವನೆ ಪ್ರಾಯಶಃ ಮೊಘಲ್ ಬಾದ್‌ಶಹ ಜಹಂಗೀರ್‌ನಿಂದ ತನ್ನ ತಂದೆ ಗುರು ಅರ್ಜುನ್‌ದೇವ್‌ನ ಹತ್ಯೆಯಿಂದ ಜಾಗರೂಕನಾಗಿ ತಾನು ಮತ್ತು ತನ್ನ ಶಿಷ್ಯಂದಿರು ದೈಹಿಕವಾಗಿ ಬಲಶಾಲಿಗಳಾಗಿ, ಕೆಚ್ಚಿನ ಮನೋದಾರ್ಢ್ಯ ಉಳ್ಳವರಾಗಿ, ಎದುರಾಳಿಗಳನ್ನು ಅಥವಾ ತಮ್ಮ ಮೇಲೆ ವಿನಾ ಕಾರಣ ಹಿಂಸಿಸುವರ ವಿರುದ್ಧ ಸೆಟೆದು ನಿಲ್ಲುವಂತಾಗಬೇಕೆಂಬ ನಿಲುವನ್ನು ಹೊತ್ತು ತನ್ನ ನಡೆವಳಿಕೆ ಮತ್ತು ತತ್ವವಿಚಾರಗಳಲ್ಲಿ ಮಹತ್ತರ

ಬದಲಾವಣೆಯನ್ನು ತಂದನು.

ಗುರು ಹರಗೋಬಿಂದ್ ಶಸ್ತ್ರಸಜ್ಜಿತನಾಗಿ, ಯೋಧರ ತಂಡ ಕಟ್ಟಿರುವ ಸಂಗತಿ ದಿಲ್ಲಿ ಬಾದ್‌ಶಹನ ಕಿವಿ ಮುಟ್ಟಿತು. ಆತ ಗುರುವನ್ನು ದಿಲ್ಲಿಗೆ ಬರುವಂತೆ ಆಜ್ಞಾಪಿಸಿದ. ಗುರು ಆಜ್ಞೆಯನ್ನು ಪರಿಪಾಲಿಸಿದ. ಅವನ ಕರೆಯನ್ನು ಮನ್ನಿಸದಂತೆ ಶಿಷ್ಯಂದಿರು ಸಲಹೆ ನೀಡಿದರೂ ಗುರು ಅದನ್ನು ತಳ್ಳಿ ಹಾಕಿದ. ಅವನು ನೀಡಿದ ಕಾರಣ ಅಭೂತಪೂರ್ವವಾಗಿತ್ತು.'. . . ನಮ್ಮ ಗುರುಗಳು ನಮಗೆ ಕಲಿಸಿದ ಪಾಠವೆಂದರೆ ಭಯಪಡುವುದನ್ನು ವರ್ಜಿಸಬೇಕೆಂದು. ದೇವರ ಮೇಲೆ ಭರವಸೆ ಇಟ್ಟು ಕಾಯಾ ವಾಚಾ ಮನಸ್ಸಿನಿಂದ ಯಾರ ವಿರುದ್ಧವೂ ಆಕ್ರಮಣ ಎಸಗಬಾರದು. ನಮ್ಮ ಲೌಕಿಕ ವ್ಯವಹಾರಗಳೇನೇ ಇರಲಿ, ಅವನ್ನು ನ್ಯಾಯ ನಿಷ್ಠೆಗಳಿಂದ ಎಸಗಿ ಜನರೊಂದಿಗೆ ನಮ್ಮ ಸುಖ ದುಃಖ ಮತ್ತು ಆದಾಯಗಳನ್ನು ಹಂಚಿಕೊಂಡು, ಯಾರನ್ನೂ ದ್ವೇಷ ಮತ್ತು ಈರ್ಷೆಗಳಿಂದ ನೋಡದೆ ಜೀವನ ಸಾಗಿಸುವುದಾಗಿದೆ. ಆದರೆ ಧರ್ಮಪಾಲನೆ ಅಥವಾ ನೈತಿಕತೆಗಳ ಪರವಾಗಿ ಹೋರಾಡಬೇಕಾಗಿದ್ದು, ಅದಕ್ಕಾಗಿ ನಾವು ತ್ಯಾಗ ಬಲಿದಾನಕ್ಕೆ ಸಿದ್ಧರಾಗಿರಬೇಕು. ಯಾಕೆಂದರೆ ಅಂತಿಮವಾಗಿ ಸರ್ವವೂ ದೇವರಿಗೆ ಸೇರಲ್ಪಟ್ಟಿವೆ. ನಾವು ದೇವರ ಸಕಲ ಐಶ್ವರ್ಯವನ್ನೂ ಅನುಭವಿಸುತ್ತೇವೆ. ಆದರೆ ಯಾವಾಗ ಅವನು ಅವನ್ನು ತನಗೆ ಸಮರ್ಪಿಸುವಂತೆ ಕೇಳುತ್ತಾನೋ ಆಗ ನಾವು ಅವನ್ನು ಅವನ ಪಾದಗಳಿಗೆ ಸಮರ್ಪಿಸಬೇಕು. ನನ್ನ ತಂದೆ ಅದೇ ರೀತಿ ಮಾಡಿದರು. ನಾನೂ ಕೂಡ ಅದನ್ನೇ ಮಾಡುವೆನು. ನೀವು ಕೂಡ ಅದನ್ನೇ ಮಾಡಿರಿ' ೧

ಗುರು ಹರಗೋವಿಂದನನ್ನು ಸೆರೆಹಿಡಿದು ಗ್ವಾಲಿಯರ್ ಕೋಟೆಯಲ್ಲಿರಿಸಿದ್ದು, ಗುರು ಅರ್ಜುನ್‌ದೇವ್‌ನ ಹತ್ಯೆಯಾದ ಮೇಲೆ ಜರುಗಿದ್ದು ಎಂದು ಒಂದು ಅಭಿಪ್ರಾಯವಿದ್ದು, ಅವನ ಬಿಡುಗಡೆ ಸುಮಾರು ೧೬೧೧-೧೨ರಲ್ಲಿ ಆಗಿರಬೇಕು ಮತ್ತು ಬಿಡುಗಡೆಯಾದ ನಂತರ ಜಹಂಗೀರ್ ಅವನ ಸ್ನೇಹ ಸಂಪಾದಿಸಿ, ಲೌಕಿಕ ಹಾಗೂ ಆಧ್ಯಾತ್ಮಿಕ ಚರ್ಚೆ ನಡೆಸುವದರೊಂದಿಗೆ, ಗುರುವಿನೊಂದಿಗೆ ಬೇಟೆಯಾಡಲು ಕೂಡ ಬಾದ್‌ಶಹ ಹೋಗುತ್ತಿದ್ದನು ಎಂದು ಕೆಲವು ಚರಿತ್ರಕಾರರ ಅಭಿಪ್ರಾಯವಿದೆ.

ಹೆಸರಾಂತ ಇತಿಹಾಸಕಾರ ಮೆಕ್ಲಿಫ್‌ನ ಪ್ರಕಾರ ಜಹಂಗೀರನ ಹಿಂದೂ ದಿವಾನ ಚಂದೂ ಶಾ ಎಂಬಾತ ತನ್ನ ಪುತ್ರಿಯನ್ನು ಗುರು ಹರಗೋವಿಂದ್‌ನ ಮಗನಿಗೆ ಲಗ್ನ ಮಾಡಿಕೊಳ್ಳುವಂತೆ ಕೇಳಿದಾಗ, ಗುರು ನಿರಾಕರಿಸಿದ. ಆ ಲಗ್ನಕ್ಕೆ ಚಂದೂ ಶಾ ನಿಗೆ, ಒಬ್ಬ ಸಾಮಾನ್ಯ ಸಂತನ ಮಗನಿಗೆ ತನ್ನ ಪುತ್ರಿಯನ್ನು ಲಗ್ನ ಮಾಡಿಕೊಡಲು ಇಚ್ಛೆ ಇಲ್ಲದಿದ್ದರೂ, ಬೆಳೆದು ನಿಂತ ಮಗಳಿಗೆ ವರ ಸಿಗದ ಕಾರಣ, ಲಗ್ನಕ್ಕೆ ಒಪ್ಪಿದ್ದ.

---

೧. P 216-17 History of Sikh people by G.Singh

ಆದರೆ, ಯಾವಾಗ ಗುರು ಹರಗೋವಿಂದ್ ದಿವಾನನ ಮಗಳನ್ನು ತನ್ನ ಮಗನಿಗೆ ಲಗ್ನ ಮಾಡುವುದಕ್ಕೆ ಒಪ್ಪಲಿಲ್ಲವೋ, ದಿವಾನ ಗುರುವಿನ ಮೇಲೆ ಹಗೆತನ ತೋರಿಸಿದ. ಅವನ ಮೇಲೆ ಪ್ರತೀಕಾರ ತೀರಿಸಿಕೊಳ್ಳಲು ಅನೇಕ ಕುಟಿಲೋಪಾಯ ಮಾಡಿದ. ಅವನ ಕುಟಿಲ ಮಾತಿಗೆ ಮರುಳಾದ ಬಾದ್‌ಶಹಾ ಗುರುವನ್ನು ದೆಹಲಿಗೆ ಕರೆಸಿದ. ಅವನೊಂದಿಗೆ ಸಂಭಾಷಣೆ ನಡೆಸಿದ. ವಿಚಾರಣೆ ಜರುಗಿಸಿದ. ದಿವಾನ ಚಂದೂನ ಅಪವಾದಗಳಿಗೆ ಮನ್ನಣೆ ನೀಡಿ, ಗುರುವಿಗೆ ಗ್ವಾಲಿಯರ್ ಕೋಟೆಯಲ್ಲಿ ಬಂಧನದಲ್ಲಿರಿಸಿದ. ಆದರೆ ಇದರಿಂದ ವಿಚಲಿತಗೊಳ್ಳದ ಗುರು, ಕೋಟೆಯಲ್ಲಿಯೇ ಸೆರೆವಾಸ ಅನುಭವಿಸುತ್ತಿದ್ದ ಬಾದ್‌ಶಹಾನಿಂದ ಸೋತು ಶರಣಾದ ವಿವಿಧ ರಾಜಮಹಾರಾಜರಿಗೆ ಪಾಠ ಪ್ರವಚನ ಮಾಡಿ ಅವರ ಮನಸ್ಸು ಗೆದ್ದ. ಗುರುವಿನ ನಡತೆ, ನಡೆವಳಿಕೆ, ಸುಸಂಸ್ಕೃತಿ ಎಲ್ಲವೂ ಬಾದ್‌ಶಹಾನ ಕಿವಿಗೆ ಬಿದ್ದು ಅವನ ಮನಸ್ಸು ಕರಗಿ, ಗುರುವನ್ನು ಬಿಡುಗಡೆ ಮಾಡಿದ್ದಲ್ಲದೆ, ದಿವಾನ್ ಚಂದೂವಿಗೆ ಶಿಕ್ಷೆ ವಿಧಿಸಿದ. ಗುರುವಿಗೆ ಅಪರಾಧಿ ಚಂದೂಗೆ ಶಿಕ್ಷೆ ನೀಡಲು ಆತನನ್ನು ಅವನ ಸುಪರ್ದಿಗೆ ಒಪ್ಪಿಸಿದ. ಗುರುವಿನ ಶಿಷ್ಯಂದಿರು ತಮ್ಮ ಗುರುವಿಗೆ ಆದ ಅಪಮಾನ, ಸೆರೆವಾಸಗಳಿಂದ ನೊಂದು ಬೆಂದಿದ್ದರು. ಅವರು ಚಂದೂವಿಗೆ ತೀವ್ರವಾದ ಶಿಕ್ಷೆ ನೀಡಲು ಆಶಿಸಿದ್ದರು. ಆದರೆ, ಗುರು ಮಾತ್ರ ಆತನನ್ನು ಶಿಕ್ಷೆಗೆ ಗುರಿಮಾಡದೆ ಕ್ಷೇಮವಾಗಿರಿಸಲು ಇಚ್ಛಿಸಿದರು. ಅವರ ಶಿಷ್ಯರು ಗುರುಗಳ ಮಾತಿಗೆ ಬೆಲೆ ನೀಡಿದರೂ, ಚಂದೂನನ್ನು ರಾಜಬೀದಿಯಲ್ಲಿ ಮೆರವಣಿಗೆ ಮಾಡಿಸಿ, ಅವನಿಗೆ ಹಿಗ್ಗಾ ಮುಗ್ಗಾ ಥಳಿಸಿ ತಮ್ಮ ಕ್ರೋಧವನ್ನು ಹೊರಹಾಕಿದರು. ಕ್ರಮೇಣ ಅವನನ್ನು ಲಾಹೋರಿಗೆ ಕರೆದೊಯ್ದು ಅದೇ ರೀತಿಯ ಶಿಕ್ಷೆ ನೀಡಿದರು. ಅವನ ಮೇಲಿನ ಕೋಪವನ್ನು ತೀರಿಸಿಕೊಳ್ಳಲು ಒಬ್ಬ ಆಗುಂತಕ ವ್ಯಕ್ತಿ ಅವನಿಗೆ ಕಬ್ಬಿಣದ ಸಲಾಕೆಯಿಂದ ಹೊಡೆದು ಸಾಯಿಸಿದ. ಹೀಗೆ ಕೊನೆಗೊಂಡಿತು ಒಬ್ಬ ಪ್ರಭಾವಿ ಹಿಂದೂ ದಿವಾನನ ಜೀವನ. ಬಾದ್‌ಶಹಾನ ಗುಲಾಮ ನಿರುಪದ್ರ ಗುರುವಿನ ಕೇಡು ಬಯಸಿ ತನ್ನ ಪ್ರಾಣವನ್ನು ಕಳೆದುಕೊಂಡ. ೨ ೩

ಆದರೆ, ಬಾದ್‌ಶಹ ಜಹಂಗೀರ್ ತನ್ನ ಆತ್ಮಚರಿತ್ರೆ 'ತುಜುಕ್-ಇ-ಜಹಂಗಿರಿ'ನಲ್ಲಿ ಗುರು ಹರಗೋಬಿಂದ್‌ನ ವಿಷಯ ಪ್ರಸ್ತಾವನೆ ಮಾಡಿದಿರುವುದು ಅನೇಕ ಊಹೆಗಳಿಗೆ ಎಡೆ ಮಾಡಿಕೊಡುತ್ತದೆ ಎಂದಿದ್ದಾರೆ ಇತಿಹಾಸಕಾರರು. ಅವನು ತನ್ನ ಆತ್ಮಚರಿತ್ರೆಯಲ್ಲಿ ಅನೇಕ ಪ್ರಸಿದ್ಧ ಸೂಫಿ ಸಂತರು, ಜೈನರು, ಯೋಗಿಗಳು, ವೈಷ್ಣವ ಸಂತರು, ಕ್ರಿಶ್ಚಿಯನ್ನರು ಮುಂತಾದವರೊಂದಿಗೆ ಧಾರ್ಮಿಕ ಚರ್ಚೆ ಜರುಗಿಸಿದರ ಬಗ್ಗೆ ಉಲ್ಲೇಖವಿರುವಾಗ, ಗುರು ಹರಗೋಬಿಂದರ ಬಗ್ಗೆ ಚಕಾರವೆತ್ತದೆ ಇರುವುದು ಅನುಮಾನಕ್ಕೆ ಈಡುಮಾಡಿಕೊಡುತ್ತಿದೆ ಎಂದಿದ್ದಾರೆ. ೪

---

೨. P 22-30 Sikh Religion by Macauliffe

೩. P-25 History of Sikhs by Court

೪. P 220 History of Sikh people by G. Singh

ಆದರೆ ಸಿಖ್ ಇತಿಹಾಸಕಾರರ ಪ್ರಕಾರ, ಗುರು ಹರಗೋವಿಂದ್ ಬಾದ್‌ಶಹಾನನ್ನು ಭೇಟಿ ಮಾಡಿದ್ದು ದಿಟವೆಂದು, ಅವನು ಗುರುವಿನೊಂದಿಗೆ ಚರ್ಚೆ ನಡೆಸಿ, ಅವನ ತತ್ವವಿಚಾರಗಳಿಗೆ ಸೂಕ್ತವಾಗಿ ಸ್ಪಂದಿಸಿದನೆಂದು, ಗುರುವನ್ನು ಆದರಿಸಿ, ಸತ್ಕರಿಸಿ ಅವನನ್ನು ಪಂಜಾಬ್‌ಗೆ ಹಿಂದಿರುಗಲು ಅಪ್ಪಣೆ ನೀಡಿದ. ೫

ಗುರು ಹರಗೋಬಿಂದ್‌ನ ಬಗ್ಗೆ ಇತಿಹಾಸಕಾರರು ಕೆಲವು ಕುತೂಹಲಕರವಾದ ಸಂಗತಿಯನ್ನು ಸಾದರಪಡಿಸಿರುತ್ತಾರೆ. ಕಾಬೂಲ್‌ನಲ್ಲಿದ್ದ ಒಬ್ಬ ಸಿಖ್ ಮಸಂದ್, ಸೂಜಾನ್ ಎಂಬಾತ ಒಂದು ಒಳ್ಳೆಯ ತಳಿಯ ಅರಬ್ಬಿ ಕುದುರೆಯನ್ನು ಗುರುವಿಗೆ ಕೊಡುಗೆಯಾಗಿ ನೀಡಲು ಅಲ್ಲಿಂದ ಹೊರಟು ಬಂದ. ಲಾಹೋರ್‌ನಗರವನ್ನು ದಾಟಿ ಬರುವಾಗ, ಅಲ್ಲಿನ ಖಾಜಿಯೊಬ್ಬನಿಗೆ, ಸುದ್ದಿ ತಿಳಿದು, ಅದನ್ನು ಜಪ್ತಿ ಮಾಡಿ ತನ್ನ ಬಳಿ ಇರಿಸಿಕೊಂಡ. ಸೂಜಾನ್ ಕುದುರೆಯನ್ನು ಅವನಿಂದ ಪಡೆಯಲು, ಒತ್ತೆ ಹಣದ ಆಮಿಷ ತೋರಿಸಿದ. ಖಾಜಿ ಅದಕ್ಕೆ ಒಪ್ಪಿ ಕುದುರೆಯನ್ನು ಸೂಜಾನ್‌ಗೆ ಒಪ್ಪಿಸಿದ. ಕುದುರೆಯನ್ನು ಓಡಿಸಿಕೊಂಡು ಹೋದ ಸೂಜಾನ್ ಗುರು ಹರಗೋಬಿಂದ್‌ಗೆ ಅದನ್ನು ನೀಡಿ ಕೈ ತೊಳೆದುಕೊಂಡ. ಕುದುರೆಯನ್ನು ಬಿಡಿಸಿಕೊಂಡು ಹೋಗಲಿಕ್ಕೆ ಒತ್ತೆ ಹಣ ನೀಡದೇ ಸೂಜಾನ್ ತಪ್ಪಿಸಿಕೊಂಡ ಸಂಗತಿ ಖಾಜಿಯನ್ನು ಕೆರಳಿಸಿತು. ಆತ ಲಾಹೋರ್‌ನ ರಾಜ್ಯಪಾಲನಿಗೆ ದೂರು ನೀಡಿದ. ಇದರ ಮಧ್ಯೆ ಖಾಜಿಯ 'ಕೌಲನ್' (ಕಮಲ) ಎಂಬ ಹೆಸರಿನ ಮಗಳು, ತಂದೆಯ ಕ್ರೂರ ನಡೆವಳಿಕೆಯ ಬಗ್ಗೆ ರೋಸಿ, ಮನೆಯಿಂದ ಓಡಿ ಹೋಗಿ ಗುರು ಹರಗೋವಿಂದ್‌ನ ಆಶ್ರಯ ಪಡೆದಳು. ಆಶ್ರಯ ಪಡೆಯುವ ಮುನ್ನ ತನ್ನೊಂದಿಗೆ ತಂದಿದ್ದ ಹಣ ದ್ರವ್ಯ ಇತ್ಯಾದಿಗಳನ್ನೂ ಗುರುವಿಗೆ ದಾನ ಮಾಡಿದಳು. ಗುರು ಅದನ್ನು ತನ್ನ ಆಶ್ರಮದ ಲೆಕ್ಕಕ್ಕೆ ತೆಗೆದುಕೊಳ್ಳದೆ, ಅವಳ ಹೆಸರಿನಲ್ಲಿ ಅಮೃತಸರ ನಗರದಲ್ಲಿ ಒಂದು ಕೆರೆ ಕಟ್ಟಿಸಿದನು. ಅದನ್ನು 'ಕೌಲ್‌ಸರ' ಎಂದು ಕರೆಯಲಾಗಿದೆ. ೬ ೭

ಖಾಜಿಯ ದೂರನ್ನು ಮೊಘಲ್ ಅಧಿಕಾರಿಗಳು ತಿರಸ್ಕರಿಸಿ, ಅವನ ಮುಖಭಂಗ ಮಾಡಿದರು.

---

೫. P 28 (vol 3) The Sikh Religion by Macauliffe

೬. P 221 History of Sikh people by G.Singh

೭. P 43 The Sikh Religion by Macauliffe

Kazi's daughter Kaulan, a desciple of Mian Mir and Guru Har Gobind said- '. . .Saints are God's servants. At the same time He obeyeth them, all they may do what they please. They have no concern with the Law of Mohammed.' On the threat of death, she escaped to Amritsar.

Kaulan gave her jewels to the Guru. He built a tank in her name and called it 'Kaulsar.'

ಹಿಂದಿನ ಗುರುಪರಂಪರೆಯಾದ ಪ್ರವಾಸ ಕೈಗೊಳ್ಳುವ ವಿಧಾನವನ್ನು ಗುರು ಹರಗೋಬಿಂದ್ ಅನುಸರಿಸಿದ. ಪಿಲಿಬಿಟ್ ಪ್ರದೇಶದಲ್ಲಿ ಪ್ರವಾಸ ಎಸಗಿದ. ಗುರು ನಾನಕ್‌ನ ಜನ್ಮಸ್ಥಳ ಮತ್ತು ಅವನ ಹೆಸರಿನಲ್ಲಿರುವ ಅನೇಕ ತೀರ್ಥಸ್ಥಳಗಳ ಪ್ರವಾಸ ಮಾಡಿ, ಅಲ್ಲಿಂದ ಕಾಶ್ಮೀರ ಪ್ರಾಂತ್ಯದಲ್ಲಿ ಪ್ರವಾಸ ಮಾಡಿ, ಶ್ರೀನಗರಕ್ಕೆ ಭೇಟಿ ನೀಡಿ, ಅಲ್ಲಿನ ಬ್ರಾಹ್ಮಣ ಸೇವಾದಾಸ್ ಎಂಬುವನನ್ನು ಭೇಟಿ ಮಾಡಿದ. ಆ ಬ್ರಾಹ್ಮಣ ಸಿಖ್ ಮತವನ್ನು ಸ್ವೀಕರಿಸಿ, ಅವನ ಪತ್ನಿ ಹೆಣೆದ ಒಂದು ಹೊದಿಕೆಯನ್ನು ಸ್ವೀಕರಿಸಿದ. ಗುರುವಿನ ಶ್ರೀನಗರದ ಭೇಟಿ ಗುರುತಾಗಿ ಇಂದಿಗೂ ಒಂದು ಗುರುದ್ವಾರ ಅಲ್ಲಿ ಸ್ಮಾರಕವಾಗಿ ಕಟ್ಟಲ್ಪಟ್ಟಿದೆ ಎಂದಿದ್ದಾರೆ ಇತಿಹಾಸಕಾರರು. ೮

ಇದೇ ಸಮಯದಲ್ಲಿ ಗುರು, ಮಹಾರಾಷ್ಟ್ರದ ಪ್ರಸಿದ್ಧ ಸಂತ ಸ್ವಾಮಿ ಸಮರ್ಥ ರಾಮದಾಸ್‌ರನ್ನು ಭೇಟಿ ಮಾಡಿದ. ಗುರು, ಕುದುರೆ ಏರಿ ರಾಜಠೀವಿಯಲ್ಲಿ, ರಾಜರು ಧರಿಸುವ ಉಡುಪು ಧರಿಸಿದ್ದನ್ನು ನೋಡಿದ ರಾಮದಾಸರು ಅವಾಕ್ಕಾಗಿ ಕೇಳಿದರು : 'ಮಹಾನ್ ಸಂತ ಗುರು ನಾನಕ್‌ರ ಆಧ್ಯಾತ್ಮಿಕ ಸಿಂಹಾಸನದಲ್ಲಿ ಕುಳಿತಿರುವ ನೀವು ರಾಜ ಮಹಾರಾಜರು ಬಿಂಬಿಸುವಂತಹ ಪೋಶಾಕುಗಳನ್ನು ಪ್ರದರ್ಶಿಸುವುದೇ?' ಗುರು ಉತ್ತರಿಸಿದ: 'ಜ಼ಾಹಿರ್ ಅಮೀರಿ, ಬಾತನ್ ಫಕೀರಿ: ಗುರು ನಾನಕ್‌ನೆ ಮಾಯಾ ತ್ಯಾಗೀ ಥೀ : ಸಂಸಾರ್ ನಹೀ ತ್ಯಾಗ್ಯಾ ಥಾ' (ಬಹಿರಂಗದಲ್ಲಿ ನಾನು ರಾಜನಂತೆ, ಅಂತರಂಗದಲ್ಲಿ ನಾನು ಫಕೀರನಂತೆ, ಗುರು ನಾನಕ್ ಮಾಯೆಯನ್ನು ತ್ಯಜಿಸಿದ್ದರು, ಪ್ರಪಂಚವನ್ನಲ್ಲ.)

ಸ್ವಾಮಿ ರಾಮದಾಸರು, ಗುರುವಿನ ಉತ್ತರ ಕೇಳಿ ಸಂತೋಷಗೊಂಡರು. ಅವರು ಮಹಾರಾಷ್ಟ್ರಕ್ಕೆ ಹಿಂದಿರುಗಿದಾಗ ತಮ್ಮ ಶಿಷ್ಯ ಶಿವಾಜಿ ಮಹಾರಾಜನಿಗೆ ಸೂಕ್ತ ಉಪದೇಶ ನೀಡಿ, ದೇಶದ ಜನರು ಕೇವಲ ಅಂತರಂಗ ಶುದ್ಧಿ ಗಳಿಸಲು ಕೆಚ್ಚು, ಬಲ, ಸ್ಥೈರ್ಯ ತ್ಯಜಿಸಿ ಪುಕ್ಕಲರಾಗಿ, ಆಕ್ರಮಣಕಾರರ ಬಲಕ್ಕೆ ತುತ್ತಾಗಿ ಅವರ ದಾಸ್ಯಕ್ಕೆ ಗುರಿಯಾಗಿರುವದನ್ನು ನೆನಪಿಸಿ, ಜನರು ಶೌರ್ಯವಂತರಾಗಿ, ಹೋರಾಟದ ಮನೋಭಾವ ಬೆಳೆಸಿಕೊಳ್ಳಬೇಕೆಂದು ಉಪದೇಶ ನೀಡಿದರೆಂದು ಇತಿಹಾಸಕಾರರ ಹೇಳಿಕೆಯಾಗಿದೆ. ೯

ನಾನಕ್ ಸಾರಿದ ಹಾಗೆ ದೇವರೊಬ್ಬ, ನಿರಾಕಾರ, ನಾಮ ಜಪಿಸಿ, ಅಂತರಂಗದಲ್ಲಿ ಫಕೀರನಂತೆ, ಬಹಿರಂಗದಲ್ಲಿ ಲೌಕಿಕ ಜೀವನ ಜರುಗಿಸುವುದನ್ನು ಗುರು ಹರ ಗೋಬಿಂದ ಪಾಲಿಸಿದರು. ಹಿಂದೂಗಳು ತಮ್ಮ ದೇವರುಗಳಿಗೆ ಶಸ್ತ್ರಾಸ್ತ್ರಗಳನ್ನು ನೀಡಿ, ತಮ್ಮನ್ನು ರಕ್ಷಿಸಲು ಅವರನ್ನು ಪ್ರಾರ್ಥಿಸಿ, ಸ್ತುತಿಸಿ, ಜಪಿಸಿ, ತಾವು ಮಾತ್ರ ನಿಶ್ಶಸ್ತ್ರೀಕರಣದ ಅಭ್ಯಾಸ ಮಾಡಿ, ಯಾವ ಶಸ್ತ್ರಾಸ್ತ್ರವನ್ನು ಹಿಡಿಯದೆ, ಪುಕ್ಕಲರಾಗಿ, ಇನ್ನೊಬ್ಬರ

---

೮. P 227 History of Sikh people by G.Singh

೯. P 223 History of Sikh people by G.Singh

ಅಡಿಯಾಳಾಗಿ, ಆಳುವವರ ಗುಲಾಮರಾಗಿ ಜೀವಿಸುವುದನ್ನು ಖಂಡಿಸಿದರು. ಹಿಂದೂಗಳ ಪ್ರತಿಯೊಂದು ದೇವ ದೇವತೆಗಳು ಆಯುಧಪಾಣಿಯಾಗಿದ್ದು, ತಾವು ನಿಸ್ಸಹಾಯಕರಾಗಿ, ನಿಷ್ಕ್ರಿಯರಾಗಿ, ಉದಾಸತೆ ಹೊಂದಿದವರಾಗಿ, ಬಾಳ್ವೆ ನಡೆಸುವುದು ಅವರಿಗೆ ಬೇಡವಾಗಿತ್ತು. ಹಿಂದೂ ದೇವರಿಗೆ ಮಾತ್ರ ಆಯುಧಗಳನ್ನು ನೀಡಿ, ತಮ್ಮ ರಕ್ಷಣೆಗೆ ದೇವರನ್ನು ಅವಲಂಬಿಸುವುದು ಅತ್ಯಂತ ಅಸಹನೀಯ ಹಾಗೂ ಪರಾವಲಂಬಿತದ ಸೂಚಕವಾಗಿತ್ತು. ಅದು ಇಂದಿಗೂ ಅವರ ನಡೆವಳಿಕೆ, ನಂಬಿಕೆ, ಆಚರಣೆಗಳಾಗಿವೆಯಲ್ಲವೆ?

ಈ 'ಪರಾವಲಂಬಿತನ' ಹಿಂದೂಗಳ ಜಾತಿ ಪದ್ಧತಿಯಲ್ಲಿ ದೃಢವಾಗಿ ಶತಮಾನಗಳ ಕಾಲದಿಂದ ಬೆಳೆದು ಬಂದು ಅವರನ್ನು ಅತ್ಯಂತ ಬಲಹೀನರನ್ನಾಗಿ ಮಾಡಿದೆ. ನಾಲ್ಕು ವರ್ಣಗಳಲ್ಲಿ ಕೇವಲ ಕ್ಷತ್ರಿಯ ಕುಲದವರು ಸೈನ್ಯಕ್ಕೆ ಸೇರಿ ಯೋಧರಾಗಿ ಹೋರಾಟ ಜರುಗಿಸುವ ಕಸುಬು, ಇತರ ಕುಲದವರನ್ನು ಕ್ಷಾತ್ರಹೀನ, ಧೈರ್ಯಹೀನ, ಪುಕ್ಕಲರನ್ನಾಗಿ ಮಾಡಿತು. ಅಪರೂಪಕ್ಕೆ, ಹೊಟ್ಟೆಪಾಡಿಗೆ ಅಥವಾ ಕ್ಷಾತ್ರ ಮನಸ್ಸುಳ್ಳ ಬ್ರಾಹ್ಮಣ, ವೈಶ್ಯ ಮತ್ತು ದಲಿತ ಪಂಗಡದವರು ಹೋರಾಟ ಜರುಗಿಸಿ ರಾಜ್ಯಭಾರ ಮಾಡಿದ್ದೂ ಉಂಟಾದರೂ, ಜನಸಾಮಾನ್ಯರು ದೇಶಕ್ಕಾಗಿ, ದೇಶಾಭಿಮಾನ ಇರಿಸಿಕೊಂಡು, ಸೈನ್ಯಕ್ಕೆ ಶಾಮೀಲಾಗಿ ಹೋರಾಟ ಜರುಗಿಸಿದ್ದು ಬಲು ಅಪರೂಪವೆಂದೇ ಹೇಳಬೇಕು. ಅಪರೂಪರಲ್ಲಿ ಅಪರೂಪವಾದ ಶಿವಾಜಿ, ಪೇಶ್ವೆ ಮುಂತಾದ ವೀರರು ಕ್ಷಾತ್ರ ಮನಸ್ಸು ಹೊಂದಿದ್ದು, ಹೋರಾಟದಲ್ಲಿ ಭಾಗಿಯಾದರು.

ಪಂಜಾಬ್‌ನ ಸಿಖ್‌ರು, ತಮ್ಮ 'ಖಾಲ್ಸಾ' ಸೈನ್ಯದಲ್ಲಿ ಪ್ರತಿಯೊಂದು ಸಂಗಡದವರಿಗೆ ಸ್ಥಾನ ನೀಡಿ, ಅವರನ್ನು ಉನ್ನತ ಮಟ್ಟಕ್ಕೆ ಏರಿಸಿ, ಪ್ರಾಯಶಃ ಭಾರತದ ಇತಿಹಾಸದಲ್ಲಿ ಜಾತಿಯ ಹಂಗು ತೊರೆದು, ಪ್ರತಿಯೊಬ್ಬನೂ ಹೋರಾಟ ಜರಗುಗಿಸಬಲ್ಲ, ಅವನಿಗೆ ಜನ್ಮಕ್ಕೆ ಅಂಟಿಕೊಂಡ ಕ್ಷಾತ್ರ ಸ್ವಭಾವ ಅಥವಾ ಕ್ಷತ್ರಿಯ ಪಂಗಡದಲ್ಲಿ ಜನ್ಮ ತಾಳಬೇಕಾಗಿಲ್ಲವೆಂಬ ಅರಿವು ಮೂಡಿ, ಅವನ್ನು ಪರಿಪಾಲಿಸಿದ್ದು ಒಂದು ಅಪೂರ್ವ ಸಂಗತಿಯಾಗಿದೆ.

ಪುಕ್ಕಲರಾಗಿ, ಬಲಹೀನರಾಗಿ, ಇನ್ನೊಬ್ಬರ ಅಡಿಯಾಳಾಗಿ ಜೀವಿಸುವುದಕ್ಕಿಂತ, ಹೋರಾಟದ ಮನೋಭಾವ ಬೆಳೆಸಿ, ಆಕ್ರಮಣಕಾರರ ವಿರುದ್ಧ ಹೋರಾಟ ಜರುಗಿಸಿ ತಮ್ಮ ನೆಲ, ಜಲ, ಸಂಪತ್ತನ್ನು ರಕ್ಷಿಸಿಕೊಳ್ಳುವುದೇ ನಿಜವಾದ ಧರ್ಮ ಎಂಬ ನಿಲುವನ್ನು ಹೊತ್ತು ಗುರು ಹರ ಗೋಬಿಂದ್ ಸೈನ್ಯ ಕಟ್ಟಿದರು, ಕೋಟೆ ಕೊತ್ತಲ ಕಟ್ಟಿದರು. ಆದರೆ ಅವೆಲ್ಲವೂ ರಕ್ಷಣಾ ವಿಧಾನಗಳಾಗಿದ್ದವು. ಅವರು ಯಾರ ಮೇಲೂ ಆಕ್ರಮಣ ಮಾಡದೆ, ಕೇವಲ ತಮ್ಮ ಆತ್ಮರಕ್ಷಣೆಗೆ ಶಸ್ತ್ರಾಸ್ತ್ರ ಧರಿಸಿ, ಆಕ್ರಮಣಕಾರರ ವಿರುದ್ಧ ಹೋರಾಡಲು ಉಪದೇಶವಿತ್ತರು. ಈ ಮಧ್ಯೆ ಗುರು ಹರಗೋಬಿಂದ್‌ರ ವೈವಾಹಿಕ ಜೀವನದಲ್ಲಿ ಅನೇಕ ಬೆಳವಣಿಗೆಗಳು ಏರ್ಪಟ್ಟಿದ್ದವು. ೧೬೧೩ರಲ್ಲಿ ಅವನ

ಮೊದಲನೆ ಪತ್ನಿ ದಾಮೋದರಿ ಗಂಡು ಮಗುವಿಗೆ ಜನ್ಮವಿತ್ತಳು. ಮಗುವಿಗೆ ಗುರುದತ್ತನೆಂದು ಹೆಸರಿಸಲಾಯಿತು. ೧೯೧೬ರಲ್ಲಿ ಅವನ ಎರಡನೇ ಪತ್ನಿ ಮಹಾದೇವಿ ಸೂರಜ್‌ಮಲ್ ಎಂದು ಹೆಸರಿಡಲಾದ ಒಂದು ಮಗುವಿಗೆ ಜನ್ಮವಿತ್ತಳು. ಮೂರನೆಯ ಪತ್ನಿ ನಾನಕೀ ಎಂಬಾಕೆಗೆ ಎರಡು ಗಂಡುಮಕ್ಕಳು ಜನಿಸಿದವು. ಇದೇ ನಾನಕೀ ೧೬೨೧ರಲ್ಲಿ ಇತಿಹಾಸ ಪ್ರಸಿದ್ಧ ತೇಗ್ ಬಹದೂರ್‌ನಿಗೆ ಜನ್ಮವಿತ್ತಳು.

ದಿಲ್ಲಿ ಬಾದ್‌ಶಹ ಜಹಂಗೀರ್ ೧೬೨೭ರಲ್ಲಿ ಮರಣಿಸಿದ. ಅವನ ಮಗ ಶಹಜಹಾನ್ ಸಿಂಹಾಸನವೇರಿದ.

೧೬೨೮ರಲ್ಲಿ ಶಹಜಹಾನ್ ಅಮೃತಸರದ ಆಸುಪಾಸಿನಲ್ಲಿ ಬೇಟೆಯಾಡಲು ಬಂದಾಗ ಅವನು ಸಾಕಿ ಬೆಳೆಸಿದ್ದ ಬೇಟೆಯಾಡುವ ಹದ್ದು ಬಾತುಕೋಳಿಯನ್ನು ಹಿಡಿಯಲು ಹೋದಾಗ ಗುರು ಹರಗೋಬಿಂದ್‌ನ ಸಿಖ್ ಸೈನಿಕರು ಅದನ್ನು ಹಿಡಿದರು. ಅದನ್ನು ತಮ್ಮ ವಶಕ್ಕೆ ಬಿಡಿಸಿಕೊಳ್ಳಲು ಬಂದ ಬಾದ್‌ಶಹಾನ ಸೈನಿಕರೊಂದಿಗೆ, ಸಿಖ್ಖರ ಸಂಘರ್ಷ ಜರುಗಿ ಪ್ರಾಣಹಾನಿ ಉಂಟಾಯಿತು. ಸುದ್ದಿ ಅರಿತ ಬಾದ್‌ಶಹಾ ಸಿಟ್ಟಿಗೆದ್ದ. ಗುರುವಿನ ಸೈನಿಕರಿಗೆ ಶಿಕ್ಷಿಸಲು ಒಂದು ದಂಡನ್ನೇ ಕಳುಹಿಸಿದ. ಯುದ್ಧವೇ ಜರುಗಿತು. ಗುರು ಹರಗೋಬಿಂದ್ ಸ್ವಯಂ ಕಾಳಗದಲ್ಲಿ ಭಾಗವಹಿಸಿದ. ಎರಡೂ ಕಡೆ, ಅಪಾರ ಸಾವು ನೋವು ಉಂಟಾದವು. ಕೆಚ್ಚೆದೆಯಿಂದ ಹೋರಾಡಿದ ಸಿಖ್ ಸೈನಿಕರ ಹೊಡೆತ ತಾಳಲಾರದೆ ಮೊಘಲ್ ಸೈನ್ಯ ಹಿಮ್ಮೆಟ್ಟಿತು. ಸ್ವಯಂ ಗುರು ಹರಗೋಬಿಂದ್, ಮೊಘಲ್ ಸೈನ್ಯಾಧಿಕಾರಿ ಮುಖ್ಲಿಸ್ ಖಾನ್‌ನನ್ನು ವಧಿಸಿ ತನ್ನ ಶೌರ್ಯವನ್ನು ಪ್ರದರ್ಶಿಸಿದ. ಗುರು ಹರಗೋಬಿಂದ್ ಮೊಘಲ್‌ರ ವಿರುದ್ಧ ಜರುಗಿಸಿದ ಹೋರಾಟದಲ್ಲಿ ಸಾಧಿಸಿದ ಪ್ರಪ್ರಥಮ ಜಯವಾಗಿತ್ತು. ಅದರ ಗುರುತಾಗಿ ಸಿಖ್ಖರು ಆ ಸ್ಥಳದಲ್ಲಿ ಗುರುದ್ವಾರವೊಂದು ನಿರ್ಮಿಸಿ ಅದನ್ನು 'ಸಂಗ್ರಾನಾ ಸಾಹಿಬ್' ಎಂದು ಕರೆದರು. ೧೦

ಗುರು ಹರ ಗೋಬಿಂದ್ ಬಿಯಾಸ್ ನದಿಯ ದಡದಲ್ಲಿ ಒಂದು ನೂತನ ನಗರ ನಿರ್ಮಿಸಲು ನಿರ್ಧರಿಸಿದ. ಅದನ್ನು ಹರ ಗೋಬಿಂದ್‌ಪುರವೆಂದು ಕರೆಯಲಾಯಿತು. ಆ ಪ್ರದೇಶದಲ್ಲಿದ್ದ ಒಬ್ಬ ಖಾತ್ರೀ ಪಂಗಡದ ಪಟೇಲ್‌ನ ವಿರೋಧ ಗುರು ಎದುರಿಸಬೇಕಾಯಿತು. ಸಿಖ್ಖರು ಅವನನ್ನು ಹತ್ಯೆಮಾಡಿದರೂ ಅವನ ಮಗ ರತನ್‌ಚಂದ್ ಸಿಖ್ಖರ ವಿರುದ್ಧ ಪ್ರತೀಕಾರ ಕೈಗೊಂಡ. ಅವನು ಮೊಘಲ್‌ರಿಗೆ ದೂರಿತ್ತ. ಜಲಂದರ್‌ನ ಸುಬೇದಾರ್‌ನ ಸಹಾಯ ಪಡೆದು, ಗುರುವಿನ ವಿರುದ್ಧ ಯುದ್ಧ ಜರುಗಿಸಿದ. ಆ ಯುದ್ಧದಲ್ಲಿ ರತನ್‌ಚಂದ್ ಮತ್ತು ಮೊಘಲ್‌ರ ಸೈನ್ಯದ ಸೋಲುಂಟಾಯಿತು. ಅದರಿಂದ ಗುರು ನಗರದ ನಿರ್ಮಾಣ ಕಾರ್ಯಕ್ಕೆ ಅಡ್ಡಿ

---

೧೦. P 223 History of Sikh people by G.Singh

ನಿವಾರಣೆಯಾಯಿತು.

ಇದೇ ಸಮಯದಲ್ಲಿ ಭಾಯಿ ಬುಡ್ಡಾನ ಮರಣ ಉಂಟಾಯಿತು. ಆರು ಮಂದಿ ಗುರುಗಳ ಕಿರೀಟಧಾರಣೆಯ ಸಂಪ್ರದಾಯವನ್ನು ನೆರವೇರಿಸಿದ ಹಿರಿಯ ಸಿಖ್ ಭಾಯಿ ಬುಡ್ಡಾನನ್ನು ಸಿಖ್ಖರು ಇಂದಿಗೂ ಪೂಜನೀಯ ವ್ಯಕ್ತಿ ಎಂದು ಆರಾಧಿಸುತ್ತಾರೆ.

ಗುರು ಹರ ಗೋಬಿಂದ್‌ನ ಮಗ ಅತಲ್ ರಾಯ್, ಎಳೆ ವಯಸ್ಸಿನಲ್ಲೇ ಪವಾಡ ಎಸಗುವುದನ್ನು ಪ್ರಾರಂಭಿಸಿದ. ಅದನ್ನು ನಂಬದ ತಂದೆ, ಮಗನ ಕಾರ್ಯವನ್ನು ಖಂಡಿಸಿದ. 'ಯಾರೇ ಮೃತ ವ್ಯಕ್ತಿಯನ್ನು ಬದುಕಿಸುವ ಕ್ರಮ ದೇವರ ಶಕ್ತಿಯನ್ನು ಅಲ್ಲಗಳೆಯುವ ಕಾರ್ಯ'ಎಂದು ಮಗ ತನ್ನ ಮೃತ ಸ್ನೇಹಿತನನ್ನು ಬದುಕಿಸುವ ಕತೆ ಕೇಳಿ ಮಗನಿಗೆ ಛೀಮಾರಿ ಹಾಕಿದ. ಬಾಲಕ ಅತಲ್ ರಾಯ್, ತಂದೆಯ ಮಾತುಗಳಿಂದ ಅತೀವವಾಗಿ ನೊಂದು ದುಃಖಿಸಿ, ಮನಃಕ್ಲೇಷಗೊಂಡು ಅಸು ನೀಗಿದ. ಗುರುವಿನ ಸಂಸಾರದಲ್ಲಿ ಶೋಖದ ಮಡುವಿನಲ್ಲಿ ಎಲ್ಲರೂ ಮುಳುಗಿದರು. ಮಗನ ನೆನಪಿನಲ್ಲಿ, ಗುರು ಅಮೃತಸರದ ಹರಿಮಂದಿರದ ಆವರಣದಲ್ಲಿ 'ಬಂಗಾ' ಎಂಬ ಬೃಹತ್ ಭೋಜನಾಲಯವನ್ನು ನಿರ್ಮಿಸಿ ಹಸಿದು ಬಂದ ಯಾರೇ ಯಾತ್ರಿಕರು ಅಲ್ಲಿ ಆಹಾರ ಸ್ವೀಕರಿಸುವ ಏರ್ಪಾಡು ಮಾಡಿದ. ಅದು ಇಂದಿಗೂ ನಿಂತು ಬಾಲಕ ಅತಲ್ ರಾಯ್‌ನ ಸ್ಮೃತಿಯನ್ನು ಬಿಂಬಿಸುತ್ತದೆ.

ಗುರು ಹರ ಗೋಬಿಂದ್‌ನ ಇನ್ನೊಬ್ಬ ಮಗ ಗುರುದಾಸ್ ಹೆಮ್ಮೆ ಮತ್ತು ಅಹಂಕಾರದಿಂದ ಬೀಗುವುದನ್ನು ಅರಿತು, ಅವನಿಗೆ ಬುದ್ಧಿ ಕಲಿಸುವ ನೆಪದಲ್ಲಿ, ಆತನನ್ನು ಕಾಬೂಲ್‌ಗೆ ಕಳುಹಿಸಿ ಅಲ್ಲಿನ ಪ್ರಸಿದ್ಧ ಅರಬ್ಬೀ ಕುದುರೆಗಳನ್ನು ಖರೀದಿಸಿ ವಾಪಸು ಬರಲು ಆದೇಶಿಸಿದ. ಗುರುದಾಸ್ ಕಾಬೂಲ್‌ಗೆ ತೆರಳಿ, ಹಣ ಕಳೆದುಕೊಂಡು, ಕುದುರೆಗಳನ್ನು ಕೊಳ್ಳಲಾಗದೆ, ಭಾರತಕ್ಕೆ ಹಿಂದಿರುಗಿ, ಕಾಶಿಗೆ ಓಡಿಹೋದ. ಅಲ್ಲಿ ಜ್ಞಾನಿಗಳೊಂದಿಗೆ ಜೀವಿಸಿ, ಸಿಖ್ ಪಂಥದ ತತ್ತ್ವವಿಚಾರಗಳನ್ನು ಚರ್ಚಿಸಿ, ಮನಃಪರಿವರ್ತನಗೊಂಡು, ದೈನ್ಯತೆ, ಸೌಮ್ಯತೆಗಳ ಸ್ವರೂಪ ಹೊತ್ತು, ತಂದೆಗೆ ಶರಣಾಗಿ ಅವನ ಕ್ಷಮೆ ಬೇಡಿದ. ಅವನನ್ನು ಕ್ಷಮಿಸಿದ ತಂದೆ, ತನ್ನ ಬಳಿ ಬರಮಾಡಿಕೊಂಡ. ಆದರೆ ಅವನು ಬಹಳ ಕಾಲ ಬಾಳಲಿಲ್ಲ. ೧೬೩೮ರಲ್ಲಿ ಅವನ ಮರಣವಾಯಿತು.

ಗುರು ಹರ ಗೋಬಿಂದ್ ತನ್ನ ನಿಕಟ ಶಿಷ್ಯ ಭಾಯಿ ರೂಪಾನ ನೆನಪಿನಲ್ಲಿ ಒಂದು ನೂತನ ನಗರವನ್ನು ೧೬೪೧ರಲ್ಲಿ ನಿರ್ಮಿಸಿದ.

ಅರಬ್ಬಿ ಕುದುರೆಗಳನ್ನು ಕೊಳ್ಳಲು ಸಿಖ್ಖರು ಕಾಬೂಲ್‌ಗೆ ತೆರಳಿ ವಾಪಸ್ಸು ಬರುವಾಗ, ಲಾಹೋರ್‌ನಲ್ಲಿ ಅವರನ್ನು ತಡೆಹಿಡಿದು, ಕುದುರೆಗಳನ್ನು ಲಪಟಾಯಿಸಿದರು ಮೊಘಲ್ ಅಧಿಕಾರಿಗಳು. ಆದರೆ, ಸಿಖ್ಖರು ಅವನ್ನು ಉಪಾಯದಿಂದ ಅಪಹರಿಸಿ, ಅಮೃತಸರದಲ್ಲಿ ತಂದು ಗುರುವಿಗೆ ಒಪ್ಪಿಸಿದರು. ಅದೇ ಒಂದು ನೆಪ ಮಾಡಿಕೊಂಡು ಮೊಘಲರು ಗುರುವಿನ ಮೇಲೆ ಸಮರ ಸಾರಿದರು. ಯುದ್ಧದಲ್ಲಿ ಎರಡೂ ಕಡೆ ಸಾವು ನೋವು

ಅನುಭವಿಸಿದರು. ಗುರುವಿನ ಸಾವಿರಾರು ಸೈನಿಕರು ಸಾವನ್ನಪ್ಪಿದರು. ಆ ಯುದ್ಧದಲ್ಲಿ ಜಯ ಗಳಿಸಿದ ಗುರು ಹರಗೋಬಿಂದ್ ವಿಜಯೋತ್ಸವದ ಆಚರಣೆಯನ್ನು ತನ್ನ ಮಗ ತೇಗ್ ಬಹದೂರ್‌ನ ಲಗ್ನವನ್ನು ಲಾಲ್‌ಚಂದ್ ಎಂಬಾತನ ಮಗಳು ಗುಜ್ರೀ ಎಂಬಾಕೆಯೊಂದಿಗೆ, ೧೬೩೨ರಲ್ಲಿ ನೆರವೇರಿಸಿದ. ಇದೇ ಸಮಯದಲ್ಲಿ, ಗುರು, ಗ್ರಂಥ ಸಾಹಿಬ್‌ನ ಮೂರನೆಯ ಪ್ರತಿಯನ್ನು ರಚಿಸಲು ಭಾಯಿ ಬಿಧೀಚಂದ್‌ನಿಗೆ ಆದೇಶ ನೀಡಿದ.

ಗುರು ಹರ ಗೋಬಿಂದ್ ತನ್ನ ಪಡೆಯ ಪಠಾಣ ಸೈನ್ಯಾಧಿಕಾರಿ ಪೈಂದೇ ಖಾನ್‌ನಿಂದ ವಿರೋಧ ಎದುರಿಸಬೇಕಾಯಿತು. ಸ್ವಾಮಿನಿಷ್ಠನಾಗಿದ್ದ ಖಾನ್, ಅಹಂಕಾರದಿಂದ ಬೀಗಿ, ಗುರುವಿಗೆ ದ್ರೋಹ ಬಗೆಯಲು ಯತ್ನಿಸಿದ. ಮೊಘಲ್‌ರ ವೈರಿಗಳಾಗಿದ್ದ ಪಠಾಣರು, ಸಿಖ್‌ರ ಜೊತೆಗೂಡಿ, ಅವರ ವಿರುದ್ಧ ಕಾಳಗಗಳಲ್ಲಿ ಭಾಗವಹಿಸಿ ಹೆಸರು ಗಳಿಸಿದ್ದರು. ಕಾದಾಡುವ, ಹೊಡೆದಾಡುವ, ಕೆಚ್ಚುಳ್ಳ ಪಠಾಣರು ತಮ್ಮ ಸ್ವಾಭಾವಿಕ ಗುಣಗಳನ್ನು ಮರೆಯದೆ, ಸಮಯ ದೊರೆತಾಗಲೆಲ್ಲಾ ಉಪಯೋಗಿಸುತ್ತಿದ್ದರು. ಗುರು ತನ್ನ ಸೈನ್ಯದ ಸೇವೆಯಿಂದ ತೆಗೆದು ಹಾಕಿಸಿಕೊಂಡ ಪೈಂಡೇ ಖಾನ್, ತನ್ನ ಸಮೀಪದ ಬಂಧು ಜಲಂದರ್‌ನ ರಾಜ್ಯಪಾಲನಾಗಿದ್ದ ಖುತುಬ್ ಖಾನ್‌ನ ಮೊರೆಹೋದ. ಅವರಿಬ್ಬರಲ್ಲೂ ವೈಮನಸ್ಸಿ ಇದ್ದರೂ, ಪಠಾಣನಾಗಿದ್ದ ಖುತುಬ್ ಖಾನ್, ತನ್ನ ಬಂಧುತ್ವವನ್ನು ಮರೆಯದೆ, ದಿಲ್ಲಿ ಬಾದ್‌ಶಹನಿಗೆ ದೂರು ಇತ್ತ. ಬಾದ್‌ಶಹಾ ಈ ಸದವಕಾಶವನ್ನು ಉಪಯೋಗಿಸಿ ಗುರುವಿನ ನಾಶಕ್ಕಾಗಿ ಒಂದು ದೊಡ್ಡ ಸೈನ್ಯವನ್ನು ಕಳುಹಿಸಿದ. ಅದರ ಮುಖಂಡತ್ವವನ್ನು ಹತನಾದ ಮೂಖ್ಲಿಸ್ ಖಾನ್‌ನ ಸಹೋದರ ಕಾಲೇ ಖಾನ್‌ನಿಗೆ ನೀಡಿದ. ಘನಘೋರ ಯುದ್ಧ ಕಾರ್ತಾರಪುರದ ಬಳಿ ಜರುಗಿ, ಸಾವಿರಾರು ಸೈನಿಕರು ಮರಣವನ್ನಪ್ಪಿದರು. ಗುರುವಿನ ಮಗ ತೇಗ್ ಬಹಾದ್ದೂರ್ ಯುದ್ಧದಲ್ಲಿ ಭಾಗವಹಿಸಿದ. ಯುದ್ಧ ಜರುಗುತ್ತಿದ್ದಾಗ, ಪೈಂಡೇ ಖಾನ್ ಗುರುವನ್ನು ಪರಿಪರಿಯಾಗಿ ಹೀಯಾಳಿಸಿ, ಸ್ವತಃ ತನ್ನೊಂದಿಗೆ ಮುಖಾಮುಖಿ ಕಾದಾಡಲು ಆಹ್ವಾನ ನೀಡಿ ಅಬ್ಬರಿಸಿದ. ಅವನ ಆಹ್ವಾನ ಸ್ವೀಕರಿಸಿದ ಗುರು ಹರಗೋಬಿಂದ್, ಪೈಂಡೇ ಖಾನ್‌ನನ್ನು ಅವನು ಕುಳಿತಿದ್ದ ಕುದುರೆಯಿಂದ ಕೆಳಕ್ಕೆ ಬೀಳಿಸಿ, ಅವನ ಕತ್ತನ್ನು ಕಡಿದ. ಆ ಯುದ್ಧದಲ್ಲಿ ಅನೇಕ ಬಾಲ್ಯ ಗೆಳೆಯರು ವೈರಿಗಳಾಗಿ ಮಾರ್ಪಟ್ಟು ಕಾದಾಡಿ ಸಾವನ್ನಪ್ಪಿದ ಕಥೆಯನ್ನು ಇತಿಹಾಸಕಾರರು ನಮೂದಿಸಿದ್ದಾರೆ. ೧೧ ೧೨

೧೬೩೪ರಲ್ಲಿ ಜರುಗಿದ ಆ ಯುದ್ಧದಲ್ಲಿ ಜಯ ಗಳಿಸಿದ ಹರ ಗೋಬಿಂದ್, ತನ್ನ ನಿಷ್ಠಾವಂತ ಸೈನ್ಯಾಧಿಕಾರಿಗಳನ್ನು ಕಳೆದುಕೊಂಡ.

---

೧೧. P 231 History of Sikh people by G.Singh

೧೨. P 27 History of the Sikhs by Court

ಯುದ್ಧ ಮುಗಿಸಿ, ಸಾವಿನ ದವಡೆಯಲ್ಲಿದ್ದ ಅವನ ಮುಸ್ಲಿಮ್ ಶಿಷ್ಯ ಬುಧಾನ್‌ಶಾನನ್ನು ನೋಡಲು ಕಿರಾತ್‌ಪುರಕ್ಕೆ ತೆರಳಿದ. ಮರಣ ಶೆಯ್ಯೆಯಲ್ಲಿದ್ದ ಬುಧಾನ್ ಶಾನ ಆರೈಕೆ ಮಾಡಿ, ಅವನಿಗೆ ಹರಸಿ, ಅವನ ಮರಣವಾಗುವವರೆಗೂ ನಿಂತು ಶವಸಂಸ್ಕಾರ ಮಾಡಿದ.

ಗುರುವಿನ ಇನ್ನೊಬ್ಬ ಮಗ ಬಾಬಾ ಗುರುದತ್ತ, ತಂದೆಗೆ ವಿಧೇಯನಾಗಿದ್ದರೂ, ಅತ್ಯಂತ ಸೂಕ್ಷ್ಮಮತಿಯಾಗಿದ್ದವ, ತಂದೆಯ ಕಟು ಟೀಕೆಗೆ ಮನನೊಂದು ತನ್ನ ಸಹೋದರ ಅತಲ್ ರಾಯನಂತೆ ಮನಃಕ್ಷೋಷದಿಂದ ನರಳಿ ಸಾವನ್ನಪ್ಪಿದ. ಅವನ ಇನ್ನೊಬ್ಬ ಮಗ ಧೀರ್‌ಮಲ್‌ನನ್ನು ತನ್ನ ಬಳಿ ಬರುವಂತೆ ಕರೆ ನೀಡಿದ ಗುರುವಿನ ಕರೆಯನ್ನು ನಿರಾಕರಿಸಿ, ತನ್ನ ತಂದೆಯ ಆಸ್ತಿಪಾಸ್ತಿ ಮತ್ತು ತನ್ನ ಬಳಿ ಇದ್ದ ಗುರುಗ್ರಂಥದ ಪ್ರತಿಯನ್ನು ತನ್ನಲ್ಲೇ ಇರಿಸಿಕೊಳ್ಳುವ ಬಯಕೆ ಇರಿಸಿಕೊಂಡು ಕಿತಾರ್‌ಪುರದಲ್ಲೇ ತಳ ಊರಿದ.

ಗುರು ಹರ ಗೋಬಿಂದ್‌ನಿಗೆ ತನ್ನ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಿಕೊಳ್ಳುವ ಸಮಯ ಒದಗಿಬಂತು. ಅವನು ತನ್ನ ಮೊಮ್ಮಗ ೧೪ ವರ್ಷದ ಹರಿ ರಾಯ್‌ನನ್ನು ಆ ಸ್ಥಾನಕ್ಕೆ ಆಯ್ಕೆಮಾಡಿ ಸಿಖ್ ಸಂಪ್ರದಾಯದಂತೆ, ಅವನನ್ನು ಗುರುಪೀಠದಲ್ಲಿ ಕುಳ್ಳರಿಸಿ, ಐದು ಕಾಸು ಹಣವನ್ನು ಮತ್ತು ಒಂದು ತೆಂಗಿನಕಾಯಿಯನ್ನು ಅವನ ಮುಂದೆ ಇರಿಸಿ, ಅವನ ಸುತ್ತ ನಾಲ್ಕು ಬಾರಿ ಪ್ರದಕ್ಷಿಣೆ ಹಾಕಿ, ತಲೆ ಬಾಗಿ ಅವನಿಗೆ ನಮಸ್ಕರಿಸಿದ. ಅವನ ಹಣೆಗೆ ತಿಲಕವನ್ನಿಟ್ಟು ಗುರುವಿನ ಉತ್ತರಾಧಿಕಾರತ್ವವನ್ನು ನೀಡಿ ಸಾರ್ಥಕನಾದ.

ಗುರು ಹರ ಗೋಬಿಂದ್ ೧೬೪೪ರಲ್ಲಿ ಅಸು ನೀಗಿದ. ೧೩

---

೧೩. P 234 History of Sikh people by G.Singh

ಅಧ್ಯಾಯ ೯
ಗುರು ಹರಿ ರಾಯ್ (೧೬೩೧-೧೬೬೧)

ನಿನ್ನ ಹೃದಯದ ವನದಲ್ಲಿ
ಗುರುವಿನ ನಾಮಬೀಜ ಬಿತ್ತು.
ಪ್ರೀತಿಯ ನೀರನ್ನು ಹಾಯಿಸು ಅದರಲ್ಲಿ
ಪವಿತ್ರ ದೇವನಾಮದ ಫಲ
ಉತ್ಪತ್ತಿಯಾಗುವುದು ಆ ವನದಲ್ಲಿ !

– ನಾನಕ್

ಗುರು ಹರ್ ಗೋಬಿಂದ್‌ನ ಹಿರಿಮಗ ಬಾಬಾ ಗುರುದತ್ತನ ಮಗ ಹರಿ ರಾಯ್‌ನನ್ನು ಗುರು ಪೀಠಕ್ಕೆ ಏರಿಸಲಾಯಿತು. ಆಗ ಅವನ ವಯಸ್ಸು ಹದಿನಾಲ್ಕು ವರ್ಷವಾಗಿತ್ತು. ತಂದೆ ಮತ್ತು ತಾತನನ್ನು ಕಳೆದುಕೊಂಡ ಹರಿ ರಾಯ್ ಅತ್ಯಂತ ಕರುಣಾಳು ಆಗಿದ್ದ. ದೇವರ ಧ್ಯಾನ, ಜಪತಪಗಳಲ್ಲಿ ನಿರತನಾಗಿದ್ದ ಗುರು, ಹಿಂಸಾಚಾರವನ್ನು ಖಂಡಿಸಿ, ಯುದ್ಧ ಜರುಗಿಸುವುದನ್ನಾಗಲೀ, ವೈರಿಗಳ ವಿರುದ್ಧ ಕಲಹ, ವೈರತ್ವ ಜರುಗಿಸದೆ, ಶಾಂತಿ ಮಂತ್ರ ಜಪಿಸಿ, ದೈನ್ಯತೆ, ಕರುಣೆಗಳಿಂದ ನಿಸ್ವಾರ್ಥ ಸೇವೆಗಳನ್ನು ಮಾಡುವ ಕಾರ್ಯಕ್ರಮ ಹಾಕಿಕೊಂಡ.

ಹರಿ ರಾಯ್ ತನ್ನ ಶಿಷ್ಯರನ್ನು ಎಷ್ಟು ಪ್ರೀತಿಸಿ, ಅವರ ನೆರವಿಗೆ ಧಾವಿಸುತ್ತಿದ್ದನೆಂದರೆ, ಅದು ಮನೆಮಾತಾಯಿತು. ಬಡವ ಬಲ್ಲಿದರೆಂಬ ಬೇಧಭಾವವಿಲ್ಲದೆ, ಎಲ್ಲರನ್ನು ಸಮತಾಭಾವದಿಂದ ಪ್ರೀತಿಸಿ, ಆರಾಧಿಸಿ, ಸೇವೆಗೈಯ್ಯುವಾಗ ಕೇವಲ ಅವರ ಆಹಾರ ಪೂರೈಕೆ ಮಾಡುವದಷ್ಟೆ ಅಲ್ಲದೆ, ಅವರನ್ನು ತಮ್ಮ ಬಂಧು ಬಾಂಧವರೆಂದು ಅರಿತು ಸೇವೆ ಮಾಡಬೇಕೆಂದು ಬೋಧಿಸಿದ. ಮಾನವ ತನ್ನ ಸಹಜೀವಿಗಳ ಸೇವೆ ಮಾಡಲು ಕೇವಲ ಒಬ್ಬ ಕಾರ್ಯಕರ್ತನಾಗಿದ್ದಾನಷ್ಟೆ, ದೇವರು ಮಾತ್ರ ಸಕಲ ಸೌಭಾಗ್ಯ ನೀಡುವವನು ಎಂದು ಸಾರಿ, 'ಗುಡಿ ಮತ್ತು ಮಸೀದಿಗಳನ್ನು ಸರಿಪಡಿಸಬಹುದು ಅಥವ ಪುನರ್ ನಿರ್ಮಿಸಬಹುದು, ಆದರೆ ಮುರಿದ ಹೃದಯವನ್ನು ಪುನರ್ ನಿರ್ಮಿಸುವುದು ಕಷ್ಟ' ಎಂದು ಮಾನವ ಮಾನವರ ನಡುವೆ ಮಧುರ ಬಾಂಧವ್ಯಗಳ ಬಗ್ಗೆ ಬೆಸುಗೆಯನ್ನು ಬಲಪಡಿಸುವಿಕೆಯ ಬಗ್ಗೆ ತನ್ನ ಆಸೆ ಅಭಿಲಾಷೆ ವ್ಯಕ್ತಪಡಿಸಿದ.

ಗುರು ಹರಿ ರಾಯ್ ನುಡಿದಂತೆ ನಡೆಯುವ ಕಾರ್ಯ ಮಾಡುವ ಬಗ್ಗೆ ಇತಿಹಾಸಕಾರರು ಒಂದು ಕತೆಯನ್ನು ನೀಡಿದ್ದಾರೆ. ಕ್ರಿ.ಶ. ೧೬೫೦ರಲ್ಲಿ, ಮಾಲ್ವ ಪ್ರದೇಶದಲ್ಲಿದ್ದ ಕಾಲಾ ಮತ್ತು ಕರಮ್‌ಚಂದ್ ಎಂಬ ಇಬ್ಬರು ಸಹೋದರರು ಗುರವಿನ

ಬಳಿ ಬಂದು ಕರಾ ಎಂಬ ಜನಾಂಗದವರು ತಮಗೆ ನದಾಣಾ ಎಂಬ ಸ್ಥಳದಲ್ಲಿ ಅವರ ಮಧ್ಯೆ ವಾಸ ಮಾಡಲಿಕ್ಕೆ ಪ್ರತಿರೋಧ ಎಸಗುತ್ತಿದ್ದಾರೆ ಎಂದು ತಿಳಿಸಿ ತಮಗೆ ಸಹಾಯ ಮಾಡಬೇಕೆಂದು ಕೋರಿದರು. ಅವರ ಕೋರಿಕೆಗೆ ಸ್ಪಂದಿಸಿದ ಗುರು ಅವರೊಂದಿಗೆ ಆ ಸ್ಥಳಕ್ಕೆ ತೆರಳಿ, ಆ ಜನಾಂಗದ ಮುಖ್ಯಸ್ಥನೊಂದಿಗೆ ಸಂಧಾನ ಮಾಡಲು ಯತ್ನಿಸಿದಾಗ, ಆತ ಗುರುವಿನ ಮಾತನ್ನು ಧಿಕ್ಕರಿಸಿದ. ಸಹೋದರರನ್ನು ಅಲ್ಲಿಂದ ಹೊಡೆದು ಓಡಿಸಿದ. ಗುರು ಹರಿ ರಾಯ್, ತಮಗೆ ಕರುಣಾರ್ಥಿಯಾಗಿ ಬಂದಿದ್ದ ಸಹೋದರರ ಬೆಂಬಲಕ್ಕೆ, ತಾವು ಮಾತು ಕೊಟ್ಟಂತೆ, ಮುಖ್ಯಸ್ಥ ಜೈತ್ ಪಿರಾನಾನೊಂದಿಗೆ ಹೋರಾಟಕ್ಕೆ ನಿಂತ. ಹೋರಾಟದಲ್ಲಿ ಪಿರಾನಾನ ಸಾವುಂಟಾಯಿತು.

ಗುರು ಹರಿ ರಾಯ್ ಕೀಳು ಜನಾಂಗದ ಇಬ್ಬರು ಸಹೋದರರೊಂದಿಗೆ ಇತರ ಉಚ್ಚ ಜಾತಿ ಜನಾಂಗದವರೊಂದಿಗೆ ವಿವಾಹ ಸಂಬಂಧ ಜರುಗಿಸಬೇಕೆಂದು ಉಪದೇಶಿಸಿ, ಜಾತಿ ಪದ್ಧತಿಯ ನಿರ್ಮೂಲನಕ್ಕೆ ಶ್ರಮಿಸಿದ.

ಕಾಲಾನ ಸಹೋದರನ ಮಕ್ಕಳಾದ ಸಂದಾಲಿ ಮತ್ತು ಪೂಲ್ ಎಂಬುವರನ್ನು ಗುರುವಿನ ಬಳಿ ಕರೆತಂದು, ಅವರು ಹಸಿದು ಕಂಗಾಲಾಗಿರುವ ಸಂಗತಿ ಅರುಹಿದಾಗ, ಗುರು ತಾನು ಅವರ ಹಸಿವು ನೀಗಿಸಿದ್ದಲ್ಲದೆ, ಅವರು ನೆಲೆಸಿದ ನಾಡಿನಲ್ಲಿ ಕೂಡ ಹಸಿವು ಕಣ್ಮರೆಯಾಗುವುದು ಎಂದು ಭವಿಷ್ಯ ನುಡಿದ. ಇದೇ ಪೂಲ್‌ನ ಸಂತತಿಯವರು ಕ್ರಮೇಣ ಪಾಟಿಯಾಲಾ, ನಾಭಾ ಮತ್ತು ಜಿಂಡ್‌ನ ರಾಜರಾಗಿ ಮೆರೆದರು. ೧

ಇದೇ ಸಮಯದಲ್ಲಿ ದಿಲ್ಲಿ ಸಿಂಹಾಸನಕ್ಕಾಗಿ ಶಹಜಹಾನ್‌ನ ನಾಲ್ಕು ಮಕ್ಕಳಲ್ಲಿ ಕಚ್ಚಾಟ ಪ್ರಾರಂಭವಾಗಿತ್ತು. ಕಾಯಿಲೆಯಿಂದ ನರಳುತ್ತಿದ್ದ ಶಹಜಹಾನ್‌ನನ್ನು ಔರಂಗಜೇಬ್ ಸೆರೆಹಿಡಿದು, ಆಗ್ರಾ ಕೋಟೆಯಲ್ಲಿ ಬಂಧಿಸಿ, ಸಹೋದರ ದಾರಾ ಶುಕೊನನ್ನು ಯುದ್ಧದಲ್ಲಿ ಸೋಲಿಸಿದ್ದ. ದಾರಾ ಯುದ್ಧಭೂಮಿಯಿಂದ ಓಡಿ ಪಂಜಾಬ್ ಪ್ರಾಂತ್ಯಕ್ಕೆ ಬಂದಾಗ, ಗುರು ಹರಿ ರಾಯ್ ದಾರಾನ ಮೇಲಿನ ಅಭಿಮಾನದಿಂದ ಅವನಿಗೆ ಬೆಂಬತ್ತಿದ್ದ ಔರಂಗಜೇಬ್‌ನ ಸೈನ್ಯದಿಂದ ಪಾರಾಗಲು ಸಹಾಯ ಮಾಡಿದ. ಗುರುವಿನ ಯೋಧರು ಮೊಘಲ್ ಸೈನ್ಯದ ವಿರುದ್ಧ ಕಾದಾಟ ಮಾಡದೆ, ದಾರಾನಿಗೆ ಪಾರಾಗಲು ಪ್ರಯತ್ನಿಸಿದ್ದು ವಿಶೇಷವಾಗಿತ್ತು. ದಾರಾ ಮಾತ್ರ ಕೆಲವೇ ದಿನಗಳಲ್ಲಿ ಔರಂಗಜೇಬ್‌ನ ಯೋಧರ ಕೈಗೆ ಸಿಕ್ಕಿ ಹಾಕಿಕೊಂಡ. ಸಹೋದರನ ತಲೆ ಚಂಡಾಡಿದ ಔರಂಗಜೇಬ್, ಅದನ್ನು ತಂದೆ ವೃದ್ಧ ಶಹಜಹಾನ್‌ನ ಮುಂದೆ ಇರಿಸಿ, ಅವನು ಶೋಕದಿಂದ ನರಳಿ ಮರಣವನ್ನಪ್ಪುವಂತೆ ಮಾಡಿ, ತನ್ನ ಸಿಂಹಾಸನವನ್ನು ಗಟ್ಟಿ ಮಾಡಿಕೊಂಡ.

ಗುರು ಹರಿರಾಯ್ ದಾರಾ ಶುಖೋನಿಗೆ ಸಹಾಯ ಎಸಗಿದ್ದನ್ನು ಅರಿತ ಔರಂಗಜೇಬ್ ಗುರುವಿಗೆ ದೆಹಲಿಗೆ ಬರಲು ಆಜ್ಞಾಪಿಸಿದ. ಗುರು, ತಾನು ಖುದ್ದಾಗಿ ತೆರಳದೆ ತನ್ನ

---

೧. P 238 History of Sikh by G. Singh

ಮಗ ರಾಮ್ ರಾಯ್‌ನನ್ನು ಕಳುಹಿಸಿದ. ಅವನ ವಿಚಾರಣೆ ನಡೆಸಿದ ಔರಂಗಜೇಬ್. ರಾಮ್ ರಾಯ್‌ನ ಉನ್ನತ ಮಟ್ಟದ ಬೌದ್ಧಿಕ ಹಾಗೂ ಆಧ್ಯಾತ್ಮಿಕ ಶಕ್ತಿ ಪರಿಚಯವಾದಾಗ, ಬಾದ್‌ಶಹಾ ಅವನ ವಿರುದ್ಧ ಅಥವಾ ಸಿಖ್‌ರ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳದೆ ರಾಮ್ ರಾಯ್‌ನನ್ನು ತನ್ನ ಆಸ್ಥಾನದಲ್ಲಿ ಕಳ್ಳಿರಿಸಿ ಗೌರವಿಸಿದ. ರಾಮ್ ರಾಯ್‌ನಾದರೋ ಬಾದಶಹಾನನ್ನು ಆರಾಧಿಸತೊಡಗಿ, ಅವನ ಆಪ್ತ ಹಿಂಬಾಲಕನಾದ. ಒಮ್ಮೆ ಬಾದ್‌ಶಹಾ ಗುರುಗ್ರಂಥದಲ್ಲಿ ಇಸ್ಲಾಮ್‌ನ ಬಗ್ಗೆ ತೆಗಳಿಕೆಯ ಸಾಲುಗಳು ಇರುವ ಬಗ್ಗೆ ವಿಚಾರಿಸಿದಾಗ, ಬಾದ್‌ಶಹಾನ ಅನನ್ಯ ಭಕ್ತನಾಗಿದ್ದ ರಾಮ್ ರಾಯ್, "ಗುರು ನಾನಕ್‌ನ ಸಾರುವಿಕೆಯ ಸಾಲುಗಳಲ್ಲಿ ಕೆಲವರು ತಿರುಚಿ ಅರ್ಥೈಸಿರುತ್ತದೆ. 'ಬೇಮಾನ್' ಎಂಬ ಪದದ ಬದಲು 'ಮುಸಲ್‌ಮಾನ್' ಎಂಬ ಪದವನ್ನು ಉಪಯೋಗಿಸಿ ಅದರ ಅರ್ಥವನ್ನು ಕೆಡೆಸಿದ್ದಾರೆ" ಎಂದು ಹೇಳಿ ಬಾದ್‌ಶಹಾನ ಕೃಪೆಯನ್ನು ಸಂಪಾದಿಸಿದ. ಸುದ್ದಿ ತಿಳಿದ ಗುರು ಹರಿ ರಾಯ್ ಅಸಂತೋಷಗೊಂಡ. "ರಾಮ್‌ರಾಯ್ ನನ್ನ ಸಿಂಹಾಸನಕ್ಕೆ ಅರ್ಹನಾದ ಅಭ್ಯರ್ಥಿ. ಆದರೆ ಗುರುಪೀಠವೆಂದರೆ ಒಂದು ಚಿನ್ನದ ಬಟ್ಟಲಿನಲ್ಲಿರುವ ಹುಲಿಯ ಹಾಲಿನ ತರಹ. ಈಗ ರಾಮ್ ರಾಯ್ ನನ್ನ ಮುಖವನ್ನು ಎಂದಿಗೂ ನೋಡಲಾರ" ೨

ಗುರು ಹರಿ ರಾಯ್‌ನ ಮಾತಿನಂತೆ, ಮಗ ರಾಮ್ ರಾಯ್ ತಂದೆಯ ಮುಖವನ್ನು ನೋಡಲಿಲ್ಲ. ಬಾದ್‌ಶಹಾ ಔರಂಗಜೇಬ್‌ನ ಸ್ನೇಹ ಮತ್ತು ಬೆಂಬಲದಿಂದ ಅವನು ಡೆಹ್ರಾಡೂನ್‌ಗೆ ತೆರಳಿ ಅಲ್ಲೇ ಒಂದು ನೂತನ ಗದ್ದಿಗೆ ಸ್ಥಾಪಿಸಿದ. ಆ ಗದ್ದುಗೆ ಇಂದಿಗೂ ಅಸ್ತಿತ್ವದಲ್ಲಿದೆ. ರಾಮ್ ರಾಯ್‌ನ ಹಿಂಬಾಲಕರನ್ನು 'ರಾಮ್ ರಾಯ್'ರು ಎಂದು ಕರೆಯುತ್ತಾರೆ. ಅವರಲ್ಲಿ ಹಿಂದೂಗಳು ಬಹಳವಾಗಿ ಇರುತ್ತಾರೆ. ೩

ಗುರು ಹರಿರಾಯ್, ತನ್ನ ಆರು ವರ್ಷದ ಮಗ ಹರಿಕಿಶನ್‌ನಿಗೆ ಗುರುಪೀಠ ಬಿಟ್ಟುಕೊಟ್ಟು, ೧೬೬೧ರಲ್ಲಿ ಪ್ರಾಣತ್ಯಾಗ ಮಾಡಿದ. ೪

---

೨. P 304 Sikh Religion by Macauliffe

೩. P 78 The Later Mughals by Irvine

೪. P 77 The Later Mughals by Irvine

ಅಧ್ಯಾಯ ೧೦
ಗುರು ಹರಿ ಕ್ರಿಶನ್ (೧೬೫೬-೧೬೬೪)

ಸಂತನ ಸಂಗದಿಂದ
ಲಕ್ಷ ಪಾಪ ಪರಿಹಾರ
ಯಮ ಕೂಡ ಸುಳಿಯಲಾರ
ಆ ಪಾಪಿಯ ಬಳಿ ನೋಡಾ !

—ನಾನಕ್

ಹರಿ ಕ್ರಿಶನ್ ಗುರುಪೀಠವನ್ನು ಅಲಂಕರಿಸಿದರೂ, ಅವನ ಹಿರಿಯ ಸಹೋದರನ ವೈಮನಸ್ಸು ಮತ್ತು ಈರ್ಷೆ ಎದುರಿಸಬೇಕಾಯಿತು. ಆತ ದಿಲ್ಲಿ ಬಾದಶಹಾ ಔರಂಗಜೇಬ್‌ನಿಗೆ ದೂರು ಸಲ್ಲಿದ. ತನಗೆ ದಕ್ಕಬೇಕಾದ ಗುರುಪೀಠ ಎಳೆಯ ಆರು ವರ್ಷ ವಯಸ್ಸಿನ ಸಹೋದರನಿಗೆ ನೀಡಿ ಗುರು ಹರಿ ರಾಯ್ ಮೋಸ ಮಾಡಿದ್ದಾನೆ. ತನಗೆ ಗುರುಪೀಠ ದೊರಕಬೇಕೆಂದು ದೂರು ನೀಡಿದ. ಸಿಖ್ಖರ ಗುರುಪೀಠದ ಸಮಸ್ಯೆಯನ್ನು ಪರಿಹರಿಸಲು ಮುಸಲ್ಮಾನ್ ಬಾದ್‌ಶಹಾ ಔರಂಗಜೇಬ್‌ನಿಗೆ ಒಪ್ಪಿಸಿದ್ದು, ಒಂದು ವಿಪರ್ಯಾಸವಾಗಿತ್ತು. ಭಾರತದ ಇತಿಹಾಸದಲ್ಲಿ, ಧಾರ್ಮಿಕ ಸಮಸ್ಯೆಗಳನ್ನು ಪರಿಹರಿಸಲು ಆಳುತ್ತಿದ್ದ ಯಾವುದೇ ಧರ್ಮದ ಅಧಿಕಾರಿಗಳ ಮೊರೆ ಹೋಗುವುದು ಸಾಮಾನ್ಯವಾಗಿತ್ತು.

ಔರಂಗಜೇಬ್‌ನಿಗೆ ಸಿಖ್ಖರ ಜಗಳವನ್ನು ಬಗೆಹರಿಸುವ ನೆಪದಲ್ಲಿ ಅವರ ಧರ್ಮವನ್ನೇ, ಅವರ ಹಕ್ಕುಗಳನ್ನು ಅವರ ಸುಸ್ಥಿತಿಯನ್ನೇ ಬುಡಮೇಲು ಮಾಡಲು ನಿರ್ಧರಿಸಿದ. ಮತಾಂಧನಾದ ಆತ ಸಿಖ್ಖರ ಅಸ್ತಿತ್ವವನ್ನೇ ತುಳಿಯಲು ಮನಸ್ಸು ಮಾಡಿದ. ಬಾಲಕ ಗುರು ಹರಿ ಕ್ರಿಶನ್‌ಗೆ ದೆಹಲಿಗೆ ಬರಲು ಆಜ್ಞಾಪಿಸಿದ. ಆ ಆಜ್ಞೆಯನ್ನು ತನ್ನ ಹಿಂದೂ ರಾಜಪುತ್ ಸಾಮಂತ ಜಯಪುರದ ಮಹಾರಾಜಾ ಜೈಸಿಂಗ್‌ನ ಮುಖಾಂತರ ಬಾಲಕ ಗುರುವಿಗೆ ತಲುಪಿಸಿದ. ಬಾದ್‌ಶಹಾನ ಆಜ್ಞೆಯನ್ನು ಓದಿದ ಗುರುವಿನ ಮಾತೆಗೆ ಮತ್ತು ಸಿಖ್ಖರಿಗೆ ಆತಂಕ ಉಂಟಾಯಿತು. ಶಾಂತಿಯುತವಾಗಿ ತಮ್ಮ ಧರ್ಮಾಚರಣೆ ಮಾಡುತ್ತಾ, ಆಳುತ್ತಿದ್ದ ಬಾದ್‌ಶಹಾನ ವಿರುದ್ಧ ಯಾವ ವೈರತ್ವ ಸಾಧಿಸದೆ ತಮ್ಮ ಜೀವನ ಸಾಗಿಸುತ್ತಿದ್ದ ಸಿಖ್ಖರಿಗೆ ಮತ್ತು ಗುರುವಿನ ಬಂಧುಗಳಿಗೆ ಭಯ ಆತಂಕ ಉಂಟಾಗಿದ್ದು ನೋಡಿದ ದೊರೆ ಜೈಸಿಂಗ್ ಅವರಿಗೆ ಸಾಂತ್ವನ ಹೇಳಿದ. ತಾನು ಅವರ ರಕ್ಷಣೆ ಹೊರುವ ಭರವಸೆ ನೀಡಿ, ಅವರನ್ನು ದೆಹಲಿಗೆ ಕೊಂಡೊಯ್ದು, ಈಗಿನ ಗುರುದ್ವಾರ 'ಬಾಂಗ್ಲಾ ಸಾಹಿಬ್' ಎಂಬ ಸ್ಥಳದಲ್ಲಿ ಒಂದು ಬಂಗಲೆಯಲ್ಲಿ ಗುರು ಹರಿ ಕಿಶನ್ ಮತ್ತು ಅವನ ಪರಿವಾರದವರು ಇಳಿದುಕೊಳ್ಳುವ

ವ್ಯವಸ್ಥೆ ಮಾಡಿದ. ಈಗ ಅವರ ನೆನಪಿನಲ್ಲಿ ಒಂದು ಸುಂದರ ಗುರುದ್ವಾರವನ್ನು ನಿರ್ಮಿಸಿದ್ದಾರೆ. ಅದನ್ನು 'ಬಾಂಗ್ಲಾ ಸಾಹಿಬ್ ಗುರುದ್ವಾರ' ಎಂದು ಕರೆಯಲಾಗಿದೆ.

ಬಾಲಕ ಗುರುವನ್ನು ದರ್ಶನ ಮಾಡಲು ದೆಹಲಿ ಮತ್ತು ಸುತ್ತಮುತ್ತಲಿನ ಜನರು ಬರಹತ್ತಿದರು. ಗುರುವಿನ ಶಿಷ್ಯಂದಿರು ಮತ್ತು ಆಸಕ್ತ ಜನರು ಅಪಾರ ಸಂಖ್ಯೆಯಲ್ಲಿ ಗುರುವಿನ ದರ್ಶನವನ್ನು ಪಡೆದು, ಶಾಂತಿಯುತವಾಗಿ ನಯವಿನಯದಿಂದ ನಡೆದುಕೊಂಡ ರೀತಿಯನ್ನು ನೋಡಿದ ಔರಂಗಜೇಬ್, ಗುರು ಹರಿ ಕಿಶನ್‌ನನ್ನು ಸುಮ್ಮನೆ ಇರಲು ಬಿಟ್ಟ. ಗುರುಪೀಠದ ಸ್ವಾಮಿತ್ವವನ್ನು ಅವನು ಒಪ್ಪಿದ. ರಾಮರಾಯ್ ಅವನ ಭಕ್ತನಾದರೂ, ಅವನ ಎಳೆ ಸಹೋದರ ಗುರು ಹರಿ ಕಿಶನ್ ಇನ್ನೂ ೬ ವರ್ಷ ವಯಸ್ಸಾಗಿದ್ದು, ತನ್ನ ವಿರುದ್ಧ ಯಾವ ವಿರೋಧದ ಕಾರ್ಯಾಚರಣೆ ಮಾಡಲು ಅವನು ವಯಸ್ಕನಾಗುವವರೆಗೂ ಕಾಯಬೇಕಾಗಬಹುದು ಎಂದು ಎಣಿಸಿ ಕ್ರೂರತನ ಮತ್ತು ಮತಾಂಧತೆಗೆ ಹೆಸರಾಗಿದ್ದ ಔರಂಗಜೇಬ್ ಗುರು ಹರಿ ಕಿಶನ್ ಗುರುಪೀಠವನ್ನು ಅಲಂಕರಿಸಿದ್ದಕ್ಕೆ ಯಾವ ತಂಟೆ ತಕರಾರು ಮಾಡದೆ ಸುಮ್ಮನಿದ್ದುದು ಒಂದು ಆಶ್ಚರ್ಯಕರದ ಸಂಗತಿ ಎಂದು ಇತಿಹಾಸಕಾರರು ಅಭಿಪ್ರಾಯ ಪಟ್ಟಿದ್ದಾರೆ. ೧

ಗುರು ಹರಿ ಕಿಶನ್ ಗುರುಪೀಠ ಅಲಂಕರಿಸಿದ ಕಾಲದಲ್ಲಿ ಜರುಗಿದ ಒಂದು ಘಟನೆಯನ್ನು ಇತಿಹಾಸಕಾರರು ಒದಗಿಸಿದ್ದಾರೆ.

ಬಾಲಕನಾದರೂ ಗುರು ಹರಿ ಕಿಶನ್ ಧ್ಯಾನ ತಪಜಪಗಳಲ್ಲಿ ನಿರತನಾಗಿದ್ದು, ಅತಿ ವಿನಯ, ಸಭ್ಯತೆ ಹಾಗೂ ಸೌಜನ್ಯಗಳಿಗೆ ಹೆಸರುವಾಸಿಯಾಗಿದ್ದ. ಆತನ ಪ್ರಸಿದ್ಧಿ, ಪ್ರಭಾವ ಮತ್ತು ಗುಣಗಳಿಗೆ ಮಾರುಹೋದ ಜನರು ಅವನ ದರ್ಶನ ಮತ್ತು ಆಶೀರ್ವಾದಕ್ಕೆ ಬರಲು ಪ್ರಾರಂಭಿಸಿದರು. ಇದರಿಂದ ಬ್ರಾಹ್ಮಣ ಮತ್ತು ಇತರ ಉಚ್ಚ ಕುಲದ ಜನರೂ ಕಂಗಾಲಾದರು. ತಮ್ಮ ಪ್ರಾಬಲ್ಯ ಕಡಿಮೆಯಾಗುವ ಲಕ್ಷಣ ಕಂಡಾಗ, ಅವರು ಬಾಲಕ ಗುರುವಿನ ವಿರುದ್ಧ ಕುಹುಕ ನುಡಿಗಳನ್ನು ಸಾರತೊಡಗಿದರು. ಬಾಲಕ ಗುರುವಿನ ಹೆಸರು 'ಹರಿ ಕಿಶನ್' ಹಿಂದೂ ದೇವರು ಕ್ರಿಷ್ಣನ ಹೆಸರಾಗಿದ್ದು, ಸಿಖ್ ಗುರು ಹಿಂದೂ ದೇವರ ಹೆಸರನ್ನು ಇರಿಸಿಕೊಂಡಿದ್ದರೂ ಸಹ, ಕ್ರಿಷ್ಣ ಸಾರಿದ ಭಗವದ್‌ಗೀತೆಯ ಸಾರವನ್ನು ಅರಿತಿಲ್ಲದಿರುವುದು ಹಾಸ್ಯಾಸ್ಪದ ಎಂದು ಟೀಕಿಸಲಾರಂಭಿಸಿದರು. ಅದನ್ನು ಕೇಳಿದ ಒಬ್ಬ ಸಾಮಾನ್ಯ ಸಿಖ್ ಸಭಿಕರೊಡನೆ ಕುಳಿತಿದ್ದ ಬಾಲಕ ಗುರು ಹರಿಕಿಷನ್‌ನ ಬಳಿ ಬಂದು ಕುಳಿತ. ಸ್ವಲ್ಪ ಸಮಯದ ನಂತರ ಆತ ಎದ್ದು 'ಗುರುವೇನು, ನಾನು ಕೂಡ ಗೀತೆಯ ಸಾರವನ್ನು ಅರಿತವನಾಗಿದ್ದೇನೆ ಮತ್ತು ಅದನ್ನು ಹೇಳಬಲ್ಲವನಾಗಿದ್ದೇನೆ. ಆದರೆ ಅದಕ್ಕಾಗಿ ಗುರುವಿನ ಅನುಗ್ರಹವಿರಬೇಕು,' ಎಂದು ಗುರುವನ್ನು ಉದ್ದೇಶಿಸಿ ಹೇಳಿದನು. ಅವನ ಮಾತುಗಳನ್ನು ಕೇಳಿದ ಬಾಲಕ ಗುರು ಹರಿಕಿಶನ್, ತನ್ನ ಮಡಿಕೋಲಿನಿಂದ ಆ ಸಿಖ್‌ನ ಮೈಗೆ ತಟ್ಟಿ ಆಶೀರ್ವದಿಸಿದ. ತಕ್ಷಣ ಆ ಶಿಷ್ಯನ ಬಾಯಿಯಿಂದ ಭಗವದ್‌ಗೀತೆಯ ಸಾರ ಹರಿದುಬಂದಿತು. ಒಬ್ಬ ಸಾಮಾನ್ಯ ಸಿಖ್‌ನ ಬಾಯಿಯಿಂದ ಪುಂಖಾನುಪುಂಖವಾಗಿ

ಹರಿದು ಬಂದು ಗೀತಾಸಾರವನ್ನು ಕೇಳಿದ ಬ್ರಾಹ್ಮಣರಿಗೆ ಮಹದಾಶ್ಚರ್ಯವಾಗಿ, ಗುರು ಹರಿ ಕ್ರಿಶನ್‌ನ ಚಮತ್ಕಾರ ನೋಡಿ ಅವರನ್ನು ಮೂಕರನ್ನಾಗಿಸಿತು. ಅವರ ಗರ್ವಭಂಗವಾಗಿ, ಅವರ ವಿರೋಧ ನಾಶವಾಯಿತು.

ಬಾಲಕ ಗುರು ಹರಿಕಿಶನ್ ಅಕಾಲ ಮೃತ್ಯುವಿಗೆ ವಶನಾದ. ದೌರ್ಭಾಗ್ಯವಶಾತ್, ಅವನಿಗೆ ಸಿಡುಬು ರೋಗ ತಗುಲಿ, ತನ್ನ ೮ನೆಯ ವಯಸ್ಸಿನಲ್ಲಿ ವಿಧಿವಶನಾದ (೧೬೬೧). ಅವನ ಪಾರ್ಥಿವ ಶರೀರವನ್ನು ದೆಹಲಿಯ ಯಮುನೆಯ ದಂಡೆಯ ತಿಲೋಕ್‌ಪುರಿ ಎಂಬಲ್ಲಿ ಸಂಸ್ಕಾರ ಮಾಡಿದರು.

ಗುರು ಹರಿ ಕ್ರಿಶನ್ ತಾನು ಕೊನೆಯುಸಿರು ಎಳೆಯುವ ಮುನ್ನ 'ಬಾಕಾಲಾ' ಎಂಬ ಸ್ಥಳದಲ್ಲಿ ಮುಂದಿನ ಗುರುವಿನ ಉದಯವಾಗುತ್ತದೆ ಎಂದು ವ್ಯಕ್ತಪಡಿಸಿದ. ೨

---

೧. P 242 History of Sikhs by G. Singh

೨. P 243 History of Sikh by G.Singh

ಅಧ್ಯಾಯ ೧೧
ಗುರು ತೇಘ್ ಬಹದ್ದೂರ್ (೧೬೨೨-೧೬೭೫)

'ಕೆಳಗೆ ಜಿಸಾಡಿಲ್ಪಟ್ಟರೂ,
ಧರ್ಮದ್ರೋಹಿಯಾಗಬೇಡ
ಪಾಪ ಎಸಗಿದವನೇ ಭಯಪಡುವವ;
ವಿವೇಕಿಯೇ ಸುಖಿ.
ಯಾರಿಗೆ ಭಯಪಡಬೇಕು ನಾವು?
ದೇವರೇ ಸತ್ಯ ಮತ್ತು ನ್ಯಾಯವಂತ
ಎಂಬುದು ಅರಿತಿರುವಾಗ ?

ಬಾಲಕ ಗುರು ಹರಿ ಕ್ರಿಶನ್ ಬೊಟ್ಟು ಮಾಡಿ ತೋರಿಸಿದ 'ಬಾಕಾಲಾ' ಎಂಬ ಸ್ಥಳದಲ್ಲಿ ಮುಂದಿನ ಗುರು ದೊರಕುತ್ತಾನೆಂಬ ನಂಬಿಕೆ ಹೊತ್ತ ಶಿಷ್ಯಂದಿರು ಅಲ್ಲಿಗೆ ಧಾವಿಸಿದರು. ಈಗಾಗಲೇ ಸುದ್ದಿ ಹರಡಿ, ಹಲವಾರು ಅಭ್ಯರ್ಥಿಗಳು ಗುರುಪೀಠವನ್ನು ಅಲಂಕರಿಸಲು ಸಿದ್ಧರಾದರು. ಅವರೆಲ್ಲಾ ತಾ ಮುಂದು ನಾ ಮುಂದು ಎಂದು ಬಾಕಾಲಾಕ್ಕೆ ಧಾವಿಸಿದರು. ಗುರುಪೀಠ ಅಲಂಕರಿಸಲು ಸಿದ್ಧವಾದ ಅನೇಕರು ಕಾದಾಟ, ವಾಗ್ವಾದ, ಹೊಡೆದಾಟಗಳಿಗೆ ಎಡೆಮಾಡಿಕೊಡುವುದನ್ನು ತಪ್ಪಿಸಲು, ಒಬ್ಬ ಪ್ರತಿಷ್ಠಿತ ಹಾಗೂ ಐಶ್ವರ್ಯವಂತ ಸಿಖ್ ವ್ಯಾಪಾರಿ, ಮಖಾನ್ ಶಾ ಎಂಬಾತ ಮುಂದೆ ಬಂದ. ಆತ ಆರನೆಯ ಗುರುವಾಗಿದ್ದ ಹರಗೋವಿಂದ್‌ನ ಮಗನಾದ ತೇಘ್ ಬಹದ್ದೂರ್‌ನನ್ನು ಗುರುಪೀಠಕ್ಕೆ ಆಯ್ಕೆ ಮಾಡಿದ. ತೇಘ್ ಬಹದೂರ್‌ನ ಆಯ್ಕೆ ಸಿಖ್‌ರಲ್ಲಿ ಒಮ್ಮತ ಮೂಡಿಸಿತು.

ತೇಘ್ ಬಹದೂರ್‌ನ ಆಯ್ಕೆಯಾದಾಗ, ಎಂದಿನಂತೆ, ಅವನ ಸಹೋದರನ ಮಗನಾದ ಧೀರ್‌ಮಲ್‌ನ ವಿರೋಧ ಅವನು ಎದುರಿಸಬೇಕಾಯಿತು. ಅವನು ಒಬ್ಬ ಸಿಖ್ ಮಸಂದ್‌ನ (ಏಜೆಂಟ್) ಸಹಾಯ ಪಡೆದ. ಆ ಮಸಂದ್ ಗುರು ತೇಘ್ ಬಹದೂರ್‌ನ ಮನೆಗೆ ನುಗ್ಗಿ ಅವನ ಮೇಲೆ ಹಲ್ಲೆ ಎಸಗಿದ. ಅವನ ಮನೆಯಲ್ಲಿದ್ದ ಸಾಮಗ್ರಿಗಳ ಲೂಟಿ ಮಾಡಿದ. ಸಂಗತಿ ಅರಿತ ಸಿಖ್‌ರಿಗೆ ಕ್ರೋಧ ಉಂಟಾಯಿತು. ಅವರು ಧೀರ್‌ಮಲ್ ಮನೆಗೆ ನುಗ್ಗಿ, ಗುರುವಿನ ಲೂಟಿ ಮಾಡಿದ ಸಾಮಗ್ರಿಗಳನ್ನು ಪುನಃ ಪಡೆದು, ಮಸಂದ್ ಸಿಹಾನ್ ಎಂಬುವನನ್ನು ಎಳೆದು ಕಟ್ಟಿಹಾಕಿ, ಗುರುವಿನ ಮುಂದೆ ಇರಿಸಿದರು.

ಸಿಹಾನ್ ತಾನು ಮಾಡಿದ ತಪ್ಪನ್ನು ಒಪ್ಪಿಕೊಂಡು ಗುರುವಿನ ಕ್ಷಮೆ ಕೇಳಿದ.

ಗುರು ಅವನಿಗೆ ಕ್ಷಮೆ ನೀಡಿದ್ದಲ್ಲದೆ, ಸಿಖ್‌ರು ಲೂಟಿ ಮಾಡಿದ ಧೀರ್‌ಮಲ್‌ನ ಬಳಿ ಇರಿಸಿಕೊಂಡಿದ್ದ ಗುರುಗ್ರಂಥದ ಪ್ರತಿಯನ್ನು ಹಿಂದಿರುಗಿಸುವಂತೆ ಕೇಳಿದ. ಆಗ ನುಡಿದ ಗುರು ತೇಘ್ ಬಹದೂರ್‌ನ ಉವಾಚ ಉದಾತ್ತವಾಗಿದೆ : 'ನನ್ನ ಶಿಷ್ಯಂದಿರು (ಸಿಖ್‌ರು) ಗುರುಗ್ರಂಥ ಸಾಹಿಬ್‌ನಲ್ಲಿರುವ ಉಪದೇಶಗಳನ್ನು ತಮ್ಮ ಮನಸ್ಸು ಮತ್ತು ಆತ್ಮಗಳಲ್ಲಿ ಬರೆದಿಟ್ಟುಕೊಳ್ಳಬೇಕಲ್ಲದೆ, ಯಾವುದೇ ಒಂದು ಗ್ರಂಥ ಸಾಹಿಬ್‌ನ ಪ್ರತಿಯನ್ನಾಗಲಿ, ಅಥವಾ ಯಾವುದೇ ಇತರ ಚಿಹ್ನೆ, ಗುರುತು ಅಥವಾ ಪವಿತ್ರ ಸ್ಥಳದ ಮಹಾತ್ಮೆಯನ್ನು ನಂಬಿ, ಅದನ್ನು ಹೊಂದುವುದರಿಂದ ಯಾವುದೇ ವಿಶೇಷತೆ, ವಿಶಿಷ್ಟತೆ, ಪ್ರತಿಷ್ಠೆ ಹೊಂದುವಂತಾಗುವುದಿಲ್ಲ.' ಯಾಕೆಂದರೆ, ಯಾವಾಗ ಧಾರ್ಮಿಕ ಸಂಸ್ಥೆಗಳನ್ನು ಸ್ವತ್ತುಗಳನ್ನಾಗಿ ಪರಿವರ್ತಿಸಿ ಉಪಯೋಗಿಸಲಾಗುತ್ತದೆಯೋ ಆಗ ಧರ್ಮದ ಆತ್ಮ ಮಾಯವಾಗುತ್ತದೆ.' ೧

ಇಂತಹ ಉದಾತ್ತ ಗುಣಗಳನ್ನು ಹೊಂದಿದ ಗುರು ತೇಘ್ ಬಹದೂರ್ ಅಮೃತಸರಕ್ಕೆ ಪಯಣಿಸಿ, ಅಲ್ಲಿನ ಪ್ರಸಿದ್ಧ ಹರಮಂದಿರಕ್ಕೆ ಹೋದಾಗ, ಅದರ ಬಾಗಿಲನ್ನು ಮುಚ್ಚಿದರು ಗುಡಿಯ ಪಾರಪತ್ಯಗಾರರಾದ ಗುರು ನಾನಕ್‌ನ ವಂಶಜರಾದ 'ಸೋಧಿ' ನಾಮದ ಹರ್‌ಜೀ ಎಂಬಾತ. (ಈತ ಗುರು ನಾನಕ್‌ನ ಮಗ ಪ್ರೀತಿಯಾನ ಮೊಮ್ಮಗ ಮತ್ತು ಮೆಹರ್‌ವಾನ್‌ನ ಮಗನಾಗಿದ್ದ.) ಹತಾಶೆ ಮತ್ತು ದುಃಖಿತನಾದ ಗುರು ತೇಘ್ ಬಹದೂರ್, ಗುಡಿಯಿಂದ ಹೊರನಡೆದು, ಬಳಿಯ 'ದಮ್‌ದಮಾ ಸಾಹಿಬ್' ಎಂದು ಕರೆಯಲ್ಪಡುತ್ತಿರುವ ಸ್ಥಳಕ್ಕೆ ಬಂದು ಠಿಕಾಣಿ ಹೂಡಿದ. ಅತ್ಯಂತ ಮನ ನೊಂದಿದ ಗುರು ತನ್ನ ಶಿಷ್ಯಂದರಿಗೆ ತನ್ನ ಮನದಾಳವನ್ನು ತೋಡಿಕೊಂಡರು.

'ತಮ್ಮ ಆತ್ಮವನ್ನು ಒಂದು ವಸ್ತುವನ್ನಾಗಿ ಮಾಡಿಕೊಂಡು ಮತ್ತು ಪವಿತ್ರ ಸ್ಥಳಗಳನ್ನು ಸ್ವಾರ್ಥಕ್ಕೆ ಸಾಧನವಾಗಿ ತಮ್ಮ ಆರ್ಥಿಕ ಸ್ಥಿತಿಯನ್ನು ಬಳಸುವುದಕ್ಕೆ ಉಪಯೋಗಿಸುವ ಉದಾಹರಣೆ ಇದಾಗಿದೆ.'

'ಆತ್ಮಸತ್ವ ಗುಣಹಾನಿಯ ಸೂಚಿಸದೇ ವಿನಾಂಶಂ' ಎಂಬ ಕನ್ನಡ ಗಾದೆ ಗುರುವಿನ ಅನಿಸಿಕೆಗೆ ಬಹಳ ಹತ್ತಿರವಾಗಿದೆ ಎನ್ನಬಹುದು.

ಧೀರಮಲ್ ಹೊಂದಿದ್ದ 'ಗುರುಗ್ರಂಥ' ಸಿಖ್‌ರಲ್ಲಿ ಒಡಕು ಮೂಡಿಸಿದ್ದು, ಅದು ಗುರು ತೇಘ್ ಬಹದೂರ್‌ನ ಮನಸ್ಸು ಕೆಡಸಿತ್ತು. ಆ ಗ್ರಂಥವನ್ನು ಮನನ ಮಾಡಿ, ಉಪದೇಶಗಳನ್ನು ಮನದಟ್ಟು ಮಾಡಿಕೊಂಡು, ಅವನ್ನು ತಮ್ಮ ಜೀವನದಲ್ಲಿ ಪಾಲಿಸಿ ಸಾತ್ವಿಕ ಜೀವನ ಸಾಗಿಸದೆ, ಕೇವಲ ಗುರುಗ್ರಂಥದ ಪ್ರತಿಯನ್ನು ಹೊಂದುವುದೇ ಒಂದು ಪುರುಷಾರ್ಥ ಎಂದು ನಂಬಿದ ಸಿಖ್‌ರ ಬಗ್ಗೆ ಗುರುವಿಗೆ ಬೇಸರ ತಂದಿತ್ತು. ಯಾಕೆಂದರೆ, ಸಿಖ್‌ರ ಕೆಲವರು ಧೀರ್‌ಮಲ್‌ನ ಮನೆಯಲ್ಲಿದ್ದ 'ಗುರುಗ್ರಂಥ ಸಾಹಿಬ್'

೧. P 246 History of Sikh by G.Singh

ವನ್ನು ಲೂಟಿ ಮಾಡಿದರು. ಈಗ ಬಾಕಾಲಾದಲ್ಲಿ ವಾಸ್ತವ್ಯ ಹೂಡಿದ್ದ ಗುರುವಿಗೆ ಸಂಗತಿ ಅರಿತೊಡನೆ, 'ಇದು ಒಂದು ಹತ್ತಿ ಉರಿಯುವ ಬೆಂಕಿಯ ಹಾಗೆ ಇದೆ. ಇದರಿಂದ ಯಾಕೆ ನಾವು ಪಾರಾಗಬಾರದು?' ಎಂದು ಹೇಳಿ ಗುರುಗ್ರಂಥದ ಪ್ರತಿಯನ್ನು ಬಿಯಾಸ್ ನದಿಗೆ ಬಿಸಾಡುವಂತೆ ತನ್ನ ಶಿಷ್ಯಂದಿರಿಗೆ ಆಜ್ಞಾಪಿಸಿದ. ೨ ಒಲ್ಲದ ಮನಸ್ಸಿನಲ್ಲಿ ಸಿಖ್ಖರು ಅದನ್ನು ನದಿಗೆ ಬಿಸಾಡಿದರು. ಆದರೆ ಅವರನ್ನು ಹಿಂಬಾಲಿಸುತ್ತಿದ್ದ ಧೀರ್‌ಮಲ್ ಗ್ರಂಥವನ್ನು ನೀರಿನಿಂದ ಮೇಲೆತ್ತಿ ಅದನ್ನು ಕಾಪಾಡಿ ತನ್ನ ಮನೆಯಲ್ಲಿ ಪುನಃ ಇರಿಸಿಕೊಂಡ.

ಬಾಲ್ಯದಲ್ಲಿ ಗುರು ತೇಘ್ ಬಹದೂರ್‌ನಿಗೆ ಶಸ್ತ್ರವಿದ್ಯೆಯನ್ನು ಹೇಳಿಕೊಡಲಾಗಿತ್ತು. ಅದರಿಂದಲೇ ಆತನಿಗೆ 'ತೇಘ್ ಬಹದೂರ್' ಎಂಬ ಹೆಸರು ಬಂದಿತ್ತು. 'ತೇಘ್ ಬಹದೂರ್' ಎಂದರೆ 'ಖಡ್ಗವೀರ' ಎಂಬ ಅರ್ಥ ಬರುತ್ತದೆ. ಆದರೆ ಈ ಖಡ್ಗವೀರ ಕ್ರಮೇಣ ಆಧ್ಯಾತ್ಮದತ್ತ ತನ್ನ ಮನಸ್ಸು ತಿರುಗಿಸಿ, ದೇವರ ಧ್ಯಾನ, ಜಪತಪಗಳಲ್ಲಿ ನಿರತನಾದ. ತೇಘ್ ಬಹದೂರ್‌ನನ್ನು 'ತ್ಯಾಗ್ ಮಲ್' ಎಂದು ಕರೆದರು ಜನರು.

ಈಗ ಗುರುಪೀಠ ಅಲಂಕರಿಸಿದ ಮೇಲೆ ತೇಘ್ ಬಹದೂರ್, ತನ್ನ ಪೂರ್ವಜ ಗುರುಗಳ ತರಹ ತಿರುಗಾಟದ ವ್ಯವಹಾರ ಪ್ರಾರಂಭಿಸಿದರು. ತನ್ನ ಪೂರ್ವಜರು ನಿರ್ಮಿಸಿದ ಕಿರಾತ್‌ಪುರದಲ್ಲಿ ನೆಲೆಸದೆ, ಸ್ವತಃ ಒಂದು ನೂತನ ನಗರ ನಿರ್ಮಿಸಿದ. ಈಗಿನ ಆನಂದಪುರ ಎಂದು ಕರೆಯಲಾದ ಪ್ರದೇಶದಲ್ಲಿ 'ಚೌಕ್ ನಾನಕೀ' ಎಂಬ ನಗರ ೧೬೬೫ರಲ್ಲಿ ನಿರ್ಮಿಸಿ, ಅಲ್ಲೇ ತಳ ಊರಿದರು. ಆ ಸ್ಥಳವನ್ನು ಅಲ್ಲಿನ ಒಬ್ಬ ಹಿಂದೂ ರಾಜನಿಂದ ಖರೀದಿಸಿದನೆಂದು ಹೇಳಲಾಗಿದೆ. ನಗರವನ್ನು ನಿರ್ಮಿಸಿ, ಅಲ್ಲಿಂದ ತಿರುಗಾಟ ಪ್ರಾರಂಭಿಸಿದ. ಪ್ರವಾಸ ಮಾಡಿದ ಸ್ಥಳಗಳಲ್ಲಿ ನೀರಿನ ಬಾವಿಗಳನ್ನು ನಿರ್ಮಿಸಿ ಅಲ್ಲಿನ ಜನರಿಗೆ ನೀರಿನ ಬವಣೆ ತಪ್ಪಿಸಿದ. ಬಡಜನರ ಸೇವೆ ಮಾಡಿ ಅವರ ಪ್ರೀತಿ ವಿಶ್ವಾಸ ಗಳಿಸಿದ. ಒಬ್ಬ ಶೂರ, 'ಖಡ್ಗವೀರ' ವೈರಾಗಿಯಾಗಿ, ಲೌಕಿಕ ಜೀವನದಲ್ಲೂ ಪಾಲ್ಗೊಂಡು, ಅಲ್ಲಿ ಕೂಡ ಮಿಂಚಿ ಜನರನುರಾಗಿಯಾಗಿ ಹೊರಹೊಮ್ಮಿದ ಕೀರ್ತಿ ಗುರು ತೇಘ್ ಬಹದೂರ್‌ನದಾಗಿತ್ತು. ಅವನ ಈ ಕಾರ್ಯಕ್ರಮಗಳಿಗಾಗಿ, ಅಪಾರ ಸಂಖ್ಯೆಯಲ್ಲಿ ಜನರು ಅವನ ಶಿಷ್ಯಂದಿರಾಗಿ ಹಿಂಬಾಲಿಸಿದರು.

---

೨. 'ಶಿಲೆಗೆ ನೀರೆರೆದು ಬೊಬ್ಬುಲಿಗೆ ಬೇಲಿಯನು ಕೆತ್ತೂಲೆಗೆ ಹೂವಿಕ್ಕಿ ಹಂದಿಗೆ ಚಂದನವ ಪೂಸಿ ಫಲವಾವುದೆಲೆ ಮರುಳೆ?' ಎಂದು ಕವಿ ರಾಘವಾಂಕ ನುಡಿದಂತೆ, ಕೇವಲ ಗ್ರಂಥ ಪೂಜೆ ಮಾಡಿ, ಅದರಿಂದ ಉಂಟಾದ ಈರ್ಷೆ, ವೈಮನಸ್ಸು, ಜಗಳ, ಗುರುಗಳ ಮನಸ್ಸು ಜರ್ಜರಿತಗೊಂಡಿದ್ದು, ಸಹಜವಾಗಿತ್ತು. ಯಾವುದೇ ಪೂಜಾರ್ಹ ಮತ್ತು ಒಂದು ಚಿಹ್ನೆಯಾಗಿ, ಜನರ ಮನಸ್ಸನ್ನು ಉಚ್ಚತೆಯೆಡೆ ಸಾಗಿಸಬೇಕಲ್ಲದೆ, ನೀಚ ಬುದ್ಧಿಯನ್ನು ಉದ್ರೇಕಿಸಿ, ಬುದ್ಧಿಹರಣ ಮಾಡಬೇಕಾಗಿರುವುದಿಲ್ಲ.

ಉತ್ತರ ಭಾರತದ ಪ್ರಮುಖ ಯಾತ್ರಾ ಸ್ಥಳಗಳಾದ ಕುರುಕ್ಷೇತ್ರ, ಪ್ರಯಾಗ, ಕಾಶಿ, ಗಯಾ ಇತ್ಯಾದಿಗಳ ಪ್ರವಾಸ ಮಾಡಿದ ಗುರು ತೇಘ್ ಬಹದೂರ್ ಪ್ರವಾಸ ಮಾಡಿದ ಸ್ಥಳಗಳಲ್ಲಿ ಅವನ ಪ್ರವಚನ ಕೇಳಿ ಆಕರ್ಶಿತರಾದ ಜನರನ್ನು ತನ್ನ ಮತಕ್ಕೆ ಸೇರಿಸಿಕೊಂಡ. ಅವನ ಪ್ರವಚನಗಳಲ್ಲಿ ಜಾತಿ, ಉಪಜಾತಿ ಪಂಗಡಗಳ ವಿರುದ್ಧ ಸಂದೇಶ ಸಾರಿದ. ಅವುಗಳ ಉಪಯುಕ್ತತೆಯ ಬಗ್ಗೆ ಸಂದೇಹ ವ್ಯಕ್ತಪಡಿಸಿ, ಮನುಕುಲ ಒಂದೇ ಎಂದು ಸಾರಿದ. ಜನರ ಮೂಢನಂಬಿಕೆ, ಬ್ರಾಹ್ಮಣರ ಅತಿ ಮಡಿವಂತಿಕೆ, ಅವರ ಅತಿ ಮೂರ್ಖತನದ ಜಾತೀಯತೆ, ವರ್ಣಾಶ್ರಮದ ಬಗ್ಗೆ ಇರುವ ನಂಬಿಕೆ ಮತ್ತು ಹೆಗ್ಗಳಿಕೆಗಳನ್ನು ಖಂಡಿಸಿದರು.

ಹಿಂದೂ ಯತ್ರಾಸ್ಥಳಗಳಲ್ಲಿನ ಗುಡಿಗಳನ್ನು ಸಂಧಿಸುವಾಗ, ಅಲ್ಲಿನ ಅರ್ಚಕರು ದೇವರಿಗೆ ಹೂವು ಹಣ್ಣು ಕಾಣಿಕೆ ನೀಡುವ ಸಂಪ್ರದಾಯವನ್ನು ಗುರುವಿಗೆ ನೆನಪಿಸಿ, ಅದರಂತೆ ನಡೆದುಕೊಳ್ಳಬೇಕೆಂಬ ಅವರ ಕೋರಿಕೆಗೆ ಗುರು ನೀಡಿದ ಉತ್ತರ ಅತ್ಯಂತ ಗಮನಾರ್ಹವಾಗಿದೆ :

'ಯಾರು ದೇವರಲ್ಲಿ ನಂಬಿಕೆಯನ್ನಿಟ್ಟಿರುತ್ತಾರೋ ಮತ್ತು ಯಾರಿಗೂ ಹಿಂಸೆ ನೀಡದೆ, ತಾವು ಗಳಿಸಿದ್ದನ್ನು ಇನ್ನೊಬ್ಬರೊಡನೆ ಹಂಚಿಕೊಂಡು, ಗೌರವದಿಂದ ಜೀವನ ಸಾಗಿಸುವರೋ, ಮತ್ತು ಇನ್ನೊಬ್ಬರ ವಿರುದ್ಧ ದ್ವೇಷ ಅಸೂಯೆ ಇರಿಸಿಕೊಳ್ಳುವುದಿಲ್ಲವೋ ಅಂತಹವರು ಯಾವ ಆಚಾರ ಎಸಗಬೇಕಾಗಿಲ್ಲ. ಅವರು ಶಾಶ್ವತವಾಗಿ ಆರೋಗ್ಯವಂತವಾಗಿರುತ್ತಾರೆ ಮತ್ತು ಅವರ ಪಿತೃಗಳು ತಮ್ಮ ಕರ್ಮಾನುಸಾರ ಫಲವನ್ನು ಅನುಭವಿಸುವಂತವರಾಗುತ್ತಾರೆ. ಅವರಿಗಾಗಿ ಯಾರೂ ಹರಿಸುವುದಾಗಲಿ ಅಥವಾ ಶಪಿಸುವುದಾಗಲಿ ಮಾಡಬೇಕಾಗಿಲ್ಲ.' ೩

ಗುರು ತೇಘ್ ಬಹದೂರ್ ಪಾಟ್ನಾದಲ್ಲಿದ್ದಾಗ, ತನ್ನ ಗರ್ಭಿಣಿ ಹೆಂಡತಿ ಮತ್ತು ಇತರ ಸಂಸಾರವರ್ಗದವರನ್ನು ಹೆಂಡತಿಯ ಸಹೋದರನ ಸುಪರ್ದಿಗೆ ವಹಿಸಿ, ತಾನು ಬಂಗಾಳ ಮತ್ತು ಅಸ್ಸಾಮ್ ಪ್ರಾಂತ್ಯಗಳ ಪ್ರವಾಸ ಕೈಗೊಂಡ. ಆದಿ ಗುರು ನಾನಕ ಈ ಪ್ರದೇಶಗಳಲ್ಲಿ ಪ್ರವಾಸ ಮಾಡಿದನಂತರ, ಗುರು ತೇಘ್ ಬಹದೂರ್ ಈ ಪ್ರದೇಶದಲ್ಲಿ ಪ್ರವಾಸ ಮಾಡಿದ ಪ್ರಥಮ ಗುರುವಾಗಿದ್ದರು.

ಢಾಕಾ ನಗರ (ಈಗಿನ ಬಾಂಗ್ಲಾ ದೇಶ)ದಲ್ಲಿ ಅವನಿಗೆ ಅಲ್ಲಿನ ಸಿಖ್ ಮಸಂದ್ ಬುಲಾಕೀ ಮತ್ತು ಇತರ ಶಿಷ್ಯರಿಂದ ಅಭೂತಪೂರ್ವ ಸ್ವಾಗತ ದೊರೆಯಿತು. ಅಲ್ಲಿಂದ ಅಸ್ಸಾಮ್ ಪ್ರಾಂತ್ಯದಲ್ಲಿ ಪ್ರವಾಸ ಮಾಡಿದಾಗ, ಅಲ್ಲಿ ಔರಂಗಜೇಬ್‌ನ ಸೈನ್ಯಾಧಿಕಾರಿ ರಾಜಾ ರಾಮ್ ಸಿಂಗ್ ಮತ್ತು ಅಸ್ಸಾಮ್‌ನ ರಾಜನ ಮಧ್ಯೆ ಜರುಗುತ್ತಿದ್ದ ಕಾಳಗ ನಿಲ್ಲಿಸುವುದರ ಮಧ್ಯಸ್ತಿಕೆ ವಹಿಸಿದೆನೆಂದು ಇತಿಹಾಸಕಾರರ ಹೇಳಿಕೆ. ಕೆಲವು

---

೩. 248 History of Sikhs by G. Singh

ಇತಿಹಾಸಕಾರರ ಪ್ರಕಾರ ಗುರು ತೇಘ್ ಬಹದೂರ್, ರಾಜಾ ರಾಮ್ ಸಿಂಗ್‌ನೊಂದಿಗೆ ಅಸ್ಸಾಮ್‌ಗೆ ಪಯಣಿಸಿದರು. ೪

(ನವೆಂಬರ್ ೧೬೬೧ ರಲ್ಲಿ ಬಂಗಾಳದ ಮೊಘಲ್ ರಾಜ್ಯಪಾಲ ಮೀರ್ ಜಮ್ಲಾನಿಂದ ಅಸ್ಸಾಮ್‌ನ್ನು ಆಳುತ್ತಿದ್ದ ಅಹೋಂ ರಾಜ್ಯದ ವಿರುದ್ಧ ಕದನ ಜರುಗಿಸಿದ. ಪ್ರಕೃತಿಯ ಕ್ರೂರ ವಿಕೋಪ ವಿಪರೀತ ಮಳೆ, ಚಳಿ, ಗಾಳಿ, ರೋಗ ಮತ್ತು ಆಹಾರಧಾನ್ಯಗಳ ಕೊರತೆಗಳಿಂದ ಮೊಘಲ್ ಸೈನ್ಯ ತತ್ತರಿಸಿತು. ಅಪಾರ ಸಾವು ನೋವುಗಳಿಂದ ತತ್ತರಿಸಿದ ಮೊಘಲ್ ಸೈನ್ಯ ಶಾಂತಿ ಸಂಧಾನಕ್ಕೆ ಮುಂದಾಯಿತು. ಅಹೋಂ ರಾಜ ಕೂಡ ಶಾಂತಿಗೆ ಒಪ್ಪಿದ. ಆದರೆ ಆ ಶಾಂತಿ ಒಪ್ಪಂದದಲ್ಲಿ ಮೊಘಲ್‌ರಿಗೆ ಚಿನ್ನ, ಬೆಳ್ಳಿ, ಆನೆ ಪಡೆಗಳಷ್ಟೇ ಅಲ್ಲದೆ ತನ್ನ ಮಗಳನ್ನು ನೀಡಿ ಆ ರಾಜ ಶಾಂತಿ ಒಪ್ಪಂದ ಮಾಡಿಕೊಂಡಿದ್ದು ವಿಪರ್ಯಾಸವಾಗಿತ್ತು. ರಾಜ್ಯದಲ್ಲಿ ಅಶಾಂತಿ, ರಾಜನ ಸಂಸಾರದಲ್ಲಿ ಒಡಕು, ರಾಜಪದವಿಗಾಗಿ ಕಚ್ಚಾಟ, ರಾಜ್ಯವನ್ನು ಅಂತಃಕಲಹಕ್ಕೆ ನೂಕಿ ಪರಕೀಯ ಮೊಘಲ್‌ರ ಆಕ್ರಮಣಕ್ಕೆ ಆಹ್ವಾನ ನೀಡಿತು ಎಂದಿದ್ದಾರೆ ಇತಿಹಾಸಕಾರರು.

(P 26 Later Mughals by Irvine [P 350 The Sikh Religion by Macauliffe)

ಗುರು ತೇಘ್ ಬಹದೂರ್ ೧೬೭೧ ಅಥವಾ ೧೬೭೨ ರಲ್ಲಿ ಆನಂದಪುರಕ್ಕೆ ಹಿಂದಿರುಗಿದಡಿಣ. ಅಲ್ಲಿ ಅವರ ಉಪದೇಶಕ್ಕೆ ಒಳಗಾದ ಹಲವಾರು ಹಿಂದೂ, ಮುಸ್ಲಿಮರು, ಸಿಖ್ ಮತಕ್ಕೆ ಸೇರ್ಪಡೆಯಾದರು. ಸುದ್ದಿ ಅರಿತ ಬಾದ್‌ಶಹಾ ಔರಂಗಜೇಬ್ ಕ್ರೋಧಗೊಂಡ. ಅವನನ್ನು ಕರೆಸಿದ. ಮತಾಂಧನಾದ ಔರಂಗಜೇಬ್ ಹಿಂದೂ ಮುಸ್ಲಿಮರು ಸಿಖ್‌ಮತ ಸೇರಲು ಅವಕಾಶ ಮಾಡಿಕೊಡುತ್ತಿದ್ದ ಗುರುವಿನ ಕಾರ್ಯ ಕಂಡು ಕೇಳಿ ಉದ್ರಿಕ್ತನಾದ. ಮೊದಲೇ ಸುನ್ನೀ ಇಸ್ಲಾಮ್‌ನ ಪರಮಭಕ್ತನಾಗಿದ್ದ ಔರಂಗಜೇಬ್, ಆ ಧರ್ಮವನ್ನು ಅಪಾರವಾಗಿ ನಂಬಿ, ಪಾಲಿಸುತ್ತಿದ್ದ. ತನ್ನ ಸಹೋದರ ದಾರಾ ಶುಕೋ ಮತ್ತು ಧರ್ಮಭ್ರಷ್ಟ ಮತ್ತು ನೀತಿಗೆಟ್ಟ ಇಬ್ಬರು ಸಹೋದರರನ್ನು ಕೊಲೆ ಮಾಡಿ ಸಿಂಹಾಸನವನ್ನೇರಿದವ ಸಿಖ್ ಗುರು ತೇಘ ಬಹದೂರ್‌ನನ್ನು ಸುಮ್ಮನೆ ಇರಗೊಡಲಾರದಾದ. ಔರಂಗಜೇಬ್‌ನ ತಂದೆ ಶಹಜಹಾನ್ ಕೂಡ ಸುನ್ನೀ ಇಸ್ಲಾಮ್‌ನ ಪರಮಭಕ್ತನಾಗಿ ಕಂಗೊಳಿಸಿದ್ದನಷ್ಟೆ ಅವನು ತನ್ನ ಆಳ್ವಿಕೆಯಲ್ಲಿ 'ಕಾಶೀಕ್ಷೇತ್ರದ ೭೬ ಹೊಸ ಹಿಂದೂ ಗುಡಿಗಳ ನಿರ್ನಾಮ ಮಾಡಿದ್ದ.' 'ಅತಿಸುಂದರ ಓರ್‌ಛೆ ದೇವಾಲಯವನ್ನು ಕೆಡವಿ ನೆಲಸಮ ಮಾಡಿದ.' ಯಾವ ಹಿಂದೂ ವ್ಯಕ್ತಿಯೂ

---

೪. P 249 Life of Sikhs by G. Singh

೫. ಮೀರ್ ಜಮ್ಲಾನ ನಿಜವಾದ ನಾಮಧೇಯ ಉಬೈದುಲ್ಲಾ (೧೬೭೦–) ಈತ ಸಮರ್‌ಖಂಡದ ನಿವಾಸಿಯಾಗಿದ್ದ. ಭಾರತಕ್ಕೆ ವಲಸೆ ಬಂದು, ಅಲಂಗೀರ್‌ನಿಂದ ಬಂಗಾಳದ ಢಾಕಾ ನಗರದ ಖಾಜಿಯಾಗಿ ನೇಮಕಗೊಂಡ. ಮೊಘಲ್ ಬಾದ್‌ಶಹಾನ ಮಕ್ಕಳಾದ ಅಜಿಮ್ ಶಾ ಮತ್ತು ಫರೂಖ್‌ಸಿಯಾರ್‌ನ ಮನಸ್ಸು ಗೆದ್ದು, ವಿವಿಧ ಹುದ್ದೆ ಅನೇಕ ಪ್ರಶಸ್ತಿ, ಪುರಸ್ಕಾರ ಗಳಿಸಿ ಪ್ರಖ್ಯಾತಗೊಂಡ.

ಮುಸ್ಲಿಮ್ ಕನ್ಯೆಯನ್ನು ಲಗ್ನವಾಗುವುದನ್ನು ನಿಷೇಧಿಸಿದ. ಆದರೆ ಆತ ಮುಸ್ಲಿಮ್‌ನಾಗಿ ಮತಾಂತರಗೊಂಡರೆ ಆ ಲಗ್ನಕ್ಕೆ ಅನುಮತಿ ನೀಡಲಾಗುತ್ತಿತ್ತು. ಆದರೆ ತನ್ನ ಕೊನೆಗಾಲದಲ್ಲಿ ಅವನು ತೀಕ್ಷ್ಣತಮದ ಮತೀಯ ಭಾವನೆಗಳನ್ನು ಮೆದುವಾಗಿಸಿದ. ತನ್ನ ಮುದ್ದಿನ ಮಗ ದಾರಾ ಶಿಖೋವ್ ಧರ್ಮಗಳ ಬಗ್ಗೆ ಉದಾರತನ ಮತ್ತು ಹೃದಯವೈಶಾಲ್ಯತೆ ತೋರಿಸಿದರೂ ಅವನ ನಂಬಿಕೆ ಮತ್ತು ವಿಚಾರಣೆಗೆ ಅಡ್ಡಿ ಮಾಡಲಿಲ್ಲ. ಅವನ ಸೂಫೀ ವಿಚಾರಧಾರೆಗಳಿಗೆ, ಅವನು ಹೊಂದಿದ್ದ ಹಿಂದೂ ಶಾಸ್ತ್ರ, ತತ್ತ್ವವಿಚಾರಗಳ ಬಗ್ಗೆ ಕೈಗೊಂಡ ಅನೇಕ ಕಾರ್ಯಗಳಾದ ಉಪನಿಷತ್‌ಗಳ ತರ್ಜುಮೆ ಇತ್ಯಾದಿಗಳ ಬಗ್ಗೆ ವಿರೋಧ ತೋರಿಸಲಿಲ್ಲ. ಅವನ ಆಸ್ಥಾನದಲ್ಲಿ ಹಿಂದೂ ವಿದ್ವಾಂಸರಿಗೆ ಮತ್ತು ಸಂಗೀತಗಾರರಿಗೆ ಆಶ್ರಯ ನೀಡಿ ಗೌರವಿಸಿದ.

ಆದರೆ ಅವನ ಮಗ ಔರಂಗಜೇಬ್ ಮಾತ್ರ ಅತ್ಯಂತ ಕ್ರೂರತನದ ಮತಾಂಧತೆ ಮತ್ತು ಇತರ ಧರ್ಮವಿರೋಧಿಯಾಗಿ ಹೊರಹೊಮ್ಮಿದ. ಅವನ ರಕ್ತದಲ್ಲಿ ಹಿಂದೂ ರಕ್ತ ಹರಿಯುತ್ತಿದ್ದರೂ, ಮಂಗೋಲ್‌ರ ಕ್ರೂರ ರಕ್ತಕಣಗಳು ಹೆಚ್ಚಾಗಿದ್ದವು. ಔರಂಗಜೇಬ್‌ನ ತಂದೆಯ ತಾಯಿ (ಶಹಜಹಾನ್‌ನ ತಾಯಿ) ಹಿಂದೂ ರಾಜಪುತ್ರ ವಂಶಕ್ಕೆ ಸೇರಿದವಳಾಗಿದ್ದಳು. ಶಹಜಹಾನ್‌ನ ತಾತ ಅಕ್ಬರ್‌ನ ಹೆಂಡತಿ ಹಿಂದೂ ಆಗಿದ್ದಳು. ಔರಂಗಜೇಬ್‌ನ ಹಲವಾರು ಹೆಂಡತಿಯರ ಪೈಕಿ ನವಾಬ್ ಬಾಯಿ ಹಿಂದೂ ರಾಜಪುತ್ರ ರಾಜಕುಮಾರಿಯಾಗಿದ್ದಳು. ಅಚ್ಚುಮೆಚ್ಚಿನ ಉಪಪತ್ನಿ ಹಿರಾಬಾಯಿ ಹಿಂದೂ ಆಗಿದ್ದಳು. ಇಷ್ಟೆಲ್ಲಾ ಇದ್ದರೂ ಔರಂಗಜೇಬ್ ಮಾತ್ರ ಪರಮತಸಹಿಷ್ಣು ಆಗಿರಲಿಲ್ಲ. ಅವನು ಸಿಂಹಾಸನವನ್ನು ಏರಿದ ಕೂಡಲೆ ನೂತನ ಹಿಂದೂ ದೇವಾಲಯಗಳ ನಿರ್ಮಾಣವನ್ನು ನಿರ್ಬಂಧಿಸಿದ. ನೂತನವಾಗಿ ನಿರ್ಮಿಸಲ್ಪಟ್ಟ ಗುಡಿಗಳನ್ನು ನಾಶಪಡಿಸಿದ. ೧೬೬೯ರ ಏಪ್ರಿಲ್ ತಿಂಗಳಲ್ಲಿ ಒಂದು ಫರ್ಮಾನ್‌ನನ್ನು ಹೊರಡಿಸಿ ಕಾಶಿ, ಥಟ್ಟಾ ಮತ್ತು ಮುಲ್ತಾನ್ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿರುವ ಸರ್ವ ಮಠ, ಶಾಲೆ, ಗುಡಿಗಳ ನಾಶಮಾಡಿಸಿದ. ಉತ್ತರಭಾರತದ ಬಹುತೇಕ ಪ್ರದೇಶಗಳಲ್ಲಿ ಅವನು ಗುಡಿಗಳ ನಾಶ ಕೈಗೊಂಡ. ಗುಡಿಗಳ ನಾಶವಾದ ಮೇಲೆ ಅಲ್ಲಿ ದೊರೆತ ದೇವರ ಪ್ರತಿಮೆಗಳನ್ನು, ಆಗ್ರಾದ ನವಾಬ್ ಬೇಗಮ್ ಮಸೀದಿಯ ಮೆಟ್ಟಿಗಲುಗಳ ಮೇಲೆ ಇರಿಸಿ ಅವುಗಳ ಮೇಲೆ ಮುಸ್ಲಿಮರು ನಡೆದುಹೋಗುವಂತೆ ಮಾಡಿದನು. ರಾಜಾಸ್ಥಾನದ ಹಲವಾರು ಗುಡಿಗಳ ನಾಶದಿಂದ ದೊರೆತ ವಿಗ್ರಹಗಳನ್ನು ಜುಮ್ಮಾ ಮಸೀದಿಯ ಮೆಟ್ಟಿಲುಗಳ ಮೇಲೆ ಚೆಲ್ಲಿ ಅವುಗಳ ಮೇಲೆ ಮುಸ್ಲಿಮ್ ಭಕ್ತರು ನಡೆದು ಅವು ಸವೆದು ಹಾಳಾಗುವಂತೆ ಮಾಡಿದನು. ಹಿಂದೂಗಳು ದೀಪಾವಳಿ ಹಬ್ಬವನ್ನು ದೀಪ ಹಚ್ಚಿ ಅಲಂಕರಿಸಿ ಆಚರಿಸುವುದನ್ನು ನಿರ್ಬಂಧಿಸಿದನು. ೧೬೬೮ರಲ್ಲಿ ಹಿಂದೂ ಜಾತ್ರೆಗಳನ್ನು ನಿರ್ಬಂಧಿಸಿದನು. ೧೬೭೧ರಲ್ಲಿ ರಾಜ್ಯದ ಎಲ್ಲಾ ಪಟೇಲ್ ಮತ್ತು ಶಾನುಭೋಗರರ ಕಾರ್ಯವನ್ನು ಮುಸ್ಲಿಮ್‌ರಿಗೆ ವಹಿಸಿದ. ಹಿಂದೂ ತಾಲುಕ್‌ದಾರರು ಮತ್ತು ಪೇಶ್ಕಾರರನ್ನು ಕೆಲಸದಿಂದ ವಜಾ ಮಾಡಿದ. ಗುಜರಾತ್ ಪ್ರಾಂತ್ಯದಲ್ಲಿ

ಧಾರ್ಮಿಕ ದತ್ತಿ ಪಡೆದ ಜಮೀನುಗಳನ್ನು ಹಿಂದೂಗಳಿಂದ ವಾಪಸ್ಸು ಪಡೆದ. ೭

ಔರಂಗಜೇಬ್ ತೆಗೆದುಕೊಂಡ ಇಂತಹ ಧರ್ಮವಿರೋಧಿ ಕಠಿಣ ಕಾರ್ಯಗಳಿಂದ ಹಿಂದೂಗಳ ವಿರೋಧ ಎದುರಿಸಬೇಕಾಯಿತು. ೧೬೬೯ರಲ್ಲಿ ಉತ್ತರ ಭಾರತದ ಜಾಟ್ ಸಮುದಾಯದವರು ದಂಗೆ ಎದ್ದರು. ಆದರೆ ಅವರಲ್ಲಿ ನಾಯಕತ್ವದ ಅಭಾವದ ಕಾರಣ, ಅವರ ಹುಟ್ಟು ಅಡಗಿಸಿದ ಔರಂಗಜೇಬ್ ಸುಮಾರು ೫೦೦೦ ಜಾಟ್‌ಗಳ ಹತ್ಯೆ ಮಾಡಿದ ಮತ್ತು ೭೦೦೦ ಜಾಟ್‌ಗಳ ಮತಾಂತರ ಮಾಡಿದ.

ಹಿಂದೂ ಪಂಗಡವಾದ ಸತ್ನಾಮಿಗಳು ದಂಗೆ ಎದ್ದರು. ಪಂಜಾಬ್‌ನ ನಾರ್‌ನಲ್ ಮತ್ತು ಮೇವಾತ್ ಭಾಗಗಳಲ್ಲಿ ಅವರು ಪ್ರಬಲರಾಗಿದ್ದರು. ಸಾಮಾನ್ಯ ಕೃಷಿಕಾರರಾಗಿದ್ದರೂ, ಬೈರಾಗಿಗಳಂತೆ ಜೀವನ ಜರುಗಿಸಿದರೂ ಅವರು ಆತ್ಮರಕ್ಷಣೆಗಾಗಿ ಆಯುಧಪಾಣಿಗಳಾಗಿದ್ದರು. ಅವರ ದಂಗೆಯನ್ನು ಕೂಡ ಔರಂಗಜೇಬ್ ಹತ್ತಿಕ್ಕಿದ.

ಔರಂಗಜೇಬ್ ದಕ್ಷಿಣದಲ್ಲಿ ಬಹುಪ್ರಸಿದ್ಧ ಶಿವಾಜಿಯಿಂದ ವಿರೋಧ ಎದುರಿಸಿದ. ಆದರೆ ರಾಜಪುತ್ರ ರಾಜಾ ಜೈ ಸಿಂಗ್‌ನ ಸಹಾಯದಿಂದ ಶಿವಾಜಿಯನ್ನು ಕುಟಿಲತೆಯಿಂದ ದೆಹಲಿಗೆ ಕರೆತಂದು ಬಂಧಿಸಿದ. ಆದರೆ ದೈವವಶಾತ್ ಶಿವಾಜಿ ಮತ್ತು ಅವನ ೮ ವರ್ಷದ ಮಗ ಸಾಂಭಾಜಿ ಬಾದ್‌ಶಹಾನ ಹಿಡಿತದಿಂದ ತಪ್ಪಿಸಿಕೊಂಡು ದಕ್ಷಿಣಕ್ಕೆ ಹಿಂದಿರುಗಿದ್ದು ಸರ್ವವಿದಿತ.

ಮೊಘಲ್‌ರ ಆಕ್ರಮಣವನ್ನು ಹಿಮ್ಮೆಟ್ಟಿಸುವಲ್ಲಿ ವಿಫಲರಾದವರು ರಾಜಸ್ಥಾನದ ಅನೇಕ ರಾಜ ಮಹಾರಾಜರು. ಭಾರತೀಯರಲ್ಲಿ ಕಾಣುವ ಅನೈಕ್ಯತೆಯ ರೋಗ ಅವರನ್ನು ಕಾಡಿತ್ತು. ರಾಜಪುತ್ರರಲ್ಲಿ ಒಗ್ಗಟ್ಟಿನ ಕೊರತೆಯನ್ನು ಸದುಪಯೋಗಿಸಿಕೊಂಡ ಮುಸ್ಲಿಮರು ಅವರನ್ನು ತಮ್ಮ ಸಾಮಂತರನ್ನಾಗಿ ಮಾಡಿಸಿಕೊಂಡು, ಅವರ ಸೈನ್ಯಶಕ್ತಿಯನ್ನು ಇತರ ಹಿಂದೂ ರಾಜ್ಯಗಳನ್ನು ಕಬಳಿಸುವ ಕಾರ್ಯಗಳಲ್ಲಿ ಸಫಲಗೊಂಡರು. ಅವರ ಈ ನೀತಿಯನ್ನು ಕ್ರಮೇಣ ಬ್ರಿಟಿಷ್‌ರೂ ಕೂಡ ಭಾರತವನ್ನು ಆಳುವುದರಲ್ಲಿ ಉಪಯೋಗಿಸಿದ್ದನ್ನು ಕಾಣಬಹುದಾಗಿದೆ.

ಔರಂಗಜೇಬ್‌ನ ತೀಕ್ಷ್ಣವಾದ ಮತಾಂಧತೆ, ದೇಶದ ಹಿಂದೂಗಳನ್ನು ಮತಾಂತರಗೊಳಿಸುವ ನಿಟ್ಟಿನಲ್ಲಿ ಅತ್ಯಂತ ಕಟ್ಟುನಿಟ್ಟಾಗಿ, ಮನಃಪೂರ್ವಕವಾಗಿ ಅತ್ಯಂತ ನಿಷ್ಠೆಯಿಂದ ಕಾರ್ಯವೆಸಗುವಾಗ, ಸಾಮಾನ್ಯ ಹಿಂದೂಗಳು ಮತಾಂತರಗೊಳ್ಳಲು ವಿರೋಧ ವ್ಯಕ್ತಪಡಿಸಿದರೂ, ಬಾದ್‌ಶಹಾನ ಅನೇಕ ರೀತಿಯ ಕುಟಿಲತೆ, ಬಲವಂತಿಕೆ, ಪ್ರಾಣಭೀತಿ ಒಡ್ಡುವಿಕೆ ಇತ್ಯಾದಿಗಳಿಂದ ಮತಾಂತರಗೊಂಡರು. ಈ ನಿಟ್ಟಿನಲ್ಲಿ ಬಾದ್‌ಶಹಾನಿಗೆ ಅಡ್ಡಿ ಆತಂಕ ಒದಗಿ ಬಂದಿದ್ದು, ಬ್ರಾಹ್ಮಣವರ್ಗದವರಿಂದ. ಜನಸಾಮಾನ್ಯರು ಬಲವಂತದ ಮತಾಂತರಕ್ಕೆ ಒಪ್ಪಲಿಲ್ಲ. ಕಾರಣ ಅವರ

---

೭. P.253 History of Sikhs by G. Singh

ಧರ್ಮಗುರುಗಳು, ಪುರೋಹಿತ ವರ್ಗದವರು, ಆಧ್ಯಾತ್ಮ ಗುರುಗಳು ಬ್ರಾಹ್ಮಣರಾದ್ದರಿಂದ, ಅವರ ಮತಾಂತರಾಗದೆ ಹೋದ ಪಕ್ಷದಲ್ಲಿ ತಾವು ಇಸ್ಲಾಮಿಕ್ ಧರ್ಮ ಸ್ವೀಕರಿಸುವ ಸ್ಥಿತಿಯಲ್ಲಿಲ್ಲ ಎಂದು ಹೇಳಿದರು. ಆಗ ಬಾದ್‌ಶಹಾ ಕಾಶಿ, ಮಥುರಾ ಮತ್ತು ಇತರ ಪವಿತ್ರ ಸ್ಥಳಗಳಲ್ಲಿದ್ದ ಬ್ರಾಹ್ಮಣವರ್ಗದವರ ಮೇಲೆ ಆಕ್ರಮಣ ಎಸಗಿದ. ಅವರನ್ನು ಮತಾಂತರಗೊಳಿಸುವ ನಿಟ್ಟಿನಲ್ಲಿ ಬಲವಂತ ಮಾಡಿದ. ಕಾಶಿಯ ಬ್ರಾಹ್ಮಣರು ಸರ್ವರೀತಿಯಲ್ಲೂ ಶ್ರೇಷ್ಠತೆ ಮತ್ತು ಪವಿತ್ರತೆ ಉಳಿಸಿಕೊಂಡಿದ್ದರಿಂದ ಇತರ ಬ್ರಾಹ್ಮಣರು ಅವರ ಮೊರೆ ಹೋದರು. ಬಾದ್‌ಶಹಾನಿಗೆ ಈಗ ಅರಿವಾಗತೊಡಗಿತ್ತು, ತಾನು ಕಾಶ್ಮೀರದ ಬ್ರಾಹ್ಮಣರನ್ನು ಮತಾಂತರಗೊಳಿಸಿದರೆ, ಇತರ ಬ್ರಾಹ್ಮಣರನ್ನು ಮತಾಂತರಗೊಳಿಸುವುದು ಸುಲಭ ಸಾಧ್ಯ ಎಂದು. ಕಾಶ್ಮೀರದ ಮೊಘಲ್ ರಾಜ್ಯಪಾಲ ಇಫ್ತಿಕಾರ್ ಖಾನ್ ಕಾಶ್ಮೀರಿ ಬ್ರಾಹ್ಮಣರನ್ನು ಹಿಡಿದು ಬಲವಂತದಿಂದ ಮತಾಂತರಗೊಳಿಸಲು ಪ್ರಾರಂಭಿಸಿದ. ಅವರು ವಿರೋಧ ವ್ಯಕ್ತಪಡಿಸಿದಾಗ, ಅವರ ಕಗ್ಗೊಲೆ ಜರುಗಿಸಿದ. ಹೆದರಿದ ಬ್ರಾಹ್ಮಣರು ಕಾಶ್ಮೀರ ತ್ಯಜಿಸಿ ಓಡಿದರು.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕಾಶ್ಮೀರಿ ಬ್ರಾಹ್ಮಣರ ೫೦೦ ಮಂದಿಯ ಒಂದು ತಂಡ ಕೃಪಾರಾಮ್ ಎಂಬಾತನ ಮುಂದಾಳತ್ವದಲ್ಲಿ, ಪಂಜಾಬ್‌ನ ಆನಂದಪುರದಲ್ಲಿ ತಂಗಿದ್ದ ಗುರು ತೇಘ್ ಬಹದ್ದೂರ್‌ನ ಬಳಿ ಬಂದು ತಮ್ಮ ಕಷ್ಟ, ನಷ್ಟ ತೊಂದರೆಗಳನ್ನು ತೋಡಿಕೊಂಡರು. ತಮ್ಮನ್ನು ಈ ಸಂಕಷ್ಟದಿಂದ ಪಾರು ಮಾಡುವಂತೆ ಕೇಳಿಕೊಂಡರು. ಆಗ ಗುರು ತೇಘ್ ಬಹದೂರ್ ಕೆಲಕಾಲ ಯೋಚಿಸಿ ಹೇಳಿದರು. "ನೀವು ಹೋಗಿ ಮೊಘಲ್ ರಾಜ್ಯಪಾಲನಿಗೆ ಹೇಳಿರಿ, 'ನಮ್ಮ ಗುರು ತೇಘ್ ಬಹದೂರ್‌ನನ್ನು ನೀವೇನಾದರೂ ಇಸ್ಲಾಮ್ ಮತಕ್ಕೆ ಮತಾಂತರ ಮಾಡಿದರೆ, ನಾವು ಕೂಡ ಮತಾಂತರಗೊಳ್ಳುವೆವು".

ಗುರು ತೇಘ್ ಬಹದೂರ್‌ರವರ ಆ ಉದಾತ್ತ ನುಡಿಮುತ್ತುಗಳು ಅವನು ಒಬ್ಬಂಟಿಗನಾಗಿ ಒಬ್ಬ ಬಲಿಷ್ಠ ಚಕ್ರಾಧಿಪತಿಯ ಎದುರು ನಿಂತು ಹೋರಾಟಕ್ಕೆ ಸಿದ್ಧನಾಗಿದ್ದು ಚರಿತ್ರಾರ್ಹವಾಗಿತ್ತು. ಸಂಕಷ್ಟಕ್ಕೆ, ಸಾವು ಬದುಕಿನ ನಡುವೆ ನಲುಗುತ್ತಿದ್ದ, ಅತೀವ ದುರ್ದಶೆ ಮತ್ತು ಅನೀತಿ ಅಧರ್ಮಚಿಂತನೆಗಳ ಆಡಳಿತಗಾರರ ದುರ್ನಡತೆಯ ವ್ಯವಹಾರಗಳ ಮಧ್ಯ ನರಳುತ್ತಿದ್ದರೂ, ನ್ಯಾಯ. ನೀತಿ, ಧರ್ಮ, ಶಾಂತಿಯುತ ಜೀವನ ಜರುಗಿಸುತ್ತಿದ್ದ ಒಂದು ಜನಾಂಗದ ರಕ್ಷಣೆಗೆ ಗುರು ಮನಸ್ಸು ಮಾಡಿದ್ದು ಅತ್ಯಂತ ರೋಚಕ ಹಾಗೂ ಉತ್ಕೃಷ್ಟ ರೀತಿಯದಾಗಿತ್ತು. ಸಂಕಷ್ಟದಲ್ಲಿರುವ ಜನಾಂಗಕ್ಕೆ ತಾನು ಯಾವ ಬಲಿದಾನಕ್ಕೂ ಸೈ ಎಂಬ ಮನೋಭಾವನೆ ಗುರು ತಾಳಿದ್ದು ಅತ್ಯಂತ ಮನೋಜ್ಞವಾಗಿದ್ದು, ಅವರು ತೆಗೆದುಕೊಂಡ ನಿಲುವು ಒಂದು ಚಕ್ರಾಧಿಪತ್ಯದ ಬುಡವನ್ನೇ ಅಲುಗಾಡಿಸಿ ನಿರ್ನಾಮವಾಗುವ ಸ್ಥಿತಿಗೆ ಒಡ್ಡಿತು ಎಂದು ಹೇಳಲಾಗಿದೆ.

ಗುರು ತೇಘ್ ಬಹದೂರ್‌ರ ಹೇಳಿಕೆ ದೆಹಲಿ ಬಾದ್‌ಶಹಾ ಔರಂಗಜೇಬ್‌ನಿಗೆ ತಲುಪಿದಾಗ, ಅವನು ಕೆರಳಿ ಕೆಂಡವಾದ. ಒಡನೆಯೇ ಗುರುವನ್ನು ಬಂಧಿಸಿ ದೆಹಲಿಗೆ

ಎಳೆದು ತರಲು ಆಜ್ಞೆ ಹೊರಡಿಸಿದ. ಬಾದ್‌ಶಹಾ ಗುರುವನ್ನು ಬಂಧಿಸಿ, ದೆಹಲಿಗೆ ಕರೆತರಲು ಆಜ್ಞೆ ನೀಡಿದ ಕಾರಣ ಗುರು ತನ್ನ ಅಧಿಕಾರವನ್ನು ಮೀರಿ, ತನ್ನ ಶಿಷ್ಯಂದರಿಂದ ಕಪ್ಪ ಕಾಣಿಕೆ ವಸೂಲು ಮಾಡಿ, ರಾಜ ಮಹಾರಾಜರ ಹಾಗೆ ವರ್ತಿಸುತ್ತಿರುವ ರೀತಿಯಿಂದ ಎಂದು ಕೆಲವು ಇತಿಹಾಸಕಾರರ ಹೇಳಿಕೆ ಇದೆ. ೮

ಅದೇ ಕಾರಣದಿಂದ ಗುರುವನ್ನು ಬಂಧಿಸಿ ತನ್ನ ಮುಂದೆ ನಿಲ್ಲಿಸಿದಾಗ, ಒಬ್ಬ ಧರ್ಮ ಗುರುವಿಗೆ ಇರಬೇಕಾದ ಒಂದು ಪವಾಡದ ಮೂಲಕ ತನ್ನ ಅಲೌಕಿಕ ಸಾಮರ್ಥ್ಯ ತೋರಿಸುವಂತೆ ಬಾದ್‌ಶಹಾ ಕೇಳಿದಾಗ, ಗುರು ಉತ್ತರಿಸಿದ : 'ಪ್ರೇಮಿಗಳ ತಲೆಯಲ್ಲಿದೆ ಪವಾಡ, ನಿನ್ನ ಕತ್ತಿಯನ್ನು ನನ್ನ ಕತ್ತಿನ ಮೇಲೆ ಇರಿಸು'. ಗುರುವಿನ ಉತ್ತರ ಕೇಳಿ ಬಾದ್‌ಶಹಾನ ಕೋಪ ನೆತ್ತಿಗೇರಿತು. ಅವನ ತಲೆ ತೆಗೆಯುವುದಕ್ಕೆ ಆಜ್ಞಾಪಿಸಿದ. ೯

ಆಧುನಿಕ ಇತಿಹಾಸಕಾರರ ಪ್ರಕಾರ, ಗುರುವನ್ನು ಬಂಧಿಸಿದ ಬಾದ್‌ಶಹಾನ ಸೈನಿಕರು, ಸರ್‌ಹಿಂದ್‌ನಲ್ಲಿ ನಾಲ್ಕು ತಿಂಗಳ ಕಾಲ ಸೆರೆಯಲ್ಲಿಟ್ಟು, ಅನಂತರ ದೆಹಲಿಗೆ ಕರೆದೊಯ್ಯಲಾಯಿತು.

ಬಾದ್‌ಶಹಾ ಅವರನ್ನು ವಿಚಾರಣೆಗೆ ಗುರಿಪಡಿಸಿ, ಯಾಕೆ ಅವನನ್ನೇ 'ಗುರು' ಮತ್ತು 'ಸಚ್ಚಾ ಬಾದ್‌ಶಹಾ' ಎಂದು ಜನರು ಕರೆಯುತ್ತಾರೆ ಎಂದು ಕೇಳಿ, ಅವನು ನಿಜವಾಗಲೂ ಧರ್ಮಗುರುವಾಗಿದ್ದ ಪಕ್ಷದಲ್ಲಿ ಒಂದು ಪವಾಡ ಮಾಡಿ ತೋರಿಸು ಎಂದು ಹೇಳಿದಾಗ, ಗುರು ಉತ್ತರಿಸಿದರು : 'ಹಿಂದೂ ಧರ್ಮ ನನ್ನ ಧರ್ಮವಾಗಿಲ್ಲದಿರಬಹುದು ಮತ್ತು ವೇದ ಅಥವಾ ಬ್ರಾಹ್ಮಣರ ಪ್ರಾಮುಖ್ಯತೆಯನ್ನು ನಂಬದಿರಬಹುದು, ವಿಗ್ರಹಾರಾಧನೆ ಅಥವಾ ಜಾತಿ ಅಥವಾ ಪವಿತ್ರಯಾತ್ರೆ ಅಥವಾ ಆಚಾರಗಳನ್ನು ನಂಬದಿರಬಹುದು, ಆದರೆ ಹಿಂದೂಗಳು ತಮ್ಮ ಧರ್ಮವನ್ನು ತಮ್ಮ ಇಷ್ಟದ ಪ್ರಕಾರ ಆಚರಿಸುವ ಹಕ್ಕಿಗಾಗಿ ಅವರ ಪರವಾಗಿ ಹೋರಾಡುತ್ತೇನೆ !'

ಗುರುವಿನ ಮಾತುಗಳು, ಮತಾಂಧನಾದ ಔರಂಗಜೇಬ್‌ನ ಕಿವಿಗಳಿಗೆ ಸಿಡಿಲಿನಂತೆ ಅಪ್ಪಳಿಸಿದವು.

'ಸಚ್ಚಾ ಬಾದ್‌ಶಹಾ' (ನಿಜವಾದ ಬಾದ್‌ಶಹಾ) ಎಂದು ಏಕೆ ಕರೆಸಿಕೊಳ್ಳುವಿ ಎಂದು ಕೇಳಿದ್ದಕ್ಕೆ ಗುರುವಿನ ಉತ್ತರ ಹೀಗಿತ್ತು :

'ಪ್ರತಿಯೊಬ್ಬ ರಾಜನೂ ಅಳಿದುಹೋಗುವುದು ಖಂಡಿತ, ಆದರೆ ದೇವ ವಾಕ್ಯವಾಗಲೀ ಅಥವಾ ಅವನ ದಾಸ, ಸಂತನಾಗಲಿ ಅಳಿಯುವುದಿಲ್ಲ. ಆದ್ದರಿಂದ ಜನರು ನನ್ನನ್ನು ಮಾತ್ರವಲ್ಲದೆ, ಎರಡು ಶತಮಾನಗಳ ಕಾಲದಲ್ಲಿ ನನ್ನ ಹಿಂದೆ ಉದಯಿಸಿದ ನನ್ನ

---

೮. P-36 History of the Sikhs by Court

೯. P-257 History of Sikhs by G.Singh

ವಂಶದವರನ್ನು ಕೂಡ 'ಸತ್ಯರಾಜ' ಎಂದು ಕರೆದರು. ಅವರೆಲ್ಲಾ ತಮ್ಮನ್ನು ಕ್ಷಣಿಕ ಹಾಗೂ ಅಲೌಕಿಕಕ್ಕೆ ಜೋಡಿಸಿಕೊಳ್ಳದೆ, ಶಾಶ್ವತ ಮತ್ತು ಸಾವಿಲ್ಲದ ದೈವಕ್ಕೆ ಜೋಡಿಸಿಕೊಂಡರು.'

ಪವಾಡ ಎಸಗುವುದು ಚಮತ್ಕಾರಿಗಳ ಮಂಕುಬೂದಿ ಎರಚುವ ಕಾರ್ಯ. ದೇವತಾ ಮನುಷ್ಯರು ದೈವೇಚ್ಛೆಗೆ ತಲೆಬಾಗುವರು' ಎಂದು ಸಾರಿದರು ಗುರು.

ಗುರುವಿನ ಮಾತುಗಳಿಂದ ಕೋಪ ಉಕ್ಕೇರಿತು ಅಧರ್ಮೀ ನೀಚ ಔರಂಗಜೇಬ್‌ನಿಗೆ. ತಂದೆ ಮತ್ತು ಸಹೋದರರ ಕೊಲೆ ಮಾಡಿದ ಬಾದ್‌ಶಹಾ ಗುರುವಿನ ರಕ್ತ ಹರಿಸಲು ತಡಮಾಡಲಿಲ್ಲ. ಆದರೆ ಗುರುವಿನ ವಧೆ ಮಾಡುವ ಮೊದಲು ಇಸ್ಲಾಮ್ ಧರ್ಮ ಸ್ವೀಕರಿಸುವಂತೆ ಕೇಳಿದ. ನಿಜವಾದ ಧರ್ಮ ಇಸ್ಲಾಮ್ ಸ್ವೀಕರಿಸಿದರೆ ಪ್ರಾಣ ಉಳಿಸಿಕೊಳ್ಳಬಹುದೆಂದ. ಆದರೆ ಗುರು ತೇಘ್ ಬಹದೂರ್‌ನ ಉತ್ತರ ಮಹತ್ವಪೂರ್ಣವಾಗಿತ್ತು.

"ನನಗೆ ಒಂದೇ ಒಂದು ಧರ್ಮವಿದೆ. ಅದು ದೇವರ ಧರ್ಮವಾಗಿದೆ. ಯಾರೇ ಆ ಧರ್ಮಕ್ಕೆ ಸೇರಿದವರಾಗಿದ್ದರೆ, ಆತ ಹಿಂದೂ ಆಗಲಿ ಅಥವಾ ಮುಸ್ಲಿಮ್‌ನಾಗಲೀ ಅವನನ್ನು ನಾನು ಹೊಂದಿರುತ್ತೇನೆ ಮತ್ತು ಅವನು ನನ್ನನ್ನು ಹೊಂದಿರುತ್ತಾನೆ. ಇನ್ನೊಬ್ಬರನ್ನು ಬಲವಂತದಿಂದ ಮತಾಂತರಗೊಳಿಸುವುದಾಗಲೀ ಅಥವಾ ನಾನೇ ಮತಾಂತರಗೊಳ್ಳುವುದಾಗಲೀ ಮಾಡುವುದಿಲ್ಲ."

ಈಗಾಗಲೇ ಕ್ರೋಧದಿಂದ ಉರಿದು ಬೆಂದಿದ್ದ ಔರಂಗಜೇಬ್ ಗುರು ತೇಘ್ ಬಹದೂರ್‌ನನ್ನು ಒಂದು ಕಬ್ಬಿಣದ ಬೋನಿನಲ್ಲಿರಿಸಿದ. ಕ್ರೂರ ಶಿಕ್ಷೆ ನೀಡಿದ. ಅನ್ನ ನೀರು ನೀಡದೆ ಹಿಂಸಿಸಿದ. ಗುರುವಿನ ಬವಣೆ ನೋಡಲಾರದೆ, ಗುರುವಿನ ಶಿಷ್ಯಂದಿರು, ಶಸ್ತ್ರ ಹಿಡಿದು ದಂಗೆ ಎಬ್ಬಿಸಿ ದೆಹಲಿ ನಗರವನ್ನು ಧ್ವಂಸ ಮಾಡಲಿಕ್ಕೆ ತಯಾರಾದಾಗ, ಅವರನ್ನು ಸಾಂತ್ವನಗೊಳಿಸಿದ. ಗುರು ಪ್ರಾಣತ್ಯಾಗ ಮಾಡಲಿಕ್ಕೆ ಸಿದ್ಧನಾಗಿರುವಾಗ, ಮತ್ತೊಬ್ಬರ ಪ್ರಾಣಹಾನಿ ಮಾಡಲಿಕ್ಕೆ ಸಿದ್ಧನಿರಲಿಲ್ಲ.

ಗುರುವಿಗೆ ನಾನಾ ತರಹದ ಹಿಂಸೆ ನೀಡಿದರೂ ಬಗ್ಗದಿದ್ದಾಗ, ಅಂತಿಮವಾಗಿ ಔರಂಗಜೇಬ್ ಗುರುವಿನ ಕತ್ತು ಕಡಿಯಲು ಆಜ್ಞಾಪಿಸಿದ. ಮೊತ್ತಮೊದಲು ಗುರುವಿನ ಮೂರು ಅನುಯಾಯಿಗಳಾದ ಭಾಯಿ ಮತದಾಸ್, ಭಾಯಿ ದಯಾಳಾ ಮತ್ತು ಭಾಯಿ ಸತಿ ದಾಸ್‌ರನ್ನು ಕ್ರೂರವಾಗಿ ಹಿಂಸಿಸಿ ವಧೆ ಮಾಡಿದರು. ಒಬ್ಬನನ್ನು ಚರ್ಮ ಸುಲಿದು ಸಾಯಿಸಿದರೆ, ಇನ್ನೊಬ್ಬರನ್ನು ಕುದಿಯುವ ನೀರಿನಲ್ಲಿ ಬೇಯಿಸಿ ಸಾಯಿಸಿದರು.

೧೧ನೆಯ ನವೆಂಬರ್, ೧೬೭೫ ರಂದು ಗುರು ತೇಘ್ ಬಹದೂರ್‌ರನ್ನು ದೆಹಲಿಯ ಚಾಂದನಿ ಚೌಕ್‌ನಲ್ಲಿ ವಧಿಸಲಾಯಿತು. ೧೦

---

೧೦. P 345 India A History by John Keay

'At one stroke Aurangzeb earned the better hatred of thousands of Jat and Khatri Sikhs living in the North Indian plains' (J.F. Richards - The Mughal Empire P-178) 'Under Guru Gobind, The Tenth and last Guru, Sikhism would retire to the fringes of Mughal Rule in the Punjab hill states. . . .'

Akbar had disrupted the Muslim community by recognising that India was not an Islamic country; Aurangjeb disrupted India by behaving as if it were' (Gascoigne, The Great Mughals P-227)

ಕತ್ತಲಾವರಿಸಿದೊಡನೆ, ಮೂವರು ಕೆಳಜಾತಿಗೆ ಸೇರಿದ ಚುಹ್ರಾಗಳು, (ಸಿಖ್‌ರು ಅಥವ ಮುಜಹಬೀ ಸಿಖ್‌ರು) ಗುರು ತೇಘ್ ಬಹದೂರ್‌ನ ರುಂಡ ಮತ್ತು ದೇಹಗಳನ್ನು ಹೊತ್ತು ಸಾಗಿಸಿದರು. ೧೧

ಒಬ್ಬ ತಲೆಯನ್ನು ಹೊತ್ತು ಗುರುವಿನ ಊರಾದ ಆನಂದಪುರಕ್ಕೆ ತೆರಳಿದರೆ ಇನ್ನೊಬ್ಬ ಸಿಖ್ ರುಂಡವಿಲ್ಲದ ದೇಹವನ್ನು ಹೊತ್ತು ದೆಹಲಿಯ ರೈಸೀನಾ ಹಳ್ಳಿಯಲ್ಲಿದ್ದ ತನ್ನ ಗುಡಿಸಲಿನಲ್ಲಿರಿಸಿ, ಇಡೀ ಗುಡಿಸಲಿಗೆ ಬೆಂಕಿ ಇಟ್ಟು ಅಗ್ನಿಸಂಸ್ಕಾರ ನೆರವೇರಿಸಿದ. ಈಗ ಅದೇ ಪ್ರದೇಶದಲ್ಲಿ ಸಿಖ್‌ರು ಒಂದು ಸುಂದರ ಗುರುದ್ವಾರ ನಿರ್ಮಿಸಿ, ಅದಕ್ಕೆ 'ರಕಾಬ್‌ಗಂಜ್' ಎಂದು ಕರೆದು ಸ್ಮರಿಸಿದ್ದಾರೆ.

ಚಾಂದನೀ ಚೌಕ್‌ನಲ್ಲಿ ಗುರುವಿನ ವಧೆಯಾದ ಸ್ಥಳದಲ್ಲಿ ಒಂದು ಸುಂದರ ಗುರುದ್ವಾರ ನಿರ್ಮಿಸಿ ಅದಕ್ಕೆ 'ಸಿಸ್‌ಗಂಜ್' ಎಂದು ಕರೆದು ಸ್ಮರಿಸಿದ್ದಾರೆ. ಅದು ಇಂದಿಗೂ ಸಿಖ್‌ರಿಗೆ ಒಂದು ಅತ್ಯಂತ ಪೂಜ್ಯ, ಬಲಿದಾನಗೈದ ಪುಣ್ಯಕ್ಷೇತ್ರವಾಗಿ

---

೧೧. P 60-61 The Sikhs by A.H. Bingley - "The highest classes of Mazbhis profess to be descended from three chuhras who gallantly rescued the body of Tegh Bahadur from a Muhammadan mob after the Guru had been cruelly executed at Delhi by the fanatical emperor Auranazeb. The three sweepers, on their return to Amritsar with the martyr's corpse, were at once baptized into the sikh faith by Guru Govind Singh, who in recognition of their valour and devotion gave them the title 'Mazbhi' or 'faithful'

'. . . . .Their extraordinary bravery, endurance, and patience under great and protracted privations, soon won for them a high reputation as soldiers - a reputation which has increased by their subsequent achievements in China, Abyssinia, Afghanistan and numerous campaigns on the frontier.

ಉಳಿದಿದೆ. ೧೨

'One of the Guru's crimes, in the emperor's eyes may have been the style of address adopted by his disciples, who had begun to call their leader 'Sacha Badshah' or the 'True king' Compare this to the episode of Jesus who said that he was the 'king' of Jesus - Bible

೧೨. P.78-79

The Later Mughals by Irvine

ಅಧ್ಯಾಯ ೧೨
ಗುರು ಗೋಬಿಂದ್ ಸಿಂಗ್ (೧೬೬೬-೧೭೦೮)

"ಎಲ್ಲಿ ಒಬ್ಬ ಸಿಖ್‌ನಿರುತ್ತಾನೋ ಅಲ್ಲಿ ಒಬ್ಬನೇ ಸಿಖ್‌ನಿರುತ್ತಾನೆ; ಎಲ್ಲಿ ಇಬ್ಬರು ಸಿಖ್‌ರಿರುತ್ತಾರೋ ಅಲ್ಲಿ ಸಿಖ್ ಸಂತರಿರುತ್ತಾರೆ. ಎಲ್ಲಿ ಐದು ಮಂದಿ ಸಿಖ್‌ರಿರುತ್ತಾರೋ ಅಲ್ಲಿ ದೇವರೇ ಇರುತ್ತಾನೆ"

-ಭಾಯಿ ಗುರುದಾಸ್

ನಿನ್ನ ಆತ್ಮದ ಬಾವಿಯಿಂದ ನೀರೆಳೆಯುವ ಯಂತ್ರವೇ ದೈನ್ಯತೆ ಮತ್ತು ಸೇವೆ. ನಿನ್ನ ಆತ್ಮದ ತೋಟಕ್ಕೆ ನೀರುಣಿಸು. ಆಗ ಮಹಾನ್ ತೋಟಗಾರ ನಿನ್ನನ್ನು ಬರಮಾಡಿಕೊಳ್ಳುವೆನು.

-ಗುರುನಾನಕ್

ಗುರು ತೇಘ್ ಬಹದೂರ್ ಮರಣಿಸಿದಾಗ, ಅವನ ಮಗ ಗೋಬಿಂದ್ ದಾಸ್‌ನಿಗೆ ೯ ವರ್ಷವಾಗಿತ್ತು. ತನ್ನ ೯ ನೆಯ ವಯಸ್ಸಿನಲ್ಲಿ ಗುರುಪೀಠ ಅಲಂಕರಿಸಿದ ಗೋಬಿಂದ್ ದಾಸ್, ಆಧ್ಯಾತ್ಮಿಕತೆಯ ಜಾಡಿನಲ್ಲಿ ಸಾಗಿ, ಎಲ್ಲಾ ಗುರುಗಳಂತೆ ಸಿಖ್ ಧರ್ಮದ ರೀತಿನೀತಿ ಅಭ್ಯಾಸ ಮಾಡುವದೊಂದಿಗೆ, ಶಸ್ತ್ರ ವಿದ್ಯೆಯನ್ನೂ ಅಭ್ಯಾಸ ಮಾಡಿದ. ಸಂಸ್ಕೃತ, ಅರಾಬಿಕ್ ಮತ್ತು ಪಂಜಾಬಿ ಭಾಷೆಗಳಲ್ಲಿ ಪರಿಣತಿ ಪಡೆದ. ಅವನು ತನ್ನ ಶಿಷ್ಯಂದಿರಿಗೆ ನಿರಕ್ಷರಾಗದೆ ವಿದ್ಯೆ ಕಲಿಯಲು ತಕ್ಕ ಏರ್ಪಾಡು ಮಾಡಿದ್ದಲ್ಲದೆ, ವಿದ್ಯಾಭ್ಯಾಸದ ಜೊತೆಗೆ ಶಸ್ತ್ರವಿದ್ಯೆಯೂ ಅತ್ಯಂತ ಅವಶ್ಯಕವೆಂದು ಅದಕ್ಕಾಗಿ ತನ್ನನ್ನು ಕಾಣಲು ಬಂದ ಯಾರೇ ಸಿಖ್‌ರು ಕಾಣಿಕೆಯ ರೂಪದಲ್ಲಿ ಶಸ್ತ್ರಾಸ್ತ್ರಗಳನ್ನು ಒಪ್ಪಿಸಬೇಕೆಂದು ಕೋರಿದ. ಅವನು ಸ್ವತಃ ತನ್ನ ತಿರುಗಾಟದಲ್ಲಿ ಆಯುಧಪಾಣಿಯಾಗಿ, ಕಾಡಿನಲ್ಲಿ ಬೇಟೆಯಾಡುವ ಹವ್ಯಾಸ ಬೆಳೆಸಿಕೊಂಡ. ಅವನು ಒಂದು ಸೈನ್ಯ ಕಟ್ಟಿ, ಅದನ್ನು ಸುಸಜ್ಜಿತವನ್ನಾಗಿ ಮಾಡಲು ವೃತ್ತಿಪರ ಸೈನಿಕರನ್ನು ಅದರಲ್ಲಿ ಶಾಮೀಲು ಮಾಡಿಕೊಂಡ. ಆಧ್ಯಾತ್ಮಿಕ ವಿದ್ಯೆಯೊಂದಿಗೆ ಶಸ್ತ್ರವಿದ್ಯೆ ಸಿಖ್‌ರಿಗೆ ಅವಶ್ಯವೆಂದು ಅವನಿಗೆ ಮನದಟ್ಟಾಗಿತ್ತು. ಹೇಡಿಗಳಾಗಿ, ಪುಕ್ಕಲತನದಿಂದ, ಅವಮಾನಗಳಿಂದ ಜೀವಿಸುವ ಬದಲು, ತಮ್ಮ ಧರ್ಮ ಮತ್ತು ಜೀವಗಳನ್ನು ರಕ್ಷಿಸಿಕೊಳ್ಳಲು ಕೇವಲ ಧಾರ್ಮಿಕತೆಯೊಂದೇ ಸಾಲದು ಎಂದು ಅವನಿಗೆ ಮನವರಿಕೆಯಾಗಿತ್ತು.

ಗೋಬಿಂದ್‌ದಾಸ್‌ನ ಆಶ್ರಮದಲ್ಲಿ, ಧಾರ್ಮಿಕ ಕಾರ್ಯ ಜರುಗಿಸಿದರೂ, ರಾಜರ ಆಸ್ಥಾನಗಳಲ್ಲಿ ರಾಜ ಮರ್ಯಾದೆ ಮತ್ತು ರೂಢಿ ನೀತಿಗಳ ಪರಂಪರೆಗಳನ್ನು ಜಾರಿಗೆ ತರಲಾಯಿತು. ಒಂದು ದೊಡ್ಡ ನಗಾರಿಯನ್ನು ಇರಿಸಿ ಅದರ ಉಪಯೋಗ ಮಾಡಲಾಯಿತು. ಈ ವಿದ್ಯುನ್ಮಾನಗಳಿಂದ ಆನಂದಪುರದ ಬಳಿಯ ಶಿವಾಲಿಕ್ ಬೆಟ್ಟಗುಡ್ಡಗಳ ಹಿಂದೂ ರಾಜಮಹಾರಾಜರು ಕಳವಳಗೊಂಡರು. ದೆಹಲಿಯ

ಸಾಮಂತರಾಗಿ, ಬಾದ್‌ಶಹನಿಗೆ ಕಪ್ಪ ಕಾಣಿಕೆ ನೀಡಿ ತಮ್ಮ ಅಲ್ಪ ಸ್ವಲ್ಪ ಸ್ವಾತಂತ್ರ್ಯ ಪಡೆದುಕೊಂಡಿದ್ದ ಅವರಿಗೆ ಗೋಬಿಂದ್‌ದಾಸ್‌ನ ಆಚಾರ ನಡೆವಳಿಕೆ ಗಾಬರಿ ತರುವಂತಾಯಿತು. ಅವರಲ್ಲಿ ಬಿಲಾಸ್‌ಪುರದ ರಾಜಾ ಭೀಮ್ಚಂದ್, ತನ್ನ ರಾಜ್ಯದ ಸಿಖ್ ಮಸಂದ್‌ರಿಗೆ ತನ್ನ ಕಳವಳವನ್ನು ತಿಳಿಸಿದ. ಅವರು ಗೋಬಿಂದ್‌ಸಿಂಗ್‌ನ ತಾಯಿಯ ಬಳಿ ಬಂದು ತಮ್ಮ ಅಹವಾಲನ್ನು ತಿಳಿಸಿದರು. ಧಾರ್ಮಿಕ ಕಾರ್ಯದಲ್ಲಿ ಮಗ್ನನಾಗಿ ಗುರು ಸಾಗುವಂತೆ ಕೇಳಿಕೊಂಡರು. ಆದರೆ ಗೋವಿಂದ್ ದಾಸ್, ತಾಯಿ ಮತ್ತು ಮಸಂದ್‌ರ ಅನುರೋಧಗಳನ್ನು ತಿರಸ್ಕರಿಸಿದರು.

ಈ ಮಧ್ಯೆ, ದೂರದ ಅಸ್ಸಾಮ್‌ನಿಂದ ರತನ್‌ರಾಯ್ ಎಂಬ ಸಿಖ್, ಆನಂದಪುರಕ್ಕೆ ಬಂದು ಗೋಬಿಂದ್ ದಾಸ್‌ಗೆ ಅಮೂಲ್ಯವಾದ ಕಾಣಿಕೆಗಳನ್ನು ನೀಡಿದ. ಅವುಗಳಲ್ಲಿ ನಗನಾಣ್ಯಗಳಲ್ಲದೆ, ಒಂದು ಆನೆ ಕೂಡ ಇತ್ತು. ಈಗ ಗುರು ಗೋಬಿಂದ್‌ದಾಸ್‌ನ ಆಸ್ಥಾನ ಒಂದು ರಾಜನ ಆಸ್ಥಾನದಂತೆ ಮೆರೆಯತೊಡಗಿತ್ತು. ಭಾರತದಲ್ಲೆಡೆಯಿಂದ ಸಿಖ್‌ರು ಗುರುವಿನ ದರ್ಶನಕ್ಕೆ ಬಂದು ಬೆಲೆ ಬಾಳುವ ಕಾಣಿಕೆಗಳನ್ನು ನೀಡಿ ಧನ್ಯರಾಗುತ್ತಿದ್ದರು. ಸುದ್ದಿ ಅರಿತ ನೆರೆಯ ಕಹ್ಲೂರ್ ರಾಜಾ, ಭಯ ಭೀತಿಗೊಂಡ. ಗುರುವಿನ ಸಾಮರ್ಥ್ಯ ಹೆಚ್ಚಿ ತನ್ನ ಮೇಲೆ ಅವನು ಆಕ್ರಮಣ ಎಸಗಿ ತನ್ನ ಸ್ಥಾನಮಾನಗಳಿಗೆ ಆಪತ್ತು ತರುವನೆಂಬ ಆತಂಕ ಉಂಟಾಯಿತು. ಅವನ ಆಸ್ಥಾನಿಕರು ಮತ್ತು ಹಿತೈಷಿಗಳು ಗುರುವಿನೊಂದಿಗೆ ಸ್ನೇಹ ಸಂಬಂಧ ಇರಿಸಿಕೊಳ್ಳುವಂತೆ ಸಲಹೆ ನೀಡಿದರು. ಅದರಂತೆ ರಾಜ ತನ್ನ ಪರಿವಾರದೊಂದಿಗೆ ಗುರುವನ್ನು ಕಾಣಲು ಆನಂದ್‌ಪುರಕ್ಕೆ ಬಂದ. ಅಲ್ಲಿ ಗುರುವಿನ ರಾಜವೈಭೋಗ ಕಂಡು ಅಸೂಯೆಗೊಂಡ. ಗುರುವಿನ ಬಳಿ ಇದ್ದ ನಗ ನಾಣ್ಯ, ಬೆಲೆ ಬಾಳುವ ಸಾಮಗ್ರಿ ಮತ್ತು ಇತರ ವಸ್ತುಗಳನ್ನು ಕಂಡು ಬೆರಗಾದ. ತನ್ನ ನಗರಕ್ಕೆ ಹಿಂದಿರುಗಿದ ಕೂಡಲೇ ಗುರುವಿಗೆ ಸಂದೇಶ ಕಳುಹಿಸಿದ. ಅವನು ತನ್ನ ಮಗನ ಲಗ್ನ ನೆರೆಯ ಗರ್‌ವಾಲ್ ರಾಜ್ಯದ ರಾಜನ ಮಗಳೊಂದಿಗೆ ನೆರೆವೇರಿಸುವ ನಿರ್ಧಾರ ತೆಗೆದುಕೊಂಡಿರುವುದಾಗಿ, ಆ ಸಂದರ್ಭದಲ್ಲಿ ತನ್ನ ಬಳಿ ಇದ್ದ ಸಂಪತ್ತನ್ನು ವೈಭವೀಕರಿಸುವುದರೊಂದಿಗೆ, ಗುರುವಿನಲ್ಲಿದ್ದ ವಜ್ರ ವೈಢೂರ್ಯ ಮತ್ತು ಇತರ ಬೆಳ್ಳಿ ಬಂಗಾರ ವಸ್ತುಗಳನ್ನು ತನಗೆ ಎರವಲು ನೀಡಿದರೆ, ಅವನ್ನು ಕೂಡ ತಾನು ಪ್ರದರ್ಶಿಸಿ ತನ್ನ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಬಹುದು ಎಂದು ಗುರುವಿಗೆ ನಿವೇದಿಸಿದನು. ಗುರುವಿಗೆ ರಾಜನ ಮನಸ್ಸು ಮತ್ತು ಸ್ವಭಾವಗಳ ಅರಿವಾಗಿದ್ದು, ಅವನು ಆತನ ಮಾತುಗಳಿಗೆ ಮರುಳಾಗಲಿಲ್ಲ.

ಶಿವಾಲಿಕ್ ಗುಡ್ಡಗಾಡಿನಲ್ಲಿ ಹಲವಾರು ರಾಜಪುತ್ರ ವಂಶದ ರಾಜರು ದೆಹಲಿ ಸುಲ್ತಾನನ ಆಶ್ರಯದಲ್ಲಿ ರಾಜ್ಯಭಾರ ಮಾಡಿಕೊಂಡಿದ್ದರು. ಅವರಲ್ಲಿ ನಾಹನ್ ಎಂಬ ಪ್ರದೇಶದ ರಾಜನೂ ಒಬ್ಬನಾಗಿದ್ದ. ಅವನು ಗುರುವಿನ ಸ್ನೇಹಿತನಾಗಿದ್ದ. ಈ ಗುಡ್ಡಗಾಡು ರಾಜರಲ್ಲಿ ಒಗ್ಗಟ್ಟು ಇಲ್ಲದಿರುವುದು ಸ್ವಾಭಾವಿಕವಾಗಿತ್ತು. ನಾಹನ್ ರಾಜ ಗರ್‌ವಾಲ್ ರಾಜನ ವಿರುದ್ಧ ಕತ್ತಿ ಮಸೆಯುತ್ತಿದ್ದ. ಗುರುವಿನ ಸಹಾಯ ಪಡೆದು ಆ ರಾಜನ

ವಿರುದ್ಧ ಕದನ ಪ್ರಾರಂಭಿಸಲು ನಿಶ್ಚಯಿಸಿದ. ಗುರು ಕೂಡ, ಅವನ ಕೋರಿಕೆಗೆ ಮಣಿದು ತನ್ನ ೫೦೦ ಸಿಖ್ ಸೈನಿಕರೊಂದಿಗೆ ಗರ್‌ವಾಲ್ ರಾಜನ ವಿರುದ್ಧ ಹೋರಾಡಲು ನಿರ್ಧರಿಸಿದರು. ಗುರುವಿನ ಸೈನ್ಯ 'ಪೌನ್ಟಾ' ಎಂಬ ಸ್ಥಳದಲ್ಲಿ ಬೀಡು ಬಿಟ್ಟಿತು. ಆದರೆ ಯುದ್ಧ ಜರುಗಲಿಲ್ಲ. ಗುರುವಿನ ಸಾಮರ್ಥ್ಯ ಯಶಸ್ಸು, ಹೆಸರು ಕೇಳಿದ ಇನ್ನೊಬ್ಬ ಗುಡ್ಡಗಾಡಿನ ರಾಜ ಫತೇ ಶಾ ಎಂಬಾತ ಗುರುವಿನ ಸ್ನೇಹ ಬಯಸಿ, ಅವನಲ್ಲಿಗೆ ಬಂದು ಆತಿಥ್ಯ ಪಡೆದ. ಗುರು, ನಾಹನ್ ರಾಜ ಮತ್ತು ರಾಜ ಫತೇ ಶಾ ಮಧ್ಯೆ ಇದ್ದ ವೈಮನಸ್ಸನ್ನು ಬಗೆಹರಿಸಿ ಅವರಲ್ಲಿ ಸಾಮರಸ್ಯದ ಸ್ನೇಹ ಏರ್ಪಡಿಸಿದ.

ಗುರುವಿಗೆ ಈ ಪೌನ್ಟಾ ಎಂಬಲ್ಲಿಯೇ ಒಬ್ಬ ಸೂಫೀ ಸಂತ ಸೈಯದ್ ಬದ್ರೂದ್ದೀನ್ ಎಂಬಾತನ ಗೆಳೆತನ ಉಂಟಾಯಿತು. ಅವನನ್ನು 'ಬುದ್ದೂ ಶಾ' ಎಂದು ಜನ ಆತ್ಮೀಯವಾಗಿ ಕರೆಯುತ್ತಿದ್ದರು.

'ಪೌನ್ಟಾ'ನಲ್ಲಿಯೇ ಗುರು ಗೋಬಿಂದ್ ಸಿಂಗ್ ತನ್ನ ಪ್ರಮುಖ 'ಯೋಧಶ್ರೇಷ್ಠೆಯ ಮತ್ತು ಭಕ್ತಿರಸವುಳ್ಳ' ಕವಿತೆಗಳನ್ನು ರಚಿಸಿದ. ಅವುಗಳ ಸಂಗ್ರಹಕ್ಕೆ 'ದಶಂ ಗ್ರಂಥ್' ಎಂದು ಕರೆಯಲಾಗಿದೆ. ಅವನು ತನ್ನ ಆಸ್ಥಾನದಲ್ಲಿ ೫೨ ಕವಿಗಳನ್ನು ನೇಮಿಸಿ, ಅವರಿಂದ ಹಿಂದೂ ಪುರಾಣ ಕತೆಗಳ, ರಾಮಕೃಷ್ಣರ ಬಾಲಲೀಲೆ ಮತ್ತು ಇತರ ಕತೆಗಳನ್ನು ಹಿಂದೀ ಭಾಷೆಯಲ್ಲಿ ಬರೆಸಿದನು ಎಂದು ಹೇಳಲಾಗಿದೆ. ಆ ಕತೆಗಳಲ್ಲಿ 'ಚಂಡೀ' ದೇವತೆಯ ಯುದ್ಧ ಕುಶಲತೆ, ದೈತ್ಯರ ವಧೆಯ ಕಥೆಗಳ ವೃತ್ತಾಂತವನ್ನು ಬರೆಸಿದನು. ಅವನು ಕೈಕೊಂಡ ಈ ಕಾರ್ಯದಲ್ಲಿ ಮುಖ್ಯವಾಗಿ ಜನರಲ್ಲಿ ಕ್ಷಾತ್ರಭಾವನೆ ಉಂಟಾಗಿ, ಯೋಗ್ಯ ಯೋಧರಾಗಿ ಪರಿವರ್ತನೆಯಾಗಿ ಹೊರಹೊಮ್ಮುವಂತಾಗಿರಬೇಕೆಂಬ ಆಸೆ ಇರಬೇಕು ಎಂದು ಊಹಿಸಬಹುದು.೧

('ದಶಂ ಗ್ರಂಥ್' ಎಂಬ ಹೊತ್ತಿಗೆ ೧೪೨೮ ಪುಟಗಳನ್ನು ಹೊಂದಿದೆ. ಈ ಗ್ರಂಥವನ್ನು ಗುರು ರಚಿಸದೆ, ಅವನ ಆಸ್ಥಾನದಲ್ಲಿದ್ದ ೫೨ ಕವಿಗಳಿಂದ ರಚಿಸಿದ್ದು ಎಂದು ಕೆಲವು ವಿದ್ವಾಂಸರ ಅಭಿಪ್ರಾಯ.) ಈ ಗ್ರಂಥದಲ್ಲಿ ಬ್ರಜ ಭಾಷದ ಉಪಯೋಗ ಮಾಡಲಾಗಿದೆ. ಗ್ರಂಥದಲ್ಲಿ ೧. ಜಪ, ೨. 'ಅಕಾಲ್ ಉಸ್ತಾತಿ' ಅಂದರೆ, ದೇವರ ಸ್ಥಿತಿ, ಆಚಾರ ಮತ್ತು ಮೂಢನಂಬಿಕೆಗಳ ನಿಂದನೆ, ೩. ಚಂಡೀ ಚರಿತ್ರೆ ೪) ವರ ಅಥವಾ ದುರ್ಗಾದೇವತೆಯ ಪುರಾಣ ಕತೆಗಳು ೫. ಗ್ಯಾನ್ ಪ್ರಬೋಧ್ ಅಥವಾ ಜ್ಞಾನ ಮುತ್ತುಗಳು ೬) ಚೌಬೀಸ್ ಅವತಾರ ಅಥವಾ ವಿಷ್ಣುವಿನ ಅವತಾರ ಕತೆಗಳು ಬ್ರಹ್ಮಾವತಾರ ಮತ್ತು ರುದ್ರಾವತಾರ ವೃತ್ತಾಂತಗಳು ೭) ಶಬ್ದ್ ಹಜಾರೆ ಅಥವಾ ಭಕ್ತಿಗೀತೆಗಳು ೮) ಸ್ವಯ್ಯಾಸ್ ಅಥವಾ ಏಕ ಗುರುವಿನ ಮೇಲೆ ರಚಿಸಿದ ಗೌರವಾರ್ಪಣೆಯ ಗೀತೆಗಳು ೯) ಖಾಲ್ಸಾ ಮಹಿಮಾ ಅಥವಾ 'ಖಾಲ್ಸಾ'ದ ಮಹಿಮೆ

---

೧. P 268 History of Sikh People by G.Singh

೧೦) ಶಾಸ್ತ್ರಾನಾಮ್–ಮಾಲಾ ಅಥವಾ ಶಸ್ತ್ರಾಸ್ತ್ರಗಳ ಮೇಲೆ ವರ್ಣನೆ ೧೧) ಚರಿತ್ರೋಪಾಖ್ಯಾನ ಅಥವಾ ೪೦೪ ಮಹಿಳೆಯರು ಎಸಗಿದ ಕುಟಿಲತೆಯ ಕತೆಗಳು ೧೨) ಜ಼ಫರ್–ನಾಮಾ ಅಥವಾ ಬಾದ್‌ಶಹಾ ಔರಂಗಜೇಬ್‌ನಿಗೆ ಬರೆದ ವಿಜಯವಾರ್ತೆ ೧೩) ಹಿಕಾಯತ್ ಅಥವಾ ಪರ್ಶಿಯನ್ ಭಾಷೆಯಲ್ಲಿ ರಚಿಸಿದ ಪುರಾಣ ಕತೆಗಳು ೨

ಇದೇ ಸಮಯದಲ್ಲಿ, ಗುರು ಹರಿರಾಯ್‌ನ ಮಗ ರಾಮ್ ರಾಯ್‌ನ ಮರಣವಾಯಿತು. ರಾಮ್ ರಾಯ್ ತಂದೆಯಿಂದ ಬೇರ್ಪಟ್ಟು ಶಿಮ್ಲಾ ಬಳಿಯ 'ಡೂನ್' (ಕಣಿವೆ)ನಲ್ಲಿ ಒಂದು ಆಶ್ರಮ ಕಟ್ಟಿ ವಾಸಿಸುತ್ತಿದ್ದ. ಅವನ ಮರಣವಾದೊಡನೆ ಅವನ ಶಿಷ್ಯಂದಿರು ಆಶ್ರಮದ ಆಸ್ತಿಯನ್ನ ರಾಮ್ ರಾಯ್‌ನ ಪತ್ನಿಯಿಂದ ಕಸಿದುಕೊಳ್ಳುವ ಹಂಚಿಕೆಯನ್ನು ಮಾಡಿದರು. ಸುದ್ದಿ ಅರಿತ ಗುರು ಗೋವಿಂದ್ ಸಿಂಗ್, ಕೂಡಲೆ ಆಕೆಯ ರಕ್ಷಣೆಗೆ ಧಾವಿಸಿದ. 'ಡೂನ್' ಗೆ ತೆರಳಿ ಅಲ್ಲಿದ್ದ ಶಿಷ್ಯಂದಿರನ್ನು ಓಡಿಸಿದರು. ಕೆಲವರನ್ನು ಶಿಕ್ಷಿಸಿದ. ಡೂನ್‌ನಲ್ಲಿದ್ದ ರಾಮ್ ರಾಯ್‌ನ ಸಮಾಧಿಯನ್ನು ಹೊಂದಿದ ಆ ಸ್ಥಳವನ್ನು 'ದೇರಾ ಡೂನ್' (ದೇರಾ ಸಮಾಧಿ) ಎಂದು ಕರೆಯಲಾಯಿತು. ಇತಿಹಾಸಕಾರರು ಈ ಘಟನೆ ೧೬೮೭ರಲ್ಲಿ ಜರುಗಿತು ಎಂದು ತಿಳಿಸಿದ್ದಾರೆ. ಗುರು ಗೋವಿಂದ್ ಸಿಂಗ್, ಪ್ರಾಯಶಃ ೧೬೮೫ ರಿಂದ ೮೯ ರ ವರೆಗೆ ಪೌಂಟಾ ಎಂಬಲ್ಲಿ ಬೀಡು ಬಿಟ್ಟಿದ್ದರು ಎಂದು ಅಭಿಪ್ರಾಯ ಪಡಲಾಗಿದೆ. ೩

ಭೀಮ್ ಚಂದ್ ಎಂಬ ರಾಜನ ಮಗನೊಂದಿಗೆ ರಾಜ ಫತೇಶಾನ ಮಗಳ ಲಗ್ನ ನಿಶ್ಚಯವಾಗಿ, ಮದುವೆಯ ಶುಭಕಾರ್ಯಕ್ಕೆ ಆಗಮಿಸಲು ಗುರುವಿಗೆ ಆಹ್ವಾನ ನೀಡಿದಾಗ, ಗುರು ಸ್ವತಃ ಅಲ್ಲಿಗೆ ತೆರಳದೆ, ತನ್ನ ಒಬ್ಬ ಶಿಷ್ಯ ದಿವಾನ್ ನಂದ್‌ಚಂದ್ ಎಂಬಾತನನ್ನು ಕಳುಹಿಸಿದ. ಆ ಸಮಯದಲ್ಲಿ ವರನ ಕಡೆಯವರು ಗುರು ತಂಗಿದ್ದ ಪೌಂಟಾ ಬಳಿ ಬಂದಾಗ, ಗುರುವಿನೊಂದಿಗೆ ವೈರತ್ವ ಹೊಂದಿದ್ದ ರಾಜಾ ಭೀಮ್‌ಚಂದ್‌ನ ಪರಿವಾರದವರಿಗೆ ಆತಂಕ ಉಂಟಾಯಿತು. ಅವರು ಎಣಿಸಿದಂತೆ, ಗುರು ತನ್ನ ಪ್ರದೇಶದೊಳಗೆ ಅವರು ಹಾದುಹೋಗಲು ಅಪ್ಪಣೆ ನೀಡಲಿಲ್ಲ. ಯಾಕೆಂದರೆ ತನ್ನ ಸಿಖ್ ಸೈನಿಕರಿಂದ ಅವರು ಪ್ರತಿಭಟನೆ ಎದುರಿಸಿ, ಶಾಂತಿ ಕದಡಬಹುದು ಎಂದು ಗುರು ಎಣಿಸಿ, ಪ್ರದೇಶದೊಳಗೆ ಹಾದುಹೋಗಲು ಸೂಕ್ತವಲ್ಲ ಎಂದು ಹೇಳಿದ. ಇದರಿಂದ ಅಪಮಾನಗೊಂಡ ರಾಜಾ ಭೀಮ್ ಚಂದ್, ರಾಜಾ ಫತೇ ಶಾನ ಬಳಿ ದೂರು ನೀಡಿ, ಗುಡ್ಡಗಾಡಿನ ಎಲ್ಲಾ ರಾಜ ಮಹಾರಾಜರು ಒಗ್ಗೂಡಿ, ಗುರುವಿನ ವಿರುದ್ಧ ಕದನ ಸಾರಿ, ಅವನ ಸಾಮರ್ಥ್ಯ ಕುಗ್ಗಿಸಿಬೇಕೆಂದರು. ಅವನ ಅಹವಾಲನ್ನು ಸ್ವೀಕರಿಸಿದ ಫತೇ ಶಾ ಮದುವೆಯ ಕಾರ್ಯ ಮುಗಿದ ಕೂಡಲೇ ಯುದ್ಧಾಚರಣೆ ಪ್ರಾರಂಭಿಸಿದ. ರಾಜರೆಲ್ಲಾ ಒಟ್ಟಾಗಿ ತನ್ನ ಮೇಲೆ ಬೀಳುವ ಸುದ್ದಿ ಅರಿತ ಗುರು, ತನ್ನ

---

೨. 289 History of Sikhs People by G.Singh

೩. P 270 FN History of Sikhs People by G.Singh

ಸೈನಿಕರೊಂದಿಗೆ ಪೌಂಟಾ ತ್ಯಜಿಸಿ ಹತ್ತಿರದ ಭಂಗಾನಿ ಎಂಬ ಆಯಕಟ್ಟಿನ ಪ್ರದೇಶ ಸೇರಿ ಅಲ್ಲಿ ಯುದ್ಧ ಹೂಡಲು ಕಾದ. ಆದರೆ, ಗುರುವಿನ ಸೈನಿಕ ಬಲ ಹೆಚ್ಚಿಸಲು, ಬುದ್ದೂ ಶಾ ಕಳುಹಿಸಿದ್ದ ೫೦೦ ಮಂದಿ ಪಠಾಣ್ ಸೈನಿಕರು ದಂಗೆ ಎದ್ದರು. ಗುರು ಈ ವಿಷಯವನ್ನು ಬುದು ಶಾಗೆ ತಿಳಿಸಿದ. ಆತ ಪಠಾಣ್‌ರ ಅಕ್ರಮ ನಡತೆಯಿಂದ ದಿಗ್ಭ್ರಮೆಗೊಂಡ. ಗುರುವಿಗೆ ಸಹಾಯ ನೀಡುವ ಸಲುವಾಗಿ, ಸ್ವತಃ ತನ್ನ ನಾಲ್ಕು ಮಕ್ಕಳೊಂದಿಗೆ ಯುದ್ಧ ಜರುಗಿಸಲು ಸಾಗಿದ.

ಘನಘೋರ ಯುದ್ಧ ಜರುಗಿತು. ಆ ಕದನದಲ್ಲಿ ಎರಡು ಕಡೆಯಲ್ಲಿ ಹಲವಾರು ಹೆಸರಾಂತ ಯೋಧರು ಮರಣವನ್ನಪ್ಪಿದರು. ರಾಜರ ಪೈಕಿ ರಾಜಾ ಹರಿಚಂದ್ ಸಾವನ್ನಪ್ಪಿದ. ಪೀರ್ ಬುದ್ದೂ ಶಾನ ಇಬ್ಬರು ಮಕ್ಕಳು ಹೋರಾಡುತ್ತಾ ಸಾವನ್ನಪ್ಪಿದರು. ಅಂತಿಮವಾಗಿ ಗುರು ಗೋಬಿಂದ್‌ಸಿಂಗ್‌ನಿಗೆ ವಿಜಯ ಪ್ರಾಪ್ತಿಯಾಯಿತು. ಗುರು, ಪೀರ್ ಬುದ್ದೂ ಶಾನಿಗೆ ತನ್ನ ಕೃತಜ್ಞತೆ ಅರ್ಪಿಸಿ, ಅವನಿಗೆ ಸಿಖ್‌ರಿಗೆ ಪ್ರಿಯವಾದ ಒಂದು ಕೃಪಾಣ (ಕತ್ತಿ) ಮತ್ತು ಪೇಟವನ್ನು ನೀಡಿ ಗೌರವಿಸಿದ. ಅವಲ್ಲದೆ ತನ್ನ ತಲೆಕೂದಲಿನ ಎಳೆಯನ್ನು ಮತ್ತು ಒಂದು ಬಾಚಣಿಗೆಗಳನ್ನು ಜ್ಞಾಪಕಾರ್ಥವಾಗಿ ನೀಡಿದ. ಈ ಪದಾರ್ಥಗಳನ್ನು ಮುಂದೆ ನಾಭಾದ ಮಹಾರಾಜ ಪೀರ್ ವಂಶದವರಿಂದ ಕೊಂಡು, ತನ್ನ ಅರಮನೆಯಲ್ಲಿಟ್ಟು ಗೌರವಿಸಿದ. ಅವನ್ನು ಇಂದಿಗೂ ಅಲ್ಲಿ ಕಾಣಬಹುದು ಎಂದಿದ್ದಾರೆ ಇತಿಹಾಸಕಾರರು. ೪

ಗುರು ಗೋಬಿಂದ್ ಸಿಂಗ್, ಪೌಂಟಾದಿಂದ ಆನಂದಪುರಕ್ಕೆ ಹಿಂದಿರುಗಿ, ಅಲ್ಲೇ ಒಂದು ಕೋಟೆ ನಿರ್ಮಿಸಿದರು. ಗುರುವಿನ ಕ್ಷಾತ್ರ ಸ್ವಭಾವ, ಅವನು ಗುಡ್ಡಗಾಡಿನ ರಾಜಮಹಾರಾಜರ ವಿರುದ್ಧ ಕದನ ಹೂಡಿ ಜಯಗಳಿಸಿದ್ದರ ರೀತಿ ನೀತಿಗಳಿಂದ ಅವನ ಹೆಸರು ಎಲ್ಲೆಡೆ ಹರಡಿ, ಸಿಖ್‌ರು ಉತ್ತೇಜನಗೊಂಡು, ಗುರುವಿನ ದರ್ಶನಕ್ಕೆ ತಂಡೋಪತಂಡವಾಗಿ ಬರಲು ಪ್ರಾರಂಭಿಸಿದರು. ಅವರಲ್ಲಿ ಯುವಕರು ಗುರುವಿನ ಕ್ಷಾತ್ರಸ್ವಭಾವಕ್ಕೆ ಮಾರಿಹೋಗಿ, ಅವನ ಸೈನ್ಯಕ್ಕೆ ಸೇರಿ ಕದನೋತ್ಸವದಲ್ಲಿ ಮುಳುಗಿದರು. ಅವರನ್ನು ಶಿಸ್ತಿನಲ್ಲಿ ಬಗ್ಗಿ ಹಿಡಿಯಲು ಕಷ್ಟ ಸಾಧ್ಯವಾಯಿತು. ಅವರಿಗೆ ಸೂಕ್ತ ರೀತಿಯಲ್ಲಿ ಯುದ್ಧ ಕುಶಲತೆ, ಸಮರ ಜರುಗಿಸುವ ಕಲೆಯಲ್ಲಿ ಪರಿಣತಿ ನೀಡುವ ಶಿಕ್ಷಕರ ಕೊರತೆ ಪ್ರಾಯಶಃ ಸಿಖ್‌ರಲ್ಲಿ ಅಶಿಸ್ತಿನ ನಡೆತೆಗಳಿಗೆ ಕಾರಣವಾಗಿರಬಹುದು ಎಂದು ಗುರು ಭಾವಿಸಿದರು.

ರಾಜಾ ಭೀಮ್‌ಚಂದ್ ಸ್ವತಃ ಭಂಗಾನೀ ಕದನದಲ್ಲಿ ಭಾಗವಹಿಸದಿದ್ದರೂ, ತನ್ನ ಸಹೋದರ ರಾಜರ ಸೋಲು ಅವನನ್ನು ಕಂಗೆಡೆಸಿತ್ತು. ಅವನು ತನ್ನ ಸಲಹೆಗಾರರೊಂದಿಗೆ ಸಮಾಲೋಚಿಸಿದ. ಅವರು ಗುರುವಿನೊಂದಿಗೆ ಸಂಧಿ ಮಾಡಿಕೊಂಡು, ಶಾಂತಿ ಕಾಪಾಡಿಕೊಳ್ಳುವಂತೆ ಸಲಹೆ ನೀಡಿದರು. ರಾಜಾ ಭೀಮ್‌ಚಂದ್ ತನ್ನ ಆಪ್ತಮಿತ್ರರನ್ನು

೪. P 273 History of Sikh People by G.Singh

ದೂತರನ್ನು ಗುರುವಿನ ಬಳಿ ಕಳುಹಿಸಿ ಅವನ ಸ್ನೇಹಕ್ಕೆ ಕೈಚಾಚಿದ. ಆಗ ಗುರು ಗೋವಿಂದ್‌ಸಿಂಗ್ ನುಡಿದ ಮಾತುಗಳು ಅವನು ತನ್ನ ಶಿಷ್ಯಂದಿರಿಗೆ ಹಾಕಿದ ನೀತಿಪಾಠವಾಯಿತು.

'ನನಗೆ ಯಾರಲ್ಲೂ ಕಲಹ ಮಾಡಲು ಉದ್ದೇಶವಿಲ್ಲ. ನಾನು ಧರ್ಮಾಚರಣೆ ಮಾಡಲು ಶಾಂತಿಯಿಂದ ಇರಲು ಅಪೇಕ್ಷಿಸುತ್ತೇನೆ. ನನ್ನ ತಂದೆ ಹಿಂದೂಗಳ ರಕ್ಷಣೆಗೋಸ್ಕರ ತನ್ನ ತಲೆ ಒಪ್ಪಿಸಿದ. ಆದರೆ ಇಲ್ಲಿ ನಾನು ಅಳಿವಿನಂಚಿನಲ್ಲಿರುವ ಈ ಜನಾಂಗಕ್ಕೆ ಹೊಸ ಹುಟ್ಟು ನೀಡಲು ಶ್ರಮಿಸುತ್ತಿರುವಾಗ, ಹಿಂದೂ ರಾಜರು ನನಗೆ ಸಹಕಾರ ನೀಡದೆ, ಯಾವ ಕಾರಣ ನೀಡದೆ ಪ್ರತಿರೋಧ ಒಡ್ಡಿ, ನನ್ನ ಮೇಲೆ ಆಕ್ರಮಣ ಮಾಡಿದರು. ನನ್ನ ಅನುಯಾಯಿಗಳು ಮತ್ತು ಶಿಷ್ಯಂದಿರು ಸುತ್ತಲಿನ ಹಳ್ಳಿಗಳಲ್ಲಿ ಹಣ ನೀಡಿ ವಸ್ತುಗಳನ್ನು ಕೊಳ್ಳಲು ಕೂಡ ಬಿಡುತ್ತಿಲ್ಲ. ಹೀಗಿದೆ ಅವರು ನಮ್ಮ ವಿರುದ್ಧ ಎಸಗುತ್ತಿರುವ ವಿರೋಧಾಭ್ಯಾಸಗಳು. ನಾವು ಒಂದು ಬಾರಿಯೂ ಯಾರ ವಿರುದ್ಧ ಅತಿಕ್ರಮಣ ಎಸಗಿಲ್ಲ. ಆದರೆ ಖಂಡಿತವಾಗಿಯೂ ನಾವು ಈಗ ನಮ್ಮ ಗೌರವವನ್ನು ಕಾಪಾಡಿಕೊಳ್ಳಲು ಕಾದಾಡುತ್ತೇವೆ.'

ರಾಜಾ ಭೀಮ್‌ಚಂದ್‌ನ ದೂತರು ಗುರುವಿನ ಮಾತುಗಳಿಗೆ ಸೋತು, ಹಿಂದಿನದನ್ನು ಮರೆತು, ಶಾಂತಿ ಕಾಪಾಡಿಕೊಂಡು ಬರಲು ಒಮ್ಮತ ಸೂಚಿಸಿದರು. ಆದರೆ ರಾಜರು ತಮ್ಮ ಹಿಡಿತದಲ್ಲಿದ್ದ ಪ್ರದೇಶಗಳ ಮೇಲೆ ಹತೋಟಿ ಇರಿಸಿಕೊಳ್ಳುವ ಭರವಸೆ ಗುರುವಿನಿಂದ ಪಡೆದು ಹಿಂದಿರುಗಿದರು. ಗುರು ಮತ್ತು ರಾಜರ ಮಧ್ಯೆ ಸ್ನೇಹ ಏರ್ಪಾಡಾಗಿ, ಶಾಂತಿ ಏರ್ಪಟ್ಟಿತು.

ದೆಹಲಿ ಬಾದ್‌ಶಹಾ ಔರಂಗಜೇಬ್, ಗುಡ್ಡಗಾಡಿನ ರಾಜರಿಂದ ಕಪ್ಪ ಪಡೆಯುತ್ತಿದ್ದ. ಗುರು ಗೋವಿಂದ್‌ಸಿಂಗ್‌ನ ಸ್ನೇಹ ಏರ್ಪಟ್ಟಿದದರಿಂದ, ರಾಜಾ ಭೀಮ್ ಚಂದ್ ಧೈರ್ಯಗೊಂಡ. ಅವನು ದೆಹಲಿ ಬಾದ್‌ಶಹಾನಿಗೆ ಕಪ್ಪ ಕೊಡಲು ನಿರಾಕರಿಸಿದ. ಇತರ ಸಣ್ಣ ಪುಟ್ಟ ರಾಜರು ಕೂಡ ಕಪ್ಪ ಕೊಡದೆ ಸುಮ್ಮನಾದರು. ಬಾದ್‌ಶಹಾ ಔರಂಗಜೇಬ್ ಸುದ್ದಿ ತಿಳಿದ ನಂತರ, ಜಮ್ಮು ಪ್ರಾಂತ್ಯದ ರಾಜ್ಯಪಾಲ ಮಿಯಾನ್ ಖಾನ್‌ನಿಗೆ ರಾಜರಿಂದ ಕಪ್ಪ ವಸೂಲು ಮಾಡಲು ಸೈನ್ಯದ ತುಕಡಿ ತೆಗೆದುಕೊಂಡು ಹೋಗಲು ಆಜ್ಞಾಪಿಸಿದ. ಮಿಯಾನ್ ಖಾನ್ ತನ್ನ ಸೈನ್ಯಾಧಿಕಾರಿ ಅಲಿಫ್‌ಖಾನ್‌ನಿಗೆ ಕಪ್ಪ ವಸೂಲು ಮಾಡಲು ಆಜ್ಞಾಪಿಸಿದ. ರಾಜರು, ತಮ್ಮ ಹಿರಿಯ ರಾಜ ಭೀಮ್ ಚಂದ್ ಕಪ್ಪ ನೀಡಲು ಸಮ್ಮತಿಸಿದರೆ, ತಾವು ಕೂಡ ಕಪ್ಪ ನೀಡಲು ಮುಂದಾಗುವೆವು ಎಂದರು. ರಾಜ ಭೀಮ್‌ಚಂದ್ ಮಾತ್ರ ಕಪ್ಪ ನೀಡಲು ಸಮ್ಮತಿಸದೆ ಯುದ್ಧಕ್ಕೆ ಸನ್ನದ್ಧನಾದ. ಗುರು ಗೋಬಿಂದ್ ಸಿಂಗ್‌ನ ಸಹಾಯ ಮತ್ತು ಬೆಂಬಲ ಬೇಡಿದ. ಈ ಹಿಂದೆ ಶಾಂತಿ ಒಪ್ಪಂದದಂತೆ ಗುರು ರಾಜಾ ಭೀಮ್‌ಚಂದ್‌ನಿಗೆ ಸಹಾಯ ಮಾಡಲು ಒಪ್ಪಿದ ಮತ್ತು ತನ್ನ ಸೈನಿಕ ಪಡೆಗಳನ್ನು ಸಜ್ಜುಗೊಳಿಸಿದ. ಅಲಿಫ್‌ಖಾನ್‌ನ ಪಡೆಯನ್ನು ಎರಡು ಸೈನ್ಯಗಳು ವದೌನ್ ಎಂಬ ಸ್ಥಳದಲ್ಲಿ ಸಂಧಿಸಿದವು. ಘೋರ ಯುದ್ಧ

ಜರುಗಿತು. ಆ ಯುದ್ಧದಲ್ಲಿ ಮೊಘಲ್ ಕಡೆಗೆ ಬೆಂಬಲ ನೀಡಿದ. ಬಿಹಾರ್‌ವಾಲ್‌ನ ರಾಜಾ ದಯಾಳ್‌ನ ಹತ್ಯೆಯನ್ನು ಗುರು ಮಾಡಿದ. ಶತ್ರು ಸೈನಿಕರು ಸೋತು ಓಡಿದರು. ಈ ಯುದ್ಧ ೧೬೯೦ರಲ್ಲಿ ಜರಗಿತು ಎಂದಿದ್ದಾರೆ ಇತಿಹಾಸಕಾರರು. ೫

ಆದರೆ ಈ ಯುದ್ಧದಲ್ಲಿ ಜಯ ಗಳಿಸಿದರೂ, ರಾಜರು ಮಾತ್ರ ಮೊಘಲ್ ಸಾಮ್ರಾಟನ ಮೇಲಿನ ಭಯ ಆತಂಕ ತಪ್ಪಿರಲಿಲ್ಲ. ಬಲಿಷ್ಠ ಮೊಘಲ್ ಸಾಮ್ರಾಟನ ಶತ್ರುತ್ವ ಸಂಪಾದಿಸಿ ತಮ್ಮ ಹಿತ ಕಾಪಾಡಿಕೊಳ್ಳುವುದು ದುಸ್ಸಾಧ್ಯ ಎಂಬ ಮನವರಿಕೆಯಾಗಿ, ದೆಹಲಿಯ ಸಾಮ್ರಾಟನಿಗೆ ಕಪ್ಪ ನೀಡಲು ಸಮ್ಮತಿಸಿದರು.

ಗುರು ಗೋಬಿಂದ್‌ಸಿಂಗ್, ತನ್ನ ಪಡೆಯೊಂದಿಗೆ ಸ್ವಸ್ಥಾನವಾದ ಆನಂದ್‌ಪುರಕ್ಕೆ ಹಿಂದಿರುಗಿದರು. ದಾರಿಯಲ್ಲಿ ಅವರ ಸೈನಿಕರಿಗೆ ಬೇಕಾಗುವ ಆಹಾರ ಸಾಮಗ್ರಿ ನೀಡಲು ಹಳ್ಳಿಯ ನಾಗರಿಕರು ಮತ್ತು ರೈತರು ಸಮ್ಮತಿ ನೀಡದಿದ್ದರಿಂದ ಅವರು ಕೊಳ್ಳೆ ಹೊಡೆಯಬೇಕಾಯಿತು.

ಆನಂದಪುರದಲ್ಲಿ ನೆಲೆಯೂರಿದ ಗುರು ಗೋಬಿಂದ್ ಸಿಂಗ್, ತನ್ನ ಪಡೆಯನ್ನು ಇಮ್ಮಡಿಸಿದರು. ಅವರಿಗೆ ಅರಿವಾಗಿತ್ತು. ಯಾವುದೇ ಕ್ಷಣದಲ್ಲಿ, ಮೊಘಲ್ ಸೈನ್ಯ ತನ್ನ ಮೇಲೆ ಏರಿ ಬರುವುದೆಂದು, ರಾಜರು ಕೂಡ ಗುರುವಿನ ಏಳಿಗೆಯನ್ನು ಸಹಿಸದೆ, ಮೊಘಲ್‌ರಿಗೆ ಸಹಾಯಹಸ್ತ ನೀಡಿ ತಮ್ಮ ಸ್ಥಾನವನ್ನು ಭದ್ರಮಾಡಿಕೊಳ್ಳುವ ಸ್ಥಿತಿ ತಲುಪಿದ್ದರು. ಭಾರತದ ಇತಿಹಾಸದಲ್ಲಿ ಕಂಡುಬರುವ ಅನೈಕ್ಯತೆಯ ವ್ಯಾಧಿ ಅವರನ್ನು ಕಾಡಿತ್ತು. ಅದು ಅವರಿಗೆ ಮುಳುವಾಗಿದ್ದರೆ, ದೆಹಲಿ ಸಾಮ್ರಾಟನಿಗೆ ಅದು ವರವಾಗಿತ್ತು.

ಗುರುವಿನ ಬಲ ಮತ್ತು ಪ್ರತಿಷ್ಠೆಗಳನ್ನು ಹತ್ತಿಕ್ಕಲು ಔರಂಗಜೇಬ್ ಪಂಜಾಬ್‌ನ ರಾಜ್ಯಪಾಲ ದಿಲಾವರ್ ಖಾನ್‌ನಿಗೆ ಗುರುವನ್ನು ಸದೆಬಡಿಯಲು ಆಜ್ಞೆ ನೀಡಿದ. ದಿಲಾವರ್ ಖಾನ್ ತನ್ನ ಮಗನಿಗೆ ೧೧೦೦೦ ಸೈನಿಕ ಪಡೆಯನ್ನು ನೀಡಿ ಆನಂದಪುರವನ್ನು ಆಕ್ರಮಿಸಲು ಕಳುಹಿಸಿದ. ಸುದ್ದಿ ತಿಳಿದ ಆನಂದಪುರದ ಪ್ರಜೆಗಳು ಊರು ಖಾಲಿ ಮಾಡಿದರು. ಆದರೆ ಗುರುವಿನ ಪಡೆ, ಸಟ್‌ಲೆಜ್ ನದಿಯ ದಡದಲ್ಲಿ ಮೊಘಲ್ ಪಡೆಯನ್ನು ಎದುರಿಸಿತು. ಅಲ್ಲಿ ಕದನ ಜರುಗಿ, ಮೊಘಲ್ ಸೈನ್ಯವನ್ನು ಸೋಲಿಸಿತು. ದಿಲಾವರ್ ಖಾನ್, ತನ್ನ ಗುಲಾಮಿ ದಂಡನಾಯಕ ಹುಸೈನ್ ಎಂಬಾತನ ನೇತೃತ್ವದಲ್ಲಿ ಮತ್ತೊಂದು ಸೈನ್ಯಪಡೆಯನ್ನು ಆನಂದಪುರವನ್ನು ಆಕ್ರಮಿಸಲು ಕಳುಹಿಸಿದ. ಆ ಪಡೆಯ ಸೈನಿಕರೂ ದಾರಿಯುದ್ದಕ್ಕೂ ಹಳ್ಳಿ, ಊರು ನಾಶಮಾಡಿ, ಅಮಾಯಕ ಪುರುಷ–ಸ್ತ್ರೀಯರ ಹತ್ಯೆ ಮಾಡಿ ನುಗ್ಗಿದರು. ರಾಜಾ ಭೀಮ್ ಚಂದ್, ಹುಸೈನ್‌ನ ಅಪಾರ ಸೈನ್ಯದ ಮುನ್ನಡೆ ಕಂಡು ಹೆದರಿದ. ಅವನು ಗುರುವಿನ ಸಹಾಯ ಕೇಳದೆ, ಹುಸೈನ್‌ನೊಂದಿಗೆ ಸಂಧಿ ಮಾಡಿಕೊಂಡ. ಗುಲೇರ್ ಪ್ರದೇಶದ ರಾಜಾ ಮಾತ್ರ ಪ್ರತಿರೋಧ ತೋರಿಸಿದ.ರಾಜಾ ಗೋಪಾಲ್, ಗುರುವಿನ ಸಹಾಯ ಕೋರಿದ. ಗುರು

೫. P-275 History of Sikh People by G.Singh

ವಿವಿಧ ರಾಜರುಗಳ ಮಧ್ಯೆ ಸಂಧಿ ಸಾಮರಸ್ಯ ಏರ್ಪಡಿಸಲು ಶ್ರಮಿಸಿದ. ಆದರೆ ಅನೈಕ್ಯತೆಯ ವ್ಯಾಧಿ ಬಲವಾಗಿ ಹರಡಿತ್ತು. ಅವರು ಸಂಧಿಗೆ ಒಪ್ಪದೆ ಮೊಘಲ್‌ರಿಗೆ ಬಗ್ಗಿದರು. ಗುಲೇರ್ ರಾಜಾ ಗೋಪಾಲ್ ಗುರುವಿನ ಪಡೆಯೊಂದಿಗೆ ಮೊಘಲ್ ಸೈನ್ಯವನ್ನು ಎದುರಿಸಿದ. ಆ ಹೋರಾಟದಲ್ಲಿ ಗೋಪಾಲನಿಗೆ ವಿಜಯವಾಯಿತು. ಕಾಂಗ್ರಾ ರಾಜ ಮತ್ತು ಮೊಘಲ್ ಸೈನ್ಯಾಧಿಕಾರಿಗಳ ಹತ್ಯೆಯಾಯಿತು.

ಸುದ್ದಿ ಅರಿತ ಔರಂಗಜೇಬ್ ಕೆರಳಿದ. ಅವನು ತನ್ನ ಮಗ ಬಹದೂರ್ ಶಾನನ್ನು ಗುರುವಿನ ವಿರುದ್ಧ ಮತ್ತು ರಾಜರ ವಿರುದ್ಧ ಯುದ್ದ ಜರುಗಿಸಲು ಕಳುಹಿಸಿದ. ಅವನು ತನ್ನ ಸೈನ್ಯಾಧಿಕಾರಿಯಾದ ಮಿರ್ಜಾ ಬೇಗ್‌ನನ್ನು ಯುದ್ಧ ಜರುಗಿಸಲು ಆಜ್ಞಾಪಿಸಿದನು. ಮಿರ್ಜಾ ತನ್ನ ಸೈನ್ಯಪಡೆಯೊಂದಿಗೆ ಗುಡ್ಡಗಾಡಿನ ರಾಜರ ವಿರುದ್ಧ ಸಮರ ಜರುಗಿಸಿ, ಜನರ ಹತ್ಯಾಕಾಂಡ ಜರುಗಿಸಿ, ಅಪಾರ ಸಾವುನೋವು ಉಂಟುಮಾಡಿದ. ಸೋತ ರಾಜರು ತಮ್ಮ ಧನದಾನ್ಯ ತೆಗೆದುಕೊಂಡು, ಮಲೆಗಳಲ್ಲಿ ತಲೆತಪ್ಪಿಸಿಕೊಂಡರು.

ಗುಡ್ಡಗಾಡಿನ ರಾಜ ಮಹಾರಾಜರ ವಿರುದ್ಧ ಕದನ ಜರುಗಿಸಿದರೂ, ಗುರು ಗೋವಿಂದ್ ಸಿಂಗ್‌ನ ವಿರುದ್ಧ ಕದನ ಜರುಗಿಸದೆ, ಅವನನ್ನು ಕ್ಷೇಮದಿಂದ ಇರಗೊಟ್ಟಿದ್ದು ಗೊಂದಲವೆಬ್ಬಿಸಿದೆ. ಕೆಲವು ಇತಿಹಾಸಕಾರರ ಪ್ರಕಾರ, ಮುಲ್ತಾನ್ ನಗರದಲ್ಲಿದ್ದ ಸಿಖ್ ಭಾಯಿ ನಂದಲಾಲ್‌ನ ಮಧ್ಯಸ್ಥಿಕೆಯಿಂದ, ಬಹದೂರ್ ಶಾನ ಮನವೊಲಿಸಿ, ಅವನು ಗುರುವಿನ ವಿರುದ್ಧ ಯಾವುದೇ ಕ್ರಮ ಜರುಗದಂತೆ ನೋಡಿಕೊಂಡ. ಈ ಭಾಯಿ ನಂದ್‌ಲಾಲ್ ರಾಜಕುಮಾರ ಮುಆಜೀಮ್ (ಮುಂದೆ ಬಾದ್‌ಶಹಾ ಬಹದೂರ್ ಶಾ) ಮೀರ್ ಮುನ್ಷಿಯಾಗಿ ಕೆಲಸ ಮಾಡಿಕೊಂಡಿದ್ದ. ಅದು ಹೇಗಾದರೂ ಇದ್ದರೂ ಮೊಘಲ್ ಸೈನ್ಯ ಗುರು ಗೋಬಿಂದ್ ಸಿಂಗ್‌ನ ವಿರುದ್ಧ ಕದನ ಹೂಡದೆ ಕೇವಲ ಗುಡ್ಡಗಾಡಿನ ರಾಜರ ವಿರುದ್ಧ ಯುದ್ಧ ಜರುಗಿಸಿ ಅವರ ಹುಟ್ಟು ಅಡಗಿಸಿದ್ದು ಸತ್ಯ.

ಗುರು ಗೋಬಿಂದ್ ಸಿಂಗ್ ಆನಂದಪುರದಲ್ಲಿ ಶಾಂತಿ ಜೀವನ ಸಾಗಿಸಿದ್ದ ಹಾಗೆ, ತನ್ನ ಸಂಸಾರಿಕ ಜೀವನದಲ್ಲೂ ಬೆಳವಣಿಗೆ ಕಂಡ. ಇಬ್ಬರು ಮಹಿಳೆಯರನ್ನು ಲಗ್ನವಾದರು. ಆ ಮಹಿಳೆಯರ ಪೋಷಕರು ತಮ್ಮ ಹೆಣ್ಣು ಮಕ್ಕಳನ್ನು ಗುರುವಿಗೆ ಲಗ್ನ ಮಾಡಿಕೊಡುವ ಹರಕೆ ಹೊತ್ತು, ಗುರುವಿನ ಮನವೊಲಿಸಿ ಲಗ್ನ ಮಾಡಿದರು. ಒಬ್ಬಳ ಹೆಸರು ಜೀತೋಜಿ ಎಂದಾಗಿದ್ದು, ಆಕೆ ಲಾಹೋರ್ ನಗರದ ಖಾತ್ರಿ ಪಂಗಡಕ್ಕೆ ಸೇರಿದ ಹರ್‌ಜಸ್ ಎಂಬುವನ ಮಗಳಾಗಿದ್ದಳು. ೧೬೭೭ ರಲ್ಲಿ ಗುರುವಿನ ಲಗ್ನವಾದಾಗ, ಅವನ ವಯಸ್ಸು ಕೇವಲ ೧೧ ವರ್ಷವಾಗಿತ್ತು. ಆಕೆಗೆ ಮೂರು ಗಂಡು ಮಕ್ಕಳಾದವು. ಅವರ ಹೆಸರುಗಳು ಹೀಗಿವೆ : ಜುಜ್ಹಾರ್ ಸಿಂಗ್ (೧೬೯೦), ಜೋರಾವಾರ್ ಸಿಂಗ್ (೧೬೯೬) ಮತ್ತು ಫತೇ ಸಿಂಗ್ (೧೬೯೮) ಗುರುವಿನ ಇನ್ನೊಬ್ಬ ಹೆಂಡತಿಯ ಹೆಸರು ಸುಂದರಿ ಎಂದಾಗಿದೆ. ಈಕೆ ಲಾಹೋರ್‌ನ ಖಾತ್ರಿ ಪಂಗಡಕ್ಕೆ ಸೇರಿದ

ರಾಮ್ ಶರಣ್ ಎಂಬಾತನ ಮಗಳಾಗಿದ್ದಳು. ಈಕೆಗೆ ಒಂದು ಗಂಡು ಮಗುವಾಯಿತು. ಅವನ ಹೆಸರು ಅಜಿತ್ ಸಿಂಗ್ (೧೬೮೬). ಮುಂದೆ ಗುರು ಮತ್ತೊಬ್ಬ ಮಹಿಳೆ, ಸಾಹಿಬ್ ಕೌರ್‌ಳನ್ನೂ ಲಗ್ನವಾದ. ಆಕೆ ತನ್ನ ಜೀವನವನ್ನು ಗುರುವಿನ ಸೇವೆಗೆ ಸಮರ್ಪಿಸಿದ್ದು ತಾನು ಲಗ್ನವಾದರೂ ಕುಮಾರಿಯಾಗಿಯೇ ಉಳಿಯುವೆನು ಎಂದು ಹೇಳಿ ಗುರುವನ್ನು ಬಲವಂತ ಪಡಿಸಿದ್ದರಿಂದ ಆಕೆಯನ್ನು ನಾಮಮಾತ್ರಕ್ಕೆ ಮದುವೆಯಾದರು ಗುರು. ಸಿಖ್‌ರು, ಇಂದಿಗೂ ಆಕೆಯನ್ನು 'ಕುವರಾ ಡೋಲಾ' (ಕನ್ಯಾಕುಮಾರಿ) ಎಂದೇ ಕರೆದು ಹರಿಸಿದ್ದಾರೆ. ಗುರು ಆಕೆಯನ್ನು 'ಖಾಲ್ಸಾ'ದ ಮಾತೆ ಎಂದು ಕರೆದು ಹರಿಸಿದ.

ಆನಂದಪುರದಲ್ಲಿ ಕ್ಷೇಮದಿಂದ ಜೀವನ ಸಾಗಿಸುವಾಗ ಗುರುವಿನ ಜೀವನದಲ್ಲಿ ಹಲವಾರು ಘಟನೆಗಳು ಜರುಗಿದವು. ಒಮ್ಮೆ ಕೇಶೋದಾಸ್ ಎಂಬ ಬ್ರಾಹ್ಮಣ ಕಾಶಿಯಿಂದ, ಗುರುವನ್ನು ಕಾಣಲು ಬಂದ. ಆತ ಚಂಡೀ ಹವನ ಮಾಡಿ ಚಂಡೀ ದೇವತೆ ಅಥವಾ ದುರ್ಗಾ ಅಥವಾ ಕಾಳಿಕ ದೇವಿಯ ದರ್ಶನ ಮಾಡಿಸುವೆನೆಂದು ಗುರುವಿಗೆ ಹೇಳಿದ. ಕಾಳಿಯ ಪ್ರತ್ಯಕ್ಷವಾಗಿ, ಅವಳ ಕೃಪಾಕಟಾಕ್ಷಕ್ಕೆ ಪಾತ್ರರಾಗಿ, ಯಾವುದೇ ಕಾಳಗದಲ್ಲಿ ಅವರಿಗೆ ಜಯ ಒದಗಿಸುವವಳಾಗುತ್ತಾಳೆ ಎಂದು ಘೋಷಿಸಿದ. ಗುರುವಿನ ಅನುಯಾಯಿಗಳಿಗೆ ಮತ್ತು ಶಿಷ್ಯಂದಿರಿಗೆ, ಬ್ರಾಹ್ಮಣನ ಮಾತಿನಲ್ಲಿ ನಂಬಿಕೆಯಾಗಿ ಹೋಮ ಹವನ ಮತ್ತು ಇತರ ಆಚಾರ ಕರ್ಮಾದಿಗಳಿಗೆ ಸೂಕ್ತ ಏರ್ಪಾಟು ಮಾಡಬೇಕೆಂದು ಗುರು ಗೋಬಿಂದ್ ಸಿಂಗ್‌ರಿಗೆ ತಮ್ಮ ಅಪೇಕ್ಷೆ ಸಲ್ಲಿಸಿದರು. ಗುರು, ಅವರ ಅಪೇಕ್ಷೆಗೆ ತನ್ನ ಅಭಿಪ್ರಾಯ ಹೀಗೆ ವ್ಯಕ್ತಪಡಿಸಿದರು:

'ಯಾವುದೇ ದೇವ ದೇವತೆಯರು, ಏಕೈಕ ಪರಮಾತ್ಮನ ಇಚ್ಛೆ ಮತ್ತು ಅಧಿಕಾರಿಗಳಿಗೆ ಒಳಗಾಗಿರುತ್ತಾರೆ. ಆ ಏಕೈಕ ದೇವನನ್ನು ನಾವು ಸ್ತುತಿಸಿ, ನಮ್ಮ ಬೇಡಿಕೆಗಳನ್ನು ಸಲ್ಲಿಸಬೇಕು. ಅವನು ಮಾನವನಿಗೆ ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳಲು ಅಧಿಕಾರ ನೀಡಿರುತ್ತಾನೆ. ಅದಕ್ಕಾಗಿ ಮಾನವ ದೇವರನ್ನು ನಂಬಿ, ತನ್ನನ್ನು ಅವನಿಗೆ ಸಂಪೂರ್ಣವಾಗಿ ಸಮರ್ಪಿಸಿ ಹೋರಾಡಬೇಕು.'

ಆದರೆ, ಸಿಖ್‌ರು ಗುರುವಿನ ಮಾತುಗಳನ್ನು ಆಲೈಸಿ ನಂಬಿದರೂ, ಅನಕ್ಷರಸ್ಥ, ಗುಡ್ಡಗಾಡಿನ, ಶತಮಾನಗಳ ಕಾಲದಿಂದ ಮೂಢನಂಬಿಕೆಗಳ ಆಚಾರ ವಿಚಾರಗಳಿಗೆ ತುತ್ತಾದ ಜನರನ್ನು ತನ್ನ ವಿಚಾರಧಾರೆಗಳಿಗೆ ನಂಬಿಸಲು ಸಾಧ್ಯವಾಗದೆ, ಗುರು, ಆ ಕಾಶೀ ಬ್ರಾಹ್ಮಣ ಕೇಶೋದಾಸ್‌ನಿಗೆ ಹವನದ ಕಾರ್ಯಕ್ಕೆ ಸಕಲ ಏರ್ಪಾಡು ಮಾಡಲಿಕ್ಕೆ ಹೇಳಿದ. ಗುರುವಿನ ಉದ್ದೇಶ ಆ ಹವನ ಕಾರ್ಯದಿಂದ ಯಾವ ಉಪಯೋಗವಾಗದಿರುವ ಸಂಗತಿಯನ್ನು ಸಾಮಾನ್ಯ ಜನರಿಗೆ ಪ್ರಕಟಪಡಿಸುವುದಾಗಿತ್ತು ಎಂದಿದ್ದಾರೆ ಇತಿಹಾಸಕಾರರು. ೬

---

೬. P-279 History of Sikh People by G.Singh

ಹವನ ಹೋಮ ನೈನಾದೇವಿಯ ಗುಡ್ಡದ ಮೇಲೆ ಒಂದು ವರ್ಷದವರೆಗೂ ಜರುಗಿ ದುರ್ಗಾಷ್ಟಮಿ ದಿನ ಬಂದಾಗ, ಗುರು, ಕಾಶೀ ಬ್ರಾಹ್ಮಣನಿಗೆ 'ಯಾವಾಗ ದೇವಿ ದುರ್ಗಾ ಪ್ರತ್ಯಕ್ಷಳಾಗುವಳು' ಎಂದು ಕೇಳಿದಾಗ, ಆತ ಉತ್ತರಿಸಿದ, 'ಒಬ್ಬ ಪವಿತ್ರಾತ್ಮನಾದ ಮತ್ತು ಉತ್ಕೃಷ್ಟನಾದ ವ್ಯಕ್ತಿಯು ಆಹುತಿಯಾದರೆ, ದೇವಿ ಪ್ರತ್ಯಕ್ಷಳಾಗುವಳು.' ಅವನ ಮಾತುಗಳನ್ನು ಕೇಳಿದ ಗುರು, 'ಈ ವರ್ಣಮಯ ಉತ್ಕೃಷ್ಟ ಹಾಗೂ ಪವಿತ್ರನಾದ ವ್ಯಕ್ತಿ'ಯೆಂದರೆ ತಾವೇ ಆಗಿರುವುದರಿಂದ ತಮ್ಮ ತಲೆಯನ್ನೇ ಯಾಕೆ ಈ ಹವನ ಕುಂಡದಲ್ಲಿ ಹಾಕಿ, ದೇವಿಯ ಪ್ರತ್ಯಕ್ಷಳಾಗುವುದಕ್ಕೆ ಪ್ರಾರ್ಥಿಸಬಾರದು?

ಗುರುಗಳ ಮಾತುಗಳನ್ನು ಕೇಳಿ ಬ್ರಾಹ್ಮಣ ಅವಾಕ್ಕಾದ. ಭಯಭೀತಿಯಿಂದ ಓಡಿ ಹೋದ. ಗುರು ಗೋಬಿಂದ್ ಸಿಂಗ್, ಉಳಿದ ಎಲ್ಲಾ ಪದಾರ್ಥಗಳನ್ನು ಹೋಮಕುಂಡದಲ್ಲಿ ಬಿಸಾಡಿದ. ಹಿರಿದ ಕತ್ತಿ ಹಿಡಿದು ಆ ಉರಿಯುತ್ತಿರುವ ಹೋಮಕುಂಡದ ಹಿಂಬದಿಯಲ್ಲಿ ನಿಂತ. ಆ ದೃಶ್ಯವನ್ನು ನೋಡಿದ ಜನರೆಲ್ಲಾ ಸ್ಥಂಭೀಭೂತರಾದರು. ಅವರ ಕಣ್ಣುಗಳಲ್ಲಿ ದೇವಿಯೇ ಕತ್ತಿಹಿಡಿದು ಪ್ರತ್ಯಕ್ಷಳಾದಂತೆ ತೋರಿತು.

ಕತ್ತಿಹಿರಿದ ಗುರು ನೈನಾದೇವಿ ಗುಡ್ಡದಿಂದ ಕೆಳಗೆ ಇಳಿದು ದೇವಿಯ ದರ್ಶನಕ್ಕೆ ಕಾದು ಕುಳಿತ್ತಿದ್ದ ಜನರನ್ನು ಉದ್ದೇಶಿಸಿ, 'ಈ ಕತ್ತಿಯೇ ಶಕ್ತಿಸ್ವರೂಪಿಣಿಯ ನಿಜವಾದ ಸ್ವರೂಪ. ಈ ಹೊಳೆಯುವ ಉಕ್ಕಿನಿಂದ ತಪ್ಪು ಕೇಡು ಎಸುಗುವವರಿಗೆ ಶಿಕ್ಷೆ ನೀಡಲ್ಪಡುವುದು ಮತ್ತು ಸದ್ಗುಣಗಳು ರಕ್ಷಣೆ ಗೊಳಲ್ಪಡುವುದು ಮತ್ತು ಫಲ ನೀಡಲ್ಪಡುವುದು. ಯಾರು ಒಳ್ಳೆಯ ಕಾರ್ಯ ಮಾಡಲು ಇಚ್ಛಿಸುವರೋ ಅದರ ದೀಕ್ಷೆಯ ರುಚಿ ಅನುಭವಿಸಿ, ನಿಶ್ಚಯವಾಗಿ ದೇವರ ಕೃಪೆ ಪಡೆಯಬಹುದು' ಎಂದು ಘೋಷಿಸಿದರು.

'ನಿಷ್ಠೆಯುಳ್ಳಾತಂಗೆ ನಿತ್ಯನೇಮದ ಹಂಗೇಕೋ?' ಎಂಬ ಗಾದೆಯಂತೆ, ಗುರು ತನ್ನ ಶಿಷ್ಯಂದಿರನ್ನು ಉದ್ದೇಶಿಸಿ, ಕವಿತೆಗಳ ಸಾಲುಗಳನ್ನು ಹಾಡಿ,

'ಜನಸಾಮಾನ್ಯರಲ್ಲಿ ಶಕ್ತಿ ಅಡಗಿದೆಯಲ್ಲದೆ, ದೇವ ದೇವತೆಯರಲ್ಲಲ್ಲ. ನಿಮ್ಮ ಸಹಕಾರ, ಬೆಂಬಲಗಳಿಂದಲೇ ನಾನು ಯುದ್ಧಗಳಲ್ಲಿ ಜಯ ಗಳಿಸಿದೆ; ನಿಮ್ಮ ಕೊಡುಗೆಗಳಿಂದಲೇ ನಾನು ಬಡವರ ಸೇವೆ ಮಾಡಿದೆ. ನಿಮ್ಮಿಂದಲೇ ನಾನು ನನ್ನ ತಾಪ ಶಮನವಾದವು. ನಿಮ್ಮ ದೇಣಿಗೆಗಳಿಂದಲೇ ನನ್ನ ಮನೆ ಸುಖ ಸಂಪತ್ತಿನಿಂದ ಕಂಗೊಳಿಸುತ್ತಿದೆ. ನಿಮ್ಮ ಕರುಣಾಮೃತದಿಂದ ನಾನು ನನ್ನ ಶತ್ರುಗಳ ಮೇಲೆ ಜಯ ಗಳಿಸಿದೆ. ನಿಮ್ಮ ಸ್ನೇಹ ಸಹಕಾರಗಳಿಂದಲೇ ನನ್ನ ಬುದ್ಧಿಶಕ್ತಿಯನ್ನು ಬೆಳೆಸಿಕೊಂಡಿದ್ದೇನೆ. ಓ ನನ್ನ ಪ್ರಜೆಗಳೇ ! ನಿಮ್ಮಿಂದಲೇ ನಾನು ಘನತೆ ಗೌರವ ಸಂಪಾದಿಸಿದೆ ಮತ್ತು ನೀವು ನನ್ನನ್ನು ಈ ರೀತಿ ಮೇಲೆತ್ತದಿದ್ದರೆ, ನಾನು ಇತರ ದುರಾದೃಷ್ಟ ಮತ್ತು

ಸ್ನೇಹಿತರ ಆಸರೆ ಇಲ್ಲದ ಬಡವನಾಗಿ ಇರುತ್ತಿದ್ದೆ !'

ಗುರು ಗೋಬಿಂದ್ ಸಿಂಗ್, ಜನರನ್ನು ಉದ್ದೇಶಿಸಿ ತನ್ನ ಮನದಾಳದ ಅನಿಸಿಕೆಯನ್ನು ಹೊರಗೆಡವಿದರು.

"ಯಾರು ಜನರ ಸೇವೆಯನ್ನು ಮಾಡುವರೋ ಅವರು ನನ್ನನ್ನು ಹರ್ಷಗೊಳಿಸುವರು. ನನ್ನ ಮನಸ್ಸಿಗೆ ಬೇರೆ ಯಾವುದೂ ಹರ್ಷಗೊಳಿಸುವುದಿಲ್ಲ. ದಾನ ಕೊಡುವುದಾದರೆ ಅವರಿಗೆ ನೀಡಿ, ಯಾಕೆಂದರೆ ಇತರ ಯಾರೂ ಅದನ್ನು ಸ್ವೀಕರಿಸಲು ಯೋಗ್ಯರಲ್ಲ. ಜನರಿಗೆ ದಾನಧರ್ಮ ಮಾಡಿದರೆ, ಅದರ ಫಲ ಇಂದು ಅಥವ ನಾಳೆ ಗೋಚರಗೊಳ್ಳುವುದು. ಯಾಕೆಂದರೆ ಇತರ ಯಾವುದೇ ಸೇವೆ ನಿರರ್ಥಕ. ನನ್ನ ಸಕಲ ಸ್ವತ್ತು, ನನ್ನ ದೇಹ, ನನ್ನ ಆತ್ಮ ನನ್ನ ಜನರಿಗಾಗಿ ಮುಡಿಪಾಗಿಟ್ಟಿದ್ದೇನೆ. ಯಾಕೆಂದರೆ ಇತರ ಯಾವುದೇ ಒಂದು ನಿರರ್ಥಕ, ಸತ್ಯವಾಗಿ ಯಾವದೂ ಇಲ್ಲ !' ೭

ಗುರು ಗೋವಿಂದ್ ಸಿಂಗ್, ತನ್ನ ಮತದ ಧ್ಯೇಯ ಮತ್ತು ತತ್ವಗಳನ್ನು ಪ್ರಚಾರ ಮಾಡುತ್ತಿದ್ದ ಸಮಯದಲ್ಲೇ ದೆಹಲಿ ಬಾದ್‌ಶಹಾ ಔರಂಗಜೇಬ್ ತನ್ನ ಮತಾಂಧತೆ ಮತ್ತು ಕ್ರೂರ ಆಡಳಿತವನ್ನು ಜಾರಿಗೆ ತರಲು ಪ್ರಾರಂಭಿಸಿದ್ದನು. ೧೬೬೯ರಲ್ಲೇ ಹಿಂದೂ, ಸಿಖ್ ಮತ್ತು ಸೂಫೀಗಳ ಸಂಗೀತವಾದ್ಯಗಳನ್ನು ಹಾಳುಗೆಡವಿ, ಗುಡಿಗಳನ್ನು ಕೆಡವಿ, ದೇವತಾ ವಿಗ್ರಹಗಳನ್ನು ಆಗ್ರಾ ಮತ್ತು ದೆಹಲಿ ಮಸೀದಿಗಳ ಬಾಗಿಲು, ಮೆಟ್ಟಿಲಿನ ಮೇಲೆ ಇರಿಸಿ ಮುಸ್ಲಿಮರು ಅವನ್ನು ತುಳಿದು ಪ್ರಾರ್ಥಿಸುವ ವಾಡಿಕೆಯನ್ನು ಜಾರಿಗೆ ತಂದನು. ಹಿಂದೂಗಳು ಗಡ್ಡ ಮೀಸೆ ಬೆಳೆಸುವುದನ್ನು, ಆಯುಧಗಳನ್ನು ಹೊಂದುವುದನ್ನು, ಕುದುರೆ ಸವಾರಿಯನ್ನು ಮಾಡುವುದನ್ನು ನಿಷೇಧಿಸಿದನು. ಪ್ರಸಿದ್ಧ ಇಟಾಲಿಯನ್ ಪ್ರವಾಸಿ ಮನೂಚಿ ವಿವರಿಸಿದಂತೆ, ಹೆಸರಾಂತ ಸೂಫೀ ಸಂತ ಸರ್ಮದ್ ಎಂಬಾತನ ತಲೆ ಕಡಿದು ಹಾಕಲು ಆಜ್ಞೆ ನೀಡಿ, ಸುನ್ನೀ ಧರ್ಮದ ಪ್ರಬಲ ಮತಾವಲಂಬಿ ಮತ್ತು ಅನುಯಾಯಿಯಾಗಿ ಔರಂಗಜೇಬ್ ಹೊರಹೊಮ್ಮಿದ. ಹಿಂದೂ ರಾಜಪುತ್ರ ಮತ್ತು ಶಾನುಭೋಗ ಪಟೇಲ್ ವೃತ್ತಿಯಲ್ಲಿದ್ದವರನ್ನು ನೌಕರಿಯಿಂದ ತೆಗೆದು ಹಾಕಿದ. ಬಲವಂತವಾಗಿ ಇಸ್ಲಾಮ್‌ನ್ನು ಅವರ ಮೇಲೆ ಹೇರಿ ಅವರನ್ನು ನೌಕರಿಯಲ್ಲಿರಿಸುವ ಏರ್ಪಾಡು ಮಾಡಿದ.

ದಕ್ಷಿಣದಲ್ಲಿ ಪ್ರಬಲರಾಗಿದ್ದ ಮರಾಠರ ವಿರುದ್ಧ ಯುದ್ಧ ಜರುಗಿಸಿದ. ಶಿವಾಜಿ ಬದುಕಿರುವವರೆಗೂ, ಅವನ ಸೈನ್ಯ ಹಿಮ್ಮೆಟ್ಟಿ, ಅನೇಕ ಪ್ರದೇಶ ಕಳೆದುಕೊಂಡರೂ, ಅವನ ಮರಣದ ನಂತರ, ಶಿವಾಜಿಯ ಮಗ ಸಾಂಭಾಜಿಯನ್ನು ಸೋಲಿಸಿ ಅವನನ್ನು ಕ್ರೂರವಾಗಿ ಸಾಯಿಸಿದ. ೧೬೮೯ರಲ್ಲಿ ಸಾಂಭಾಜಿಯನ್ನು ಸೆರೆಹಿಡಿದು, ಅವನ ನಾಲಿಗೆ ಸೀಳಿಸಿ, ಕಣ್ಣುಗಳನ್ನು ಕೀಳಿಸಿ, ಅವನ ೧೦ ಸಂಗಾತಿಯರ ಕಗ್ಗೊಲೆ ಮಾಡಿದ.

೬. P 282 History of Sikh people by G.Singh

ಸಾಂಭಾಜಿ ಮತ್ತು ಅವನ ಮಂತ್ರಿ ಕವಿಕಳಶ್‌ನ ದೇಹದ ಚರ್ಮ ಸುಲಿಸಿ, ಹುಲ್ಲು ತುಂಬಿಸಿ, ಮರಾಠಾ ಪ್ರದೇಶಗಳ ನಗರಗಳಲ್ಲಿ ಡಂಗೂರ ಸಾರಿಸಿ ಪ್ರದರ್ಶನ ಮಾಡಿ, ತೃಪ್ತಿಪಟ್ಟ ಕ್ರೂರಿ ಔರಂಗಜೇಬ್.೮

೧೬೮೦ ರಲ್ಲಿ ಔರಂಗಜೇಬ್ ಹಿಂದೂ ರಾಜರ ವಿರುದ್ಧ ಹಗೆತನದ ಯುದ್ಧ ಜರುಗಿಸಿದಂತೆ, ಶಿಯಾ ಮುಸ್ಲಿಮ್ ಸುಲ್ತಾನರ ವಿರುದ್ಧ ಕದನ ಕರುಗಿಸಿ ಬಿಜಾಪುರ ಮತ್ತು ಬೀದರ್ ರಾಜ್ಯಗಳನ್ನು ಕಬಳಿಸಿದ.

ಔರಂಗಜೇಬ್‌ನ ಮತಾಂಧತೆ ಮತ್ತು ಕ್ರೂರ ಆಡಳಿತ ಪ್ರಜೆಗಳನ್ನು ಹತಾಶಗೊಳಿಸಿದರೂ ಸೌಮ್ಯ, ಶಾಂತಿ, ನೆಮ್ಮದಿಯ ಜೀವನ ಸಾಗಿಸುವ, ಶಾರೀರಿಕ ದೌರ್ಬಲ್ಯ ಬೆಳೆಸಿಕೊಳ್ಳುವ, ಪುಕ್ಕಲುತನ, ಹೇಡಿತನಗಳ ಸ್ವಭಾವ ಹೊಂದಿರುವ ಹಿಂದೂಗಳು ಆಳುವವರ ಕೈಗೊಂಬೆಯಾಗಿ, ಅವರ ಕ್ರೂರ, ಅನೀತಿ, ಅಧರ್ಮ, ಅನಾಚಾರಗಳ ಆಡಳಿತಕ್ಕೆ ತಲೆಬಾಗಿ ಗುಲಾಮರಾಗಿ ಬಾಳುತ್ತಿದ್ದುದು ಅತ್ಯಂತ ವಿಷಾದಕರವಾಗಿತ್ತು. ಆದರೆ ಅತ್ಯಂತ ಆಶ್ಚರ್ಯಕರವಾದ ಸಂಗತಿಯೆಂದರೆ, ಹಿಂದೂಗಳು ತಮ್ಮ ಈ ಅನೇಕ ದೌರ್ಬಲ್ಯಗಳಿಂದ ನರಳುತ್ತಿದ್ದರೂ, ತಮ್ಮ ಜಾತಿ, ಧರ್ಮಕ್ಕೆ ಅಂಟಿಕೊಂಡಿದ್ದು ಒಂದು ರೀತಿಯ ಅತಿರೇಕದ ಆಶ್ಚರ್ಯದ ವಿರೋಧಭಾಸವಾಗಿತ್ತು. ಧರ್ಮಾಭಿಮಾನವಿದ್ದರೂ, ರಾಷ್ಟ್ರಾಭಿಮಾನವಿರಲಿಲ್ಲ ! ಅವರಲ್ಲಿ ಅನೈಕ್ಯತೆಯು ವ್ಯಾಧಿ ತಲೆ ತಲಾಂತರದಿಂದ ಹರಿದುಬಂದಿದ್ದು ಅವರ ದೌರ್ಭಾಗ್ಯವಾಗಿತ್ತು.

'ಗುರು ಗೋಬಿಂದ್ ಸಿಂಗ್, ರಾಷ್ಟ್ರಾಭಿಮಾನವೇ ಹಿಂದೂಗಳ ಧರ್ಮ' ಎಂದು ಸಾರಿ, ಅದಕ್ಕಾಗಿ ಅವನು ಪಣ ತೊಟ್ಟು ನಿಂತರು. ೯

ಹಿಂದೂಗಳ ಸ್ವಾಭಾವಿಕ ಆಲಸ್ಯ, ಹತಾಶಿತನ, ವೈರಾಗ್ಯ, ಜಡತನ, ಪುಕ್ಕಲುತನ, ಅತೀವ ಧರ್ಮಾಚರಣೆ ಇತ್ಯಾದಿಗಳಿಂದ ನರಳುತ್ತಿರುವ ಸಂಗತಿ ಅರಿತಿದ್ದ ಗುರು ಗೋವಿಂದ್ ಸಿಂಗ್, ನಿರಾಶೆಯ ಕೂಪದಲ್ಲಿ ಬಿದ್ದಿದ್ದ ಅವರನ್ನು ಮೇಲಕ್ಕೆತ್ತಿ, ಕ್ಷಾತ್ರ ಗುಣಗಳನ್ನು ಅಳವಡಿಸಿ, ಹೋರಾಡುವ ಸ್ವಭಾವಕ್ಕೆ ಪರಿವರ್ತಿಸಲು ಸಿದ್ಧನಾದರು.

ಗುರು, ಹಿಂದೂಗಳ ಈ ಹತಾಶೆ, ನಿರಾಶೆ, ವೈರಾಗ್ಯ ಸ್ವಭಾವಗಳಿಂದ ನೊಂದಿದ್ದರು. ಅವರು ತಮ್ಮ ತಂದೆ ಗುರು ತೇಘ್ ಬಹದ್ದೂರ್ .ಹಿಂದೂಗಳಿಗೋಸ್ಕರ ಪ್ರಾಣತ್ಯಾಗ ಮಾಡಿದರೂ, ಅವರ ಶವವನ್ನು ಹೊತ್ತು ಸಂಸ್ಕಾರ ಮಾಡಲು ಹಿಂದೂಗಳು ಮುಂದೆ ಬರಲಿಲ್ಲ. ಆದರೆ, ಇಬ್ಬರು ಕೀಳು ದರ್ಜೆಯ ಹಿಂದೂಗಳು ಗುರುವಿನ ತಲೆ ಮತ್ತು ದೇಹವನ್ನು ಪ್ರತ್ಯೇಕವಾಗಿ ಗುಪ್ತವಾಗಿ ಹೊತ್ತು ಸಂಸ್ಕಾರ ಮಾಡಿದ್ದು, ಉಚ್ಚ ಹಿಂದೂ ವರ್ಗದವರ ಉದಾಸೀನತೆಯ ಬಗ್ಗೆ ಅತ್ಯಂತ ಶೋಚನೀಯವಾಗಿತ್ತು ಅವನ ಪಾಲಿಗೆ.

---

೮. P 283 FN History of Sikh People by G.Singh
೯. P284 History of Sikhs People by G.Singh

ಹಿಂದೂ ರಾಜರಲ್ಲೇ ಅನ್ಯೆಕ್ಯತೆ ಇದ್ದು ಪರಸ್ಪರ ಕಲಹ, ವೈಶಮ್ಯ, ಈರ್ಷೆ ಹೊಂದಿದ್ದು, ಸತತವಾಗಿ ಪರಸ್ಪರ ಹೋರಾಡುತ್ತಿರುವ ಸಂಗತಿ ಅತ್ಯಂತ ಬೇಸರ ಹಾಗೂ ನಾಚಿಕೆಗೇಡಿನ ವಿಷಯವಾಗಿತ್ತು. ಔರಂಗಜೇಬ್‌ನ ಕ್ರೂರ ಆಡಳಿತ, ಮತಾಂಧತೆ, ಹಿಂದೂಗಳ ಮೇಲೆ ಹೇರಿದ್ದ 'ಜಜಿಯಾ' ಕಂದಾಯ ಮತ್ತು ಇತರ ಹೇಯಕರ ಮತ್ತು ಅವಮಾನಕರವಾದ ಕಾನೂನು ಕಟ್ಟಳೆಗಳ ವಿರುದ್ಧ ಹೋರಾಡದೆ, ಹೇಡಿಗಳಂತೆ ಹಿಂದೂರಾಜರು ಅವನ ಅಡಿಯಾಳಾಗಿ, ಕಪ್ಪ ಕಾಣಿಕೆ ನೀಡಿ ತಮ್ಮ ಸ್ವಾರ್ಥಸುಖ ಸಂಪಾದಿಸಿದ್ದು ಗುರು ಗೋಬಿಂದ್ ಸಿಂಗ್‌ರಿಗೆ ಅತ್ಯಂತ ನೋವಿನ ಸಂಗತಿಯಾಗಿತ್ತು. ಅವರು ಗುಡ್ಡಗಾಡಿನ ರಾಜ ಮಹಾರಾಜರಿಗೆ ತಮ್ಮ ಸ್ನೇಹ, ಸಹಕಾರ, ನೆರವು ನೀಡಿ ಅವರ ಪರವಾಗಿ ಔರಂಗಜೇಬ್‌ನ ವಿರುದ್ಧ ಕದನ ಜರುಗಿಸಿ ಜಯ ಗಳಿಸಿದರೂ ಅವರು ಮಾತ್ರ ಬಾದ್‌ಶಹಾನೊಂದಿಗೆ ಸಂಧಿ ಮಾಡಿಕೊಂಡಿದ್ದು ವಿಷಾದಕರವಾಗಿತ್ತು. ಈಗ ಗುರು ಗೋಬಿಂದ್ ಸಿಂಗ್ ಒಬ್ಬಂಟಿಗರಾಗಿದ್ದ, ಅವರಿಗೆ ತಮ್ಮ ರಕ್ಷಣೆ ತಾವೇ ಮಾಡಿಕೊಳ್ಳುವ ಸ್ಥಿತಿಗೆ ತಲುಪಿದ್ದರು.

ಗುರು ಗೋಬಿಂದ್ ಸಿಂಗ್ ಹಿಂದೂಗಳನ್ನು ತಮ್ಮೆಡೆಗೆ ಸೆಳೆದುಕೊಂಡು ಅವರನ್ನು ಕ್ಷಾತ್ರ ಸ್ವಭಾವಕ್ಕೆ ತಿರುಗಿಸಲು, ಅವರನ್ನು ವೀರಕುಮಾರರನ್ನಾಗಿ ಮಾಡಲು, ಅವರ ಪುಕ್ಕಲುತನವನ್ನು ನೀಗಿಸಲು, ಶತಮಾನಗಳ ಕಾಲ ಅವರಲ್ಲಿದ್ದ ಹತಾಶಭಾವನೆಗಳನ್ನು ಕೊನೆಗೊಳಿಸಲು, ಅವರಲ್ಲಿದ್ದ ಗುಲಾಮಗಿರಿಯ ಹೇಯಕರ ಸ್ವಭಾವವನ್ನು ಅಂತಿಮಗೊಳಿಸಲು, ಅಡ್ಡಿಯಾಗಿದ್ದ ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿದ್ದ ಜಾತಿ ಪದ್ಧತಿ. ಹಿಂದೂಗಳು ಧರ್ಮಕ್ಕೆ ಬೆಲೆ ಕೊಟ್ಟಿದ್ದಷ್ಟೇ ಜಾತಿಗೆ ಬೆಲೆ ನೀಡಿದ್ದು, ಒಂದು ದುರ್ದಶೆ ಮತ್ತು ನ್ಯೂನತೆಯಾಗಿತ್ತು. ಹುಟ್ಟಿನಿಂದಲೇ ಜಾತಿಯ ಹಚ್ಚೆಯನ್ನು ಹಣೆಗೆ ಅಂಟಿಸಿಕೊಂಡು, ಅದು ಸತ್ತ ನಂತರವೂ ಅಳಿಸಿ ಹೋಗಲಾರದಷ್ಟು ಗಟ್ಟಿಯಾಗಿ ನಿಂತಿರುವುದು ಪ್ರಾಯಶಃ ಯಾವುದೇ ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿರುವುದಿಲ್ಲ ಎನ್ನಬಹುದಾಗಿದೆ. ಮಾನವ ಹುಟ್ಟಿನಿಂದ ಮಾನವನಾಗಿ, ಕ್ರಮೇಣ ಯಾವುದೇ ಜಾತಿ, ಧರ್ಮ, ಕುಲ, ಪಂಗಡ ಎಂಬ ವರ್ಗಕ್ಕೆ ಆರಿಸಿಕೊಳ್ಳುವ ಸ್ವಾತಂತ್ರ್ಯ ಅವನಿಗೆ ದೊರೆಯದೆ ಇರುವುದು ಒಂದು ದುರಂತ. ಭಾರತದಲ್ಲಿನ ಹಿಂದೂ ಧರ್ಮದ ಜನರು ತಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದಿದ್ದರಿಂದ ಪರಕೀಯರ ಆಕ್ರಮಣ ಮತ್ತು ಆಳ್ವಿಕೆಗೆ ತುತ್ತಾಗಿದ್ದು ಸರ್ವರಿಗೂ ಅರಿತ ವಿಷಯವಾಗಿದ್ದರೂ, ಅವರಲ್ಲಿ ರಾಷ್ಟ್ರಾಭಿಮಾನದ ಕೊರತೆ, ಯಾರೇ ತಮ್ಮನ್ನು ಆಳಿದರೂ, ತಮ್ಮ ಧರ್ಮ ಮತ್ತು ಜಾತಿಗಳನ್ನು ಮುಟ್ಟದೇ ಹೋದ ಪಕ್ಷದಲ್ಲಿ ಅವರಿಗೆ ಕಪ್ಪ ಕಾಣಿಕೆ ನೀಡಿ ತಮ್ಮ ಧರ್ಮ ಜಾತಿಗಳನ್ನು ಕಾಪಾಡಿಕೊಂಡು ಬಂದಿದ್ದು ಐತಿಹಾಸಿಕ ಸತ್ಯವಾಗಿತ್ತು.

ಗುರು ಗೋಬಿಂದ್ ಸಿಂಗ್‌ರಿಗೆ ಈ ಕೆಟ್ಟ ಆಚರಣೆ ಅವರ ಅನುಭವಕ್ಕೆ ಬಂದಿತ್ತು. ಅವರು ತಮ್ಮ ಕೆಲವು ಸಿಖ್‌ರಿಗೆ ಸಂಸ್ಕೃತ ಕಲಿಸುವ ಏರ್ಪಾಡು ಮಾಡಲು ರಘುನಾಥ್

ಎಂಬ ಬ್ರಾಹ್ಮಣನಿಗೆ ಕೇಳಿದಾಗ, ಆತ, ಕೆಳಜಾತಿಯವರಿಗೆ ಸಂಸ್ಕೃತ ಕಲಿಸಲು ಒಲ್ಲೆ ಎಂದ. ಅನಂತರ, ಗುರು ಐದು ಮಂದಿ ಸಿಖ್‌ರನ್ನು ಕಾಶಿಗೆ ಕಳುಹಿಸಿ ಅವರಿಗೆ ಅಲ್ಲಿ ಸಂಸ್ಕೃತ ಕಲಿಯುವ ಏರ್ಪಾಡು ಮಾಡಿದರು. ಕರಮ್‌ಚಂದ್, ಗಂಡಾ ಸಿಂಗ್, ವೀರ್ ಸಿಂಗ್, ಸೈನಾ ಸಿಂಗ್ ಮತ್ತು ರಾಮ್ ಸಿಂಗ್‌ರು ಹಿಂದು ಬ್ರಹ್ಮಚಾರಿಗಳ ವೇಶ ತೊಟ್ಟು ಸಂಸ್ಕೃತ ಕಲಿತು ಹಿಂದಿರುಗಿದರು. ಅವರನ್ನು ಗುರು 'ನಿರ್ಮಲ್‌ರು' ಎಂದು ಕರೆದು ಗೌರವಿಸಿದರು. ೧೦

ಗುರು ಗೋಬಿಂದ್ ಸಿಂಗ್, ತಮ್ಮ ಶಿಷ್ಯರನ್ನು (ಸಿಖ್‌ರು) ಆಧ್ಯಾತ್ಮಿಕ ಮತ್ತು ಸಾಮಾಜಿಕವಾಗಿ ಒಂದುಗೂಡಿಸುವ ನಿಟ್ಟಿನಲ್ಲಿ ಸಫಲರಾಗಿದ್ದರೂ, ಅವರನ್ನು ರಾಜಕೀಯವಾಗಿ ಒಂದು ಶಕ್ತಿಯುತವಾದ, ಪ್ರಬಲ ಪಂಗಡವನ್ನಾಗಿ ಮಾಡಲು ಯತ್ನಿಸಿರಲಿಲ್ಲ. ಈಗ ಸುಕಾಲ ಒದಗಿಬಂದಿದೆ ತಮ್ಮ ಪಂಗಡವನ್ನು ಒಂದು ಸಕಾರಾತ್ಮಕ, ಕೆಚ್ಚಿನ ಮತ್ತು ನಿರ್ಣಾಯಕ ಶಕ್ತಿಯನ್ನಾಗಿ ಬದಲಾಯಿಸಲು ಎಂದು ನಿರ್ಧರಿಸಿದರು. ೧೧

"Indian fatalism, whether the root or the foliage of Hinduism is plainly an essential part of the growth. The scriptured injunctions to pursue the Dharma of one`s caste and condition uncomplainingly, to cultivate the capacity to act without desire, the interpretation of life as a necessary trial with the verdict contained in a subsequent incarnation, all make of indifference the ultimate Hindu virtue. The whole system of caste nourished resignation." (P 126 The Crisis of India by Ronald Segal)

ಅವರು ತಮ್ಮ ಶಿಷ್ಯಂದಿರು ಒಂದು ಪ್ರಬಲ ಜನಾಂಗವಾಗುವದಷ್ಟೇ ಅಲ್ಲದೆ, ಅವರಲ್ಲಿ ಸಮಾನತೆ ಮತ್ತು ಸರ್ವ ಸ್ವಾತಂತ್ರ್ಯದ ಕಿಚ್ಚು ಎಬ್ಬಿಸಲು ಮನಸ್ಸು ಮಾಡಿದರು.

ಗುರು, ತಮ್ಮ ಶಿಷ್ಯಂದಿರು, ತಾವು ನಿರ್ಧರಿಸಿದ ದಾರಿಯಲ್ಲಿ ಸಾಗಲು ಸಿದ್ಧರಿರುವರೇ? ಈ ಪ್ರಶ್ನೆಗೆ ಉತ್ತರ ಹುಡುಕಲು ಒಂದು ಪರೀಕ್ಷೆಯನ್ನ ಸಿದ್ಧಪಡಿಸಿದರು. ಅದಕ್ಕಾಗಿ ಒಂದು ಸ್ಥಳ ಮತ್ತು ಸಮಯ ಗೊತ್ತು ಮಾಡಿದರು.

ವೈಶಾಖ ತಿಂಗಳ ಮೊದಲನೆಯ ದಿನದಂದು ಆನಂದಪುರದಲ್ಲಿ ಗುರುವಿಗೆ ಗೌರವ, ಪ್ರೀತಿ, ವಿಶ್ವಾಸ ತೋರಿಸಲು ಸೇರಿದ್ದ ಅಪಾರ ಜನಸಮೂಹವನ್ನು ಉದ್ದೇಶಿಸಿ, ಗುರು ಗೋಬಿಂದ್ ಸಿಂಗ್ ಕುಳಿತಲ್ಲಿಂದ ಎದ್ದು, ಖಡ್ಗವನ್ನು ಕೈಯಲ್ಲಿ ಹಿಡಿದು ಗರ್ಜಿಸಿದರು :

'ಇಲ್ಲಿ ಈಗ ತಕ್ಷಣವೇ ನನಗೆ ತನ್ನ ತಲೆಯನ್ನು ಒಪ್ಪಿಸುವ ಒಬ್ಬ ಸಿಖ್ ಬೇಕು !

---

೧೦. P 285 History of Sikh People by G.Singh

ನನಗೆ ಸಂಪೂರ್ಣವಾಗಿ ಶರಣಾಗತನಾಗುವ ಒಬ್ಬ ವ್ಯಕ್ತಿಯ ತಲೆಗಾಗಿ ನನ್ನ ಈ ಖಡ್ಗ ಹಾತೊರೆಯುತ್ತಿದೆ.'

ನೆರೆದಿದ್ದ ಸಭಿಕರೆಲ್ಲರೂ ಗುರುವಿನ ಗರ್ಜಿಸುವ ಮಾತುಗಳನ್ನು ಕೇಳಿ ಸ್ಥಂಭೀಭೂತರಾದರು. ಅವಾಕ್ಕಾದ ಜನರು ತಮ್ಮ ಗುರು ಕತ್ತಿ ಹಿರಿದು, ತನ್ನ ತಲೆಯನ್ನು ಕಡಿದು, ನೀಡುವಂತೆ ಕೇಳುವ ಪ್ರಮೇಯ, ಆಸಕ್ತಿ, ಆಸೆಯಾದರೂ ಏನು ಎಂಬ ಭೀತಿ, ಕುತೂಹಲ, ಆತಂಕ ಅವರನ್ನು ಕಾಡಿತು. ಆಸ್ತಿಪಾಸ್ತಿ, ಹಣ, ಕಾಣಿಕೆ ಇತ್ಯಾದಿ ಕೇಳದೆ, ತಮ್ಮ ಪ್ರಾಣವನ್ನೇ ಕೇಳುತ್ತಿದ್ದಾರಲ್ಲಾ ಗುರು? ಅವರಿಗೆ ಭಯ ಭೀತಿ ಆತಂಕ ಒಮ್ಮೆಲೆ ಉಂಟಾಯಿತು.

ಗುರು ಇನ್ನೊಮ್ಮೆ ಗುಡುಗಿದರು.

'ಈ ಸಭೆಯಲ್ಲಿ ನೆರೆದಿರುವ ಸಿಖ್ಖರಲ್ಲಿ, 'ನಾನು ನನ್ನ ತಲೆ ನಿಮಗೆ ನೀಡುವೆ !' ಎಂದು ಹೇಳುವ ಒಬ್ಬನೂ ಇಲ್ಲವೆ? ನೀವು ಯಾವಾಗಲೂ ಹೇಳುತ್ತಿದ್ದೀರಾ 'ಯಾರು ದೇವರ ದಾರಿಯನ್ನು ಪ್ರೀತಿಸುವರೋ ಅವರು ತಮ್ಮ ತಲೆಯನ್ನು ಅರ್ಪಿಸುವರು. ಈಗ ನಿಮ್ಮ ತಲೆಯನ್ನು ನನಗೆ ಅರ್ಪಿಸುವಿರಾ?'

ಸಭಿಕರು ತಮ್ಮ ನಿಶ್ಚಲತೆಯಿಂದ, ಅವಾಕಿನ ಸ್ಥಿತಿಯಿಂದ ಮತ್ತು ಗಾಬರಿ, ಆತಂಕ, ಭಯ-ಭೀತಿಯ ಅವಸ್ಥೆಗಳಿಂದ ಹೊರಬಂದಿರಲಿಲ್ಲ. ಅವರು ಮೂಕರಾಗಿದ್ದರು.

ಗುರು ಮೂರನೆಯ ಬಾರಿ ಗರ್ಜಿಸಿದರು !

'ನನ್ನ ಮೇಲೆ ವಿಶ್ವಾಸವಿರುವ ಒಬ್ಬನೂ ನಿಮ್ಮಲ್ಲಿಲ್ಲವೆ?'

ಆಗ, ಲಾಹೋರ್ ನಗರದ ದಯಾರಾಮ್ ಎಂಬ ಖಾತ್ರಿ ಪಂಗಡಕ್ಕೆ ಸೇರಿದ ಒಬ್ಬ ಸಿಖ್ ನಿಧಾನವಾಗಿ ಮುಂದೆ ಬಂದ. ಗುರುಗಳಿಗೆ ಶಿರಸಾವಹಿಸಿ ಪ್ರಮಾಣ ಮಾಡಿ, ಪ್ರಾರ್ಥಿಸಿದ :

"ಓ ! ರಾಜರ ರಾಜ ! ನನ್ನ ತಲೆಯನ್ನು ತಮಗೆ ಒಪ್ಪಿಸುತ್ತಿದ್ದೇನೆ. ಇದು ಎಂದೂ ನಿಮ್ಮದಾಗಿದೆ. ಈ ತಲೆಯಿಂದ ತಮಗೆ ಏನಾದರೂ ಉಪಯೋಗವಾಗುವುವದಾದರೆ, ನಾನು ಅದನ್ನು ನನ್ನ ಭಾಗ್ಯ ಮತ್ತು ನನ್ನ ವಿಮೋಚನೆ ಎಂದು ಭಾವಿಸುತ್ತೇನೆ"

ಗುರು, ಆತನನ್ನು ಬಳಿಯಲ್ಲಿ ಹಾಕಿದ್ದ ಒಂದು ಪರದೆಯ ಹಿಂದೆ ಕರೆದುಕೊಂಡು ಹೋಗಿ, ಸ್ವಲ್ಪ ಸಮಯದಲ್ಲೇ ಹಿಂದಿರುಗಿ ಬಂದರು. ಈಗ ಅವರ ಕೈಯಲ್ಲಿದ್ದ ಖಡ್ಗ ರಕ್ತದಿಂದ ತೊಯ್ದಿತ್ತು. ಅದನ್ನು ಕಂಡ ನೆರೆದಿದ್ದ ಸಭಿಕರು ಮತ್ತಷ್ಟು ಭಯಭೀತರಾದರು. ಅವರಲ್ಲಿ ಕೆಲವರು ಭಯದಿಂದ ಓಡಿದರು. ಉಳಿದ ಕೆಲವರು, ಗುರುವಿಗೆ ಮತಿಭ್ರಮಣೆಯಾಗಿದೆ ಎಂದು ಆಲೋಚಿಸಿದರು. ಅವರು ಚಿಂತಾಕ್ರಾಂತರಾದರು.

ಇದೇ ಸಮಯದಲ್ಲಿ ಗುರು, ಮತ್ತೊಮ್ಮೆ ಗುಡುಗಿದರು :

'ನನಗೇ ಇನ್ನೊಂದು ತಲೆ ಬೇಕು ! ಯಾರು ತಮ್ಮ ಪ್ರಾಣವನ್ನು ಪರಮಾಹುತಿ ಮಾಡುವವರೋ ಅವರು ಧರ್ಮವನ್ನು ರಕ್ಷಿಸುತ್ತಾರೆ !'

ದೆಹಲಿಯ ಧರ್ಮದಾಸ್ ಎಂಬಾತ ಗುರುವಿನ ಮುಂದೆ ಬಂದು ತಲೆಬಾಗಿಸಿ ನಿಂತ. ಗುರು, ಅವನನ್ನು ಪರದೆಯ ಹಿಂದೆ ಕರೆದೊಯ್ದರು. ಹಿಂದಿರುಗಿ ಬಂದಾಗ ಅವರ ಕೈಯಲ್ಲಿದ್ದ ಖಡ್ಗ ರಕ್ತದಿಂದ ತೊಯ್ದು, ತೊಟ್ಟಿಕ್ಕುತ್ತಾ ಇತ್ತು.

ಆ ದೃಶ್ಯವನ್ನು ನೋಡಿ ಭಯಗೊಂಡ ಸಭಿಕರು, ಗುರುವಿನ ತಾಯಿಯ ಬಳಿ ಓಡಿಹೋಗಿ, ಅಮಾಯಕ ಸಿಖ್ಖರ ವಧೆಯನ್ನು ಗುರು ಮಾಡುತ್ತಿರುವ ವಿಷಯ ಅರುಹಿದರು. ಅವರ ಈ ಹುಚ್ಚಿನ ಕಾರ್ಯ ತಪ್ಪಿಸುವಂತೆ ಕೋರಿದರು. ಗುರುವನ್ನು ಗುರುಪೀಠದಿಂದ ಇಳಿಸಲು ತಾವು ತಯಾರಾಗಿದ್ದೇವೆ ಎಂದು ತಿಳಿಸಿದರು. ಅವರ ದೂರನ್ನು ಆಲೈಸಿದ ತಾಯಿ ಮಗನ ಕಾರ್ಯವನ್ನು ನಿಲ್ಲಿಸುವಂತೆ ಕೇಳಿಕೊಂಡಳು. ಆದರೆ, ಗುರು ಮಾತ್ರ ಯಾರ ಮಾತುಗಳನ್ನು ಕೇಳುವ ಸ್ಥಿತಿಯಲ್ಲಿರಲಿಲ್ಲ. ಅವರು ತಮ್ಮ ನಿರ್ಧಾರವನ್ನು ಬದಲಾಯಿಸಲಿಲ್ಲ.

ಗುರು, ತಮ್ಮ ಗರ್ಜನೆಯ ಆಹ್ವಾನವನ್ನು ಪ್ರಾರಂಭಿಸಿದರು. ಈಗ ಅವರ ಕೋರಿಕೆಯನ್ನು ಮನ್ನಿಸಿ ಮೂವರು ಮುಂದೆ ಬಂದರು. ಮೊಹಕಾಮ್‌ಚಂದ್, ದ್ವಾರಕಾದಿಂದ, ಕರ್ನಾಟಕದ ಬೀದರ್‌ನಿಂದ ಸಾಹಿಬ್‌ಚಂದ್, ಮತ್ತು ಪುರಿಯಿಂದ ಹಿಮ್ಮತ್ ಎಂಬುವರು ಮುಂದೆ ಬಂದು ತಮ್ಮ ತಲೆಗಳನ್ನು ಒಪ್ಪಿಸಿದರು. ಗುರು ಅವರನ್ನು ಪರದೆಯ ಹಿಂದೆ ಕರೆದುಕೊಂಡು ಹೋಗಿ ಕೆಲ ಕ್ಷಣಗಳ ನಂತರ ಹಿಂದಿರುಗಿದರು. ಅವರು ಶಿಷ್ಯಂದಿರ ತಲೆಗಳ ಬೇಡಿಕೆಯನ್ನು ನಿಲ್ಲಿಸಿದರು. ಆದರೆ ಜೊತೆಯಲ್ಲಿ ಐದು ಮಂದಿ ಸಿಖ್ಖರೂ ಇದ್ದರು ! ಅವರ ತಲೆಗಳನ್ನು ಕಡಿದಿರಲಿಲ್ಲ ಗುರು ! ಅದರ ಬದಲು ಪರದೆಯ ಹಿಂದೆ ಬಚ್ಚಿಟ್ಟಿದ್ದ ಐದು ಕುರಿಗಳ ತಲೆ ಕಡಿದು ಅವುಗಳ ರಕ್ತ ಕುಡಿದ ತಮ್ಮ ಖಡ್ಗವನ್ನು ಹಿಡಿದು ಹೊರಬಂದಿದ್ದರು ಗುರುಗಳು !

ಗುರುಗಳ ಜೊತೆಗೆ ಬಂದ ಐದು ಮಂದಿ ಸಿಖ್ಖರಲ್ಲಿ ಬದಲಾವಣೆಯಾಗಿದ್ದವು. ಅವರೆಲ್ಲರೂ ಹೊಸ ಪೋಷಾಕು ಧರಿಸಿದ್ದರು. ತಲೆಗೆ ನೀಲಿ ಪೇಟ ಧರಿಸಿದ್ದರು. ಉದ್ದ ನಿಲುವಂಗಿ ಧರಿಸಿದ ಅವರ ಸೊಂಟದಲ್ಲಿ ಖಡ್ಗ ನೇತಾಡುತ್ತಿತ್ತು. ಅವರ ಮುಖಗಳಲ್ಲಿ ಅಪೂರ್ವ ತೇಜಸ್ಸು, ಧೈರ್ಯೋತ್ಸಾಹ, ವಿಜಯೋತ್ಸಾಹ ಹೊರಹೊಮ್ಮಿತ್ತು. ಅವರನ್ನು ಗುರು ತನ್ನ 'ಪಂಚ್-ಪ್ಯಾರೇ' (ಐದು ಪ್ರೀತಿಪಾತ್ರರು) ಎಂದು ಘೋಷಿಸಿದರು. ನೆರೆದಿದ್ದ ಸಭಿಕರೆಲ್ಲಾ ಆ ದೃಶ್ಯವನ್ನು ಕಂಡು ಉನ್ಮತ್ತರಾದರು. ಪುಳಕಿತಗೊಂಡು, ಕೂಗಿದರು. 'ಸತ್ ಶ್ರೀ ಅಕಲ್' (ದೇವ ಅಮರ)

ಈ ಐವರು ಪಂಚ್-ಪ್ಯಾರೇಗಳಲ್ಲಿ, ನಾಲ್ವರು ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದರು ಎಂಬುದು ಒಂದು ವಿಶೇಷವಾಗಿತ್ತು ಎಂದರು ಇತಿಹಾಸಕಾರರು. ೧೨

---

೧೨. 287 History of Sikh People by G. Singhgal

ಅನಂತರ, ಗುರು ಒಂದು ಕಬ್ಬಿಣದ ಪಾತ್ರೆ ತೆಗೆದುಕೊಂಡು, ಅದರಲ್ಲಿ ನೀರು ಸುರಿದು, ಒಂದು ಕಿರುಕತ್ತಿಯಿಂದ ನೀರನ್ನು ಕದಡಲಾರಂಭಿಸಿದರು. ಅದರ ಜೊತೆಗೆ ತಾವೇ ರಚಿಸಿದ ಗೀತೆಗಳನ್ನು ಮತ್ತು ಇತರ ಗುರುಗಳ ಕವಿತೆಗಳನ್ನು ಹಾಡಲಾರಂಭಿಸಿದರು. ಅವರು ಈ ಕಾರ್ಯ ಮಾಡುತ್ತಿರುವಾಗಲೇ, ಅವರ ಪತ್ನಿ ಜೀತೋಜಿ ಸ್ವಲ್ಪ ಸಕ್ಕರೆಯ ಉಂಡೆಗಳನ್ನು ತಂದು ನೀರಿನಲ್ಲಿ ಸುರಿದಳು. ನೀರು ಸಿಹಿಯಾದೊಡನೆ, ಗುರು ಅದನ್ನು 'ಅಮೃತ' ವೆಂದು ಕರೆದು, 'ಖಾಲ್ಸಾ' ಯುದ್ಧಕ್ಕೆ ಸಜ್ಜಾಗಿರುವಂತೆ, ಅದರಲ್ಲಿ ಸೇವೆಗೈಯ್ಯುವರ ಜೀವನ ಕೂಡ ಅಮೃತದಂತೆ ಸಿಹಿಯಾಗಿರುತ್ತದೆ ಎಂದು ಸಾರಿದರು. ನೀರು ಸಿಹಿಯಾದೊಡನೆ ಗುರು ಎದ್ದು ನಿಂತು, ತನ್ನ ಪಂಚ್‌ಪ್ಯಾರೇಗಳಿಗೆ ಆ ನೀರನ್ನು ಕುಡಿಸಿದರು. ಅನಂತರ, ಅವರಿಗೆ, ಆ ನೀರನ್ನು ತಮಗೆ ಕುಡಿಸುವಂತೆ ಕೋರಿದರು. ಅವರ ಕೋರಿಕೆಯನ್ನು ಕೇಳಿದ ಅವರು ಆಶ್ಚರ್ಯಚಕಿತರಾದರು. ಯಾವುದೇ ಗುರು ತನ್ನ ಕೈಯಿಂದ ತೀರ್ಥ ಪ್ರಸಾದ ನೀಡಬಲ್ಲನೇ ವಿನಹ ಶಿಷ್ಯಂದಿರಿಂದ ತೀರ್ಥ ಸ್ವೀಕರಿಸುವ ಪದ್ಧತಿ ಇಲ್ಲದಿರುವುದನ್ನು ಅರಿತ ಅವರು ಗುರು ತಯಾರಿಸಿದ 'ಅಮೃತ' ವನ್ನು ಅವರಿಗೆ ನೀಡುವುದು ಉಚಿತವಲ್ಲವೆಂದು ಹೇಳಿದರು. ಆದರೆ ಗುರು ಮಾತ್ರ ಹಟ ಹಿಡಿದು, 'ಖಾಲ್ಸಾ'ದಲ್ಲಿ ಎಲ್ಲರೂ ಸಮಾನರು, ಅದಕ್ಕೆ ಶಾಮೀಲಾಗುವವರು, 'ಅಮೃತ' ಕುಡಿದು 'ಖಾಲ್ಸಾ'ಕ್ಕೆ ಅಧೀನರಾಗಬೇಕು ಎಂದು ಸಾರಿದರು. ಗುರುವಿನ ಆ ವಿಧಾನ ಎಲ್ಲರನ್ನೂ ಚಕಿತಗೊಳಿಸಿದರೂ, ನೆರೆದಿದ್ದ ಸಿಖ್‌ರು 'ತೀರ್ಥ' ಅಥವಾ 'ಅಮೃತ' ಸ್ವೀಕರಿಸಿದರು.

ಈ ರೀತಿ ಉದಯವಾಯಿತು 'ಖಾಲ್ಸಾ' ಅಂದರೆ 'ಪರಿಶುದ್ಧ' ಸಂಘ. ೧೩

ಅಂದಿನಿಂದ ಈ ಸಂಘದಲ್ಲಿ ಸೇರ್ಪಡೆಯಾದವರಿಗೆ ಯಾವ ಜಾತಿ, ಯಾವ ಧರ್ಮದ ಆಚಾರ, ವ್ಯವಹಾರ, ರೀತಿ, ನೀತಿ, ಮೂಢನಂಬಿಕೆಗಳು ಅನ್ವಯವಾಗುವುದಿಲ್ಲ ಎಂದು ಘೋಷಿಸಿದರು. ಗುರು ಸಂಘದ ಪರಿವಾರದ ಪ್ರತಿಯೊಬ್ಬ ಸದಸ್ಯ, ದೇವರೊಬ್ಬ, ಅವನ ಸೃಷ್ಟಿಕಾರ್ಯದಲ್ಲಿ ಮಾನವರಾದ ತಾವು ಸಹೋದರರು (ಭಾಯಿ) ಎಂಬುದಾಗಿ ಘೋಷಿಸಿದರು. ಯಾವ ರೀತಿಯ ತೀರ್ಥಯಾತ್ರೆಯಾಗಲೀ, ಯಾವ ಕಟ್ಟುನಿಟ್ಟಾದ ಕಟ್ಟುಪಾಡಾಗಲಿ, ಯಾವ ಧಾರ್ಮಿಕ ನಿಯಮಾವಳಿಗಳಾಗಲೀ ಮಾಡಬೇಕಾಗಿರುವುದಿಲ್ಲ ಎಂದು ಸಾರಿದರು ಗುರು. ಮಹಿಳೆಯರು ಮುಖ ಮುಚ್ಚಿಕೊಳ್ಳುವ ಪರದೆಯಾಗಲೀ, ಸತಿ ಹೋಗುವುದಾಗಲೀ, ಹೆಣ್ಣು ಮಗುವಿನ ಹತ್ಯೆ ಮಾಡುವುದಾಗಲೀ ಅಧರ್ಮ ಎಂದರು. ಈ ತರಹದ ರೀತಿ ರಿವಾಜುಗಳಿಗೆ 'ಪೌಹುಲ್' ಎಂದು ಕರೆಯುತ್ತಾರೆ. ೧೪

---

೧೩. P 168 History of Sikhs by Cunningham. 'Khalsa or Khalisa' is of Arabic derivation and has such original or secondary meanings as pure, special, free etc. . .'

೧೪. P 68 History of Sikhs by Cunningham 'Pahul, means literally a gate, a door and thence intiation.' –ಕನ್ನಡದಲ್ಲಿ 'ಹೊಸ್ತಿಲು' ಎಂಬ ಅರ್ಥ ಬರುತ್ತದೆ.

ಸಿಖ್ಖರು, ಗುರುವಿಗೆ ಮತ್ತು 'ಖಾಲ್ಸಾ' ಗೆ ನಿಷ್ಠಾವಂತಿಕೆಯನ್ನು ತೋರಿಸಲು ಐದು 'ಕ' ಗಳನ್ನು ಪಡೆದು, ಅದನ್ನು ಪಾಲಿಸಬೇಕೆಂಬ ನಿಯಮ ಜಾರಿಗೆ ತಂದರು. ಅವು ಹೀಗಿವೆ : ೧) ತಲೆಕೂದಲನ್ನು ಕತ್ತರಿಸದೆ, 'ಕೇಶ'ವನ್ನು ಇರಿಸಿಕೊಳ್ಳುವುದು; ೨) 'ಕಂಗಾ' ಅಂದರೆ ಬಾಚಣಿಗೆಯಿಂದ ಕೇಶವನ್ನು ಶುಚಿಯಾಗಿ ಇರಿಸಿಕೊಳ್ಳುವುದು; ೩) 'ಕರಾ' ಅಂದರೆ ಕೈಗೆ ಕಡಗ ತೊಟ್ಟು ದೇಹದ ಅನಂತತೆಯ ಸೂಚಕವನ್ನು ಧರಿಸುವುದು. ೪) 'ಕಾಚಾ' ಧರಿಸಿ, ಸಚ್ಚಾರಿತ್ರವನ್ನು ಕಾಪಾಡಿಕೊಳ್ಳುವುದು; ೫) ಕರಪಾಣ್, (ಸಣ್ಣಕತ್ತಿ) ಸ್ವಂತ ರಕ್ಷಣೆಗಾಗಿ ಇರಿಸಿಕೊಳ್ಳುವುದು.

ದೇಹಾರಾಢ್ಯಕ್ಕೆ ಒತ್ತುಕೊಡಲಾಯಿತು. ಆಯುಧಗಳ ಉಪಯೋಗ ಧಾರಾಳವಾಗಿ ಬಳಸಲು, ಅವುಗಳನ್ನು ಉಪಯೋಗಿಸಲು ನೈಪುಣ್ಯತೆ ಹೊಂದುವಂತೆ ತಿಳಿಸಲಾಯಿತು.

ಸಿಖ್ಖರು ತಮ್ಮ ಹೆಸರಿನ ಮುಂದೆ 'ಸಿಂಹ' (ಸಿಂಗ್) ಎಂದು ಇರಿಸಿಕೊಳ್ಳಬೇಕೆಂಬ ಆಜ್ಞೆ ಹೊರಡಿಸಿದರು ಗುರು. ಮಹಿಳೆಯರು 'ಕೌರ್' (ರಾಜಕುಮಾರ) ಎಂಬ ನಾಮವನ್ನು ತಮ್ಮ ಹೆಸರಿನ ಮುಂದೆ ಇರಿಸಿಕೊಳ್ಳಬೇಕೆಂದರು. ಸಿಖ್ಖರು, ಪರಸ್ಪರ ಭೇಟಿಯಾಗುವ ಸಮಯದಲ್ಲಿ 'ವಾಹೇ ಗುರೂಜೀ ಕಾ ಖಾಲ್ಸಾ, ವಾಹೇ ಗುರೂಜೀ ಕೀ ಫತ್ತೇ' (ಖಾಲ್ಸಾ ದೇವರಿಗೆ ಸೇರಿದ್ದಾಗಿದೆ. ದೇವರಿಗೆ ಜಯವಾಗಲಿ' ಎಂಬುದಾಗಿ ಹೇಳಿ ಸ್ವಾಗತಿಸಬೇಕು ಎಂಬ ರೂಢಿಯನ್ನು ಜಾರಿಗೆ ತಂದರು. ೧೫,೧೬

---

೧೫. P 290 History of Sikh People by G.Singh
೧೬. Grewal J.S. (ed) 'The Khalsa'

P 36 'The primary connotation of the Guru Khalsa; by removing all the Masands the Guru made all the Sikhs his Khalsa. . .'

P 43 '. . . .the Guru and the Khalsa samgat are one; there is no difference. All I have to do is with the Khalsa; I have bestowed my form on the Khalsa'. . . . .

P 187 History of Sikh Guru by Gupta Hari Ram-

P 194 Khalsa

"Chiryan Kolon baz
marawan
Tan main Gobind nam
Kahawar'

(call me by the name of Gobind only if I succeed in making sparrows kill hawks)

ರಾಜಪುತ್ರರಲ್ಲಿ 'ಸಿಂಹ' ಎಂಬ ಹೆಸರನ್ನು ಇರಿಸಿಕೊಂಡು, ಸಿಂಹಕ್ಕೆ ಇರುವ ಧೈರ್ಯ, ಶೂರತ್ವಗಳನ್ನು ತಾವು ಕೂಡ ಅವುಗಳ ಸ್ವಭಾವವನ್ನು ಬಿಂಬಿಸಲು ಮತ್ತು ಕ್ಷಾತ್ರ ಸ್ವಭಾವವನ್ನು ಅಳವಡಿಸಿಕೊಂಡು, ಶತ್ರುವಿನ ಎದುರು ಹೋರಾಡುವ ದಿಟ್ಟ ನಿಲುವನ್ನು ಹೊಂದುವ ಪದ್ಧತಿಯನ್ನು ರೂಢಿಗೆ ತಂದಿದ್ದನ್ನೇ ಗುರು ಸಿಖ್ಖರಲ್ಲಿ ಕ್ಷಾತ್ರ ಸ್ವಭಾವವನ್ನು ಅಳವಡಿಸಿಕೊಳ್ಳುವಂತೆ ಆದೇಶ ನೀಡಿದ್ದು ವಿಶೇಷವಾಗಿತ್ತು. ೧೭

ಸಿಖ್ ಧರ್ಮವನ್ನು ಅಲಂಕರಿಸಿದವರಲ್ಲಿ 'ಜಾಟ್' ಪಂಗಡಕ್ಕೆ ಸೇರಿದವರು ಅಧಿಕ ಸಂಖ್ಯೆಯಲ್ಲಿದ್ದರು ಎಂದಿದ್ದಾರೆ ಇತಿಹಾಸಕಾರರು. ಈ 'ಜಾಟ್' ಪಂಗಡದ ಬಗ್ಗೆ, ಅವರ ಉಗಮದ ಬಗ್ಗೆ ಹಲವಾರು ವಿಚಾರ ಅಭಿಪ್ರಾಯಗಳನ್ನು ಪಂಡಿತರು, ಇತಿಹಾಸ ತಜ್ಞರು, ಭಾಷಾ ಪಂಡಿತರು ಈ ರೀತಿ ಸಾದರಪಡಿಸಿರುತ್ತಾರೆ.

'ಜಾಟ್' ಎಂಬ ಪದ ಸಂಸ್ಕೃತದ 'ಯೋಧ' ವೆಂಬ ಪದದಿಂದ ಉದ್ಭವವಾಗಿದೆ. ಪಾಣಿನಿ 'ಆಯುಧ್‌ಜೀವಿ' ಎಂದು ಹೆಸರಿಸಿದ ಮೇಲೆ, ಅದು ಕ್ರಮೇಣ 'ಯೋಧ' ಅಥವಾ 'ಜಾಟ್' ಎಂಬ ನಾಮಪದ ಪಡೆದುಕೊಂಡಿತು ಎಂದಿದ್ದಾರೆ. ಚೀನೀಯರು ಈ 'ಯೋದ'ರನ್ನು 'ಏಧಾ' ಅಥವಾ 'ಏತಾ' ಎಂದು ಕರೆದರು.

ಈ 'ಜಾಟ್' ರು ಮಧ್ಯ ಏಶಿಯಾದಿಂದ ಭಾರತಕ್ಕೆ ವಲಸೆ ಬಂದರೆಂಬ ಅಭಿಪ್ರಾಯವೂ ಇದೆ.

---

೧೭. 1P 81 The Later Mughals by Irvine

P 6 Jats - The Ancient Rulers by B.S. Dahiya

'The word Jat is probably derived from the sanscrit word 'Yodha' (fighter) Even now, there are many Jats having the name Yodha, as well as Godha, both derived from the word 'Yoddha', The derivation of Jat and Jot is similar. It is them that Panini called "Ayudhjivi (Professional fighters) These people called 'Yoddhas' are mentioned in the Mahabharatha, along with Bodhas. That is why the Chinese write the name as Yetha, as well as Yeta.

P21

'. . . the Indian Jats are the same as the Guti of Persian Histor and Yue-che (pronounced as Gutti) of the Chinese and their original place was the vast plains of central Asia from the borders of China upto the Black Sea. The Great writers like Herodotus and others call them Gotae

ಗುರು ಗೋಬಿಂದ್ ದಾಸ್, ತಮ್ಮ ಹೆಸರಿನಲ್ಲಿದ್ದ 'ದಾಸ್'ನ್ನು ತ್ಯಜಿಸಿ, 'ಸಿಂಹ'

---

or Massa Getae the latter being the major section of the same people.'

P81-83

'The Jat race, the numerous majority in the Sikh community, has many virtues and the Jat in his capacity of an agriculturist is perhaps unrivalled. But as a Punjabi proverb says, "The Jat, like a wound, is better when bound". . . . ."Whether Sikhs or not these Jats have a very distinct character of their own. Sturdy industrious, quarrel some, penurious, they form the back bone of the agricultural community throughout the above region; ; ; ; ;

P 10 The Sikhs by A.H. Bingley
P 41 A History of sikhs by Cunningham
ಈ ಇತಿಹಾಸಕಾರ ಜಾಟ್‌ರ ಬಗ್ಗೆ ಇದೇ ಅಭಿಪ್ರಾಯ ನೀಡಿದ್ದಾನೆ.

P 299 Sikhs by McLeod

'. . . .there is first the continuing impact of Jat ideals upon the community, which numerically the Jats dominated. During the period of the Gurus his influence would have been minimized although, as the events of Guru Hargobind`s period indicate, it was by no means without effect. With the termination of the personal authority of the Guru in 1708 the pressure to incorporate features derived from Jat cultural patterns evidently became much stronger. The confused political circumstances of eighteenth century Punjab further enhanced this Jat ascendancy, for periods of military state would be handled with much greater success by the martial Jats than by any other group in Punjabi society. The militant attitude of the Sikh community must be traced to this source, together with particular features such as the five k`s'

P 3 Sikhs by I.W, Gordon

'. . .Colonel Tod, the most scholarly of Indian writers on the old races, in his classial 'Annuls of Rajasthan', identifies the Jats of his day with the ancient Scythian Gete of Central Asia descendants under the names of Gete, Yoti, Jote, to Jit and Jat, the last two being those by which the tribe was then known in Rajasthan and the Punjab. . . . .'

ಎಂದು ಸೇರಿಸಿ, ತಾವೇ ತಮ್ಮ ಶಿಷ್ಯಂದಿರಿಗೆ ಮೇಲ್ಪಂಕ್ತಿ ಹಾಕಿದರು. ಅಂದಿನಿಂದ ಸಿಖ್ಖರು ತಮ್ಮ ಹೆಸರಿನ ಮುಂದೆ 'ಸಿಂಹ' ಎಂಬ ನಾಮವನ್ನು ಇರಿಸಿ ತಾವು ಸಿಂಹಗಳಂತೆ ಧೈರ್ಯ, ಶೌರ್ಯ, ಕೆಚ್ಚಿನಿಂದ ಹೋರಾಡುವ ಮನಸ್ಸು ಹೊಂದಿರುತ್ತೇವೆ ಎಂದು ಲೋಕಕ್ಕೆ ಸಾರಿದರು.

ಗುರು ಗೋಬಿಂದ್ ಸಿಂಗ್‌ರ ಖಾಲ್ಸಾ ಸಂಘಟನೆ ಸ್ಥಾಪನೆಗೊಂಡಾದೊಡನೆ, ಸುದ್ದಿ ಎಲ್ಲೆಡೆ ಹರಡಿತು. ಹಿಂದೂ ಜನಸಾಮಾನ್ಯರಲ್ಲಿ ವಿದ್ಯುತ್ ಸಂಚಾರ ಉಂಟಾಗಿ, ಹಿಂಡು ಹಿಂಡಾಗಿ ಅವರು ಗುರುವಿನ ಖಾಲ್ಸಾ ಪಂಥಕ್ಕೆ ಸೇರಿ, ಸಿಖ್ ಮತಾವಲಂಬಿಗಳಾದರು. ಅವರ ಮೈಮನಗಳಲ್ಲಿ ನವಚೇತನ, ನವಶಕ್ತಿ, ಹುರುಪಿನ ಧೈರ್ಯೋತ್ಸಾಹ ತುಂಬಿ ತುಳುಕಾಡತೊಡಗಿತ್ತು. ಶತಮಾನಗಳ ಕಾಲ ಗುಲಾಮಗಿರಿಯಲ್ಲಿ ಬಿದ್ದು, ಅತೀವ ಅವಮಾನ, ಹೇಡಿತನ, ತುಚ್ಛ ಮನೋಭಾವ, ಇತ್ಯಾದಿಗಳಿಂದ ನೊಂದ ಬೆಂದ ಅವರ ಮೈಮನಗಳು ಅಪೂರ್ವ ತೇಜಸ್ಸು, ಹುಮ್ಮಸ್ಸು ಆನಂದಗಳಿಂದ ತೇಲಾಡುತ್ತಿದ್ದವು. ಅವರನ್ನು ಈ ಸ್ಥಿತಿಗೆ ತಂದಿದ್ದ ಗುರು ಗೋಬಿಂದ್ ಸಿಂಗ್ ಈಗ ಶತ್ರುಗಳಿಗೆ ಸಿಂಹಸ್ವಪ್ನವಾಗಿ ಮಾರ್ಪಾಡಾಗಿದ್ದರು. ನೂತನ ಸಿಖ್ 'ಖಾಲ್ಸಾ' ಪಂಥ ಸೇರುವವರಲ್ಲಿ ಉತ್ತರ ಭಾರತದ 'ಜಾಟ್' ಪಂಗಡದವರು ಹೆಚ್ಚಾಗಿದ್ದರು. ೧೮

ಖಾಲ್ಸಾ ಪಂಥದ ಉದಯ, ಸಿಖ್ಖರ ನೂತನ ಮನ ಮತ್ತು ಮನಪರಿವರ್ತನೆ, ಆಳುವವರಿಗೆ ಮತ್ತು ಶತ್ರುಗಳಿಗೆ ನಡುಕ ತಂದಿದ್ದವು.

ದೆಹಲಿಯ ಬಾದ್‌ಶಹ ಔರಂಗಜೇಬ್‌ನಿಗೆ ಸುದ್ದಿ ಮುಟ್ಟಿತು. ಯಾವುದೇ ಧರ್ಮದ ಜನರು, ತಮ್ಮ ತಮ್ಮ ಜಾತಿ, ಮತ, ಪಂಗಡ, ಆಚಾರ, ಗೊಡ್ಡು ಸಂಪ್ರದಾಯ, ಮೂಢನಂಬಿಕೆ ಇತ್ಯಾದಿಗಳನ್ನು ತ್ಯಜಿಸಿ, ನೂತನ ಪಂಥ 'ಖಾಲ್ಸಾ' ಎಂದರೆ, 'ಶುದ್ಧ', ಅಥವಾ 'ನಿಷ್ಕಳಂಕ', ಅಥವಾ 'ನಿರ್ಮಲ' ಪಂಥಕ್ಕೆ ಸೇರಿ, ತಾವೆಲ್ಲಾ ಒಂದೇ ಪಂಗಡಕ್ಕೆ ಸೇರಿದವರು, ಸರಿಸಮಾನರೂ, ಭ್ರಾತೃ ಅಥವಾ 'ಭಾಯಿ'ಗಳು, ಒಂದೇ ತಾಯಿಯ ಮಕ್ಕಳು, ಒಂದೇ ತಟ್ಟೆಯಲ್ಲಿ ಊಟ ಮಾಡಿದವರು, ಒಗ್ಗಟ್ಟಾಗಿ ನಿಂತು ಹೋರಾಡುವವರು ಎಂದೆಲ್ಲ ಹೇಳಿ ಗುರುಗೋಬಿಂದ್‌ನ ಹಿಂಬಾಲಕರಾಗಿದ್ದಾರೆ ಎಂಬ ಸಂಗತಿ ಬಾದ್‌ಶಹಾನ ಕಿವಿಗಳಿಗೆ ಮುಟ್ಟಿದಾಗ, ಅವನು ದೆಹಲಿಯಲ್ಲಿರದೆ, ದೂರದ ದಕ್ಷಿಣದಲ್ಲಿ ಮರಾಠರ ವಿರುದ್ಧ ಹೋರಾಟದಲ್ಲಿದ್ದ. ೧೯

ಇತ್ತ ಚಿಕ್ಕ ಪುಟ್ಟ ಗುಡ್ಡಗಾಡಿನ ರಾಜ ಮಹಾರಾಜರು 'ಖಾಲ್ಸಾ'ದ ಉದಯದಿಂದ ಹೆದರಿದರು. ತಮ್ಮ ಉಳಿಗಾಲಕ್ಕೆ ಸಂಚಕಾರ ಬಂದಿದೆ ಎಂದು ಅವರು ಬಗೆದರು.

---

೧೮. 1P 81 The Later Mughals by Irvine

೧೯. ಕನ್ನಡದ ಗಾದೆ 'ಬಟ್ಟ ಬಯಲೆಲ್ಲಾ ಗಟ್ಟಿಗೊಂಡರೆ ಸ್ವರ್ಗ ಮತ್ರ್ಯ ಪಾತಾಳಕ್ಕೆ ತಾವಿನ್ನೆಲ್ಲಿಹುದೋ' ಪಂಜಾಬ್‌ನ ಬಟ್ಟ ಬಯಲಿಗೆ ಹೋಲಿಸಿ, ಅದು ಗುರು ಗೋಬಿಂದ್ ಸಿಂಗ್‌ರಿಂದ ಗಟ್ಟಿಯಾಗಿ, ಸ್ವರ್ಗ, ಮತ್ರ್ಯ, ಪಾತಾಳಗಳನ್ನು ಮೀರಿಸಿತ್ತು !

ದೆಹಲಿ ಬಾದ್‌ಶಹಾನ ಗುಲಾಮರಾಗಿ ಅವರ ಆಶ್ರಯದಲ್ಲಿ ಸುಖ ಸಂತೃಪ್ತ ಜೀವನ ಸಾಗಿಸುತ್ತಿದ್ದ ಈ ಹಿಂದೂ ರಾಜ ಮಹಾರಾಜರು, ರಾಜ ಮರ್ಯಾದೆ ಗಳಿಸದೆ, ಕೇವಲ ಪಾಳೆಯಗಾರಿಕೆ ಮಾಡಿಕೊಂಡು, ರಾಜ್ಯಭಾರ ಮಾಡಿಕೊಂಡಿದ್ದರು. ಅವರ ಪ್ರತಿಸ್ಪರ್ಧಿಯಾಗಿ ಗುರು ಗೋಬಿಂದ್ ಸಿಂಗ್, ಹಿಂದೂಗಳನ್ನು ವೀರ್ಯವಂತರನ್ನಾಗಿ, ಕಚ್ಚೆದೆಯ ಯೋಧರನ್ನಾಗಿ, ಆತ್ಮಾಭಿಮಾನ, ಸ್ವಧರ್ಮ ಮತ್ತು ಸ್ವಾಭಿಮಾನ ಇರಿಸಿ, ಹೋರಾಡುವ ಮನೋಭಾವಕ್ಕೆ ಅವರನ್ನು ತಿರುಗಿಸಿದ್ದರಿಂದ, ತಮ್ಮ ಅಸ್ಥಿತ್ವಕ್ಕೆ ಅಳಿವು ಇರುವುದಿಲ್ಲ ಎಂದು ಅವರು ಭಾವಿಸಿದರು. ಅವರಲ್ಲಿ ಬಲಿಯಾಚಂದ್ ಮತ್ತು ಆಲಿಮ್‌ಚಂದ್ ಎಂಬ ಇಬ್ಬರು ಪುಂಡು ಪಾಳೆಯಗಾರರು, ಡೂನ್ ಕಣಿವೆಯಲ್ಲಿ ಶಿಖಾರಿಯಲ್ಲಿ ತೊಡಗಿರುವ ಗುರು ಗೋಬಿಂದ್ ಸಿಂಗ್‌ರ ಮೇಲೆ ಕದನ ಜರುಗಿಸಿದರು. ಹೆಚ್ಚು ಸೈನಿಕರ ತಂಡ ಗುರುವಿನ ಮೇಲೆ ಬಿದ್ದಾಗ, ಕೆಲವೇ ಮಂದಿ ಇದ್ದ ಗುರುವಿನ ಸೈನಿಕರು ಕಾದಾಡಿ, ಬಲಿಯಾನನ್ನು ಕೊಂದರು. ಆಲೀಮ್‌ನ ಕೈಗಳನ್ನು ತುಂಡರಿಸಿದರು. ಅವರ ಸೈನ್ಯ ಸೋತು ಓಡಿತು.

ಕದನದಲ್ಲಿ ತನ್ನ ಸಹೋದರ ಪಾಳೆಯಗಾರರು ಅನುಭವಿಸಿದ ಸೋಲಿನ ವಿಷಯ ಅರಿತ ಇತರ ರಾಜರು ಹೆದರಿದರು. ಗುರುವಿನ ಸ್ನೇಹ ಬಯಸದೆ, ತಮ್ಮ ಆಶ್ರಿತ ಬಾದ್‌ಶಹಾನ ಸ್ನೇಹ ಸಹಕಾರ ಬೇಡಿದರು. ಅನೈಕ್ಯತೆಯ ವ್ಯಾಧಿ ಆವರಿಸಿದ್ದ ಅವರಿಗೆ ಹೇಡಿತನದ ಜೊತೆಗೆ ಸ್ವಾಭಿಮಾನದ ಕೊರತೆ ಎದ್ದು ಕಾಣುತ್ತಿತ್ತು. ದೆಹಲಿ ಬಾದ್‌ಶಹಾ ಔರಂಗಜೇಬ್ ಮರಾಠರ ವಿರುದ್ಧ ಕದನ ಜರುಗಿಸುತ್ತಿದ್ದರಿಂದ, ಅವನ ಗೈರುಹಾಜರಿನಲ್ಲಿ, ಸರ್‌ಹಿಂದ್‌ನ ಸುಬೇದಾರ್, ರಾಜರ ಅಹವಾಲನ್ನು ಸ್ವೀಕರಿಸಿದ. ಆತ ರಾಜರ ಅಹಲವಾಲನ್ನು ದೆಹಲಿ ದರ್ಬಾರ್‌ಗೆ ಕಳುಹಿಸಿದ. ದೆಹಲಿ ದರ್ಬಾರ್ ರಾಜರ ನೆರವಿಗೆ ಸೈನ್ಯವನ್ನು ಕಳುಹಿಸಲು ಒಪ್ಪಿತು. ಆದರೆ, ಅದರ ಖರ್ಚುಗಳನ್ನು ರಾಜರು ವಹಿಸಬೇಕೆಂಬ ನಿಬಂಧನೆಗೆ ರಾಜರು ಒಪ್ಪಿದರು. ಬಾದ್‌ಶಹಾನ ಸೈನ್ಯಾಧಿಕಾರಿಗಳಾದ ಪೈಂಡೇಖಾನ್ ಮತ್ತು ದೀನ್ ಬೇಗ್ ಎಂಬುವರ ನೇತೃತ್ವದಲ್ಲಿ ಮೊಘಲ್ ಸೈನ್ಯ ಗುರು ಗೋಬಿಂದ್ ಸಿಂಗ್‌ರ ಮೇಲೆ ಏರಿಹೋಯಿತು. ಗುರುವನ್ನು ಆನಂದಪುರದಿಂದ ಓಡಿಸುವ ಉದ್ದೇಶವಿಟ್ಟುಕೊಂಡ ಮೊಘಲ್ ಸೈನ್ಯ ರೂಪರ್ ನಗರ ತಲುಪಿತು.

ಮೊಘಲ್ ಸೈನ್ಯ ತನ್ನ ಮೇಲೆ ಏರಿ ಬರುವ ಸುದ್ದಿ ತಿಳಿದಂತೆ, ಗುರು ತನ್ನ ಸೈನ್ಯವನ್ನು ಯುದ್ಧಸನ್ನದ್ಧ ಮಾಡಿದರು. ಪಂಚ್‌ಪ್ಯಾರೇಗಳನ್ನು ಸೈನ್ಯಾಧಿಕಾರಿಗಳನ್ನಾಗಿ ಮಾಡಿ, ತಾನೇ ಸ್ವತಃ ಯುದ್ಧದಲ್ಲಿ ಭಾಗವಹಿಸಲು ಮುಂದಾದರು. ಯುದ್ಧ ಜರುಗಿದಾಗ, ಮೊಘಲ್ ಸೈನ್ಯಾಧಿಕಾರಿ ಪೈಂಡೇಖಾನ್, ಗುರುವಿನ ಕೈಯಲ್ಲಿ ಹತನಾದ. ದೀನ್ ಬೇಗ್, ಗಾಯಗೊಂಡು ಯುದ್ಧಭೂಮಿಯಿಂದ ಕಾಲ್ತೆಗೆದ. ವಿಜಯಮಾಲೆ ದಕ್ಕಿಸಿಕೊಂಡ ಸಂತರು ಹರ್ಷೋದ್ಗಾರದಿಂದ ತಮ್ಮ ಆನಂದ್‌ಪುರ ಕೋಟೆಗೆ ನಿರ್ಗಮಿಸಿದರು.

ಗುಡ್ಡಗಾಡಿನ ರಾಜರು ಎಷ್ಟೇ ವೀರಾವೇಶದಿಂದ ಕಾದಿದರೂ, ಸಿಖ್ಖರ ಶೌರ್ಯದ

ಮುಂದೆ ಅವರ ಆಟ ಸಾಗದೆ ಸೋಲು ಅಪ್ಪಿದ್ದು ಅವರಿಗೆ ಸಹಿಸಲಸಾಧ್ಯವಾಗಿತ್ತು. ಅವರು ನೇರ ಯುದ್ಧವಿಧಾನಕ್ಕೆ ವಿದಾಯ ಹೇಳಿದರು. ಗುರುವಿನ ಅಭೇದ್ಯ ಕೋಟೆಯಾದ ಆನಂದಪುರಕ್ಕೆ ಲಗ್ಗೆ ಹಾಕಲು ಯೋಜನೆ ತಯಾರಿಸಿದರು. ನಾಲ್ಕು ಸುತ್ತಲೂ ಕೋಟೆ ಮತ್ತು ನಗರವನ್ನು ಸುತ್ತುವರೆದು, ಒಳಗಿದ್ದವರಿಗೆ ಆಹಾರ ನೀರಿನ ಕೊರತೆ ಉಂಟು ಮಾಡಿದರೆ, ಗುರು ಶರಣಾಗತರಾಗುತ್ತಾರೆಂದು ನಂಬಿ ಅವರು ಹಂಚಿಕೆ ಹಾಕಿ ಗುರುವಿಗೆ ಆನಂದ್‌ಪುರ ತ್ಯಜಿಸಿ ಹೋಗಲು ಆದೇಶ ನೀಡಿದರು. ಆದರೆ, ಗುರು ಅವರ ಆದೇಶಕ್ಕೆ ಸೊಪ್ಪು ಹಾಕಲಿಲ್ಲ. ಆನಂದ್‌ಪುರದ ಪ್ರದೇಶವನ್ನು ಅವರ ತಂದೆ ಹಣ ನೀಡಿ ಕೊಂಡಿದ್ದು ಅದು ಅವರ ವೈಯಕ್ತಿಕ ಆಸ್ತಿಯಾಗಿದೆ. ಅದರ ಮೇಲೆ ಯಾರ ಹಕ್ಕು ಇರುವುದಿಲ್ಲ ಎಂದು ಉತ್ತರ ಕಳುಹಿಸಿದರು. ಗುರು, ಮುಂದುವರೆದು, ತಾವು ಯಾರ ಮೇಲೂ ಆಕ್ರಮಣ ಮಾಡುವ ಹವ್ಯಾಸ ಅಥವಾ ನೀತಿ ಇರಿಸಿಕೊಳ್ಳದೇ ಇದ್ದು, ಕೇವಲ ಆತ್ಮರಕ್ಷಣಾ ಯುದ್ಧ ಜರುಗಿಸುವ ಪರಿಪಾಠ ಇರಿಸಿಕೊಂಡಿರುವುದರಿಂದ, ರಾಜರ ಆದೇಶವನ್ನು ಪರಿಪಾಲಿಸಲಾಗುವುದಿಲ್ಲ ಎಂದರು. ಒಂದು ಪಕ್ಷ ರಾಜರು ತಮ್ಮ ಮೇಲೆ ಕದನ ಜರುಗಿಸಿದರೆ, ತಾವು ತಮ್ಮ ಆತ್ಮರಕ್ಷಣೆಗೋಸ್ಕರ ಹೋರಾಡುವುದು ಶತಃಸಿದ್ಧ ಎಂದು ಸಾರಿದರು. ಮೊಘಲರ ಕ್ರೂರ ಆಡಳಿತ, ಅವರ ನೀತಿ ಬಾಹಿರ ನಡತೆಗಳು, ಅವರು ಎಸಗುತ್ತಿರುವ ಮತಾಂಧತೆಯ ಗುಡಿ, ಗೋಪುರ, ಮಠಗಳ ನಾಶ, ಹಿಂದೂ ಸಿಖ್‌ರ ಮೇಲೆ ಅವರು ಜರುಗಿಸುತ್ತಿರುವ ದೌರ್ಜನ್ಯ, ಅನಾಗರೀಕ ನಡೆವಳಿಕೆ, ಬಲಾತ್ಕಾರದ ಮತಾಂತರ, 'ಜಜಿಯಾ' ಕಂದಾಯದಂತಹ ಅನಾಗರೀಕ ತಲೆಗಂದಾಯ, ಅಮಾಯಕ, ಶಾಂತಿಪ್ರಿಯ ಧರ್ಮನಿಷ್ಠ ಹಿಂದೂಗಳ ವಿರುದ್ಧ ಜರುಗಿಸುತ್ತಿರುವ ಅನೇಕ ಅವಮಾನಕರ, ಅಮಾನವೀಯ, ಅತ್ಯಂತ ಹೇಯಕರ, ಅಮಾನುಷ್ಯ ಕೃತ್ಯಗಳು, ಮೊಘಲರ ವಿರುದ್ಧ ಹೋರಾಟ ಸಾಗಿಸಲು ಸುಸಮಯ ಒದಗಿ ಬಂದಿದ್ದರಿಂದ, ರಾಜರೆಲ್ಲರೂ ಒಗ್ಗಟ್ಟಾಗಿ, ತನ್ನ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಕೋರಿದರು.

ಆದರೆ ಹೇಡಿಗಳಾದ ರಾಜರು, ಗುರುವಿಗೆ ನೆರವು ನೀಡುವುದರ ಬದಲು, ಅವರ ವಿರುದ್ಧ ಕತ್ತಿ ಮಸೆದು, ಮೊಘಲ್ ಬಾದ್‌ಶಹಾನಿಗೆ ಬೆಂಬಲ ನೀಡಿದ್ದು ಘೋರ ತಪ್ಪು ಮತ್ತು ಪಾಪವಾಗಿ ಪರಿಣಮಿಸಿತು. ಸ್ವಾಭಿಮಾನ, ಸ್ವದೇಶಾಭಿಮಾನ, ಸ್ವಧರ್ಮ ಮುಂತಾದ ಸದ್ಗುಣಗಳ ಕೊರತೆಯಿಂದ ನರಳುತ್ತಿದ್ದ ಗುಡ್ಡಗಾಡಿನ ಜಮ್ಮು, ನೂರ್‌ಪುರ್, ಮಂಡೀ, ಕುಲು, ಕೈಂಥಾಲ್, ಗುಲೇರ್, ಚಂಬಾ ಮತ್ತು ಶ್ರೀನಗರ ರಾಜರುಗಳು ತಮ್ಮ ಸ್ವಹಿತಾಸಕ್ತಿ ಕಾಪಾಡಲು, ಗುರುವಿನ ವಿರುದ್ಧ ಕದನ ಹೂಡಿ ಅವರ ಹುಟ್ಟು ಅಡಗಿಸುವ ತಯಾರು ನಡೆಸಿದರು. ಅವರೆಲ್ಲಾ ಒಗ್ಗಟ್ಟಾಗಿ, ದೆಹಲಿ ಬಾದ್‌ಶಹಾನ ವಿರುದ್ಧ ಕದನ ಜರುಗಿಸದೆ, ತಮ್ಮವರೇ ಆದ, ತಮ್ಮ ರಕ್ತ ಹಂಚಿಕೊಂಡು, ತಮ್ಮ ದೇಶೀಯವರೇ ಆದ ಸಿಖ್‌ರ ವಿರುದ್ಧ ಯುದ್ಧ ಹೂಡಿದರು. ಈ ರಾಜರ ಜೊತೆಗೆ ಧೈರ್ಯ ಶೌರ್ಯಕ್ಕೆ ಹೆಸರಾದ ರಂಘರ್ ಮತ್ತು ಗುಜ್ಜರ್‌ರು ಕೈ ಜೋಡಿಸಿದರು.

ಇವರೆಲ್ಲಾ ಒಟ್ಟಾಗಿ ಗುರುವಿನ ಮೇಲೆ ಆಕ್ರಮಣ ಎಸಗಿದಾಗ, ಪರಾಕ್ರಮಿಗಳಾದ ಸಿಖ್ಖರು ಅವರನ್ನು ಧೈರ್ಯದಿಂದ ಎದುರಿಸಿ ಕಾದಾಡಿದರು. ಯುದ್ಧದಲ್ಲಿ, ಗುಜ್ಜರ್‌ರ ನಾಯಕ ಜಗತುಲ್ಲಾನ ಸಾವುಂಟಾಯಿತು. ಆ ಯುದ್ಧದಲ್ಲಿ ಎರಡೂ ಕಡೆಯಲ್ಲಿ ಅಪಾರ ಸಾವು ನೋವುಂಟಾದರೂ ಸಿಖ್ಖರು ಜಯ ಗಳಿಸಿದ್ದರು. ಸಿಖ್ಖರನ್ನು ಸೋಲಿಸಲಾಗದೆ, ರಾಜರು ತಮ್ಮ ಅಳಿದುಳಿದ ಸೈನಿಕರೊಂದಿಗೆ ಯುದ್ಧಭೂಮಿಯಿಂದ ಕಾಲ್ತೆಗೆದರು. ಆದರೆ ಅವರ ಮನಸ್ಸು ಸೇಡಿನಿಂದ ಕುದಿಯುತ್ತಿತ್ತು. ಅವರು ಪುನಃ ದೆಹಲಿ ಬಾದ್‌ಶಹಾನಿಗೆ ತಮ್ಮ ಸಹಾಯಕ್ಕೆ ಬರುವಂತೆ ಕೋರಿದರು. ಅವರ ಕೋರಿಕೆಯನ್ನು ಮನ್ನಿಸಿ ಪಂಜಾಬ್‌ನ ಸರ್‌ಹಿಂದ್‌ನ ಸುಬೇದಾರ್ ವಾಜೀರ್ ಖಾನ್‌ನಿಗೆ ಗುರುವಿನ ವಿರುದ್ಧ ಹೋರಾಟ ನಡೆಸಲು ಆದೇಶ ನೀಡಲಾಯಿತು. ಆತ ತನ್ನ ಅಪಾರ ಸೈನಿಕರೊಂದಿಗೆ ಆನಂದಪುರವನ್ನು ಆಕ್ರಮಿಸಲು ತೆರಳಿದ. ಅವರು ಆನಂದ್‌ಪುರವನ್ನು ಆಕ್ರಮಿಸುವ ಮುನ್ನವೇ ಗುರು ಗೋಬಿಂದ್‌ಸಿಂಗ್ ತನ್ನ ಸೈನಿಕರ ನೆರವಿನಿಂದ ಅವರನ್ನು ಎದುರಿಸಿ, ಸಟ್ಲೆಜ್ ನದಿಯ ದಡದವರೆಗೂ ಅಟ್ಟಿಸಿಕೊಂಡು ಹೋಗಿ, ಮೊಘಲ್ ಸೈನ್ಯವನ್ನು ಧೂಳಿಪಟ ಮಾಡಿದರು. ಈ ಯುದ್ಧದ ರುವಾರಿ ರಾಜ ಅಜಮೀರ್‌ಚಂದ್ ಗುರುವಿನೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡ. ಕೆಲಕಾಲ ಎರಡೂ ಬಣಗಳೂ ಶಾಂತಿ ಕಾಪಾಡಿಕೊಂಡರು.

ಗುರು ಗೋಬಿಂದ್‌ರ ಶಕ್ತಿ, ಅವರು ಜರುಗಿಸಿದ ಯುದ್ಧಾಚರಣೆಗಳಲ್ಲಿ ಗಳಿಸಿದ ವಿಜಯ ಎಲ್ಲವೂ ಅವರ ಪ್ರಸಿದ್ಧಿಯನ್ನು ಮಿಗಿಲಾಗಿಸಿ, ದೇಶದಲ್ಲೆಲ್ಲಾ ಅದು ಹರಡಿ, ಜನರು ಅವರ ದರ್ಶನಕ್ಕಾಗಿ ಬರಲಾರಂಭಿಸಿದರು. ಪಂಜಾಬ್‌ನ ಜನರು, ಗುರುಗಳ ಭಕ್ತರಾಗಿ, ಸಿಖ್ಖರಾಗಿ ಮತಾಂತರಗೊಂಡು, ಅವರ ಅನನ್ಯ ಭಕ್ತರಾದರು. ಇತಿಹಾಸ ಪುನರಾವರ್ತನೆಗೊಂಡಿತು. ಗುರುಗಳ ಪ್ರಸಿದ್ಧ, ಅವರು ಗಳಿಸಿದ ಖ್ಯಾತಿ, ರಾಜರಿಗೆ ಈರ್ಷೆ ಮತ್ತು ಭಯ ಉಂಟಾಯಿತು. ಗುರುವನ್ನು ಬಗ್ಗಿ ಬಡಿಯಬೇಕೆಂಬ ಆಸೆ ಅವರಲ್ಲಿ ಹುಟ್ಟಿತು. ಅದಕ್ಕಾಗಿ ಪುನಃ ಅವರು ದೆಹಲಿ ದರ್ಬಾರ್‌ಗೆ ಮೊರೆಹೋದರು. ಅದೇ ಸಮಯಕ್ಕೆ ದೆಹಲಿಯಿಂದ ಲಾಹೋರ್ ನಗರಕ್ಕೆ ತಮ್ಮ ಸೈನ್ಯದೊಂದಿಗೆ ಇಬ್ಬರು ಮೊಘಲ್ ಸೈನ್ಯಾಧಿಕಾರಿಗಳು ಪಂಜಾಬ್ ಪ್ರಾಂತ್ಯದಲ್ಲಿ ಸಾಗಿದ್ದರು. ಅವರ ಹೆಸರುಗಳು, ಸಯ್ಯದ್ ಬೇಗ್ ಮತ್ತು ಅಲೀಫ್‌ಖಾನ್ ಎಂದಾಗಿದ್ದು, ಅವರನ್ನು ರಾಜಾ ಅಜ್ಮೀರ್‌ಚಂದ್, ಹಣದಾಸೆ ತೋರಿಸಿ, ಗುರುವಿನ ವಿರುದ್ಧ ಸಮರ ಜರುಗಿಸಬೇಕೆಂದು ಕೇಳಿಕೊಂಡ. ಆದರೆ, ಸಯ್ಯದ್ ಬೇಗ್, ಗುರುವಿನ ಅಧ್ಯಾತ್ಮಿಕತೆ ಮತ್ತು ಅವರಲ್ಲಿದ್ದ ದೇಶಾಭಿಮಾನಕ್ಕೆ ಮರುಳಾಗಿ, ಅವರಿಗೆ ಶರಣಾಗಿ, ತನ್ನ ಸರ್ವ ಸಂಪತ್ತನ್ನು ಅವರಿಗೆ ಸಮರ್ಪಿಸಿ ಅವರ ದಾಸನಾದ. ಆದರೆ ಮುಂದೆ, ಇದೇ ಸಯ್ಯದ್ ಬೇಗ್, ಗುರುವಿನ ಸೈನ್ಯದಲ್ಲಿ ಶಾಮೀಲಾಗಿ ಮೊಘಲ್ ಸೈನಿಕರ ವಿರುದ್ಧ ಕಾದಾಡುವಾಗ, ಅವನನ್ನು ಹತ್ಯೆ ಮಾಡಿದ ಮತ್ತೊಬ್ಬ ಸರದಾರ. ಈ ಯುದ್ಧದಲ್ಲಿ ಮೊಘಲ್ ಸರದಾರ ಸಯ್ಯದ್ ಖಾನ್ ಎಂಬಾತ ಶರಣಾದರೂ, ಅವನ ಸುಬೇದಾರ

ರಮ್ಜಾನ್ ಖಾನ್ ಎಂಬಾತ ಶೌರ್ಯದಿಂದ ಕಾದಾಡಿದ. ಗುರುವಿನ ಹಿನ್ನಡೆಯುಂಟಾಗಿ, ಆನಂದ್‌ಪುರವನ್ನು ತ್ಯಜಿಸಿ, ತನ್ನ ಅಳಿದುಳಿದ ಸೈನಿಕರೊಂದಿಗೆ ಊರು ತ್ಯಜಿಸಿ ಹೋಗಬೇಕಾಯಿತು. ಮೊಘಲ್ ಸೈನ್ಯ ಆನಂದ್‌ಪುರವನ್ನು ಆಕ್ರಮಿಸಿ, ಊರು ಕೊಳ್ಳೆ ಹೊಡೆಯಿತು. ಅದನ್ನು ಕಂಡ ಗುರುವನೊಂದಿಗಿದ್ದ ಸಿಖ್ಖರು ಅವಮಾನದಿಂದ ಕುಗ್ಗಿದರು. ಅವರು ತಮ್ಮ ನೆಚ್ಚಿನ ಕೋಟೆ, ಊರು ಧ್ವಂಸವಾಗಿದ್ದನ್ನು ಕಂಡು, ತಾವು ಬದುಕಿ ಉಳಿದು ಪ್ರಯೋಜನವಿಲ್ಲವೆಂದು ಹೇಳಿ ಗುರುವಿನ ಅಪ್ಪಣೆ ಪಡೆದು, ಮೊಘಲ್ ಸೈನ್ಯದ ಮೇಲೆ ಏರಿ ಹೋದರು. ಪುನಃ ಯುದ್ಧ ಜರುಗಿ, ಮೊಘಲ್ ಸೈನಿಕರ ಪರಾಭವ ಉಂಟಾಯಿತು. ಆದರೆ ಅವರು ತಮ್ಮ ನಗರವನ್ನು ರಕ್ಷಿಸಿಕೊಂಡ ಕೀರ್ತಿ ಪಡೆದಿದ್ದರು. ಗುರು ಗೋಬಿಂದ್ ಸಿಂಗ್ ಆನಂದ್‌ಪುರಕ್ಕೆ ಹಿಂದಿರುಗಿದರು. ರಕ್ತ ಚೆಲ್ಲಿ ತಮ್ಮ ಸಿಖ್ಖರು ತಮ್ಮ ನಗರವನ್ನು ವಾಪಸ್ಸು ಪಡೆದಿದ್ದು ಚರಿತ್ರಾರ್ಹವಾಗಿತ್ತು. ಆನಂದ್‌ಪುರ ಸಿಖ್ಖರಿಗೆ ಆನಂದ ತಂದಿತ್ತು.

ಔರಂಗಜೇಬ್‌ನಿಗೆ ತನ್ನ ಸೈನ್ಯ ಪರಾಭವಗೊಂಡಿದ್ದನ್ನು ಕೇಳಿ ಕೆರಳಿದ. ಗುರುವನ್ನು ತನ್ನ ಆಸ್ಥಾನಕ್ಕೆ ಕರೆಸಿಕೊಳ್ಳಲು ನಿರ್ಧರಿಸಿದ. ಅವನಿಗೆ ಒಂದು ಸಂದೇಶ ಕಳುಹಿಸಿ, ಅದರಲ್ಲಿ "ನಿನ್ನ ಧರ್ಮ ಮತ್ತು ನಮ್ಮ ಧರ್ಮದಲ್ಲಿ ಏಕೈಕ ದೇವನ ಬಗ್ಗ ನಂಬಿಕೆ ಇಟ್ಟುಕೊಂಡಿರುವಾಗ, ಯಾಕೆ ಪರಸ್ಪರ ವೈರತ್ವ ಹೊಂದಬೇಕು?. . . . . ನನ್ನನ್ನು ಬಾದ್‌ಶಹಾ ಎಂದು ಸರ್ವರೂ ಸಮ್ಮತಿಸಿರುವಾಗ ನೀನು ವಿರೋಧ ವ್ಯಕ್ತಪಡಿಸುವುದಾದರೂ ಏಕೆ? ನಿನ್ನಲ್ಲಿ ಏನಾದರೂ ಕುಂದು ಕೊರತೆ ಇದ್ದರೆ ನನ್ನ ಬಳಿ ಬಂದು ನಿವಾರಿಸಿಕೊಳ್ಳಬಹುದು. ನಿನ್ನನ್ನು ನಾನು ಒಬ್ಬ ಪವಿತ್ರ ಸಂತನೆಂದು ಭಾವಿಸಿದ್ದೇನೆ. ಆದರೆ ನೀನು ನನ್ನ ಅಧಿಕಾರವನ್ನು ಪ್ರಶ್ನಿಸಿದರೆ, ನಾನು ಖುದ್ದಾಗಿ ನಿನ್ನ ಮೇಲೆ ಆಕ್ರಮಣ ಎಸಗುತ್ತೇನೆ."

ಗುರು, ಬಾದ್‌ಶಹಾನ ಸಂದೇಶಕ್ಕೆ ಈ ರೀತಿ ಉತ್ತರಿಸಿದ.

'ದೇವನೊಬ್ಬನೇ ಚಕ್ರಾಧಿಪತಿ ಮತ್ತು ಮಹಾನ್ ಪರಾಕ್ರಮಿಯಾಗಿರುತ್ತಾನೆ ಮತ್ತು ನಾನು ಮತ್ತು ಖಾವಂದಿರು ಅವನ ಅಡಿಯಾಳಾಗಿದ್ದೇವೆ. ಆದರೆ ಇದನ್ನು ನೀನು ಮಾತ್ರ ಅರಿತಿಲ್ಲ ಮತ್ತು ನಿನ್ನ ಧರ್ಮವನ್ನು ಪಾಲಿಸದೇ ಇರುವವರ ವಿರುದ್ಧ ದಬ್ಬಾಳಿಕೆ ನಡೆಸಿ ಅವರ ನಾಶಕ್ಕೆ ಪ್ರಯತ್ನಿಸುತ್ತಾ ಇದ್ದೀಯಾ. ದೇವರು ನನಗೆ ಒಂದು ದೈವ ನಿಯಮಿತ ಕಾರ್ಯ ಮಾಡಲು ಕಳುಹಿಸಿರುತ್ತಾನೆ. ಅದು ಈ ಭೂಮಿಯಲ್ಲಿ ಧರ್ಮಮಾರ್ಗವನ್ನು ಪುನಃಸ್ಥಾಪಿತಗೊಳ್ಳಲು. ನಮ್ಮ ದಾರಿಗಳು ಬೇರೆಯಾಗಿರುವಾಗ, ನಾನು ಹೇಗೆ ತಾನೇ ನಿನ್ನೊಂದಿಗೆ ಶಾಂತಿಯಿಂದಿರಲು ಸಾಧ್ಯ?' ೨೦

ಗುರು ಗೋಬಿಂದ್ ಸಿಂಗ್‌ನೊಂದಿಗೆ ಶಾಂತಿಯಿಂದ ಇರಲು ಒಪ್ಪದ, ಗುಡ್ಡಗಾಡಿನ ರಾಜರು ಪಿತೂರಿ ಹೂಡಿದರು. ರಾಜಾ ಅಜ್ಮೀರ್ ಚಂದ್ ಅದರ ಮುಂದಾಳತ್ವ ಪಡೆದು, ದಕ್ಷಿಣದಲ್ಲಿ ಬಿಜಾಪುರದ ಶಿಯಾ ಸುಲ್ತಾನರ ವಿರುದ್ಧ ಹೋರಾಡುತ್ತಿದ್ದ

ಔರಂಗಜೇಬ್‌ನನ್ನು ಭೇಟಿ ಮಾಡಿ, ತನ್ನ ಅಹವಾಲನ್ನು ಒಪ್ಪಿಸಿದ. ಹಿಂದೂಗಳನ್ನು ಒಗ್ಗೂಡಿಸಿ, ತಮ್ಮ ಮೇಲೆ ಯುದ್ಧ ಜರುಗಿಸಿದ್ದೇ ಅಲ್ಲದೆ, ದೆಹಲಿ ಬಾದ್‌ಶಹಾನ ಸಿಂಹಾಸನವನ್ನೇ ಅಲ್ಲಾಡಿಸಲು, ಪ್ರಯತ್ನ ನಡೆಸುವ ಹುನ್ನಾರದಲ್ಲಿದ್ದಾನೆ ಎಂದು ಔರಂಗಜೇಬ್‌ನನ್ನು ಪ್ರಚೋದಿಸಿದರು. ಅವನು ತಕ್ಷಣ ದೆಹಲಿ, ಸರ್‌ಹಿಂದ್ ಮತ್ತು ಲಾಹೋರ್ ನಗರಗಳಲ್ಲಿದ್ದ ದಂಡನ್ನು ಸರ್‌ಹಿಂದ್‌ನ ಸುಬೇದಾರ್ ವಜೀರ್ ಖಾನ್‌ನ ನೇತೃತ್ವದಲ್ಲಿ ಗುರುವಿನ ವಿರುದ್ಧ ಕಾದಾಡಲು ಕಳುಹಿಸಿದ.

ಘನ ಘೋರ ಯುದ್ಧ ಜರುಗಿ, ಮೊಘಲ್ ಸೈನ್ಯದಲ್ಲಿ ನೂರಾರು ಹತರಾದರೂ, ಬಲಿಷ್ಠ ಅಪಾರ ಸಂಖ್ಯೆಯಲ್ಲಿದ್ದ ಆ ಸೈನ್ಯ ಗುರುವಿನ ಆನಂದ್‌ಪುರದ ಭದ್ರ ಕೋಟೆಯನ್ನು ವಹಿಸಿಕೊಳ್ಳಲಾರದೆ, ಅವರು ಬಸವಳಿದರು. ಅಂತಿಮವಾಗಿ, ಅವರು, ಕೋಟೆಯನ್ನು ಸುತ್ತುವರೆದು, ಸಿಖ್‌ರನ್ನು ಹಸಿವಿನಿಂದ ಕಂಗೆಡಯುವಂತೆ ಮಾಡಿದರು. ಕೋಟೆಯೊಳಗಿದ್ದ ಸಿಖ್‌ರು ಹಸಿವಿನಿಂದ ನರಳಿದರು. ಹೆಂಗಸರು ಮತ್ತು ಮಕ್ಕಳ ಆಕ್ರಂದನ ಗುರುವಿನ ಮನಸ್ಸು ಕದಡಿತು. ಅವರು ಶಾಂತಿ ಸಂಧಿ ಮಾಡಲು ಒಪ್ಪಿದರು. ಮೊಘಲ್ ಸೈನ್ಯಕ್ಕೆ ಆನಂದಪುರದ ಕೋಟೆಯನ್ನು ಒಪ್ಪಿಸಿ, ಕ್ಷೇಮವಾಗಿ ತನಗೆ ಇಷ್ಟವಾದ ಸ್ಥಳಕ್ಕೆ ತೆರಳಬಹುದೆಂಬ ಮೊಘಲ್‌ರ ಸೂಚನೆಗೆ ಒಪ್ಪಿ, ಗುರು ತನ್ನ ತಾಯಿ ಇಬ್ಬರು ಪತ್ನಿಯರನ್ನು ಮತ್ತು ೬ ಮತ್ತು ೮ ವರ್ಷಗಳ ಮಕ್ಕಳನ್ನು ಕೋಟೆಯಿಂದ ನಿರ್ಗಮಿಸುವ ಏರ್ಪಾಟು ಮಾಡಿದರು. ಅನಂತರ ಅವರು ತಮ್ಮ ೫೦೦ ನಿಷ್ಠಾವಂತ ಸಿಖ್‌ರೊಂದಿಗೆ ನಡುರಾತ್ರಿ ಕೋಟೆಯಿಂದ ಹೊರಹೊರಟು, ಸನಿಹದಲ್ಲಿದ್ದ ಸಿರ್ಸಾ ನಗರದಲ್ಲಿ ಈಗಾಗಲೇ ಬೀಡು ಬಿಟ್ಟಿದ್ದ ಪತ್ನಿ ಮತ್ತು ಮಕ್ಕಳನ್ನು ಸೇರಿಕೊಂಡರು. ಗುರು ಅಲ್ಲಿ ತಂಗಿದ್ದ ತಮ್ಮ ತಾಯಿಗೆ ತಮ್ಮ ಎರಡು ಮಕ್ಕಳನ್ನು ಒಪ್ಪಿಸಿ, ಅವರನ್ನು ದೆಹಲಿಗೆ ಕ್ಷೇಮದಿಂದ ತೆರಳಲು ಒಬ್ಬ ನಿಷ್ಠಾವಂತ ಸಿಖ್‌ನಿಗೆ ಒಪ್ಪಿಸಿದರು. ಅವರ ಪತ್ನಿಯರು ಈಗಾಗಲೇ ದೆಹಲಿಗೆ ತೆರಳಿದ್ದರು.

ತಾಯಿ ಮತ್ತು ತಮ್ಮ ಮಕ್ಕಳನ್ನು ದೆಹಲಿಗೆ ಕೊಂಡೊಯ್ಯಲು ಒಪ್ಪಿದ ಆ ಸಿಖ್, ಅವರನ್ನು ರೂಪರ್ ನಗರಕ್ಕೆ ಕೊಂಡೊಯ್ದ. ಅಲ್ಲಿ ಅವರು ಗಂಗೂವನ್ನು ಭೇಟಿ ಮಾಡಿದರು. ಆ ಬ್ರಾಹ್ಮಣ ಈ ಮೊದಲು ಅವರ ಅಡಿಗೆಯ ಭಟ್ಟನಾಗಿದ್ದ. ಅವರನ್ನು ಕ್ಷೇಮವಾಗಿ ದೆಹಲಿಗೆ ಕರೆದೊಯ್ಯುವನೆಂದು ಹೇಳಿ, ಗುರುವಿನ ತಾಯಿಯ ಬಳಿ ಇದ್ದ ಒಡವೆ ವಸ್ತುಗಳನ್ನು ಲಪಟಾಯಿಸಿದ ಮತ್ತು ನವಾಬ್‌ನಿಂದ ಬಹುಮಾನ ಪಡೆಯುವ ಉದ್ದೇಶದಿಂದ ಅವರನ್ನು ಸರ್‌ಹಿಂದ್‌ನ ನವಾಬ್‌ನಿಗೆ ಒಪ್ಪಿಸಿದ. ಮೊಘಲ್‌ರ ಅಡಿಯಾಳಾಗಿದ್ದ ಸರ್‌ಹಿಂದ್‌ನ ನವಾಬ್ ತಕ್ಷಣ ಅವರನ್ನು ಬಂಧಿಸಿದ. ಅವರಿಗೆ ಮರಣದಂಡನೆ ವಿಧಿಸುವುದಾಗಿ ಹೆದರಿಸಿದ. ಇಸ್ಲಾಮ್ ಧರ್ಮ ಸ್ವೀಕರಿಸಿದರೆ, ಸಾವಿನಿಂದ ಬಿಡುಗಡೆಯಾಗುವಿರಿ ಎಂದು ಹೇಳಿದ. ಆ ೬ ವರ್ಷ ಮತ್ತು ೮

ವರ್ಷದ ಗುರುವಿನ ಮಕ್ಕಳು ಉತ್ತರಿಸಿದರು :

'ನಾವು ಗುರು ಗೋಬಿಂದ್ ಸಿಂಗ್‌ರ ಮಕ್ಕಳಾಗಿದ್ದೇವೆ. ನಮಗೆ ಸೋಲು ಅಥವಾ ಶರಣಾಗುವುದು ಅರಿಯೆವು.' ೮ ವರ್ಷದ ಮಗ, ಮುಂದುವರೆದು ಹೇಳಿದ : 'ನಮ್ಮ ತಾತ ತಮ್ಮ ಜೀವವನ್ನೇ ಬಲಿದಾನಗೈದ, ಆದರೆ ತಮ್ಮ ಧರ್ಮವನ್ನಲ್ಲ. ನಾವು ಕೂಡ ಅಷ್ಟೇ !'

ಗುರು ಮತ್ತು ಸಿಖ್‌ರನ್ನು ದ್ವೇಶಿಸುತ್ತಿದ್ದ ಕ್ರೂರಿ ನವಾಬ್, ಗುರುವಿನ ಮಕ್ಕಳಿಗೆ, 'ಗುರು ಈಗಾಗಲೇ ಮರಣವನ್ನಪ್ಪಿರುತ್ತಾನೆ, ನೀವು ಶರಣಾಗಿರಿ, ಇಸ್ಲಾಮ್ ಸ್ವೀಕರಿಸಿರಿ' ಎಂದು ಹೇಳಿದಾಗ, ಮಕ್ಕಳು ಈ ರೀತಿ ಉತ್ತರಿಸಿದರು.

'ನಮ್ಮ ತಂದೆ ಚಿರಂಜೀವಿ. ಅವರಿಗೆ ಸಾವಿಲ್ಲ.' ಮಕ್ಕಳ ಧೈರ್ಯ, ಅಚಲವಾದ ಧರ್ಮಾಸಕ್ತಿ, ಕ್ರೂರಿ ನವಾಬ್‌ನಿಗೆ ಹುಚ್ಚು ಹಿಡಿಯುವಂತಾಯಿತು. ಅವನು ಆ ಹಸುಳೆಗಳು ನಿಂತಿದ್ದ ಜಾಗದಲ್ಲೇ ಅವರ ಸುತ್ತ ಇಟ್ಟಿಗೆ ಕಟ್ಟಿ, ಅವರ ಸಜೀವ ಸಮಾಧಿ ಮಾಡಿದ.

ಮೊಮ್ಮಕ್ಕಳ ದಾರುಣ ಹೃದಯವಿದ್ರಾವಕ ಮರಣ, ಗುರುವಿನ ತಾಯಿ ಗುಜರಿಗೆ ಅಪಾರ ದುಃಖವಾಗಿ ನೊಂದು ಬೆಂದಳು. ಆ ದಾರುಣ ಘಟನೆಯ ನೋವನ್ನು ತಡೆಯಲಾರದೆ, ಸಾವನ್ನಪ್ಪಿದಳು.

ಗುರುವಿನ ಎಳೇ ಮಕ್ಕಳ ಪ್ರಾಣಹತ್ಯೆಯನ್ನು ವಿರೋಧಿಸಿದ ಮಲೇರ್‌ಕೋಟ್ಲಾ ನಗರದ ನವಾಬ್, "ತಂದೆಯ ಪಾಪಕರ್ಮಗಳು ಎಳೆ ಮಕ್ಕಳನ್ನು ತಾಟಬಾರದು. ಗುರುವನ್ನು ನಾವು ಸೋಲಿಸಲಾಗದಿದ್ದ ಪಕ್ಷದಲ್ಲಿ, ಯಾಕೆ ಈ ಪಾಪದ ಹಸುಳೆ ಮಕ್ಕಳ ಮೇಲೆ ಸೇಡು ತೀರಿಸಿಕೊಳ್ಳಬೇಕು." ಎಂಬ ಹೇಳಿಕೆಯನ್ನು ನೀಡಿ ತನ್ನ ಪ್ರತಿರೋಧ ವ್ಯಕ್ತಪಡಿಸಿದ. ಆದರೆ ಆ ನವಾಬ್‌ನ ಕಳಕಳಿಯ ಮಾತುಗಳು ಮೊಘಲ್‌ರ ಪಾಲಿಗೆ ನಿಷ್ಠುರದ ಮಾತುಗಳಾಗಿದ್ದವು.

ಮುಂದೆ, ಬಂದಾಸಿಂಗ್, ತನ್ನ ಸಿಖ್ ಸೈನ್ಯದ ನೆವರಿನಿಂದ, ಸರ್‌ಹಿಂದ್‌ನ ಮೇಲೆ ಆಕ್ರಮಣ ಎಸಗಿ, ಆ ಪ್ರದೇಶವನ್ನು ಧ್ವಂಸ ಮಾಡಿದ್ದಲ್ಲದೆ, ಅದರ ನವಾಬ ವಜೀರ್‌ಖಾನ್‌ನ ಮತ್ತು ಅವರ ಸಂಸಾರವನ್ನು ಹತ್ಯೆ ಮಾಡಿ, ಗುರುವಿನ ಮಕ್ಕಳ ಹತ್ಯೆಯ ಪ್ರತೀಕಾರ ಎಸಗಿದನು. ಆದರೆ ಮಲೇರ್‌ಕೋಟ್ಲಾದ ನವಾಬ್‌ನನ್ನು ಮಾತ್ರ ಹಿಂಸಿಸದೆ ಬಿಟ್ಟು ಅವನ ಮೇಲಿನ ತನ್ನ ಪ್ರೀತಿ ಕೃತಜ್ಞತೆಯನ್ನು ನೆನಪಿಸಿಕೊಂಡ. ೨೧

ಇತ್ತ ಗುರು ಗೋಬಿಂದ್ ಸಿಂಗ್, ಕೇವಲ ನಾಲ್ವತ್ತು ಮುದಿ ಸಿಖ್‌ರೊಂದಿಗೆ ಮೊಘಲ್ ಸೈನ್ಯದಿಂದ ತಪ್ಪಿಸಿಕೊಂಡು ಚಮ್‌ಕೌರ್ ಕೋಟೆಯೊಳಗೆ ಸೇರಿಕೊಂಡರು. ಅವರ ರಕ್ಷಣೆಗಾಗಿ, ಅವರ ಹಿರಿಯ ಇಬ್ಬರು ಮಕ್ಕಳಾದ ಅಜಿತ್ ಸಿಂಗ್ ಮತ್ತು ಜುಜ್ಹಾರ್ ಸಿಂಗ್‌ರು, ಮೊಘಲ್ ಸೈನ್ಯದ ವಿರುದ್ಧ ಕಾದಾಡಿ ಸಾವನ್ನಪ್ಪಿದರು. ಸುದ್ದಿ

ಅರಿತ ಗುರು 'ದೇವರೇ ನಿನಗೆ ಯಾವುದನ್ನು ಸಮರ್ಪಿತವಾಗಿದೆಯೋ ಅದನ್ನು ನಾನು ಸಮರ್ಪಿಸಿದ್ದೇನೆ,' ಎಂದು ದೇವರಿಗೆ ತಮ್ಮ ಧನ್ಯವಾದ ಹೇಳಿದರು.

ಗುರುವನ್ನು ಅರಿಸಿ ಬಂದ ಮೊಘಲ್ ಸೈನ್ಯ ಅಳಿದುಳಿದ ಸಿಖ್ ಸೈನ್ಯದ ವಿರುದ್ಧ ಯುದ್ಧ ಜರುಗಿಸಿ, ಕೇವಲ ಐದು ಮಂದಿ ಸಿಖ್‌ರು ಬದುಕಿ ಉಳಿದು, ಮಿಕ್ಕ ಎಲ್ಲಾ ಸಿಖ್‌ರು ಹೋರಾಡುತ್ತಾ ಸಾವನ್ನಪ್ಪಿದರು. ಆಗ ಐದು ಸಿಖ್‌ರು ಗುರುವಿಗೆ, ಆ ಪ್ರದೇಶದಿಂದ ತಪ್ಪಿಸಿಕೊಂಡು ಹೋಗಲು ಪ್ರಾರ್ಥಿಸಿದರು. ಅವರಲ್ಲಿ ಒಬ್ಬ ಗುರುವಿನ ಪೋಷಾಕು ಧರಿಸಿ, ಮೊಘಲ್‌ರ ಕಣ್ಣು ತಪ್ಪಿಸಿ, ಗುರು ತಪ್ಪಿಸಿಕೊಂಡು ಹೋಗುವ ಹಾಗೆ ಸಂಚು ಹೂಡಿದ. ೨೨

ಅವನ ಪ್ರಾರ್ಥನೆಯನ್ನು ಮನ್ನಿಸಿ, ಕೇವಲ ೩ ಮಂದಿ ಸಿಖ್‌ರೊಂದಿಗೆ ಗುರು ರಾತ್ರೋರಾತ್ರಿ ಕೋಟೆಯಿಂದ ಹೊರಬಿದ್ದು ಕಣ್ಮರೆಯಾದರು. ಬೆಳಿಗ್ಗೆ ಮೊಘಲ್‌ರು ಕೋಟೆಯೊಳಗೆ ನುಗ್ಗಿ ಗುರುವನ್ನು ಹುಡುಕಿದಾಗ, ಅವರಿಗೆ ಗುರುವಿನ ಪೋಷಾಕು ಧರಿಸಿದ್ದ ಸಂತ ಸಿಂಗ್‌ನನ್ನು ಕಂಡು ಬೆರಗಾದರೂ, ಆತ ಗುರು ಗೋಬಿಂದ್ ಸಿಂಗ್‌ನಲ್ಲ ಎಂದು ಅರಿತ ತಕ್ಷಣ, ಅವನ ಕತ್ತು ಕಡಿದು ಹಾಕಿದರು !

ಗುರು ಮೊಘಲ್ ಸೈನ್ಯದಿಂದ ತಪ್ಪಿಸಿಕೊಳ್ಳಲು ನೆರವಾದ ಇಬ್ಬರು ಪಠಾಣರಾದ ನಬೀ ಖಾನ್ ಮತ್ತು ಘಾನಿ ಖಾನ್‌ರ ಹೆಸರುಗಳನ್ನು ಇತಿಹಾಸಕಾರರು ನೀಡಿರುತ್ತಾರೆ. ಮೊಘಲ್‌ರ ವೈರಿಗಳಾದ ಪಠಾಣರು ಸಿಖ್‌ರ ಮಿತ್ರರಾಗಿ ಪರಿಣಮಿಸಿದರು. ಗುರುಗಳಿಗೆ ಅದು ಅತ್ಯಂತ ಅನುಕೂಲಕರವಾದ ಪ್ರಮೇಯವಾಗಿತ್ತು. ಅವರು ಗುರುವಿಗೆ ಒಬ್ಬ ಮುಸ್ಲಿಮ್ 'ಪೀರ್' (ಸಂತ)ರ ಪೋಷಾಕು ಧರಿಸುವಂತೆ ಹೇಳಿ, ಅವರನ್ನು ಮೊಘಲ್‌ರ ಕೈಯಿಂದ ಪಾರುಮಾಡಿದರು.

ಗುರು ಗೋಬಿಂದ್ ಸಿಂಗ್ ಮೊಘಲ್ ಸೈನ್ಯದಿಂದ ತಪ್ಪಿಸಿಕೊಂಡು, ಕಾಡುಮೇಡುಗಳಲ್ಲಿ ಅಲೆಯುತ್ತಿರುವಾಗಲೇ ಅವರಿಗೆ ತಮ್ಮ ಮಕ್ಕಳ ಹತ್ಯೆಯ ವಿಷಯ ಅರಿವಾಯಿತು. ಮಕ್ಕಳ ಸಜೀವ ಸಮಾಧಿಯಾದ ದಾರುಣ ವೃತ್ತಾಂತ ಅರಿತ ಅವರು ಅತ್ಯಂತ ದುಃಖಪೀಡಿತರಾದರು. ಅವರ ನಾಲ್ಕು ಮಕ್ಕಳ ಸಾವು ದುರಂತದಲ್ಲಿ ಕೊನೆಗೊಂಡಿದ್ದು ಅವರಿಗೆ ಅತ್ಯಂತ ಮನ ಕರುಗುವ ಸಂಗತಿಯಾಗಿ, ಅತೀವವಾಗಿ ಶೋಕಿಸಿದರು. ಆದರೆ ಕ್ರಮೇಣ ಸಾವರಿಸಿಕೊಂಡು, ದೇವರಿಗೆ ಕೈಮುಗಿದು ಪ್ರಾರ್ಥಿಸಿದರು: 'ಈ ಇಬ್ಬರು ಮಕ್ಕಳನ್ನು ನಿನಗೆ ಸಮರ್ಪಿಸಿರುತ್ತೇನೆ.' ಅವರು ಮುಂದುವರೆದು, ತನ್ನ ಕಿರುಕತ್ತಿಯಿಂದ ತಮ್ಮ ಮುಂದೆ ಬೆಳದಿದ್ದ ಹುಲ್ಲುಗಿಡದ ಪೊದೆಯನ್ನು ಬುಡ ಸಮೇತ ರಭಸದಿಂದ ಕಿತ್ತು ಭವಿಷ್ಯ ನುಡಿದರು : 'ಯಾವ

---

೨೧. P 307 History of Sikh People by G.Singh
೨೨. P 86 The Laters Mughals by Irvine

ರೀತಿ ನಾನು ಈ ಹುಲ್ಲು ಪೊದೆಯನ್ನು ಕಿತ್ತು ತೆಗೆದಿರುತ್ತೇನೋ, ಅದೇ ರೀತಿ, ಈ ಕ್ರೂರ ಸಾಮ್ರಾಜ್ಯದ ಬೇರು ಮತ್ತು ಕೊಂಬೆಗಳ ಸಹಿತ ತ್ವರಿತವಲ್ಲೇ ನಾಶವಾಗಲಿ!'

ಗುರು ಗೋವಿಂದ್ ಸಿಂಗ್‌ರು, ಕಾಡಿನಿಂದ ಹೊರಬಂದು, ಜಾಟ್‌ಪುರಾ, ದೀನಾ ನಗರಗಳಲ್ಲಿ ವಾಸ್ತವ್ಯ ಹೂಡಿದರು. ಇಲ್ಲೇ ಅವರು ಪರ್ಶಿಯನ್ ಭಾಷೆಯಲ್ಲಿ 'ಜ಼ಫರ್‌ನಾಮಾ' ಎಂಬ ಗ್ರಂಥ ರಚಿಸಿದರು. ಅದು, ತಾವು ಬಾದ್‌ಶಹಾ ಔರಂಗಜೇಬ್‌ನಿಗೆ ಬರೆದ ಪತ್ರಗಳ ಸಾರಾಂಶವಾಗಿದ್ದವು. ಅವನಿಗೆ ಬರೆದ ಪತ್ರದಲ್ಲಿ ಗುರು ತಾಳುತ್ತಿರುವ ಕ್ರೂರ ಮತ್ತು ಪಾಪಯುಕ್ತ ಬಾದ್‌ಶಹಾನ ವಿರುದ್ಧ ಪ್ರತಿರೋಧವನ್ನು ವ್ಯಕ್ತಪಡಿಸಿ, ಏಕೈಕ ದೇವನೇ ಪಾಪನಾಶಕನಾಗಿದ್ದನಲ್ಲದೆ ಅವನು ಅಂತಿಮವಾಗಿ ನ್ಯಾಯಪಾಲಕನೂ ಆಗಿದ್ದಾನೆಂದು ಪ್ರತಿಪಾದಿಸಿದರು.

ಆ ಪತ್ರವನ್ನು ಹೊತ್ತ ಇಬ್ಬರು ಸಿಖ್ಖರು, ದಕ್ಷಿಣದ ಅಹ್ಮದ್‌ನಗರದಲ್ಲಿ ತಂಗಿದ್ದ ಔರಂಗಜೇಬ್‌ನಿಗೆ ಅದನ್ನು ಒಪ್ಪಿಸಿದರು. ಪತ್ರವನ್ನು ಓದಿದ ಬಾದ್‌ಶಹಾ ಅವರನ್ನು ಭೇಟಿ ಮಾಡಲು ಆಮಂತ್ರಿಸಿದ. ಆದರೆ ವಿಧಿಯಾಟ ಬೇರೆಯಾಗಿತ್ತು. ಗುರು ಅವನನ್ನು ಭೇಟಿಯಾಗುವ ಮೊದಲೇ ಔರಂಗಜೇಬ್ ಸಾವನ್ನಪ್ಪಿದ.

ಬಾದ್‌ಶಹಾ ಸಾವನ್ನಪ್ಪಿದರೂ, ಅವನ ಬಂಟರು ಮಾತ್ರ ಗುರುವನ್ನು ಹಿಡಿದು ಸಾಯಿ ಸುವ ಪ್ರಯತ್ನ ನಿಲ್ಲಿಸಲಿಲ್ಲ. ಅವರು ತಮ್ಮ ಪ್ರಯತ್ನವನ್ನು ನಿರಂತರವಾಗಿ ಮಾಡಿದರು. ಈ ಮಧ್ಯದಲ್ಲಿ, ಗುರುವಿನ ಕೆಲ ಶಿಷ್ಯಂದಿರು, ಮಧ್ಯ ಪಂಜಾಬ್ ಪ್ರದೇಶದಲ್ಲಿನ ಸ್ವಾರ್ಥಸುಖಾಭಿಲಾಷೆಯುಳ್ಳ ಸಿಖ್ಖರು, ಗುರುವನ್ನು ಭೇಟಿ ಮಾಡಿ, ದೆಹಲಿ ದರ್ಬಾರಿಗೆ ತೆರಳಿ, ತಾವು ಮಧ್ಯವರ್ತಿಗಳಾಗಿ, ಕಾದಾಡುತ್ತಿರುವ ಇಬ್ಬರ ನಡುವೆ ಶಾಂತಿ ಒಪ್ಪಂದ ಏರ್ಪಡಿಸುವ ಕಾರ್ಯ ಮಾಡುತ್ತೇವೆಂದು ತಿಳಿಸಿದರು. ಆದರೆ ಆ ಮಧ್ಯವರ್ತಿಗಳ ಕೋರಿಕೆಗೆ ಗುರು ಈ ರೀತಿ ಉತ್ತರಿಸಿದರು :

'ನಾನು ಒಂದು ಧ್ಯೇಯ, ಒಂದು ಕಾರಣಕ್ಕೆ ಹೋರಾಡುತ್ತಿದ್ದೇನೆ, ನನ್ನ ಸ್ವಾರ್ಥಸಾಧನೆಗಾಗಲ್ಲ. ನನ್ನ ಮಕ್ಕಳ, ನನ್ನ ತಂದೆ ಮತ್ತು ತಾಯಿಯರ ಬಲಿದಾನ ಮಾಡಿದ್ದೇನೆ. ಈಗ ನನ್ನ ಪ್ರಾಣ ಕಾಪಾಡಿಕೊಳ್ಳಲು ಈ ಹೋರಾಟ ನಿಲ್ಲಿಸಲು ನೀವು ಕೇಳುತ್ತಿರುವೇನು? ಅದು ಎಂದಿಗೂ ಆಗದು ! ಯಾರೇ ಒಬ್ಬರು, ಅನ್ಯಾಯದ ಶಾಂತಿಸ್ಥಿತಿಯಲ್ಲಿ ಜೀವಿಸುವ ಇಚ್ಛೆಯುಳ್ಳವರು, ದುರಾಡಳಿತದೊಡನೆ ಸಂಧಾನ ಮಾಡಿಕೊಳ್ಳಬಹುದು. ನಾನು ಅಥವಾ ನನ್ನ ಅನುಯಾಯಿಗಳಾಗಲೀ, ನನ್ನಲ್ಲಿ ಉಸಿರು ಇರುವವರೆಗೂ, ಸಂಧಾನ ಮಾಡಿಕೊಳ್ಳಲಾರೆವು.'

ನಿರಾಶರಾಗಿ ಅವರೆಲ್ಲಾ ತಮ್ಮ ಊರಿಗೆ ಹಿಂದಿರುಗಿದಾಗ, ಸುದ್ದಿ ತಿಳಿದ ಇತರ ಸಿಖ್ಖರು ಗುರುವಿನ ಮಾತುಗಳಿಂದ, ಉತ್ತೇಜನಗೊಂಡರು, ಉದ್ರೇಕಗೊಂಡರು, ಪ್ರಚೋದನೆಗೊಂಡರು. ಅವರು ಗುರುವಿನ ಶಿಷ್ಯಂದಿರಾಗಿ, ಸಾವಿರಾರು ಸಂಖ್ಯೆಯಲ್ಲಿ

ಖಾಲ್ಸಾ ಸೈನ್ಯಕ್ಕೆ ಶಾಮೀಲಾದರು. ಅವರಲ್ಲಿ ಒಬ್ಬ ವೀರ ಮಹಿಳೆಯೂ ಒಬ್ಬಳಾಗಿದ್ದಳು. ಆಕೆಯ ಹೆಸರು ಭಾಗೋ ಎಂದಾಗಿದೆ. ಆಕೆ ಪುರುಷನ ಪೋಷಾಕು ಧರಿಸಿ, ಗುರುವಿನ ಖಾಲ್ಸಾಕ್ಕೆ ಸೇರಿದಳು.

ಗುರುವನ್ನು ಅರಿಸಿಕೊಂಡು ಮೊಘಲ್ ಸೈನ್ಯ ಸರ್‌ಹಿಂದ್‌ನ ಸುಬೇದಾರ್ ವಜೀರ್ ಖಾನ್ ನೇತೃತ್ವದಲ್ಲಿ ಗುರು ತಂಗಿದ್ದು ಖಿದಿರಾಣಾ ಎಂಬ ಪ್ರದೇಶದ ಮೇಲೆ ದಂಡೆತ್ತಿ ಬಂದಿತು. ಗುರುವಿನ ಸಹಾಯಕ್ಕೆ ಮಾಜ್ಹಾದಿಂದ ಸಿಖ್ ಸೈನ್ಯ ಸಾಗಿ ಬಂದಿತು. ಆ ಯುದ್ಧದಲ್ಲಿ ಸಿಖ್‌ಸೈನ್ಯ, ಉಪಾಯದಿಂದ ಗುರು ತಂಗಿದ್ದ ಸ್ಥಳದಿಂದ ಬೇರೆಯಾಗಿ, ಠಿಕಾಣಿ ಹೂಡಿ, ಶತ್ರು ಸೈನ್ಯದ ದೃಷ್ಟಿಯನ್ನು ತಮ್ಮೆಡೆಗೆ ಸೆಳೆದು, ಅವರೊಡನೆ ಕದನ ಜರುಗಿಸಿದರು. ಅಪಾರ ಬಲಿಷ್ಠ ಸೈನ್ಯಬಲದಿಂದ ಬಂದಿದ್ದ ಮೊಘಲ್ ಸೈನ್ಯವನ್ನು ಎದುರಿಸಿದ ಸಿಖ್‌ರು ವೀರಾವೇಶದಿಂದ ಹೋರಾಡಿ ಸಾವನ್ನಪ್ಪಿದರು. ಮೊಘಲ್ ಸೈನ್ಯ, ಅ ಯುದ್ಧದಲ್ಲಿ ಗುರು ಗೋವಿಂದ್ ಸಿಂಗ್‌ರ ಹತ್ಯೆಯಾಗಿದೆ ಎಂದು ಬಗೆದು, ಯುದ್ಧಭೂಮಿಯಿಂದ ಕಾಲ್ತೆಗೆಯಿತು. ಅನಂತರ ಗುರು ಗೋಬಿಂದ್ ಸಿಂಗ್ ಯುದ್ಧಭೂಮಿಗೆ ತೆರಳಿ, ಬದುಕಿ ಉಳಿದ, ಗಾಯಗೊಂಡ ಸೈನಿಕರನ್ನು, ಸಂತೈಸಿ, ಶುಶ್ರೂಷೆ ಮಾಡಿದರು. ವೀರಮಹಿಳೆಮಾಯಿ ಭಾಗೋ ಹೋರಾಡುತ್ತಾ ಗಾಯಗೊಂಡು ನೆಲಕ್ಕೆ ಬಿದ್ದ ದೃಶ್ಯ ಗುರುಗಳ ಕಣ್ಣಿಗೆ ಬಿದ್ದಾಗ, ಅವರು ಆಕೆಯನ್ನು ಎತ್ತಿಕೊಂಡು ಸಾಗಿಸಿ, ಆವಳಿಗೆ ಶುಶ್ರೂಶೆ ಮಾಡಿದರು. ಸಾವಿಗೀಡಾದ ಸಿಖ್‌ರ ಶವಸಂಸ್ಕಾರ ಮಾಡಿದರು.

ಗುರು, ಅಲ್ಲಿಂದ, ಪಾಟಿಯಾಲ ಪ್ರದೇಶದ ತಲ್‌ವಂಡೀ ಸಾಬೋ (ಈಗ ಅದನ್ನು ದಮ್‌ದಮಾ ಸಾಹಿಬ್ ಎಂದು ಕರೆಯಲಾಗಿದೆ) ಎಂಬ ಪ್ರದೇಶಕ್ಕೆ ತೆರಳಿ, ಅಲ್ಲಿ ಸ್ವಲ್ಪ ಕಾಲ ತಂಗಿದರು. ಅವರು 'ಆದಿಗ್ರಂಥ'ದ ಗೀತೆಗಳನ್ನು ತಮ್ಮ ಶಿಷ್ಯ ಭಾಯಿ ಮಣಿಸಿಂಗ್‌ಗೆ ಹೇಳಿ ಬರೆಸಿದರು. ಯಾಕೆಂದರೆ 'ಆದಿಗ್ರಂಥ'ದ ಮೂಲಪ್ರತಿ, ತಮ್ಮ ಸಹೋದರನ ಮಗ ಧೀರಮಲ್‌ನ ಬಳಿ ಇದ್ದುದರಿಂದ, ಅದರ ಉಪಯೋಗ ಜನರಿಗೆ ಆಗದೇ ಇದ್ದು, ಅದರ ಒಂದು ಪ್ರತಿಯ ಅವಶ್ಯಕತೆ ಉಂಟಾಗಿತ್ತು.

ದಮ್‌ದಮಾ ಸಾಹಿಬ್‌ನಲ್ಲಿದ್ದಾಗ, ಗುರು ಸುಮಾರು ಒಂದು ಲಕ್ಷಕ್ಕೂ ಮೀರಿ ಜನರನ್ನು ಸಿಖ್ ಧರ್ಮಕ್ಕೆ ಮತ ಪರಿವರ್ತನೆ ಮಾಡಿದರು. ದಮ್‌ದಮಾ ಸಾಹಿಬ್ ಸಿಖ್‌ರ ಪಾಲಿಗೆ 'ಕಾಶಿ'ಯ ಹಾಗೆ ಪವಿತ್ರ ನಗರವಾಗಿ ಪರಿವರ್ತನೆಗೊಂಡಿತು.

ಗುರು ತಮ್ಮ ಸ್ವಭಾವಕ್ಕನುಗುಣವಾಗಿ ತಿರುಗಾಟಕ್ಕೆ ಅಣಿಯಾದರು. ಕ್ಷೇಮದಿಂದ, ಶಾಂತಿಯಿಂದ ಒಂದೆಡೆ ಕುಳಿತುಕೊಳ್ಳುವ ಜಾಯಮಾನ ಅವರದಾಗಿರಲಿಲ್ಲ. ಅವರ ಶಿಷ್ಯಂದಿರ ಬಾಂಧವರ ಸಲಹೆಗಳನ್ನು ಲೆಕ್ಕಿಸದೆ, ಅವರು ರಾಜಸ್ಥಾನದ ಪ್ರವಾಸ ಕೈಗೊಂಡು, ಅಲ್ಲಿಂದ ದಕ್ಷಿಣದ ಮರಾಠ ಪ್ರದೇಶಕ್ಕೆ ಪ್ರವಾಸ ಕೈಗೊಳ್ಳುವ ನಿರ್ಧಾರ ತೆಗೆದುಕೊಂಡರು. ಅವರು ತಮ್ಮ ಈ ಪ್ರವಾಸದಲ್ಲಿ ದೆಹಲಿಯ ವಿರುದ್ಧ ಹೋರಾಡುತ್ತಿದ್ದ

ರಾಜಪುತ್ರ ಮತ್ತು ಮರಾಠರನ್ನು ಒಂದುಗೂಡಿಸಿ, ಅವರ ಕೈಗಳನ್ನು ಬಲಪಡಿಸುವ ಉದ್ದೇಶವಾಗಿತ್ತು ಎಂದಿದ್ದಾರೆ ಕೆಲವು ಇತಿಹಾಸಕಾರರು. ೨೩

ಇತ್ತ ಮೊಘಲ್ ಬಾದ್‌ಶಹಾ ಔರಂಗಜೇಬ್‌ನ ಮರಣವಾಗಿ, ಸಿಂಹಾಸನಕ್ಕೆ ಅವರ ಪುತ್ರರಲ್ಲಿ ಕಚ್ಚಾಟ, ಕದನ ಪ್ರಾರಂಭವಾಗಿತ್ತು. ಬಾದ್‌ಶಹಾನ ಹಿರಿಮಗ ಬಹಾದೂರ್ ಶಹಾ ಅಫ್ಘಾನಿಸ್ತಾನದಲ್ಲಿ ಹೋರಾಟದಲ್ಲಿ ತೊಡಗಿದ್ದಾಗ, ಅವನ ಸಹೋದರ ಮೊಹಮದ್ ಅಜಮ್, ಅಕ್ರಮವಾಗಿ ಸಿಂಹಾಸನವೇರಿದ. ಸುದ್ದಿ ತಿಳಿದ ಬಹಾದೂರ್ ಶಹ ತನ್ನ ಹಕ್ಕಿನ ಸ್ಥಾನವನ್ನು ಪಡೆದುಕೊಳ್ಳಲು ತ್ವರೆಯಿಂದ ಹಿಂದಿರುಗಿದ. ಗುರು ಗೋಬಿಂದ್ ಸಿಂಗ್‌ನ ಬಲವನ್ನು ಅರಿತ ಆತ ಅವನ ಸಹಾಯವನ್ನು ಕೇಳಿದ. ಗುರುವಿನೊಂದಿಗೆ ಸಂಧಾನ ಅಪೇಕ್ಷಿಸಿದ. ಗುರುವಾದರೋ ಬಹಾದೂರ್‌ನನ್ನು ನಂಬಲು ಕಷ್ಟವಾದರೂ, ಅವನ ಇತ್ತೀಚಿಗಿನ ಮನೋಭಾವದ ಅರಿವಿನಿಂದ, ತನ್ನ ಸಹಾಯ ನೀಡಲು ನಿರ್ಧರಿಸಿದರು. ಗುರು, ತಮ್ಮ ನೆಚ್ಚಿನ ಶಿಷ್ಯ ಧರಮ್ ಸಿಂಗ್‌ನ ನೇತೃತ್ವದಲ್ಲಿ ೨೦೦ ಅಶ್ವಗಳ ಸೈನಿಕರನ್ನು ಬಹಾದೂರ್ ಶಹಾನ ಸಹಾಯಕ್ಕೆ ಕಳುಹಿಸಿದರು.

ಜೂನ್, ೧೭೦೭ರಲ್ಲಿ ಸಹೋದರರ ನಡುವೆ ಜರುಗಿದ ಸಮರದಲ್ಲಿ ಅಕ್ರಮವಾಗಿ ಸಿಂಹಾಸನವನ್ನು ಆಕ್ರಮಿಸಿದ್ದ ಮೊಹಮದ್ ಅಜಮ್‌ನ ಅಪಜಯವಾಗಿ, ಅವನ ಹತ್ಯೆಯಾಗಿ, ವಿಜಯಿ ಬಹಾದೂರ್ ಶಹಾ ದೆಹಲಿ ಸಿಂಹಾಸನವೇರಿದ.

'ಉದಾರಿ, ಕರುಣಾಮಯಿ, ಅತ್ಯಂತ ಹೃದಯವಂತ ರಾಜಕುಮಾರ'ನೆಂದು ಬಣ್ಣಿಸಲ್ಪಟ್ಟ ಈ ಬಾದ್‌ಶಹಾ ಪರಮತಸಹಿಷ್ಣು ಮತ್ತು ಸ್ನೇಹಮಯಿಯಾಗಿದ್ದ. ತನ್ನ ಹೃದಯವಂತಿಕೆ, ದಾನ ಧರ್ಮ ಮಾಡುವ ಉದಾರತೆಗಳಿಂದ ಅವನು ಜನರ ಮೆಚ್ಚುಗೆ ಗಳಿಸಿ, ಹೆಸರುವಾಸಿಯಾದ. ಜ್ಞಾನಿಗಳ ಒಡನಾಟ, ಸಂತ ಮಹಂತರ ಸಹವಾಸ, ಅವರೊಂದಿಗೆ ವಾದ, ವಿವಾದ, ಚರ್ಚೆ ಮಾಡುವ ಹವ್ಯಾಸಗಳಿಂದ ಸಾಕಷ್ಟು ಮೆಚ್ಚುಗೆ ಗಳಿಸಿದ. ಪಂಜಾಬ್‌ನ ಪ್ರಜೆಗಳು ಅವನನ್ನು ಅತ್ಯಂತ ಪ್ರೀತಿಯಿಂದ ಸಂತೋಷದಿಂದ ಗೌರವಿಸಿದರು. ಲಾಹೋರ್ ನಗರದ ಕೋಟೆಯ ಬಾಗಿಲಿಗೆ ಅವನ ಸ್ಮರಣಾರ್ಥ 'ಶಾಹಾ – ಆಲ್ಮೀ' ಎಂಬ ಹೆಸರನ್ನಿರಿಸಿ, ಅವನನ್ನು ಸ್ಮರಿಸಿದರು. ೨೪ ೧೭೦೭ರಲ್ಲಿ ಬಾದ್‌ಶಹಾ ಬಹದೂರ್ ಶಾಹ, ಗುರುವನ್ನು ರಾಜಧಾನಿಗೆ ಬರಲು ಆಹ್ವಾನಿಸಿದ. ಆದರೆ, ಗುರು ಅಲ್ಲಿಗೆ ತೆರಳಲು ತೀರ್ಮಾನಿಸಿದರೂ, ಅವನ ಹೆಂಡತಿ ಮತ್ತು ಇತರರು ಭಯಪಟ್ಟರು. ಗುರುವಿನ ತಂದೆ ತೇಘ್ ಬಹಾದೂರ್‌ನಿಗೆ ಆದ ಗತಿಯೇ ಮಗ ಗೋಬಿಂದ್‌ರಿಗೆ ಆಗಬಹುದೆಂಬ ಆತಂಕ ಅವರಿಗೆ ಕಾಡಿತ್ತು. ಆದರೆ ಕೆಚ್ಚೆದೆಯ, ಮರಣಕ್ಕಾಗಲೀ ಅಥವಾ ಯಾವುದೇ ಅವಘಡಕ್ಕೂ ಹೆದರದ ಗುರು ಗೋಬಿಂದ್ ಸಿಂಗ್ ದೆಹಲಿಯತ್ತ ಸಾಗಿದರು. ಆಗ್ರಾದಲ್ಲಿದ್ದ ಬಹದ್ದೂರ್ ಶಹಾನ ಭೇಟಿ ಮಾಡಿದ ಗುರುವನ್ನು ಬಾದ್‌ಶಹಾ ಚೆನ್ನಾಗಿ, ಗೌರವಯುತವಾಗಿ ಸನ್ಮಾನಿಸಿದ.

---

೨೩. P 314 History of Sikh People by G.Singh

೨೪. P 316 FN History of Sikh People by G.Singh

ಉದಾರಿ, ಹೃದಯವಂತ ಬಾದಶಹಾ ಗುರುವಿಗೆ ಒಂದು ವಜ್ರಖಚಿತ ಖಡ್ಗ ನೀಡಿದ್ದಲ್ಲದೆ ಒಂದು ಶಾಲು ಹೊದಿಸಿ ಗೌರವಿಸಿದ. ೨೫, ೨೬, ೨೭, ೨೮

ಬಾದ್‌ಶಹಾನ ಆಸ್ಥಾನದಲ್ಲಿ ಗೌರವಿಸಲ್ಪಟ್ಟ ಗುರು ಇತರ ಆಸ್ಥಾನಿಕರ ಈರ್ಷೆಗೆ ಗುರಿಯಾಗಬೇಕಾಯಿತು. ಆದರೆ ಅದಕ್ಕೆ ಬೆಲೆ ಕೊಡದ ಬಹದ್ದೂರ್ ಶಹಾ ಗುರುವನ್ನು ಗೌರವದಿಂದ ಕಾಣುವುದನ್ನು ಬಿಡಲಿಲ್ಲ. ತನ್ನ ತಾಯಿ, ಮಕ್ಕಳ ಕೊಲೆಗೈದ ಸರ್‌ಹಿಂದ್‌ನ ಸುಬೇದಾರ್ ವಜೀರ್ ಖಾನ್‌ನಿಗೆ ಶಿಕ್ಷೆ ನೀಡಬೇಕೆಂಬ ಕೋರಿಕೆಯನ್ನು ಬಾದ್‌ಶಹಾ ನೆರವೇರಿಸಲಿಲ್ಲ. ಒಂದು ವರ್ಷದ ವರೆಗೆ ಕಾದು ನೋಡುತ್ತೇನೆಂದು ಹೇಳಿ ಯಾವ ಕ್ರಮವನ್ನು ತೆಗೆದುಕೊಳ್ಳದೆ, ಗುರುವನ್ನು ತನ್ನೊಂದಿಗೆ ರಾಜಸ್ಥಾನ ಮತ್ತು ಇತರ ಸ್ಥಳಕ್ಕೆ ತನ್ನ ಅಧಿಕಾರ ತೋರ್ಪಡಿಸಲು ಯಾತ್ರಿಸಲು ಆಹ್ವಾನ ನೀಡಿದ. ಗುರು ಅದನ್ನು ಸ್ವೀಕರಿಸಿದರು. ಜಯಪುರ, ಬರ್‌ಹಾಮ್‌ಪುರ ಇತ್ಯಾದಿ ನಗರಪ್ರದೇಶಗಳಲ್ಲಿ ಪ್ರವಾಸಗೈದ ಗುರು, ಅಲ್ಲಿನ ಸಿಖ್ಖರ ಆತಿಥ್ಯ ಸ್ವೀಕರಿಸಿದರು. ಅಲ್ಲಿಂದ ಗುರು ಬಾದ್‌ಶಹಾನೊಂದಿಗೆ ದಕ್ಷಿಣ ಪ್ರದೇಶದತ್ತ ಪಯಣಿಸಿದರು. ಅವರು ೧೭೦೮ರಲ್ಲಿ ನಾಂದೇಡ್ ಪಟ್ಟಣ ಸೇರಿದರು. ೨೯

ನಾಂದೇಡ್‌ನಲ್ಲೇ ಗುರುವಿಗೆ ಒಬ್ಬ ಬೈರಾಗಿಯ ಭೇಟಿಯಾಯಿತು. ಅವನ ಹೆಸರು ಮಾಧೋ ದಾಸ್ ಎಂದಾಗಿತ್ತು. ಆ ಬೈರಾಗಿ ಚಮತ್ಕಾರ ಮಾಡುವ ಕಲೆ ಕಲಿತುಪ್ರಸಿದ್ಧ ಪಡೆದಿದ್ದ. ಅವನು ಪಡೆದಿದ್ದ ಒಂದು ಚಮತ್ಕಾರದ ಸಿದ್ಧಿಯಲ್ಲಿ, ಯಾವ ವ್ಯಕ್ತಿ, ತನ್ನ

---

೨೫. P 90 The Later Mughals by Irvine

೨೬. P 93 The Later Mughals by Irvine

೨೭. ಗುರು ಗೋವಿಂದ್ ಸಿಂಗ್ ವಿವಿಧ ಕಾರಣಗಳಿಂದ, ತನ್ನ ಸ್ವಂತ ನಾಡಾದ ಪಂಜಾಬ್‌ನಿಂದ ದೂಡಲ್ಪಟ್ಟು, ಊರಿಂದ ಊರಿಗೆ ಅಲೆದು, ನಿರಾಶ್ರಿತನಾಗಿ, ಮೊಘಲ್‌ರ ಕಣ್ಣು ತಪ್ಪಿಸಿ ಓಡಾಡಿ ಅಂತಿಮವಾಗಿ, ನಾಂದೇಡ್ ನಗರಕ್ಕೆ ಬಂದು ತಲುಪಿದರು. ಅವರು ಬೇರಿಲ್ಲದ ಗಿಡದ ತರಹ ಸ್ಥಾನಪಲ್ಲಟನಾಗಿದ್ದರೂ, ತಮ್ಮ ಪಂಜಾಬ್‌ನ ಮೇಲಿನ ಪ್ರೇಮ, ಅದನ್ನು ಪರಕೀಯರಿಂದ ಮುಕ್ತಗೊಳಿಸಬೇಕೆಂಬ ಹೆಬ್ಬಯಕೆ ಮತ್ತು ಎಲ್ಲಕ್ಕಿಂತಲೂ ಮಿಗಿಲಾಗಿ, ತಮ್ಮ ಕ್ಷಾತ್ರ ಸ್ವಭಾವಕ್ಕೆ ಅನುಗುಣವಾಗಿ, ತಮ್ಮ ಎಳೇ ಮಕ್ಕಳು ಹುತಾತ್ಮರಾಗಿದ್ದು, ಅವರನ್ನು ಮೊಘಲ್‌ರ ವಿರುದ್ಧ ಪ್ರತೀಕಾರ ಎಸಗಲು ನಿರ್ಧಾರ ಮಾಡಿತು. ನಿರಾಶ್ರತೆ ಅವರನ್ನು ಕಾಡಿದರೂ, ಕೆಂಗೆಡಿಸಿರಲಿಲ್ಲ. ಅವರನ್ನು ಅದು ಹೊಡೆದೆಬ್ಬಿಸಿ, ಕ್ರಾಂತಿಕಾರಿಯನ್ನಾಗಿ ಮಾಡಿಸಿತ್ತು.

೨೮. P 46 The Need for Roots by Simone weil

'Uprootedness is by far the most dangerous malady to which human societies are exposed, for it is a self-propagating one. For people who are really uprooted there remain only two possible sorts of behaviour : either to fall into a spiritual lathargy resembling death, like the majority of the slaves in the days of the Roman Empire, or to hurt themselves into some form of activity necessarily designed to uproof, offen by the most violent methods, those who are not yet uprooted. or only partly so. . . .'

೨೯. P 319 History of Sikh People by G.Singh

ಮಂಚದ ಮೇಲೆ ಕುಳಿತ ಪಕ್ಷದಲ್ಲಿ, ಅವನನ್ನು ಕೇವಲ ತನ್ನ ಮಂತ್ರದಿಂದ ಮೇಲಕ್ಕೆ ಎಳೆದು, ಬಿಸಾಡಬಲ್ಲವನಾಗಿದ್ದ. ಇಂತಹ ಪವಾಡಪುರುಷನ ಗುಡಿಸಲಿಗೆ ತೆರಳಿದ ಗುರು, ಆತನಿಲ್ಲದಿರುವಾಗ, ಅವನ ಪಲ್ಲಂಗದಲ್ಲಿ ಕುಳಿತರು. ಸ್ವಲ್ಪ ಸಮಯದಲ್ಲೇ ಅಲ್ಲಿಗೆ ಆಗಮಿಸಿದ ಪವಾಡ ಪುರುಷ ಮಾಧೋದಾಸ್, ಗುರು ತನ್ನ ಪಲ್ಲಂಗದಲ್ಲಿ ಕುಳಿತ ದೃಶ್ಯವನ್ನು ನೋಡಿ ಚಕಿತಗೊಂಡ. ಗುರುವಿಗೆ ಯಾವ ಕೇಡು, ಅನಾಹುತಗಳಾಗದೆ, ತಾನು ಇಷ್ಟಪಟ್ಟರೂ, ಅವನಿಗೆ ಯಾವ ಹಾನಿಯಾಗದೇ ಕ್ಷೇಮದಿಂದರುವುದನ್ನು ಕಂಡು ಮತ್ತಷ್ಟು ಆಶ್ಚರ್ಯಗೊಂಡ. ಗುರು ಇದಕ್ಕೂ ಮುನ್ನ ಅವನ ಗುಡಿಸಲಿನಲ್ಲಿ ಕಟ್ಟಿದ್ದ ಮೇಕೆಯನ್ನು ಕಡಿದು, ಅದರ ಮಾಂಸವನ್ನು ಹುರಿದು ತಿಂದ ಸಂಗತಿ ಅರಿತ ಅವನು ಕ್ರೋಧಗೊಂಡ. ಕಾರಣ ಕೇಳಿದ. ಗುರು ತಾನು ಬಳಲಿ, ಹಸಿವಿನಿಂದ ಸೊರಗಿದ್ದರಿಂದ, ಮೇಕೆಯನ್ನು ಕೊಂದು ಅದರ ಮಾಂಸವನ್ನು ಭಕ್ಷಿಸಿದ್ದಾಗಿ ಹೇಳಿದರು. ಗುರುವಿನ ಮಾತುಗಳಿಗೆ, ಅವರ ಮುಖಭಾವದ ಅಪೂರ್ವ ತೇಜಸ್ಸಿಗೆ ಮರುಳಾದ ಮಾಧೋದಾಸ್, ಅವರು ಯಾರೆಂದು ಕೇಳಿದಾಗ, ಗುರು ತಮ್ಮ ಪರಿಚಯವನ್ನು ಹೇಳಿದರು. ಸ್ವತಃ ಗುರು ಗೋಬಿಂದ್ ಸಿಂಗ್‌ರೇ ತನ್ನ ಬಳಿ ಬಂದಿದ್ದನ್ನು ಅರಿತ ಮಾಧೋದಾಸ್‌ನಿಗೆ ದಿಗ್‌ಭ್ರಮೆಯಾಯಿತು. ಆತ, ತಕ್ಷಣ, ಗುರುವಿನ ಕಾಲಿಗೆ ಎರಗಿದ.

'ಓ ಗುರುವೇ ! ನಾನು ತಮ್ಮ ಗುಲಾಮ (ಬಂದಾ), ತಮ್ಮ ಆಗಮನದಿಂದ ನಾನು ಪಾವನಗೊಂಡೆ. ತಮ್ಮ ಅಪ್ಪಣೆಯನ್ನು ನಾನು ಶಿರಸಾ ವಹಿಸಿ ಪಾಲಿಸುವೆನು. ನಮ್ಮ ಜನಾಂಗದ ಉದ್ಧಾರಕರು ತಾವು !'

ಗುರು, ಮಾಧೋದಾಸ್‌ನ ಮಾತುಗಳನ್ನು ಕೇಳಿ ಆನಂದಪರವಶರಾದರು. ಅವನ ಭಕ್ತಿಭಾವಕ್ಕೆ ಮರುಳಾದರು. ಅವರು ಮಾಧೋದಾಸ್‌ನ ಪೂರ್ವಾಚಾರಗಳ ಬಗ್ಗೆ ಕೇಳಿ ಅರಿತರು.

ಮಾಧೋದಾಸ್ ಕಾಶ್ಮೀರದ ರಜೌರೀ ಪ್ರದೇಶದ ಪೂಂಚ್ ಎಂಬ ಹಳ್ಳಿಯಲ್ಲಿ ೧೬೭೦ರಲ್ಲಿ ಜನಿಸಿದ. ರೈತಕುಟುಂಬದಲ್ಲಿ ಜನಿಸಿದ ಆತ, ಶಿಖಾರಿ ಮಾಡುವುದನ್ನು ಕಲಿತ. ಒಮ್ಮೆ ಶಿಖಾರಿ ಮಾಡುವಾಗ ಒಂದು ಗರ್ಭವತಿ ಜಿಂಕೆಯನ್ನು ಕೊಂದಾಗ ಅದರ ಹೊಟ್ಟೆಯಲ್ಲಿದ್ದ ಎಳೆ ಮರಿಯನ್ನು ಕಂಡು ಆಘಾತವಾಗಿ, ಮನ ಮರುಗಿ, ತನ್ನ ಅಚಾತುರ್ಯ ಕಾರ್ಯಕ್ಕೆ ಪೇಚಾಡಿದ. ಮನಸ್ಸು ಕ್ಲೇಷ, ಗೊಂದಲಗಳ ಗೂಡಾಗಿ, ಪ್ರಪಂಚದ ಸುಖವನ್ನು ತೊರೆಯಲು ಮನಸ್ಸು ಮಾಡಿ ಬೈರಾಗಿಯಾದ. ಊರೂರು ಅಲೆದು, ನಾಂದೇಡ್‌ಗೆ ತಲುಪಿ, ಯೋಗ, ಅಲ್ಪಸ್ವಲ್ಪ ಚಮತ್ಕಾರ ಕಲಿತು ಜೀವನ ಸಾಗಿಸಿದ. ೩೦

ಅವನ ಕತೆ ಕೇಳಿದ ಗುರು ಗೋಬಿಂದ್ ಸಿಂಗ್, ಮಾಧೋದಾಸ್‌ಗೆ, ದಬ್ಬಾಳಿಕೆಗೆ ತುತ್ತಾಗಿರುವ ಮನುಷ್ಯರು, ಅದರ ವಿರುದ್ಧ ಸೂಕ್ಷ್ಮಸಂವೇದನಾವಂತರು

---

೩೦ The Later Mughals by Irvine

ಹೋರಾಡಬೇಕಾಗಿರುವುದು ಅವರ ಕರ್ತವ್ಯ ಎಂದು ಬೋಧಿಸಿದರು. ಆ ಹೋರಾಟದಲ್ಲಿ ತಮ್ಮ ಪ್ರಾಣತ್ಯಾಗಕ್ಕೂ ತಯಾರಾಗಿರಬೇಕು ಎಂದರು. ಗುರುವಿನ ಬೋಧನೆ ಆಲೈಸಿದ ಮಾಧೋದಾಸ್, ತಾನು ಅಂದಿನಿಂದ ಅವರ ಗುಲಾಮನಾಗಿದ್ದೇನೆಂದು ಸಾರಿದ. ಅಂದಿನಿಂದ ಆತ ಮಾಧೋ ದಾಸ್‌ನಾಗದೆ ಮಾಧೋ ಗುಲಾಮ್‌ನಾದ. 'ಬಂದಾ' ಅಂದರೆ 'ಗುಲಾಮ್' ನಾದ ಅವನನ್ನು ಜನರು 'ಬಿಂದಾ ಸಿಂಗ್ ಬಹದೂರ್' ಎಂದು ಕರೆದರು. ಅವನು ಮುಂದೆ ಇತಿಹಾಸ ಪ್ರಸಿದ್ಧ 'ಬಂದಾ ಬಹುದೂರ್' ಎಂದು ಬಾಳಿ ಹುತಾತ್ಮನಾದ.

ಗುರು, ಬಂದಾನಿಗೆ ಅಮೃತಪಾನ ಮಾಡಿಸಿ ಅವನಿಗೆ ಒಂದು ಖಡ್ಗ ಮತ್ತು ತಮ್ಮ ಬತ್ತಳಿಕೆಯಿಂದ ಐದು ಬಾಣಗಳನ್ನು ನೀಡಿ ಎಂದೆಂದಿಗೂ ಪರಿಶುದ್ಧನಾಗಿರುವಂತೆ, ಯುದ್ಧಭೂಮಿಯಿಂದ ಹಿಂದೆಗೆಯದೆ, ಜಯ ಗಳಿಸಿದಾಗ, ನಮ್ರನಾಗಿ, ತನ್ನದೇ ಸ್ವತಂತ್ರ ಪಂಥ ಕಟ್ಟದೆ, ತನ್ನ ಸಂಗಡಿಗರನ್ನು ಸಾಮ್ಯತೆಯಿಂದ ಕಂಡು, ತನ್ನನ್ನು ಶ್ರೇಷ್ಠ ಯಜಮಾನನೆಂದು ಕರೆಸಿಕೊಳ್ಳದೆ, ಅವರ ಸಲಹೆಗಳನ್ನು ಸ್ವೀಕರಿಸುವಂತೆ ಉಪದೇಶ ನೀಡಿದರು. ೩೦ ಎ

ಅನಂತರ, ಗುರು ಮಾಧೋದಾಸ್‌ನಿಗೆ ಕೆಲವು ನಿಷ್ಠಾವಂತ ಸಿಖ್‌ರೊಂದಿಗೆ ಪಂಜಾಬ್‌ಗೆ ತೆರಳಿ, ಅಂಬಾಲಾ ನಗರದ ಬಳಿ ಇರುವ ಬುರಿಯಾ ಎಂಬ ಸ್ಥಳದಲ್ಲಿ, ತಾವು ಕಳುಹಿಸುವ ಯುದ್ಧ ಸಾಮಗ್ರಿ ಮತ್ತು ಸೈನಿಕಡಿಟಜಿಟಿಣ ಕಾದು ಕುಳಿತುಕೊಳ್ಳುವಂತೆ ಆದೇಶವಿತ್ತರು. ಅನಂತರ, ಮಾಧೋ ದಾಸ್, ತಮ್ಮ ನೆಚ್ಚಿನ ಮುಸ್ಲಿಮ್ ಶಿಷ್ಯ ಬುದ್ದೂ ಶಾಹನ ಕೊಲೆಯಾದ ಸ್ಥಳವಾದ ಸಧೌರಾಗೆ ತೆರಳಿ, ಅದನ್ನು ವಶಪಡಿಸಿಕೊಳ್ಳಬೇಕೆಂದು ಸೂಚನೆ ನೀಡಿದರು. ಬುದ್ದೂ ಶಾಹಾ ಗುರುವಿಗೆ ನೆರವು ನೀಡಿದ್ದರ ಪ್ರಯುಕ್ತ, ಅವನ ಮಾತಾವಲಂಬಿಗಳೇ ಅವನನ್ನು ಕೊಲೆ ಮಾಡಿದ್ದರಿಂದ, ಅವರ ಮೇಲೆ ದಂಡೆತ್ತಿ ಹೋಗಿ ಅವರನ್ನು ನಾಶಮಾಡಿ, ಆ ಪ್ರದೇಶವನ್ನು ವಶಪಡಿಸಿಕೊಳ್ಳಬೇಕೆಂಬುದು ಗುರುಗಳ ಉದ್ದೇಶವಾಗಿತ್ತು. ತದನಂತರ, ಮಾಧೋ ದಾಸ್, ತನ್ನ ತಾಯಿ ಮತ್ತು ಮಕ್ಕಳ ಹತ್ಯೆಗೈದ ಸರ್‌ಹಿಂದ್ ನಗರದ ಸುಬೇದಾರ್ ವಜೀರ್ ಖಾನ್‌ನ ಮೇಲೆ ಆಕ್ರಮಣ ಎಸಗಿ, ಅವನ ಹತ್ಯೆ ಮಾಡುವುದಲ್ಲದೆ, ಆ ನಗರದ ನಾಶವನ್ನು ಮಾಡಬೇಕೆಂದು ಗುರು ಸೂಚಿಸಿದರು. ಯಾವಾಗ ಬಾದ್‌ಶಹಾ ಬಹದ್ದೂರ್ ಶಾಹ, ವಜೀರ್ ಖಾನ್‌ನ ಮೇಲೆ ಕ್ರಮ ಜರುಗಿಸಲು ಹಿಂದೆಗೆದನೋ, ಗುರು ಸ್ವತಃ ಅವನ ಮೇಲೆ ಕ್ರಮ ಜರುಗಿಸಲು ನಿರ್ಧರಿಸಿದ್ದರು. ಇವೆಲ್ಲದರ ಜೊತೆ, ಮಾಧೋ ದಾಸ್ ವಿನಾಕಾರಣ ಶತ್ರುತ್ವ ಹೊಂದಿ ಗುರುವಿನ ವಿರುದ್ಧ ಕಲಹ, ಕದನ, ವೈರತ್ವ ಜರುಗಿಸಿದ ಗುಡ್ಡಗಾಡಿನ ರಾಜರ ವಿರುದ್ಧ ಯುದ್ಧ ಜರುಗಿಸಬೇಕೆಂದು ಸೂಚನೆ ನೀಡಿದರು.

೩೦ಎ. P 321 History of Sikh People by G.Singh

ಮಾಧೋದಾಸ್ ಅಥವಾ ಬಂದಾಸಿಂಗ್, ಗುರುವಿನ ಆದೇಶ ಹೊತ್ತು ಪಂಜಾಬ್‌ಗೆ ತೆರಳಿದ. ಅವನೊಂದಿಗೆ ಗುರು ತನ್ನ ಪತ್ನಿ ಸಾಹಿಬ್ ಕೌರಳನ್ನು, ಈಗಾಗಲೇ ಬೀಡುಬಿಟ್ಟಿದ್ದ ಅವರ ಇನ್ನೊಬ್ಬ ಪತ್ನಿ ಮಾತಾ ಸುಂದರಿಯ ಬಳಿ ಬಿಡಲು ಕಳುಹಿಸಿದ. ಇಬ್ಬರು ಪತ್ನಿಯರು ದೆಹಲಿಯಲ್ಲಿ ಪ್ರತ್ಯೇಕ ಬಿಡಾರಗಳಲ್ಲಿ ವಾಸಿಸುತ್ತಿದ್ದರು.

ಗುರು, ನಾಂದೇಡ್‌ನಲ್ಲಿ ಹರಿಯುತ್ತಿದ್ದ ಗೋದಾವರಿ ನದಿಯ ದಡದಲ್ಲಿ ಧ್ಯಾನಿಸುವ, ಎಲ್ಲೆಡೆಯಿಂದ ಗುರುವಿನ ದರ್ಶನಕ್ಕೆ ಬರುವ ಸಿಖ್‌ರನ್ನು ಆಶೀರ್ವದಿಸುವ ಮತ್ತು ಅವರಿಂದ ಕಾಣಿಕೆಗಳನ್ನು ಸ್ವೀಕರಿಸುವ ಕಾರ್ಯ ಮಾಡಲು ಪ್ರಾರಂಭಿಸಿದರು.

ಇದೇ ಸಮಯದಲ್ಲಿ, ತಮ್ಮ ಆಶ್ರಮದಲ್ಲಿ ರಾತ್ರಿ ವಿಶ್ರಮಿಸಿಕೊಳ್ಳುವಾಗ, ಗುಲ್ ಖಾನ್ ಎಂಬ ಹೆಸರಿನ ಒಬ್ಬ ಯುವ ಪಠಾಣ್ ಗುರುವಿನ ಮುಂದೆ ಬಂದು ನಿಂತ. ಈ ಹಿಂದೆ ಆತ ತಾನು ಗುರುವಿನ ಶಿಷ್ಯನೆಂದು ಹೇಳಿಕೊಂಡು, ಗುರುವಿನ ದರ್ಶನ ಮಾಡುವ ಅಭ್ಯಾಸವಿರಿಸಿಕೊಂಡಿದ್ದರಿಂದ, ಯಾರೂ ಅವನನ್ನು ತಡೆಯಲಿಲ್ಲ. ಗುರುವಿಗೆ ನಮಸ್ಕರಿಸಿ, ಅವರಿಂದ ಸ್ವೀಕರಿಸಿದ ಪ್ರಸಾದವನ್ನು ತಿಂದವ, ಮಲಗಿದ್ದ ಗುರುವಿನ ಹೊಟ್ಟೆಗೆ ಚಾಕುವಿನಿಂದ ಇರಿದು ಹಾಕಿದ. ಆಗ, ಗುರು ಹಾಸಿಗೆಯಿಂದ ಎದ್ದು, ಪಕ್ಕದಲ್ಲಿರಿಸಿದ್ದ ತಮ್ಮ ಖಡ್ಗವನ್ನು ಎಳೆದುಕೊಂಡು, ಓಡುತ್ತಿದ್ದ ಪಠಾಣನನ್ನು ಹಿಂಬಾಲಿಸಿ, ಅವನ ಕತ್ತನ್ನು ತುಂಡರಿಸಿದರು.

ಗುರುಗಳಿಗೆ ಆದ ಗಾಯವನ್ನು ಹೊಲಿದು ಮುಚ್ಚಿದರು. ಅದು ವಾಸಿಯಾಗದೆ, ನಾಲ್ಕು ದಿನಗಳ ನಂತರ ಪ್ರಾಣತ್ಯಾಗ ಮಾಡಿದರು. ಗುರು ಮರಣಿಸುವ ಮುನ್ನ, ತಮಗೆ ಸಾವು ಸನ್ನಿಹಿತವಾಗಿದೆ ಎಂಬ ಅರಿವು ಆದ ತಕ್ಷಣ, ಕಷ್ಟಪಟ್ಟು ಎದ್ದು ದೇವರಿಗೆ ಪ್ರಾರ್ಥಿಸಿ, 'ಆದಿಗ್ರಂಥ'ದ ಸುತ್ತ ನಾಲ್ಕು ಬಾರಿ ಪ್ರದಕ್ಷಿಣೆ ಹಾಕಿ, ಐದು ಕಾಸು ಮತ್ತು ಒಂದು ತೆಂಗಿನಕಾಯಿಗಳನ್ನು ಅದರ ಮುಂದೆ ಇರಿಸಿ, ತಮ್ಮ ನಂತರ 'ಆದಿಗ್ರಂಥ' ವೇ 'ಸತ್ಯವಾದ ಗುರು' ಎಂದು ಸಾರಿ, ತಮ್ಮ ಶಸ್ತ್ರಾಸ್ತ್ರಗಳನ್ನು ಧರಿಸಿ, 'ವಾಹೇ ಗುರುಜೀ ಕಾ ಖಾಲ್ಸಾ, ವಾಹೇ ಗುರೂಜೀ ಕಿ ಫತ್ಹೇ' ಎಂದು ಅಂತಿಮ ಪ್ರಾರ್ಥನೆ ಸಲ್ಲಿಸಿ ಕೊನೆಯುಸಿರು ಎಳೆದರು ಎನ್ನಲಾಗಿದೆ. ३೧

ಗುರುವಿನ ಸಾವಿಗೆ ಕಾರಣನಾದ ಪಠಾಣ, ಸರ್‌ಹಿಂದ್ ಸುಬೇದಾರ್ ವಾಜೀರ್ ಖಾನ್‌ನ ಬಂಟನಾಗಿದ್ದು, ಅವನ ಆದೇಶದ ಮೇರೆಗೆ ಆತ ಗುರುವನ್ನು ಹತ್ಯೆ ಮಾಡಿದ ಎನ್ನಲಾಗಿದೆ. ಯಾಕೆಂದರೆ, ಗುರು ತನ್ನ ಮೇಲೆ ಪ್ರತೀಕಾರ ತೆಗೆದುಕೊಳ್ಳುವನೆಂಬ ಭಯ ಅವನನ್ನು ಆವರಿಸಿತ್ತು. ಆದ್ದರಿಂದ, ಗುರುವಿನ ಹತ್ಯೆ ಜರುಗಿಸಿ, ಅವನಿಂದ ಬಿಡುಗಡೆ ಹೊಂದಬಹುದೆಂಬ ಆಸೆ ಇರಿಸಿದ್ದ. ३೨, ३३

---

३೧. P 325 History of Sikh People by G.Singh
३೨. P 325 History of Sikh People by G.Singh
३३. P 91 The Later Mughals by Irvine

ಗುರು ತನ್ನ ದೇಹವನ್ನು ಸುಟ್ಟಾದ ಮೇಲೆ ಯಾವ ಸ್ಮಾರಕವನ್ನೂ ನಿರ್ಮಿಸಬಾರದೆಂಬ ಆದೇಶ ನೀಡಿದ್ದರೂ, ಸಿಖ್ಖರು ಮಾತ್ರ ಅವರ ನೆನಪಿನಲ್ಲಿ ನಾಂದೇಡ್ ನಗರದಲ್ಲಿ ಒಂದು ಸುಂದರ ಗುರುದ್ವಾರ ನಿರ್ಮಿಸಿರುತ್ತಾರೆ.

ಗುರು ಗೋಬಿಂದ್ ಸಿಂಗ್‌ರ ಗುಣವರ್ಣನೆ

ಕೇವಲ ೪೨ ವರ್ಷಗಳ ಕಾಲ ಬಾಳಿ ಬದುಕಿ, ಅಸು ನೀಗಿದ (೧೭೦೮) ಗುರು ಗೋಬಿಂದ್ ಸಿಂಗ್, ತಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಜೀವನ ಕ್ರಮಗಳಿಂದ, ಪ್ರಸಿದ್ಧಿ ಪಡೆದರು. ಅವರು ಭಾರತೀಯರ ಸ್ವಾತಂತ್ರ್ಯ ಹಕ್ಕುಗಳಿಗಾಗಿ, ಅವರ ಘನತೆ ಗೌರವಗಳಿಗಾಗಿ, ಅವರ ವೈಯಕ್ತಿಕ ಧರ್ಮ ಪಾಲನೆ ಮತ್ತು ಜೀವನಕ್ರಮಗಳಿಗಾಗಿ, ಹೋರಾಡಿ ಪ್ರಾಣತ್ಯಾಗ ಮಾಡಿದ ವೀರ ಪುರುಷ ಎಂದು ಇತಿಹಾಸಕಾರರು ಬಣ್ಣಿಸಿದ್ದಾರೆ. ಪ್ರಬಲ ಮೊಘಲ್ ಸಾಮ್ರಾಜ್ಯದ ಬುಡವನ್ನೇ ಅಲುಗಾಡಿಸಿ, ಬಾದಶಹಾ ಔರಂಗ್‌ಜೇಬ್‌ನನ್ನು ವಿರೋಧಿಸಿ, ಅವನ ವಿರುದ್ಧ ಏಕಾಕಿಯಾಗಿ ಹೋರಾಡಿದ ವೀರ ಎಂದು ಬಣ್ಣಿಸಿದ್ದಾರೆ. ೩೪

ಗುರು ಗೋಬಿಂದ್ ಸಿಂಗ್, ಗುಲಾಮಗಿರಿಯ ಹಿಂಸಾಚಾರದಿಂದ ತತ್ತರಿಸುತ್ತಿದ್ದ, ಆಳುವವರ ದಬ್ಬಾಳಿಕೆಯ ಆಳ್ವಿಕೆಯಿಂದ ಅಪಾರವಾಗಿ ನಶಿಸಿ, ಹೇಡಿಗಳಾಗಿ ಜೀವನ ಸಾಗಿಸುತ್ತಿದ್ದ ಹಿಂದೂ ಜನಸಾಮಾನ್ಯರನ್ನು ಅಚ್ಚರಿ ಮೂಡಿಸುವ ತರಹ ವೀರ, ಶೌರ್ಯ, ತೇಜಸ್ಸುಳ್ಳ ಸ್ವಾಭಿಮಾನಿ ಶೂರರನ್ನಾಗಿ ಪರಿವರ್ತಿಸುವ ಕಾರ್ಯದಲ್ಲಿ ಯಶಸ್ಸು ಪಡೆದರು. ನೀರಸ ಜಡ ಮನಸ್ಸಿನ ಹೇಡಿ ಪುರುಷ ಸ್ತ್ರೀಯರನ್ನು ಉಕ್ಕಿನ ಮನಸ್ಸು ದೇಹವುಳ್ಳ ಸಿಂಹಪುರುಷರನ್ನಾಗಿ ಮಾಡಿದರು. ಅವರು ಮರಣಿಸಿದ ಮೂರೇ ವರ್ಷಗಳಲ್ಲಿ ಬಂದಾಸಿಂಗ್‌ನ ನೇತೃತ್ವದಲ್ಲಿ ಪಂಜಾಬ್‌ನ ಬಹುತೇಕ ಪ್ರದೇಶಗಳ ಪ್ರಭುಗಳಾಗಿ ಸಿಖ್ಖರು ಮೆರೆದರು. ಮೂವತ್ತು ವರ್ಷಗಳ ಬಳಿಕ, ಇಡೀ ಪಂಜಾಬ್‌ನ್ನು ಆಕ್ರಮಿಸಿ, ದೆಹಲಿಯ ಬಾಗಿಲು ಬಡಿಯತೊಡಗಿದ್ದರು. ಅಂತಿಮವಾಗಿ, ಸಿಖ್ಖರು ಪಂಜಾಬ್‌ನ ಹೊರಗೆ, ಕಾಶ್ಮೀರ, ಲಾಡಕ್ ಮತ್ತು ಪಠಾಣರ ವಾಸಸ್ಥಾನ ಮತ್ತು ಖೈಬರ್ ಪಾಸ್‌ನ ವರೆಗೆ ತಮ್ಮ ರಾಜ್ಯ ವಿಸ್ತರಿಸಿದರು.

ಭಾರತದ ಒಂದು ಸಾವಿರದ ಇತಿಹಾಸದಲ್ಲಿ ಮೊತ್ತಮೊದಲನೆಯ ಬಾರಿಗೆ ಖೈಬರ್‌ಪಾಸ್‌ನಿಂದ ನಿರಂತರ ದಾಳಿಗೆ ತುತ್ತಾಗಿದ್ದ ಭಾರತ ಅದೇ ಕಣಿವೆ ಪ್ರದೇಶಕ್ಕೆ ಲಗ್ಗೆ ಆಕ್ರಮಣ, ದಾಳಿ ಇಟ್ಟ ಸಿಖ್ ಸೈನ್ಯ ಇತಿಹಾಸ ಸೃಷ್ಟಿಸಿತು. ೩೫

ಗುರು ಗೋಬಿಂದ್ ಸಿಂಗ್‌ರ ಬಗ್ಗೆ, ಅವರ ನಡೆನುಡಿಗಳ ಬಗ್ಗೆ, ಗುರಿಗಳ ಬಗ್ಗೆ, ತತ್ತ್ವವಿಚಾರಗಳಿಗೆ, ಎಸಗಿದ ಅಸಾಮಾನ್ಯ ಕಾರ್ಯಗಳ ಬಗ್ಗೆ, ಇತಿಹಾಸಕಾರರು

---

೩೪. P 326 History of Sikh People by G.Singh
೩೫. P 326 History of Sikh People by G.Singh

ಹಲವಾರು ಕತೆಗಳನ್ನು, ನಿದರ್ಶನಗಳನ್ನು, ವಿಚಾರಗಳನ್ನು ಸಾದರಪಡಿಸಿರುತ್ತಾರೆ. ಅವುಗಳಲ್ಲಿ ಕೆಲವು ಮಹತ್ವವಾದ ಕತೆಗಳನ್ನು ಇಲ್ಲಿ ನಮೂದಿಸಲಾಗಿದೆ.

ಒಮ್ಮೆ ಗುರುವಿಗೆ ಬಾಯಾರಿಕೆಯಾದಾಗ, ನೀರು ತರಲು ತನ್ನ ಶಿಷ್ಯನಿಗೆ ಹೇಳಿದಾಗ, ಅವರ ಬಳಿಗೆ ಒಬ್ಬ ಎಳೇ ವಯಸ್ಸಿನ ಹುಡುಗ ನೀರಿನ ಲೋಟ ಹಿಡಿದು ಬಂದು, ಅದನ್ನು ಗುರುವಿಗೆ ನೀಡಿದ. ಆ ಯುವಕನ ಕೈಗಳನ್ನು ಹತ್ತಿರದಿಂದ ನೋಡಿದ ಗುರುವಿಗೆ ಆಶ್ಚರ್ಯವಾಯಿತು. ಯಾಕೆಂದರೆ, ಆ ಕೈಗಳು ಹೆಣ್ಣಿನ ಕೈಗಳಂತೆ ನುಣುಪು ನಾಜೂಕಿನದವದಾಗಿತ್ತು. 'ನಿನ್ನ ಕೈಗಳು ಎಷ್ಟು ಮೃದುವಾಗಿದೆ ! ನೀನು ಅದನ್ನು ಉಪಯೋಗಿಸದೆ ಇದ್ದ ಹಾಗೆ ಇದೆಯಲ್ಲಾ' !' ಎಂದು ಆಚ್ಚರಿಯಿಂದ ಗುರು ಕೇಳಿದಾಗ, ಆ ಹುಡುಗ 'ಹೌದು' ಎಂದು ಉತ್ತರಿಸಿದ. ಆತ ಒಬ್ಬ ಐಶ್ವರ್ಯವಂತನ ಮಗನಾಗಿದ್ದು, ಮಗನನ್ನು ಕೋಮಲತೆಯಿಂದ ಬೆಳೆಸಿದ್ದ.

ಗುರು ತಮ್ಮ ಕೈಯಲ್ಲಿನ ನೀರಿನ ಬಟ್ಟಲನ್ನು ಬಿಸಾಡಿ ಹೇಳಿದರು. 'ಯಾವ ಕೈಗಳು ಇತರರ ಸೇವೆ ಮಾಡಿಲ್ಲವೋ ಅಂತಹ ಕೈಗಳಿಂದ ನಾನು ಏನನ್ನೂ ಪಡೆಯಲಾರೆ.'

ಸಿಖ್ಖರು, ತಮ್ಮ ಗುರುವಿಗೆ, ವಾರ್ಷಿಕ ಕಾಣಿಕೆ ಒಪ್ಪಿಸುವುದು ರೂಢಿಯಲ್ಲಿತ್ತು. ಅದನ್ನು ಪ್ರತಿಯೊಬ್ಬ ಸಿಖ್ಖನೂ ಅತಿ ಮುತವರ್ಜಿಯಿಂದ, ಭಕ್ತಿಭಾವದಿಂದ ಪೂರೈಸುತ್ತಿದ್ದರು. ಒಮ್ಮೆ ಒಬ್ಬ ಸಿಖ್, ಶಾಂತಿ ನೆಮ್ಮದಿಗಳನ್ನು ಅಪೇಕ್ಷಿಸಿ ಗುರುವಿನ ಬಳಿ ಬಂದ. ಆತ ಹಣ ಮಾಡಿದರೂ, ವಿದ್ಯಾವಂತನಾಗಿರಲಿಲ್ಲ. ಅನಕ್ಷರಸ್ಥನಾದ ಆತನನ್ನು ಗುರು ಒಬ್ಬ ಮಾಸ್ಟರ್ ಬಳಿ ಬಿಟ್ಟು, ಅವನಿಗೆ ಅಕ್ಷರಾಭ್ಯಾಸ ಮಾಡಿ, ವಿದ್ಯಾವಂತನನ್ನಾಗಿ ಮಾಡಲಿಕ್ಕೆ ಆದೇಶ ನೀಡಿದರು. ಮಾಸ್ಟರ್ ಆತನಿಗೆ ಅಕ್ಷರಾಭ್ಯಾಸ ಮಾಡುವಾಗ, ಗುರು ಅಮರ್ ದಾಸ್‌ನ ಗೀತೆಯನ್ನು ಹೇಳಿಕೊಟ್ಟಾಗ, ಅದನ್ನು ಮನನ ಮಾಡಿದ ಸಿಖ್ ವಿದ್ಯಾರ್ಜನೆ ಮುಂದುವರೆಸುವುದನ್ನು ಖೈದು ಮಾಡಿದ. ಕಾರಣ, ಆ ಗೀತೆಯ ಪಠಣದಿಂದ ಆತ ಗುರುವನ್ನು ಕಂಡುಕೊಂಡು, ಶಾಂತಿ ಲಭಿಸಿಕೊಂಡಿದ್ದ.

ಕಹಾನ್ ಸಿಂಗ್ ಎಂಬ ಸಿಖ್ ಗುರುವಿನ ನಿಷ್ಠಾವಂತ ಶಿಷ್ಯನಾಗಿದ್ದ. ಒಮ್ಮೆ, ಆತ ಆಶ್ರಮದ ಗೋಡೆಗೆ ಸುಣ್ಣ ಬಳಿಯುವಾಗ, ಸನಿಯದಲ್ಲಿ ಹಾದು ಹೋದ ಗುರುವಿನ ಮೇಲೆ ಸುಣ್ಣ ಬಡಿಯಿತು. ಗುರು ತಮಾಷೆಗೆ, 'ನನಗೆ ಸುಣ್ಣ ಬಡಿದ ಹಾಗೆ ಈತನ್ನು ಬಡಿಯಬಾರದೇಕೆ?' ಗುರುವಿನ ಮಾತು ಕೇಳಿದೊಡನೆ ಇತರ ಸಿಖ್ಖರು ಕಹಾನ್‌ಸಿಂಗ್‌ನಿಗೆ ನಾಲ್ಕು ಏಟು ಬಡಿದರು ! ಗುರುವಿಗೆ ಖೇದವೆನಿಸಿತು.

'ನನ್ನ ಆದೇಶವನ್ನು ಮನಃಪೂರ್ವಕವಾಗಿ ಪಾಲಿಸಿದ ನೀವು ಧನ್ಯರೇ ಸರಿ ! ಆದರೆ, ಈ ಮನುಷ್ಯ ನನಗೆ ಅತ್ಯಂತ ನಿಷ್ಠೆಯುಳ್ಳ ಶಿಷ್ಯನಾಗಿದ್ದಾನೆ. ಈಗ ನನ್ನ ಕೋರಿಕೆಯಂತೆ, ನಿಮ್ಮಲ್ಲಿ ಯಾರಾದರೊಬ್ಬರು ತನ್ನ ಹೆಣ್ಣು ಮಗಳನ್ನು ಈತನಿಗೆ ಕೊಟ್ಟು ಲಗ್ನ ಮಾಡಿಕೊಡುವರೇನು?'

ಗುರುವಿನ ಕೋರಿಕೆ ಕೇಳಿದ ಸಿಖ್ಖರು ಮೂಕರಾದರು. ವಿಚಿತ್ರವಾದ ಗುರುವಿನ ಕೋರಿಕೆಯನ್ನು ಪಾಲಿಸಲು ಸಿದ್ಧರಿರಲಿಲ್ಲ. ಹೊಡೆದು ಬಡಿಯರೆಂದರೆ, ಪಾಲಿಸಲು ಸಿದ್ಧರಿದ್ದ ಸಿಖ್ಖರು ತಮ್ಮ ಮಗಳನ್ನು ಲಗ್ನ ಮಾಡಿಕೊಡುವುದೆಂದರೆ, ಅಚ್ಚರಿಯ ಜೊತೆಗೆ ಅದು ಕಾರ್ಯಗತ ಮಾಡುವ ಕಾರ್ಯವಾಗಿರಲಿಲ್ಲ. ಆದರೆ, ಅವರಲ್ಲಿ ಒಬ್ಬ ಸಿಖ್ ಮುಂದೆ ಬಂದ. ಆತ ಅಫ್ಘಾನಿಸ್ತಾನದ ಸಿಖ್ಖನಾಗಿದ್ದ. ಆತ ತನ್ನ ಮಗಳನ್ನು ಲಗ್ನ ಮಾಡಿಕೊಡಲು ಒಪ್ಪಿದ !

ಗುರುವಿನ ಲಂಗರ್ (ಅಡಿಗೆ ಮನೆ) ಯಾವಾಗಲೂ ಚಟುವಟಿಕೆಯಿಂದಿದ್ದು, ಯಾತ್ರಿಕರಿಗೆ ಊಣಬಡಿಸಲು ಅದು ಸದಾ ಸಿದ್ಧವಿರುತ್ತಿತ್ತು.

ಆದರೆ, ಲಂಗರ್‌ನಲ್ಲಿ ಪದಾರ್ಥಗಳ ಕೊರತೆಯಿಂದಾಗಿ, ಅಡಿಗೆ ತಯಾರಾಗಿರಲಿಲ್ಲದಿರುವಾಗ ಹಸಿದ ಯಾತ್ರಿಕರು ಬರಿಗೈಲಿ ಹೋಗಬೇಕಾದ ಪರಿಸ್ಥಿತಿ ಉಂಟಾದಾಗ, ಅಥವಾ ಬಾಣಸಿಗರು ಗುರುವಿನ ಭೋಜನ ಮೊದಲಾಗಬೇಕು ಎಂದು ಯಾತ್ರಿಕರನ್ನು ಅಡ್ಡಿಪಡಿಸಿದಾಗ, ಗುರುವಿಗೆ ನೋವಾಗುತ್ತಿತ್ತು. ಅವರು, ಲಂಗರ್‌ನಲ್ಲಿ ಪದಾರ್ಥಗಳ ಕೊರತೆಯುಂಟಾದಾಗ, ತಾವೇ ಖುದ್ದಾಗಿ ತಮ್ಮ ಸ್ನೇಹಿತರ ಮನೆಗೆ ತೆರಳಿ, ಬೇಡಿ ಪದಾರ್ಥಗಳನ್ನು ತಂದು, ಅಡುಗೆ ಮಾಡಿ ಯಾತ್ರಿಕರಿಗೆ ಊಣಬಡಿಸುತ್ತಿದ್ದರು.

ಗುರು ಸಸ್ಯಾಹಾರಿ ಆಗಿರಲಿಲ್ಲವಾದ್ದರಿಂದ, ಒಮ್ಮೆ ಒಬ್ಬ ವೈಷ್ಣವ ಬ್ರಾಹ್ಮಣ ಗುರುವಿನ ಬಳಿ ಬಂದು ಕಾಣಿಕೆ ಒಪ್ಪಿಸಿ, ಭಕ್ತಿಯನ್ನು ಪ್ರದರ್ಶಿಸಿ, ಗುರು ಮಾಂಸಾಹಾರ ತಿನ್ನುವುದನ್ನು ನೋಡಿ, ಭಯಭ್ರಾಂತಪಟ್ಟು, ಮುಜುಗರದಿಂದ ಒದ್ದಾಡಿದ. ಅವನು ಒಬ್ಬ ಮಾಂಸಾಹಾರಿ ಗುರುವಿಗೆ ಕಾಣಿಕೆ ನೀಡಿ ವ್ಯರ್ಥವಾಯಿತಲ್ಲಾ ಎಂದು ಹಲುಬಿದ. ಗುರುವನ್ನು ಬೀಳ್ಕೊಟ್ಟ ಅವನು ದಾರಿಯಲ್ಲಿ ಒಬ್ಬ ಸಿಖ್ಖನಿಗೆ ತನ್ನ ಸಂಕಟ ಹೇಳಿಕೊಂಡ. ಅ ಸಿಖ್, ಗುರುವಿಗೆ ನೀಡಿದ ಕಾಣಿಕೆಯನ್ನು ತಾನು ವಾಪಸ್ಸು ನೀಡುತ್ತೇನೆಂದು ಹೇಳಿ, ಬ್ರಾಹ್ಮಣನಿಂದ ಗುರು ನೀಡಿದ ಆಶೀರ್ವಾದದ ಉಕ್ಕಿನ ಬಳೆಯನ್ನು ವಾಪಸ್ಸು ಪಡೆದ. ಸಂತೋಷಗೊಂಡ ಬ್ರಾಹ್ಮಣ ಬಳೆಯನ್ನು ಆ ಸಿಖ್ಖಗೆ ನೀಡಿ ತನ್ನೂರಿಗೆ ವಾಪಸ್ಸಾದ. ಅಲ್ಲಿ ಅವನಿಗೆ ಆಘಾತ ಕಂಡಿತು. ಅವನ ಪತ್ನಿಯನ್ನು ಪಠಾಣರು ಹಾರಿಸಿಕೊಂಡು ಹೋಗಿದ್ದರು. ಅಳುತ್ತಾ ಓಡಿಬಂದ ಬ್ರಾಹ್ಮಣನಿಗೆ ಗುರು ತಮ್ಮ ಪುತ್ರ ಅಜಿತ್‌ಸಿಂಗ್‌ಗೆ, ಪಠಾಣ್‌ರಿಂದ ಬ್ರಾಹ್ಮಣನ ಹೆಂಡತಿಯನ್ನು ರಕ್ಷಿಸಿಕೊಂಡು ಬರಲು ಆದೇಶವಿತ್ತರು. ಅಜಿತ್‌ಸಿಂಗ್, ತಕ್ಷಣ, ತನ್ನ ಸ್ನೇಹಿತರೊಂದಿಗೆ, ಪಠಾಣರ ಕೋಠಿಗೆ ನುಗ್ಗಿ ಬ್ರಾಹ್ಮಣನ ಪತ್ನಿಯನ್ನು ರಕ್ಷಿಸಿ, ಆಕೆಯನ್ನು ಅವನಿಗೆ ಒಪ್ಪಿಸಿದ. ೩೬

ಆಗ, ಗುರು ಬ್ರಾಹ್ಮಣನಿಗೆ ಉಪದೇಶ ನೀಡಿದದು ಅತ್ಯಂತ ವಿಶೇಷವಾಗಿದೆ ಎಂದರು ಇತಿಹಾಸಕಾರರು.

---

೩೬. P 300 History of Sikh People by G.Singh

'ನಾನು ಆಹಾರ ತಿನ್ನುವುದು ಅದರ ರುಚಿಗೋಸ್ಕರವಲ್ಲ, ಅದು ನನ್ನ ದೇಹವನ್ನು ದೃಢವಾಗಿ ಆರೋಗ್ಯವಾಗಿಟ್ಟುಕೊಳ್ಳಲಿಕ್ಕೆ. ಮಾನವರು, ಆಹಾರ, ಪೋಷಾಕು, ಆಚಾರ, ವಿಚಾರ, ಜಾತಿ, ಪಂಗಡ, ಧರ್ಮಗಳಿಂದಾಗಿ ಕಾದಾಡುತ್ತಾ ಒಬ್ಬರಿಗೊಬ್ಬರು ಹರಿದು ತಿನ್ನುತ್ತಿದ್ದಾರೆ. ಮಾನವರಲ್ಲಿ ಭ್ರಾತೃತ್ವ ನಿರ್ಮಿಸುವುದೇ ನನ್ನ ಗುರಿ, ಧ್ಯೇಯವಾಗಿದೆ. ನನ್ನ ಸಿಖ್‌ರು ದಾನ ಅಥವಾ ಧಾರ್ಮಿಕ ಕಾಣಿಕೆಗಳಿಂದ ಜೀವಿಸಬೇಕಾಗಿಲ್ಲ. ಆದರೆ ಅವರು ಘನತೆ, ಗೌರವಗಳಿಂದ ಹಣ ಸಂಪಾದಿಸಿ, ಅದನ್ನು ಪರಸ್ಪರ ಹಂಚಿಕೊಳ್ಳಬೇಕು ಮತ್ತು ತಮ್ಮ ಹೃದಯಗಳಲ್ಲಿ ನಿರಂತರವಾಗಿ ದೇವರನ್ನು ಧ್ಯಾನಿಸಿ ಇರಿಸಿಕೊಳ್ಳಬೇಕು.'

ಇನ್ನೊಬ್ಬರ ಸೇವೆಗೈಯ್ಯುವುದು ಪ್ರತಿಯೊಬ್ಬ ಸಿಖ್‌ನ ಪ್ರಥಮ ಕರ್ತವ್ಯ ಎಂದು ಸಾರಿದರು. ಮಾನವೀಯತೆಯ ಉತ್ಕೃಷ್ಟ ಗುಣಗಳಾದ, ಪರಸ್ಪರ ಪ್ರೀತಿ, ವಿಶ್ವಾಸ, ಭ್ರಾತೃತ್ವ, ಜಾತಿ, ಮತ ಬೇಧವಿಲ್ಲದ ಭಾವನೆ ಮತ್ತು ಯಾರೇ ಮನುಷ್ಯನ ಸಂಕಷ್ಟಕಾಲದಲ್ಲಿ ಸೇವೆಗೈಯ್ಯುವ ಉದಾತ್ತ ಮನಸ್ಸು ಗುರುಗಳನ್ನು ಆವರಿಸಿತ್ತು.

ಒಮ್ಮೆ ಭಾಯಿ ಕನ್ಹೈಯ್ಯಾ ಎಂಬ ಸಿಖ್ ಯುದ್ಧಭೂಮಿಯಲ್ಲಿ ಗಾಯಗೊಂಡ ಒಬ್ಬ ಶತ್ರು ಸೈನಿಕನ ಬಾಯಿಗೆ ನೀರುಣಿಸುವುದನ್ನು ಕಂಡ ಗುರು ಕಾರಣ ಕೇಳಿದಾಗ, ಆತ ಉತ್ತರಿಸಿದ 'ಮನುಷ್ಯ ಮನುಷ್ಯರ ನಡುವೆ ಬೇಧಭಾವ ಸಲ್ಲದು ಎಂಬುದನ್ನು ಹೇಳಿಕೊಟ್ಟ ನಿಮ್ಮ ಪಾಠ ಪ್ರವಚನದ ಪ್ರಕಾರ ನಾನು ಗಾಯಗೊಂಡವನಲ್ಲಿ ತಮ್ಮ ಪ್ರತಿರೂಪವನ್ನೇ ಕಂಡಿದ್ದರಿಂದ ನಾನು ಆತನಿಗೆ ನೀರುಣಿಸಿದೆ.'

ಗುರುವಿಗೆ ಅತ್ಯಂತ ಆನಂದವಾಗಿ, ಆತನಿಗೆ ಆಶೀರ್ವದಿಸಿ, 'ನಿನಗೆ ಮೋಕ್ಷ ಖಂಡಿತ !' ಎಂದರು.

'ಸೇವೆ' ಎಂದರೆ ಇದೇ ಎಂದು ಸಾರಿದ ಗುರು, ಅಂತಹವರ ಒಂದು ಪಂಥವನ್ನೇ ಹುಟ್ಟುಹಾಕಿದರು. ಇಂದಿಗೂ ಅವರನ್ನು 'ಸೇವಾಪಂಥೀ' ಎಂದು ಕರೆದು, ಅವರು ಸಿಖ್‌ರ ಒಂದು ಪ್ರಮುಖ ಅಂಗವಾಗಿ ಉಳಿದಿದೆ ಎಂದಿದ್ದಾರೆ ಇತಿಹಾಸಕರರು. ೩೭

ಯಾವ ಪಂಥದ ಚಮತ್ಕಾರ ಅಥವಾ ಪವಾಡಗಳನ್ನು ನಂಬದ ಗುರು, ಕೇವಲ ಏಕೈಕ ದೇವನ ಮತ್ತು ಅವನ ಅಸ್ತಿತ್ವ ಮತ್ತು ಕೃಪೆಗಳ ಮೇಲೆ ನಂಬಿಕೆಯಿಟ್ಟ ಗುರು ಗೋಬಿಂದ್ ಸಿಂಗ್, ತಮ್ಮ ನಂಬಿಕೆಗಳಿಗಾಗಿ ಹೋರಾಡಿದರು. ಕ್ಷತ್ರಿಯರಾದ ಅವರು ಖಡ್ಗ ಝಳಪಿಸಿ, ಶತ್ರು ಸಂಹಾರಕ್ಕೆ ಭಯ ಪಡಲಿಲ್ಲ. ಅವರ ಧೈರ್ಯ, ಸಾಹಸ ಎಂತಹವರನ್ನು ಬೆಚ್ಚಿ ಬೀಳಿಸುತ್ತಿತ್ತು.

ಒಮ್ಮೆ ಅವರು ಮೊಘಲ್ ಬಾದ್‌ಶಹಾ ಬಹದ್ದೂರ್ ಶಹಾನ ದರ್ಬಾರ್‌ನಲ್ಲಿ ಆಸೀನರಾಗಿರುವಾಗ, ಅವರ ಮೇಲಿನ ಈರ್ಷೆಯಿಂದ ಒಬ್ಬ ಸ್ಥಾನಿಕ ಅವರನ್ನು ಛೇಡಿಸಿದ. ಗುರು ಎಂದು ಕರೆಸಿಕೊಂಡ ಮೇಲೆ ಯಾವುದೇ ಒಂದು ಪವಾಡ ಎಸಗಿ

---

೩೭. P 304 History of Sikh People by G. Singh

ತನ್ನ ಶಕ್ತಿ ಪ್ರದರ್ಶಿಸಬಲ್ಲರೇನು ಎಂಬ ಪ್ರಶ್ನೆಗೆ ಗುರು ಉತ್ತರಿಸಿದರು; 'ನಮ್ಮ ಬಾದ್‌ಶಹಾರೇ ಒಬ್ಬ ಪವಾಡಪುರುಷರಾಗಿದ್ದಾರೆ. ಒಬ್ಬ ಸಾಮಾನ್ಯನನ್ನು ಮೇಲೆಕ್ಕೆತ್ತುವ ಅಥವಾ ಪ್ರಬಲರನ್ನು ಕೆಳಗಿಳಿಸುವ ಅಥವಾ ಹತ್ತಿಕ್ಕುವ ಪವಾಡ ಎಸಗುವ ಶಕ್ತಿ ಅವರಿಗಿದೆ !' ಅವರ ಮಾತಿಗೆ ಸಂತುಷ್ಠನಾಗದ ಸ್ಥಾನಿಕ 'ಅದು ನಮಗೆ ತಿಳಿದಿದೆ ! ಆದರೆ ನಾವು ಕೇಳಿದ್ದು ನಿಮ್ಮ ಪವಾಡ ಪ್ರದರ್ಶನಕ್ಕೆ !'

ಅವನ ಕುಚೇಷ್ಟೆಯ ಪ್ರಶ್ನೆಗೆ ಉತ್ತರವಾಗಿ, ಗುರು ತಕ್ಷಣವೇ ತಮ್ಮ ಖಡ್ಗವನ್ನು ಓರೆಯಿಂದ ಹೊರತೆಗೆದು, ಗರ್ಜಿಸಿದರು.

'ನಾನು ಇದೇ ಪವಾಡವನ್ನು ಮಾಡಬಲ್ಲೆನು ! ಈ ಖಡ್ಗದಿಂದ ನನ್ನನ್ನು ಧಿಕ್ಕರಿಸುವವರ ತಲೆ ಚಂಡಾಡಬಲ್ಲೆ ! ಮನುಷ್ಯರ ಮತ್ತು ದೇಶಗಳ ಅದೃಷ್ಟ ಪರೀಕ್ಷೆ ಇಲ್ಲಿದೆ !'

ಬಾದ್‌ಶಹಾನ ಆಸ್ಥಾನದಲ್ಲಿ ಯಾರೇ ಆಗಲಿ ಆಯುಧಪಾಣಿಗಳಾಗಿ ಆಸೀನರಾಗುವಂತಿಲ್ಲದಿರುವಾಗ, ಗುರು ಗೋಬಿಂದ್‌ಸಿಂಗ್‌ರಿಗೆ ಆ ಕಟ್ಟುಪಾಡಿಗೆ ವಿನಾಯ್ತಿ ತೋರಿಸಲಾಗಿತ್ತು. ಗುರುವಿನ ಆ ಸ್ಥೈರ್ಯ, ಆ ನಿಲುವು, ಆ ಅಚ್ಚರಿಗೊಳಿಸುವಂತಹ ಪ್ರದರ್ಶನ ಬಾದ್‌ಶಹಾನಿಗೂ ವಿಸ್ಮಯವಾಗಿತ್ತು. ಗುರು ತನ್ನ ಮುಂದೆ ಖಡ್ಗ ಝಳಪಿಸಿದ್ದು ಅವನಿಗೆ ಆಶ್ಚರ್ಯವಾದರೂ, ಆತ ಸಂಯಮ ವಹಿಸಿ ಸ್ಥಾನಿಕನಿಗೆ ಛೀಮಾರಿ ಹಾಕಿ ಸುಮ್ಮನಿರಿಸಿದ. ೩೮

ಶತ್ರು ಸಂಹಾರಕ್ಕೆ ಖಡ್ಗದ ಉಪಯೋಗ ಧಾರಾಳವಾಗಿ ಮಾಡಿದರೂ, ಗುರು ಸಾಹಿತ್ಯ ಸಂಗೀತಗಳಲ್ಲೂ ತಮ್ಮ ಚಾತುರ್ಯ ತೋರಿಸಿದರು. ಅವರು ರಚಿಸಿದ ಹಲವಾರು ಗ್ರಂಥಗಳು ಮತ್ತು ಕವಿತೆಗಳು ಪಂಜಾಬಿ ಭಾಷೆಯಲ್ಲಿ ಚಿರಸ್ಥಾಯಿಯಾಗಿ ಹೆಸರು ಮಾಡಿವೆ.

ಒಂದು ಬಲಿಷ್ಠ, ನಿಸ್ವಾರ್ಥ, ಸೇವಾಪರ ಯೋಧಪಡೆಯನ್ನು ಕಟ್ಟಿದ ಗುರು ಗೋಬಿಂದ್ ಸಿಂಗರು, ಧರ್ಮ ಸ್ಥಾಪನೆಗಾಗಿ, ದೇವರನ್ನು ಸದಾಕಾಲ ಜಪಿಸಿ, ಯುದ್ಧ ಜರುಗಿಸಿದರು. ಸ್ವಂತ ಹಿತಕ್ಕಾಗಿ, ಸ್ವಭಿಲಾಷಾ ಪೂರೈಕೆಗೆ, ಸ್ವಾರ್ಥ ಸಾಧನೆಗಾಗಿ ಎಂದೂ ಗುರು ಕಾದಾಡಲಿಲ್ಲ. ಅವರ ಉದ್ದೇಶ, ಮೌಲ್ಯಾಧಾರಣೆ ಉಳ್ಳ ದೇಶ ಸ್ಥಾಪನೆಯಾಗಬೇಕಾದುದ್ದಲ್ಲದೆ, ಕೇವಲ ಅಧಿಕಾರಕ್ಕಾಗಿ, ಪ್ರಜೆಗಳ ಮೇಲೆ ದರ್ಪ, ದೌರ್ಜನ್ಯ, ಅಧಿಕಾರ ಜರುಗಿಸಬೇಕಾದುದ್ದಲ್ಲ ಎಂಬುದಾಗಿತ್ತು.

ಅವರು 'ಖಾಲ್ಸಾ' (ಪರಿಶುದ್ಧ) ಸ್ಥಾಪಿಸಿದ ಉದ್ದೇಶವೇ ದೇಶದಲ್ಲಿ ಯಾವ ಜಾತಿ, ಮತ, ಬಣ್ಣ, ಪಂಥ, ಹಿರಿದು, ಕಿರಿದು ಎಂಬ ಭಾವನೆಗಳಿಲ್ಲದ ಸಮಾಜದ ಸ್ಥಾಪನೆಯಾಗಬೇಕೆಂಬುದಾಗಿತ್ತು. ಮೇಲು ಕೀಳು ಲಿಂಗಬೇಧಗಳನ್ನು ತಿರಸ್ಕರಿಸಿದ

---

೩೮. P 318 History of Sikh People by G. Singh

ಗುರು ಎಲ್ಲರೂ ಸರಿಸಮಾನರು ಎಂದು ಘೋಷಿಸಿದ್ದು ಚಾರಿತ್ರಾರ್ಹವಾಗಿದೆ.

ಗುರುಪೀಠದ ಉತ್ತರಾಧಿಕಾರ ಪದ್ಧತಿಯನ್ನು ತ್ಯಜಿಸಿ, 'ಆದಿಗ್ರಂಥ'ವೇ ಸಿಖ್‌ರಿಗೆ ಗುರುವಾಗಿ, ಅವುಗಳಲ್ಲಿನ ಉಪದೇಶವೇ ಗುರುಗಳ ಉಪದೇಶ, ಅದರಿಂದ ಸಿಖ್‌ರು ತಮ್ಮ ಲೌಕಿಕ ಮತ್ತು ಧಾರ್ಮಿಕ ಜೀವನ ಸಾಗಿಸಬೇಕೆಂದು ಸಾರಿದ್ದು ಒಂದು ಅಪೂರ್ವ ಘಟನೆಯಾಗಿದೆ ಎಂದರು ಇತಿಹಾಸಕಾರರು. ಗುರುಗಳ ಅವಸಾನವಾಗಿ ಅವರ ಉತ್ತರಾಧಿಕಾರಿಗಳಾಗಿ, ಅವರ ಸಂಬಂಧಿಗಳು, ಶಿಷ್ಯರು ಅಧಿಕಾರಕ್ಕಾಗಿ ಕಚ್ಚಾಡಿ, ಮೂಲ ಉದ್ದೇಶವನ್ನೇ ಮರೆಯುವಂತಾಗಬಾರದು ಎಂಬುದು ಗುರುವಿನ ಉದ್ದೇಶವಾಗಿತ್ತು. ಇಡೀ ಸಿಖ್ ಸಮುದಾಯ ಒಂದೆಡೆ ಸೇರಿ, ತಮ್ಮ ಸಮಸ್ಯೆಗಳನ್ನು ಬಗೆಹರಿಸಿ, ಒಂದು ಸಾಮರಸ್ಯದ ಒಮ್ಮತಕ್ಕೆ ಬರುವ ಪದ್ಧತಿ ತರಬೇಕೆಂದರು.

ಗುರು ಗೋಬಿಂದ್ ಸಿಂಗ್‌ರು, ಪ್ರಾಯಶಃ ಪ್ರಪ್ರಥಮವಾಗಿ, ಭಾರತದ ಇತಿಹಾಸದಲ್ಲಿ ಒಂದು ಸಂಪೂರ್ಣ ಮನುಷ್ಯನ ಅಸ್ತಿತ್ವಕ್ಕೆ ಅಡಿಪಾಯ ಹಾಕಿದರು. ಒಬ್ಬ ಮನುಷ್ಯ ದೈವಭಕ್ತನಾದರೂ, ಆತ ಒಬ್ಬ ಯೋಧನಾಗಿ, ರೈತನಾಗಿ ಸಾಮಾನ್ಯ ಕೆಲಸಗಾರನೂ ಆಗಿ ಹೊರಹೊಮ್ಮಿದ. ಒಬ್ಬ ವ್ಯಕ್ತಿ ಯಾವ ಕಾರ್ಯ ಮಾಡಿದರೂ, ದೇವರಿಗೋಸ್ಕರ ದೇವರ ನೆರಳಿನಲ್ಲೇ ಮಾಡುವಂತವನಾಗಿರಬೇಕು. 'ಖಾಲ್ಸಾ' ದೇವರಿಗೆ ಸೇರಿದ್ದಾಗಿದೆ. ಅದೇ ರೀತಿ ಜಯ, ವಿಜಯಗಳು ಕೂಡ ದೇವರಿಗೆ ಸೇರಿದ್ದಾಗಿದೆ' ಎಂದು ಸಾರಿದರು ಗುರು ಗೋಬಿಂದ್ ಸಿಂಗ್.

ಒಬ್ಬ ವ್ಯಕ್ತಿ ಸ್ವಾರ್ಥಪರನಾಗಿ ದೇವರ ನಾಮಸ್ಮರಣೆ ಮಾಡಿ, ತನ್ನ ಕುಲಬಾಂಧವರನ್ನು ಮರೆತು, ದೇಶಬಾಂಧವರನ್ನು ಕಡೆಗಣಿಸಿ, ತನ್ನ ಮನಶ್ಶಾಂತಿ ಪಡೆಯಲು, ತನ್ನ ಸ್ವಂತ ಮೋಕ್ಷ ಸಾದನೆ ಮಾಡಲೆತ್ನಿಸುವುದನ್ನು ಗುರು ಅಲ್ಲಗಳೆದರು. ಮನುಷ್ಯ ಒಂದು ಸಮಾಜದಲ್ಲಿ ಬದುಕಿ ಬಾಳಬೇಕಾದರೆ ಅದರ ಆಗು ಹೋಗುಗಳಲ್ಲಿ ಭಾಗಿಯಾಗಬೇಕಲ್ಲದೆ, ತನ್ನ ಸ್ವಾರ್ಥ ಸಾಧನೆಗಾಗಿ ತನ್ನ ಲೌಕಿಕ ಅಥವಾ ಧಾರ್ಮಿಕ ಆಸಕ್ತಿಗಳನ್ನು ಬೆಳೆಸಿಕೊಳ್ಳುವುದು ಅತ್ಯಂತ ಹೇಯಕರ ಎಂದು ಭಾವಿಸಿದರು.

'ಆಧ್ಯಾತ್ಮಿಕವಾಗಿ ಎಚ್ಚರಗೊಂಡ, ಆದರೆ ಮಣ್ಣಿನ ಮಕ್ಕಳಾದ ಒಂದು ಜನಾಂಗವನ್ನು ಸಾಮಾಜಿಕ ರಾಜಕೀಯ ಜನಾಂಗವನ್ನಾಗಿ ಪರಿವರ್ತಿಸಿದ ಕೀರ್ತಿ ಗುರು ಗೋಬಿಂದ್ ಸಿಂಗ್‌ರದು ಎಂದು ಹೊಗಳಿದ್ದಾರೆ ಇತಿಹಾಸಕಾರರು. ೩೯

ಮುಸ್ಲಿಮ್ ಇತಿಹಾಸಕಾರ ಸಯ್ಯದ್ ಮಹಮದ್ ಲತೀಫ್, ಗುರುವನ್ನು ಈ ರೀತಿ ವರ್ಣಿಸಿದ್ದಾನೆ :

'ಅವರು ಒಬ್ಬ ಕಾನೂನು ನೀಡುವವ, ಯುದ್ಧರಂಗದಲ್ಲಿ ಒಬ್ಬ ಮಹಾನ್

೩೯. P 327 History of Sikh People by G. Singh

ಯೋಧ, ಮಸ್‌ನದ್‌ನಲ್ಲಿ ಒಬ್ಬ ರಾಜ, ಮತ್ತು ಖಾಲ್ಸಾ ಸಮಾಜದಲ್ಲಿ ಒಬ್ಬ ಫಕೀರ್‌ನಾಗಿದ್ದ' ೪೦

ಡಾ. ಸರ್ ಗೋಕುಲ್ ಚಂದ್ ನಾರಂಗ್‌ರ ಉಚಾಚ ಇಲ್ಲಿ ಉದಹರಿಸಬಹುದು :

'. . . .though he did not actually break the shackles that bound his nation, he had set their souls free and filled their hearts with a lofty longing for freedom and ascendancy. He had broken the charms of sanctity attached to the lord of Delhi and destroyed the awe and terror inspired by Moghal tyranny.' 41

ಡಾ. ಗೋಪಾಲ ಸಿಂಗ್‌ರ ಪ್ರಕಾರ, 'ಗುರುನಾನಕ್‌ರು ಜೀವನಕ್ಕೆ ಒಂದು ಅರ್ಥ ನೀಡಿದರೆ, ಗುರು ಗೋಬಿಂದ್ ಸಿಂಗ್‌ರು, ಮರಣ ಹೊಂದುವುದಕ್ಕೆ ಒಂದು ಹೊಸ ಉದ್ದೇಶ ನೀಡಿದರು.'

Bingley in his book 'The Sikhs' quoted Denzil Ibbetson as under : '. . . .Religious fervour was entirely eclipsed by military zeal, and thusforth second time in history, a religion became a political power, and for the first time in India a nation arose, embracing all races, all classes, and all grades of sociology, and banded them together in face of a foreign foe'

P 21 The Sikh by A H Bingley

'. . .As a religious teacher he drew contributions and procured followers from all parts of India, but as a leader he perceived the necessity of a military pivot, and as a rebel he was not insensible to the value of a secure retreat.'

'. . .In the heart of a powerful empire he set himself to the task of subverting it, and from the midst of social degradation and religious corruption, he called up simplicity of manners, singleness of purpose, and enthusiasm of desire . . .

. . .Govind was equally bold, systematic and sanguine, but it is not necessary to suppose him either an unscrupulous imposter or

೪೦. P 328 History of Sikh People by G. Singh
೪೧. P 328 IBID

a self deluded enthusiast. He thought that the minds of men might be wrought upon to great purposes, he deplored the corruption of the world, he resented the tyranny which endangered his own life, and he believed the time had come for another teacher to arouse the latent energies of the human will. . ..'

P 65 History of Sikhs by Cunningham

'. . .The last apostle of Sikhs did not live to see his own ends accomplished, but he effecually roused the dormant energies of a vanquished people, and filled them with a lofty although fitful longing for social freedom and national ascendancy, the proper adgunets of that purity of worship which had been preached by Nanak. . .'

P 82 IBID

ಭಾಗ – ೨

ಅಧ್ಯಾಯ ೧

ಬಂದಾಸಿಂಗ್ ಬಹದೂರ್ (೧೬೭೦-೧೭೧೬)

'ಸಮಸ್ಯೆಗಳಿಗೆ ಪರಿಹಾರ ದೊರಕಲಸಾಧ್ಯವಾದರೆ, ಖಡ್ಗದ ಉಪಯೋಗವೇ ಅಂತಿಮ ಪರಿಹಾರ'

-ಗುರು ಗೋಬಿಂದ್ ಸಿಂಗ್

ಈಗಾಗಲೇ ವಿವರಿಸಿದಂತೆ, ಬಂದಾಸಿಂಗ್‌ನ ನಿಜ ನಾಮಧೇಯ ಮಾಧೋದಾಸ್ ಎಂದಾಗಿದ್ದು, ಆತ ಕಾಶ್ಮೀರದ ಪೂಂಚ್‌ನಲ್ಲಿ ಜನ್ಮ ತಾಳಿದನು ಎಂದು ನಂಬಲಾಗಿದೆ. ಇದರ ಬಗ್ಗೆ ಸಾಕಷ್ಟು ವಾದವಿವಾದವಿದ್ದರೂ, ಮಾಧೋ ದಾಸ್ ಮಾತ್ರ ತನ್ನ ಜನ್ಮ ಅಥವಾ ಪೂರ್ವಾಚರಣೆಗಳ ಬಗ್ಗೆ ಹೇಳಿಕೊಳ್ಳದಿದ್ದರಿಂದ, ಆತನ ಹುಟ್ಟು, ಬೆಳವಣಿಗೆ, ವಾಸಸ್ಥಳಗಳ ಬಗ್ಗೆ ಬೆಳಕು ಚೆಲ್ಲುವುದು ಇತಿಹಾಸಕಾರರಿಗೆ ಕಷ್ಟಕರವಾಗಿದೆ ಎನ್ನಬಹುದು.

ಗುರು ಗೋಬಿಂದ್ ಸಿಂಗ್‌ರ ಆದೇಶದಂತೆ, ಬಂದಾ (ಗುಲಾಮ) ಸಿಂಗ್, ೨೫ ಮಂದಿ ನಿಷ್ಠಾವಂತ ಸಿಖ್‌ರೊಂದಿಗೆ ಗುರುವಿನ ಒಂದು ಪರಿಚಯ ಪತ್ರ ತೆಗೆದುಕೊಂಡು ಪಂಜಾಬ್‌ನತ್ತ ಪಯಣಿಸಿದ. ಗುರು ಆದೇಶವಿತ್ತಂತೆ, ಅವನು ಯುದ್ಧ ಸಾಮಗ್ರಿಗಳನ್ನು ಮತ್ತು ಇತರ ನಿಷ್ಠಾವಂತ ಸಿಖ್‌ರನ್ನು ಕಲೆ ಹಾಕಲು ವರ್ಷಗಳೇ ಕಳೆದವು. ಗುರು ಬಂದಾನಿಗೆ ಯುದ್ಧ ಜರುಗಿಸುವ ಮುನ್ನ ಐದು ಜನ ಸಿಖ್‌ರೊಂದಿಗೆ ತನ್ನ ಬೇಡಿಕೆಗಳನ್ನು ಪೂರೈಸಲು, ದೇವರನ್ನು ಪ್ರಾರ್ಥಿಸಬೇಕೆಂದು ಉಪದೇಶ ನೀಡಿದ್ದನ್ನು ಬಂದಾ ಮನಸ್ಸಿನಲ್ಲಿಟ್ಟುಕೊಂಡು ಪ್ರತಿ ಕಾಳಗದಲ್ಲೂ ಅದನ್ನು ಪಾಲಿಸಿದ್ದನ್ನು ಇತಿಹಾಸಕಾರರು ದಾಖಲಿಸಿದ್ದಾರೆ. ೧

ಪಂಜಾಬ್ ಪ್ರಾಂತ್ಯವನ್ನು ತಲುಪಲು ಒಂದು ವರ್ಷವೇ ಬೇಕಾಯಿತು ಬಂದಾನಿಗೆ. ಕೈಯಲ್ಲಿ ಹಣವಿಲ್ಲದೆ, ಆಯುಧ ಸಾಮಗ್ರಿಗಳಿಲ್ಲದೆ, ಹೋರಾಡಲು ಯೋಧರ ಸಹಾಯವಿಲ್ಲದೆ, ಬಂದಾ ಕಷ್ಟನಷ್ಟ ಅನುಭವಿಸಿದ. ಆದರೆ, ಅವನ ಸಹಾಯಕ್ಕೆ ರಾಜಪುಟಾಣಾ ಮತ್ತು ದೆಹಲಿಯ ಸುತ್ತಮುತ್ತಲಿನ ಸಿಖ್‌ರು ಆನಂದಭರಿತರಾಗಿ ತಮ್ಮ ಕೈಲಾದ ಸಹಾಯ ಮಾಡಿದರು. ಬೈರಾಗಿಯಾಗಿ, ಈಗ ಯೋಧನಾಗಿ ಪರಿವರ್ತನೆಗೊಂಡ ಬಂದಾ ಮಾತ್ರ ಹಣ ಪಡೆದರೂ, ಅದರ ಮೋಹಕ್ಕೆ ಒಳಗಾಗಲಿಲ್ಲ. ದಾನರೂಪವಾಗಿ ಬಂದ ಹಣವನ್ನು ಉದಾರವಾಗಿ ಬಡಬಗ್ಗರಿಗೆ ದಾನ ಮಾಡಿದ. ಅದರಿಂದ ಅವನ ಕೀರ್ತಿ ಹೆಚ್ಚಿ, ಜನರು ಅವನ ಭಕ್ತರಾಗಿ ಅವನ ಬಳಿ ಧಾವಿಸಿದರು.

---

೧. P 334 History of Sikhs by G. Singh

ಈಗಾಗಲೇ, ಗುರು ಗೋಬಿಂದ್ ಸಿಂಗ್‌ರ ಹತ್ಯೆ ಮತ್ತು ಅವರ ಎಳೇ ಮಕ್ಕಳ ದಾರುಣ ಹತ್ಯೆಗಳ ಸುದ್ದಿ ಅರಿತ ಪಂಜಾಬ್‌ನ ಸಿಖ್‌ರ ರಕ್ತ ಕುದಿಯತೊಡಗಿತ್ತು. ಗುರುವಿನ ಪ್ರತಿನಿಧಿಯಾಗಿ ಬಂದಾಸಿಂಗ್ ಪಂಜಾಬ್‌ಗೆ ಬಂದು ಮೊಘಲ್‌ರ ವಿರುದ್ಧ ಹೋರಾಟ ಜರುಗಿಸುವ ಸಂಗತಿ ತಿಳಿದ ತಕ್ಷಣ ಸಿಖ್‌ರು ಸಾಗರೋಪಾಯದಲ್ಲಿ ಅವನ ಪಡೆಗೆ ಸೇರ್ಪಡೆಯಾದರು. ಪಂಜಾಬ್‌ನಲ್ಲಿ ಮೊಘಲ್ ಸೈನಿಕರ ಸಂಖ್ಯೆ ಒಂದು ಲಕ್ಷಕ್ಕೂ ಮೀರಿದ್ದು, ಯಾವ ಬಗೆಯ ದಂಗೆ, ಪ್ರತಿರೋಧ, ಕಾಳಗ ಎದುರಿಸಲು ಸನ್ನದ್ಧವಾಗಿತ್ತು. ಅದನ್ನು ಅರಿತ ಸಿಖ್‌ರು ಸಾಕಷ್ಟು ಮುಂಜಾಗ್ರತೆ ವಹಿಸಬೇಕಾಗಿತ್ತು. ಸರ್‌ಹಿಂದ್‌ನ ನವಾಬ ವಜೀರ್ ಖಾನ್‌ನಿಗೆ ಮಾತ್ರ ಬಂದಾಸಿಂಗ್‌ನ ನೇತೃತ್ವದಲ್ಲಿ ಸಿಖ್‌ರು ಸಂಘಟಿತರಾಗತೊಡಗಿದ್ದು ಅವನ ಮನಸ್ಫೂರ್ತಿ ಕುಗ್ಗಿ, ಆತ ಭಯಪಟ್ಟು ಕಂಗಾಲಾಗಿದ್ದ. ಗುರು ಗೋಬಿಂದ್ ಸಿಂಗ್‌ರ ಹತ್ಯೆಯಾದ ಮಕ್ಕಳ ರಕ್ತ ಅಂಟಿಸಿಕೊಂಡ ವಜೀರ್ ಖಾನ್ ಜೀವಭಯದಿಂದ ಒದ್ದಾಡಿದ.

ಸರ್‌ಹಿಂದ್‌ನ್ನು ಆಕ್ರಮಿಸಿಕೊಳ್ಳಲು ಕಷ್ಟಸಾಧ್ಯ ಎಂದು ಬಂದಾಸಿಂಗ್‌ನಿಗೆ ಮನವರಿಕೆಯಾಗಿತ್ತು. ಯಾಕೆಂದರೆ, ಅದು ಮೊಘಲ್ ಸಾಮ್ರಾಜ್ಯದ ಒಂದು ಭದ್ರವಾದ ಕೋಟೆಯಾಗಿತ್ತು. ಅದರಲ್ಲಿ ಮೊಘಲರು ತಮ್ಮ ಬಲಿಷ್ಠ ಸೈನ್ಯದ ದಂಡನ್ನು ಇರಿಸಿದ್ದರು. ಬಂದಾಸಿಂಗ್, ಅದನ್ನು ಅರಿತು ಸುತ್ತಲಿನ ಅನೇಕ ಸಣ್ಣಪುಟ್ಟ ಪ್ರದೇಶಗಳನ್ನು ಆಕ್ರಮಿಸಲು ಮನಸ್ಸು ಮಾಡಿದ.

ಕೈಥಾಲ್ ನಗರದ ಹತ್ತಿರ ಮೊಘಲ್‌ರ ಒಂದು ಸೈನ್ಯದ ತುಕಡಿ, ಆ ಪ್ರದೇಶದಿಂದ ದೊರೆತ ಸುಂಕ ಮತ್ತು ಸಾಮಗ್ರಿಗಳನ್ನು ಹೊತ್ತು ದೆಹಲಿಗೆ ಪ್ರಯಾಣ ಮಾಡುತ್ತಿರುವ ವಿಷಯ ಅರಿತ ಬಂದಾಸಿಂಗ್, ಅದರ ಮೇಲೆ ಆಕ್ರಮಣ ಜರುಗಿಸಿ ಅಪಾರವಾದ ನಗ, ಹಣ ಇತ್ಯಾದಿಗಳನ್ನು ವಶಪಡಿಸಿಕೊಂಡ. ಸಂಬಳ, ಭತ್ಯೆ ಇಲ್ಲದೆ ಗುರುವಿಗಾಗಿ ಹೋರಾಡುತ್ತಿದ್ದ ಸಿಖ್ ಸೈನಿಕರಿಗೆ ದೋಚಿದ ಹಣವನ್ನು ಹಂಚಿದ.

೨೬ ನವೆಂಬರ್, ೧೭೦೯ ರಂದು, ಬಂದಾಸಿಂಗ್ ಪ್ರಸಿದ್ಧ ಪಂಜಾಬ್ ನಗರವಾದ ಸಮಾನಾದ ಮೇಲೆ ಏರಿ ಹೋದ. ಸಮಾನಾವನ್ನು ಮೊಘಲ್ ಸರದಾರ ಜಲಾಲುದ್ದೀನ್ ಆಳುತ್ತಿದ್ದ. ಈತನೇ ಗುರು ತೇಘ್ ಬಹದ್ದೂರ್‌ನನ್ನು ಹಿಡಿದು ಔರಂಗಜೇಬ್‌ಗೆ ಒಪ್ಪಿಸಿ ಅವರ ಕೊಲೆಗೆ ಕಾರಣನಾಗಿದ್ದ. ಇದೇ ನಗರದಲ್ಲಿ ಗುರು ತೇಘ್ ಬಹದ್ದೂರ್‌ನ ಕತ್ತು ಕಡಿದ ಕಟುಕರು, ಶಾಶಲ್ ಬೇಗ್ ಮತ್ತು ಬಾಶಲ್ ಬೇಗ್ ವಾಸಿಸುತ್ತಿದ್ದರು.

ಸಮಾನಾ ನಗರ ಒಂದು ಸಂಪತ್ಭರಿತ ನಗರವಾಗಿತ್ತು. ಭದ್ರವಾದ ಕೋಟೆ ಇದ್ದು, ಸಾಕಷ್ಟು ರಕ್ಷಣೆಯನ್ನು ಹೊಂದಿತ್ತು. ಬಂದಾಸಿಂಗ್ ತನ್ನ ವೀರ ಸಿಖ್‌ರೊಂದಿಗೆ, ನಗರದ ನಾಲ್ಕೂ ಕಡೆಯಿಂದ ಆಕ್ರಮಣ ಮಾಡಿದ. ಮೊಘಲ್ ಸೈನ್ಯವನ್ನು ಚದುರಿಸಿ, ಸಾವಿರಾರು ಸೈನಿಕರ ಹತ್ಯೆ ಮಾಡಿದ. ನಗರದೊಳಗೆ ನುಗ್ಗಿ, ಹಲವಾರು ಮೊಘಲ್ ಗಣ್ಯರ ಮನೆ ಮಠ ನಾಶ ಮಾಡಿದ. ಗುರುವಿನ ಹತ್ಯೆಗೆ ಕಾರಣರಾದ ಮೂವರನ್ನು

ಹತ್ಯೆ ಮಾಡಿದ. ಈ ಘೋರ ಕಾಳಗದಲ್ಲಿ ಹತ್ತು ಸಾವಿರಕ್ಕೂ ಮಿಕ್ಕಿ ಯೋಧರು ಮಡಿದರು ಎನ್ನಲಾಗಿದೆ. ಜಯ ಗಳಿಸಿದ ಬಂದಾ, ತನ್ನ ನೆಚ್ಚಿನ ದಕ್ಷ ಅಧಿಕಾರಿ, ಫತೇ ಸಿಂಗ್‌ನನ್ನು ನಗರದ ಫೌಜುದಾರ್‌ನನ್ನಾಗಿ ನೇಮಕ ಮಾಡಿದ.

ಸಮಾನಾದ ಪತನದಿಂದ, ಸಿಖ್ ಸೈನಿಕರಿಗೆ ಅಪಾರವಾದ ದೋಚಿದ ನಗ ನಾಣ್ಯ ದೊರಕಿತು. ಸಿಖ್‌ರ ಪ್ರತಿಷ್ಠೆ, ಅವರ ಕದನ ಕುಶಲತೆ, ಅವರ ಧೈರ್ಯ ಶೌರ್ಯಗಳು ಮನೆಮಾತಾಯಿತು.

ಸಮಾನಾದ ಪತನ ಸಿಖ್‌ರಿಗೆ ಪ್ರತಿಷ್ಟೆ ಮತ್ತು ಧೈರ್ಯ ತುಂಬಿದರೆ, ಸರ್‌ಹಿಂದ್‌ನ ಸರದಾರನಿಗೆ ನಡುಕ ಉಂಟಾಯಿತು. ಅವನು ತನ್ನ ನಗರವನ್ನು ಭದ್ರಪಡಿಸಲು ಹಲವಾರು ರಕ್ಷಣಾ ಕಾರ್ಯಕ್ರಮ ಹಾಕಿಕೊಂಡ. ಸಿಖ್‌ರನ್ನು ಎದುರಿಸಲು ಪಠಾಣರ ಸೇವೆ ಪಡೆದುಕೊಂಡ. ಸಟ್ಲೆಜ್ ನದಿಯ ದಡದ ಮೇಲೆ ಅವರ ಸೈನ್ಯ ಸಿಖ್‌ರನ್ನು ತಡೆಹಿಡಿಯಲು ಮಲೆರ್‌ಕೋಟ್ಲಾ ಮತ್ತು ರೂಪಾರ್ ನಗರಗಳಲ್ಲಿ ಬೀಡು ಬಿಟ್ಟಿತು. ಇದನ್ನು ಮನಗಂಡ ಬಂದಾಸಿಂಗ್, ಒಡನೆಯೇ ಸರ್‌ಹಿಂದ್‌ನ್ನು ಆಕ್ರಮಿಸಲು ಮುಂದಾಗಲಿಲ್ಲ, ಸಧೌರಾ ನಗರದ ಸರದಾರ ಉಸ್ಮಾನ್ ಖಾನ್ ಒಬ್ಬ ಕ್ರೂರಿ ಮತಾಂಧನಾಗಿದ್ದ. ಹಿಂದೂಗಳನ್ನು ಹಿಂಸಿಸಿ, ಅವರ ಜೀವನವನ್ನು ದುಃಖಪೀಡಿತನನ್ನಾಗಿ ಮಾಡಿ, ಮೆರೆಯುತ್ತಿದ್ದ. ಅಷ್ಟೇ ಅಲ್ಲದೆ, ಇದೇ ಉಸ್ಮಾನ್‌ಖಾನ್, ಈ ಹಿಂದೆ ಸಿಖ್‌ರ ಮಿತ್ರನಾಗಿ, ಅವರ ಸಹಾಯಕ್ಕೆ ಬಂದ ಸಯ್ಯದ್ ಬದ್ರೂದ್ದೀನ್ ಉರುಫ್ ಬುದ್ಧೂ ಶಾಹಾನನ್ನು ಹತ್ಯೆ ಮಾಡಿದ್ದ. ಅದರ ಪ್ರತೀಕಾರ ತೀರಿಸಿಕೊಳ್ಳಲು ಬಂದಾಸಿಂಗ್ ತಯಾರಿ ನಡೆಸಿದ.

ಸಧೌರಾ ನಗರವನ್ನು ಪ್ರವೇಶಿಸುವ ಮೊದಲು ಅವನ ಪಡೆಗೆ ದಾಳಿಕೋರರು, ದರೋಡೆಗಾರರು, ಪುಂಡರು ಮತ್ತು ಮುಖ್ಯವಾಗಿ ಸಧೌರಾ ನಗರದ ಸರದಾರನಿಂದ ನೋವು, ಹಿಂಸಾಚಾರ, ದುರಾಚಾರ, ಅನಾಚಾರ ಅನುಭವಿಸಿದ್ದ ಹಿಂದೂ, ಸಿಖ್‌ರು ಸೇರಿದರು. ಅವರಲ್ಲಿ ಶಿಸ್ತು, ಸಂಯಮ, ಸೈನಿಕ ಶಿಕ್ಷಣಗಳ ಅಭಾವವಿದ್ದರೂ, ಪ್ರತೀಕಾರದ ಹುಮ್ಮಸ್ಸು, ಛಲ, ಎದೆಗಾರಿಕೆ ತುಂಬಿದ್ದವು. ಅವರು ನಗರಕ್ಕೆ ನುಗ್ಗಿ, ಸಿಕ್ಕಿದವರ ತಲೆ ಚಂಡಾಡಿದರು. ಊರು ನಾಶಮಾಡಿ, ಧನ ಧಾನ್ಯಗಳನ್ನು ಸೂರೆ ಮಾಡಿದರು. ಅತ್ಯಂತ ಕ್ರೂರತನದಿಂದ ಎರಡೂ ಕಡೆಯ ಸೈನಿಕರು ಕಾದಾಡಿ ಪ್ರಾಣ ತೊರೆದರು. ಸಾವಿರಾರು ಜನರ ಹತ್ಯೆ ಜರುಗಿದ ಸ್ಥಳವನ್ನು ಇಂದಿಗೂ 'ಕತಲ್ – ಗರ್‌ಹೀ' (ಹತ್ಯೆಗೀಡಾದ ಕೋಟೆ) ಎಂದು ಕರೆಯಲಾಗಿದೆ. ಆ ಯುದ್ಧದಲ್ಲಿ ನೂರಾರು ಅಮಾಯಕ ಪ್ರಜೆಗಳ ಹತ್ಯೆ ಜರುಗಿ, ಆ ನಗರದ ಪವಿತ್ರ ಮುಸ್ಲಿಮ್ ಸಂತರ ಗೋರಿಗಳನ್ನು ನಾಶಮಾಡಿದರು ಉದ್ರಿಕ್ತ ಜನರು. ೨

ಈ ಮಧ್ಯೆ ಸಟ್ಲೆಜ್ ನದಿಯ ಆಚೆಯದಡದಲ್ಲಿ ಬೀಡು ಬಿಟ್ಟಿದ್ದ ಸಿಖ್ ಪಡೆ, ನದಿ

೨. P 338 History of Sikhs by G. Singh

ದಾಟಿ ಸಧೌರಾದತ್ತ ಧಾವಿಸಲು ಅಣುವಾದಾಗ, ಅದನ್ನು ಎದುರಿಸಿತು ಮಲೆರ್‌ಕೋಟ್ಲಾದ ನವಾಬ್‌ನ ಸೈನ್ಯ. ಆತ ಸರ್‌ಹಿಂದ್‌ನ ನವಾಬನ ಸಹಾಯಕ್ಕೆ ತನ್ನ ಸೈನ್ಯವನ್ನು ಸಿದ್ಧಪಡಿಸಿದ್ದ. ಆತನ ಸೈನ್ಯದಲ್ಲಿ ಕಾದಾಟ ಎಸಗಲು ಸಾಕಷ್ಟು ಶಿಕ್ಷಣ ಪಡೆದ ಯೋಧರಿದ್ದು, ಯುದ್ಧ ಸಾಮಗ್ರಿಗಳಾದ ತೋಪು, ಬಂದೂಕು, ಮದ್ದು ಗುಂಡುಗಳಿಂದ ಶಸ್ತ್ರಸಜ್ಜಿತವಾಗಿತ್ತು. ಆದರೆ ಸಿಖ್‌ರು ಕೇವಲ ಕತ್ತಿ, ಗುರಾಣಿ, ಬಾಣ, ಬಿರುಸುಗಳನ್ನು ಹೊಂದಿದ್ದು, ಯಾವುದೇ ಸೈನಿಕ ಶಿಕ್ಷಣ ಹೊಂದಿಲ್ಲದಿದ್ದುದು ವಿಶೇಷವಾಗಿತ್ತು. ಆದರೆ, ಅವರಲ್ಲಿ ಜೀವದ ಹಂಗು ತೊರೆದು ಕಾದಾಡುವ ಹುಚ್ಚು ಧೈರ್ಯವಿದ್ದಿತು. ಅವರಲ್ಲಿ ಪ್ರತೀಕಾರದ ಮನೋಭಾವ ಮತ್ತು ಜಯ ಗಳಿಸುವೆವು ಎಂಬ ಬಲವಾದ ಮನೋಬಲ ಇದ್ದಿತು.

ಮಲೇರ್‌ಕೋಟ್ಲಾದ ಸೈನ್ಯವನ್ನು ಎದುರಿಸಿದ ಸಿಖ್ ಸೈನ್ಯ ಅತ್ಯಂತ ವೀರಾವೇಷದಿಂದ ಕಾದಾಡಿತು. ಅವರು ರಚಿಸಿದ್ದ ರಕ್ಷಣಾ ವ್ಯೂಹವನ್ನು ಬೇಧಿಸಿ, ರಣೋತ್ಸಾಹದಿಂದ ಕಾದಾಡಿ ಮುನ್ನುಗ್ಗಿ ಬಂದಾಸಿಂಗ್ ತಳ ಊರಿದ್ದ ಸ್ಥಳಕ್ಕೆ ಬಂದು ಸೇರಿತು. ಆ ಯುದ್ಧದಲ್ಲಿ ಮುಲೇರ್‌ಕೋಟ್ಲಾದ ನವಾಬ್ ಗಾಯಗೊಂಡ. ಅವನ ಬಂಧುಗಳು ಸಾವನ್ನಪ್ಪಿದರು.

ಸಿಖ್‌ಸೈನ್ಯ ತನ್ನ ನೆರವಿಗೆ ಬಂದ ತಕ್ಷಣ ಬಂದಾಸಿಂಗ್ ತಡ ಮಾಡದೆ ಸರ್‌ಹಿಂದ್ ಮೇಲೆ ಬೀಳಲು ತಯಾರಿ ನಡೆಸಿದ. ಇದೇ ಸಮಯದಲ್ಲಿ, ಸರ್‌ಹಿಂದ್ ನವಾಬ ಪಿತೂರಿ ನಡೆಸಿದ. ಅವನು ತನ್ನ ಹಿಂದೂ ಮಂತ್ರಿ ಸುಖಾನಂದನ ನೆರವಿನಿಂದ, ತನ್ನ ಒಂದು ಸೈನಿಕ ಪಡೆಯನ್ನು ಬಂದಾಸಿಂಗ್‌ನ ನೆರವಿಗೆ ಕಳುಹಿಸಿದ್ದ. ಹಿಂದೂ ಮಂತ್ರಿಯ ಪಡೆ ತನ್ನ ನೆರವಿಗೆ ಬಂದಿದೆ ಎಂದು ನಂಬಿ ಸಂತೋಷಗೊಂಡ ಬಂದಾಸಿಂಗ್.

೧೫,೦೦೦ ಸೈನಿಕರಿಂದ ಕೂಡಿದ ಮತ್ತು ಅಪಾರ ಯುದ್ಧಸಾಮಗ್ರಿಗಳನ್ನು ಹೊಂದಿದ ಸರ್‌ಹಿಂದ್‌ನ ನವಾಬನ, ಅರೆಸೇನಾ ಪಡೆ, ಅಶಿಕ್ಷಿತ, ಕೇವಲ ಕತ್ತಿ ಗುರಾಣಿ ಹಿಡಿದ, ದರೋಡೆಕೋರರ, ದೋಚಿ ಬಾಚುಕೊಳ್ಳುವ ಕಳ್ಳಕಾಕರ ಮತ್ತು ವಿವಿಧ ಬಗೆಯ ಆಕ್ರಮಣಕಾರಿಗಳ ಪಡೆಯನ್ನು ಹೊಂದಿದ್ದ ಬಂದಾಸಿಂಗ್‌ನನ್ನು ಎದುರಿಸಿತು. ಬಂದಾನ ಪಡೆಯ ಸಿಖ್‌ರಿಗೆ ತಮ್ಮ ಗುರುಗಳನ್ನು ಅವರ ವಂಶದವರನ್ನು ಹೀನಾಯವಾಗಿ ಚಿತ್ರಹಿಂಸೆ ಮಾಡಿ ಹತ್ಯೆ ಮಾಡಿದ ನೆನಪು ಮಾಸಿರಲಿಲ್ಲ. ಅವರು ಅದರ ಪ್ರತೀಕಾರಕ್ಕಾಗಿ, ಯಾವ ಬಲಿದಾನಕ್ಕೂ ಸಿದ್ಧರಾಗಿದ್ದರೆ, ಸರ್‌ಹಿಂದ್‌ನ ನವಾಬ್ ಸಿಖ್‌ರ ವಿರುದ್ಧ 'ಜಿಹಾದ್' (ಪವಿತ್ರ ಯುದ್ಧ) ಜರುಗಿಸಲು ತನ್ನ ಸೈನಿಕರಿಗೆ ಕರೆ ನೀಡಿದ.

೧೨ನೆಯ ಮೇ ೧೭೧೦ ರಲ್ಲಿ ಛಾಪ್ಪೆರ್ ಚಿರಿ ಎಂಬ ಸಮತಟ್ಟಾದ ಪ್ರದೇಶದಲ್ಲಿ ಎರಡೂ ಸೈನ್ಯ ಸಂಧಿಸಿತು. ಘನಘೋರ ಕಾಳಗ ಜರುಗಿತು. ಜೀವದ ಹಂಗು

ತೊರೆದು ಕಾದಿದ್ದ ಸಿಖ್‌ರು, ವಾಜೀರ್ ಖಾನ್‌ನ ಸೈನ್ಯವನ್ನು ನುಚ್ಚುನೂರು ಮಾಡಿತು. ರಕ್ತದ ಕೋಡಿ ಹರಿದು, ಆ ರಕ್ತದ ಮಡುವಿನಲ್ಲಿ ವಾಜೀರ್ ಖಾನ್ ಮತ್ತು ಅವನ ಅಸಂಖ್ಯಾತ ಸೈನಿಕರ ಮೃತ್ಯು ಆಯಿತು. ಸಿಖ್‌ರಲ್ಲೂ ಅನೇಕರು ಮೃತ್ಯುವಶವಾದರು.

ಎರಡು ದಿನಗಳ ಬಳಿಕ ವಿಜಯ ಗಳಿಸಿದ ಬಂದಾಸಿಂಗ್ ಮತ್ತು ಅವನ ಸಿಖ್ ಸೈನಿಕರು ಸರ್‌ಹಿಂದ್ ನಗರವನ್ನು ಪ್ರವೇಶಿಸಿದರು. ಗುರು ಗೋಬಿಂದ್ ಸಿಂಗ್‌ರ ಎಳೇ ಮಕ್ಕಳನ್ನು ಸಜೀವ ಮಾಡಿದ ಆ ಶಾಪಗ್ರಸ್ಥ ನಗರವನ್ನು ಸೂರೆ ಮಾಡಿದರು. ಸಿಖ್ ಸೈನಿಕರು, ಊರು ಕೊಳ್ಳೆ ಹೊಡೆದರು.

ಈ ಹಿಂದೆ, ಗುರು ಗೋಬಿಂದ್ ಸಿಂಗ್‌ರು, ತಮ್ಮ ಎಳೆ ಮಕ್ಕಳ ಪ್ರಾಣಾಹುತಿಯ ಸುದ್ದಿ ಕೇಳಿ ಅತೀವವಾಗಿ ನೊಂದು ಆ ನಗರಕ್ಕೆ ಮತ್ತು ಅದರ ನವಾಬನಿಗೆ ಶಾಪವಿತ್ತು ತನ್ನ ಸ್ವಹಸ್ತದಿಂದ ಹುಲ್ಲಿನ ಪೊದೆಯನ್ನು ಕತ್ತಿಯಿಂದ ಕಿತ್ತು ಹಾಕಿದ ರೀತಿಯಲ್ಲಿ ಆ ನಗರ ಧ್ವಂಸಗೊಳ್ಳುತ್ತದೆ ಎಂದು ಭವಿಷ್ಯ ನುಡಿದ ರೀತಿಯಲ್ಲೇ, ಸಿಖ್‌ರು ನಗರವನ್ನು ಧ್ವಂಶ ಮಾಡಿದರು. (ಇಂದಿಗೂ ಸಿಖ್ ಯಾತ್ರಾರ್ಥಿಗಳು, ಆ ನಗರಕ್ಕೆ ಭೇಟಿ ಮಾಡಿದಾಗ, ಅದರ ಹುಲ್ಲು, ಮಣ್ಣು, ಇಟ್ಟಿಗೆಗಳನ್ನು ತಮ್ಮ ಮುಷ್ಟಿ ಅಥವಾ ಕತ್ತಿಯಿಂದ ಕಿತ್ತು, ತಮ್ಮ ಅಸಹನೆ, ಕೋಪ, ತಾಪಗಳನ್ನು ಗುರು ಗೋಬಿಂದ್ ಸಿಂಗ್‌ರು ನೀಡಿದ್ದ ಶಾಪದ ಜ್ಞಾಪಕಾರ್ಥ ಮಾಡುವ ರೂಢಿ ಜಾರಿಗೆ ತಂದಿರುತ್ತಾರೆ.)

ನಗರದ ಕ್ರೂರಿ, ಕಪಟಿ, ಕುಲದ್ರೋಹಿ ಬ್ರಾಹ್ಮಣ ಮಂತ್ರಿ ಸುಚಾನಂದ್‌ನ ಮನೆಗೆ ನುಗ್ಗಿ ಅಪಾರ ಧನ ದಾನ್ಯ ಲೂಟಿ ಮಾಡಿದರು. ೩

ಸರ್‌ಹಿಂದ್ ನಗರದ ರಾಜ್ಯಪಾಲನನ್ನಾಗಿ ಬಾಜ್‌ಸಿಂಗ್‌ನೆಂಬ ನೆಚ್ಚಿನ ಸಿಖ್‌ನನ್ನು ನೇಮಕ ಮಾಡಿದ ಬಂದಾ, ಸಮಾನಾ ಮತ್ತು ಧನುಸರ್‌ಗಳಲ್ಲಿ ತನ್ನವರನ್ನು ನೇಮಕ ಮಾಡಿ, ಸರ್‌ಹಿಂದ್‌ನ್ನು ಗೆದ್ದರೂ, ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಳ್ಳದೆ, ಸಧೌರಾ ನಗರದ ಹತ್ತಿರವಿರುವ ಗುಡ್ಡಗಾಡು ಪ್ರದೇಶದ ಬಳಿ ಇರುವ ಮುಖ್ಲಿಸ್‌ಪುರವನ್ನು ಆಯ್ಕೆ ಮಾಡಿದ. ಅಲ್ಲಿ ಒಂದು ಕೋಟೆ ಕಟ್ಟಿ ಅದಕ್ಕೆ ಲೋಹಗಡ್ ಎಂದು ಕರೆದ. ಬಂದಾಸಿಂಗ್ ರಾಜ ಪದವಿ ಪಡೆದು, ತಾನು ಗೆದ್ದ ಪ್ರದೇಶಗಳನ್ನು ಆಳತೊಡಗಿದ. ಅವನು ಟಂಕಸಾಲೆ ನಿರ್ಮಿಸಿ, ನಾಣ್ಯಗಳನ್ನು ತನ್ನ ಹೆಸರಿನಲ್ಲಿ ಅಚ್ಚು ಹಾಕಿಸದೆ, ಗುರು ಗೋಬಿಂದ್ ಸಿಂಗ್‌ರ ಹೆಸರಿನಲ್ಲಿ ಅಚ್ಚು ಹಾಕಿಸಿದ.

ಬಂದಾಸಿಂಗ್‌ನಿಗೆ ಅರಿವಾಗಿತ್ತು, ದೆಹಲಿಯ ಬಾದಶಹಾನ ಬಲ ಮತ್ತು ಸೈನಿಕ ಶಕ್ತಿ. ಮೊಘಲ್‌ರ ವಿರುದ್ಧ ಅವನು ಎಸಗಿದ ವಿರೋಧದ ಕಹಳೆ ದೆಹಲಿಯ ಮೊಘಲ್ ಬಾದಶಹಾ ಬಹಾದೂರ್ ಶಹಾನ ಕಿವಿಗಳಿಗೆ ಮುಟ್ಟಿ, ಅವನು ತನ್ನ ವಿರುದ್ಧ ತೆಗೆದುಕೊಳ್ಳಬಹುದಾದ ಯುದ್ಧಾಚರಣೆಯನ್ನು ತಡೆಗಟ್ಟಲು ತಯಾರಿ

---

೩. P 97 Later Mughals by Irvine 'Even Mahammadan writers have nothing to say in this man's favours. . .'

ನಡೆಸಿದ. ಬಂದಾಸಿಂಗ್ ತನ್ನ ಬಲ ಮತ್ತು ಪ್ರತಿಷ್ಠೆಗಳನ್ನು ಬೆಳೆಸಿಕೊಳ್ಳಲು ಸುತ್ತಲೂ ಇರುವ ರಾಜ ಮತ್ತು ಸರದಾರರ ನೆರವನ್ನು ಪಡೆಯಬೇಕಾಗಿತ್ತು. ಅವನು ಸಹರಾನ್‌ಪುರ, ಜಲಾಲಾಬಾದ್, ಜಲಂಧರ್, ಹೋಶಿಯಾರಪುರ ಮುಂತಾದ ನಗರ ಪ್ರದೇಶಗಳ ಮೇಲೆ ದಂಡೆತ್ತಿ ಹೋಗಿ, ಅವುಗಳನ್ನು ಆಕ್ರಮಿಸಿದ.

ಮಾಜ್ಹಾ ಪ್ರದೇಶದ ಸಿಖ್‌ರು ತಮ್ಮನ್ನು ಆಳುತ್ತಿದ್ದ ಮುಸ್ಲಿಮ್ ಸರದಾರರ ವಿರುದ್ಧ ದಂಗೆ ಎದ್ದು, ಬಾಟಾಲಾ ಕಲಾನೌರ್ ಮತ್ತು ಪಥಾನ್‌ಕೋಟ್ ಪ್ರದೇಶಗಳನ್ನು ವಶಪಡಿಸಿಕೊಂಡರು. ಲಾಹೋರ್ ನಗರದ ಬಾಗಿಲು ಬಡಿಯತೊಡಗಿದ ಸಿಖ್‌ರ ಶಕ್ತಿ ಕಂಡ, ನಗರದ ರಾಜ್ಯಪಾಲ ಅಸ್ಲಾಮ್ ಖಾನ್ ಭಯಗೊಂಡು, ಕೋಟೆಯೊಳಗೆ ಅಡಗಿ ಕುಳಿತ.

ದೆಹಲಿಯ ಬಾದಶಹಾ ಬಹದೂರ್ ಶಹಾನಿಗೆ ಸುದ್ದಿ ಅರಿತು ಗಾಬರಿಯಾದ. ಅವನು ೨೭ನೆಯ ಜೂನ್ ೧೭೧೦ ರಂದು ಬೃಹತ್ ಸೈನ್ಯವನ್ನು ಸಂಘಟಿಸಿ, ತಾನೇ ಖುದ್ದಾಗಿ ಅದರ ನೇತೃತ್ವ ವಹಿಸಿ ಪಂಜಾಬ್‌ನತ್ತ ತೆರಳಿದ.

ಮೊಘಲ್‌ರ ಅಪಾರ ಸೈನ್ಯದ ಬಲದ ಮುಂದೆ ಸಿಖ್‌ರು ತಮ್ಮ ಬೇಳೆ ಬೇಯುವುದಿಲ್ಲ ಎಂದು ಅರಿತು ಅವರು ನೇರವಾಗಿ ಅವರ ಸೈನ್ಯವನ್ನು ಎದುರಿಸದೆ, ತಮ್ಮ ಮುಖ್ಯ ಠಾಣೆಯಾದ ಲೋಹ್‌ಗಡಕ್ಕೆ ಸೇರಿ ಅಲ್ಲಿ ಸ್ಥಳ ಊರಿದರು. ಮೊಘಲ್‌ರು ಸಧೌರಾ ತಲುಪಿದೊಡನೆ ಸಿಖ್‌ರು ಅವರ ಮೇಲೆ ದಾಳಿ ನಡೆಸಿ ಹೋರಾಡಿದರು. ಆದರೆ ಬಲಿಷ್ಠ ಮೊಘಲ್ ಸೈನ್ಯವನ್ನು ಸೋಲಿಸಲಾಗದೆ, ಅವರು ಅಪಾರ ಸಾವು ನೋವು ಅನುಭವಿಸಿ, ಲೋಹ್‌ಗಡ್ ಕೋಟೆಯೊಳಗೆ ಸೇರಿ ರಕ್ಷಣೆ ಪಡೆದರು.

ಮೊಘಲರು ಕೋಟೆಯನ್ನು ಸುತ್ತುವರೆದರು. ಕೋಟೆಯ ಒಳಗಿದ್ದವರಿಗೆ ಅನ್ನ ನೀರು ಸಿಗದಂತೆ ಮಾಡಿದರು. ಸಿಖ್‌ರು ಆಹಾರದ ಕೊರತೆಯಿಂದ ಬಳಲಿದರು. ಉಪಾಯ ಕಾಣದೆ, ಬಂದಾಸಿಂಗ್ ತನ್ನ ಸಂಗಡಿಗರೊಂದಿಗೆ, ರಾತ್ರೋ ರಾತ್ರಿ ಕೋಟೆಯಿಂದ ಹೊರಬಿದ್ದ. ತನ್ನನ್ನು ಸುತ್ತುವರೆದ ಮೊಘಲ್‌ರಿಂದ ತಪ್ಪಿಸಿಕೊಂಡು, ನಾಹನ್ ಬೆಟ್ಟಗಳಲ್ಲಿ ಅವಿತುಕೊಂಡ.

ಮಾರನೆಯ ಬೆಳಿಗ್ಗೆ ಕೋಟೆಯನ್ನು ಆಕ್ರಮಿಸಿಕೊಂಡ ಮೊಘಲ್ ಸೈನ್ಯಕ್ಕೆ ಬಂದಾಸಿಂಗ್‌ನ ವೇಷ ತೊಟ್ಟ ಒಬ ಸಿಖ್ ಮತ್ತು ಕೆಲವು ಅನುಚರರು ಕಣ್ಣಿಗೆ ಬಿದ್ದರು. ಬಹಾದ್ದೂರ್ ಶಹಾನ ಕೋಪ ನೆತ್ತಿಗೇರಿ, ಬಂದಾ ಎಲ್ಲೇ ಇರಲಿ ಅವನನ್ನು ಅಥವಾ ಅವನ ಶವವನ್ನು ಹಿಡಿದು ತರಲು ತನ್ನ ಸೈನ್ಯಾಧಿಕಾರಿ ಹಮೀದ್ ಖಾನ್‌ನಿಗೆ ಆಜ್ಞಾಪಿಸಿದ. ಬಂದಾಸಿಂಗ್‌ನನ್ನು ಸೆರೆ ಹಿಡಿಯಲು ಸಾಧ್ಯವಾಗದ ಮೊಘಲ್‌ರಿಗೆ ಲೋಹ್‌ಗಡ್‌ನಲ್ಲಿ ಹೂತಿಟ್ಟಿದ್ದ ಅಪಾರ ಪ್ರಮಾಣದ ನಾಣ್ಯ ದೊರಕಿತು ಎಂದರು ಇತಿಹಾಸಕಾರರು. ೪

೪. P 336 History of Sikh People by G.Singh

ಇತ್ತ ಮೊಘಲ್‌ರಿಂದ ತಪ್ಪಿಸಿಕೊಂಡ ಬಂದಾಸಿಂಗ್ ಪುನಃ ಸಿಖ್‌ರನ್ನು ಒಗ್ಗೂಡಿಸಿದ. ಸೈನ್ಯ ಕಟ್ಟಿದ. ಗುಡ್ಡಗಾಡು ಪ್ರದೇಶದ ರಾಜರನ್ನು ಸೋಲಿಸಿ ಅವರಿಂದ ಕಪ್ಪ ಕಾಣಿಕೆ ವಸೂಲಿ ಮಾಡಿದ. ಅವನ ಈ ಪ್ರಯತ್ನದಲ್ಲಿ ಚಂಬಾ ಪ್ರದೇಶದ ರಾಜ ತನ್ನ ರಾಜಕುವರಿಯನ್ನು ಬಂದಾನಿಗೆ ನೀಡಿ ಲಗ್ನ ಮಾಡಿದ. ಅವಳಿಂದ ಒಂದು ಗಂಡು ಮಗು – ಅಜೈ ಸಿಂಗ್ – ವಿನ ತಂದೆಯಾದ ಬಂದಾಸಿಂಗ್.

ಕ್ರಮೇಣ ಬಂದಾಸಿಂಗ್, ಸುತ್ತಮುತ್ತಲಿನ ಪ್ರದೇಶಗಳಾದ ರಾಯ್‌ಪುರ, ಬೆಹ್ರಾಂಪುರ, ಕಲಾನೌರ್ ಮತ್ತು ಬಾತಾಲಾಗಳನ್ನು ಆಕ್ರಮಿಸಿದ. ಬಂದಾನ ಆಕ್ರಮಣ ಮತ್ತು ಸಾಮ್ರಾಜ್ಯ ವಿರೋಧಿ ಚಟುವಟಿಕೆಗಳಿಂದ ಬಾದ್‌ಶಹಾ ಕೆರಳಿ, ಪ್ರಬಲ ಸೈನ್ಯವನ್ನು ಅವನ ವಿರುದ್ಧ ಕಾಳಗ ಜರುಗಿಸಲು ಕಳುಹಿಸಿದ. ಸುದ್ದಿ ಅರಿತ ಬಂದಾ ಪುನಃ ಕಾಡುಮೇಡು ಸೇರಿದ. ಬಾದ್‌ಶಹಾ ಅವನನ್ನು ಸೆರೆ ಹಿಡಿಯಲಾರದೆ, ಸಿಕ್ಕಲ್ಲಿ ಸಿಖ್‌ರನ್ನು ಕೊಲ್ಲುವಂತೆ ಆಜ್ಞೆ ನೀಡಿ ತೃಪ್ತಿ ಪಟ್ಟುಕೊಂಡ. ಆದರೆ, ಬಾದ್‌ಶಹಾನಿಗೆ ಸಾವು ಸನ್ನಿಹಿತವಾಗಿತ್ತು. ಅವನಿಗೆ ಹುಚ್ಚು ಹಿಡಿದು, ಸಾವನ್ನಪ್ಪಿದ. (೧೮ ಫೆಬ್ರವರಿ ೧೭೧೨) ಅವನ ಮಗ ಫರೂಖ್ ಸಿಯಾರ್ ದೆಹಲಿ ಸಿಂಹಾಸನವನ್ನೇರಿದ.

ಪಂಜಾಬ್ ಪ್ರಾಂತ್ಯದ ಮೊಘಲ್ ರಾಜ್ಯಪಾಲ ಅಬ್ದುಲ್ ಸಮದ್ ಮತ್ತು ಅವನ ಮಗ ಜಮ್ಮು ಪ್ರದೇಶದ ಫೌಜುದಾರನಾಗಿದ್ದ ಜಕರಿಯಾ ಖಾನ್ ಮಾತ್ರ ಸುಮ್ಮನೆ ಕೂಡದೆ, ಬಂದಾನ ವಿರುದ್ಧ ಕಾಳಗ ಜರುಗಿಸಿದರು. ಅವರ ಪ್ರಬಲ ಯುದ್ಧಪ್ರವೀಣರಾದ ಯೋಧರು ಬಂದಾನ ಸಿಖ್‌ಸೈನ್ಯವನ್ನು ಎದುರಿಸಿ, ಬಂದಾನನ್ನು ಕಾಡಿಗೆ ಓಡಿಸುವುದರಲ್ಲಿ ಸಫಲರಾದರು. ಇದೇ ಸಮಯದಲ್ಲಿ ಜಮ್ಮೂವಿನ ಗುಡ್ಡಗಾಡಿನಲ್ಲಿ ಅವಿತಿರುವಾಗಲೇ, ಬಂದಾ ಎರಡನೇ ಬಾರಿ ಲಗ್ನವಾದ. ಅವನಿಗೆ ಒಂದು ಗಂಡು ಮಗುವಾಗಿ ಅದಕ್ಕೆ ರಣಜಿತ್ ಸಿಂಗ್ ಎಂದು ಹೆಸರಿಟ್ಟ. ಮೊಘಲ್‌ರ ವಿರುದ್ಧ ಕಾದಾಡಲು, ತಾನು ಕಳೆದುಕೊಂಡ ಪ್ರದೇಶಗಳನ್ನು ಪುನಃ ಪಡೆದುಕೊಳ್ಳಲು ಸೂಕ್ತ ಸಮಯಕ್ಕೆ, ಅವಕಾಶಗಳಿಗೆ ಕಾದು ಕುಳಿತ. ಆದರೆ ವಿಧಿಯ ಆಟದ ಮುಂದೆ ಅವನು ತಲೆಬಾಗಬೇಕಾಗಿತ್ತು.

ಈಗಾಗಲೇ ಸಾಕಷ್ಟು ಸಾವು ನೋವು, ಸಂಕಟ, ಪರದಾಟಗಳಿಗೆ ಗುರಿಯಾಗಿದ್ದ ಸಿಖ್‌ರಲ್ಲಿ ತಮ್ಮ ಆದಿ ಗುರುಗಳ ಆಧ್ಯಾತ್ಮ ಜೀವನ, ಅವರು ಹಾಕಿಕೊಟ್ಟ ದಾರಿ ತಪ್ಪಿ ಕೇವಲ ಹೊಡೆದಾಟ, ಕದನ, ಹಿಂಸಾಚಾರಗಳಿಗೆ ಪ್ರಾಮುಖ್ಯತೆ ನೀಡಿ ಹೋರಾಡುತ್ತಿದ್ದ ಬಂದಾಸಿಂಗ್‌ನ ಜೀವನ ಕ್ರಿಯೆಗಳಿಗೆ ವಿರೋಧ ಏರ್ಪಟ್ಟು, ಅವರಲ್ಲಿ ಐಕ್ಯತೆಯ ಕೊರತೆ ಕಾಣಿಸಿಕೊಂಡಿತು.

ಕೆಲವು ಇತಿಹಾಸಕಾರರ ಪ್ರಕಾರ, ಗುರು ಗೋಬಿಂದ್ ಸಿಂಗ್‌ರ ಪತ್ನಿ ಮಾತಾಸುಂದರಿ, ಅಜಿತ್‌ಸಿಂಗ್ ಎಂಬ ಹುಡುಗನನ್ನು ದತ್ತು ಪಡೆದುಕೊಂಡು, ದೆಹಲಿಯಲ್ಲಿ ಜೀವನ ಸಾಗಿಸುತ್ತಿದ್ದಳು. ಆಕೆ ಬಂದಾಸಿಂಗ್‌ನ ಆಕ್ರಮಣಕಾರಿ ಮತ್ತು ಹೋರಾಡುವ ಜೀವನ ಶೈಲಿಯನ್ನು ಒಪ್ಪದೆ, ಗುರುಗಳ ಆಧ್ಯಾತ್ಮಿಕ ಜೀವನ ಸಾಗಿಸುವ ಕಾರ್ಯದಲ್ಲಿ

ಹಿನ್ನಡೆ ಸಾಧಿಸುವ ಅವನ ನೀತಿರೀತಿಗಳ ಬಗ್ಗೆ ತಕರಾರು ಹೂಡಿ, ಸಿಖ್‌ರಿಗೆ ಒಂದು 'ಹುಕುಮ್ ನಾಮಾ' ಹೊರಡಿಸಿ, ಬಂದಾಸಿಂಗ್‌ನನ್ನು ಅನುಸರಿಸದೆ, ಅವನನ್ನು ದೂರವಿರಿಸಿ, ಗುರುಗಳ ನಿಜವಾದ ತತ್ತ್ವವಿಚಾರಗಳನ್ನು ಪಾಲಿಸಬೇಕೆಂದು ಕರೆ ನೀಡಿದರು. ಅವಳು ಅವನ ವಿನಾಶಕ್ಕೆ ಒಂದು ಶಾಪ ಕೂಡ ಇತ್ತರು ಎಂದು ಒಂದು ಪ್ರತೀತಿ ಇದೆ. ೫

ಸಿಖ್‌ರಲ್ಲಿ ಒಡಕುಂಟಾಗಿ, 'ತತ್' ಮತ್ತು 'ಬಂದೈಖಾಲ್ಸಾ' ಎಂಬ ಎರಡು ವಿಂಗಡವಾಗಿ, ಬಂದಾನ ಶಕ್ತಿ ಕುಂದಿತು ಎಂದ ಇತಿಹಾಸಕಾರ ವಿರುದ್ಧ ಕೆಲವರು ಅಲ್ಲಗಳೆದಿದ್ದಾರೆ. ಆದರೆ ಅದು ಹೇಗಿದ್ದರೂ, ಸಿಖ್‌ರಲ್ಲಿ ಭಿನ್ನಮತ ಏರ್ಪಟ್ಟಿದ್ದು ಮಾತ್ರ ಸುಳ್ಳಲ್ಲವೆಂದು ಹೇಳಬಹುದಾಗಿದೆ. ಭಾರತೀಯ ಯಾವುದೇ ಜನಾಂಗದಲ್ಲಿ ಸ್ವಾಭಾವಿಕವಾಗಿ ಒಗ್ಗಟ್ಟಿನ ಕೊರತೆಯಿದ್ದು, ಅನೈಕ್ಯತೆಯ ವ್ಯಾಧಿ ಅವರ ರಕ್ತದಲ್ಲಿ ಹರಡಿ ನರಳುವ ವಿಷಯ ಸರ್ವರಿಗೂ ಅರಿಯುವದಾಗಿದ್ದು, ಸಿಖ್‌ರ ಒಕ್ಕೂಟದಲ್ಲಿ ಈ ವ್ಯಾಧಿ ಅಂಟಿಕೊಂಡು ಅವರು ನರಳತೊಡಗಿದ್ದರಲ್ಲಿ ವಿಶೇಷತೆ ಇರಲಿಲ್ಲ. ಶತಮಾನಗಳ ಕಾಲ ವಿದೇಶೀಯರ ಆಳ್ವಿಕೆಗೆ ತುತ್ತಾದರೂ, ತಮ್ಮ ಜಡತನ, ಆಲಸ್ಯ ಗುಲಾಮಗಿರಿಗಳನ್ನು ತೊಡೆದು ಹಾಕಿ, ಸ್ವಾಭಿಮಾನದ ಕೆಚ್ಚು, ಸ್ವತಂತ್ರ ಮನೋಭಾವವುಳ್ಳ ಹುಮ್ಮಸ್ಸು, ಧೈರ್ಯ, ಉತ್ಸಾಹ ಹೊಂದುವ ಸಾಮರ್ಥ್ಯ ಪಡೆಯುವ ಕರ್ಮಕ್ಕೆ ಕೈಹಾಕದೆ ದಿನ ನೂಕುವ ಭಾರತೀಯ ದಾಸ್ಯತನವನ್ನು ವಿದೇಶೀಯ ಆಕ್ರಮಣಕಾರರು ಉಪಯೋಗಿಸಿಕೊಂಡು, ಸುಲಭವಾಗಿ ತಮ್ಮ ಪ್ರಭುತ್ವ ಸ್ಥಾಪಿಸಿದ್ದರು.

ಬಂದಾಸಿಂಗ್, ಗುರು ಗೋಬಿಂದ್ ಸಿಂಗ್‌ನ ಶಿಷ್ಯನಾಗಿ, ಹುಚ್ಚು ಧೈರ್ಯ ಸಾಹಸಗಳಿಂದ ಸಿಖ್‌ರನ್ನು ಎತ್ತಿಕಟ್ಟಿ ಮೊಘಲ್‌ರ ವಿರುದ್ಧ ಕಾಳಗ ಜರುಗಿಸಿದರೂ, ಒಳಜಗಳ, ಪಿತೂರಿ, ಅನೈಕ್ಯತೆ, ಹಿಂದೂ ರಾಜ ಮಹಾರಾಜರ ವೈರತ್ವ, ಅಸಹಕಾರ, ಮೊಘಲ್ ಚಕ್ರಾಧಿಪತ್ಯಕ್ಕೆ ದಾಸರಾಗಿ ಬದುಕುವ ಅವರ ಮನೋಧರ್ಮ ಎಲ್ಲವೂ ಅವನ ಮನೋಭಿಲಾಶೆಗಳಿಗೆ ಅಡ್ಡಿ ಆತಂಕ ಉಂಟು ಮಾಡಿದವು.

ಬಲಿಷ್ಠ ಮೊಘಲ್ ಸೈನ್ಯದ ವಿರುದ್ಧ ಹೋರಾಟ ಸಾಗಿಸಲಾಗದೆ, ಬಂದಾಸಿಂಗ್, ತನ್ನ ಕೆಲವು ಸಂಗಡಿಗರೊಂದಿಗೆ, ಗುರುದಾಸ್ ಪುರದ ಬಳಿ ಒಂದು ಕೋಟೆ ನಿರ್ಮಿಸಿ ಅಲ್ಲಿ ತಳ ಊರಿದನು. ಆದರೆ, ಅವನು ಅಲ್ಲಿ ನಿಂತಿದ್ದೇ ತಪ್ಪಾಗಿ, ಬಲವಿಲ್ಲದ ಸಾಕಷ್ಟು ರಕ್ಷಣೆಯಿಲ್ಲದ ಆ ತಾಣವನ್ನು ಮೊಘಲ್ ಸೈನ್ಯ ಸುಲಭವಾಗಿ ಆಕ್ರಮಿಸಿಕೊಳ್ಳುವಂತಿತ್ತು. ಮೊಘಲರು ಕೋಟೆಯನ್ನು ಸುತ್ತುವರೆದು, ಒಳಗಿದ್ದವರನ್ನು ಹಸಿವು ನೀರಡಿಕೆಗಳಿಂದ ನರಳುವಂತೆ ಮಾಡಿದರು. ಅವರು ಕೋಟೆಯೊಳಗೆ ನುಗ್ಗಿ, ಸಿಖ್‌ರೊಂದಿಗೆ ಸೆಣಸಾಟ ನಡೆಸಿದರೆ, ಅವರ ಸಾವು ನೋವಿನ ಜೊತೆಗೆ, ಬಂದಾಸಿಂಗ್ ತಪ್ಪಿಸಿಕೊಳ್ಳುವ ಸಾಧ್ಯತೆ ಹೆಚ್ಚಾಗಿತ್ತು. ಅವರ ಹಂಚಿಕೆ ಕೆಲಸ ಮಾಡಿತ್ತು. ಬಂದಾ

೫. P 348 FN History of Sikh People by G.Singh

ಮತ್ತು ಸಿಖ್ಖರು ಹಸಿವಿನಿಂದ ನರಳಿ ಸಂಕಟಪಟ್ಟು, ಸಾಯುವಂತಾದರು. ಸುಮಾರು ೯ ತಿಂಗಳ ಕಾಲ ಹಸಿವು ನೀರಡಿಕೆಗಳಿಂದ ಕಂಗಾಲಾದ ಸಿಖ್ಖರು ಮರಣವನ್ನಪ್ಪುವ ಸಮಯಕ್ಕೆ ಬಂದರು. ಬಂದಾಸಿಂಗ್, ಅಪಾರ ಸಂಖ್ಯೆಯಲ್ಲಿ ತನ್ನ ಸೈನಿಕರು ಹಸಿವೆಯಿಂದ ನರಳಿ ಸಾಯುವುದನ್ನು ಕಂಡು ಮರುಗಿ, ಶರಣಾಗುವುದೇ ಮೇಲು ಎಂದು ಬಗೆದು, ಕೋಟೆಯ ಬಾಗಿಲು ತೆರೆದು ಅಳಿದುಳಿದ ಸೈನಿಕರೊಂದಿಗೆ ಹೊರಬಂದ. ಸಾಯುವ ತನಕ ಹೋರಾಡದೆ, ಶತ್ರುವಿಗೆ ಶರಣಾಗುವ ಕಾರ್ಯ ಮಾಡಿದ್ದು, ಗುರು ಗೋಬಿಂದ್ ಸಿಂಗ್‌ರ ಉಪದೇಶಕ್ಕೆ ವಿರುದ್ಧವಾಗಿದ್ದುದು ದುರದೃಷ್ಟಕರ ಎಂದು ಪರಿತಪಿಸಿದರು ಇತಿಹಾಸಕಾರರು. ೬

ಶರಣಾದ ಮೂರರಿಂದ ನಾಲ್ಕು ಸಾವಿರ ಸಿಖ್ಖರ ಹತ್ಯೆಯನ್ನು ಆ ಕೂಡಲೇ ಮಾಡಿದರು ಮೊಘಲರು. ಅವರ ತಲೆಗಳನ್ನು ಹುಲ್ಲಿನಿಂದ ತುಂಬಿ, ಭರ್ಜಿಗಳಿಗೆ ಕಟ್ಟಿ, ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ಖೈದಿಯಾದ ಬಂದಾಸಿಂಗ್‌ನಿಗೆ ರಾಜನ ಪೋಷಾಕು ಹಾಕಿ, ಒಂದು ಕಬ್ಬಿಣದ ಬೋನಿನಲ್ಲಿ ಅವನನ್ನು ಇರಿಸಿ, ಒಂದು ಆನೆಯ ಮೇಲೆ ಕುಳ್ಳಿರಿಸಿ ಅವನ ಮೆರವಣಿಗೆ ಮಾಡಲಾಯಿತು.

ಅವರನ್ನು ಊರೂರುಗಳಲ್ಲಿ ಮೆರವಣಿಗೆಯಲ್ಲಿ ತಂದನಂತರ, ಲಾಹೋರ್ ನಗರದ ಬೀದಿ ಬೀದಿಗಳಲ್ಲಿ ಮೆರವಣಿಗೆ ಮಾಡಿ, ಜನರಿಂದ ಬೈಗಳದ ಸುರಿಮಳೆ ಮಾಡಿಸಿದರು. ಅನಂತರ ಅವನನ್ನು ಮತ್ತು ಅವನ ಸುಮಾರು ಒಂದು ಸಾವಿರ ಸಿಖ್ ಸೈನಿಕರನ್ನು ದೆಹಲಿಗೆ ಕೊಂಡೊಯ್ಯಲಾಯಿತು.

ಫೆಬ್ರವರಿ ೧೯ನೆಯ ೧೭೧೬ರಂದು, ದೆಹಲಿಗೆ ಕರಕಲಾದ ಅವರ ಮುಖಕ್ಕೆ ಕಪ್ಪು ಮಸಿ ಬಳೆದು, ಅವಮಾನಕರವಾದ ರೀತಿಯಲ್ಲಿ ಅವರನ್ನು ರಾಜಬೀದಿಯಲ್ಲಿ ಮೆರವಣಿಗೆ ಮಾಡಲಾಯಿತು. ಆದರೆ, ಈ ರೀತಿ ಅವಮಾನಗೊಂಡ ಸಿಖ್ಖರ ಮುಖಗಳಲ್ಲಿ, ನೋವು, ಹಿಂಸೆಯ ಕುರುಹು ಕಾಣದೆ, ಅಪೂರ್ವ ತೇಜಸ್ಸು, ಕಾದಿರುವ ಸಾವಿನ ಭಯವನ್ನು ಧಿಕ್ಕರಿಸುವ ರೀತಿಯಲ್ಲಿ ಅವರು ನಡೆದುಕೊಂಡಿದ್ದನ್ನು ಇತಿಹಾಸಕಾರರು ದಾಖಲಿಸಿದರು. ೭

ಪ್ರತಿದಿನ ೨೦೦ ರಿಂದ ೩೦೦ ಸಿಖ್ಖರ ಹತ್ಯೆ ಜರುಗಿಸಿದರು ಮೊಘಲ್‌ರು. ಇಸ್ಲಾಮ್ ಸ್ವೀಕರಿಸಿದರೆ, ಸಾವು ತಪ್ಪಿ, ಕ್ಷಮಾದಾನ ನೀಡುವೆವು ಎಂಬ ಶರತ್ತಿಗೆ ಒಪ್ಪದ ಸಿಖ್ಖರು ಕತ್ತಿಗೆ ತಲೆಬಾಗಿದರು. ಒಬ್ಬನೇ ಒಬ್ಬ ಸಿಖ್ ಇಸ್ಲಾಮ್ ಸ್ವೀಕರಿಸಲು ಒಪ್ಪದೆ, ಕಟುಕನ ಖಡ್ಗಕ್ಕೆ ತಲೆ ಒಪ್ಪಿಸಿದ್ದು, ಅಪೂರ್ವ ಸಂಗತಿಯಾಗಿದೆ ಎಂದಿದ್ದಾರೆ ಇತಿಹಾಸಕಾರರು. ೮

---

೬. P 351 History of Sikh People by G. Singh
೭. P 351 History of Sikh People by G.Singh
೮. P 355

ಒಬ್ಬ ಸಿಖ್ ಬಾಲಕನ ತಾಯಿ ಮಧ್ಯೆ ಪ್ರವೇಶಿಸಿ ತನ್ನ ಮಗ ಸಿಖ್‌ನಾಗಿಲ್ಲವೆಂದು ಅವನ ಪ್ರಾಣ ಉಳಿಸಬೇಕೆಂದು ಕೇಳಿಕೊಂಡಾಗ, ಆ ಬಾಲಕ ತನ್ನ ತಾಯಿ ಸುಳ್ಳು ಹೇಳುತ್ತಾ ಇದ್ದಾರೆಂದು ಹೇಳಿ, ತಾನು ಸಿಖ್ ಮತಾವಲಂಬಿ ಎಂದು ಸಾರಿ, ತನ್ನ ತಲೆಯನ್ನು ಒಪ್ಪಿಸಿದ. ೯, ೧೦

ಜೂನ್ ೯ನೆಯ ೧೭೧೬ ರಂದು, ಬಂದಾಸಿಂಗ್ ಮತ್ತು ಅವನ ೨೬ ಸಂಗಡಿಗರನ್ನು ಕುತುಬ್ ಮಿನಾರನ ಬಳಿ ಇದ್ದ ಬಹದ್ದೂರ್ ಶಹಾನ ಸಮಾಧಿ ಸ್ಥಳಕ್ಕೆ ಮೆರವಣಿಗೆಯಲ್ಲಿ ಕೊಂಡೊಯ್ದು, ಸಮಾಧಿಗೆ ಪ್ರದಕ್ಷಿಣೆ ಹಾಕಿಸಿ, ಅವರನ್ನು ಒಬ್ಬೊಬ್ಬರನ್ನಾಗಿ ಹತ್ಯೆ ಮಾಡಿದರು. ಅಂತಿಮವಾಗಿ, ಬಂದಾಸಿಂಗ್‌ನನ್ನು ಚಿತ್ರಹಿಂಸೆ ಮಾಡಿ ಹತ್ಯೆ ಮಾಡಿದರು. ಮೊದಲು ಅವನ ತೊಡೆಯ ಮೇಲೆ ಅವನ ೩ ವರ್ಷದ ಮಗು ಅಜೈಸಿಂಗ್‌ನನ್ನು ಇರಿಸಿ, ಮಗುವಿನ ಹತ್ಯೆ ಮಾಡುವಂತೆ ತಂದೆಗೆ ಹೇಳಿದರು. ಬಂದಾಸಿಂಗ್ ಅದನ್ನು ಪಾಲಿಸದ ಕಾರಣ, ಮಗುವನ್ನು ಅವನ ಕಣ್ಣೆದುರು ಹತ್ಯೆಮಾಡಿ, ಅದರ ದೇಹವನ್ನು ತುಂಡು ತುಂಡು ಮಾಡಿ, ಅದರ ಹೃದಯ ಭಾಗವನ್ನು ಬಂದಾಸಿಂಗ್‌ನ ಬಾಯಿಗೆ ತುರುಕಿದರು. ಬಂದಾಸಿಂಗ್ ಮಾತ್ರ ನಿರ್ಲಿಪ್ತನಾಗಿ, ತನಗೆ ನೀಡುತ್ತಿದ್ದ ಹಿಂಸಾಚಾರವನ್ನು ದೈವೇಚ್ಛೆಯೆಂದು ನಂಬಿ ನಿಂತಿದ್ದನ್ನು ಇತಿಹಾಸಕಾರರು ಬಣ್ಣಿಸಿರುತ್ತಾರೆ. ೧೧

ಬಂದಾಸಿಂಗ್‌ನ ಅಮಾನುಷ ಹತ್ಯೆಯನ್ನು ಇತಿಹಾಸಕಾರರು ಈ ರೀತಿ ವಿವರಿಸುತ್ತಾರೆ :

'ಅವನ ಕಣ್ಣುಗಳನ್ನು ಒಂದೊಂದಾಗಿ ಕಿತ್ತು ಹಾಕಲಾಯಿತು. ಅವನ ಕೈ ಕಾಲುಗಳನ್ನು ಕಡಿದು ಹಾಕಿದರು. ಅವನ ದೇಹವನ್ನು ಕಾದ ಸಳಿಕೆಗಳಿಂದ ಚುಚ್ಚಿ ಹರಿದು ಹಾಕಿದರು. ಅಂತಿಮವಾಗಿ ಅವನ ತಲೆ ಕಡಿದರು. ೧೨

ಬಂದಾಸಿಂಗ್‌ನ ಗುಣಗಾನ

ಕೇವಲ ೭ ವರ್ಷಗಳ ಕಾಲ ಹೋರಾಟ ಜರುಗಿಸಿ, ಪ್ರಬಲ ಮೊಘಲ್ ಸಾಮ್ರಾಜ್ಯವನ್ನು ಬಲವಾಗಿ ಅಲುಗಾಡಿಸಿ ಅದರ ಅಸ್ತಿತ್ವಕ್ಕೆ ಪೆಟ್ಟು ಹಾಕಿದ ಕೀರ್ತಿ ಬಂದಾಸಿಂಗ್‌ನದಾಗಿದೆ ಎಂದರು ಇತಿಹಾಸಕಾರರು. 'ಸಿಖ್‌ರ ಪ್ರಥಮ ಸಾಮ್ರಾಜ್ಯ ಸ್ಥಾಪಕ, ಹಿಂದೂಗಳ ರಾಷ್ಟ್ರೀಯ ನಾಯಕ, ಕ್ರೂರ ಸರ್ವಾಧಿಕಾರಿಗಳ ವಿನಾಶಕ' ಎಂದು ಬಣ್ಣಿಸಿಕೊಂಡ ಬಂದಾಸಿಂಗ್‌ನನ್ನು ಬಹದ್ದೂರ್ ಶಹಾ ಕಾದಾಡಬೇಕಾಯಿತು.

೯. P 352 IBID
೧೦. P 318 Later Mughals by Irvine
೧೧. P 353 IBID
೧೨. P 319 The Later Mughals by Irvine

ಬಂದಾಸಿಂಗ್ ತನ್ನ ಹೋರಾಟಗಳಲ್ಲಿ, ಅಮಾಯಕರ ರಕ್ತ ಚೆಲ್ಲಿ, ಊರು ಸೂರೆ ಮಾಡಿ, ಸಾಮಾನ್ಯ ನಾಗರೀಕರು ಹಳ್ಳಿ, ನಗರ ತ್ಯಜಿಸುವಂತಾದರೂ, ಯಾವುದೇ ಯುದ್ಧಾಚರಣೆಗಳಲ್ಲಿ ಅಮಾಯಕರ ಹತ್ಯೆ, ಹಿಂಸಾಚಾರ ಸಹಜ ಎಂಬುದನ್ನು ಸ್ವತಃ ಗುರು ನಾನಕರೇ ತಮ್ಮ ಶಿಷ್ಯ ಮರ್ದಾನಾನಿಗೆ ಒಂದು ಉದಾಹರಣೆ ರೂಪದಲ್ಲಿ ಉಪದೇಶಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಒಂದು ಇರುವೆ ಕಚ್ಚಿದರೆ, ತನ್ನನ್ನು ಮುತ್ತಿರುವ ಇಡೀ ಅಮಾಯಕ ಇರುವೆಗಳ ಸಮೂಹವನ್ನೇ ಹಿಸುಕಿ ಸಾಯಿಸುವ ಹಾಗೆ, ಹೋರಾಟಗಳಲ್ಲಿ, ಅಮಾಯಕರ ಹಿಂಸೆ ಸಾವು ಸ್ವಾಭಾವಿಕ ಎಂಬುದು ಸರ್ವೇ ಸಾಮಾನ್ಯ.

ಗುರು ಗೋಬಿಂದ್ ಸಿಂಗ್ ನಂತರ, ಬಂದಾಸಿಂಗ್ ತನ್ನ ದೇಶೀಯರಿಗೆ ರಾಜಕೀಯ ಸ್ವಾತಂತ್ರ್ಯದ ರುಚಿ ತೋರಿಸಿದ. ಪರಕೀಯರ ದಾಸ್ಯದಿಂದ ಬಳಲಿ ಬೆಂಡಾಗಿ, ಅವಮಾನ, ಭೀತಿ, ಅಪಮರ್ಯಾದೆ, ಹಿಂಸಾಚಾರಗಳಿಂದ ನರಳಿ ಬಾಳುತ್ತಿದ್ದ ಹಿಂದೂಗಳ ಸ್ವಾಭಿಮಾನ ಕೆರಳಿಸಿ, ಅವರು ಸೆಟೆದೆದ್ದು ಅಭಿಮಾನದಿಂದ ಬೀಗಿ, ಯಾವ ತ್ಯಾಗಕ್ಕೂ ಬಲಿದಾನಕ್ಕೂ ಸಿದ್ಧರಾಗುವಂತೆ ಮಾಡಿದ ಕೀರ್ತಿ ಬಂದಾಸಿಂಗ್‌ನದಾಗಿತ್ತು.

ಅವನ ಕೆಲವೇ ವರ್ಷಗಳ ಅಧಿಕಾರದಲ್ಲಿ, ಬಂದಾಸಿಂಗ್ ಕೆಲವು ಉತ್ತಮ ಸಾಮಾಜಿಕ ಬದಲಾವಣೆ ಬಡವರ ಮತ್ತು ಶೋಷಣೆಗೆ ಒಳಗಾಗಿದ್ದವರ ಪರವಾಗಿ ಜಾರಿಗೆ ತಂದಿದ್ದು ಅತ್ಯಂತ ಆಶ್ಚರ್ಯಕರವಾಗಿತ್ತು. ಜಮೀನ್ದಾರಿ ಪದ್ಧತಿಯನ್ನು ನಿರ್ಮೂಲ ಮಾಡಿ, ಜಮೀನು ಹಿಡುವಳಿಗಾರರಿಗೆ ಜಮೀನಿನ ಮೇಲೆ ಅಧಿಕಾರ ನೀಡಿದ್ದು, ಪ್ರಾಯಶಃ ಆಗಿನ ಕಾಲದಲ್ಲೇ ಕ್ರಾಂತಿಕಾರಕವಾಗಿತ್ತು. ದಾನಗೈಯಾದ ಅವನು ಬಡವರ ಉದ್ಧಾರಕ್ಕೆ ಹಲವಾರು ಕಾರ್ಯಕ್ರಮ ಹಾಕಿಕೊಂಡ. ಎಲ್ಲದಕ್ಕಿಂತ ಮಿಗಿಲಾಗಿ ಜನರಲ್ಲಿ ಕೆಚ್ಚು, ಸ್ವಾಭಿಮಾನ, ದಾಸ್ಯ ಮನೋಭಾವ ತ್ಯಜಿಸುವ ನಿಟ್ಟಿನಲ್ಲಿ ಅವನು ಕೈಗೊಂಡ ಅನೇಕ ಕಾರ್ಯಗಳು ಇಂದಿಗೂ ಅನುಕರಣೀಯವಾಗಿವೆ ಎನ್ನಬಹುದಾಗಿದೆ. ಇತಿಹಾಸಕಾರರು, ಅವನು ಕೈಗೊಂಡ ಒಂದು ಮಹತ್ವದ ಕಾರ್ಯದ ಉದಾಹರಣೆಯನ್ನು ನೀಡಿರುತ್ತಾರೆ.

ಒಮ್ಮೆ, ಕೆಲವು ಹಿಂದೂಗಳು ಮುಸ್ಲಿಮ್ ಜಮೀನ್ದಾರರು ತಮ್ಮ ಮೇಲೆ ಹಿಂಸೆ, ಅನಾಚಾರ, ಕ್ರೌರ್ಯಗಳನ್ನು ಎಸಗುತ್ತಿರುವುದಾಗಿ ದೂರಿತ್ತಾಗ, ಬಂದಾಸಿಂಗ್, ತನ್ನ ಆತ್ಮರಕ್ಷಕರಿಗೆ ಆ ದೂರಿತ್ತ ಹಿಂದೂಗಳ ಮೇಲೆ ಗುಂಡು ಹಾರಿಸಬೇಕೆಂದು ಆಜ್ಞೆ ಇತ್ತ ! ಈ ಕಠೋರವಾದ ಪರಿಹಾರಕ್ಕೆ ಕಾರಣ ಕೇಳಿದಾಗ, ಬಂದಾಸಿಂಗ್ ಉತ್ತರವಿತ್ತ : 'ನೀವು ಬಹಳ ಮಂದಿ ಇದ್ದೀರಾ, ಆದರೆ ನಿಮ್ಮ ಮೇಲೆ ದಬ್ಬಾಳಿಕೆ ನಡೆಸುವವರು ಕಡಿಮೆ ಇರುತ್ತಾರೆ. ಅವರನ್ನು ವಿರೋಧಿಸಿ, ಹೊಡೆದೋಡಿಸಲು ನಿಮ್ಮ ಕೈಲಾಗದಕ್ಕೆ ನಾಚಿಕೆಯಾಗುವುದಿಲ್ಲವೇ ? ನಿಮ್ಮ ಅಸಹಾಯಕತೆಯನ್ನು ದೂರನ್ನಾಗಿ ಬಳಸಿಕೊಂಡು ನನ್ನ ಬಳಿ ಬಂದಿರುವುದಕ್ಕೆ ನಾಚಿಕೆಯಾಗಬೇಕು"

ಬಂದಾನ ತೀಕ್ಷ್ಣವಾದ ಮೂದಲಿಕೆ ಕೆಲಸ ಮಾಡಿತ್ತು. ದೂರಿತ್ತವರು, ಮರಳಿ ಒಗ್ಗಟ್ಟಾಗಿ ಅಲ್ಪಸಂಖ್ಯಾತರಾಗಿದ್ದ ಮುಸ್ಲಿಮ್ ದಬ್ಬಾಳಿಕೆದಾರರ ವಿರುದ್ಧ ಹೋರಾಡಿ ಅವರನ್ನು ಓಡಿಸಿದರು ! ೧೩

ಬಂದಾಸಿಂಗ್ ಅವಮಾನಿತ, ನಿರಭಿಮಾನಿ, ಪುಕ್ಕಲುತನದಿಂದ ನರಳುತ್ತಿದ್ದ ತನ್ನ ಜನಾಂಗದವರನ್ನು ಹೊಡೆದೆಬ್ಬಿಸಿ, ಅಭಿಮಾನಿಗಳನ್ನಾಗಿ ಮಾಡಿ, ಅವರ ಸ್ವಾಭಾವಿಕ ಜಡತನ, ಪುಕ್ಕಲುತನ, ಹೇಡಿತನಗಳಿಂದ ಹೊರ ಬರುವಂತೆ ಮಾಡಿ, ಸ್ವತಃ ತನ್ನ ಉದಾಹರಣಾಪೂರ್ವಕ ನಡೆವಳಿಕೆ, ವರ್ತನೆಗಳಿಂದ, ಅವರನ್ನು ಸಿಂಹಸ್ವರೂಪ, ಕೆಚ್ಚೆದೆಯ ವೀರರಂತೆ, ಯಾವ ಬಲಿದಾನಕ್ಕೂ ತಯಾರಾಗಿರುವಂತೆ ಮಾಡಿದ.

ಸಿಖ್‌ರನ್ನು ಹೋರಾಡುವಂತೆ ಪ್ರೇರಣೆ ನೀಡಿದ ಬಂದಾಸಿಂಗ್, ತನ್ನ ಜನಾಂಗವನ್ನು ಕ್ಷಾತ್ರಗುಣಗಳುಳ್ಳ ಜನಾಂಗವನ್ನಾಗಿ ಮಾರ್ಪಡಿಸಿದ. ಆದರೆ ದುರದೃಷ್ಟವಶಾತ್ ಅನೈಕ್ಯತೆಯ ವ್ಯಾಧಿ ಸಿಖ್, ಹಿಂದೂಗಳಲ್ಲಿ ಹರಡಿ, ಅದು ಅವರನ್ನು ಮತ್ತೊಮ್ಮೆ ದಾಸ್ಯತನದ ಕೂಪಕ್ಕೆ ನೂಕತೊಡಗಿತ್ತು.

ಬಂದಾಸಿಂಗ್‌ನ ಕೆಲವು ಕಾರ್ಯವೈಖರಿ, ಅವನು ಕೈಗೊಂಡ ಯುದ್ಧಾಚರಣೆಗಳಲ್ಲಿ, ಅಮಾಯಕರ ಸಾವು ನೋವು, ಊರು ನಾಶ, ಮುಂತಾದ ಕಾರ್ಯಗಳು ಅವನ ಯಶಸ್ಸಿಗೆ ಕಳಂಕ ತಂದೊಡ್ಡಿದವು. ಧಾರ್ಮಿಕ ತತ್ವಗಳು, ಆಚಾರ ವಿಚಾರಗಳು, ಮೌಲ್ವಿಕ ಆಚರಣೆಗಳು, ತಾತ್ಕಾಲಿಕವಾಗಿ ಹಿಂದೆಗೆದು ಕೇವಲ ರಾಜಕಾರಣ, ರಾಜವೈಭವ, ವೈಯಕ್ತಿಕ ಆಸಕ್ತಿಗಳು, ಇಮ್ಮಡಿಸಿ, ಬಂದಾ ಸಿಂಗ್‌ನ ಮುಂದಾಳತ್ವಕ್ಕೆ, ಅವನ ಆಳ್ವಿಕೆಗೆ, ಅವನ ಅಭಿವೃದ್ಧಿಗೆ ಮುಳುವಾದವು ಎಂದಿದ್ದಾರೆ ಇತಿಹಾಸಕಾರರು. ಕಟ್ಟಾ ಸಿಖ್ ಸಂಪ್ರದಾಯಸ್ಥರು ಬಂದಾಸಿಂಗ್‌ನ ಆಚಾರ ವಿಚಾರಗಳು ಗುರು ಹಾಕಿಕೊಟ್ಟ ವಿಚಾರಗಳ ವಿರುದ್ಧವಾಗಿವೆ ಎಂದು ಸಾರಿದರು. ಒಡಕು ಕಾಣಿಸಿಕೊಂಡು, ಅನೈಕ್ಯತೆಯ ವ್ಯಾಧಿ ಹರಡಿ, ಸಿಖ್ ಸಂಘಟನೆ ನರಳಿತು.

ಅದು ಹೇಗಿದ್ದರೂ, ಬಂದಾಸಿಂಗ್ ಮಾತ್ರ ಸಿಖ್‌ರ ಇತಿಹಾಸದಲ್ಲಿ ಒಬ್ಬ ಅಪರೂಪದ ಹುತಾತ್ಮನಾದ ವೀರ ಪುರುಷ. ಕವಿ ರವೀಂದ್ರರ ವಾಣಿ ಇಂದಿಗೂ ಅವನ ವೀರತ್ವ, ಹುತಾತ್ಮತೆ, ರಾಷ್ಟ್ರೀಯತೆಗಳ ಬಗ್ಗೆ ಹಾಡುತ್ತಿದೆ. ೧೪

'ನೆರೆದಿದ್ದವರೆಲ್ಲಾ ಭಯಭೀತರಾಗಿ ಮೂಕರಾಗಿದ್ದರು,
ಬಂದಾನ ದೇಹವನ್ನು ಛಿದ್ರಛಿದ್ರವಾಗಿಸಿದ್ದರು.
ಸೂಜಿಯ ಮೊನಚು ಕತ್ತಿಗಳಿಂದ ಮತ್ತೆ
ಸುಡುವ ಕತ್ತರಿಗಳಿಂದ
ಅವನನ್ನು ತುಂಡು ತುಂಡಾಗಿ ಸುಟ್ಟರು, ಬೇಯಿಸಿದರು

೧೩. P 357 History of Sikh People by G.Singh
೧೪. P 50 Quintessence of Sikhism by Mansukhani

ಅಚಲ ಧೈರ್ಯದಿಂದ ಬಂದಾ ಅನುಭವಿಸಿದ
ಒಬ್ಬ ಹುತಾತ್ಮನ ಸಾವು ಆ ದಿನ,
ಒಂದೇ ಒಂದು ನೋವಿನ ಕೂಗನ್ನು ಕರೆಯದೆ,
ನೆರೆದವರೆಲ್ಲಾ ಅದನ್ನು ನೋಡಿ ಸ್ಥಂಭೀಭೂತರಾದರು,
ಭಯ ಭೀತರಾದ ಅವರ ಕಣ್ಣುಗಳು ಕುರುಡಾದವು.

– ರವೀಂದ್ರನಾಥ್ ಠಾಕೂರ್

ಅಧ್ಯಾಯ ೨
ಪಂಜಾಬ್‌ನ ಸಿಖ್ ಮಿಸಾಲರು

ಕ್ಷಣದಲ್ಲಿ ಮಾತ್ರ ಹೊಡೆದು ಕೊಲ್ಲುತ್ತದೆ ಈ ಖಡ್ಗ. ಕೇಡಿಗರ ಸೈನ್ಯವನ್ನು ದಿಕ್ಕುಪಾಲಾಗಿ ಓಡಿಸುವಂತೆ ಮಹಾನ್ ಸಂಗ್ರಾಮದಲ್ಲಿ ವೀರರ ಚಿಹ್ನೆ ಓ ಖಡ್ಗವೇ !

ಬಂದಾಸಿಂಗ್‌ನ ದಾರುಣ ಮೃತ್ಯುವಿನಿಂದ ಕಂಗಾಲಾದ ಸಿಖ್‌ರು ತಮ್ಮ ನೇತ ಅತ್ಯಂತ ಕ್ರೂರ ರೀತಿಯಲ್ಲಿ ಚಿತ್ರಹಿಂಸೆಯಿಂದ ಕೊಲೆಯಾಗಿದ್ದು ಅವರ ಮೈಮನಸ್ಸಿನಲ್ಲಿ ಹರಿದು ಅವರು ಶೋಕಪೀಡಿತರಾದರು. ಅವರಲ್ಲಿ ಈಗ ಒಬ್ಬ ರಣಧೀರ, ರಾಜ್ಯ ಕಟ್ಟುವ ನಾಯಕ ಕಣ್ಮರೆಯಾಗಿದ್ದ. ಸಿಖ್‌ರಿಗೆ ಆ ಆಘಾತ ತಡೆದುಕೊಳ್ಳಲಾರದಷ್ಟು ಘೋರ ಮತ್ತು ಅಸಹನೀಯವಾಗಿತ್ತು.

ಬಂದಾಸಿಂಗ್‌ನ ಕ್ರೂರ ಅವಸಾನದ ಕಾರಣ ಹುಡುಕಿದ ಸಿಖ್‌ರಲ್ಲಿ ಎರಡು ಬಣವಾಗಿ ಏರ್ಪಟ್ಟಿತು. ಬಂದಾಸಿಂಗ್‌ನ ಅತ್ಯಂತ ವಿಧೇಯ ಮತ್ತು ನಿಷ್ಠೆಯ ಶಿಷ್ಯಂದಿರು, 'ಬಂದಿಯಾ' ಎಂದು ಅವರನ್ನು ಕರೆಯಲಾದವರು, ಪ್ರಾಣತ್ಯಾಗ ಮಾಡಿದ ತಮ್ಮ ಗುರುವನ್ನು ಆರಾಧಿಸಿ ಗೌರವಿಸಿದ್ದರೆ, ಇನ್ನೊಂದು ಬಣ ಅದಕ್ಕೆ ವ್ಯತಿರಿಕ್ತವಾಗಿ ಗುರು ನಾನಕ್, ಗೋಬಿಂದ್ ಸಾರಿದ ತತ್ತ್ವವಿಚಾರಗಳಿಗೆ, ಆಧ್ಯಾತ್ಮಿಕ ಜೀವನಕ್ಕೆ ತಮ್ಮ ಜೀವನ ಮುಡಿಪಾಗಿಟ್ಟಿದ್ದೇವೆಂದು ಸಾರಿ, ಪ್ರತ್ಯೇಕ ದಾರಿ ತುಳಿದರು. ಅವರಿಬ್ಬರ ಮಧ್ಯ ವೈಮನಸ್ಸು, ಕಲಹ, ಒಡಕು ಮಿತಿಮೀರಿ, ಅದು ೧೭೨೦ರ ದೀಪಾವಳಿಯ ತಿಂಗಳಲ್ಲಿ, ಅಮೃತಸರದ ಹರಮಂದಿರದ ಪವಿತ್ರ ಸ್ಥಳದಲ್ಲಿ ಬೆಳಕಿಗೆ ಬಂದು ಕೈ ಕೈ ಮಿಲಾಯಿಸಿದರು. 'ತಟ್ ಖಾಲ್ಸಾ' ಎಂದು ಸಂಪ್ರದಾಯಸ್ಥರ ಮುಖಂಡನಾಗಿ ಬಾಬಾ ಬಿನೋದ್ ಸಿಂಗ್‌ನ ಮಗ ಕಾಹನ್ ಸಿಂಗ್, ಲಾಹೋರಾ ಸಿಂಗ್ ಮತ್ತು ಬಂದಿಯಾರ ಮುಖ್ಯಸ್ಥ ಮಹಂತ್ ಸಿಂಗ್‌ರ ನಡುವೆ ಕಲಹ ಜರುಗಿತು. ಆ ಕಲಹ ಬಿಗಡಾಯಿಸುವುದನ್ನು ತಡೆದರು ಸಿಖ್ ಬುದ್ಧಿಜೀವಿಗಳು ಮತ್ತು ಹಿರಿಯರು. ಅವರು ಒಂದು ಸುಲಭೋಪಾಯ ಕಂಡುಹಿಡಿದರು. ಎರಡೂ ಪಂಗಡದ ಮುಖ್ಯಸ್ಥರ ಮಧ್ಯೆ ಕುಸ್ತಿ ಕಾಳಗ ಏರ್ಪಡಿಸಿದರು. ಯಾರು ಆ ಕುಸ್ತಿಯಲ್ಲಿ ಗೆಲ್ಲುವರೋ ಅವರ ಪಂಥದ ತತ್ತ್ವವಿಚಾರಗಳು ಗೆದ್ದಂತೆ ಮತ್ತು ಸಿಖ್‌ರು ಅವರನ್ನು ಹಿಂಬಾಲಿಸಬೇಕೆಂದರು ! ಅಂತಿಮವಾಗಿ, ಬೌದ್ಧಿಕ ಬೆಳವಣಿಗೆಗೆ ಬೆಲೆ ನೀಡಿ, ಕಲಹ ತಪ್ಪಿಸಲೆತ್ನಿಸಿದರು. ಈ ಕುಸ್ತಿಯಲ್ಲಿ ಸಂಪ್ರದಾಯಸ್ಥ 'ತಟ್ ಖಾಲ್ಸಾ' ರ ಮುಖಂಡ ಮಿರಿಸಿಂಗ್ ಸಂಗತ್ ಸಿಂಗ್‌ನನ್ನು ಮಣ್ಣು ಮುಕ್ಕಿಸಿದರೂ, ಸಮಸ್ಯೆ ಬಗೆಹರಿಯಲಿಲ್ಲ. ಕೆಳಗೆ ಬಿದ್ದವನ ಅನುಯಾಯಿಗಳು ಗೆದ್ದವನ ಮೇಲೆ ಏರಿ ಹೋದರು. ಸಮಸ್ಯೆ

ಬಿಗಡಾಯಿಸಿದ್ದನ್ನು ಕಂಡ ಹಿರಿಯರು ಇನ್ನೊಂದು ಉಪಾಯ ಹೂಡಿದರು. ಎರಡು ಚೀಟಿಗಳಲ್ಲಿ ಗುರು ಗೋಬಿಂದ್ ಸಿಂಗ್‌ರ ಕಹಳೆ 'ವಾಹೇ ಗುರೂಜೀ ಕೀ ಫತೇ' ಮತ್ತು ಬಂದಾಸಿಂಗ್‌ನ 'ಫತೇ ದರ್ಶನ್'ಗಳ ವಾಕ್ಯಗಳನ್ನು ಬರೆದು, ಹರಮಂದಿರದ ನೀರಿನ ಕೊಳದಲ್ಲಿ ಹಾಕಿದಾಗ, ಯಾವ ಚೀಟಿ ತೇಲುತ್ತದೆಯೋ, ಆ ಬಣದವರು ಜಯಸಾಧಿಸಿ, ಸಿಖ್‌ರು ಅದನ್ನು ಸ್ವೀಕರಿಸಿ ಅವರ ಸಿದ್ಧಾಂತಕ್ಕೆ ಒಳಪಡಿಸಬೇಕೆಂದು ತೀರ್ಮಾನಿಸಲಾಯಿತು. ಅದರಂತೆ, ಎರಡು ಚೀಟಿಗಳನ್ನು ನೀರಿನಲ್ಲಿ ಹಾಕಿದಾಗ, ಗುರು ಗೋಬಿಂದ್ ಸಿಂಗ್‌ರ 'ವಾಹೇ ಗುರೂಜೀ ಕೀ ಫತೇ' ಎಂಬ ವಾಕ್ಯ ಬರೆದ ಚೀಟಿ ತೇಲಿದಾಗ, 'ತಟ್ ಖಾಲ್ಸಾ' ಪಂಗಡಕ್ಕೆ ವಿಜಯ ದೊರೆತು, ಸಿಖ್‌ರು ಆ ಪಂಗಡವನ್ನು ಹಿಂಬಾಲಿಸಬೇಕೆಂಬ ನಿರ್ಣಯಕ್ಕೆ ಅಧೀನರಾದರು.

ಈ ನೀರ್ಣಯದಿಂದ ಅಸಂತುಷ್ಟರಾದ ಬಂದಿಯಾಗಳು ಕಲಹ ನಿಲ್ಲಿಸಲಿಲ್ಲ. ಆ ಕಲಹದಲ್ಲಿ ಅವರ ಮುಖ್ಯಸ್ಥನಾದ ಮಹಂತ್ ಸಿಂಗ್‌ನ ಕೊಲೆಯಾಗಿ, ಸಮಸ್ಯೆಗೆ ಪರಿಹಾರ ದೊರಕಿತು. ೧

ಇದೇ ಸಮಯದಲ್ಲಿ ಹರಮಂದಿರದ ಆಡಳಿತವನ್ನು ನೋಡಿಕೊಳ್ಳಲು ದೆಹಲಿಯಲ್ಲಿ ವಾಸವಾಗಿದ್ದ ಗುರು ಗೋಬಿಂದ್ ಸಿಂಗ್‌ರ ಪತ್ನಿ ಮಾತಾಸುಂದರಿ, ಒಬ್ಬ ನಂಬಿಕಸ್ಥ ಮತ್ತು ಗುರುನಿಷ್ಠ ಸಿಖ್ ಭಾಯಿ ಮಣಿ ಸಿಂಗ್‌ನನ್ನು ಮುಖ್ಯ ಪೂಜಾರಿ (ಗ್ರಂಥೀ) ಯನ್ನಾಗಿ ನೇಮಿಸಿ, ಅಮೃತಸರಕ್ಕೆ ಕಳುಹಿಸಿದಳು. ಆತ ಸಿಖ್ ಗುರುಗಳ ಆಧ್ಯಾತ್ಮಿಕ ಮತ್ತು ಧಾರ್ಮಿಕ ತತ್ವಗಳ ನಿಷ್ಠಾವಂತ ಪ್ರತಿಪಾದಕನಾಗಿದ್ದ. ಆತ ಅಮೃತಸರಕ್ಕೆ ತೆರಳಿ ಅಲ್ಲಿನ ಪ್ರಸಿದ್ಧ ಪವಿತ್ರ ಹರಮಂದಿರದ ಉಸ್ತುವಾರಿಯನ್ನು ಅತ್ಯಂತ ಪ್ರಾಮಾಣಿಕತೆ ಮತ್ತು ಭಕ್ತಿಭಾವಗಳಿಂದ ನೋಡಿಕೊಂಡು, ಲಂಗರ್‌ನ್ನು ನಡೆಸಿ ಬಡಬಗ್ಗರಿಗೆ ಉಚಿತ ಊಟ ಉಪಚಾರ ಮಾಡಿ, ದೇಗುಲಕ್ಕೆ ಹರಿದು ಬಂದ ಕಾಣಿಕೆಗಳನ್ನು ಕಾಳಜಿ ವಹಿಸಿ ಧಾರ್ಮಿಕ ಕಾರ್ಯಕ್ಕೆ ಉಪಯೋಗಿಸುವುದಲ್ಲದೆ, ಉಳಿದ ಹಣವನ್ನು ಎಚ್ಚರಿಕಯಿಂದ ಉಳಿತಾಯ ಮಾಡಿ ಪುಣ್ಯ ಕಟ್ಟಿಕೊಂಡ. ಇದರಿಂದಾಗಿ, ಭಕ್ತರು ಹರಮಂದಿರಕ್ಕೆ ಹಿಂಡು ಹಿಂಡಾಗಿ ಬರಲಾರಂಭಿಸಿ ಅದರ ಆದಾಯ ವೃದ್ಧಿಸಿತು.

ಸಿಖ್‌ರ ಬಲ ಕುಗ್ಗಿ, ಪಂಜಾಬ್ ಪ್ರಾಂತ್ಯದ ಎಲ್ಲೆಡೆ ಅವರು ಹರಡಿ, ವಿವಿಧ ಕ್ಷೇತ್ರ ಕಾರ್ಯಗಳಲ್ಲಿ ಅವರು ತೊಡಗಿಸಿಕೊಂಡರೂ, ತಮ್ಮ ಗುರುಗಳ ಮೇಲೆ ಕೈಗೊಂಡ ಹಿಂಸಾಚಾರ, ಕ್ರೂರತನದ ಹತ್ಯೆ ಇತ್ಯಾದಿಗಳಿಂದ ನೊಂದ ಅವರ ಮೈ ಮನಸ್ಸು, ಆಳುತ್ತಿದ್ದ ದೆಹಲಿಯ ಮೊಘಲ್‌ರ ವಿರುದ್ಧ ಕತ್ತಿ ಮಸೆಯುತ್ತಿದ್ದರು. ಸೂಕ್ತ ಅವಕಾಶಕ್ಕಾಗಿ ಅವರು ಕಾಯುತ್ತಿದ್ದರು.

ಇತ್ತ ದೆಹಲಿಯ ಮೊಘಲ್ ಸಾಮ್ರಾಜ್ಯ, ಅಂತರಿಕ ಕಲಹ, ಸಾಮಂತ ರಾಜ್ಯಗಳಿಂದ

೧. P 360 History of Sikh People by G.Singh

ವಿದ್ರೋಹ, ದಕ್ಷಿಣದಲ್ಲಿ ಮರಾಠರ ಪ್ರಾಬಲ್ಯ ಮತ್ತು ಪ್ರತಿರೋಧಗಳಿಂದ ತತ್ತರಿಸುತ್ತಿತ್ತು. ಪ್ರಬಲ ಮೊಘಲ್ ಸಾಮ್ರಾಜ್ಯ ಒಡೆದು ಹೋಳಾಗುವ ಪರಿಸ್ಥಿತಿ ತಲುಪಿತ್ತು.

ಬಹದ್ದೂರ್ ಶಹಾನ ಮರಣದ ನಂತರ, ಅವನ ಮಗ ಫರೂಖ್ ಸಿಯಾರ್‌ನನ್ನು ೧೭೧೯ರಲ್ಲಿ, ಪ್ರಬಲ ಮಂತ್ರಿ ಸಹೋದರರಾದ ಸಯ್ಯದ್ ಸಹೋದರರು, ಚಿತ್ರಹಿಂಸೆ ಮಾಡಿ ಕೊಂದರು. ಯಾವ ರೀತಿ ಬಂದಾಸಿಂಗ್‌ನ ಕಣ್ಣುಗಳನ್ನು ಕೀಳಿಸಿ, ಚಿತ್ರಹಿಂಸೆ ಮಾಡಿ ಕೊಂದನೋ, ಅದೇ ರೀತಿ ಸಯ್ಯದ್ ಸಹೋದರರು, ಬಾದ್‌ಶಹಾ ಫರೂಖ್ ಸಿಯಾರ್‌ನ ಕಣ್ಣುಗಳನ್ನು ಕೀಳಿಸಿ ಸಾಯಿಸಿದರು. ಮೊಘಲ್‌ರ ಪಾರಂಪರಿಕ ಕಣ್ಣು ಕೀಳಿ ಹಿಂಸಿಸುವ ಕುಕಾರ್ಯವನ್ನು ಅವರು ಜಾರಿಗೆ ತಂದು, ಮೊಘಲ್ ಬಾದಶಹಾನ ಹತ್ಯೆ ಮಾಡಿದರು. ಸೆರೆಯಲ್ಲಿದ್ದ ಬಹದ್ದೂರ್ ಶಹಾನ ಮೊಮ್ಮಗ ರಫಿ – ಉಲ್ – ದರಾಜತ್ ಎಂಬುವನನ್ನು ಸೆರೆಮನೆಯಿಂದ ಹೊರತಂದು ದೆಹಲಿ ಸಿಂಹಾಸನದಲ್ಲಿ ಕೂರಿಸಿ ತಾವೇ ರಾಜ್ಯವಾಳತೊಡಗಿದರು. ಆದರೆ, ಕ್ಷಯರೋಗದಿಂದ ನರುಳುತ್ತಿದ್ದ ಈ ಬಾದ್‌ಶಹಾ ಮೂರೇ ತಿಂಗಳಲ್ಲಿ ಸಾವನ್ನಪ್ಪಿದ. ಅವನ ಕಿರಿ ಸಹೋದರ, ರಫಿ – ಉಲ್–ದೌಲಾ ಎಂಬಾತನನ್ನು ಸಿಂಹಾಸನದಲ್ಲಿ ಕೂರಿಸಿದರೂ, ಆತ ಕೂಡ ಸಂಶಯಾಸ್ಪದದಲ್ಲಿ, ಮೂರೇ ತಿಂಗಳಲ್ಲಿ ಸಾವನ್ನಪ್ಪಿದ. ಔರಂಗಜೇಬ್‌ನ ಮೊಮ್ಮಗ ನೆಕೋ ಸೆರಾ ಎಂಬಾತ, ತಾನೇ ಬಾದ್‌ಶಹಾ ಎಂದು ಸಾರಿಕೊಂಡು, ಸಯ್ಯದ್ ಸಹೋದರರ ವಿರುದ್ಧ ಯುದ್ಧ ಸಾರಿದ. ಆದರೆ ಯುದ್ದದಲ್ಲಿ ಪರಾಜಿತನಾದ ಆತ ತನ್ನ ಸಕಲ ಐಶ್ವರ್ಯವನ್ನು ಸಯ್ಯದ್ ಸಹೋದರರ ಕೈಗೆ ಒಪ್ಪಿಸಿ, ಅವರ ಸೆರೆಯಾಳಾದ.

ಸಯ್ಯದ್ ಸಹೋದರರಲ್ಲಿ ಒಡಕು ಉಂಟಾದರೂ, ಅವರು ಬಹದ್ದೂರ್ ಶಹಾನ ಇನ್ನೊಬ್ಬ ೧೮ ವರ್ಷದ ಮೊಮ್ಮಗ ಮೊಹಮ್ಮದ್ ಷಫಿಯನ್ನು ಕರೆತಂದು ಸಿಂಹಾಸನದಲ್ಲಿ ಕೂರಿಸಿ, ತಾವೇ ಆಳತೊಡಗಿದರು. ಆದರೆ ಈ ಬಾದ್‌ಶಹಾ ಧೈರ್ಯವಂತ ಮತ್ತು ಚತುರನಾಗಿದ್ದ. ಆತ ಕುಟಿಲತೆಯಿಂದ ಒಬ್ಬ ಸಯದ್ ಸಹೋದರನನ್ನು ಹತ್ಯೆಗೈದು, ಇನ್ನೊಬ್ಬನನ್ನು ಕದನದಲ್ಲಿ ಸೋಲಿಸಿ ಅವನನ್ನು ಸೆರೆಯಲ್ಲಿರಿಸಿದ. ದೆಹಲಿ ಸಿಂಹಾಸನವನ್ನೇರಿ, ಭದ್ರವಾಗಿ ತಳವೂರಿದ ಮೊಹಮ್ಮದ್ ಷಫಿ (೧೭೧೯)

ಈ ಘಟನೆಗಳು ಜರುಗುತ್ತಿರುವಾಗಲೇ, ಪಂಜಾಬ್‌ನಲ್ಲಿ ವಿಪ್ಲವ ತಲೆದೋರಿತು. ಆಫ್ಘಾನಿಸ್ಥಾನದ ಗಡಿ ಭಾಗದ ಪಠಾಣರು ದಂಗೆ ಇದ್ದರು. ಅವರನ್ನು ಹತ್ತಿಕ್ಕಲು, ದೆಹಲಿಯ ಸಯ್ಯದ್ ಸಹೋದರರ ಆಜ್ಞೆಯ ಮೇರೆಗೆ, ಪಂಜಾಬ್‌ನ ರಾಜ್ಯಪಾಲ ಅಬ್ದುಲ್ ಸಮದ್ ಯುದ್ಧ ಜರುಗಿಸಿ, ಪಠಾಣರನ್ನು ಓಡಿಸಿದ. ಇದೇ ಸಮಯದಲ್ಲಿ ಕಾಶ್ಮೀರದಲ್ಲಿ ಮುಲ್ಲಾ ಅಬ್ದುಲ್ ನಬೀಗೆ ರಾಜ್ಯದಾಹ, ಮತಾಂಧತೆ ಆವರಿಸಿ, ಆತ ಆಡಳಿತಕಾರರನ್ನು ಧಿಕ್ಕರಿಸಿ, ಹಿಂದೂಗಳ ಕಗ್ಗೊಲೆ ಜರುಗಿಸಿದ. ಅವರನ್ನು ಬಲಾತ್ಕಾರವಾಗಿ ಮತಾಂತರಗೊಳಿಸಿದ. ಅವರ ಹೆಣ್ಣುಮಕ್ಕಳ ಅತ್ಯಾಚಾರ ಎಸಗಿ, ಹಿಂದೂಗಳು, ಕಾಶ್ಮೀರವನ್ನು ತ್ಯಜಿಸಿ ಓಡಿಹೋಗುವಂತೆ ಮಾಡಿದ. ಅತಿ ಸಾಧು

ಸ್ವಭಾವದ, ಹೇಡಿತನ, ವಿಧಿ, ಹಣೆಬರಹ ಇತ್ಯಾದಿ ನಕಾರಾತ್ಮಕ ತತ್ತ್ವವಿಚಾರಗಳನ್ನು ಹೊಂದಿದ್ದ ಹಿಂದೂಗಳು, ಸೆಟೆದೆದ್ದು, ಪ್ರಾಣಭಯ ತೊರೆದು ಹೋರಾಡುವ ಬದಲು, ಹೇಡಿಗಳಂತೆ ಪ್ರಾಣ ಉಳಿಸಿಕೊಳ್ಳಲು ತಮ್ಮ ನೆಲ ಜಲ ತೊರೆದು ಓಡಿಹೋಗಿದ್ದು ಅವರ ಜನ್ಮಕ್ಕೆ ಅಂಟಿಕೊಂಡಿದ್ದ ಸ್ವಭಾವವಾಗಿತ್ತು.

ಮುಲ್ಲಾ ಅಬ್ದುಲ್ ನಬಿಯ ಕ್ರೂರ ನಡೆವಳಿಕೆ ಕಾಶ್ಮೀರದ ಮೊಘಲ್ ರಾಜ್ಯಪಾಲ ಅಹಮದ್ ಖಾನ್‌ನಿಗೆ ಸರಿಬರದೆ, ಅವನು ಮುಲ್ಲಾನ ಚಟುವಟಿಕೆಗಳಿಗೆ ಅಂತ್ಯ ಕಾಣಿಸಲು ಕ್ರಮ ತೆಗೆದುಕೊಳ್ಳಲು ಮುಂದಾದ. ಆದರೆ, ಈಗಾಗಲೇ ಬಲಿಷ್ಠನಾದ ಮುಲ್ಲಾ, ಅಹಮದ್ ಖಾನ್‌ನ ವಿರುದ್ಧ ಕದನ ಜರುಗಿಸಿದ. ಅವನ ಸಂಬಂಧಿಕರನ್ನು ಮತ್ತು ಇತರ ಅಧಿಕಾರಿಗಳ ಹತ್ಯೆ ಮಾಡಿ, ಅಹಮದ್ ಖಾನ್ ಓಡಿಹೋಗುವಂತೆ ಮಾಡಿ, ತಾನೇ ಕಾಶ್ಮೀರದ ಸುಲ್ತಾನ್ ಎಂದು ಘೋಷಿಸಿಕೊಂಡ. ಅವನು ತನ್ನ ಹೆಸರನ್ನು ದಿನ್‌ದಾರ್ ಖಾನ್ ಎಂದು ಬದಲಾಯಿಸಿಕೊಂಡು, ಆಳತೊಡಗಿದ. ಸುದ್ದಿ ಅರಿತ ದೆಹಲಿ ಬಾದ್‌ಶಹಾ ಸೈನ್ಯ ಕಳುಹಿಸಿ, ದಿನ್‌ದಾರ್ ಖಾನ್‌ನ ವಿರುದ್ಧ ಸೈನ್ಯಾಚರಣೆ ನಡೆಸಿ, ಅವನ ಹತ್ಯೆ ಮಾಡಿ, ರಾಜ್ಯವನ್ನು ತಮ್ಮ ಸುಪರ್ದಿಗೆ ಮತ್ತೊಮ್ಮೆ ಪಡೆದುಕೊಂಡ. ೧

೧೭೨೬ರಲ್ಲಿ, ಪಂಜಾಬ್‌ನ ರಾಜ್ಯಪಾಲನಾಗಿದ್ದ ಅಬ್ದುಲ್ ಸಮದ್ ತನ್ನ ಮಗ ಜಕ್ರಿಯಾ ಖಾನ್‌ನಿಗೆ ತನ್ನ ಪದವಿ ಒಪ್ಪಿಸಿ ವಿಶ್ರಾಂತಿ ಪಡೆದ. ಈತ ಕ್ರೂರಿಯಾಗಿದ್ದ ಮತ್ತು ಸಿಖ್‌ರನ್ನು ದ್ವೇಷಿಸುತ್ತಿದ್ದ. ದೆಹಲಿಯ ಬಾದ್‌ಶಹಾನ ಆಜ್ಞೆಯ ಮೇರೆಗೆ, ಸಿಖ್‌ರ ಮೇಲೆ ಸಮರ ಸಾರಿದ. ಸಿಖ್‌ರಲ್ಲಿ ಕೆಲವರು ಸಂಘಟಿಸಿಕೊಂಡು, ಮೊಘಲ್ ಸೈನ್ಯದ ಠಿಕಾಣಿ ಮತ್ತು ಅವರ ಧನದ್ರವ್ಯಗಳನ್ನು ಅಪಹರಿಸುವ ಮೂಲಕ ತಮ್ಮ ವಿರೋಧವನ್ನು ತೋರಿಸುತ್ತಿದ್ದರು. ಅವರನ್ನು ಸಂಪೂರ್ಣವಾಗಿ ಹತ್ತಿಕ್ಕಲು ಈ 'ಖಾನ್ ಬಹಾದೂರ್' ಜಕ್ರಿಯಾ ಖಾನ್ ಸೈನಿಕಾಚರಣೆ ಜರುಗಿಸಿದ. ಎಲ್ಲೆಲ್ಲಿ ಸಿಖ್‌ರು ಸಿಕ್ಕಿದರೂ ಅವರ ಹತ್ಯೆ ಜರುಗಿಸಿ, ಅವರ ತಲೆಬುರುಡೆ ತಂದವರಿಗೆ ಇನಾಮನ್ನು ನೀಡುವುದಾಗಿ ಘೋಷಿಸಿದ. ಸೆರೆಹಿಡಿಯಲಾದ ಸಿಖ್‌ರನ್ನು ಲಾಹೋರ್ ನಗರದ ಕುದುರೆ ಮಂಡಿಗಳಲ್ಲಿ ಕೂಡಿ ಹಾಕಿ ಅವರ ಹತ್ಯೆ ಮಾಡಿದ. ಆ ಸ್ಥಳವನ್ನು 'ಶಹೀದ್ ಗಂಜ್' ಎಂದು ಕರೆದರು ಸಿಖ್‌ರು. ಕ್ರೂರಿ ರಾಜ್ಯಪಾಲನ ಹಿಡಿತದಿಂದ ತಪ್ಪಿಸಿಕೊಳ್ಳಲು, ಉಪಾಯ ಕಾಣದ ಸಿಖ್‌ರು ಮನೆ, ಮಠ, ಜಮೀನು ತೊರೆದು ಅಡವಿ ಸೇರಿದರು. ಗೆಡ್ಡೆ ಗೆಣಸು ತಿಂದು ಜೀವಿಸಿದರು. ಅವರ ಸಹಾಯಕ್ಕೆ ಸುತ್ತಮುತ್ತಲಿನ ರೈತಾಪಿ ಜನರು ಮುಂದೆ ಬಂದು ಆಹಾರ ಸಾಮಗ್ರಿ ಒದಗಿಸಿದರು.

ಇಂತಹ ಸಂಕಷ್ಟ ಪರಿಸ್ಥಿತಿಯಲ್ಲೇ ಸಿಖ್‌ರು ಪ್ರಮಾಣ ಮಾಡಿ ತಮ್ಮ ಖಾಲ್ಸಾ ರಾಜ್ಯ ಸ್ಥಾಪನೆಗೆ ದೃಢ ಮನಸ್ಸು ಮಾಡಿದರು. ಪಂಜಾಬಿ ಭಾಷೆಯಲ್ಲಿ ಅವರು

---

೧. P 363 History of Sikh People by G. Singh

ಘೋಷಿಸಿದ ಮಂತ್ರ ಇಂದಿಗೂ ಅವರ ಬಾಯಿ, ಹೃದಯಗಳಲ್ಲಿ ಹೊರಬರುತ್ತಿವೆ; 'ರಾಜ್ ಕರೇಗಾ ಖಾಲ್ಸಾ, ಆಕಿರಹೇ ನಾ ಕೋಯಿ; ಖುರ್ ಹೋ ಸಬ್ ಮಿಲೇಂಗೇ. ಬಚ್ಚೇ ಶರಣ್ ಜೋ ಹೋ !' ಗುರು ಗ್ರಂಥವನ್ನು ದಿನರಾತ್ರಿ ಅಖಂಡವಾಗಿ ಜಪಿಸಿ ಹಾಡುವ ಪದ್ಧತಿ ಇದೇ ಸಮಯದಲ್ಲಿ ಅವರು ಜಾರಿಗೆ ತಂದರು. ೩

೧೭೨೬ರಲ್ಲಿ ಬಂದಾಸಿಂಗ್‌ನ ಶಿಷ್ಯ ತಾರಾಸಿಂಗ್ ಎಂಬ ಧಾರ್ಮಿಕ ವ್ಯಕ್ತಿ ಮತ್ತು ಅವನ ೨೨ ಸಂಗಡಿಗರನ್ನು ಮೊಘಲ್‌ರು ಬಂಧಿಸಿ, ಕ್ರೂರ ಹತ್ಯೆ ಜರುಗಿಸಿದರು. ಸುದ್ದಿ ಅರಿತ ಸಿಖ್ಖರು ಕ್ರೋಧಗೊಂಡರು. ಪ್ರತೀಕಾರ ರೂಪವಾಗಿ ಮೊಘಲ್ ಖಜಾನೆಗೆ ರವಾನಿಸಲ್ಪಡುತ್ತಿದ್ದ ದವಸ ಧಾನ್ಯ, ಕಪ್ಪ ಕಾಣಿಕೆಗಳನ್ನು ದಾರಿಯ ಮಧ್ಯದಲ್ಲಿ ತಡೆಹಿಡಿದು ದೋಚಿದರು. ಸಿಖ್ಖರ ಅತಿಕ್ರಮಣ ಮೊಘಲ್ ಆಡಳಿತಗಾರರಿಗೆ ತಲೆನೋವಾಯಿತು. ಕಾಡಿನಲ್ಲಿ ಅವಿತುಕೊಂಡು, ತಮ್ಮ ಮೇಲೆ ಆಕ್ರಮಣ ಮಾಡಿ ಸುಲಿಗೆ ಮಾಡುವ ಸಿಖ್ಖರ ವಿರುದ್ಧ ಯುದ್ಧಾಚರಣೆ ನಡೆಸುವುದು ದುಸ್ಸಾಧ್ಯವಾಗಿತ್ತು. ಮೊಘಲರು, ಸಿಖ್ಖರ ಕಾಟ ತಾಳಲಾರದೆ, ಅವರೊಂದಿಗೆ ಶಾಂತಿ ಒಪ್ಪಂದಕ್ಕೆ ಸಿದ್ಧರಾದರು. ಸಿಖ್ಖರಿಗೆ ಜಾಗಿರ್ ನೀಡಿ, ನವಾಬರನ್ನಾಗಿ ಮಾಡುತ್ತೇವೆಂದರು. ಮೊದಮೊದಲು ಸಿಖ್ಖರು ಒಪ್ಪದಿದ್ದರೂ, ಶಾಂತಿಯನ್ನು ಬಯಸಿದ ಅವರು ಸಮ್ಮತಿಸಿದರು. ಆದರೆ ನವಾಬ್‌ಗಿರಿಯನ್ನು ಯಾರಿಗೆ ನೀಡುವುದು ಅಥವಾ ಯಾರನ್ನು ಆ ಪದವಿಗೆ ಆರಿಸುವುದು ಎಂಬ ಪ್ರಶ್ನೆ ಉದ್ಭವಿಸಿತು. ಈ ಪ್ರಶ್ನೆಗೆ ಉತ್ತರ ಹುಡುಕಲು ಸೇರಿದ್ದ ಸಿಖ್ಖರ ಅಧಿವೇಶನದಲ್ಲಿ, ಕಪೂರ್‌ಸಿಂಗ್ ಎಂಬಾತನನ್ನು ಆರಿಸಲಾಯಿತು. ಈ ಕಪೂರ್ ಸಿಂಗ್, ಒಬ್ಬ ಹೋರಾಟಗಾರನಾಗಿ ಮೆರೆದಿದ್ದ. ಆತ ಅತ್ಯಂತ ನಮ್ರತೆ, ಸೌಜನ್ಯದ ಮೂರ್ತಿಯಾಗಿದ್ದ. ಸಿಖ್ ಗುರುಗಳ, ಅನನ್ಯ ಭಕ್ತನಾಗಿ, ಸರಳತೆ, ಘನತೆ, ನಯ, ನಡೆವಳಿಕೆಗಳಿಗೆ ಮನೆ ಮಾತಾಗಿದ್ದ. ನವಾಬೀ ಪದವಿಗೆ ಒಪ್ಪಿದರೂ, ಸೇವಾಕ್ಷೇತ್ರ ತ್ಯಜಿಸಲು ಆತ ಒಪ್ಪಲಿಲ್ಲ. ನವಾಬ್‌ನಾದರೂ, ಯಾತ್ರಾರ್ಥಿಗಳ ಊಟೋಪಚಾರದ ಮೇಲ್ವಿಚಾರಣಾ ಕಾರ್ಯ ಅವನು ಸ್ವತಃ ಮಾಡುತ್ತಿದ್ದ.

ಕಪೂರ್ ಸಿಂಗ್, ಸಿಖ್ಖರ ನವಾಬ್‌ನಾಗಿದ್ದು, ಸಿಖ್ ಇತಿಹಾಸದಲ್ಲಿ ಅದು ಪ್ರಾಮುಖ್ಯತೆ ಪಡೆದುಕೊಂಡಿತು ಎನ್ನಲಾಗಿದೆ. ಯಾಕೆಂದರೆ, ಸಿಖ್ಖರ ಸಾಮ್ರಾಜ್ಯ ನಿರ್ಮಾಣಕ್ಕೆ ಅದು ತಳಹದಿಯಾಗಿತ್ತು. ಮೊಘಲ್ ಸಾಮ್ರಾಜ್ಯದಲ್ಲಿ, ಅನೇಕ ರಾಜ ಮಹಾರಾಜ, ಸುಲ್ತಾನ್, ನವಾಬ್‌ರು ರಾಜ್ಯಪದವಿ ಪಡೆದುಕೊಂಡು ಮೊಘಲ್‌ರ ಕೈಕೆಳಗೆ ಅವರ ಅಡಿಯಾಳಾಗಿ ರಾಜ್ಯ ಮಾಡಿಕೊಂಡಿದ್ದರೂ, ಸಿಖ್ಖರು ಮಾತ್ರ ಯಾವ ಪದವಿ, ಸಿಂಹಾಸನ, ಜಾಗೀರ್ ಪಡೆದುಕೊಂಡಿರಲಿಲ್ಲ. ಕಪೂರ್ ಸಿಂಗ್ ಸಿಖ್ಖರ ಪ್ರಥಮ ನವಾಬ್‌ಗಿರಿ ಪಡೆದುಕೊಂಡಿದ್ದು, ಇತಿಹಾಸ ಪುಟಗಳಲ್ಲಿ ಅವನ ಹೆಸರು ಮತ್ತು ಸಿಖ್ಖರ ಅಪ್ರತಿಮ ಸಾಹಸ, ಬಲಿದಾನ, ನಿಸ್ವಾರ್ಥ ಸಾಧನೆಗಳಿಗೆ ನಾಂದಿ ಹಾಡಿತ್ತು.

---

೩. P 300 Sikhism by Hew Mcleod

ಕಪೂರ್ ಸಿಂಗ್ ನವಾಬನಾದೊಡನೆ, ಹಿರಿಯ ಸಿಖ್ಖರನ್ನೊಳಗೊಂಡ ಒಂದು 'ಬುಡ್ಡಾ ದಳ'ವನ್ನು ಸ್ಥಾಪಿಸಿದ. ಯುವಕ ಸಿಖ್ಖರು ಹಿಂದೆ ಬೀಳದೆ ತಮ್ಮದೇ ಆದ 'ತರುಣ್ ದಳ' ವನ್ನು ಸ್ಥಾಪಿಸಿದರು. ಅವರಲ್ಲಿ ಹುರುಪು, ಪೌರುಷ, ಹೋರಾಟದ ಮನೋಭಾವಗಳಿದ್ದರೂ, ಶಿಸ್ತಿನ ಕೊರತೆ ಕಾಣುತ್ತಿತ್ತು. ಅದಕ್ಕಾಗಿ, ಅಮೃತಸರದಲ್ಲಿ ಐದು ಕ್ಷೇತ್ರ ಸಂಘಗಳನ್ನು ಸ್ಥಾಪಿಸಲಾಯಿತು. ಪ್ರತಿಯೊಂದು ಸಂಘಟನೆಗೆ ಒಂದು ನಗರಾ ಮತ್ತು ಧ್ವಜ ನೀಡಲಾಯಿತು (೧೭೩೪). ಶಿಸ್ತಿಗೆ ಆದ್ಯತೆ ನೀಡಿ, ಯಾರು ಬೇಕಾದರೂ ಯಾವ ಸಂಘಟನೆಗೆ ಸೇರುವ ಸ್ವಾತಂತ್ರ್ಯ ನೀಡಲಾಯಿತು. ಆದರೆ ಈ ಎರಡೂ ಸಂಘಟನೆಗಳಿಗೆ ನವಾಬ ಕಪೂರ್ ಸಿಂಗ್ ಮುಖ್ಯಸ್ಥನಾಗಿದ್ದ.

ಯುವಕ ಸಿಖ್ಖರ 'ತರುಣ ದಳ'ದ ಸದಸ್ಯರು ಯೌವನದ ಹುಮ್ಮಸ್ಸಿನಲ್ಲಿ, ಕಾದಾಡುವ ಹುರುಪಿನಲ್ಲಿ ತಮ್ಮ ಕಾರ್ಯಕ್ಷೇತ್ರದ ಹೊರಗೆ, ಹಾಂಸೀ ಮತ್ತು ಹಿಸ್ಸಾರ್ ಪ್ರದೇಶಗಳಲ್ಲಿ ನುಗ್ಗಿ ಅಲ್ಲಿನ ಜನರಿಂದ ಕಪ್ಪ ಕಾಣಿಕೆ ವಸೂಲಿ ಮಾಡಲು ಪ್ರಾರಂಭಿಸಿದ ಸಂಗತಿ ಅರಿತ ಮೊಘಲರಿಗೆ ಕ್ರೋಧ ಉಂಟಾಯಿತು. ತಮ್ಮ ರಾಜ್ಯಾಧಿಕಾರದ ಪ್ರದೇಶಗಳಲ್ಲಿ ಸಿಖ್ಖರು ಅಧಿಕಾರ ಸ್ಥಾಪಿಸಿ, ಜನರಿಂದ ಕರ ವಸೂಲಿ ಮಾಡುವುದನ್ನು ನಿಲ್ಲಿಸಬೇಕೆಂದು ಆಜ್ಞಾಪಿಸಿದರು. ಅಭಿಮಾನಿ ಸಿಖ್ಖರು ಮೊಘಲ್‌ರ ಆಜ್ಞೆಯನ್ನು ನಿರಾಕರಿಸಿದರು. ೧೭೩೫ರಲ್ಲಿ ಅಮೃತಸರದ ಸಭೆಯಲ್ಲಿ ತೆಗೆದುಕೊಂಡ ನಿರ್ಣಯ ಮೊಘಲ್‌ರ ಕ್ರೋಧಕ್ಕೆ ಕಾರಣವಾಗಿ, ಅವರು ಕಪೂರ್ ಸಿಂಗ್‌ನಿಗೆ ನೀಡಿದ್ದ ನವಾಬಗಿರಿಯನ್ನು ರದ್ದುಪಡಿಸಿದರು. ಇದರ ಪರಿಣಾಮ ಪುನಃ ಸಿಖ್ ಮತ್ತು ಮೊಘಲ್‌ರ ನಡುವೆ ಅಶಾಂತಿ ಏರ್ಪಟ್ಟು ಕದನ ಪ್ರಾರಂಭವಾಯಿತು.

ಲಾಹೋರ್‌ನ ಖಾನ್ ಬಹಾದೂರ್‌ನ ಹಿಂದೂ ಮಂತ್ರಿ ಲಖ್‌ಪತ್ ರಾಯ್, ಸೈನ್ಯದ ಒಂದು ತುಕಡಿ ತೆಗೆದುಕೊಂಡು, ಸಿಖ್ಖರ ಬುಡ್ಡಾ ದಳದ ವಿರುದ್ಧ ಕದನ ಹೂಡಿ, ಅವರನ್ನು ಚದುರಿಸಿದ. ಚದುರಿದ ಸಿಖ್ಖರು, ದಾರಿಯಲ್ಲಿ ಸರ್‌ಹಿಂದ್ ನಗರವನ್ನು ಸೂರೆಗೈದರು. ಆದರೆ ಲಖ್‌ಪತ್ ಅಮೃತಸರದ ಹತ್ತಿರವಿರುವ ಬಸರ್ಕೆ ಎಂಬಲ್ಲಿ, ಅವರನ್ನು ಸಂಧಿಸಿ, ಸೋಲಿಸಿದ. ಸುದ್ದಿ ಅರಿತ ಸಿಖ್ಖರ 'ತರುಣ ದಳ' ದವರು ಲಖ್‌ಪತ್ ರಾಯ್‌ನ ಮೇಲೆ ಆಕ್ರಮಣ ಜರುಗಿಸಿ ಅವನ ಸೈನ್ಯವನ್ನು ಸೋಲಿಸಿದರು. ಅವನ ಸಂಬಂಧಿ ಮತ್ತು ಅಧಿಕಾರಿಗಳ ಹತ್ಯೆ ಮಾಡಿದರು.

ಗಾಬರಿಗೊಂಡ ದೆಹಲಿ ಸರಕಾರ, ಪ್ರಬಲ ಸೈನ್ಯವನ್ನು ಕಳುಹಿಸಿ, ಅಮೃತಸರದ ಹರಮಂದಿರವನ್ನು ವಶಪಡಿಸಿಕೊಂಡು, ಸಿಖ್ಖರನ್ನು ಒಳಗೆ ಬಿಡದಂತೆ ನೋಡಿಕೊಂಡರು. ನಗರದ ಸುತ್ತ ಯಾರೇ ಸಿಖ್ಖರನ್ನು ಕಂಡ ಕೂಡಲೆ ಅವರ ಹತ್ಯೆ ಮಾಡುವಂತೆ ಆಜ್ಞೆ ನೀಡಲಾಯಿತು. ಸಾವಿರಾರು ಸಿಖ್ಖರ ಹತ್ಯೆ ಜರುಗಿಸಿದರು.

ಮೊಘಲರು ತೆಗೆದುಕೊಂಡ ಈ ಜನಾಂಗದ ಸಾಮೂಹಿಕ ಹತ್ಯೆಯಲ್ಲಿ ಬಲಿದಾನವಾದವರಲ್ಲಿ ಹರಮಂದಿರದ ಮುಗ್ಧ, ಜ್ಞಾನಿ, ಸೌಮ್ಯ ಸ್ವಭಾವದ ಮೇಲ್ವಿಚಾರಕ

ಭಾಯಿ ಮಣಿ ಸಿಂಗ್. ಈ ಮಣಿ ಸಿಂಗ್ ಪಾಟಿಯಾಲಾ ಜಿಲ್ಲಾ ಕೈಬೋವಾಲ್ ಎಂಬ ಹಳ್ಳಿಯಲ್ಲಿ ಜನಿಸಿ, ತನ್ನ ಕೇವಲ ೫ ವರ್ಷವಯಸ್ಸಿನಲ್ಲೇ ಗುರು ಗೋಬಿಂದ್ ಸಿಂಗ್‌ರಿಂದ ಅಮೃತಪಾನೀ ದೀಕ್ಷೆ ಪಡೆದು ಸಿಖ್ಖನಾಗಿದ್ದ. ೧೭೨೧, ಗುರುವಿನ ಪತ್ನಿ ಮಾತಾ ಸುಂದರಿಯಿಂದ, ಹರಮಂದಿರದ ಮುಖ್ಯ ಪೂಜಾರಿ ಮತ್ತು ಮೇಲ್ವಿಚಾರಕನಾಗಿ ನೇಮಕಗೊಂಡ ನಂತರ, ಆತ ಸಮರ್ಥವಾಗಿ ತನ್ನ ಕಾರ್ಯವನ್ನು ಜರುಗಿಸಿ ಎಲ್ಲರ ಆದರ, ಗೌರವ ಗಳಿಸಿದ್ದ. ಸಿಖ್ ಧರ್ಮ ಉಪದೇಶ, ಪಾಲನೆ, ಮಂದಿರದ ಶಿಷ್ಟಾಚಾರಗಳನ್ನು ಭಯ ಭಕ್ತಿ ನಿಷ್ಠೆಯಿಂದ ಮಾಡಿ ಮನ್ನಣೆ ಗಳಿಸಿದ್ದ.

೧೭೨೮ರಲ್ಲಿ ವಾರ್ಷಿಕ ಜಾತ್ರೆ ಜರುಗಿಸಲು ಮೊಘಲ್‌ರಿಗೆ ಐದು ಸಾವಿರ ಹೊನ್ನುಗಳ ಕಾಣಿಕೆ ನೀಡುವುದಾಗಿ ಹೇಳಿ, ಪರವಾನಿಗೆ ಪಡೆದುಕೊಂಡ ಮಣಿಸಿಂಗ್. ಆದರೆ, ಮೊಘಲ್‌ರು ಸಿಖ್ಖರು ಅಮೃತಸರಕ್ಕೆ ಯಾತ್ರಾರ್ಥಿಗಳಾಗಿ ಬರದಂತೆ ತಡೆದು, ಅವರಿಗೆ ಹಿಂಸೆ, ಉಪದ್ರ, ಉಪಟಳ ನೀಡಿದಾಗ, ಯಾತ್ರಾರ್ಥಿಗಳ ಸಂಖ್ಯೆ ಕಡಿಮೆಯಗಿ, ಜಾತ್ರೆ ಕಳೆಗುಂದಿ, ಭಕ್ತರಿಂದ ದೊರೆಯಬಹುದಾದ ಕಾಣಿಕೆ ಕಡಿಮೆಯಾಗಿ, ಮಣಿಸಿಂಗ್ ಮೊಘಲ್‌ರಿಗೆ ನೀಡಬೇಕಾಗಿದ್ದ ಒಪ್ಪಿಗೆ ಹಣ ನೀಡಲಾಗಲಿಲ್ಲ. ಇದೇ ಕಾರಣ ಸಾಕಾಗಿತ್ತು, ಮೊಘಲ್‌ರು ಮಣಿಸಿಂಗ್‌ನನ್ನು ಶಿಕ್ಷಿಸಲಿಕ್ಕೆ. ಅವನನ್ನು ಬಂಧಿಸಿದರು.

'ಇಸ್ಲಾಮ್, ಇಲ್ಲದ ಪಕ್ಷದಲ್ಲಿ ಮರಣ' ಎಂಬ ತತ್ವದ ಪ್ರಕಾರ, ಮಣಿಸಿಂಗ್‌ನನ್ನು ವಿಚಾರಣೆಗೆ ಗುರಿಪಡಿಸಿ, ಅವನು ಇಸ್ಲಾಂ ಸ್ವೀಕರಿಸಲು ನಿರಾಕರಿಸಿದ್ದರಿಂದ, ಅವನಿಗೆ ಘೋರ, ಚಿತ್ರಹಿಂಸೆ ನೀಡಿ ಹತ್ಯೆ ಮಾಡಿದರು. ಕೈಕಾಲು ಕತ್ತರಿಸಿ, ದೇಹದ ಒಂದೊಂದೇ ಅಂಗಗಳನ್ನು ಕತ್ತರಿಸಿ, ಹತ್ಯೆ ಮಾಡಿದರು. ಮಣಿಸಿಂಗ್‌ನ ಆಪ್ತ ಸಂಗಡಿಗ ದಿವಾನ್ ಸಿಂಗ್‌ನನ್ನು ಬಂಡಿ ಚಕ್ರಕ್ಕೆ ಕಟ್ಟಿ ಎಳೆದು ಸಾಯಿಸಿದರು.

ಮಣಿ ಸಿಂಗ್‌ನ ಘೋರ ಮೃತ್ಯು ಸಿಖ್ಖರನ್ನು ಬೆಚ್ಚಿ ಬೀಳಿಸಿತು. ಅವರು ಉನ್ಮತ್ತರಾದರು. ಅವರ ರಕ್ತ ಕುದಿಯತೊಡಗಿ, ಪ್ರತೀಕಾರಕ್ಕಾಗಿ ಹಾತೊರೆದರು. ಆ ಪ್ರತೀಕಾರದ ರೂಪ ಎಷ್ಟು ತೀವ್ರತಮವಾಗಿದ್ದೆಂದರೆ ಊಹೆಗೆ ನಿಲುಕದಂತಾಗಿತ್ತು. ಸಿಖ್ಖರು ತಮ್ಮ ನೆಲೆಗಳನ್ನು ತೊರೆದು, ರಾಜಾಸ್ಥಾನದ ಮರಳುಗಾಡಿಗೆ ಮತ್ತು ಶಿವಾಲಿಕ್ ಗುಡ್ಡಗಾಡಿಗೆ ವಲಸೆ ಹೋಗಿ, ಮೊಘಲ್‌ರ ವಿರುದ್ಧ ಪ್ರತೀಕಾರ ಎಸಗಲು ಕಾದು ಕುಳಿತರು.

ಸಿಖ್ಖರ ನಿರೀಕ್ಷಿತ ಅವಕಾಶ ಪರ್ಶಿಯಾದ ಸುಲ್ತಾನ್ ನಾದಿರ್ ಶಹಾ ದೆಹಲಿಯ ಮೊಘಲ್‌ರ ಮೇಲೆ ದಂಡೆತ್ತಿ ಬಂದಾಗ ದೊರೆಯಿತು (೧೭೩೯). ನಾದಿರ್ ಶಹಾ ಕಾಬೂಲ್‌ನ್ನು ಜಯಿಸಿ, ಖೈಬರ್ ಕಣಿವೆಯ ಮುಖಾಂತರ ಪಂಜಾಬ್‌ನ್ನು ಪ್ರವೇಶಿಸಿದ. ಅವನನ್ನು ಎದುರಿಸಿದ ಲಾಹೋರ್‌ನ ಕಲಿಂದರ್ ಖಾನ್‌ನ ಸೈನ್ಯವನ್ನು ಸೋಲಿಸಿ ಅವನ ಹತ್ಯೆ ಜರುಗಿಸಿದ. ದಂಡೆತ್ತಿ ಬಂದ ನಾದಿರ್ ಶಹಾನ ಸೈನಿಕರು ಅವರು ಸಾಗಿದ ಪ್ರದೇಶವನ್ನು ಹಾಳುಗೆಡವಿ, ಊರು ನಾಶಮಾಡಿ ಧನದ್ರವ್ಯ ಕೊಳ್ಳೆ ಹೊಡೆದರು. ಲಾಹೋರ್ ನಗರವನ್ನು ಸಮೀಪಿಸಿದಾಗ, ನಗರದ ರಾಜ್ಯಪಾಲ

ಜಕ್ರಿಯಾ ಖಾನ್ ಯುದ್ಧದಲ್ಲಿ ಸೋತು ೩೦ ಲಕ್ಷ ಹಣ ನೀಡಿ ಸಂಧಿ ಮಾಡಿಕೊಂಡ. ನಾದಿರ್ ಶಹಾ ಲಾಹೋರ್‌ನ್ನು ಆಕ್ರಮಿಸಿ, ಸೋತು ಶರಣಾದ ಜಕ್ರಿಯಾ ಖಾನ್‌ನ್ನು ತನ್ನ ಸಾಮಂತ ರಾಜ್ಯಪಾಲನನ್ನಾಗಿ ಮಾಡಿ, ದೆಹಲಿಯತ್ತ ಸಾಗಿದ.

ದೆಹಲಿಯ ಬಳಿ ಕರ್ನಾಲ್ ಎಂಬ ಸ್ಥಳದಲ್ಲಿ ಮೊಘಲ್ ಸೈನ್ಯ ಪರ್ಶಿಯನ್ ಸೈನ್ಯವನ್ನು ಎದುರಿಸಿತು. ಆ ಯುದ್ಧದಲ್ಲಿ ಮೊಘಲ್ ಸೈನ್ಯ ಸೋಲನ್ನು ಅನುಭವಿಸಿತು. ಮೊಘಲ್‌ರ ಸೈನ್ಯಾಧಿಪತಿ ಖಾನ್-ಇ-ದೌರಾನ್ ಖಾನ್ ಸಾವನ್ನಪ್ಪಿದ. ಮೊಘಲ್ ಬಾದಶಹಾ ವಿಜಯಿ ನಾದಿರ್ ಶಹಾನ ಬಳಿಗೆ ಯಾತ್ರಿಸಿ ಶರಣಾದ. ಆದರೆ ನಾದಿರ್‌ಶಹಾ, ಭಾರತದ ಮೇಲೆ ದಂಡೆತ್ತಿ ಬಂದಿದ್ದು, ಮುಸ್ಲಿಮ್ ಬಾದ್‌ಶಹಾ ಮತ್ತು ಇತರ ಮುಸ್ಲಿಮ್ ಸುಲ್ತಾನರ ಮೇಲೆ ದಬ್ಬಾಳಿಕೆ ನಡೆಸಿದ ದಕ್ಷಿಣದ ಮರಾಠರನ್ನು ಸದೆಬಡಿಯ ಉದ್ದೇಶ ಎಂದು ಸಾರಿ, ದೆಹಲಿ ಬಾದ್‌ಶಹಾ ತನಗೆ ಯುದ್ಧದಿಂದುಂಟಾದ ಖರ್ಚಿನ ಬಾಬ್ತು ನೀಡುವವರೆಗೂ ತಾನು ದೆಹಲಿಯನ್ನು ತ್ಯಜಿಸಿ ಹೋಗುವುದಿಲ್ಲ ಎಂದು ಸಾರಿ, ಬಾದ್‌ಶಹಾನನ್ನು ಅವನ ಜನಾನಾದಲ್ಲಿ ಸೆರೆಯಲ್ಲಿಟ್ಟು, ಪರ್ಶಿಯನ್ ಸೈನಿಕರಿಂದ ಅವನ ಕಾವಲಿಟ್ಟ.

ದೆಹಲಿಯನ್ನು ಆಕ್ರಮಿಸಿದ ಪರ್ಶಿಯನ್‌ರು ಅಟ್ಟಹಾಸದಿಂದ ಬೀಗಿದರು. ಐತಿಹಾಸಿಕ ಕೆಂಪುಕೋಟೆಯನ್ನು ತಮ್ಮ ಸುಪರ್ದಿಗೆ ಪಡೆದುಕೊಂಡಿದ್ದಲ್ಲದೆ, ಮೊಘಲ್‌ರಿಂದ ಪ್ರಸಿದ್ಧ ಕೋಹಿನೂರ್ ವಜ್ರ ಮತ್ತು ರತ್ನಖಚಿತ ನವಿಲು ಸಿಂಹಾಸನವನ್ನು ವಶಪಡಿಸಿಕೊಂಡರು. ಮೊಘಲ್‌ರ ಸಮಸ್ತ ಧನ ದ್ರವ್ಯಗಳನ್ನು ವಶಪಡಿಸಿಕೊಂಡ ನಾದಿರ್ ಶಹಾ ತನ್ನ ಹಸಿದ ಮತ್ತು ಸಂಬಳದಿಂದ ವಂಚಿತರಾದ ಸೈನಿಕರಿಗೆ ಅವನ್ನು ಹಂಚಿ ಅವರನ್ನು ತೃಪ್ತಿಪಡಿಸಿದ.

ದೆಹಲಿಯ ನಾಗರೀಕರು ಮಾತ್ರ, ಮೊಘಲ್ ಬಾದ್‌ಶಹಾ ಸೋತು ಶರಣಾಗಿ, ಪರ್ಶಿಯನ್ ಸೈನಿಕರು ರಾಜಬೀದಿಗಳಲ್ಲಿ ಹೆಮ್ಮೆಯಿಂದ ಬೀಗಿ ಸಾಗುವುದನ್ನು ನೋಡಲಾಗಲಿಲ್ಲ. ಕ್ಷುಲ್ಲಕ ಕಾರಣಕ್ಕೆ ಅವರು ತಿರುಗಿ ಬಿದ್ದರು. ಪರ್ಶಿಯನ್ ಸೈನಿಕರ ಮೇಲೆ ಕಾಳಗ ಜರುಗಿಸಿದರು. ಸಾವಿರಾರು ಮಂದಿ ಪರ್ಶಿಯನ್ ಸೈನಿಕರ ಹತ್ಯೆ ಜರುಗಿಸಿದರು. ಸುದ್ದಿ ತಿಳಿದ ನಾದಿರ್ ಶಹಾ ಕೆರಳಿ ಕೆಂಡವಾದ. ಸ್ವತಃ ಕತ್ತಿ ಹಿಡಿದು, ತನ್ನ ಸೈನಿಕರಿಗೆ ದೆಹಲಿಯ ನಾಗರೀಕರ ಸಾಮೂಹಿಕ ಹತ್ಯೆ ಜರುಗಿಸುವಂತೆ, ಚಾಂದನೀ ಚೌಕ್‌ನ ಸೋನೇರಿ ಮಸ್ಜಿದ್‌ನಲ್ಲಿ ಕುಳಿತು ಆಜ್ಞಾಪಿಸಿದ ಮತ್ತು ಮುಂದಾಳತ್ವ ವಹಿಸಿದ. ಉನ್ಮತ್ತ ಸೈನಿಕರು ಅಮಾಯಕ ದೆಹಲಿಯ ನಾಗರೀಕರ ಮನೆ ಮನೆಗಳಿಗೆ ನುಗ್ಗಿ ಹತ್ಯೆ ಜರುಗಿಸಿದರು. ರಕ್ತದ ಕೋಡಿ ಹರಿಸಿದರು. ಸಾವಿರಾರು ಹಿಂದೂ ಮಹಿಳೆಯರು ತಮ್ಮ ಮಾನ ಮರ್ಯಾದೆಗಳನ್ನು ಉಳಿಸಿಕೊಳ್ಳಲು ಬಾವಿಗೆ ಹಾರಿ ಪ್ರಾಣ ತ್ಯಜಿಸಿದರು. ಒಂದೇ ದಿನದಲ್ಲಿ ೨ ಲಕ್ಷ ಜನರು ಹತ್ಯೆಗೀಡಾದರು.

ಈ ಹತ್ಯಾಕಾಂಡದ ಘೋರರೂಪವನ್ನು ಕಂಡ ಮೊಘಲ್ ಬಾದ್‌ಶಹಾ ಮತ್ತು

ವಜೀರ್‌ರು ನಾದಿರ್ ಶಹಾನ ಬಳಿ ಸಾಗಿ, ಹತ್ಯಾಕಾಂಡವನ್ನು ಖೈದು ಮಾಡಲು ಕಣ್ಣೀರಿಟ್ಟು ಬಿನ್ನವಿಸಿದರು. 'ತಮ್ಮ ಖಡ್ಗಕ್ಕೆ ಗುರಿಯಾದರು ಒಬ್ಬನೇ ಒಬ್ಬ ಉಳಿದಿಲ್ಲ. ತಮ್ಮ ಈ ಹತ್ಯಾಕಾಂಡವನ್ನು ನಿಲ್ಲಿಸಲಾಗದಿದ್ದಲ್ಲಿ, ಸತ್ತು ಹೆಣವಾದವರನ್ನು ಬದುಕಿಸಿ, ಅವರ ಹತ್ಯೆಯನ್ನು ತಾವು ಪುನರಾರಂಭಿಸಬಹುದು !' ಎಂದು ಬೇಡಿಕೊಂಡರು. ನಾದಿರ್ ಶಹಾ ಹತ್ಯಾಕಾಂಡವನ್ನು ನಿಲ್ಲಿಸಿದ. ಆದರೆ, ಪುನಃ ಯಾವುದೋ ಕ್ಷುಲ್ಲಕ ಕಾರಣಕ್ಕೆ, ದೆಹಲಿಯ ಆಸುಪಾಸಿನಲ್ಲಿದ್ದ ಮೊಘಲ್‌ಪುರ ಮತ್ತು ಇತರ ಹಳ್ಳಿಗಳ ಜನರ ಹತ್ಯೆ ಜರುಗಿಸಿದ. ೪

ಮೊಘಲ್ ಬಾದ್‌ಶಹಾನೊಂದಿಗೆ ಮಾಡಿಕೊಂಡ ಸಂಧಿಯ ಪ್ರಕಾರ, ಮೊಘಲ್ ಸಾಮ್ರಾಜ್ಯದ ಕಾಬೂಲ್, ಸಿಂಧ್, ಥಟ್ಟಾ, ಪಂಜಾಬ್‌ಗಳನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ. ನಾದಿರ್‌ಶಹಾ ಅಪಾರ ಧನ ದ್ರವ್ಯ, ಕುದುರೆ, ಆನೆ ಮತ್ತಿತರ ವಸ್ತುಗಳೊಂದಿಗೆ, ಪರ್ಶಿಯಾದತ್ತ ಪಯಣಿಸಿದ.

ಇತ್ತ, ಸದವಕಾಶಕ್ಕಾಗಿ ಕಾದು ಕುಳಿತಿದ್ದ ಸಿಖ್ಖರು, ಅಮೃತಸರದ ಬಳಿ ಇರುವ ಕಾಡಿನ ಮಧ್ಯೆ ಇರುವ ದಲೇವಾಲ್ ಎಂಬ ಸ್ಥಳದಲ್ಲಿ ಒಂದು ಮಣ್ಣಿನ ಕೋಟೆ ಕಟ್ಟಿ, ಆಯುಧ ಶೇಖರಿಸಿ, ಅಡಗುತಾಣವನ್ನಾಗಿ ಮಾಡಿಕೊಂಡರು. ನಾದಿರ್ ಶಹಾನ ಸೈನ್ಯ ಪಂಜಾಬಿನ ಮೂಲಕ ಹಾದುಹೋಗುವಾಗ, ರಾತ್ರೋ ರಾತ್ರಿ ಅವರ ಸೈನ್ಯದ ಮೇಲೆ ಬಿದ್ದು, ಕೊಂಡೊಯ್ಯುತ್ತಿದ್ದ ಸಾಮಗ್ರಿಗಳ ಲೂಟಿ ಮಾಡಹತ್ತಿದರು. ಈ ಮೊದಲೇ ಯುದ್ಧಾಚರಣೆ, ಬಿಸಿಲು ಬೇಗೆ ಮತ್ತಿತರ ರೋಗ ರುಜಿನಗಳಿಂದ ಬಸವಳಿದ ಪರ್ಶಿಯನ್‌ರಿಗೆ ಮಹಾ ಉಪಟಳ ನೀಡಿದ ಸಿಖ್ಖರ ಆಚರಣೆ ಕಂಡು ನಾದಿರ್ ಶಹಾ ಚಿಂತಾಕ್ರಾಂತನಾದ. ಕೈಗೆ ಸಿಗದೆ, ಹಠಾತ್ತನೆ ದಾಳಿ ಎಸಗುವ ಸಿಖ್ಖರ ಸಾಮರ್ಥ್ಯ ಕಂಡು, ಆತ ನೆನೆಸಿದ ಈ ಸಿಖ್ಖರು ಸಾಮ್ರಾಜ್ಯ ಕಟ್ಟುವುದರಲ್ಲಿ ನಿಸ್ಸೀಮರಾಗಿ, ಮುಂದೆ ಒಂದು ದಿನ ಅವರು ತಮ್ಮ ಗುರಿ ಮುಟ್ಟುವರೆಂದು ಭವಿಷ್ಯ ನುಡಿದ. ೫

ಪರ್ಶಿಯನ್‌ರಿಂದ ನೇಮಕಗೊಂಡ ಲಾಹೋರ್‌ನ ಜಕ್ರಿಯಾ ಖಾನ್, ಸಿಖ್ಖರು ಪರ್ಶಿಯನ್ ಸೈನ್ಯದ ಮೇಲೆ ನಡೆಸಿದ ದಾಳಿ ಮತ್ತು ಅವರು ದಿನೇ ದಿನೇ ಗಳಿಸುತ್ತಿದ್ದ ಪ್ರಾಬಲ್ಯಗಳಿಂದ ಹೆದರಿದ. ಅವರ ವಿರುದ್ಧ ಕ್ರಮ ಜರುಗಿಸುವ ಸಲುವಾಗಿ, ಪುನಃ ಅವರ ಮೇಲೆ ಬೆಲೆವಿರಿಸಿದ. ಇತರ ಅಧಿಕಾರಿಗಳಿಗೆ ಸಿಖ್ಖರ ತಲೆ ತಂದವರಿಗೆ ಇನಾಮು ನೀಡಲಾಯಿತು. ಅವರ ರಕ್ಷಣೆ ನೀಡಿದವರಿಗೆ 'ಇಸ್ಲಾಂ ಅಥವಾ ಮರಣದಂಡನೆ'ಯ ಸೂತ್ರ ಹೊರಿಸಲಾಯಿತು. ಸಾವಿರಾರು ಹಿಂದೂಗಳನ್ನು ಬಲವಂತವಾಗಿ ಮತಾಂತರಗೊಳಿಸಲಾಯಿತು. ಇದನ್ನು ತಪ್ಪಿಸಿಕೊಳ್ಳಲು ಹಿಂದೂಗಳು ಸಿಖ್ಖರನ್ನು ಹಿಡಿದು ಒಪ್ಪಿಸಿ ತಮ್ಮ ಕ್ಷೇಮ ಸಾಧಿಸಿದರು. ಸಿಖ್ಖರ ನರಮೇಧ ಇಮ್ಮಡಿಸಿ, ಅವರ ಜೀವನ ಜರುಗಿಸುವುದು ಅಸಾಧ್ಯವಾಯಿತು.

---

೪. P 372 History of Sikh People by G.Singh

೫. P 374 History of Sikh People by G.Singh

ಸಿಖ್‌ರ ನರಮೇಧವನ್ನು ಮಾಡಿದ ಮುಸ್ಲಿಮ್‌ರ ಕೈ ಜೋಡಿಸಿದರು ಅವರ ಬಾಲಬಡಕರಾದ ಕೆಲವು ಹಿಂದೂ ಅಧಿಕಾರಿಗಳು. ತಾಲ್ವಾಂಡೀನ ರಾಮ್ ರಾಂಧವಾ, ನೌರೇರಾ ಧಾಲಾದ ಸಾಹಿಬ್ ರಾಯ್, ಮಂಡಿಯಾಲಿಯ ಮಸ್ಸಾ ರಂಘರ್ ಎಂಬಾತರು ಪ್ರಮುಖರಾಗಿದ್ದರು ಎಂದರು ಇತಿಹಾಸಕಾರರು. ೬

ಇವರಲ್ಲಿ ಮಸ್ಸಾ ರಾಂಘರ್ ಎಂಬಾತ ಬಲು ಘೋರ ಕಾರ್ಯ ಮಾಡಿದ. ಲಹೋರ್‌ನ ಮೊಘಲ್ ರಾಜ್ಯಪಾಲ ಮಸ್ಸಾ ರಾಂಘರ್, ಹರಮಂದಿರವನ್ನು ಒಂದು ನಾಟ್ಯಮಂದಿರವನ್ನಾಗಿ ಪರಿವರ್ತಿಸಿದ. ಅಲ್ಲಿ ನಡೆಯಬಾರದ ಕುಖ್ಯಾತ ಕಾರ್ಯಗಳನ್ನು ಮಾಡಿದ. ಹರಮಂದಿರದ ಆವರಣವನ್ನು ಕುದುರೆ ಲಾಯವನ್ನಾಗಿ ಮಾಡಿ ಅದರ ಪವಿತ್ರತೆಯನ್ನು ಹಾಳಗೆಡವಿದ.

ಈ ಹೃದಯ ಕಲಕುವ ಸಂಗತಿ ಅರಿತ ಸಿಖ್‌ರ ಮೈ ಮನಸ್ಸು ರೋಸಿತು. ಅವರ ರಕ್ತ ಕುದ್ದು, ಉನ್ಮತ್ತರಾದರು. ಜಯಪುರದ ಮೊಹ್ತಾಬ್ ಸಿಂಗ್ ಮತ್ತು ಮಾರಿಕಾಂಬೋ ಹಳ್ಳಿಯ ಸುಖಾ ಸಿಂಗ್‌ರು ತಮ್ಮ ಪವಿತ್ರ ಗುಡಿಗೆ ಒದಗಿದ ದುಸ್ಥಿತಿಯನ್ನು ಕಂಡು ಕೇಳಿ ಕೆರಳಿದರು. ಅದನ್ನು ಕೆಡಿಸಿ ವಿರೂಪಗೊಳಿಸಿದವರ ವಿರುದ್ಧ ಪ್ರತೀಕಾರ ತೆಗೆದುಕೊಳ್ಳಲು ನಿಶ್ಚಯಿಸಿದರು.

ಆಗಸ್ಟ್ ೧೭೪೦ ರಲ್ಲಿ ಅವರಿಬ್ಬರೂ ಅಮೃತಸರಕ್ಕೆ ಧಾವಿಸಿದರು. ಮುಸ್ಲಿಮರ ವೇಶ ತೊಟ್ಟು ಗುಡಿಯೊಳಗೆ ಹೊಕ್ಕರು. ಅವರ ಕಣ್ಣುಗಳಿಗೆ, ನಾಟ್ಯರಾಣಿಯೊಬ್ಬಳು ನೃತ್ಯ ಮಾಡುತ್ತಿರುವ ದೃಶ್ಯ ಕಂಡಿತು. ಅದನ್ನು ನೋಡಿ ಆನಂದಿಸುತ್ತಾ ಕುಳಿತಿದ್ದ ಮಸ್ಸಾ ರಂಘಡ್, ಗುಡಿಯ ಬಾಗಿಲು ಸುಖಾಸಿಂಗ್‌ಗೆ ಕಾಯುತ್ತಿದ್ದ ಹಾಗೆ, ಒಳಗಡೆ ಸೇರಿದ ಮೆಹತಾಬ್ ಸಿಂಗ್ ತನ್ನ ಕತ್ತಿ ಹಿರಿದು, ಮುಸ್ಸಾ ರಂಘಡ್‌ನ ಕತ್ತು ಕತ್ತರಿಸಿದ. ಸುತ್ತಮುತ್ತಲಿನ ಜನ ಮತ್ತು ಕಾವಲುಗಾರರು ಎಚ್ಚೆತ್ತುಗೊಳ್ಳುವುದರೊಳಗೆ, ಇಬ್ಬರೂ ಗುಡಿಯಿಂದ ಓಡಿ ತಪ್ಪಿಸಿಕೊಂಡರು.

ಭಟರು ಮೆಹ್ತಾಬ್‌ಸಿಂಗ್‌ನ ಹಳ್ಳಿಯಾದ ಮಿರಾನ್‌ಕೋಟ್‌ಗೆ ತೆರಳಿದಾಗ, ಅಲ್ಲಿ ಅವನ ಎಳೇ ಮಗ ರಾಯ್‌ಸಿಂಗ್‌ನನ್ನು ಕಂಡರು. ಮೆಹ್ತಾಬ್ ಸಿಂಗ್ ಅಲ್ಲಿ ನಾಪತ್ತೆಯಾಗಿದ್ದ. ಕೋಪಗೊಂಡ ಆ ಎಳೇ ಮಗನನ್ನು ಸಾಯಿಸಲು ಪ್ರಯತ್ನಿಸಿದರೂ, ಆ ಮಗು ಗಾಯಗೊಂಡರೂ ಬದುಕಿ ಉಳಿಯಿತು. ಮುಂದೆ ರತ್ತನ್ ಸಿಂಗ್ ಭಂಗೂ ಎಂಬ ಹೆಸರಿನಲ್ಲಿ ಪ್ರಸಿದ್ಧಿ ಪಡೆಯಿತು.

ಈ ಹುಚ್ಚ ಧೈರ್ಯದ ಮತ್ತು ಅಪೂರ್ವ ಪ್ರತೀಕಾರದ ಎಸಗಿದ ಕಾರ್ಯದಿಂದ ಸಿಖ್‌ರು ಉತ್ತೇಜನಗೊಂಡರು. ಮೊಘಲರು ಅವರ ಮೇಲೆ ಕೈಗೊಂಡಿದ್ದ ಕ್ರೂರ, ನಿರ್ದಯ, ನಿಷ್ಠುರ, ಬರ್ಬರ ಅಮಾನವೀಯ ದುರಾಚಾರ, ದೌರ್ಜನ್ಯಗಳ ವಿರುದ್ಧ

---

೬. P 375 History of Sikh People by G.Singh

ಹೋರಾಡಲು ತೀರ್ಮಾನಿಸಿದರು. ಅವರು ಸಾಮೂಹಿಕವಾಗಿ ಹೋರಾಡಲು ಸಂಘಟನೆಯ ಅವಶ್ಯಕತೆ ಇದ್ದರೂ, ವೈಯಕ್ತಿಕವಾಗಿ, ಮತ್ತು ಏಕಾಂಗಿಯಾಗಿ ಹೋರಾಡಿದ ನಿದರ್ಶನ ಇತಿಹಾಸಕಾರರು ನೀಡಿರುತ್ತಾರೆ.

ಜಾಟ್ ಸಿಖ್ ಬೋತಾ ಸಿಂಗ್ ಮತ್ತು ರಂಘರೇತಾ ಸಿಖ್ ಗರ್ಜಾ ಸಿಂಗ್ ಎಂಬ ಈರ್ವರು, ಕದ್ದು ಮುಚ್ಚಿ ಹರಮಂದಿರದ ಒಳಗೆ ನುಸುಳಿ, ಅಲ್ಲಿನ ಮೊಘಲ್ ಆಡಳಿತಗಾರರಿಗೆ ಕಿರುಕುಳ, ಕೊಡುವುದಲ್ಲದೆ, ಪವಿತ್ರ ಕೊಳದಲ್ಲಿ ಸ್ನಾನ ಮಾಡಿ, ಹೊರಗೋಡಿ ಸುತ್ತಲಿನ ಕಾಡುಮೇಡುಗಳಲ್ಲಿ ಅವಿತುಕೊಳ್ಳುವ ಹವ್ಯಾಸ ಇಟ್ಟುಕೊಂಡು, ಆಳುವವರಿಗೆ ತಲೆನೋವು ತಂದರು. ಅನಂತರ ಧೈರ್ಯಗೊಂಡು, ನಗರದ ಹೊರವಲಯದ ಹೆದ್ದಾರಿಯಲ್ಲಿ ಸುಂಕಶಾಲೆ ತೆರೆದು, ದಾರಿಹೋಕರಿಂದ ಸುಂಕ ವಸೂಲಿ ಮಾಡತೊಡಗಿದರು. ಅವರ ಧೈರ್ಯ, ಧೋರಣೆ, ಹೋರಾಡುವ ಕೆಚ್ಚು ಕಂಡು ಜನರು ಹೆದರಿ, ಸುಂಕ ನೀಡಿ ಸಾಗುತ್ತಿದ್ದರು. ಆದರೆ ಸುದ್ದಿ ಹರಡಿ ಲಾಹೋರ್‌ನ ರಾಜ್ಯಪಾಲನ ಕಿವಿಗಳಿಗೆ ತಲುಪಿತು. ಆತ ಕ್ರೋಧಗೊಂಡ. ಸೈನ್ಯದ ತುಕಡಿ ಕಳುಹಿಸಿ ಅವರನ್ನು ಸೆರೆಹಿಡಿಯಲು ಶ್ರಮಿಸಿದ. ಆದರೆ ಆ ವೀರ ಸಿಖ್‌ರು ಸೆರೆಯಾಗದೆ, ಮೊಘಲರ ವಿರುದ್ಧ ಹೋರಾಡಿ ಪ್ರಾಣತ್ಯಾಗ ಮಾಡಿದರು. ೭

ಈ ಇಬ್ಬರು ವೀರ ಸಿಖ್‌ರ ತರಹ, ಇತಿಹಾಸಕಾರರು ಭಾಯಿ ತಾರಾ ಸಿಂಗ್, ಸುಬೇದ್ ಸಿಂಗ್, ಶಹಬಾಜ್ ಸಿಂಗ್, ಮತ್ತಿತರ ಸಿಖ್‌ರ ಬಲಿದಾನದ ಕತೆಗಳನ್ನು ನಿರೂಪಿಸಿದ್ದಾರೆ. ಕ್ಷುಲ್ಲಕ ಕಾರಣಕ್ಕೆ ಮೊಘಲ್‌ರು ಅವರನ್ನು ಸೆರೆಹಿಡಿದು, 'ಇಸ್ಲಾಂ ಅಥವಾ ಸಾವು' ಎಂಬ ತತ್ವದನುಸಾರ, ಅವರನ್ನು ಕ್ರೂರವಾಗಿ ಹತ್ಯೆಗೈದರು. ತಾರಾ ಸಿಂಗ್‌ನ ಹತ್ಯೆಯನ್ನು ಅತಿ ಅಮಾನುಷ ರೀತಿಯಲ್ಲಿ ಮಾಡಿ ತಮ್ಮ ಕ್ರೂರತೆಯ ಪರಮಾವಧಿಯನ್ನು ತೋರ್ಪಡಿಸಿದರು. ತಾರಾ ಸಿಂಗ್‌ನ ತಲೆಗೂದಲನ್ನು ನೆತ್ತಿಯ ಚರ್ಮದೊಂದಿಗೆ ಕಿತ್ತು, ಘೋರ ಹಿಂಸೆ ನೀಡಿ, ಅವನ ಹತ್ಯೆ ಮಾಡಿದರು. ಅವನು ಗುರುವಿನ ಜಪ ಮಾಡುತ್ತಲೇ ಆ ಅಮಾನುಷ, ಕ್ರೂರ ಹಿಂಸೆಯನ್ನು ಸಹಿಸಿಕೊಂಡು, ಪ್ರಾಣ ತ್ಯಾಗ ಮಾಡಿದ.

ಮಸ್ಸಾ ರಂಘರ್‌ನ ಕೊಲೆ ಮಾಡಿದ ಮೆಹ್ತಾಬ್ ಸಿಂಗ್‌ನನ್ನು ಸೆರೆಹಿಡಿದು, ಎತ್ತಿನಗಾಡಿಯ ಚಕ್ರಕ್ಕೆ ಅವನ ದೇಹ ಕಟ್ಟಿ ಎಳೆದು, ಹಿಂಸಿಸಿ, ಹತ್ಯೆ ಮಾಡಿದರು ಮೊಘಲ್‌ರು.

ಸ್ವತಂತ್ರವಾಗಿ ಏಕಾಂಗಿಯಾಗಿ ಯಾರ ಮುಂದಾಳತ್ವವಿಲ್ಲದೆ, ಕೆಲವು ಸಿಖ್‌ರು ತಮ್ಮ ಧರ್ಮಕ್ಕಾಗಿ ತಮ್ಮ ನಡೆನುಡಿಗಾಗಿ ಹೋರಾಡಿದರೆ ಮತ್ತೆ ಕೆಲವು ಸಿಖ್‌ರು ಲಾಹೋರ್ ನಗರದ ಬಳಿ ಇರುವ ಎಮಿನಾಬಾದ್ ಎಂಬ ಆದಿ ಗುರು ನಾನಕ್‌ರು ಪವಿತ್ರಗೊಳಿಸಿದ ಸ್ಥಳಕ್ಕೆ ಯಾತ್ರಾರ್ಥಿಗಳಾಗಿ ತೆರಳಿದಾಗ, ಅಲ್ಲಿ ಅವರಿಗೆ ಸೂಕ್ತ

---

೭. P 376 History of Sikh by G. Singh

ಆಹಾರ, ವಸತಿ ಮತ್ತು ಇತರ ಸೌಕರ್ಯ ದೊರೆಯಲಿಲ್ಲ. ಅಲ್ಲಿನ ಫೌಜುದಾರ್, ಸಿಖ್‌ರ ಮನವಿಯನ್ನು ತಿರಸ್ಕರಿಸಿದ್ದೇ ಅಲ್ಲದೆ, ಅವರನ್ನು ತನ್ನ ಆಡಳಿತದಲ್ಲಿರುವ ಪ್ರದೇಶದೊಳಗೆ ಕಾಲಿರಿಸದಂತೆ ಆದೇಶ ನೀಡಿದ. ಸಿಟ್ಟಿಗೆದ್ದ ಸಿಖ್‌ರು, ಆ ಪ್ರದೇಶದಲ್ಲಿ ದೊರೆತ ಕುರಿಮಂದೆಯನ್ನು ಸ್ವಾಧೀನಪಡಿಸಿಕೊಂಡು, ಅವನ್ನು ಕೊಂದು ತಿಂದು ತಮ್ಮ ಹಸಿವನ್ನು ನೀಗಿಸಿಕೊಂಡರು. ಸುದ್ದಿ ಅರಿತ ಹಿಂದೂ ಫೌಜುದಾರ, ತನ್ನ ಸೈನಿಕರೊಂದಿಗೆ ಅಲ್ಲಿಗೆ ಬಂದು ಕದನ ಹೂಡಿದ. ಸಿಖ್‌ರು ಅವನ ವಿರುದ್ಧ ಹೋರಾಡಿ, ಫೌಜುದಾರ ಜಸ್ವಂತ್ ರಾಯ್‌ನ ಹತ್ಯೆ ಮಾಡಿದರು. ಅವನ ಹತ್ಯೆಯಾದೊಡನೆ ಮೊಘಲ್ ಸೈನ್ಯ ಚದುರಿತು. ಸಿಖ್‌ರಿಗೆ ವಿಜಯ ದೊರೆತ ಫಲ, ಎಮಿನಾಬಾದ್ ನಗರವನ್ನು ಸೂರೆಗೊಳ್ಳುವುದರಲ್ಲಿ ಕೊನೆಗೊಂಡಿತು.

ಕ್ರೋಧಗೊಂಡ ಜಸ್ವತ್ ರಾಯ್‌ನ ಸಹೋದರ, ಲಾಹೋರ್‌ನ ನವಾಬನ ಮುಂದೆ ನಿಂತು ತನ್ನ ಶೋಕ ವ್ಯಕ್ತಪಡಿಸಿ, ಸಿಖ್‌ರ ನಾಮಾವಶೇಷ ಆಗುವವರಿಗೂ ನಾನು ಖಾತ್ರಿ (ಕ್ಷತ್ರಿಯ)ಯ ಮಗ ಎಂದು ಹೇಳಿಕೊಳ್ಳುವುದಿಲ್ಲ ಎಂದು ಸಾರಿದನು.

'ಜಾತಿ-ಜಾತಿ ಹಗೆ' ಇಲ್ಲಿ ಕೆಲಸ ಮಾಡಿತ್ತು. ಗುರು ನಾನಕ್ ಮತ್ತು ಇತರ ಸಿಖ್ ಗುರುಗಳು ಖಾತ್ರಿ ಪಂಗಡಕ್ಕೆ ಸೇರಿದರೂ, ಅವರ ಶತ್ರುಗಳಾಗಿ ಪರಿಣಮಿಸಿದ್ದರು ಖಾತ್ರೀಗಳು. ಈ ಖಾತ್ರೀ ಫೌಜುದಾರನ ದೆಸೆಯಿಂದ ಸಿಖ್‌ರ ನರಮೇಧ ಪುನಃ ಪ್ರಾರಂಭವಾಗಿ, ಅವರು ಜೀವನ ಸಾಗಿಸುವುದು ದುರ್ಲಭವಾಯಿತು.

ಲಾಹೋರ್ ನಗರದಲ್ಲಿ ವಾಸಿಸುವ ಎಲ್ಲಾ ಸಿಖ್‌ರನ್ನು ಸೆರೆ ಹಿಡಿದು, ೧೦ನೆಯ ಮಾರ್ಚ್, ೧೭೪೬ ರಂದು, ಸಾಮೂಹಿಕ ಹತ್ಯೆ ಮಾಡಿದರು. ನಗರದ ಹಿಂದೂ ಪ್ರಮುಖರು ಮಧ್ಯಪ್ರವೇಶಿಸಿ, ಸಿಖ್‌ರ ನರಮೇಧವನ್ನು ತಪ್ಪಿಸಲು ಶ್ರಮಿಸಿದರೂ, ಪ್ರಯೋಜನವಾಗಲಿಲ್ಲ. ೮

ಪಂಜಾಬ್‌ನ ಇತರ ಸ್ಥಳಗಳಲ್ಲಿ ಸಿಖ್‌ರನ್ನು ಸೆರೆಹಿಡಿಯಲು, ಹತ್ಯೆ ಮಾಡಲು ನವಾಬ್ ಯಾಹ್ಯಾ ಖಾನ ಮತ್ತು ಅವನ ಹಿಂದೂಮಂತ್ರಿ ಲಖ್‌ಪತ್ ಸೈನಿಕ ಪಡೆಯೊಂದಿಗೆ ದಂಡಯಾತ್ರೆ ಜರುಗಿಸಿದ. ಸುದ್ದಿ ಅರಿತ ಸುಮಾರು ಹದಿನೈದು ಸಾವಿರ ಸಿಖ್‌ರು, ತಮ್ಮ ವಾಸಸ್ಥಾನ, ಅಡಗು ಸ್ಥಾನ ಮತ್ತು ಇತರ ಪ್ರದೇಶಗಳಿಂದ, ಮೊಘಲ್‌ರಿಂದ ತಪ್ಪಿಸಿಕೊಂಡು, ಶಿವಾಲಕ್ ಬೆಟ್ಟ ಪ್ರದೇಶಗಳತ್ತ ಧಾವಿಸಿದರು. ಆದರೆ ಅವರ ದುರಾದೃಷ್ಟಕ್ಕೆ ಉಕ್ಕಿ ಹರಿಯುತ್ತಿದ್ದ ನದಿ ಅಡ್ಡಿ ಬಂದು, ಅಲ್ಲೇ ಕಾಯುತ್ತಾ ಕುಳಿತ ಮೊಘಲರ ಕತ್ತಿಗಳಿಗೆ ಆಹುತಿಯಾದರು. ಜೂನ್ ೧೭೪೬ರಲ್ಲಿ ಅಳಿದುಳಿದ ಸುಮಾರು ೨೦೦೦ ಸಿಖ್‌ರು ಬಹಳ ಕಷ್ಟಪಟ್ಟು, ರವಿ ನದಿ ದಾಟಿ, ಬಿಯಾಸ್ ನದಿದಡ ಸೇರಿ, ಅದನ್ನು ದಾಟಿ ಶ್ರೀ ಹರಿ ಗೋಬಿಂದ್ ಪುರದಲ್ಲಿ ಠಿಕಾಣಿ ಹೂಡಿದರು. ಆದರೆ ಅಲ್ಲಿ ಕೂಡ ಅವರಿಗೆ ನೆಲೆ ಸಿಗದಾಯಿತು. ಅವರ ಮೇಲೆ ಬಿದ್ದ ಪಠಾಣರಿಂದ

೮. P 379 History of Sikh

ತಪ್ಪಿಸಿಕೊಳ್ಳಲು ಅಲ್ಲಿಂದ ಓಡಿದ ಸಿಖ್ಖರು ಸಟ್ಲೆಜ್ ನದಿಯನ್ನು ದಾಟಿ, ತಪ್ಪಿಸಿಕೊಂಡು ಮಾಲ್ವಾ ಪ್ರದೇಶ ಸೇರಿದರು. ಈ ಘಟನೆಯಲ್ಲಿ ಸುಮಾರು ಏಳು ಸಾವಿರ ಸಿಖ್ಖರ ಸೆರೆಯಾಗಿ, ಅವರನ್ನು ಲಾಹೋರ್ ನಗರಕ್ಕೆ ಕರೆತಂದು, ಚಿತ್ರಹಿಂಸೆ ಮಾಡಿ ಹತ್ಯೆ ಮಾಡಿದರು ಮೊಘಲರು. ಅವರ ಶವಗಳನ್ನು ಒಂದು ಮಸೀದಿಯ ಕೆಳಗೆ ಹೂಳಿ ಮುಚ್ಚಿದರು.

ಈ ಕರುಣಾಜನಕ ಮತ್ತು ಭಯಾನಕ, ಬೀಭತ್ಸಕರ ಹಾಗೂ ಕ್ರೂರತನದ ಹಿಂಸಾಚಾರವನ್ನು ಈ ಹಿಂದೆ ಸಿಖ್ಖರು ಅನುಭವಿಸಿರಲಿಲ್ಲವಾಗಿತ್ತು ಎಂದರು ಇತಿಹಾಸಕಾರರು. ಈ ಘಟನೆಯನ್ನು 'ಘಾಲುಘರಾ' (ಕರಾಳಮೃತ್ಯು – ಕಾಂಡ) ಎಂದು ಕರೆದರು ಸಿಖ್ಖರು. ೯ ೧೦ ೧೧

---

೯. P 380

೧೦. History of Sikh By G.Singh

೧೧. P 101 History of Sikh by cunningham

ಅಧ್ಯಾಯ ೩
ಸಿಖ್ ಜಾಥೇದಾರರು

ಸಿಖ್‌ರ ಬಲವನ್ನು ಕುಗ್ಗಿಸಿ, ಅವರನ್ನು ಗುಡ್ಡಬೆಟ್ಟಗಳಲ್ಲಿ ಅವಿತುಕೊಂಡು ಜೀವರಕ್ಷಣೆ ಮಾಡಿಸಿಕೊಳ್ಳುವ ನಿಟ್ಟಿನಲ್ಲಿ ಜಯ ಗಳಿಸಿದ ಲಾಹೋರ್‌ನ ರಾಜ್ಯಪಾಲ ಯಾಹ್ಯಾಖಾನ್ ಅವನ ಸಹೋದರ ಶಹಾ ನವಾಜ್ ಖಾನ್‌ನಿಂದ ವಿಪ್ಲವ ಎದುರಿಸಬೇಕಾಯಿತು. ೧೭೪೫ರಲ್ಲಿ, ಮುಲ್ತಾನ್‌ನಿನ ರಾಜ್ಯಪಾಲನಾಗಿದ್ದ ಖಾನ್, ಲಾಹೋರ್‌ನ ಮೇಲೆ ದಂಡೆತ್ತಿ ಬಂದು, ಯಾಹ್ಯಾ ಖಾನ್ ಮತ್ತು ಅವನ ಹಿಂದೂ ಮಂತ್ರಿ ಲಖ್‌ಪತ್ ರಾಯ್‌ರನ್ನು ಸೋಲಿಸಿ ಓಡಿಸಿದ. ಆದರೆ, ಅವನ ಆ ಆಕ್ರಮಣ ಮತ್ತು ಪದವಿಗಳಿಗೆ ದೆಹಲಿ ದರ್ಬಾರ್‌ನಿಂದ ಒಪ್ಪಿಗೆ ದೊರೆಯದ ಕಾರಣ, ತನ್ನ ಸಹಾಯಕ್ಕೆ ನೆರೆಯ ಆಫ್ಘನ್ ದೊರೆ ಶಾಹ ಅಬ್ದಾಲಿ ದುರಾನಿಯನ್ನು ಭಾರತದ ಮೇಲೆ ಆಕ್ರಮಣ ಜರುಗಿಸಲು ಆಹ್ವಾನಿಸಿದ. ಪಂಜಾಬ್‌ನ್ನು ಅವನಿಗೆ ಒಪ್ಪಿಸಿ ತಾನು ಅವನ ಸಾಮಂತ ರಾಜನಾಗಿರಲು ಸಮ್ಮತಿಸಿದ.

ಅತೀವ ಸ್ವಾರ್ಥಸಾಧನೆ, ದೇಶಾಭಿಮಾನದ ಕೊರತೆ, ಒಗ್ಗಟ್ಟು, ಕೆಚ್ಚೆದೆಯ ಸ್ವಾಭಿಮಾನಗಳ ಶೂನ್ಯತೆ, ದುರಾಶೆ, ಮತ್ಸರ, ಒಳ-ಜಗಳಗಳಿಂದ ನರಳಿ, ನಶಿಸುತ್ತಿರುವ ಆಳುವ ಜನಾಂಗ ಮತ್ತು ಪ್ರಜೆಗಳು ದೇಶವನ್ನು ಮತ್ತೊಮ್ಮೆ ಪರಕೀಯರ ದಾಳಿಗೆ ಈಡುಮಾಡಿತ್ತು.

ದೇಶೀಯ ರಾಜರು, ಮಹಾರಾಜರು, ನವಾಬರು, ನಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಪರಕೀಯರ ಸಹಾಯ ಅಪೇಕ್ಷಿಸಿ, ಅವರನ್ನು ಆಹ್ವಾನಿಸಿ, ತಮ್ಮ ದೇಶ ಮತ್ತು ಸಂಪತ್ತನ್ನು ಅವರಿಗೆ ಒಪ್ಪಿಸಿ, ತಾವು ಮತ್ತು ದೇಶೀಯರನ್ನು ಅವರ ಗುಲಾಮಗಿರಿಗೆ ತಳ್ಳಿದ್ದು ಭಾರತದ ಇತಿಹಾಸದ ಪುಟಗಳಲ್ಲಿ ಉದ್ದಕ್ಕೂ ಓದುತ್ತಿದ್ದೇವೆ, ಕಾಣುತ್ತಿದ್ದೇವೆ ಮತ್ತು ಅನುಭವಿಸುತ್ತಿದ್ದೇವಷ್ಟೆ. ಇಂದಿಗೂ ಈ ಪ್ರವೃತ್ತಿ ಕಾಣಿಸುತ್ತಿರುವ ವಿಷಯ ಈ ದೇಶದ ನಾಗರೀಕರ ದೌರ್ಭಾಗ್ಯ.

ಬಾಬರ್‌ನನ್ನು ಆಹ್ವಾನಿಸಿದ್ದ ಸಿಕಂದರ್ ಲೋಡಿ, ಅಹಮದ್ ದುರಾನಿಯನ್ನು ಆಹ್ವಾನಿಸಿದ ಮುಲ್ತಾನ್‌ನ ಶಹಾ ನವಾಜ್‌ರ ಉದಾಹರಣೆಯನ್ನು ನೀಡಬಹುದಾಗಿದೆ. ಕ್ರಮೇಣ, ಇದೇ ಅಬ್ದಾಲಿಯನ್ನು ಮರಾಠರ ಉಪಟಳ ಮತ್ತು ಅವರ ಆಳ್ವಿಕೆಯ ವಿರುದ್ಧ, ಪುನಃ ಭಾರತದ ಮೇಲೆ ದಂಡೆತ್ತಿ ಬರಲು ಆಹ್ವಾನಿಸಿದರು ಭಾರತದ ಮುಸ್ಲಿಮರು ಮತ್ತು ನವಾಬ್‌ರು. ಮೂರು ನಿರ್ಣಾಯಕ ಯುದ್ಧಗಳು, ಪಾಣೀಪತ್‌ನಲ್ಲಿ ಜರುಗಿ, ಭಾರತದ ಇತಿಹಾಸವನ್ನು ಬದಲಾಯಿಸಿತು. ಭಾರತ ಮುಸ್ಲಿಮರ ಆಳ್ವಿಕೆಗೆ ಸಿಲುಕಿ ೮೦೦ ವರ್ಷಗಳ ಕಾಲ ಗುಲಾಮಗಿರಿಗೆ ತಲೆಬಾಗಿತು.

ಲಾಹೋರ್‌ನ್ನು ಆಕ್ರಮಿಸಿ, ತನ್ನ ಸಹಾಯಕ್ಕೆ ಬರಲು ಅಬ್ದಾಲಿಯನ್ನು ಆಹ್ವಾನಿಸಿದ ಶಾಹ್ ನವಾಬ್, ತನ್ನ ಆಹ್ವಾನವನ್ನು ಮರೆತ. ಅಬ್ದಾಲಿ ದಂಡೆತ್ತಿ ಬಂದಾಗ, ಅವನಿಗೆ ಆತಿಥ್ಯ ನೀಡಿ ಲಾಹೋರ್‌ಗೆ ಬರಮಾಡಿಕೊಡದೆ, ಅವನನ್ನು ಕಡೆಗಣಿಸಿದ. ಕೋಪಗೊಂಡ ಅಬ್ದಾಲಿ, ಲಾಹೋರ್‌ನನ್ನು ಆಕ್ರಮಿಸಿದ. ಶಾಹ್ ನವಾಜ್‌ನನ್ನು ಓಡಿಸಿದ. ಆದರೆ ದೆಹಲಿಯಿಂದ ಬಂದ ಮೊಘಲ್ ಸೈನ್ಯವನ್ನು ಸೋಲಿಸಲಾಗದೆ, ಆತ ತನ್ನೂರಿಗೆ ಹಿಂದುರಿಗಿದ.

ಈ ಸಂದರ್ಭವನ್ನು ಸದುಪಯೋಗಿಸಿಕೊಂಡ ಸಿಖ್ಖರು ಹಿಂದಿರುಗುತ್ತಿದ್ದ ಅಬ್ದಾಲಿಯ ಸೈನ್ಯದ ಮೇಲೆ ಬಿದ್ದು, ಅವರನ್ನು ದೋಚಿದರು. ಆಗ ಅವರ ನಾಯಕನಾಗಿ ಮಿಂಚಿದ ಸರದಾರ್ ಜಸ್ಸಾ ಸಿಂಗ್ ಅಹ್ಲೂವಾಲಿಯಾ. ಈತ ಲಾಹೋರ್ ನಗರದ ಬಳಿ ಇರುವ ಅಹ್ಲೂ ಅಥವಾ ಅಹ್ಲೂವಾಲ್ ಎಂಬ ಹಳ್ಳಿಯಲ್ಲಿ ಜನ್ಮ ತಳೆದ (೧೭೧೮). ಅವನ ಪೂರ್ವಜರು ಶರಾಬು ಮಾರಾಟ ಮಾಡುವ ವೃತ್ತಿಯಲ್ಲಿದ್ದರು. ೧

ಸರದಾರ್ ಜಸ್ಸಾ ಸಿಂಗ್ ತನ್ನ ಸಂಗಡಿಗರೊಂದಿಗೆ, ಅಮೃತಸರದ ಬಳಿ ಒಂದು ಮಣ್ಣಿನ ಕೋಟೆ ಕಟ್ಟಿ ಅದರಲ್ಲಿ ೫೦೦ ಮಂದಿ ಸಿಖ್ ಸೈನಿಕರನ್ನು ಇರಿಸಿದ (೧೭೪೮). ಈ ಕೋಟೆಯ ನಿರ್ಮಾಣದಲ್ಲಿ ಸಿಖ್ಖರು 'ಕರಸೇವೆ' ಮಾಡಿ, ಕೃತಾರ್ಥರಾದರು. ಈ ಕಾರ್ಯದಲ್ಲಿ ಸಿಖ್ಖರೆಲ್ಲರೂ ಭಾಗಿಯಾಗಿದ್ದು ಒಂದು ವಿಶೇಷವಾಗಿತ್ತು. ಇದೇ ಸಮಯದಲ್ಲಿ ಸಿಖ್ಖರು ಒಂದು ಐತಿಹಾಸಿಕ ನಿರ್ಣಯ ಕೈಗೊಂಡರು ಎಂದರು ಇತಿಹಾಸಕಾರರು. ಅದು ಸಿಖ್ಖರು ಮೊತ್ತಮೊದಲನೆಯ 'ಗುರಮತ್ತಾ' (ಠರಾವು) ವನ್ನು ಘೋಷಿಸಿದ ಕಾರ್ಯವಾಗಿತ್ತು.

ಚದುರಿ ಹಂಚಿ ಹೋಗಿದ್ದ ಸಿಖ್ ಸೈನ್ಯದ ಶಾಖೆಗಳನ್ನು ಅಥವಾ ಜಾಥಾಗಳನ್ನು, ಹನ್ನೊಂದು ದೊಡ್ಡ ಜಾಥಾಗಳನ್ನಾಗಿ ವಿಂಗಡಿಸಿ, ಅವುಗಳಿಗೆ ಒಂದೊಂದು ಹೊಸನಾಮ, ನಾಯಕ ಮತ್ತು ಧ್ವಜ ನೀಡಲಾಯಿತು. ಪ್ರತಿಯೊಂದು ದಳಕ್ಕೆ ಒಬ್ಬ ಸರದಾರನನ್ನು ನೇಮಿಸಲಾಯಿತು. ಅವರ ಹೆಸರುಗಳು ಹೀಗಿವೆ :

೧. ಅಹ್ಲೂವಾಲಿಯಾ – ಸರದಾರ್ ಜಸ್ಸಾಸಿಂಗ್ ಅಹ್ಲೂವಾಲಿಯಾ ೨. ಭಾಂಗೀ – ಹರಿಸಿಂಗ್ ಭಾಂಗೀ ೩. ದಲೇವಾಲಿಯಾ – ಗುಲಾಬ್ ಸಿಂಗ್ ೪. ಫೈಜಲ್‌ಪುರಿಯಾ – ನವಾಬ್ ಕಪೂರ್ ಸಿಂಗ್; ೫. ಕನ್ಹೈಯಾ – ಜೈಸಿಂಗ್ ಕನ್ಹೈಯಾ ೬. ಕರೋರ್ ಸಿಂಗಿಯಾ – ಕರೋರಾ ಸಿಂಗ್ ೭. ನಕ್ಕೈ – ಹಿರಾ ಸಿಂಗ್ ನಕ್ಕೈ ೮. ನಿಶಾನ್‌ವಾಲಾ – ದಾಸೌಂಧಾ ಸಿಂಗ್ ೯. ರಾಮ್ ಗಡಿಯಾ ೧೦. ಸುಕರ್ಚ್ಕಿಯಾ – ನೋಧ್ ಸಿಂಗ್ ೧೧. ಶಾಹಿದ್.

ಸಿಖ್ಖರಲ್ಲಿ ಮಜ್ಹಾ ಮತ್ತು ಮಾಲ್ವಾ ಎಂಬ ದೇಶೀಯ ಪಂಗಡದವರು ಏರ್ಪಟ್ಟು,

---

೧. P 382 History of Sikhs by G.Singh

ಸಟ್ಲೆಜ್ ನದಿಯ ಆಚೆ ಈಚೆಯ ದಡದ ಪ್ರದೇಶಗಳ ಸಿಖ್ಖರನ್ನು ಈ ಹೆಸರಿಂದ ಕರೆಯಲಾಯಿತು.

ಈ ಹನ್ನೊಂದು ಜಾಥಾಗಳು ವರ್ಷಕ್ಕೆ ಎರಡು ಬಾರಿ ಅಮೃತಸರದಲ್ಲಿ ಸಭೆ ಸೇರಿ ಸಮಸ್ಯೆಗಳನ್ನು ಪರಿಹಾರ ಮಾಡಿಕೊಡುವ ಮತ್ತು ಮುಂದಿನ ಕಾರ್ಯರೂಪಗಳನ್ನು ಚರ್ಚಿಸುವ ಮತ್ತು ನಿರ್ಣಯ ತೆಗೆದುಕೊಳ್ಳುವ ರೂಢಿ ತರಲಾಯಿತು. 'ದಳ ಖಾಲ್ಸಾ' ಎಂಬ ದಳ ಮಾತ್ರ ಪ್ರಮುಖ ಸಂಘಟನೆಯ ರೂಪ ತಾಳಿ, ಈ ಹನ್ನೊಂದು ಜಾಥಾದ ನಾಯಕತ್ವ ವಹಿಸಿತ್ತು. ಈ ದಳದ ಮುಖ್ಯಸ್ಥ ಸಿಖ್ ಸಮಾಜ ಮತ್ತು ಧಾರ್ಮಿಕ ವ್ಯವಹಾರಗಳನ್ನು ನೋಡಿಕೊಳ್ಳುವವನಾಗಿದ್ದ. ೨

ಗುರು ಗೋಬಿಂದ್‌ನ ಹಸರಿನಲ್ಲಿ ನಾಣ್ಯವನ್ನು ಮುದ್ರಿಸಲಾಯಿತು. 'ದೇಗ್, ತೇಘ್, ಮತ್ತು ಫತ್ಹೇ' ಎಂಬ ನಾಮವನ್ನು ಅದರಲ್ಲಿ ಮುದ್ರಿಸಿದರು. 'ಕೃಪೆ, ಅಧಿಕಾರ ಮತ್ತು ವಿಜಯ' ಎಂಬರ್ಥ ನೀಡುತ್ತದೆ ಎಂದರು ಇತಿಹಾಸಕಾರರು.

ಸಿಖ್ಖರ ಬಂಡಾಯ ಮತ್ತು ವಿರೋಧ ಕೇವಲ ಮೊಘಲ್‌ರ ವಿರುದ್ಧ ಆಗಿರದೆ, ಆಫ್ಘಾನಿಸ್ತಾನದ ಪಠಾಣರ ವಿರುದ್ಧ, ಅವರು ಎಸಗಿದ ದಾಳಿ ಮತ್ತು ಆಕ್ರಮಣಗಳ ವಿರುದ್ಧವಾಗಿತ್ತು. ಅದರಲ್ಲೂ ಅಹ್ಮದ್ ಶಾ ದುರಾನಿ ಎಸಗಿದ ೨೦ ವರ್ಷಗಳಲ್ಲಿ ಹತ್ತು ಆಕ್ರಮಣ (೧೭೪೮-೬೮) ಯುದ್ಧಗಳಿಂದ ಸಿಖ್ಖರು ಸಾವು ನೋವು ಉಂಡು, ಅವನ ವಿರುದ್ಧ ಹೋರಾಡಿ, ಜಯ ಗಳಿಸಿ ಸಂಪೂರ್ಣ ಪಂಜಾಬ್ ಮತ್ತು ಕಾಶ್ಮೀರವನ್ನು ತಮ್ಮದಾಗಿಸಿಕೊಂಡರು. ಇದೇ ಸಮಯದಲ್ಲಿ ಒಳಜಗಳ, ಪಿತೂರಿ, ಮರಾಠರ ನಿರಂತರ ಆಕ್ರಮಣ, ಬ್ರಿಟಿಷ್‌ರ ಆಗಮನ ಮತ್ತು ಸಾಮ್ರಾಜ್ಯ ವಿಸ್ತರಣೆ ಮತ್ತು ಪ್ರಾಂತೀಯ ರಾಜ್ಯಪಾಲರು ಸ್ವತಂತ್ರಗೊಂಡು, ರಾಜ್ಯಭಾರ ಜರುಗುಸುವಿಕೆ ಎಲ್ಲವೂ ದೆಹಲಿಯ ಮೊಘಲ್ ಬಾದಶಹಾರನ್ನು ಕ್ಷೀಣಗೊಳಿಸಿ, ಕೇವಲ ದೆಹಲಿ ನಗರದ ಬಾದ್‌ಶಹಾರನ್ನಾಗಿ ಮಾಡಿದ್ದವು.

ಮೊದಲನೆಯ ಬಾರಿ ಅಬ್ದಾಲಿಯನ್ನು ಕರ್ನಾಲ್‌ನಲ್ಲಿ ಜರುಗಿದ ಯುದ್ಧದಲ್ಲಿ ಸೋಲಿಸಿದ ತಮ್ಮ ದಂಡನಾಯಕ ಮೈನುಲ್ - ಮುಲ್ಕ್‌ನನ್ನು ಪಂಜಾಬ್‌ನ ರಾಜ್ಯಪಾಲರನ್ನಾಗಿ ಮಾಡಿ ತಮ್ಮ ಕೃತಜ್ಞತೆಯನ್ನು ತೋರಿಸಿದರು ಮೊಘಲ್‌ರು. ಆದರೆ ಅವನ ಪ್ರತಿಸ್ಪರ್ಧಿಯಾಗಿ ನಿಂತಿದ್ದ ಮೊಘಲ್‌ರ ಪ್ರಧಾನ ಮಂತ್ರಿ ಸಫ್‌ದರ್ ಜಂಗ್, ಮೈನುಲ್ - ಮುಲ್ಕ್‌ನ ಸರ್ವನಾಶಕ್ಕೆ ತಯಾರಿ ನಡೆಸಿದ್ದ.

ಪಂಜಾಬ್‌ನ ರಾಜ್ಯಪಾಲನಾಗಿ ನೇಮಕಗೊಂಡ ಮೈನುಲ್ - ಮುಲ್ಕ್ ಅಥವಾ ಮೀರ್ ಮನೂವಿನ ಮೊದಲ ಕಾರ್ಯ ಸಿಖ್ಖರ ನಾಶಮಾಡುವದಾಗಿತ್ತು. ಅವರ ಹುಟ್ಟು ಅಡಗಿಸಲು, ಅಮೃತಸರದ ಬಳಿ ಇದ್ದ ಸಿಖ್ಖರ ರಾಮ್ ರೌನಿ ಕೋಟೆಯ

೨. P 103 Sikhs by Cunningham

ಮೇಲೆ ಎರಗಿ, ಅದನ್ನು ವಶಪಡಿಸಿಕೊಂಡ. ಸಿಖ್‌ರನ್ನು ಸೆರೆಹಿಡಿದು ಅವರ ಗಡ್ಡ ಬೋಳಿಸಿ, ಅವರನ್ನು ಲಾಹೋರ್‌ಗೆ ಎಳೆದು ತಂದು ಕುದುರೆ ಮಾರುಕಟ್ಟೆಯಲ್ಲಿ ಅವರ ತಲೆಗಳನ್ನು ಕಡಿಯುವ ಆಜ್ಞೆಯನ್ನು ಎಲ್ಲಾ ಅಧಿಕಾರಿಗಳಿಗೂ ಮತ್ತು ಸಾಮಂತ ಹಿಂದೂ ರಾಜಮಹಾರಾಜರಿಗೆ ನೀಡಿದ. ಈ ಆಜ್ಞೆಯನ್ನು ಶಿರಸಾವಹಿಸಿದರು. ಕೈಗೆ ಸಿಕ್ಕ ಸಿಖ್‌ರನ್ನು ಸೆರೆಹಿಡಿದು, ಲಾಹೋರ್‌ಗೆ ಎಳೆದು ತಂದು ಅವರ ತಲೆ ಕಡಿದರು. ಸಿಖ್‌ರ ಪಾಲಿಗೆ, ಮೀರ್ ಮನೂ ಬದ್ಧವೈರಿಯಾಗಿ ಪರಿಣಮಿಸಿದ.

ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಖ್‌ರ ಸಹಾಯಕ್ಕೆ ಬಂದವ ಒಬ್ಬ ಮುಸ್ಲಿಮ್. ಜಲಂಧರ್ ಪ್ರದೇಶದ ರಾಜ್ಯಪಾಲನಾಗಿದ್ದ ಅದೀನಾ ಬೇಗ್ ಖಾನ್, ಮೀರ್‌ಮನುವಿನ ಏಳಿಗೆಯನ್ನು ಸಹಿಸದವನಾಗಿದ್ದು, ಸಿಖ್‌ರಿಗೆ ಗುಪ್ತವಾಗಿ ತನ್ನ ಸಹಾಯ ಹಸ್ತ ನೀಡಿದ. ಅವರನ್ನು ಸಂಪೂರ್ಣವಾಗಿ ನಾಶ ಮಾಡುವ ಕಾರ್ಯ ಕೈಗೊಳ್ಳದೆ ಸುಮ್ಮನಿದ್ದ. ಅದೇ ರೀತಿ, ಮೀರ್ ಮನೂವಿನ ಹಿಂದೂ ಮಂತ್ರಿ ದಿವಾನ್ ಕೌರ್‌ಮಲ್, ಗುರು ನಾನಕ್‌ನ ಭಕ್ತನಾಗಿದ್ದು, ಸಿಖ್‌ರ ಸಂಪೂರ್ಣ ನಾಶಕ್ಕೆ ಸಿದ್ಧನಾಗಿರಲಿಲ್ಲ. ಇವರಿಬ್ಬರ ಸಹಾಯಹಸ್ತದಿಂದ ಸಿಖ್‌ರು ಮೀರ್ ಮನೂವಿನ ಕಠೋರ, ಕ್ರೂರ ಹತ್ಯಾಕಾಂಡದಿಂದ ಪಾರಾದರು. ೩

ಕಾಬೂಲ್‌ನ ಅಬ್ದಾಲಿಯನ್ನು ಯುದ್ಧದಲ್ಲಿ ಸೋಲಿಸಿದ ವೀರನೆನಿಸಿಕೊಂಡ ಮೀರ್ ಮನೂವನ್ನು ದೆಹಲಿಯ ದರ್ಬಾರಿನಲ್ಲಿ ಸನ್ಮಾನಿಸಿದ ಬಾದ್‌ಶಹಾ ಅಹ್ಮದ್ ಶಹಾ. ಈತ ಒಬ್ಬ ವಿಲಾಸಿಯಾಗಿದ್ದು, ಕುಡಿದು, ಕುಣಿದು, ಹಾಡಿ ಸುಖಲೋಲಾಪ್ತೆಯಲ್ಲಿದ್ದ ಬಾದ್‌ಶಹಾನಾಗಿದ್ದ. ಈತನ ರಾಜ್ಯಭಾರ ಅವನ ತಾಯಿ ಉಧಾಮ್ ಬಾಯಿಯ ಕೈಯಲ್ಲಿ ಸೇರಿತ್ತು. ಈಕೆ ಒಬ್ಬ ಹಿಂದೂ ನಾಟ್ಯಗಾರ್ತಿಯಾಗಿದ್ದು, ಕ್ರಮೇಣ ಮುಸ್ಲಿಮ್‌ಳಾಗಿ ಬಾಯಿಜೀ ಸಾಹಿಬಾ ಅಥವಾ ಸಾಹಿಬ್‌ಜೀ ಸಾಹಿಬಾ ಎಂಬ ಹೆಸರಿನಿಂದ ಕರೆಸಿಕೊಂಡಳು. ಆಕೆಗೆ ಗೌರವದಿಂದ ನವಾಬ್ ಖುದ್‌ಸೀಯಾ ಬೇಗಂ ಎಂದು ಕರೆದರು. ಆಕೆ ಒಬ್ಬ ಹಿಜಡಾ ಜಾವೆದ್‌ಖಾನ್ ಎಂಬ ನಿರುಕ್ಷುಕಿಯ ಸಹಾಯದಿಂದ ರಾಜ್ಯವಾಳಿದಳು.೪

ಈಕೆ ಆಳುತ್ತಿರುವ ಸಮಯದಲ್ಲಿ ದೆಹಲಿ ದರ್ಬಾರ್ ಪಿತೂರಿ, ಒಳಜಗಳ, ಈರ್ಷೆ ಮುಂತಾದ ಅನೀತಿ ಕಾರ್ಯಗಳಿಂದ ತುಂಬಿ, ಅಧಿಕಾರಿ ವರ್ಗ, ಆಸ್ಥಾನಿಕರು, ಗಣ್ಯರು ಪರಸ್ಪರ ನಿಂದೆ, ಹಿಂಸಾಚಾರ, ಬೈಗಳ, ಕಲಹಗಳಲ್ಲಿ ನಿರತರಾಗಿದ್ದರು. ಪಂಜಾಬ್‌ನ ರಾಜ್ಯಪಾಲ ಮೀರ್ ಮನೂವಿನ ಏಳಿಗೆಯನ್ನು ಸಹಿಸದ ಅವರು ಅವನ ಮೇಲೆ ಕತ್ತಿ ಮಸೆದರು. ಅದರ ಸಲುವಾಗಿ ಮನೂವಿನ ಸೋದರ ಸಂಬಂಧಿ ಮತ್ತು ವೈರಿ ಶಹಾ ನವಾಜ್‌ನನ್ನು ನೆರೆಯ ಮುಲ್ತಾನ್‌ನ ರಾಜ್ಯಪಾಲನನ್ನಾಗಿ

೩. P 387 History of Sikhs by G.Singh
೪. P 388 History of Sikhs by G. Singh

ಮಾಡಿದರು. ಅದನ್ನು ಸಹಿಸದ ಮೀರ್ ಮನೂ, ತನ್ನ ಮಂತ್ರಿ ಕೌರಾ ಮಲ್‌ನ ನೇತೃತ್ವದಲ್ಲಿ ಒಂದು ಬಲವಾದ ಪಡೆ ಕಳುಹಿಸಿ, ಶಹಾ ನವಾಜ್‌ನನ್ನು ಯುದ್ಧದಲ್ಲಿ ಸೋಲಿಸಿ ಅವನ ಹತ್ಯೆ ಮಾಡಿದ. ಕೌರಾ ಮಲ್‌ನಿಗೆ ರಾಜ್ಯಪದವಿ ನೀಡಿ ಅವನನ್ನು ಮುಲ್ತಾನ್‌ನ ಸುಬೇದಾರ್‌ನನ್ನಾಗಿ ಮಾಡಿದ ಮೀರ್ ಮನೂ.

ಈ ಯುದ್ಧದಲ್ಲಿ, ಕೌರಾ ಮಲ್‌ನ ಸಹಾಯಕ್ಕೆ ಸಿಖ್‌ರು ತಮ್ಮ ಸೈನಿಕರೊಂದಿಗೆ ತೆರಳಿ ಹೋರಾಡಿದರು. ಈ ಕಾರಣಕ್ಕೆ ಸಿಖ್‌ರಿಗೆ ಲಾಹೋರಿನ ಬಳಿಯ ಒಂದು ಹಳ್ಳಿ ಜಾಗೀರ್ ನೀಡಿ ಅವರ ಸ್ನೇಹ ಸಂಪಾದಿಸಿದ ಕೌರಾ ಮಲ್.

ಲಾಹೋರ್‌ನಲ್ಲಿ ಭದ್ರವಾಗಿ ಕುಳಿತ ಮೀರ್ ಮನೂ ಈಗ ಧೈರ್ಯಗೊಂಡ. ಅವನು ತನ್ನ ಸೈನಿಕ ಬಲವನ್ನು ವೃದ್ಧಿಸಿಕೊಂಡ. ಇಬ್ಬರು ಬಲಶಾಲಿ ಬಾದ್‌ಶಹಾರ ಮಧ್ಯೆ ಕುಳಿತ ಆತ ತನ್ನನ್ನು ತಾನೇ ಸ್ವತಂತ್ರ ಬಾದ್‌ಶಹಾ ಆಗಬಯಸಿದ. ಆತ ದೆಹಲಿ ಬಾದ್‌ಶಹಾನಿಗೆ ತಲೆಬಾಗದೆ, ಇತ್ತ ಕಾಬೂಲ್‌ನ ಸುಲ್ತಾನ್ ಅಬ್ದಾಲಿಗೂ ಮಣಿಯದೆ, ಅವನಿಗೆ ನೀಡಬೇಕಾದ ಕಪ್ಪ ಕಾಣಿಕೆ ನೀಡದೆ ಗರ್ವದಿಂದ ಕುಳಿತ.

ಸುದ್ದಿ ಅರಿತ ಅಬ್ದಾಲಿ ಕ್ರೋಧಗೊಂಡ. ಬಲವಾದ ಪಡೆ ಕಟ್ಟಿಕೊಂಡು, ಖೈಬರ್ ಕಣಿವೆ ಮೂಲಕ ಪಂಜಾಬ್‌ನತ್ತ ಸಾಗಿ ಬಂದ. ೧೭೫೧ರಲ್ಲಿ ಸಿಂಧೂ ನದಿ ದಾಟಿ, ಪಂಜಾಬ್‌ನ ರಾವಿ ಮತ್ತು ಚಿನಾಬ್ ನದಿಗಳ ಮಧ್ಯ ಇರುವ ಪ್ರದೇಶಗಳನ್ನು ವಶಪಡಿಸಿಕೊಂಡು, ಊರು ನಾಶ ಮಾಡಿದ. ಅನಂತರ ಲಾಹೋರ್ ನಗರವನ್ನು ಸುತ್ತುಗಟ್ಟಿ, ಕೋಟೆಯೊಳಗೆ ಕುಳಿತಿದ್ದ ಮೀರ್ ಮನೂವನ್ನು ಹೊರಬರುವಂತೆ ಮಾಡಿ, ಅವನೊಂದಿಗೆ ಕಾಳಗ ಜರುಗಿಸಿ, ಸೋಲಿಸಿ, ಅವನನ್ನು ಸೆರೆ ಹಿಡಿದ ಅಬ್ದಾಲಿ.

ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ ಅಬ್ದಾಲಿ, ಮೀರ್ ಮನೂವನ್ನು ಕರುಣೆಯಿಂದ ನೋಡಿದ. ಅವನನ್ನು ಕ್ಷಮಿಸಿ, ಅವನಿಗೆ ಖಿಲ್ಲತ್ ನೀಡಿ, ಲಾಹೋರ್ ಪ್ರದೇಶಕ್ಕೆ ರಾಜ್ಯಪಾಲನನ್ನಾಗಿ ಮಾಡಿ, ವಾರ್ಷಿಕ ಕಪ್ಪ ಕೊಡುವಂತೆ ತಾಕೀತು ನೀಡಿದ. ಇತಿಹಾಸಕಾರರು ಈ ಸಂದರ್ಭದಲ್ಲಿ ಜರುಗಿದ ಒಂದು ಕತೆಯನ್ನು ನೀಡುತ್ತಾರೆ :

ಸೋತು ಸೆರೆಯಾದ ಮೀರ್ ಮನೂವನ್ನು ತಂದು ನಿಲ್ಲಿಸಿದಾಗ, ದೊರೆ ಅಬ್ದಾಲಿ ಅವನನ್ನು ಕೇಳಿದ :

"ಈ ಮೊದಲೇ ನೀನು ಯಾಕೆ ನಿನ್ನ ದೊರೆಯನ್ನು ನೋಡಲು ಬರಲಿಲ್ಲ?"

"ಯಾಕೆಂದರೆ, ನನಗೆ ಬೇರೊಬ್ಬ ದೊರೆ ಇದ್ದ ಕಾರಣ ನಿಮ್ಮನ್ನು ಕಾಣಲಾಗಲಿಲ್ಲ!"

"ಆ ದೊರೆ ನಿನ್ನ ರಕ್ಷಣೆಗೆ ಯಾಕೆ ಬರಲಿಲ್ಲ?"

"ಯಾಕೆಂದರೆ, ಅವನಿಗೆ ತನ್ನ ಸೇವಕ ತನ್ನ ರಕ್ಷಣೆ ತಾನೇ ಮಾಡಿಕೊಳ್ಳುವನೆಂಬ

ಭರವಸೆ ಇತ್ತು !"

"ಒಂದು ಪಕ್ಷ, ನಾನು ಸೋತು ನಿನ್ನ ಕೈಗೆ ಸಿಕ್ಕಿದ್ದರೆ ನನಗೆ ಏನು ಶಿಕ್ಷೆ ನೀಡುತ್ತಿದ್ದೆ?"

"ಖಾವಂದರ ತಲೆ ಕಡಿದು, ನನ್ನ ದೊರೆಗೆ ಕಳುಹಿಸುತ್ತಿದ್ದೆ"

"ಈಗ ನೀನು ನನ್ನ ಕೃಪಾಳು ಆಗಿರುವಾಗ, ನನ್ನಿಂದ ಯಾವ ತರಹದ ಶಿಕ್ಷೆ ನಿರೀಕ್ಷೆ ಮಾಡುತ್ತೀಯ ?"

ಮೀರ್ ಮನೂ ಉತ್ತರಿಸಿದ :

"ನೀವು ಕ್ರೂರ ರಾಜರಾಗಿದ್ದರೆ, ನನ್ನನ್ನು ಹತ್ಯೆ ಮಾಡಿರಿ; ವ್ಯಾಪಾರಿಯಾದರೆ, ನನ್ನನ್ನು ಮಾರಿಬಿಡಿರಿ; ಆದರೆ ನೀವು ರಾಜರಾದರೆ, ಕರುಣೆಯಿಂದ ನನಗೆ ಕ್ಷಮೆ ನೀಡಿರಿ."

ಶಾಹ ದುರಾನಿ ಅಬ್ದಾಲಿ, ಮೀರ್ ಮನೂವಿನ ಉತ್ತರಗಳಿಂದ ಸಂತುಷ್ಟನಾದ. ಅವನಿಗೆ ಮರಳಿ ರಾಜ್ಯ ನೀಡಿ ಗೌರವಿಸಿದ. ಮರಳಿ ಪಡೆದ ರಾಜ್ಯಭಾಗ್ಯ ಮೀರ್ ಮನೂವಿನ ಪಿತ್ತ ನೆತ್ತಿಗೇರಿಸಿತು. ಆತ ಪುನಃ ಸಿಖ್‌ರ ವಿರುದ್ಧ ಹೋರಾಟ ಜರುಗಿಸಿದ. ಯಾಕೆಂದರೆ, ಸಿಖ್‌ರು ದುರಾನಿ ಮತ್ತು ಮೀರ್ ಮನೂವಿನ ಮಧ್ಯೆ ಜರುಗಿದ ಕದನ ಮತ್ತು ಪಂಜಾಬ್‌ನಲ್ಲಿ ಹರಡಿದ ಅಜಾಗರೂಕತೆಯ ಲಾಭ ಪಡೆದು ಸಂಘಟಿತರಾಗಿ, ಮೊಘಲರ ವಿರುದ್ಧ ಬಂಡಾಯದ ಕಹಳೆ ಊದಿದ್ದರು. ಮೀರ್ ಮನೂ ಜಲಂದರ್ ಪ್ರದೇಶದ ರಾಜ್ಯಪಾಲ ಅದೀನಾ ಬೇಗ್‌ನಿಗೆ ಸಿಖ್‌ರ ವಿರುದ್ಧ ಯುದ್ಧಾಚರಣೆ ಜರುಗಿಸುವಂತೆ ಆಜ್ಞಾಪಿಸಿದ. ಆದರೆ ಅದೀನಾ ಬೇಗ್, ಯುದ್ಧ ಜರುಗಿಸುವುದರ ಮೊದಲು ಸಂಧಾನಕ್ಕೆ ಸಿಖ್‌ರ ಜಾಥೇದಾರ ಜಸ್ಸಾಸಿಂಗ್ ಅಹ್ಲೂವಾಲಿಯಾನನ್ನು ಆಹ್ವಾನಿಸಿದ. ಆತ ಒಲ್ಲೆ ಎಂದು ನಿರಾಕರಿಸಿದ. 'ಸಿಖ್ ಗುರುಗಳು ತಮಗೆ ಸ್ವಾತಂತ್ರ್ಯ ನೀಡುವ ಆಶ್ವಾಸನೆ ನೀಡಿದ್ದರಿಂದ, ನಾವು ಯಾವ ಸಂಧಾನಕ್ಕೂ ಸಿದ್ಧರಿಲ್ಲ. ನಾವು ಯುದ್ಧಭೂಮಿಯಲ್ಲಿ ಭೇಟಿಯಾಗೋಣ !' ಎಂದು ಘೋಷಿಸಿದ.

ಉಪಾಯ ಕಾಣದ ಅದೀನಾ ಬೇಗ್ ಸಿಖ್‌ರ ವಿರುದ್ಧ ಕಾಳಗ ಜರುಗಿಸಲು ಪ್ರಾರಂಭಿಸಿದ. ಅವನು ಸಿಖ್‌ರ ಆನಂದಪುರದ ಮೇಲೆ ದಾಳಿ ಎಸಗಿದ. ಅಲ್ಲಿ ನೆರೆದಿದ್ದ ನೂರಾರು ಸಿಖ್‌ಯಾತ್ರಾರ್ಥಿಗಳ ಕಗ್ಗೊಲೆ ನಡೆಸಿದ ಈ ಕಾರ್ಯ ಸಿಖ್‌ರನ್ನು ಸಿಟ್ಟಿಗೆಬ್ಬಿಸಿತು. ಅವರು ತಮ್ಮ ಬಂಡಾಯದ ಕರ್ಮಕಾಂಡವನ್ನು ಇಮ್ಮಡಿಸಿದರು. ಸಿಖ್‌ರ ಉಪಟಳ ತಾಳಲಾರದೆ, ಮೀರ್ ಮನೂ ಸ್ವತಃ ಒಂದು ದಂಡನ್ನು ತೆಗೆದುಕೊಂಡು ಮಧ್ಯ ಪಂಜಾಬ್‌ನ ಮಾಜ್ಹಾ ಪ್ರದೇಶದಲ್ಲಿ ಪ್ರಬಲವಾಗಿದ್ದ ಸಿಖ್‌ರ ವಿರುದ್ಧ ಯುದ್ಧ ಜರುಗಿಸಿದ. ರಾಮ್ ರೌನೀ ಕೋಟೆಯನ್ನು ವಶಪಡಿಸಿಕೊಂಡು ಸುಮಾರು ೯೦೦ ಸಿಖ್ ಯೋಧರನ್ನು ಹತ್ಯೆ ಮಾಡಿದ. ಕಂಡಲ್ಲಿ ಸಿಖ್‌ರ ನರಮೇಧ

ಮಾಡಿದ. ಸಿಖ್‌ರ ಸಂಸಾರದಲ್ಲಿ ಪುರುಷರ ಹತ್ಯೆ ಜರುಗಿ ಅವರ ಸಂಖ್ಯೆ ಕಡಿಮೆಯಾದಾಗ, ಸಿಖ್ ಮಹಿಳೆಯರನ್ನು ಸೆರೆಹಿಡಿದು, ಅವರ ಮಕ್ಕಳನ್ನು ಅವರ ಸಮಕ್ಷಮದಲ್ಲೇ ಹತ್ಯೆ ಮಾಡಿದರು. ಆ ವೀರ ಮಹಿಳೆಯರು ಹೆದರದೆ, ಎಲ್ಲವನ್ನೂ ಧೈರ್ಯದಿಂದ ಎದುರಿಸಿ, ತಮ್ಮ ಸಂಕಷ್ಟಗಳನ್ನು ಮರೆತು, ಹೋರಾಡಿ ವೀರಸ್ವರ್ಗ ಸಂಪಾದಿಸಿದರು ಎಂದು ಹಾಡಿ ಹೊಗಳಿದ್ದಾರೆ ಇತಿಹಾಸಕಾರರು. ೫

ಸೆರೆಹಿಡಿದ ನೂರಾರು ಸಿಖ್‌ರನ್ನು ಲಾಹೋರ್‌ನ ಕುದುರೆ ಮಾರುಕಟ್ಟೆಯಲ್ಲಿ ಸಾಮೂಹಿಕ ಹತ್ಯೆ ಮಾಡಿದ ಕ್ರೂರಿ ಮೀರ್ ಮುನಾ. ಅದನ್ನು 'ಶಹೀನ್ ಗಂಜ್' ಎಂದು ಕರೆದರು ಸಿಖ್‌ರು. ಆದರೆ ಸಿಖ್‌ರು ಮಾತ್ರ ಎದೆಗೆಡದೆ ತಮ್ಮ ಪ್ರತಿರೋಧವನ್ನು ನಿಲ್ಲಿಸಲಿಲ್ಲ. ಅವರು ತಮ್ಮ ಬಲಿದಾನವನ್ನು ಜನಪದ ಹಾಡಿನ ಮೂಲಕ ವ್ಯಕ್ತಪಡಿಸಿ ಹಾಡಿದರು.

"ಮನೂ ಅಸಾದೀ ದಾತ್ರಿ
ಅಸಿ ಮನೂ ದೇ ಸೋಯೆ,
ಜೀಓನ್ ಜೀಓನ್ ಸಾನು ವಾಧ್‌ದಾ
ಅಸಿ ದುನ್ ಸ್ವಾಯೆ ಹೋಯೆ"

(ಮನೂ ಒಂದು ಕೊಡಲಿಯ ತರಹ
ನಾವು ಒಂದು ಹಚ್ಚಹಸಿರಿನ ವೃಕ್ಷದ ತರಹ
ಅವನು ಎಷ್ಟು ಹೆಚ್ಚು ಕೊಂಬೆಗಳನ್ನು ಕಡಿಯುವನೋ
ಅಷ್ಟು ಬೇಗ ನಾವು ಬೆಳೆಯುವುವು ಮತ್ತು ಉಳಿಯುವುವು) ೬

ಕ್ರೂರಿ ಮೀರ್ ಮನೂ ೨ನೆಯ ನವೆಂಬರ್ ೧೭೫೩ರಂದು ಪ್ರಾಣ ತೊರೆದ. ಅವನು ಎಷ್ಟು ಕ್ರೂರನಾಗಿದ್ದನೋ ಅಷ್ಟೇ ಕ್ರೂರವಾಗಿತ್ತು ಅವನ ಸಾವು. ಕುದುರೆ ಏರಿ ಬೇಟೆಯಾಡುವಾಗ, ಹದ್ದೊಂದು ಅವನ ಮೇಲೆ ಎರಗಿದಾಗ, ಕುದುರೆ ಹೆದರಿ ಓಡಿ, ಅವನ ಕಾಲು ಕುದುರೆ ಲಗಾಮಿಗೆ ಸಿಕ್ಕಿ, ಅವನು ಕೆಳಗೆ ಬಿದ್ದರೂ, ಅವನನ್ನು ಎಳೆದುಕೊಂಡು ಓಡಿತು ಕುದುರೆ. ಅವನನ್ನು ರಕ್ಷಣೆ ಮಾಡುವ ಸಮಯಕ್ಕೆ ಅವನ ದೇಹದ ಮೂಳೆಗಳು ಮುರಿದು, ಎರಡು ದಿನ ನರಳಿ ನರಳಿ ಸಾವನ್ನಪ್ಪಿದ.

ದೆಹಲಿಯ ಬಾದ್‌ಶಹಾ ಅಹ್ಮದ್ ಶಹಾ, ಮೀರ್ ಮನೂವಿನ ೨ ವರ್ಷದ ಮಗನನ್ನು ಪಂಜಾಬ್‌ನ ರಾಜ್ಯಪಾಲನನ್ನಾಗಿ ಮಾಡಿದ. ಅದನ್ನು ಒಪ್ಪಿದ ಕಾಬೂಲ್‌ನ ಸುಲ್ತಾನ್ ಅಬ್ದಾಲಿ. ಎಳೇ ಕೂಸು ರಾಜ್ಯಪಾಲ ಕೇವಲ ಆರು ತಿಂಗಳ ಕಾಲ ಬದುಕಿ, ಸಾವನ್ನಪ್ಪಿತು. ಮನೂವಿನ ವಿಧವಾ ಪತ್ನಿ ಮುರಾನ್ ಬೇಗಮ್ ಉರುಫ್ ಮುಘ್‌ಲಾನಿ ಬೇಗಮ್ ರಾಜ್ಯಾಡಳಿತವನ್ನು ತನ್ನ ಕೈಗೆ ತೆಗೆದುಕೊಂಡು ಆಳತೊಡಗಿದಳು.

---

೫. P 391 History of Sikhs by G.Singh

ಕ್ರಿ. 391

ಇತ್ತ ದೆಹಲಿಯ ದರ್ಬಾರ್‌ನಲ್ಲಿ ಅನೇಕ ಮಹತ್ತರ ಬದಲಾವಣೆಗಳು ಪ್ರಾರಂಭವಾಗಿ ಸಾಮ್ರಾಜ್ಯ ಬಲಹೀನವಾಗತೊಡಗಿತು. ಬಾದ್‌ಶಹಾ ಅಹ್ಮದ್ ಶಹಾ ಮತ್ತು ಅವನ ತಾಯಿಯನ್ನು ಹಿಡಿದು ಕಣ್ಣು ಕೀಳಿಸಿ ಸೆರೆಮನೆಯಲ್ಲಿ ತಳ್ಳಿದ ಅವನ ಮಂತ್ರಿ, ೨೧ ವರ್ಷಗಳ ಸೆರೆಮನೆಯ ವಾಸ ಅನುಭವಿಸಿ ಬಾದ್‌ಶಹಾ ಅಸುನೀಗಿದ (೧೭೭೫). ಅಹ್ಮದ್ ಶಹಾನ ಸ್ಥಾನಕ್ಕೆ ಆಲಂಗೀರ್ ಸಾನಿಯನ್ನು ಹೊಸ ಬಾದ್‌ಶಹಾನನ್ನಾಗಿ ಮಾಡಿದರು. ಆದರೆ, ದಕ್ಷಿಣದಿಂದ ಮರಾಠರ ಆಕ್ರಮಣ, ಉತ್ತರದಲ್ಲಿ ಔಧ್ ಸ್ವಾತಂತ್ರನಾಗಿ ದೆಹಲಿಯ ಮೊಘಲ್ ಸಾಮ್ರಾಜ್ಯವನ್ನು ಅಲ್ಲಾಡಿಸತೊಡಗಿದ್ದವು. ಆಗ್ರಾ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜಾಟ್‌ರು ಪ್ರಾಧಾನ್ಯ ಪಡೆದರು. ಬಂಗಾಳ, ಬಿಹಾರ್ ಮತ್ತು ಒರಿಸ್ಸಾ ರಾಜ್ಯಗಳ ರಾಜ್ಯಪಾಲರು ದೆಹಲಿ ದರ್ಬಾರ್‌ಗೆ ಅಧೀನರಾದರೂ, ಕಪ್ಪಕಾಣಿಕೆ ನಿಲ್ಲಿಸಿ ಸ್ವತಂತ್ರವಾಗಿ ಆಳತೊಡಗಿದ್ದರು. ಪಂಜಾಬ್ ಆಫ್ಘಾನಿಸ್ತಾನದ ಅಬ್ದಾಲಿಯ ಅಧೀನರಾಜ್ಯವಾಗಿ ಮಾರ್ಪಾಡಾಗಿತ್ತು.

ಪಂಜಾಬ್‌ನ್ನು ಆಳತೊಡಗಿದ ಮುಘಲಾನಿ ಬೇಗಮ್ ಉತ್ತಮವಾಗಿ ಆಡಳಿತ ನಡೆಸಿದರೂ, ತನ್ನ ವಜೀರರು ಮತ್ತು ಹಿತೈಷಿಗಳನ್ನು ನಂಬದೆ ಅವರ ದ್ವೇಷ ಕಟ್ಟಿಕೊಂಡಳು. ಅವಳ ಒಬ್ಬ ಪ್ರಮುಖ ಮೀರ್ ಬುಖಾರಿ ಖಾನ್‌ನನ್ನು ತನ್ನ ಜನಾನಾದಲ್ಲಿ ಕರೆಸಿ, ಸೇವಕಿಯಿಂದ ಹೊಡೆಸಿ ಕೊಂದಳು. ಮಂತ್ರಿಗಳು ಮತ್ತು ಇತರ ಗಣ್ಯವ್ಯಕ್ತಿಗಳು ಅವಳ ದುರ್ನಡತೆಗೆ ಹೆದರಿ ದೆಹಲಿಗೆ ದೂರು ನೀಡಿದರು. ಪಂಜಾಬ್‌ನಲ್ಲಿ ಅರಾಜಕತೆ ಉಂಟಾಗಿ, ಎಲ್ಲೆಲ್ಲೂ ವಿಪ್ಲವ ಹರಡಿ, ಜನ ಕಂಗಾಲಾದರು. ಕಂದಾಯ ವಸೂಲಿ ನಿಂತು ಖಜಾನೆ ಬರಿದಾಯಿತು. ಪರಿಸ್ಥಿತಿ ಬಿಗಡಾಯಿಸಿದ ಪರಿಸ್ಥಿತಿಯ ಈ ಸದವಕಾಶವನ್ನು ಸಿಖ್ಖರು ಉಪಯೋಗಿಸಿಕೊಂಡರು. ಅವರು ದಂಗೆ ಹೂಡಿ, ಹಣ ದೋಚಿ, ಊರು ನಾಶಮಾಡಿ, ಆಡಳಿತಗಾರರ ನಿದ್ದೆ ಕೆಡಿಸಿದರು. ಮುಘಲಾನಿ ಬೇಗಂಳನ್ನು ಸೆರೆಹಿಡಿದ ಎಮಿನಾಬಾದ್‌ನ ಮುಘಲ್ ರಾಜ್ಯಪಾಲ ಅವಳನ್ನು ಸೆರೆಮನೆಗೆ ನೂಕಿದ. ಸುದ್ದಿ ಅರಿತ ದೆಹಲಿಯ ಬಾದ್‌ಶಹಾ ಅವಳ ಸಹಾಯಕ್ಕೆ ಒಂದು ದಂಡು ಕಳುಹಿಸಿದ. ಅವಳನ್ನು ರಕ್ಷಿಸಿದ ದಂಡು ಆಕೆಯನ್ನು ಲಾಹೋರ್‌ನಲ್ಲಿರಿಸಿತು. ಆದರೆ, ಅವಳ ಶತ್ರುವಾಗಿದ್ದ ಆಕೆಯ ಬಂಧು ಉಬೈದ್‌ಉಲ್ಲಾ ಖಾನ್, ಅವಳನ್ನು ಪುನಃ ಪದಚ್ಯುತಿಗೊಳಿಸಿ, ಸೆರೆಯಲ್ಲಿಟ್ಟ. ಆಗ ಬೇಗಮ್ ಅಬ್ದಾಲಿಗೆ ಭಾರತದ ಮೇಲೆ ದಂಡೆತ್ತಿ ಬರುವಂತೆ ಆಹ್ವಾನ ನೀಡಿದಳು. ತಮ್ಮನ್ನು ತಾವೇ ರಕ್ಷಿಸಿಕೊಳ್ಳಲಾರದ, ತಾವೇ ರಾಜ್ಯಭಾರ ಮಾಡುವ ಅಭಿಮಾನ ಶೂನ್ಯ ರಾಜ, ಮಹಾರಾಜ, ಸುಲ್ತಾನ್ ಮತ್ತಿತರರು ಪರಕೀಯರನ್ನು ತಮ್ಮ ದೇಶದೊಳಗೆ ದಂಡೆತ್ತಿ ಬರುವಂತೆ ಆಹ್ವಾನ ನೀಡುವ ಪದ್ಧತಿಯನ್ನು ಈ ಮುಘಲಾನಿ ಬೇಗಂ ಅತ್ಯಂತ ಉತ್ಸುಕತೆಯಿಂದ ಮಾಡಿದ್ದಳು.

ನಾಲ್ಕನೇ ಬಾರಿ ಅಬ್ದಾಲಿ ಭಾರತದ ಮೇಲೆ ಆಕ್ರಮಣ ಜರುಗಿಸಿದ (೧೭೫೧). ಅವನಿಗೆ ಸ್ವಾಗತ ನೀಡಿದವರಲ್ಲಿ ಮುಘಲಾನಿ ಬೇಗಮ್ ಒಬ್ಬಳೇ ಅಗಿರಲಿಲ್ಲ. ದೆಹಲಿಯ ಬಾದ್‌ಶಹಾ ತನ್ನನ್ನು ತನ್ನ ಮಂತ್ರಿಗಳಿಂದ ಕಾಪಾಡುವ ಸಲುವಾಗಿ ಅಬ್ದಾಲಿಯನ್ನು ಆಹ್ವಾನಿಸಿದ್ದ. ಅವನ ಜೊತೆಗೆ ರೋಹಿಲ್ಲಾ ರಾಜ ನಜೀಬ್ ಖಾನ್ ಕೂಡ ಆಹ್ವಾನ ನೀಡಿದ್ದ. ಕಾರಣ ಹಿಂದೂ ಮರಾಠರು ದೆಹಲಿಯನ್ನು ಆಕ್ರಮಿಸಿ, ಉತ್ತರ ಹಿಂದೂಸ್ತಾನದ ಮುಸ್ಲಿಮ್‌ರಿಗೆ ಕಂಟಕಪ್ರಾಯವಾಗಿ ಪರಿಣಮಿಸಿದ್ದರಿಂದ, ತಮ್ಮನ್ನು ರಕ್ಷಿಸುವ ಸಲುವಾಗಿ ಭಾರತದ ಮೇಲೆ ದಾಳಿ ಮಾಡುವಂತೆ ಆಹ್ವಾನ ನೀಡಿದರು.

ಆಫ್ಘನ್ ದೊರೆ ಪಂಜಾಬ್‌ನ್ನು ಆಕ್ರಮಿಸಿ, ಯಾವ ಅಡೆತಡೆಯಿಲ್ಲದೆ, ದೆಹಲಿಯನ್ನು ೨೦ನೆಯ ಫೆಬ್ರವರಿ ೧೭೫೭ರಲ್ಲಿ ಬಂದು ಸೇರಿದ. ಆತ ದೆಹಲಿ ಬಾದ್‌ಶಹಾನನ್ನು ಹಾನಿ ಮಾಡದೆ ರಕ್ಷಿಸಿದರೂ ದೆಹಲಿ ನಗರವನ್ನು ಸೂರೆ ಮಾಡಿದ. ಪ್ರತಿಯೊಬ್ಬ ಗಣ್ಯ ಪುರುಷರ ಮನೆಯನ್ನು ಲೂಟಿ ಮಾಡಿ, ಅಪಾರ ಧನದ್ರವ್ಯ ಸಂಪಾದಿಸಿದ. ಈ ಕಾರ್ಯದಲ್ಲಿ ಮುಘಲಾನಿ ಬೇಗಂ, ದೆಹಲಿಯ ಗಣ್ಯ, ಐಶ್ವರ್ಯವಂತ ಮನೆತನದವರ ಸಂಪೂರ್ಣ ವಿವರಗಳನ್ನು ನೀಡಿ ಸಹಕರಿಸಿದಳು. ಅಬ್ದಾಲಿ, ಆಕೆಯ ಈ ಸಹಾಯಕ್ಕೆ ಸಂತುಷ್ಟನಾಗಿ, ಆಕೆಗೆ ಪಾರಿತೋಷಕ ನೀಡಿ, 'ಸುಲ್ತಾನಾ ಮಿರ್ಜಾ' ಎಂಬ ಪದವಿ ನೀಡಿ ಗೌರವಿಸಿದ.

ಅಬ್ದಾಲಿ ದೆಹಲಿ ಸಮೀಪ ಇರುವ ಮಥುರಾದ ಪ್ರಸಿದ್ಧ ಹಿಂದೂ ಗುಡಿಗಳನ್ನು ಧ್ವಂಸ ಮಾಡಿ ಅಪಾರ ಧನ, ಆಭರಣಗಳನ್ನು ಲೂಟಿ ಮಾಡಿದ. ಹಿಂದೂ ಯಾತ್ರಾರ್ಥಿಗಳ ಮತ್ತು ಸಂತ ಸಂನ್ಯಾಸಿಗಳ ವಧೆ ಮಾಡಿ, ತನ್ನ ರಕ್ತಪಿಪಾಸಿತನವನ್ನು ತೃಪ್ತಿಪಡಿಸಿಕೊಂಡ. ಹೆಣ್ಣು ಮಕ್ಕಳ ಅತ್ಯಾಚಾರ ಎಸಗಿ, ಅವರನ್ನು ಗುಲಾಮಗಿರಿಗೆ ತಳ್ಳಿ, ತನ್ನ ಮನದಾಸೆಯನ್ನು ಪೂರೈಸಿಕೊಂಡ.

ಇದೇ ಸಂದರ್ಭದಲ್ಲಿ, ಅಬ್ದಾಲಿ ದಿವಂಗತ ಬಾದಶಹಾ ಮೊಹಮ್ಮದ್ ಶಹಾನ ೧೬ ವರ್ಷ ವಯಸ್ಸಿನ ಹಜರತ್ ಬೇಗಂಳನ್ನು ಲಗ್ನವಾದ. ಬಾದ್‌ಶಹಾನ ಜನಾನಾದಲ್ಲಿದ್ದ ಹಲವಾರು ಸುಂದರ ಸ್ತ್ರೀಯರನ್ನು ತನ್ನ ಜನಾನಾಕ್ಕೆ ಸೇರಿಸಿಕೊಂಡ ಅಬ್ದಾಲಿ. ಕಾಬೂಲ್‌ಗೆ ಹಿಂದಿರುಗುವಾಗ, ದೆಹಲಿಯನ್ನು ಲೂಟಿ ಮಾಡಿದ ಧನದ್ರವ್ಯ, ಆನೆ, ಕುದುರೆ ಮತ್ತು ಇತರ ಸಂಪತ್ತು, ಪರ್ಶಿಯಾದ ನಾದಿರ್ ಶಹಾ ಲೂಟಿ ಮಾಡಿದ್ದಕ್ಕಿಂತ ಕಡಿಮೆಯಾಗಿರಲಿಲ್ಲ ಎಂದರು ಇತಿಹಾಸಕಾರರು.೭

ಅಬ್ದಾಲಿಯನ್ನು ಹಿಂದಿರುಗುವಂತೆ ಮಾಡಿದ್ದು ದೆಹಲಿಯಲ್ಲಿ ಹರಡಿದ ಕಾಲರಾ ವ್ಯಾಧಿಯಿಂದ. ಅದರಿಂದ ತಪ್ಪಿಸಿಕೊಳ್ಳಲು ಅವನು ದೆಹಲಿಯಿಂದ ಕಾಲ್ತೆಗೆದ. ಪಂಜಾಬ್‌ನಲ್ಲಿ ಕಾಲಿಟ್ಟಾಗ, ಅವನ ಸೈನ್ಯವನ್ನು ಮುತ್ತಿದ ಸಿಖ್‌ರು, ಅವನು ದೋಚಿದ ಧನಧಾನ್ಯ ದೋಚಿದರು. ಯುದ್ಧಾಚರಣೆಯಿಂದ ಮತ್ತು ಕಾಲರಾದಿಂದ ನರಳುತ್ತಿದ್ದ ಅಬ್ದಾಲಿಯ ಸೈನಿಕರನ್ನು ಸಿಖ್‌ರು ಸತಾಯಿಸಿ ಅವರನ್ನು ಹೈರಾಣರನ್ನಾಗಿ ಮಾಡಿದರು.

೭. P 394 History of Sikhs by G. Singh

ಸಿಟ್ಟಿಗೆದ್ದ ಅಬ್ದಾಲಿ ಲಾಹೋರ್ ತಲುಪಿದೊಡನೆ, ಅಲ್ಲಿದ್ದ ಸೈನಿಕ ಪಡೆಯನ್ನು ಅಮೃತಸರಕ್ಕೆ ಕಳುಹಿಸಿ, ಸಿಖ್‌ರನ್ನು ದಂಡಿಸಿದ. ಅವರ ಗುಡಿಯನ್ನು ಹಾಳುಗೆಡವಿದ. ಪವಿತ್ರ ಕೊಳವನ್ನು ಹಾಳು ಮೂಳುಗಳಿಂದ ಮುಚ್ಚಿಸಿದ.

ಸಿಖ್‌ರು, ತಮ್ಮ ಪವಿತ್ರ ಗುಡಿಯನ್ನು ಹಾಳುಗೆಡವಿದ್ದರ ವಿರುದ್ಧ ಸೇಡು ತೀರಿಸಿಕೊಳ್ಳಲು ಅಬ್ದಾಲಿಯ ವಿರುದ್ಧ ಸಮರ ಹೂಡಿದರು. ಬಾಬಾ ದೀಪ್ ಸಿಂಗ್‌ನ ನೇತೃತ್ವದಲ್ಲಿ ಪಂಜಾಬ್‌ನ ವಿವಿಧೆಡೆಯಿಂದ ಸಿಖ್‌ರು ಆಯುಧಪಾಣಿಗಳಾಗಿ ಅಮೃತಸರದಲ್ಲಿ ಜಮಾಯಿಸಿದರು. ೧೭೫೭ರ ದೀಪಾವಳಿಯನ್ನು ಸಂಭ್ರಮದಿಂದ ಆಚರಿಸಬೇಕೆಂಬ ಕರೆ ನೀಡಲಾಯಿತು. ಸುದ್ದಿ ತಿಳಿದ ಲಾಹೋರ್‌ನಲ್ಲಿ ನೂತನವಾಗಿ ನೇಮಕಗೊಂಡ ಅಬ್ದಾಲಿಯ ಮಗ ತೈಮೂರ್ ಶಹಾ ತನ್ನ ಸೈನ್ಯಾಧಿಕಾರಿ ಅತ್ತೈಖಾನ್‌ನಿಗೆ ತನ್ನ ಸೈನ್ಯ ತೆಗೆದುಕೊಂಡು ಸಿಖ್‌ರನ್ನು ಅಮೃತಸರದಿಂದ ಉಚ್ಚಾಟಿಸಲು ಆಜ್ಞಾಪಿಸಿದ. ಬಾಬಾ ದೀಪ್ ಸಿಂಗ್ ನೆರೆದಿದ್ದ ಸುಮಾರು ೧೦೦೦ ಸಿಖ್‌ರಿಗೆ ಮಹಾತ್ಯಾಗ ಮಾಡಲಿಕ್ಕೆ ಸಿದ್ಧರಾಗಬೇಕೆಂದು ಹೇಳಿ, ಮಂದಿರದ ಪ್ರವೇಶಕ್ಕೆ ಸಿದ್ಧತೆ ನಡೆಸಿದ. ಅತ್ತೈಖಾನ್ ತನ್ನ ಸೈನಿಕರೊಡನೆ ಅಮೃತಸರಕ್ಕೆ ತೆರಳಿ, ನೆರೆದಿದ್ದ ಸಿಖ್‌ರ ಮೇಲೆ ಆಕ್ರಮಣ ಜರುಗಿಸಿದ. ಆದರೆ ಹೋರಾಡಿ ಪ್ರಾಣತ್ಯಾಗಕ್ಕೆ ತಯಾರಿದ್ದ ಸಿಖ್‌ರು ಅತ್ಯಂತ ವೀರಾವೇಶದಿಂದ ಹೋರಾಡಿದರು. ರಕ್ತದ ಓಕಳಿ ಹರಡಿ, ಎರಡೂ ಕಡೆ ಪ್ರಾಣಹಾನಿಯಾಯಿತು. ಪ್ರಾಣದ ಹಂಗು ತೊರೆದು ಹೋರಾಡಿದ ಸಿಖ್‌ರು ಪಠಾಣರ ಆಕ್ರಮಣವನ್ನು ಎದುರಿಸಿ, ಗುಡಿಯೊಳಗೆ ಹೊಕ್ಕಿದರು. ಆದರೆ, ಅದಕ್ಕೆ ಅವರು ಬೆಲೆ ನೀಡಿದ್ದು ಅಪಾರವಾಗಿತ್ತು. ಅವರ ಮುಖಂಡ ಬಾಬಾ ದೀಪ್ ಸಿಂಗ್ ಹೋರಾಡುತ್ತಾ ಗುಡಿಯ ಒಳಗೆ ನುಗ್ಗಿ, ಅದರ ಒಳಾಂಗಣದ ಗರ್ಭಗುಡಿ ತಲುಪಿ, ಮೈತುಂಬಾ ಆದ ಗಾಯಗಳಿಂದ ಗುಡಿಯ ಬಾಗಿಲ ಬಳಿ ಕುಸಿದು ಪ್ರಾಣತ್ಯಾಗ ಮಾಡಿದ. ಅವನ ಮಹಾತ್ಯಾಗದ ನೆನಪನ್ನು ಇಂದಿಗೂ ಗುಡಿಯ ಪರಿಕ್ರಮದಲ್ಲಿ ಸಿಖ್‌ರು ಮಾಡಿ ತಮ್ಮ ಕೃತಜ್ಞತೆ ಅರ್ಪಿಸುತ್ತಾರೆ.

ತೈಮೂರ್ ಶಾ ಸಿಖ್‌ರ ವಿರುದ್ಧ ಎಸಗಿದ ಯುದ್ಧಾಚರಣೆಯಲ್ಲಿ ಜಲಂದರ್ ನಗರದ ಬಳಿ ಇರುವ ಕಾರ್ತಾರ್‌ಪುರದ ಗುರುದ್ವಾರವನ್ನು ಸುಟ್ಟು ಧ್ವಂಸ ಮಾಡಿದ್ದು ಅತ್ಯಂತ ಹೇಯಕರವಾಗಿತ್ತು. ಯಾಕೆಂದರೆ ಗುಡಿಯನ್ನು ಸುಟ್ಟಿದರೂ, ಅದರ ಪೂಜಾರಿ ಸೋಧಿ ವದ್‌ಭಾಗ್ ಸಿಂಗ್‌ನನ್ನು ದೊಣ್ಣೆಯಿಂದ ಹೊಡೆದು ಕೊಂದಿದ್ದು ಅತ್ಯಂತ ಭೀಭತ್ಸಕರವಾಗಿತ್ತು. ಅಮಾಯಕ, ನಿರುದ್ರಪಿ, ಯಾವ ಪಾಪಕಾರ್ಯ ಮಾಡದೆ ಕೇವಲ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡ ಸಿಖ್ ಧಾರ್ಮಿಕ ವ್ಯಕ್ತಿಗಳ ಹತ್ಯೆ ಸಿಖ್ ಸಮುದಾಯವನ್ನು ರೊಚ್ಚಿಗೆಬ್ಬಿಸಿತು. ಸಿಖ್‌ರ ಕೋಪ ಮುಗಿಲೇರಿ, ಅವರು ಆಫ್ಘನ್‌ರ ಅತಿಕ್ರಮಣವನ್ನು ವಿರೋಧಿಸಿ, ಅವರ ವಿರುದ್ಧ ನಿರಂತರ ಕಾಳಗ ಜರುಗಿಸಿದರು. ಸಿಖ್‌ರು ತಾವು ನೆಲೆಯೂರಿದ್ದೆಡೆ, ಕಪ್ಪ ಕಂದಾಯ ವಸೂಲಿ ಮಾಡತೊಡಗಿ, 'ರಾಖಿ' ಎಂಬ 'ರಕ್ಷಣಾ ಕಪ್ಪ'ವನ್ನು ಜನರಿಂದ, ಬೇಸಾಯಗಾರರಿಂದ

ಮತ್ತು ಜಮೀನ್ದಾರರಿಂದ ಬಲವಂತವಾಗಿ ಪಡೆಯಲಾರಂಭಿಸಿದರು.

ತೈಮೂರ್, ಸಿಖ್ಖರ ಉಪಟಳ ತಾಳಲಾರದೆ, ಅವರ ಸ್ನೇಹಿತ ಅದೀನಾ ಬೇಗ್‌ನನ್ನು ಲಾಹೋರ್‌ಗೆ ಬಂದು ತನಗೆ ಸಹಾಯ ನೀಡಿ, ಅಧೀನತೆಯನ್ನು ತೋರುವಂತೆ ಕೇಳಿದಾಗ, ಆತ ಹೆದರಿ, ಶಿವಾಲಿಕ್ ಗುಡ್ಡಪ್ರದೇಶಗಳಲ್ಲಿ ಅಡಗಿಕೊಂಡ. ಅವನನ್ನು ಹಿಡಿಯಲು ತೈಮೂರ್ ಶಹಾ ಒಂದು ಪಡೆ ಕಳುಹಿಸಿದ. ಅದೀನಾ ಬೇಗ್ ಸಿಖ್ಖರ ಸಹಾಯ ಕೇಳಿದ. ಸಿಖ್ಖರು ೨೫೦೦ ಅಶ್ವದಳದೊಂದಿಗೆ ತೈಮೂರ್‌ನ ಸೈನ್ಯವನ್ನು ಎದುರಿಸಿ ಸೋಲಿಸಿದರು. ಸಿಖ್ ಸೈನ್ಯ ಲಾಹೋರ್‌ನತ್ತ ಮುನ್ನುಗ್ಗಿ ಆ ನಗರದ ಸುತ್ತಮುತ್ತಲಿನ ಪ್ರದೇಶಗಳನ್ನು ವಶಪಡಿಸಿಕೊಂಡಿತು. ಲಾಹೋರ್‌ನಲ್ಲಿ ಆಳುತ್ತಿದ್ದ ತೈಮೂರ್ ಶಹಾ ನಗರ ತ್ಯಜಿಸಿ, ಓಡಿಹೋದ.

ಇತ್ತ ಅದೀನಾ ಬೇಗ್, ಆಫ್ಘನ್ನರ ಸೈನ್ಯದಿಂದ ತಪ್ಪಿಸಿಕೊಂಡು ಹೋದವ ಸಿಖ್ಖರ ಸಹಾಯ ಪಡೆದಂತೆ, ದೆಹಲಿಯ ಬಳಿ ಬೀಡುಬಿಟ್ಟಿದ್ದ ಮರಾಠರ ಸಹಾಯ ಬೇಡಿದ. ಅವರಿಗೆ ಯುದ್ಧಾಚರಣೆಯ ಖರ್ಚಿನ ಬಾಬ್ತು ದಿನವೊಂದಕ್ಕೆ ಒಂದು ಲಕ್ಷ ರೂಪಾಯಿ ನೀಡುವ ಭರವಸೆ ನೀಡಿದ. ಸೈನಿಕರ ಸಂಬಳ ಕೊಡಲಾರದೆ ಸಂಕಟದಿಂದ ನರಳುತ್ತಿದ್ದ ಮರಾಠಾ ಸರದಾರರಿಗೆ ಅದೀನಾ ಬೇಗ್‌ನ ಆಶ್ವಾಸನೆ ಆತನಿಗೆ ಬೆಂಬಲ ನೀಡುವ ಆಸೆ ಉಂಟಾಯಿತು. ಮರಾಠ ಸೈನ್ಯ, ರಘುನಾಥ್‌ರಾವ್‌ನ ನೇತೃತ್ವದಲ್ಲಿ ಪಂಜಾಬ್‌ನತ್ತ ಸಾಗಿತು. ಮಾರ್ಚ್ ೯, ೧೭೫೮ ರಂದು ಸೈನ್ಯ ಸರ್‌ಹಿಂದ್ ತಲುಪಿತು. ಅತ್ತ ಸಿಖ್ ಸೈನ್ಯ ಕೂಡ ಅದೀನಾ ಬೇಗ್‌ನ ಸೈನ್ಯದೊಂದಿಗೆ ಸರ್‌ಹಿಂದ್‌ನಗರದ ಮೇಲೆ ಆಕ್ರಮಿಸಿತು. ಮೂವರು ನಗರವನ್ನು ಆಕ್ರಮಣ ಮಾಡಿ, ಊರು ನಾಶಮಾಡಿದರು. ಕೊಳ್ಳೆ ಹೊಡೆದ ಧನ ದ್ರವ್ಯ ಹಂಚಿಕೊಳ್ಳುವುದರಲ್ಲಿ ಮರಾಠ ಮತ್ತು ಸಿಖ್ಖರಲ್ಲಿ ಭಿನ್ನಾಭಿಪ್ರಾಯ ಉಂಟಾದರೂ, ಕೆಲವು ಇತಿಹಾಸಕಾರರ ಪ್ರಕಾರ ಅದು ತಾತ್ಕಾಲಿಕವಾಗಿದ್ದು, ಮೂರು ಸೈನ್ಯಗಳು ಲಾಹೋರ್‌ನತ್ತ ಸಾಗಿದವು. ೧೦ನೆಯ ಏಪ್ರಿಲ್ ೧೭೫೮ ರಂದು ಮರಾಠ ಮತ್ತು ಸಿಖ್ಖರು ಲಾಹೋರ್ ನಗರವನ್ನು ಆಕ್ರಮಿಸಿದರು. ಕಂಡಲ್ಲಿ ಆಫ್ಘನ್ ಸೈನಿಕರ ಹತ್ಯೆ ಮಾಡಿದರು. ನಗರದ ಅಳಿದುಳಿದ ಪಠಾಣರನ್ನು ಸೆರೆಹಿಡಿದು, ಅವರಿಂದ ಕಲುಷಿತಗೊಂಡ ಅಮೃತಸರದ ಹರಮಂದಿರದ ಸರೋವರವನ್ನು ಸ್ವಚ್ಛಗೊಳಿಸಿದರು. ಮರಾಠರು ಹರಮಂದಿರದಲ್ಲಿ ಭಕ್ತಿ ಗೌರವ ಅರ್ಪಿಸಿದರು.

ಮರಾಠರು ಕೇವಲ ಒಂದು ತಿಂಗಳ ಕಾಲ ಲಾಹೋರ್‌ನಲ್ಲಿದ್ದು, ತಮ್ಮ ಸ್ವದೇಶಕ್ಕೆ ಹಿಂದಿರುಗಿದರು. ಯಾಕೆಂದರೆ, ಅಲ್ಲಿ ಅವರ ಆರ್ಥಿಕ ಸ್ಥಿತಿ ಸುಭದ್ರವಾಗಿಲ್ಲದೆ, ಅಜಾಗರಕತೆ, ಅನಾನುಕೂಲ ಪರಿಸ್ಥಿತಿ ಒದಗಿಬಂದಿದ್ದರಿಂದ ಅವರು ಸ್ಥಿರವಾಗಿ ಲಾಹೋರ್‌ನಲ್ಲಿ ನಿಲ್ಲಲಾಗಲಿಲ್ಲ. ಅದೀನಾ ಬೇಗ್‌ನನ್ನು ಲಾಹೋರ್‌ನಲ್ಲಿ ತಮ್ಮ ಸಾಮಂತನನ್ನಾಗಿ ಇರಿಸಿ ಅವನಿಂದ ವಾರ್ಷಿಕ ಕಪ್ಪ ಕಾಣಿಕೆ ಒಪ್ಪಿಸಿಕೊಳ್ಳುವ ಒಪ್ಪಂದ ಮಾಡಿಕೊಂಡು ಒಂದು ಸಣ್ಣ ಸೈನ್ಯ ಪಡೆ ಇರಿಸಿ ಸ್ವದೇಶಕ್ಕೆ ಹಿಂದಿರುಗಿದರು.

ಅದೀನಾ ಬೇಗ್ ಮಾತ್ರ, ಸಿಖ್ ಮತ್ತು ಮರಾಠರ ನೆರವಿನಿಂದ ಲಾಹೋರ್‌ನ್ನು ಗೆದ್ದರೂ, ಅಲ್ಲಿ ನಿಲ್ಲದೆ, ಬಾಟಲಾ ಬಳಿ ಒಂದು ಹೊಸ ನಗರ ನಿರ್ಮಿಸಿ ನಾಲ್ಕು ತಿಂಗಳ ನಂತರ ಪ್ರಾಣ ತ್ಯಜಿಸಿದ. ಅದೀನಾ ಬೇಗ್ ಬಗ್ಗೆ ಇತಿಹಾಸಕಾರರು ಈ ರೀತಿ ಬೆಳಕು ಚೆಲ್ಲಿರುತ್ತಾರೆ. ಈತ ಲಾಹೋರ್‌ನಲ್ಲಿ ಜನ್ಮ ತಳೆದು, ಕಂದಾಯ ಇಲಾಖೆಯ ಬಗ್ಗೆ ಅರಿವು ಪಡೆಯಲು ಅಲಹಾಬಾದ್‌ಗೆ ತೆರಳಿ, ಅಲ್ಲಿ ಅನುದಾನ ಪಡೆದು, ಪಂಜಾಬ್‌ಗೆ ಹಿಂದಿರುಗಿ, ಸುಲ್ತಾನ್‌ಪುರದ ಆಡಳಿತವನ್ನು ವಹಿಸಿಕೊಂಡ. ಅವನ ಧನಿ ಲಾಹೋರ್‌ನ ನವಾಬ ಜಕ್ರಿಯಾ ಖಾನ್‌ನ ಆಜ್ಞೆಯ ಮೇರೆಗೆ ಸಿಖ್‌ರ ವಿರುದ್ಧ ಸಮರ ನಡೆಸಿದರು. ಕ್ರಮೇಣ ಅವರ ಬಲ ಕಂಡು ಅವರ ಸ್ನೇಹ ಸಂಪಾದಿಸಿ ಹೆಸರು ಮಾಡಿದ. ಮೇಧಾವಿತನ, ಕುಟಿಲತೆ, ಚಾಣಾಕ್ಷತೆಗಳನ್ನು ಹೊಂದಿದ ಅದೀನಾ ಬೇಗ್ ಅಂತಿಮವಾಗಿ ತನ್ನದೇ ಒಂದು ನಗರ ನಿರ್ಮಿಸಿ, ಪ್ರಾಣತ್ಯಾಗ ಮಾಡಿದ್ದು, ಅವನ ಚಾಣಾಕ್ಷತನಕ್ಕೆ ಗುರುತಾಗಿ ಉಳಿಯಿತು. ೮

ಮರಾಠರು, ಪೂನಾದಲ್ಲಿ ತಮ್ಮ ಅಧಿಪತ್ಯವನ್ನು ಪೇಶ್ವೆಯವರ ನೇತೃತ್ವದಲ್ಲಿ ಸ್ಥಾಪಿಸಿ, ಸಂಪೂರ್ಣ ಭಾರತವನ್ನು ಆಳುವ ಕನಸು ನನಸಾಗುವ ಕಾರ್ಯದಲ್ಲಿ ಶ್ರಮ, ಬಲಿದಾನ ನೀಡಿ, ಹೋರಾಟ ಸಾಗಿಸಿದರೂ ಸಫಲತೆ ಪಡೆಯದಿದ್ದದು ಶೋಚನೀಯವಾಗಿತ್ತು.

೧೬೮೦ರಲ್ಲಿ ಮರಾಠಾ ಚಕ್ರವರ್ತಿ ಶಿವಾಜಿಯ ಮರಣಾನಂತರ, ಔರಂಗ್‌ಜೇಬ್ ಅವನ ಮಗನನ್ನು ಸೆರೆಹಿಡಿದು ಕ್ರೂರದಿಂದ ಸಾಯಿಸಿದ. (೧೬೮೯) ಶಿವಾಜಿ ನಿರ್ಮಿಸಿದ ಚಕ್ರಾಧಿಪತ್ಯ ಹರಿದು ನುಚ್ಚು ನೂರಾಯಿತು. ಆದರೆ ಶಿವಾಜಿಯ ನಂತರ ೧೭೧೪ರಲ್ಲಿ ಬಾಲಾಜಿ ವಿಶ್ವನಾಥ್ ಭಟ್ಟ ಪೇಶ್ವೆಯಾಗಿ ನೇಮಕಗೊಂಡು ಪೂನಾದಲ್ಲಿ ಆಳಿದ ನಂತರ, ಮರಾಠರು ಪುನಃ ತಲೆಎತ್ತಿ ಆಕ್ರಮಣಾ ಕಾರ್ಯಕ್ರಮ ಹಾಕಿಕೊಂಡು ಉತ್ತರ ಭಾರತದತ್ತ ನುಗ್ಗಿದರು. ಮರಾಠ ಸರದಾರರಾದ ಗ್ವಾಲಿಯರ್‌ನ ಸಿಂಧಿಯಾ, ಇಂದೋರಿನ ಹೋಲ್ಕರ್, ಬರೋಡಾದ ಗಾಯಕ್‌ವಾರ, ನಾಗಪುರದ ಬೋನ್‌ಸ್ಲೆಗಳು, ಮೊದಮೊದಲು ಪೂನಾದ ಪೇಶ್ವೆಯವರಿಗೆ ಅಧೀನರಾದರೂ, ಅನೈಕ್ಯತೆಯ ವ್ಯಾಧಿ ಅವರಲ್ಲೂ ಹರಡಿ, ತಮ್ಮ ಸ್ವಾತಂತ್ರ್ಯವನ್ನು ಸಾರಿಕೊಂಡು, ಆಳತೊಡಗಿದರು. ಅವರು ಹಿಂದೂ ರಾಜ–ಮಹಾರಾಜರ ವಿರುದ್ಧ ಯುದ್ಧ ಜರುಗಿಸಿ, ಅವರಿಂದ 'ಚೌಥ್' ಕಪ್ಪ ಪಡೆದುಕೊಂಡು, ಅವರನ್ನು ನಿತ್ರಾಣರನ್ನಾಗಿ ಮಾಡಿದರು. ಕ್ರಮೇಣ ಅವರು ಪರಸ್ಪರ ವೈಮನಸ್ಸು, ದ್ವೇಷ, ಈರ್ಷೆಗಳಿಂದ ನರಳಿ, ಹೋರಾಡಿ, ತಮ್ಮ ಪ್ರಾಬಲ್ಯ ಕಳೆದುಕೊಂಡರು. ಪೂನಾ ಪೇಶ್ವೆಯವರ ವಿರುದ್ಧ ಕದನ ಹೂಡಿ, ಅವರ ಪ್ರಾಬಲ್ಯ ಕುಂಠಿತಗೊಳಿಸಿದರು. ೧೭೬೧ರಲ್ಲಿ ಜರುಗಿದ ಪಾನೀಪತ್‌ನಲ್ಲಿ ಪೇಶ್ವೆ ಸದಾಶಿವರಾವ್ ಅಬ್ದಾಲಿ ವಿರುದ್ಧ ಜರುಗಿಸಿದ ಯುದ್ಧದಲ್ಲಿ ಸೋಲನ್ನು

೮. P 398 FN History of Sikhs by G.Singh

ಅನುಭವಿಸಿ, ಸಾವನ್ನಪ್ಪಿದ ನಂತರ ಅವರ ಬೆನ್ನು ಮೂಳೆ ಮುರಿದಂತಾಗಿ, ಅವರ ಪ್ರಾಬಲ್ಯ ಕ್ಷೀಣಿಸಿ, ಅವರ ಜಾಗವನ್ನು ಮರಾಠ ಸರದಾರರು ಪಡೆದುಕೊಂಡರು. ಆದರೆ ಅವರು ಕೂಡ ಅನೈಕ್ಯತೆಯ ವ್ಯಾಧಿಯಿಂದ ನರಳಿ, ಬ್ರಿಟಿಷ್‌ರ ಮತ್ತು ಫ್ರೆಂಚ್‌ರ ಸ್ನೇಹಹಸ್ತವನ್ನು ಪಡೆದು ಪರಸ್ಪರ ಕದನ ಹೂಡಿ ನಿತ್ರಾಣಗೊಂಡರು.

೧೮೦೨ರಲ್ಲಿ ಹೋಲ್ಕರ್ ಪೇಶ್ವೆಗಳ ವಿರುದ್ಧ ಜರುಗಿಸಿದಾಗ, ಬ್ರಿಟಿಷ್‌ರು ಪೇಶ್ವೆ ಸಹಾಯಕ್ಕೆ ಬಂದಾಗ, ಹೋಲ್ಕರ್, ಪಂಜಾಬತ್ತ ಓಡಿ, ಕ್ರಮೇಣ ಬ್ರಿಟಿಷ್‌ರೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡು ತನ್ನ ಸಂಸ್ಥಾನವನ್ನು ಕಾಪಾಡಿಕೊಂಡ.

ಹಿಂದೂ ಮರಾಠರು, ಮುಸ್ಲಿಮ್ ಮೊಘಲ್‌ರ ಕ್ರೂರ ಆಡಳಿತದ ವಿರುದ್ಧ ದಂಗೆ ಎದ್ದು, ಹೋರಾಡಿ ಸಾಮ್ರಾಜ್ಯ ಸ್ಥಾಪಿಸಿದರೂ, ಪರಸ್ಪರ ಕದನ ಜರುಗಿಸಿದ್ದಲ್ಲದೆ, ಇತರ ಹಿಂದೂ ರಾಜ ಮಹಾರಾಜರ ವಿರುದ್ಧ ಸಮರ ಸಾಗಿಸಿ, ಅವರ ಸಾಮರ್ಥ್ಯವನ್ನು ಕುಂಠಿಸಿ, ತಾವೂ ನಿಷ್ಕ್ರಿಯಗೊಂಡು, ನಿತ್ರಾಣಗೊಂಡು, ಪರಕೀಯರ ಆಳ್ವಿಕೆಗೆ ತಲೆ ಒಡ್ಡಿದ್ದು, ಅತ್ಯಂತ ಶೋಚನೀಯ ಮತ್ತು ಅಸಹನೀಯ ಐತಿಹಾಸಿಕ ಸಂಗತಿಯಾಗಿ ಚರಿತ್ರೆಯ ಪುಟಗಳಲ್ಲಿ ಬರೆಸಿಕೊಂಡರು.

ಮರಾಠರು, ಪಂಜಾಬ್‌ನ ಸಿಖ್ ಮತ್ತು ರಾಜಸ್ಥಾನದ ರಾಜಪುತ್ರರೊಂದಿಗೆ ಕೈ ಜೋಡಿಸಿದ್ದರೆ, ಭಾರತದ ಇತಿಹಾಸವೇ ಬದಲಾಗುತ್ತಿತ್ತು ಎಂದರು ಇತಿಹಾಸಕಾರರು. ಡಾ. ಗೋಪಾಲ್ ಸಿಂಗ್‌ರ ಈ ಮಾತುಗಳು ಇಂದಿಗೂ ಸ್ಮರಿಸಬಹುದಾಗಿದೆ :

'What a pity that these, two formidable forces - the Marathas and Sikhs with the Rajputs and other patriots in the south could not combine for a common cause to write a new (and glorious) chapter in the annals of India...' 9

---

೯. P 399 FN History of Sikhs by G.Singh

ಅಧ್ಯಾಯ ೪
ಅಬ್ದಾಲಿಯ ಆಕ್ರಮಣ

"ವಿಪತ್ತುಗಳು ಕೆಲವರನ್ನು ಅಧೋಗತಿಗೆ ತಳ್ಳಿದರೆ, ಕೆಲವರಿಗೆ ಉನ್ನತ ಶಿಖರಗಳನ್ನೇರಿ ದಾಖಲೆಗಳನ್ನು ಗಳಿಸಲು ಸಹಾಯಕವಾಗುತ್ತದೆ."

–ಡಬ್ಲ್ಯು.ಎ. ವಾರ್ಡ್

ಮರಾಠರ ಸೋಲು ಆಫ್ಘನನ ಅಬ್ದಾಲಿಯನ್ನು ಉತ್ತರ ಹಿಂದುಸ್ಥಾನದ ಬಲಿಷ್ಠ ಬಾದಶಹನನನ್ನಾಗಿ ಮಾಡಿತು. ಮರಾಠರು ಭಾರತದ ನರ್ಮದಾ ನದಿಯ ದಕ್ಷಿಣ ಪ್ರದೇಶದಲ್ಲಿ ತಳವೂರಿ ಕುಳಿತರು. ಅವರು ಉತ್ತರ ಭಾರತ ಅಥವಾ ಸಂಪೂರ್ಣ ಭಾರತದ ಚಕ್ರಾಧಿಪತ್ಯ ಸ್ಥಾಪಿಸುವ ಕನಸು ನುಚ್ಚು ನೂರಾಗಿ, ಕ್ರಮೇಣ ಬ್ರಿಟಿಷ್ಟರ ಆಳ್ವಿಕೆಗೆ ತಲೆಬಾಗಿ ತುಂಡು ತುಂಡು ರಾಜರಾಗಿ ಹೊರಹೊಮ್ಮಿದರು.

ಅಬ್ದಾಲಿ ಉತ್ತರ ಹಿಂದೂಸ್ಥಾನದಲ್ಲಿ ತನ್ನ ಸೈನ್ಯಬಲದಿಂದ ಮರಾಠ, ಮೊಘಲ್ ಮತ್ತು ಸಿಖ್ಖರನ್ನು ಸೋಲಿಸಿ ತನ್ನ ಸಾಮರ್ಥ್ಯ ತೋರಿಸಿದರೂ, ತನ್ನ ಪ್ರಭುತ್ವ ತೋರಿಸಲು ದೆಹಲಿಯಲ್ಲಿ ನಿಲ್ಲಲಿಲ್ಲ. ಕಾಬೂಲ್‌ಗೆ ಹಿಂದಿರುಗಿದ. (೧೭೬೧) ಅವನು ಹಿಂದಿರುಗಿದ ಕೂಡಲೆ, ಸಿಖ್ಖರು ಮತ್ತೊಮ್ಮೆ ಸಂಘಟನೆಗೆ ಪ್ರಾರಂಭಿಸಿದರು. ಅಬ್ದಾಲಿ ನೇಮಕ ಮಾಡಿದ ಪಠಾಣ ರಾಜಪ್ರತಿನಿಧಿಗಳ ವಿರುದ್ಧ ಕಾಳಗದ ಕಹಳೆ ಊದಿದರು. ಸಿಖ್ಖರ ಮುಂದಾಳತ್ವವನ್ನು ಜಸ್ಸಾಸಿಂಗ್ ಅಹ್ಲುವಾಲಿಯಾ, ಚೇಟ್‌ಸಿಂಗ್ ಕನ್ಹೈಯ್ಯಾ, ಹರಿಸಿಂಗ್ ಭಾಂಗೀ, ಲೆಹ್ನಾಸಿಂಗ್ ಮತ್ತು ಇತರ ಸರದಾರರು, ಪಂಜಾಬ್‌ನ್ನು ತಮ್ಮ ವಶಕ್ಕೆ ಮರುಪಡೆಯಲು ಪಠಾಣರ ವಿರುದ್ಧ ಹೋರಾಡಲು ಪ್ರಾರಂಭಿಸಿದರು. ಸಿಖ್ಖರು ಎಸಗಿದ ಹೋರಾಟಕ್ಕೆ ಲಾಹೋರ್, ಜಲಂಧರ್, ಸರ್‌ಹಿಂದ್, ಮಲೇರ್‌ಕೋಟ್ಲಾ ನಗರ ಪ್ರದೇಶಗಳು ತುತ್ತಾದವು. ಗುರು ಗೋಬಿಂದ್ ಸಿಂಗ್‌ರ ಮಕ್ಕಳು ಹುತಾತ್ಮತೆಗೆ ಕುಖ್ಯಾತವಾಗಿದ್ದ ಸರ್‌ಹಿಂದ್ ನಗರವನ್ನು ಸಿಖ್ಖರು ಹಾಳುಗೆಡವಿದರು. ಆ ಶಾಪಗ್ರಸ್ಥ ನಗರ ಸಿಖ್ಖರ ಭಯಂಕರ ಕ್ರೋಧಕ್ಕೆ ಪದೇ ಪದೇ ಗುರಿಯಾಗಿ ಅವರಿಂದ ಹಾಳುಗೆಡಲ್ಪಟ್ಟಿತು. ಕಾಬೂಲ್‌ನಲ್ಲಿದ್ದ ಅಬ್ದಾಲಿಗೆ ಸುದ್ದಿ ತಿಳಿದು, ಅವನು ಒಂದು ಬೃಹತ್ ಪಡೆಯನ್ನು ಪಂಜಾಬ್‌ನತ್ತ ಕಳುಹಿಸಿದ. ಸಿಖ್ಖರ ಪ್ರತಿರೋಧ ಮತ್ತು ಬಲವನ್ನು ಮುರಿಯಲು ಪ್ರಯತ್ನಿಸಿದ. ಆದರೆ ಅವನ ಸೈನ್ಯಾಧಿಕಾರಿ ನೂರುದ್ದೀನ್ ಬಾವಮ್‌ಜಾಯ್ ಚಿನಾಬ್ ನದಿ ದಾಟಿದಾಗ, ಭರತ್‌ಸಿಂಗ್ ಸುಕರ್‌ಚಕೀಯಾ ತನ್ನ ಪಡೆಯೊಂದಿಗೆ ಅವನನ್ನು ಎದುರಿಸಿದ. ಘನಘೋರ ಯುದ್ಧ ಜರುಗಿ, ಪಠಾಣರ ಸೋಲುಂಟಾಗಿ, ನೂರುದೀನ್ ಒಬ್ಬ ಭಿಕ್ಷಕನ ವೇಶ ತೊಟ್ಟು ಪಾರಾದ.

ಆಫ್ಘನ್ನರ ಬಲಿಷ್ಟ ಪಡೆಯನ್ನು ಸೋಲಿಸಿದ ಸಿಖ್‌ರ ಸರದಾರ ಚರತ್‌ಸಿಂಗ್ ಸುಕರ್‌ಚಕೀಯಾ ಪ್ರತಾಪಸಿಂಹನಾಗಿ ಮೆರೆದ. ಅಬ್ದಾಲಿಯ ಸೈನ್ಯದ ಮೇಲೆ ಗಳಿಸಿದ ವಿಜಯದಿಂದ ಉನ್ಮತ್ತರಾದ ಸಿಖ್‌ರು ಲಾಹೋರ್ ಮೇಲೆ ದಾಳಿ ನಡೆಸಲು ಸಿದ್ಧರಾದರು. ಸಿಖ್‌ರ ಸೈನ್ಯದ ಮುಂದಾಳತ್ವವನ್ನು ಜಸ್ಸಾ ಸಿಂಗ್ ಅಹ್ಲೂವಾಲಿಯಾ ವಹಿಸಿಕೊಂಡ. ಅವನು ಲಾಹೋರ್ ನಗರವನ್ನು ಯಾವ ಪ್ರತಿರೋಧವನ್ನು ಎದುರಿಸದೆ ನವೆಂಬರ್ ೧೭೬೧ ರಲ್ಲಿ ಆಕ್ರಮಿಸಿದ. ಜಸ್ಸಾ ಸಿಂಗ್‌ನನ್ನು 'ಸುಲ್ತಾನ್-ಉಲ್-ಖಮ್' ಎಂದು ಘೋಷಿಸಲಾಯಿತು.

ಅತ್ತ ಕಾಬೂಲ್‌ನಲ್ಲಿ ಕುಳಿತ ಅಬ್ದಾಲಿ ತನ್ನ ಸಾಮಂತರು ಮತ್ತು ಸೈನ್ಯಾಧಿಕಾರಿಗಳು ಸಿಖ್‌ರಿಂದ ಅನುಭವಿಸಿದ ಸೋಲು ಮತ್ತು ಅವಮಾನಗಳಿಂದ ಕ್ರೋಧಗೊಂಡ. ಅವನು ಮತ್ತೊಮ್ಮೆ ತನ್ನ ಬಲಿಷ್ಠ ಸೇನಾಪಡೆಯೊಂದಿಗೆ ಭಾರತದ ಮೇಲೆ ದಾಳಿ ನಡೆಸಿದ. ಜನವರಿ ೧೭೬೨ ರಲ್ಲಿ ಅಬ್ದಾಲಿ ಖೈಬರ್ ಕಣಿವೆಯ ಮೂಲಕ ಪಂಜಾಬ್‌ಗೆ ಬಂದು ಸಟ್ಲೆಜ್ ನದಿಯನ್ನು ದಾಟಿದ. ಸುದ್ದಿ ಅರಿತ ಸಿಖ್‌ರು ಲಾಹೋರ್ ನಗರ ತ್ಯಜಿಸಿ, ಆಕ್ರಮಣಕಾರರ ವಿರುದ್ಧ ಯುದ್ಧ ಜರುಗಿಸಲು ಸೂಕ್ತ ಜಾಗ, ಸಮಯಕ್ಕೆ ಅನುವು ಮಾಡಿಕೊಳ್ಳಲಾರಂಭಿಸಿದರು. ಮಲೇರ್‌ಕೋಟ್ಲಾ ಪ್ರದೇಶದಲ್ಲಿ ೩೦,೦೦೦ ಸಿಖ್‌ರು ತಮ್ಮ ಸಂಸಾರದೊಂದಿಗೆ ಬೀಡು ಬಿಟ್ಟಿರುವಾಗಲೇ, ಅಬ್ದಾಲಿ ತನ್ನ ಸೈನ್ಯದೊಂದಿಗೆ ಅಲ್ಲಿಗೆ ಧಾವಿಸಿ ಅವರ ಮೇಲೆ ದಾಳಿ ನಡೆಸಿದ. ಯುದ್ಧ ಜರುಗಿ, ಅಪಾರ ಸಾವು ನೋವು ಅನುಭವಿಸಿತು. ಬರ್ನಾಲಾ ಬಳಿ ಚದುರಿದ ಸಿಖ್ ಸೈನ್ಯ ಪಡೆಯನ್ನು ಹಿಂಬಾಲಿಸಿದ ಅಬ್ದಾಲಿ ಪಡೆ ಅದರ ಮೇಲೆ ಆಕ್ರಮಣ ನಡೆಸಿ, ಅಪಾರ ಹಾನಿ ಉಂಟುಮಾಡಿದ. ಸುಮಾರು ಹತ್ತು ಸಾವಿರ ಸಿಖ್‌ರು ಹೋರಾಡುತ್ತಾ ವೀರಮರಣವನ್ನಪ್ಪಿದರು,

ಅಬ್ದಾಲಿ ಅಮೃತಸರದ ಹರಮಂದಿರವನ್ನು ಹಾಳುಗೆಡವಿದ. ಅವನು ಸ್ವತಃ ಅದರ ವಿಧ್ವಂಸಕ ಕಾರ್ಯದ ನೇತೃತ್ವ ವಹಿಸಿದ. ತೋಪಿನ ಗುಂಡುಗಳಿಂದ ಮಂದಿರವನ್ನು ಧ್ವಂಸ ಮಾಡಿದ. (ಮದ್ದುಗುಂಡುಗಳನ್ನು ಸಿಡಿಸುವಾಗ ಹರಮಂದಿರದ ಕಟ್ಟಡದ ಒಂದು ಚೂರು ಅಹ್ಮದಾಲಿಯ ಮುಖಕ್ಕೆ ಬಡಿದು, ಅವನ ಮೂಗಿಗೆ ಗಾಯವಾಗಿ, ಅದರಿಂದ ಗುಣಮುಖನಾಗದೆ, ಅಪಾರವಾಗಿ ನೋವನ್ನನುಭವಿಸಿ, ಪ್ರದೇಶಕ್ಕೆ ಹಿಂದಿರುಗಿದ ಅಬ್ದಾಲಿ ಜೂನ್ ೧೭೭೩ರಲ್ಲಿ ಪ್ರಾಣ ತ್ಯಜಿಸಿದ.) ೧

ಲಾಹೋರ್‌ನಲ್ಲಿ ಬೀಡುಬಿಟ್ಟದ್ದ ಅಬ್ದಾಲಿ ೧೭೬೨ರ ವರೆಗೆ ಅಲ್ಲೇ ತಂಗಿದ್ದ, ಅವನು ಈ ಮೊದಲೇ ಕಾಶ್ಮೀರದ ರಾಜ್ಯಪಾಲನನ್ನಾಗಿ ನೇಮಕ ಮಾಡಿದ್ದ ಹಿಂದೂ ಖಾತ್ರೀ ಜನಾಂಗದ ಸುಖ್‌ಜೀವನ್ ರಾಮ್ ದಂಗೆ ಎದ್ದಿದ್ದರಿಂದ, ಅವನನ್ನು ಸೆರೆಹಿಡಿಸಿಸಿ, ಲಾಹೋರ್‌ಗೆ ಕರೆತಂದು, ಚಿತ್ರಹಿಂಸೆ ಮಾಡಿ ಅವನನ್ನು ಸಾಯಿಸಿದ. ಖಾತ್ರಿಯ ಬದಲಿಗೆ ಬುಲಂದ್ ಖಾನ್ ಎಂಬುವವನನ್ನು ನೇಮಕ ಮಾಡಿದ.

೧. P 40 History of Sikhs

ಅಬ್ದಾಲಿ ಸಿಖ್ಖರ ಮೇಲೆ, ಅವರ ಗುಡಿಯ ಮೇಲೆ ಮತ್ತು ಅವರ ನೆಲ ಜಲ ಆಸ್ತಿಗಳ ಮೇಲೆ ಜರುಗಿಸಿದ ಕಾಳಗ, ಹತ್ಯೆ, ವಿಧ್ವಂಸಕಾರ್ಯಗಳು ಸಿಖ್ಖರಿಗೆ ಅತ್ಯಂತ ಅವಮಾನಕರವಾಗಿ, ಅತಿ ಶೋಚನೀಯಕರವಾಗಿ, ಅತಿ ಮನೋವ್ಯಾಕುಲಕರವಾಗಿ ಪರಿಣಮಿಸಿ ಅವರ ಸ್ವಾಭಿಮಾನ, ಅವರ ಕೆಚ್ಚು, ಮನೋಧೈರ್ಯಗಳಿಗೆ ಪರಿಣಾಮಕರವಾದ ಪೆಟ್ಟು ಬಿದ್ದಿತು. ಆ ಅವಮಾನಕರ ಘಟನೆಗಳನ್ನು ಅವರು ಮರೆಯುವ ಸಾಧ್ಯವೇ ಇಲ್ಲವಾಗಿ, ಅವರು ಪ್ರತೀಕಾರ ಕೈಗೊಳ್ಳಲು ಟೊಂಕ ಕಟ್ಟಿ ನಿಂತರು.

ಅಬ್ದಾಲಿ ಇನ್ನೂ ಲಾಹೋರ್‌ನಲ್ಲಿದ್ದಾಗಲೇ, ಮೇ ೧೭೬೨ ರಲ್ಲಿ ಅವರು ಶಾಪಗ್ರಸ್ತ ನಗರ ಸರ್‌ಹಿಂದ್ ಮೇಲೆ ಆಕ್ರಮಣ ಕೈಗೊಂಡರು. ನಗರದ ನವಾಬ ಜೈನ್ ಖಾನ್‌ನನ್ನು ಸೋಲಿಸಿ, ಅವನಿಂದ ಕಪ್ಪ ವಸೂಲಿ ಮಾಡಿದರು. ಅಕ್ಟೋಬರ್ ೧೭, ೧೭೬೨ ರಂದು, ಸಿಖ್ಖರು ಅಮೃತಸರದಲ್ಲಿ ಸಭೆ ಸೇರಿ ತಮಗಾದ ಅಪಮಾನ, ಗುಡಿನಾಶ, ಅಮಾಯಕರ ಹತ್ಯೆಗಳ ವಿರುದ್ಧ ಹೋರಾಡಲು ಸಂಕಲ್ಪ ಮಾಡಿದರು. ಅವರ ಸಂಘಟಿಸಿದ ಸೈನ್ಯ ಲಾಹೋರ್‌ನ ಸುತ್ತಮುತ್ತಲಿನ ಪ್ರದೇಶ ಮತ್ತು ಸರ್‌ಹಿಂದ್‌ನಿಂದ ಸಿಯಾಲ್‌ಕೋಟ್‌ರವರೆಗೆ ಆಕ್ರಮಣ ಜರುಗಿಸಿ ಪಠಾಣರಿಗೆ ಹೈರಾಣ ಮಾಡಿದರು. ಈಗಾಗಲೇ ಯುದ್ಧಾಚರಣೆಯಿಂದ ಬಳಲಿದ್ದ ಅಬ್ದಾಲಿ ಸಿಖ್ಖರೊಂದಿಗೆ ಶಾಂತಿ ಸಂಧಾನಕ್ಕೆ ಸಮ್ಮತಿಸಿದ. ಆದರೆ ಸಿಖ್ಖರು ಸಂಧಾನಕ್ಕೆ ಒಲ್ಲೆ ಎಂದರು. ಅವರು ಹೋರಾಡಿ ತಮ್ಮ ಕಿಚ್ಚನ್ನು ತೋರಿಸಿ ತಮ್ಮ ನೆಲದ ರಕ್ಷಣೆಗೆ ಸಿದ್ಧರಾಗಿದ್ದರು. ಉಪಾಯ ಕಾಣದ ಅಬ್ದಾಲಿ, ಸಿಖ್ಖರ ವಿರುದ್ಧ ಕದನ ಪ್ರಾರಂಭಿಸಿದ. ಅವನು ಪುನಃ ಅಮೃತಸರವನ್ನು ಆಕ್ರಮಿಸಿದ. ಅವನ ಆಕ್ರಮಣವನ್ನು ಅತ್ಯಂತ ಶೂರತನದಿಂದ ಎದುರಿಸಿದ ಸಿಖ್ಖರು, ಅವನನ್ನು ಹಿಮ್ಮೆಟ್ಟಿಸಿ, ರಾತ್ರೋ ರಾತ್ರಿ ಲಾಹೋರ್‌ಗೆ ಪಲಾಯನ ಮಾಡುವಂತೆ ಮಾಡಿದರು. ಅಬ್ದಾಲಿ ಚೇತರಿಸಿಕೊಂಡು, ಪುನಃ ತನ್ನ ಆಕ್ರಮಣವನ್ನು ಮುಂದುವರೆಸಲು ಸಾಧ್ಯವಾಗದಾಯಿತು. ತನ್ನ ಸ್ವದೇಶ ಕಂದಹಾರ್‌ನಲ್ಲಿ ಜರುಗಿದ ದಂಗೆಯ ಪ್ರಕರಣದಿಂದ ಅದನ್ನು ಹತ್ತಿಕ್ಕಲು ಅವನು ಆಫ್ಘಾನಿಸ್ತಾನಕ್ಕೆ ಹಿಂದಿರುಗಿದ. ಡಿಸೆಂಬರ್ ೧೨, ೧೭೬೨ ರಂದು ಅಬ್ದಾಲಿ ಲಾಹೋರ್‌ನ್ನು ತ್ಯಜಿಸಿ, ತನ್ನ ಸೈನ್ಯದೊಂದಿಗೆ ಕಾಬೂಲ್‌ನತ್ತ ಪಯಣಿಸಿದ. ಅವನು ಚಿನಾಬ್ ನದಿ ದಾಟಿದೊಡನೆ, ಸಿಖ್ಖರು ಪಠಾಣರ ದಂಡು ಪ್ರದೇಶಗಳ ಮೇಲೆ ಆಕ್ರಮಣ ಜರುಗಿಸಿ, ಅವನ್ನು ವಶಪಡಿಸಿಕೊಂಡರು. ಮಲೇರ್‌ಕೋಟ್ಲಾ ನಗರವನ್ನು ವಶಪಡಿಸಿ, ಅದರ ನವಾಬ ಹಿಂಗಾನ್‌ಖಾನ್‌ನನ್ನು ಕೊಂದರು. ಪುನಃ ಶಾಪಗ್ರಸ್ತ ಸರ್‌ಹಿಂದ್‌ನ್ನು ಆಕ್ರಮಿಸಿ, ಅದರ ರಾಜ್ಯಪಾಲ ಜೈನ್‌ಖಾನ್‌ನನ್ನು ಕೊಂದರು. ನಗರವನ್ನು ಸುಟ್ಟು ಭಸ್ಮ ಮಾಡಿದರು. ಗುರು ಗೋಬಿಂದ್‌ಸಿಂಗ್‌ರ ಎಳೇ ಮಕ್ಕಳನ್ನು ಸಜೀವ ಸಮಾಧಿ ಮಾಡಿದ ಸ್ಥಳದಲ್ಲಿ ಸ್ಮಾರಕ ಕಟ್ಟಿ, ಅಲ್ಲೇ ಒಂದು ಸುಂದರ ಗುರುದ್ವಾರ ನಿರ್ಮಿಸಿದರು. ಅದನ್ನು 'ಫತೇಗರ್ ಸಾಹಿಬ್' ಎಂದು ಕರೆದರು. ಮೋರಿಂದಾ ಎಂಬ ಸ್ಥಳದಲ್ಲಿ ವಾಸವಾಗಿದ್ದ

ಗುರುಗೋಬಿಂದ್‌ಸಿಂಗ್‌ರ ಮಕ್ಕಳನ್ನು ಕುಟಿಲತೆಯಿಂದ ಹಿಡಿದುಕೊಟ್ಟ ಜಾನೀ ಖಾನ್ ಮತ್ತು ಮಾನೀ ಖಾನ್ ಎಂಬುವರನ್ನು ಹುಡುಕಿ, ಸೆರೆ ಹಿಡಿದು ಕೊಂದರು ಸಿಖ್‌ರು.

ಅಮೃತಸರದ ಗುಡಿ ಮತ್ತು ಸರೋವರವನ್ನು ಪುನರ್‌ನಿರ್ಮಿಸಿದರು ಸಿಖ್ ಸರದಾರ ಚರತ್‌ಸಿಂಗ್ ಸುಖರ್‌ಚಾಕಿಯಾ ಮತ್ತು ಅವನ ಪರಿವಾರದವರು.

೧೭೬೪ ರಲ್ಲಿ ಸಿಖ್‌ರು ಪುನಃ ಲಾಹೋರ್‌ನ ಮೇಲೆ ದಾಳಿ ನಡೆಸಿದರು. ಅಬ್ದಾಲಿ ನೇಮಿಸಿದ್ದ ಹಿಂದೂ ರಾಜ್ಯಪಾಲ ಕಾಬೂಲಿ ಮಲ್ ಎಂಬಾತನನ್ನು ಸೆರೆಹಿಡಿಯದೆ ಅವನಿಗೆ ಹಿಂಸಿಸದೇ ಇದ್ದರೂ, ಗೋರಕ್ಷಣೆ ಮಾಡುವಂತೆ ಆಜ್ಞಾಪಿಸಿದರು. ನಗರದಲ್ಲಿದ್ದ ಗೋ ಕಟುಕರನ್ನು ಹಿಡಿದು ಅವರ ಕಿವಿ ಮೂಗುಗಳನ್ನು ಕತ್ತರಿಸುವಂತೆ ಆದೇಶ ನೀಡಿ ಅವನಿಂದ 'ನಜರಾನಾ' ಒಪ್ಪಿಸಿಕೊಂಡರು.

ಸಿಖ್‌ರ ಸರದಾರಗಳಾದ ಹರಿಸಿಂಗ್ ಭಂಗೀ ಮತ್ತು ಚರತ್ ಸಿಂಗ್ ಪಂಜಾಬ್‌ನ ಪಶ್ಚಿಮ ಮತ್ತು ಪೂರ್ವ ಪ್ರದೇಶಗಳ ಮೇಲೆ ದಂಡೆತ್ತಿ ಆಕ್ರಮಿಸಿದರು. ಅವರ ಆಕ್ರಮಣಕಾರಿ ಕಾರ್ಯಕ್ರಮ ಕೇಳಿದ ಕಾಬೂಲ್‌ನ ಅಬ್ದಾಲಿ ಕೆರಳಿದ. ಅವನು ಪುನಃ ಭಾರತದ ಮೇಲೆ ಅಕ್ಟೋಬರ್ ೧೭೬೪ ರಲ್ಲಿ ದಾಳಿ ಮಾಡಲು ತನ್ನ ಬಲಿಷ್ಠ ಸೈನ್ಯದೊಂದಿಗೆ ಹೊರಟ. ಅವನ ಆಗಮನದ ಸುದ್ದಿ ತಿಳಿದ ತಕ್ಷಣ ಸಿಖ್‌ರು ಜಾಗ ಖಾಲಿ ಮಾಡಿ ಗುಡ್ಡ ಬೆಟ್ಟ ಪ್ರದೇಶಗಳಿಗೆ ತೆರಳಿ ಕದನ ಜರುಗಿಸಲು ಸೂಕ್ತ ಸಮಯಕ್ಕೆ ಕಾದರು. ಅವರಲ್ಲಿ ಅಬ್ದಾಲಿಯ ಬಲಿಷ್ಠ ಸೈನ್ಯವನ್ನು ಎದುರಿಸುವಷ್ಟು ಸೈನ್ಯಬಲವಾಗಲೀ, ಯುದ್ಧಸಾಮಗ್ರಿಗಳಾಗಲೀ ಇರಲಿಲ್ಲ. ಅವರು ಗೆರಿಲ್ಲಾ ಯುದ್ಧ ತಂತ್ರಕ್ಕೆ ಮೊರೆಹೋದರು.

ಲಾಹೋರ್ ನಗರವನ್ನು ತಲುಪಿದ ಅಬ್ದಾಲಿ ೩೦ ಮೈಲಿ ದೂರದ ಸಿಖ್‌ರ ಪವಿತ್ರ ನಗರ ಅಮೃತಸರವನ್ನು ಆಕ್ರಮಿಸಲು ಹೊರಟಾಗಿ ಅವನನ್ನು ದಾರಿಯುದ್ದಕ್ಕೂ ಸಿಖ್‌ರು ತಡೆಯೊಡ್ಡಿ ಕದನ ಜರುಗಿಸಿ ಹೈರಾಣ ಮಾಡಿದರು. ನಾಲ್ಕು ದಿನಗಳು ಬೇಕಾಯಿತು ಅಬ್ದಾಲಿಗೆ ಅಮೃತಸರ ತಲುಪಲು. ಅಲ್ಲಿ ಅವನಿಗೆ ಕಂಡದ್ದು ಪವಿತ್ರಮಂದಿರವನ್ನು ಕಾದು ಕುಳಿತಿದ್ದ ೩೦ ಮಂದಿ ಸಿಖ್ ಭಟರು. ಅವರೆಲ್ಲರೂ ಅಬ್ದುಲ್ಲಾನ ಎದುರು ಹೋರಾಡಿ ಪ್ರಾಣ ತ್ಯಜಿಸಿದರು. ಅಬ್ದಾಲಿ ಮತ್ತೊಮ್ಮೆ ಸಿಖ್‌ರ ಪವಿತ್ರ ಗುಡಿಯನ್ನು ಹಾಳುಗೆಡವಿದ. ಅದರ ಪವಿತ್ರ ಸರೋವರನ್ನು ನಾಶಮಾಡಿದ.

ಅಬ್ದಾಲಿ ಲಾಹೋರ್‌ಗೆ ಹಿಂದಿರುಗಿದವ, ಪುನಃ ಆ ಶಾಪಗ್ರಸ್ಥ ನಗರ ಸರ್‌ಹಿಂದ್‌ನ ಮೇಲೆ ದಾಳಿ ನಡೆಸಿ, ಊರು ನಾಶ ಮಾಡಿ, ದಾರಿಯುದ್ದಕ್ಕೂ ನಾಗರೀಕರ ಹತ್ಯೆ ಎಸಗಿದ. ಪಂಜಾಬ್‌ನ ನಾಗರೀಕರ ಮೇಲೆ, ಅದರಲ್ಲೂ ಪ್ರತಿರೋಧ ಎಸಗುತ್ತಿರುವ ಸಿಖ್‌ರ ಮೇಲೆ ಅಬ್ದಾಲಿಗೆ ಇದ್ದ ರೋಷವನ್ನು ಕೊಲೆ ಸುಲಿಗೆ ಅತ್ಯಾಚಾರಗಳ ಮೂಲಕ ಎಸಗಿ ತೃಪ್ತಿಪಟ್ಟುಕೊಂಡ. ಅವನು ಪ್ರತಿಯೊಂದು ನಾಗರೀಕರ ಮನೆ ಮಠಗಳ ಮೇಲೆ ದಾಳಿ ನಡೆಸಿ ಸಕಲ ವಸ್ತು, ಪದಾರ್ಥ, ಧನ ಧಾನ್ಯ ಕೊಳ್ಳೆ ಹೊಡೆದ. ಅವನ ಈ ಕೃತ್ಯದಿಂದ ಸಿಖ್‌ರಲ್ಲಿ ಒಂದು ಗಾದೆ ಹೊರಹೊಮ್ಮಿ ಅದು

ಇಂದಿಗೂ ಅವರ ಬಾಯಿಗಳಲ್ಲಿ ಸ್ಥಿರಗೊಂಡಿದೆ.

"ಖಾದಾ ಪೀತಾ ಲಾಹೇ ದಾಃ
ರಹನ್‌ದಾ ಅಹ್ಮದ್ ಶಾಹೇ ದಾ"
("ನೀನು ಏನು ತಿಂದು ಕುಡಿಯುತ್ತೀಯೋ ಅದೇ ಉಳಿಯುವುದು. ಮಿಕ್ಕಿದ್ದೆಲ್ಲಾ ಅಹ್ಮದ್ ಶಹಾ ದೋಚುವನು")೨

ಗೆರಿಲ್ಲಾ ಯುದ್ಧತಂತ್ರದಿಂದ ಅಬ್ದಾಲಿಯ ಸೈನ್ಯವನ್ನು ಕಾಡಿಸಿ, ನಿತ್ರಾಣಗೊಳಿಸಿ ಅವರು ಹಿಂದೆಗೆಯುವಂತೆ ಮಾಡಿದ ಸೈನ್ಯ ಸಿಖ್ಖರು ಒಗ್ಗೂಡಿ ಅವನ ಮೇಲೆ ದಾಳಿ ನಡೆಸುವ ಹಂಚಿಕೆ ಹಾಕುವ ಸಮಯದಲ್ಲೇ ಅಬ್ದಾಲಿ ಸ್ವದೇಶಕ್ಕೆ ಹಿಂದಿರುಗುವ ತೀರ್ಮಾನಕ್ಕೆ ಬಂದ. ಅವನು ಸರ್‌ಹಿಂದ್ ನಗರದ ಮೂಲಕ ಲಾಹೋರ್ ತಲುಪುವಾಗ, ಪಾಟಿಯಾಲಾ ನಗರಕ್ಕೆ ಬಂದಿಳಿದ. ಅಲ್ಲಿನ ಸಿಖ್ ಸರದಾರ ಆಲಾ ಸಿಂಗ್‌ನೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡು ಅವನಿಗೆ 'ರಾಜ' ಪದವಿ ನೀಡಿ ಗೌರವಿಸಿದ. ಸುದ್ದಿ ತಿಳಿದ ಇತರ ಸಿಖ್ ಸರದಾರರು ಕ್ರೋಧಗೊಂಡರು. ಅವರು ಆಕ್ರಮಣಕಾರನ ವಿರುದ್ಧ ವೀರಾವೇಶದಿಂದ ಕಾದಾಡುತ್ತಿದ್ದಾಗ, ಪಾಟಿಯಾಲಾ ಸರದಾರ ಪ್ರತಿರೋಧ ತೋರಿಸದೆ ತನ್ನ ಪ್ರಾಣ ಉಳಿಸಿಕೊಳ್ಳಲು ಅಬ್ದಾಲಿಯೊಡನೆ ಸಂಧಾನ ಮಾಡಿಕೊಂಡಿದ್ದು ಸಹಿಸಲಾರದಾಗಿತ್ತು. ಆದರೆ 'ಅನೈಕ್ಯತೆಯ ವ್ಯಾಧಿ' ಪಾಟಿಯಾಲಾ ಸರದಾರನನ್ನು ಅಂಟಿತ್ತು.

ಸಿಖ್ಖರ ಸರದಾರರೆಲ್ಲರೂ ಅಬ್ದಾಲಿಯನ್ನು ಹಿಂಬಾಲಿಸಿ ಅವನ ಸೈನ್ಯಕ್ಕೆ ಅಪಾರ ಹಾನಿ ಉಂಟು ಮಾಡಿ, ಅವನು ತನ್ನ ಸ್ವದೇಶಕ್ಕೆ ಓಡಿ ಹೋಗುವಂತೆ ಮಾಡಿದರು. ೧೭೬೭ ರ ಮಾರ್ಚ್ ತಿಂಗಳ ಕೊನೆಯಲ್ಲಿ ಅಬ್ದಾಲಿ ಲಾಹೋರ್‌ನಲ್ಲಿ ತಂಗದೆ, ನೇರ ಸ್ವದೇಶಕ್ಕೆ ತ್ವರೆಯಿಂದ ನಿರ್ಗಮಿಸಿದ. ಅದೇ ಕಟ್ಟಕಡೆಯ ಆಕ್ರಮಣವಾಗಿತ್ತು, ಅಬ್ದಾಲಿಯ ಮತ್ತು ಆಫ್ಘನ್ನರದು. ಅಲ್ಲಿಂದೀಚೆಗೆ ಆಫ್ಘಾನಿಸ್ತಾನದಿಂದ ಖೈಬರ್ ಕಣಿವೆಯ ಮೂಲಕ ಭಾರತದ ಮೇಲೆ ನಿರಂತರವಾಗಿ ಆಕ್ರಮಣಕಾರಿಗಳ ದಾಳಿ ಬಂದಾಯಿತು ಎಂದರು ಇತಿಹಾಸಕಾರರು. ೩

'Again and again did Ahmed Shah return to punish and subdue them and always with the same — until at length being deserted by a large number of troops on the Sutlej, retraced his steps (1764) to Kabul and never again crossed the Indus. . .'

---

೨. P 411 FN History of sikhs B G. Singh
೩. P 16 The Country of the Sikhs by Stein Backh

ಆದರೆ, ಈಗಾಗಲೇ ಸಮುದ್ರದ ಮುಖಾಂತರ ಪಾಶ್ಚಾತ್ಯ ದಾಳಿಕೋರರ ಆಕ್ರಮಣ ಪ್ರಾರಂಭವಾಗಿ, ಬ್ರಿಟಿಷರು, ಫ್ರೆಂಚರು, ಪೋರ್ಚುಗೀಸರು ಭಾರತದ ನೆಲದಲ್ಲಿ ತಮ್ಮ ಪ್ರಭುತ್ವ ಸ್ಥಾಪಿಸಿ, ಕ್ರಮೇಣ ಸಂಪೂರ್ಣ ಭಾರತ ದೇಶವನ್ನು ತಮ್ಮ ಹಿಡಿತದಲ್ಲಿರಿಸಿಕೊಳ್ಳುವ ನಿಟ್ಟಿನಲ್ಲಿ ಸಾಗಿದ್ದರು.

ಅಮೃತಸರದಲ್ಲಿ ಸೇರಿದ ಸಿಖ್ ಸರದಾರರು ಲಾಹೋರ್‌ನ್ನು ಆಕ್ರಮಿಸುವ ಒಂದು 'ಗುರುಮತ್ತಾ' (ಠರಾವು) ಜಾರಿಗೆ ತಂದರು. ಅದರಂತೆ, ಏಪ್ರಿಲ್ ೬, ೧೭೬೫ ರಂದು, ಅವರು ಲಾಹೋರ್ ಮೇಲೆ ದಾಳಿ ಜರುಗಿಸಿ, ನಗರದ ಕೋಟೆಯನ್ನು ವಶಪಡಿಸಿಕೊಂಡರು. ಆ ಆಕ್ರಮಣದಲ್ಲಿ ಪ್ರಮುಖ ಪಾತ್ರ ವಹಿಸಿದ ಭಂಗೀ ಸರದಾರರು, ಸೋಭಾ ಸಿಂಗ್ ಕನ್ಹೈಯ್ಯಾ ಸಿಂಗ್, ಗೆದ್ದ ನಗರ ಪ್ರದೇಶವನ್ನು ಹಂಚಿಕೊಂಡು ತಮ್ಮ ಪ್ರಭುತ್ವ ಪಡೆದರು. ಸುದ್ದಿ ಅರಿತ ಅಬ್ದಾಲಿ, ಅವರ ಪ್ರಭುತ್ವವನ್ನು ಒಪ್ಪಿ, ತನ್ನ ಒಪ್ಪಿಗೆಯನ್ನು ಹಣ್ಣಿನ ಬುಟ್ಟಿಗಳ ಉಪಾಹಾರವನ್ನು ಭಂಗೀ ಸರದಾರರಿಗೆ ಕಳುಹಿಸಿದ.

ಸಿಖ್‌ರು ಪಂಜಾಬ್‌ನ್ನು ಆಕ್ರಮಿಸಿ, ಆಳತೊಡಗಿದ್ದಲ್ಲದೆ, ಅವರ ದೃಷ್ಟಿ ಈಗ ದೆಹಲಿ, ಗಂಗಾನದಿ ಪಾತ್ರಗಳ ಕಡೆ ಹೊರಳಿ, ಅದನ್ನು ಆಕ್ರಮಿಸಲು ಸಿದ್ಧತೆ ಮಾಡಿಕೊಳ್ಳತೊಡಗಿದರು.

ಅಂತಿಮವಾಗಿ ಸಿಖ್‌ರು ತಮ್ಮ ಬಲಿದಾನ, ತ್ಯಾಗ, ರಕ್ತ ಚೆಲ್ಲಿ, ನಿರಂತರ ಹೋರಾಟ ಎಸಗಿ ತಮ್ಮದೇ ಸ್ವತಂತ್ರ ನಾಡನ್ನು ಕಟ್ಟುವುದರಲ್ಲಿ ಯಶಸ್ಸು ಪಡೆದಿದ್ದರು.

ಅಧ್ಯಾಯ ೫

ಹನ್ನೆರಡು ಮಿಸಾಲ್‌ರು

"ಯಾವನು ಆಜ್ಞಾಪಾಲಕನಾಗಿರುವುದನ್ನು ಕಲಿತಿರುವುದಿಲ್ಲವೋ ಆತ ಒಳ್ಳೆಯ ಮುಂದಾಳಾಗುವುದಕ್ಕೆ ಸಾಧ್ಯವೇ ಇಲ್ಲ."

– ಅರಿಸ್ಟಾಟಲ್

ಪಂಜಾಬ್‌ನಲ್ಲಿ ತಮ್ಮ ಅಧಿಕಾರ ಸ್ಥಾಪಿಸಿದ ನಂತರ ಸಿಖ್‌ರ ಹನ್ನೆರಡು ಮಿಸಾಲ್‌ರು ಆ ಪ್ರದೇಶವನ್ನು ಹಂಚಿಕೊಂಡು ಆಳತೊಡಗಿದರು. ಭಂಗೀ ಸರದಾರರು ಲಾಹೋರ್ ಮತ್ತು ಅಮೃತಸರ ನಗರಗಳನ್ನು ಮತ್ತು ಜೀಲಮ್ ನದಿಯ ಕೆಳಪ್ರದೇಶಗಳನ್ನು ಆಳತೊಡಗಿದರೆ, ಘನಾಯ್ ಸರದಾರರು ಅಮೃತಸರದಿಂದ ಉತ್ತರದ ಗುಡ್ಡಗಾಡು ಪ್ರದೇಶಗಳನ್ನು ಆಳತೊಡಗಿದರು. ಚರತ್‌ಸಿಂಗ್ ಸುಕರ್‌ಚಕೀಯಾ ಸರದಾರರು ಚಿನಾಬ್ ಮತ್ತು ರಾವಿ ನದಿಗಳ ಮಧ್ಯದ ಪ್ರದೇಶಗಳನ್ನು ತಮ್ಮ ವಶದಲ್ಲಿ ಹಿಡಿದುಕೊಂಡು ಆಳತೊಡಗಿದರೆ, ನಕ್ಕಾಯಿ ಸರದಾರರು ಲಾಹೋರ್ ನಗರದ ಪಶ್ಚಿಮ ಪ್ರದೇಶಗಳ ಮೇಲೆ ತಮ್ಮ ಸ್ವಾಮಿತ್ವ ಪಡೆದುಕೊಂಡರೆ, ಫೈಜಲ್‌ಪೂರಿಯಾ ಸರದಾರರು ಬಿಯಾಸ್ ನದಿಯ ಬಲದಂಡೆ ಮತ್ತು ಸಟ್‌ಲೆಜ್ ನದಿಯ ಮಧ್ಯಪ್ರದೇಶವನ್ನು ಆಳತೊಡಗಿದರು. ಅಹ್ಲೂವಾಲಿಯಾ ಸರದಾರರು ಬಿಯಾಸ್ ನದಿಯ ಎಡದಂಡೆಯ ಪ್ರದೇಶವನ್ನು ಆಳತೊಡಗಿದರೆ, ದಲ್ಲೇವಾಲಿಯಾ ಸರದಾರರು ಸಟ್‌ಲೆಜ್ ನದಿಯ ಬಲಭಾಗದ ಮೇಲ್‌ದಂಡೆಯ ಪ್ರದೇಶವನ್ನು ತಮ್ಮ ಹತೋಟಿಯಲ್ಲಿರಿಸಿಕೊಂಡರು. ರಾಮ್‌ಘರಿಯಾಗಳು ಇದೇ ಪ್ರದೇಶದ ಗುಡ್ಡಗಾಡಿನ ಕಡೆ ತಮ್ಮ ಪ್ರಭುತ್ವ ಪಡೆದುಕೊಂಡರೆ, ಕರೋರ್–ಸಿಂಗಿಯಾಗಳು ಜಲಂಧರ್ ಪ್ರದೇಶಗಳನ್ನು ತಮ್ಮ ಹಿಡಿತದಲ್ಲಿರಿಸಿಕೊಂಡರು. ಫುಲ್‌ಕೀಯ ಸರದಾರರು ತಮ್ಮ ಹುಟ್ಟೂರುಗಳಾದ ಸುನಾಮ್ ಮತ್ತು ಭಾಟಿಂಡಾಗಳಲ್ಲಿ ತಳಯೂರಿದರೆ, ಸಹೀದ್ ಮತ್ತು ನಿಶಾನಿಯಾ ಸರದಾರಗಳು ಫಿರೋಜ್‌ಪುರದಿಂದ ಕರ್ನಾಲ್ ನಗರಗಳ ಮಧ್ಯೆ ಇರುವ ಸಮತಟ್ಟಾದ ಪ್ರದೇಶಗಳನ್ನು ತಮ್ಮ ಅಧಿಕಾರಕ್ಕೆ ಪಡೆದುಕೊಂಡರು.೧

ಈ ಇತಿಹಾಸಕಾರ ಮಿಸಾಲರ ಹೆಸರುಗಳನ್ನು ನೀಡಿರುತ್ತಾನೆ.

ಪ್ರತಿಯೊಂದು ಮಿಸಾಲ್, ತನ್ನ ಇಲಾಖೆಯಲ್ಲಿ ಸ್ವತಂತ್ರನಾಗಿ ರಾಜ್ಯಭಾರ ಮಾಡುತ್ತಿದ್ದ. ಪ್ರಜೆಗಳ ಕಷ್ಟಸುಖಗಳಲ್ಲಿ ಯಾವ ತರಹದ ತಾರತಮ್ಯ ತೋರಿಸದೆ, ಜಾತಿ ಮತ ಬೇಧಭಾವ ತೋರಿಸದೆ, ಸತ್ಯ, ಧರ್ಮ, ನಿಷ್ಠೆಗಳಿಂದ ರಾಜ್ಯಭಾರ

೧ P 62-66 History of Sikhs by Court

ಮಾಡುತ್ತಿದ್ದರೆಂದು ಇತಿಹಾಸಕಾರರ ಅಭಿಪ್ರಾಯವಿದೆ.೨

ಸಿಖ್ ಸರದಾರರ ಆಳ್ವಿಕೆಯನ್ನು ಹೊಗಳಿ ಹಾಡಿದ ಇಂಗ್ಲಿಷ್ ಯಾತ್ರಿಕನ ಉವಾಚವನ್ನು ದಾಖಲಿಸಿದ ಇತಿಹಾಸಕಾರರ ನುಡಿಗಳು ಹೀಗಿವೆ :

'One quality particularly raised the character of the Sikhs above all other Asiatics and that is their high veneration for the truth. Both as a people and as individuals, they may be considered as much less addicted to the low artifice of evasion, lying or dissimulation than any other race of Asiatics. Implicit dependence may be placed on their promise in all matters either of public or private concern. . . ." ೩

ಕಾನೂನು ಪಾಲನೆಗೆ ಮಹತ್ವ ನೀಡಿದ ಸಿಖ್ ಸರದಾರರು ಪಂಚಾಯತ್‌ನಲ್ಲಿ ಪ್ರಮುಖ ಪ್ರಸಿದ್ಧ ವ್ಯಕ್ತಿಗಳನ್ನು ನೇಮಿಸಿ, ನ್ಯಾಯನ್ಯಾಯಗಳ ವಿಮರ್ಶೆ, ಅಧಿಕಾರ, ಪಾಲನೆಗಳ ಕಾರ್ಯವನ್ನು ಅತ್ಯಂತ ಮುತುವರ್ಜಿಯಿಂದ ಮಾಡಿದರು.

ಕಳ್ಳತನ ಮಾಡುವವರನ್ನು ಹಿಡಿದು, ವಸ್ತುಗಳನ್ನು ವಶಪಡಿಸಿಕೊಳ್ಳುವ ಮತ್ತು ಅವನಿಂದ ಜುಲ್ಮಾನೆ ವಸೂಲಿ ಮಾಡಿಕೊಳ್ಳುವವರೆಗೆ ಸೆರೆಮನೆಗೆ ನೂಕುವ ಕಾನೂನು ಜಾರಿಗೆ ತಂದರು. ಆದರೆ ಕಳ್ಳನೇನಾದರೂ ತನ್ನ ಕಸುಬನ್ನು ತ್ಯಜಿಸದೆ ಅದನ್ನು ಮುಂದುವರೆಸಿ, ಸಿಕ್ಕಿಹಾಕಿಕೊಂಡರೆ, ಅವನ ಬಲಗೈಯನ್ನು ಕತ್ತರಿಸುವ ಕ್ರೂರ ನಿಯಮವನ್ನು ಜಾರಿಗೆ ತಂದದ್ದನ್ನು ಇತಿಹಾಸಕಾರರು ದಾಖಲಿಸಿರುತ್ತಾರೆ. ಆದರೆ ಕೊಲೆ, ಖೂನಿ ಮಾಡಿದ ವ್ಯಕ್ತಿಗೆ ಮರಣದಂಡನೆಯ ಶಿಕ್ಷೆ ನೀಡುವ ನಿಯಮವನ್ನು ಜಾರಿಗೆ ತರದೆ ಇರುವುದು ಒಂದು ವಿಶೇಷವಾಗಿತ್ತು. ಜಾತಿ ಮತ ಆಧಾರವಿಲ್ಲದೆ, ಜಿಲ್ಲಾ ಅಥವಾ ನಗರ ಪ್ರದೇಶಗಳಲ್ಲಿ 'ಅದಾಲತ್'ಗಳನ್ನು ಪ್ರಾರಂಭಿಸಿ, ಅದರ ಮುಖ್ಯಸ್ಥರನ್ನಾಗಿ ಸಿಖ್‌ರನ್ನಲ್ಲದೆ ಇತರ ಧಾರ್ಮಿಕ ಜನಾಂಗದವರನ್ನು ನೇಮಿಸಿ ಕಾನೂನು ಕಟ್ಟಳೆಗಳ ಪಾಲನೆಯ ಮತ್ತು ನಿರ್ವಹಣೆಯ ಕಾರ್ಯ ಮಾಡಿಸುತ್ತಿದ್ದರು.

ಲಂಚಕೋರ ನ್ಯಾಯಾಧೀಶರ ಮೇಲೆ ಹಿಡಿತ ಇರಿಸಿಕೊಳ್ಳಲು, ಅವರು ನಿವೃತ್ತರಾದಾಗ, ಅವರ ಗಳಿಸಿದ ಆಸ್ತಿಯ ಕೆಲವು ಭಾಗಾಂಶಗಳನ್ನು ಸರಕಾರ ವಶಪಡಿಸಿಕೊಳ್ಳುವ ನಿಯಮ ಜಾರಿಗೆ ತಂದರು.

ಕೃಶಿ ಉದ್ಯಮಕ್ಕೆ ಒತ್ತು ನೀಡಿದ ಮಿಸಾಲ್‌ರು ರೈತರ ಮೇಲೆ ಕರ ವಸೂಲಿಯ ಹೊರೆಯನ್ನು ಕಡಿಮೆ ಮಾಡಿ, ಅವರು ಬೆಳೆದ ಉತ್ಪನ್ನಗಳನ್ನು ಭಾಗಶಃ ಜಮೀನ್‌ದಾರ್‌ಗೆ

---

೨. P 418 History of Sikhs by G. Singh
೩. P 421 History of Sikhs by G. Singh

ನೀಡಿ, ಅವರಿಂದ ಕರ ಸಂದಾಯಮಾಡಿಕೊಳ್ಳುವ ಕಟ್ಟಳೆ ಜಾರಿಗೆ ತಂದರು.

ವ್ಯಾಪಾರೋದ್ಯಮಕ್ಕೆ ಉತ್ತೇಜನ ನೀಡಿ, ಅಮೃತಸರ ಒಂದು ಉತ್ತಮ ಹಾಗೂ ವಾಣಿಜ್ಯ ನಗರವನ್ನಾಗಿ ಬೆಳೆಯಲು ಎಲ್ಲಾ ವಿಧವಾದ ಸೌಕರ್ಯ ನೀಡಿದರು ಮಿಸಾಲ್‌ರು.

೧೮೮೧ ರ ಸೆನ್‌ಸೆಸ್ ಪ್ರಕಟಣೆಯಲ್ಲಿ ಸಿಖ್‌ರ ಬಗ್ಗೆ ಈ ರೀತಿ ದಾಖಲಾಗಿದ್ದನ್ನು ಇತಿಹಾಸಕಾರರು ಬರೆದಿದ್ದಾರೆ.

"The Sikhs were considered 'the finest peasantry of India'. . . . .'The Sikh is more independent, more brave, more manly than the Hindu, and no whit less industrious and thrifty, which he is less conceited than the Musalman, and not devoured by that carking discontent which so often seems to oppress the latter"4

ಸಿಖ್ ಮಿಸಾಲ್‌ರು, ಆಫ್ಘನ್ ಮತ್ತು ಮೊಘಲ್‌ರ ವಿರುದ್ಧ ಸತತವಾಗಿ ಹೋರಾಡಿ, ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಳ್ಳಲು ಹೆಣಗಿ, ತಮ್ಮ ಖಡ್ಗಗಳ ಮೇಲೆ ಪ್ರೀತಿ, ಆಸಕ್ತಿ ಮತ್ತು ಭರವಸೆ ಇರಿಸಿಕೊಂಡು, ಗುರುನಾನಕ್‌ನ ಧರ್ಮವನ್ನು ಪಾಲಿಸಲು ನಿಷ್ಠೆ ಇರಿಸಿಕೊಳ್ಳಲಿಲ್ಲ ಎಂದರು ಇತಿಹಾಸಕಾರರು.

'. . .the Misl/sardars clashed among themselves. During this period of about a century of Sikh ascendency 1765-1849, the Sikh "Rahat Maryada' suffered severe setbacks. Although, a strong Sikh political regime had come into being, it remained a barren period so far as Gurmat preaching or improvement in religious services in Gurudvaras was concerned. This can better be called the sword weilding era of the Sikhs. (P 6 - Jethedar Bhai Kartar Singh, Jhabbar by Bhai Narain Singh)

'The Misals then had fulfilled their function. They had served to enable the Sikhs to act together for the common advantage; yet they had been so for independent of each other that the temporary ruin of one did not mean the ruin of the

4. P 24 History of Sikhs by G. Singh

whole body; and a process went on by whole each sirdar or baron to return to the feudal illustration, endeavoured to acquire direct Lordship, or at any rate, recognised Leadership, over a gradually extending area within the Sikh dominion.'

(P 19 The Sikhs and the Sikh wars by Sir Charles Gough)

೧೨ ಸಿಖ್ ಮಿಸಾಲ್ದಾರರು ತಮ್ಮ ತಮ್ಮ ಪ್ರದೇಶಗಳಲ್ಲಿ ಆಳ್ವಿಕೆಯನ್ನು ಸ್ಥಾಪಿಸಿ ಆಡಳಿತ ಜರುಗಿಸಿದರೂ, ಅವರಲ್ಲಿ ಪರಸ್ಪರ ಒಮ್ಮತ, ಸಹಕಾರ, ಐಕ್ಯತೆ ಕಾಣಬರದಿರುವುದು ದೌರ್ಭಾಗ್ಯವಾಗಿತ್ತು. ಅನೈಕ್ಯತೆಯ ವ್ಯಾಧಿ ಅವರನ್ನು ಅಂಟಿತ್ತು. ಅವರ ಮಧ್ಯೆ ಬಿರುಕು ಬಿಟ್ಟು ಅದು ದೊಡ್ಡದಾದ ಹಾಗೆ, ಪರಸ್ಪರ ಕಲಹ, ಜಗಳ, ಕದನ, ಯುದ್ಧಗಳು ಜರುಗಿ, ರಕ್ತ ಚೆಲ್ಲಿ ನಿರ್ಮಿಸಿದ ಅವರ ರಾಜ್ಯಗಳು ನಿರ್ನಾಮವಾಗುವ ಹಂತ ತಲುಪಿದವು. ಪರಕೀಯರ ಹಾವಳಿ, ಅವರು ಎಸಗಿದ ಆಕ್ರಮಣ ಮತ್ತು ಮೊಘಲ್ ಬಾದ್‌ಶಹಾ ಮತ್ತು ಅವನ ಸಾಮಂತರು ಎಸಗಿದ ಕ್ರೂರ ಆಡಳಿತದ ವಿರುದ್ಧ ಹೋರಾಡಿ ಪ್ರತ್ಯೇಕ ರಾಜ್ಯಗಳನ್ನು ಸ್ಥಾಪಿಸಿದ ಸಿಖ್‌ರು, ಶಾಂತಿ ಪರಿಸ್ಥಿತಿಗೆ ಹೊಂದಿಕೊಳ್ಳಲಾರದೆ, ಕ್ಷುಲ್ಲಕ ಕಾರಣಗಳಿಗೆ, ರಾಗ, ದ್ವೇಷ, ಈರ್ಷೆಗಳಿಗೆ ತುತ್ತಾಗಿ ಪರಸ್ಪರ ಹೊಡೆದಾಡಲಿಕ್ಕೆ ಇಳಿದರು. ಸಿಖ್ ಒಗ್ಗಟ್ಟಿಗೆ ಪ್ರಜಾಪ್ರಭುತ್ವದ ಮಾದರಿಯಲ್ಲಿ ಒಬ್ಬ ಪ್ರತಿಭಾವಂತ, ನುರಿತ, ವಿವೇಕವುಳ್ಳ ನಾಯಕನ ಉದಯವಾಗದಿದ್ದುದು ದುರಾದೃಷ್ಟಕರವಾಗಿತ್ತು ಎಂದರು ಇತಿಹಾಸಕಾರರು.೫

ಅಮೆರಿಕಾದಲ್ಲಿ, ಬ್ರಿಟಿಷ್‌ರಿಂದ ಸ್ವಾತಂತ್ರ್ಯ ಪಡೆದುಕೊಂಡ ಸಮಯದಲ್ಲಿ, ಮಹಾನ್ ವೀರ ಮತ್ತು ಪ್ರಜಾಪ್ರಭುತ್ವವಾದಿ ಜಾರ್ಜ್ ವಾಶಿಂಗ್ಟನ್‌ನ ತರಹ ಸಿಖ್‌ರಲ್ಲಿ ನ್ಯಾಯ, ಸ್ವಾತಂತ್ರ್ಯ ಮತ್ತು ಸ್ವದೇಶಾಭಿಮಾನದ ಬಗ್ಗೆ ಪ್ರೇಮ, ಭಕ್ತಿ, ಉತ್ಕಟ ಮಹದಾಸೆ ಇರಿಸಿಕೊಂಡ ಒಬ್ಬ ನಾಯಕನ ಉದಯವಾಗದೇ ಇದ್ದುದು ಮತ್ತಷ್ಟು ದುರ್ದೈವದ ಸಂಗತಿಯಾಗಿತ್ತು.

'How is it, he asked himself, that these men and women accept this state of degradation, these in human conditions? How is it that they have not revolted before this? And with a shock he (Leon. . . .) discovered that the answer was that the proletariat had come to accept this situation as something inevitable, as a natural inescapable fate. . .'೬

೫. P 428 History of Sikhs by G. Singh
೬. P 191 Days of our years by Pearre van Passen

೨೦ನೆಯ ಶತಮಾನದ, ಪ್ಯಾರಿಸ್ ನಗರದ ಕೊಳಚೆ ಪ್ರದೇಶದಲ್ಲಿ ದರಿದ್ರಾವಸ್ಥೆಯಲ್ಲಿ ವಾಸಿಸುತ್ತಿದ್ದ ನಾಗರೀಕರನ್ನು ಕಂಡು, ಕನಿಕರಿಸಿದ ಲಿಯೋನ್ ಬ್ಲಮ್ ಮಹಾಶಯ, ಅವರ ಆ ಸ್ಥಿತಿಗೆ ಅವರು ಹೊಂದಿದ್ದ ಹತಾಶಾ ಮನೋಭಾವ ಮತ್ತು ಅದೃಷ್ಟಗಳ ಮೇಲೆ ಇರುವ ನಂಬಿಕೆಗಳೇ ಕಾರಣ ಎಂದು ಸಾರಿದ.

ಭಾರತೀಯರು ತಮ್ಮ ಸ್ವಾತಂತ್ರ್ಯ ಕಳೆದುಕೊಂಡು, ಪರಕೀಯರ ಆಳ್ವಿಕೆಗೆ ತಲೆಬಾಗಿ ಶತಮಾನಗಳ ಗುಲಾಮಗಿರಿಗೆ ತಮ್ಮನ್ನು ಒಗ್ಗಿಸಿಕೊಂಡಿದ್ದು ಇದೆ ಹತಾಶಾ ಮನೋಭಾವ ಮತ್ತು ಅದೃಷ್ಟದಾಟಗಳ ಮೇಲೆ ಇರುವ ನಂಬಿಕೆಯಾಗಿದೆಯಷ್ಟೆ.

ಸಿಖ್ ಸರದಾರರಾಗಲೀ, ರಾಜ ಮಹಾರಾಜರಾಗಲೀ ನವಾಬ ಬಾದ್‌ಶಹಾರಾಗಲೀ, ತಮ್ಮ ರಾಜ್ಯ, ದೇಶದ ಬಗ್ಗೆ ಅಭಿಮಾನವಿರಿಸಿ, ತಮ್ಮ ಸ್ವಾತಂತ್ರ್ಯ ಕಾಪಾಡಿಕೊಳ್ಳಬೇಕೆಂಬ ಅತೀವ ಹಂಬಲವಿರದಿದ್ದುದು ಒಂದು ದುರಂತವಾಗಿತ್ತು. ದೇಶಾಭಿಮಾನ, ತಾವು ಸ್ವತಂತ್ರರಾಗಿ ಬಾಳಿ ಬದುಕಬೇಕೆಂಬ ಉತ್ಕಟವಾದ ಹಂಬಲ ಭಾರತೀಯರ ಯಾವುದೇ ಜನಾಂಗದಲ್ಲಿರದಿದ್ದುದು ಅತ್ಯಂತ ಶೋಚನೀಯವಾಗಿತ್ತು. ಒಂದೇ ಕುಲ, ಒಂದೇ ಭಾಷೆ, ಒಂದೇ ಸಂಸ್ಕೃತಿ ಹೊಂದಿದ್ದರೂ, ತಮ್ಮನ್ನು ತಾವೇ ಆಳಿಕೊಳ್ಳಬೇಕೆಂಬ ಉತ್ಕಟ ಬಯಕೆ, ತಮ್ಮನ್ನು ತಾವೇ ಆಳಿಕೊಳ್ಳಬೇಕೆಂಬ ಉತ್ತಮ ಬಯಕೆ, ತಮ್ಮನ್ನು ಆಳುತ್ತಿರುವವರು ತಮ್ಮ ಅಭಿಲಾಷೆ, ಆಸೆ, ಆಕಾಂಕ್ಷೆ ಎಲ್ಲದಕ್ಕಿಂತಲೂ ಮಿಗಿಲಾಗಿ ತಮ್ಮ ಸಲಹೆ ಪಡೆಯದೆ ತಮ್ಮ ಮೇಲೆ ಆಳುವ ಹಕ್ಕನ್ನು ಚಲಾಯಿಸುವ ತಮ್ಮದೇ ಸರಕಾರದ ವಿರುದ್ಧ ಸಮರ ಜರುಗಿಸಿ, ಅಪಾರವಾದ ರಕ್ತ ಹರಿಸಿ, ತಮ್ಮ ಸ್ವಾಂತತ್ರ್ಯ ಪಡೆದುಕೊಂಡ ಅಮೆರಿಕನ್ನರ ಸ್ವಾತಂತ್ರ್ಯ ಇತಿಹಾಸ ಅಪೂರ್ವವಾಗಿದೆ.

'. . .Men whose minds were warmed with the love of liberty, and whose abilities were improved by daily exercise, and sharpened with a laudble ambition to serve their distressed country, spoke, wrote and acted with an energy far surpassing all expectations which could be reasonably founded on their previous acquirements '. . . .A continental Army and a Congress composed of men from all the states by freely mixing together were assimilated into one mass. Individuals of both, mingling with the citizens, disseminated principles of union among men. Local prejudices abated. By frequent collision asperations were worn off, and a foundation was laid for the establishment of a nation out of discondant materials. . .'

'. . . .A wiser policy prevailed. Men of liberal minds led the way in discouraging local distinctions, and the great body of the people as soon as reason got the better of prejudice, found that their best interests would be most effectually promoted by such practices and sentiments as were favourable to union'

'. . .The right of the people to resist their rulers, when invading their liberties, forms the corner stone of the American republics. This principle though just in itself, is not favourable to the tranquality of present establishment. . . .'

(P 1292 - 93 The Spirit of Seventy Six - Ramsay - History of the Revolution II - 315)

ಸಿಖ್ ಮಿಸಾಲ್‌ದಾರರು ಯಾವ ನ್ಯಾಯ ಸ್ವಾತಂತ್ರಾಭಿಲಾಶೆ, ಸ್ವದೇಶಾಭಿಮಾನಗಳ ಧ್ಯೇಯನಿಷ್ಠೆ ಇರಿಸಿಕೊಳ್ಳದೆ, ಉಚ್ಚಮಟ್ಟದ ತಾತ್ವಿಕತೆ ಮತ್ತು ಪ್ರಜ್ಞೆಗಳನ್ನು ಹೊಂದಿದೆ, ಕೇವಲ ವೈಯಕ್ತಿಕ ಅಕಾಂಕ್ಷೆ ಅಹಂಕಾರ, ದರ್ಪ, ಮೂಢನಂಬಿಕೆಗಳಿಗೆ ಜೋತುಬಿದ್ದು, ಸಾಮೂಹಿಕವಾಗಿ, ತಮ್ಮ ಪ್ರದೇಶಗಳ ಜನತಾ ಸಮುದಾಯವನ್ನು ಸಂಘಟಿಸಿ, ಅವರನ್ನು ಶಾಶ್ವತವಾಗಿ ಪರಕೀಯ ಆಕ್ರಮಣ ಮತ್ತು ಆಳುತ್ತಿರುವ ಕ್ರೂರ ಸಾಮ್ರಾಜ್ಯಶಾಹಿ ಮೊಘಲ್‌ರ ವಿರುದ್ಧದ ಪ್ರಜ್ಞೆಯ ಬೆಳವಣಿಗೆಗೆ ಯಾವ ಪ್ರಯತ್ನ ಮಾಡದಿರುವುದು ಅತ್ಯಂತ ಶೋಚನೀಯವಾಗಿತ್ತು.೭

'. . .the link of a common enemy and common danger was removed and the chiefs were converted from needy adventurers to lords of domain, and mutual plunderings commenced. . . .' (P 17 The country of the Sikhs by stein backs)

ನಿಸ್ವಾರ್ಥತೆ, ಜನತೆಯ ಸುಖ, ಸ್ವಾತಂತ್ರ್ಯದ ಕಿಚ್ಚು ಭವಿಷ್ಯದ ಬಗ್ಗೆ ಅಪಾರ ನಂಬಿಕೆ, ದೂರದೃಷ್ಟಿ, ಪ್ರೇಮ ಮತ್ತು ಮನಸ್ಸು ಬಿರಿಯುವ ಹುಮ್ಮಸ್ಸುಳ್ಳ ನೇತಾರ ಸಿಖ್‌ರಲ್ಲಿ ಉದಯನಾಗದಿದ್ದುದು ಒಂದು ದುರಂತ ಐತಿಹಾಸಿಕ ಸಂಗತಿಯಾಗಿ ಉಳಿಯಿತು.೮

ಗುರು ಗೋಬಿಂದ್‌ಸಿಂಗ್‌ರ ಉದಾತ್ ಭಾವನೆ ಮತ್ತು ಅವರು ಕೈಗೊಂಡ ನಿಸ್ವಾರ್ಥಕ್ಕೆ ತ್ಯಾಗ ಮತ್ತು ಅವರು ಪ್ರತಿಪಾದಿಸಿದ ನ್ಯಾಯ ನಿಷ್ಠೆ, ಐಕ್ಯತೆ,

---

೮. P 191 Days of our years

ಸಮತಾವಾದ ಎಲ್ಲವನ್ನೂ ಕಡೆಗಣಿಸಿದರು. ಸಿಖ್ ಮಿಸಾಲ್‌ರು, ಕೇವಲ ಸ್ವಾರ್ಥತೆ, ಆತ್ಮಪ್ರತಿಷ್ಠೆ, ಆತ್ಮವಂಚನೆ ಮತ್ತು ದುರಹಂಕಾರಗಳಿಂದ ಅವರು ತಮ್ಮ ಜೀವನ ಸಾಗಿಸುವುದಷ್ಟೇ ಅಲ್ಲೇ ತಮ್ಮ ಮತಬಾಂಧವರ ವಿರುದ್ಧ ಸಮರ ಸಾಗಿಸಿದರು.

ಇತ್ತ ಭಾರತೀಯರು ತಮ್ಮ ಸ್ವಾತಂತ್ರ್ಯವನ್ನು ಹಂತಹಂತವಾಗಿ ಕಳೆದುಕೊಂಡು ಬ್ರಿಟಿಷ್‌ರ ಆಳ್ವಿಕೆಗೆ ತಲೆಬಾಗುತ್ತಾ ಇರುವ ಸಮಯದಲ್ಲೇ ಅತ್ತ ೧೭೭೩ರಲ್ಲಿ, ಉತ್ತರ ಅಮೆರಿಕಾದ ಬ್ರಿಟಿಷ್ ವಸಾಹತು ಪ್ರದೇಶದಲ್ಲಿ, ಇಂಗ್ಲಿಷ್ ಭಾಷೆ ಮಾತನಾಡುವ, ಸ್ವಧರ್ಮಿಯರೇ ಆದ, ಬ್ರಿಟಿಷ್ ನಾಗರೀಕರಿಂದಲೇ ಆಳುತ್ತಿದ್ದ ಬ್ರಿಟಿಷ್‌ರ ವಿರುದ್ಧ ಸ್ವಾತಂತ್ರ್ಯದ ಕಹಳೆ ಊದಿದ್ದು ಪ್ರಪಂಚದ ಇತಿಹಾಸದಲ್ಲಿ ಜರುಗಿದ ಒಂದು ವಿಪರ್ಯಾಸದ ಘಟನೆಯಾಗಿದೆ. ಅಮೆರಿಕಾದ ಇಂಗ್ಲಿಷ್ ಸಂಜಾತರಿಗೆ, ಭಾರತದಿಂದ ಆಮದು ಮಾಡಿಕೊಳ್ಳುತ್ತಿದ್ದ ಚಾ ಮೇಲೆ ಸುಂಕ ಹೇರಿತು ಬ್ರಿಟಿಷ್ ಸರಕಾರ. ಆದರೆ ಅದೇ ಚಾ ಮೇಲೆ ಈಸ್ಟ್ ಇಂಡಿಯಾ ಕಂಪನಿಗೆ ಸುಂಕದ ಮೊತ್ತ ಕಡಿಮೆ ಮಾಡಿ, ಭಾರತದಿಂದ ಅಮೇರಿಕಾಕ್ಕೆ ರಫ್ತು ಮಾಡಲು ಅನುವು ಮಾಡಿದರೂ, ಅಮೇರಿಕಾದ ಜನರಿಗೆ ಅದರ ಮೇಲೆ ಕರ ಹೇರಿತು. ಇದರಿಂದ ರೊಚ್ಚಿಗೆದ್ದ ಅಮೇರಿಕಾದ ಬಾಸ್ಟನ್ ನಗರದ ನಾಗರೀಕರು ಬಂದರಿನಲ್ಲಿ ಲಂಗರು ಹಾಕಿದ್ದ ಹಡುಗಿನ ಮೇಲೆ ದಾಳಿ ನಡೆಸಿ, ಅದರೊಳಗಿದ್ದ ೩೪೩ ಚಾ ಪೆಟ್ಟಿಗೆಗಳನ್ನು ಸಮುದ್ರಕ್ಕೆ ಎಸೆದರು.

ಅದೇ ನಾಂದಿಯಾಯಿತು ಅಮೇರಿಕಾದ ಸ್ವತಂತ್ರ ಸಂಗ್ರಾಮದ ಉಗಮಕ್ಕೆ !

೧೭೭೪ರಲ್ಲಿ, ಪ್ರಸಿದ್ಧ ಚರತ್‌ಸಿಂಗ್ ಸಕರ್‌ಚಕೀಯ್ಯಾ ಮತ್ತು ಜೈಸಿಂಗ್ ಕನ್ಹೈಯಾ ಜಮ್ಮು ಸರದಾರ ಜ್ಹಂಡಾ ಸಿಂಗ್ ಭಂಗೀಯ ವಿರುದ್ಧ ಸಮರ ಸಾಗಿಸಿದರು. ಭಂಗೀ ತಂದೆ ಮತ್ತು ಮಗ ಜಮ್ಮು ರಾಜ್ಯದ ಪ್ರಭುತ್ವದ ಬಗ್ಗೆ ಉಂಟಾದ ಜಗಳದಲ್ಲಿ ಮಧ್ಯೆ ಈರ್ವರು ಪ್ರವೇಶಿಸಿ ಹೋರಾಟ ನಡೆಸಿದರು. ಅಕಸ್ಮಾತ್ತಾಗಿ, ಚರತ್‌ಸಿಂಗ್ ತನ್ನ ಬಂದೂಕಿನಿಂದಲೇ ಹತನಾದರಿಂದ, ಅವನ ಎಳೇ ಮಗ ಮಹಾನ್ ಸಿಂಗ್ ಪ್ರಬಲ ಭಂಗೀ ಸರದಾರನು ವಿರುದ್ಧ ಸಮರ ಸಾಗಿಸಲಾಗಲಿಲ್ಲ. ಆದರೆ ಮಿತ್ರಪಕ್ಷದ ಸರದಾರರು, ಭಂಗೀಯನ್ನು ಸಮರದಲ್ಲಿ ಎದುರಿಸಿ ಸೋಲಿಸಲಾಗದೆ, ಅವರನ್ನು ಕುತಂತ್ರದಿಂದ ಹತ ಮಾಡುವಲ್ಲಿ ಯಶಸ್ವಿಯಾದರು. ಮಿತ್ರಪಕ್ಷದ ಸರದಾರರು ಭಂಗೀಯ ಮಗನಾದ ಬ್ರಿಜ್‌ರಾಜ್‌ದೇವನನ್ನು ಜಮ್ಮುವಿನ ರಾಜನನ್ನಾಗಿ ಮಾಡಿದರು.

ಕೊಲೆಯಾದ ಜ್ಹಂಡಾ ಸಿಂಗ್‌ನ ಭಂಗೀಯ ಸಹೋದರ ಗಂಡಾ ಸಿಂಗ್, ಲಾಹೋರ್ ಮತ್ತು ಅಮೃತಸರ ನಗರಪ್ರದೇಶಗಳ ಮೇಲಿದ್ದ ತಮ್ಮ ಅಧಿಕಾರವನ್ನು ತನ್ನ ವಶಕ್ಕೆ ಪಡೆದುಕೊಂಡು, ತನ್ನ ಸಹೋದರನ ಕೊಲೆಗೆ ಪ್ರತೀಕಾರ ಕೈಗೊಳ್ಳಲು ಜೈ ಸಿಂಗ್ ಕನ್ಹೈಯಾನ ಮೇಲೆ ಯುದ್ಧ ಸಾರಿದ. ಜಾಟ್ ಸಮುದಾಯದಲ್ಲಿದ್ದ ಪದ್ಧತಿಯ ಪ್ರಕಾರ, ಒಬ್ಬ ಜಾಟ್ ಸಿಖ್ ಯುದ್ಧದಲ್ಲಿ ಮರಣ ಹೊಂದಿದರೆ, ಅವನ

ವಿಧವಾ ಪತ್ನಿಯನ್ನು ಅವನ ಸಹೋದರನೇ ಲಗ್ನವಾಗಿ, ಸಹೋದರನ ಆಸ್ತಿ, ಸಂಪತ್ತು, ಪದವಿ ಅವನ ಕುಟುಂಬದಲ್ಲೇ ಉಳಿಯುವಂತಾಗುತ್ತಿತ್ತು. ಆದರೆ, ಝಂಡಾ ಸಿಂಗ್‌ನ ಎಳೆ ಪತ್ನಿ ಗಂಡನ ಸಹೋದರನನ್ನು ಲಗ್ನವಾಗದೆ, ತಂದೆಯ ಪ್ರೇರಣೆಯಿಂದ ಜೈ ಸಿಂಗ್ ಕನ್ಹೈಯಾನನ್ನು ಲಗ್ನವಾಗಲು ಸಮ್ಮತಿಸಿದಳು. ವಿಷಯ ಅರಿತ ಗಂಡಾಸಿಂಗ್ ಕೆರಳಿದ. ಜೈಸಿಂಗನ ಮೇಲೆ ಯುದ್ಧ ಸಾರಿದ. ಜೈ ಸಿಂಗ್ ಮಾತ್ರ ಆಕೆಯನ್ನು ಲಗ್ನವಾಗದೆ, ತನ್ನ ಸಂಬಂಧಿ ತಾರಾ ಸಿಂಗ್ ಎಂಬಾತನಿಗೆ ಲಗ್ನವಾಗುವಂತೆ ಹೇಳಿ ಅವನನ್ನು ಒಪ್ಪಿಸಿದ. ತಾರಾಸಿಂಗ್ ಒಬ್ಬ ಕುಟಿಲ ವ್ಯಕ್ತಿಯಾಗಿದ್ದ. ಆತ ವಿಧವೆಯನ್ನು ಲಗ್ನವಾಗಿ, ಆಕೆಯ ಆಸ್ತಿಗೋಸ್ಕರ ಅವಳನ್ನು ಮತ್ತು ಆಕೆಯ ಮಗಳನ್ನು ಕೊಂದು ಹಾಕಿದ !

ಗಂಡಾ ಸಿಂಗ್ ಕೊಲೆ ಮಾಡಿದ ತಾರಾಸಿಂಗ್‌ನಿಂದ ಆಸ್ತಿ ಹಿಂದೆ ಪಡೆಯಲು ಯತ್ನಿಸಿದ. ಆದರೆ ತಾರಾ ಸಿಂಗ್ ಅವನ ಆದೇಶ, ಯುತ್ನಗಳನ್ನು ತಿರಸ್ಕರಿಸಿದ. ಗಂಡಾ ಸಿಂಗ್ ಅಮೃತಸರಕ್ಕೆ ಧಾವಿಸಿ, ಅಲ್ಲಿನ ಪ್ರಮುಖ ಸರದಾರ ಜಸ್ಸಾ ಸಿಂಗ್ ರಾಮ್‌ಘರಿಯಾನನ್ನು ಭೇಟಿ ಮಾಡಿ ತನ್ನ ಅಹವಾಲನ್ನು ಹೇಳಿದ. ಜಸ್ಸಾ ಸಿಂಗ್ ಕನ್ಹೈಯಾ, ಸುಕರ್‌ಚರಿಯಾ ಮತ್ತು ಅಹ್ಲೂವಾಲಿಯಾ ಸರದಾರರ ವಿರುದ್ಧ ಮಿತ್ರಪಡೆ ಸಿದ್ಧವಾಗಿ, ಸಮರ ಹೂಡಿತು. ದೀನಾನಗರ ಎಂಬ ಸ್ಥಳದಲ್ಲಿ ಯುದ್ದ ಜರುಗಿತು. ಆದರೆ, ಭಂಗೀ ಸರದಾರ್ ಗಂಡಾ ಸಿಂಗ್ ಕಾಯಿಲೆಯಿಂದ ನರಳಿ ಯುದ್ಧರಂಗದಲ್ಲಿ ಸಾವನ್ನಪ್ಪಿದನು. ಅವನ ಅಕಾಲಿಕ ಮರಣದಿಂದ ಭಂಗೀ ನೇತೃತ್ವದ ಸರದಾರರು ಹಿಮ್ಮೆಟ್ಟಿ, ಅಮೃತಸರಕ್ಕೆ ಹಿಂದಿರುಗಬೇಕಾಯಿತು.

ಸಿಖ್ ಮಿಸಾಲ್‌ರ ಅಂತಃಕಲಹದಲ್ಲಿ ಪ್ರಮುಖ ಪಾತ್ರ ವಹಿಸಿದವರಲ್ಲಿ, ರಾಮಘರೀಯಾರರು, ಕನ್ಹೈಯಾರರು, ಸುಕರಚಕೀಯಾರರು, ಕ್ರಮೇಣ ಪರಸ್ಪರ ಹೊಡೆದಾಡಿ, ನಾಶದ ಅಂಚಿಗೆ ತಲುಪಿದಾಗ, ಸುಕರ್‌ಚಕಿಯರ ನಾಯಕ ಮಹಾನ್ ಸಿಂಗ್ ಪ್ರಧಾನ ನಾಯಕನಾಗಿ ಕಂಗೊಳಿಸಿದ. ಮಹಾನ್‌ಸಿಂಗ್ ಜಮ್ಮು ರಾಜನ ಮೇಲೆ ಯುದ್ಧ ಸಾರಿ, ವಿಜಯ ಗಳಿಸಿ, ಜಮ್ಮು ನಗರವನ್ನು ಆಕ್ರಮಿಸಿ ಸೂರೆಗೈದ. ಕ್ರಮೇಣ ಅವನು ಗುಡ್ಡಗಾಡು ಪ್ರದೇಶದ ಹಿಂದೂ ರಾಜರ ಸ್ನೇಹ ಪಡೆದು, ತನ್ನ ಕಡುವೈರಿ ಸರದಾರ್ ಜೈ ಸಿಂಗ್‌ನನ್ನು ಸೋಲಿಸಿ, ಅವನ ಒಬ್ಬನೇ ಮಗನ ಹತ್ಯೆ ಮಾಡಿದ. ಮಗನ ಸಾವಿನಿಂದ ಅತಿಯಾಗಿ ದುಃಖಿಸಿದ ವೃದ್ಧ ಸರದಾರ ಜೈ ಸಿಂಗ್.

ಭಂಗೀ ಸರದಾರರು ಪರಸ್ಪರ ಕಲಹ ಕದನಗಳಲ್ಲಿ ನಿರತರಾಗಿದ್ದಾಗ, ಸರದಾರನ ಮೂರು ಸಹೋದರರು ಕೂಡ ಆ ಕಲಹದಲ್ಲಿ ಭಾಗಿಯಾಗಿ, ಹಿರಿಯನನ್ನು ಕೊಂದು ಹಾಕಿದರು. ಮುದಿ ತಂದೆ ದುಃಖಪೀಡಿತನಾಗಿ ತನ್ನ ರಾಜ್ಯವನ್ನು ಎಳೆ ಮಗನಿಗೆ ನೀಡಿ ಲಾಹೋರ್ ನಗರದಲ್ಲಿ ಪ್ರಾಣತ್ಯಾಗ ಮಾಡಿದ. (೧೭೮೮)

ಸಿಖ್ಖರ ಭಂಗೀ ಸಹೋದರರಾದ ಸಾಹಿಬ್ ಸಿಂಗ್ ಮತ್ತು ಫತೇಸಿಂಗ್ ಪರಸ್ಪರ

ಕಾದಾಡಿ, ಅವರಲ್ಲಿ ಒಬ್ಬ ಸುಕರ್‌ಚಕಿಯಾದ ಸರದಾರ ಮಹಾನ್ ಸಿಂಗ್‌ನ ಮೊರೆ ಹೋಗಿ ಆತನ ಸಹಾಯ ಪಡೆದ. ೧೭೯೧ರಲ್ಲಿ ಜರುಗಿದ ಸಹೋದರರ ಅಂತರ್ಯುದ್ಧದಲ್ಲಿ ಮಹಾನ್ ಸಿಂಗ್ ಭಾಗಿಯಾಗಿ ಕಾದಾಡುತ್ತಿರುವಾಗಲೇ ಕಾಯಿಲೆ ಬಿದ್ದು ಮರಣವನ್ನಪ್ಪಿದ. ಅವನು ಮರಣಿಸಿದಾಗ ಅವನ ಮಗನ ವಯಸ್ಸು ಕೇವಲ ೧೨ ವರ್ಷ. ಆತನೇ ಇತಿಹಾಸ ಪ್ರಸಿದ್ಧ ರಣಜಿತ್ ಸಿಂಗ್.

ಅಧ್ಯಾಯ ೬

ರಣಜಿತ್ ಸಿಂಗ್ (೧೭೮೦-೧೮೩೯)

ಧೈರ್ಯವಿಲ್ಲದೆ ಧನವಿಲ್ಲ; ಶೌರ್ಯವಿಲ್ಲದೇ ಜಯವಿಲ್ಲ; ಜ್ಞಾನವಿಲ್ಲದೆ ಮೋಕ್ಷವಿಲ್ಲ; ದಾನವಿಲ್ಲದೆ ಯಶಸ್ಸಿಲ್ಲ.

– ಸಭಾರಂಜ

ನವೆಂಬರ್ ೨, ೧೭೮೦ ರಲ್ಲಿ, ಗುಜ್ರನ್‌ವಾಲಾ ಎಂಬ ನಗರದಲ್ಲಿ ಜನ್ಮ ತಳೆದ ರಣಜಿತ್ ಸಿಂಗ್, ಪ್ರಸಿದ್ಧ ಸುಕರ್‌ಚರಿಯಾ ಸಿಖ್ ಮಿಸಾಲದಾರ್ ಪಂಗಡಕ್ಕೆ ಸೇರಿದ್ದ ಮಹಾನ್ ಸಿಂಗ್‌ನ ಮಗನಾಗಿದ್ದ. ಅವನ ತಾಯಿ ಮಾಯಿ ಮುಲ್‌ವಾನ್‌ಳ ಆಳ್ವಿಕೆಯಲ್ಲಿ ಬೆಳೆದ. ಕೇವಲ ಹನ್ನೆರಡು ವರ್ಷ ವಯಸ್ಸಾಗಿದ್ದಾಗಲೇ ತಂದೆಯನ್ನು ಕಳೆದುಕೊಂಡ ರಣಜಿತ್ ಸಿಂಗ್‌ನನ್ನು ತಂದೆಯ ದಿವಾನನಾಗಿದ್ದ ಲಖ್‌ಪತ್ ರಾಯ್ ರಾಜ್ಯಭಾರ ನಡೆಸುವುದರಲ್ಲಿ ಶಿಕ್ಷಣ ನೀಡಿದ. ಹದಿಹರೆಯ ರಣಜಿತ್‌ಸಿಂಗ್‌ನಿಗೆ ಕನ್ಹೈಯಾ ಸಿಖ್ ಮಿಸಾಲ್‌ರ ಕನ್ಯೆಯನ್ನು ಕೊಟ್ಟು ಲಗ್ನ ಮಾಡಿದರು. ಎರಡನೆಯ ಲಗ್ನ ಸರದಾರ ಖಹಾನ್ ಸಿಂಗ್‌ನ ಮಗಳಾದ ಮಹ್ತಾಬ್ ಕೌರ್‌ಳೊಂದಿಗೆ ಅವನ ೧೬ನೆಯ ವಯಸ್ಸಿನಲ್ಲೇ ಮಾಡಿ ಮುಗಿಸಿದರು ಹಿರಿಯರು. ಸ್ವಲ್ಪಮಟ್ಟಿಗೆ ಆ ಎರಡು ಸಿಖ್ ಮಿಸಾಲ್‌ರ ಮಧ್ಯ ಇದ್ದ ಮನಸ್ತಾಪ ಈ ಲಗ್ನಗಳಿಂದ ಕಡಿಮೆಯಾಗಿ ಒಂದು ವಿಧವಾದ ಐಕ್ಯತೆ ಮಾರ್ಪಾಡಾಗಿತ್ತು ಎನ್ನಬಹುದಾಗಿದೆ.

ರಣಜಿತ್ ಸಿಂಗ್ ತನ್ನ ಮಿಸಾಲ್ ಸಿಖ್ ಪಂಗಡದ ಅಧಿಕಾರ ವಹಿಸಿಕೊಂಡಾಗ, ಭಾರತದ ರಾಜಕೀಯ ಪರಿಸ್ಥಿತಿಯಲ್ಲಿ ಮಹತ್ತರ ಬದಲಾವಣೆಗಳಾಗಿದ್ದವು. ಈಗಾಗಲೇ ಪರಕೀಯ ಬ್ರಿಟಿಷ್‌ರು ಭಾರತದ ಬಹುತೇಕ ಪ್ರಾಂತ್ಯಗಳಲ್ಲಿ ಕುಟಿಲತೆ, ಯುಕ್ತಿ, ಲಂಚ, ಇತ್ಯಾದಿಗಳಿಂದ ರಾಜ, ಮಹಾರಾಜ ನವಾಬ ಬಾದಶಹಾರನ್ನು ತಮ್ಮ ಹಿಡಿತದಲ್ಲಿರಿಸಿಕೊಳ್ಳುವುದರಲ್ಲಿ ಯಶಸ್ಸು ಪಡೆದಿದ್ದರು. ಪಂಜಾಬ್ ಮತ್ತು ಆಫ್ಘಾನಿಸ್ತಾನ ಮತ್ತು ಇತರ ಗಡಿ ಪ್ರದೇಶಗಳ ಮೇಲೆ ತಮ್ಮ ಹತೋಟಿ ಇರಿಸಿಕೊಳ್ಳಲು ಸಮಯ ಸಾಧಿಸಿ ಕಾದು ಕುಳಿತಿದ್ದರು.

As the English traders had come to Bengal avowedly with the sole purpose of making money, many of them set sail again for Europe as soon as they had made enough. In the meantime, finding themselves entirely without restraint or responsibility, uncontrolled either by public opinion or legal

liabilities (for there was no law in the land), they naturally behaved as in such circumstances, with such temptation, men would behave in any age or country. Some of them lost all sense of honour, justice, and integrity; they plundered as Moghuls or Marathas had done before them, though in a more systematic and business-like fashion; the eager pursuit of wealth and its easy acquisition had blunted their consciences and produced general insubordination.

'In a country where money is plenty, where fear is the principle of government, and where your arms are ever victorious, it was no wonder that the lust of riches should readily embrace the proffered means of gratification,' or that corruption and extortion should prevail among men who were the uncontrolled depositaries of irresistible force. This universal demoralization necessarily affected the revenues, and exasperated the disputes between the company and Meer Jafir by increasing the financial embarrassments of both parties....'

(P 145 British Dominion in India by Lyall)

ಇದೇ ಸಮಯದಲ್ಲಿ ದೂರದ ಯೂರೋಪ್‌ನ ಫ್ರಾನ್ಸ್‌ನಲ್ಲಿ ಕ್ರಾಂತಿ ಜರುಗಿ, ರಕ್ತಪಾತವಾಗಿ, ರಾಜರಾಣಿಯರ ಹತ್ಯೆಯಾಗಿ, ಅಶಾಂತಿ ತಲೆದೋರಿ, ರಾಜ್ಯ ಅವ್ಯವಸ್ಥೆಯಿಂದ ಕೆಂಗೆಟ್ಟಿರುವಾಗ, ಫ್ರೆಂಚ್ ಸೈನ್ಯದಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ಕಾರ್ಸಿಕಾ ದ್ವೀಪದ ಇಟಾಲಿಯನ್ ಸಂಜಾತ ನೆಪೋಲಿಯನ್ ಬೋನಾಪಾರ್ಟ್, ರಾಜ್ಯಭಾರವನ್ನು ತನ್ನ ಕೈಗೆ ತೆಗೆದುಕೊಂಡು ರಾಜ್ಯದಲ್ಲಿ ಶಾಂತಿ ನೆಲೆಸುವಂತೆ ಮಾಡಿ, ಅವ್ಯವಸ್ಥೆಯಡಿಯಲ್ಲಿ ನಲುಗುತ್ತಿದ್ದ ದೇಶವನ್ನು ಸುಸ್ಥಿತಿಗೆ ತಂದು, ಬ್ರಿಟನ್ ಜರುಗಿಸುತ್ತಿದ್ದ ಆಕ್ರಮಣಕಾರಿ ಯುದ್ಧಗಳ ಮಾದರಿಯಲ್ಲೇ ಪ್ರಪಂಚದ ನಾನಾ ದೇಶಗಳ ಮೇಲೆ ಆಕ್ರಮಣ ಜರುಗಿಸಿ, ತನ್ನ ಚಕ್ರಾಧಿತ್ಯ ಸ್ಥಾಪಿಸಿ, ಫ್ರಾನ್ಸ್ ಕೂಡ ಪ್ರಪಂಚದಲ್ಲಿ ಒಂದು ಬಲಿಷ್ಠ ರಾಷ್ಟ್ರವೆಂದೆನಿಸಿಕೊಳ್ಳಬೇಕೆಂಬ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಿದ. ಆತ ಭಾರತದ ಮೇಲೆ ಆಕ್ರಮಣ ಜರುಗಿಸಿ, ಇಂಗ್ಲಿಷ್‌ರಿಗೆ ತನ್ನ ಸವಾಲನ್ನು ಒಡ್ಡಿ ಅವರ ವಿರುದ್ಧ ಸಮರ ಸಾಗಿಸಿದ. ಅವರ ಈ ಸಮರದಾಟದಲ್ಲಿ ಭಾರತದ ಪಾಳೆಯಗಾರರು, ರಾಜ ಮಹಾರಾಜರು, ತಮ್ಮ ಅಧಿಕಾರವನ್ನು ಸ್ಥಾಪಿಸಲು, ಬಲಿಷ್ಠ ಪಾಶ್ಚಾತ್ಯ ದೇಶಗಳ ನೆರವನ್ನು ಕೋರಿ, ಪಡೆದು ಅಂತಿಮವಾಗಿ ಅವರ ಗುಲಾಮರಾಗಿ

ಬಾಳಿದ್ದು ಚರಿತ್ರೆಯ ಪುಟಗಳಲ್ಲಿ ದಾಖಲಾಗಿವೆಯಷ್ಟೇ !

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ೧೭ ವರ್ಷ ವಯಸ್ಸಿನ ರಣಜಿತ್ ಸಿಂಗ್ ಅಧಿಕಾರ ವಹಿಸಿಕೊಂಡಿದ್ದ. ಅವನಲ್ಲಿ ಆರ್ಥಿಕ ಸುಭದ್ರತೆಯಾಗಲೀ, ಬಲಿಷ್ಠ ಸೈನ್ಯವಾಗಲೀ, ಪಂಜಾಬ್‌ನ ಪ್ರಜೆಗಳ ಸಂಪೂರ್ಣ ಸಹಕಾರವಾಗಲೀ ಅಥವಾ ತನ್ನ ಮತ ಬಾಂಧವರೇ ಆದ ಸಿಖ್ ಸಮುದಾಯದ ಸಹಾಯಹಸ್ತವಾಗಲೀ ಇರಲಿಲ್ಲ. ಪಶ್ಚಿಮ ದಿಕ್ಕಿನಿಂದ ಆಫ್ಘನ್ ಗುಡ್ಡಗಾಡು ಜನರಿಂದ, ಆಫ್ಘಾನಿಸ್ಥಾನದ ಪಠಾಣ್‌ರಿಂದ, ಪೂರ್ವ ದಿಕ್ಕಿನಿಂದ ದೆಹಲಿಯಲ್ಲಿ ನಾಮಮಾತ್ರಕ್ಕೆ ಆಳುತ್ತಿದ್ದ ಮೊಘಲ್‌ರಿಂದ, ಅವರನ್ನು ಸುತ್ತುವರೆದು, ಕಿರುಕುಳ ನೀಡುತ್ತಿದ್ದ ಮರಾಠ ಸರದಾರರಿಂದ ಮತ್ತು ಹತ್ತಿರದಲ್ಲೇ ಹದ್ದಿನಂತೆ ಕಾದು ಕುಳಿತಿದ್ದ ಇಂಗ್ಲಿಷ್‌ರಿಂದ ಆಕ್ರಮಣವನ್ನು ಎದುರಿಸಲು ಸಿದ್ಧನಾಗಬೇಕಾಗಿತ್ತು. ಆದರೆ ರಣಜಿತ್ ಸಿಂಗ್‌ರ ಬಳಿ ಇವೆಲ್ಲರ ಕಂಟಕಗಳ ಮಧ್ಯೆ, ಗುರು ಗೋಬಿಂದ್‌ಸಿಂಗ್‌ರ ತ್ಯಾಗ, ಅವರು ನೀಡಿದ ಹೋರಾಡುವ ದೃಷ್ಟಿ, ಮನೋಭಾವ, ಪರಕೀಯರ ವಿರುದ್ಧ ನಿರಂತರವಾಗಿ ಹೋರಾಡಿ, ಅವರ ಕಪಿಮುಷ್ಟಿಯಿಂದ ಪಾರಾಗುವ ದೃಢ ನಿಶ್ಚಯ ಎಲ್ಲವೂ ಮನೆ ಮಾಡಿದ್ದವು. ಎಲ್ಲದಕ್ಕಿಂತಲೂ ಮಿಗಿಲಾಗಿ ಯಾವ ಪಂಜಾಬ್‌ನ್ನು ತನ್ನ ಹಿಡಿತದಲ್ಲಿರಿಸಿಕೊಳ್ಳುವ ಬಯಕೆ ರಣಜಿತ್ ಸಿಂಗ್‌ನಲ್ಲಿದ್ದವೋ ಆ ಪಂಜಾಬ್‌ನ ಜನಸಂಖ್ಯೆಯಲ್ಲಿ ಶೇಕಡ ೮೦ ರಷ್ಟು ಮುಸ್ಲಿಮ್‌ರಿದ್ದು, ಕೇವಲ ೧೦ ರಷ್ಟು ಹಿಂದೂಗಳಿದ್ದು, ಮತ್ತು ಸಿಖ್‌ರು ಶೇ. ೧೦ ರಷ್ಟು ಇತ್ತು. ಮುಸ್ಲಿಮ್‌ರಾದ ಮೊಘಲ್ ಮತ್ತು ಪಠಾಣರು ಕೈಗೊಂಡ ಕ್ರೂರ ಆಡಳಿತ, ಹಿಂಸಾಚಾರ, ಮತಾಂಧತೆಯಿಂದ ಬಲವಂತದ ಮತಾಂತರ ಇತ್ಯಾದಿಗಳ ವಿರುದ್ಧ ಸಿಖ್‌ರು ನಿರಂತರವಾಗಿ ಹೋರಾಡಿ, ಕ್ರಮೇಣ ಜಯ ಗಳಿಸಿ, ಅದೇ ಧರ್ಮೀಯರನ್ನು ಒಳಗೊಂಡ ಪ್ರದೇಶದಲ್ಲಿ ಒಂದು ಸ್ವತಂತ್ರ ರಾಷ್ಟ್ರ ನಿರ್ಮಾಣ ಮಾಡುವ ದುಸ್ಸಾಹಸ ಕಾರ್ಯಕ್ಕೆ ಕೈ ಹಾಕುವುದು ರಣಜಿತ್ ಸಿಂಗ್‌ನ ಪಾಲಿಗೆ ಅತ್ಯಂತ ಕಠಿಣ ಕಾರ್ಯವಾಗಿತ್ತು.

ರಣಜಿತ್ ಸಿಂಗ್‌ನ ಅದೃಷ್ಟಕ್ಕೆ, ಅವನ ಸಾಹಸಕಾರ್ಯಕ್ಕೆ ಮುಳುವಾಗಬಹುದಾಗಿದ್ದ ಇತರ ಬಲಿಷ್ಠ ಸಿಖ್ ಮಿಸಾಲರ ಅಸಹಯೋಗ, ವಿರೋಧ, ಈರ್ಷ್ಯೆ ಇತ್ಯಾದಿ ಅನೈತಿಕ ವಿಚಾರಗಳು ಅಡ್ಡಿ ಬರಲಿಲ್ಲ. ಯಾಕೆಂದರೆ, ಹಳೇ ಪೀಳಿಗೆಯ ಮುಖಂಡರಾದ ಜಸ್ಸಾಸಿಂಗ್ ಅಹ್ಲುವಾಲಿಯಾ, ಭಂಗೀ ಸರದಾರರು ಮತ್ತಿತರರು ಸಾವನ್ನಪ್ಪಿದ್ದರು. ಇನ್ನೊಬ್ಬ ಪ್ರಮುಖ ಸಿಖ್ ಸರದಾರ ಜೈಸಿಂಗ್ ಕನ್ಹೈಯಾ ಕೂಡ ವೃದ್ಧಾಪ್ಯದಲ್ಲಿದ್ದ.

ಸಿಖ್‌ರ ಅನೈಕ್ಯತೆ, ಅನಿಶ್ಚಿತತೆ, ಒಳಜಗಳ, ಅವರೊಳಗಿದ್ದ ಗುಂಪು ಘರ್ಷಣೆ, ರಾಷ್ಟ್ರೀಯತೆಯ ಅಭಾವ, ಎಲ್ಲದಕ್ಕಿಂತಲೂ ಮಿಗಿಲಾಗಿ ಗುರು ಗೋಬಿಂದ್ ಸಿಂಗ್‌ರ ಬೋಧನೆಯನ್ನು ಗಾಳಿಗೆ ತೂರಿ ತಮ್ಮ ತಮ್ಮ ಸ್ವಹಿತಾಸಕ್ತಿ ಸಾಧಿಸಿಕೊಳ್ಳುವದರಲ್ಲಿ ತೋರಿದ ಉತ್ಸಾಹ, ನೆರೆಯ ಆಫ್ಘಾನಿಸ್ತಾನದ ನೂತನ ಬಾದ್‌ಶಹ ಶಾ ಜಮಾನ್ ೧೭೯೩ ರಲ್ಲಿ ತನ್ನ ತಾತ ಅಬ್ದಾಲಿ ಭಾರತದ ಮೇಲೆ ದಂಡೆತ್ತಿ ಬಂದು ದೆಹಲಿ

ಬಾದ್‌ಶಹಾನನ್ನು ಸೋಲಿಸಿ ಆತನನ್ನು ತನ್ನ ಅಧೀನನನ್ನಾಗಿ ಮಾಡಿಕೊಂಡ ರೀತಿಯಲ್ಲೇ ಮತ್ತು ಪಂಜಾಬ್‌ನ್ನು ಆಕ್ರಮಿಸಿ ಆಳುತ್ತಿದ್ದ ಸಿಖ್ಖರ ವಿರುದ್ಧ ಕದನ ಜರುಗಿಸಿ ಅವರ ಸದೆಬಡಿಯುವ ನೆಪ ಒಡ್ಡಿ ಭಾರತದ ಮೇಲೆ ದಂಡೆತ್ತಿ ಬರುವ ಯೋಜನೆ ಅವನ ಮನಸ್ಸಿಗೆ ಬಂದಿತು. ಶಾ ಜಮಾನ್ ಸಿಂಹಾಸನವೇರಿದಾಗಲೇ, ಭಾರತದ ನಾನಾ ಶಕ್ತಿಗಳು ಅವನಿಗೆ ತಮ್ಮ ಉದಾರ ಸಂದೇಶಗಳನ್ನು ಕಳುಹಿಸಿ ಅವನ ಸ್ನೇಹವನ್ನು ಕೋರಿ ಹಾರೈಸಿದ್ದರು. ಬ್ರಿಟಿಷ್ಟರು, ಮರಾಠರು, ಮೊಘಲ್ಲರು ರಾಮಪುರದ ರೋಹಿಲ್ಲಾ ನವಾಬರು ಪ್ರಮುಖರಾಗಿದ್ದರು.

ಮರಾಠರು ಅಬ್ದಾಲಿ ವಿರುದ್ಧ ಸೋತು ತಣ್ಣಗಾಗಿದ್ದರೂ, ಅವರ ಶಕ್ತಿ ಸಂಪೂರ್ಣವಾಗಿ ಕುಗ್ಗಿರಲಿಲ್ಲ. ದೆಹಲಿಯ ಬಳಿ ಗ್ವಾಲಿಯರ್‌ನ ಸಿಂಧಿಯಾ, ಇಂದೋರ್‌ನ ಹೋಳ್ಕರ್ ಸ್ವತಂತ್ರ ರಾಜಪದವಿ ಹೊತ್ತು, ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಪರಸ್ಪರ ಕಾದಾಡುತ್ತಿದ್ದರು. ಅವರು ರೋಹಿಲ್ಲಾ ನವಾಬ್‌ರಿಗೂ, ದೆಹಲಿಯ ಮೊಘಲ್‌ರಿಗೂ ಮತ್ತು ಬ್ರಿಟಿಷ್‌ರಿಗೂ ಪ್ರತಿರೋಧಿಗಳಾಗಿ ಅವಕಾಶ ದೊರೆತಾಗಲೆಲ್ಲಾ ಕಾದಾಡುತ್ತಿದ್ದರು. ಉತ್ತರ ಭಾರತದ ಮುಸ್ಲಿಮ್‌ರಿಗೆ ತಮ್ಮ ನವಾಬ್‌ರು ಮತ್ತು ಬಾದ್‌ಶಹಾರು ದುರ್ಬಲರಾಗಿ, ತಮ್ಮ ಅಸ್ತಿತ್ವಕ್ಕೆ ಕುಂದು ಬರುವಂತಾಗಿದ್ದನ್ನು ಅರಿತು ಭಯಭೀತಿಗೊಂಡು, ಪ್ರಬಲ ಆಫ್ಘನ್ ದೊರೆಯನ್ನು ತಮ್ಮ ಧರ್ಮವನ್ನು ತಮ್ಮ ಜನಾಂಗವನ್ನು ಅಧರ್ಮೀಯರಿಂದ ರಕ್ಷಿಸುವಂತೆ, ಕೋರಿಕೆ ಸಲ್ಲಿಸಿ ಅವನಿಗೆ ಭಾರತದ ಮೇಲೆ ದಂಡೆತ್ತಿ ಬರುವಂತೆ ಆಹ್ವಾನ ನೀಡಿದರು. ದೆಹಲಿ ಬಾದ್‌ಶಹಾ ಶಾ ಆಲಮ್ II ಕೂಡ ತನ್ನನ್ನು ಸುತ್ತುವರೆದ ಮರಾಠ ಸರದಾರರಿಂದ ಬಿಡುಗಡೆ ಹೊಂದಲು ಶಾ ಜಮಾನ್‌ನಿಗೆ ದಂಡೆತ್ತಿ ಬರಲು ಆಹ್ವಾನಿಸಿದ. ಚರಿತ್ರೆ ಮರುಕಳಿಸಿತು. ಭಾರತದ ಮುಸ್ಲಿಮ್ ನವಾಬ್‌ರು ಮತ್ತು ದೆಹಲಿಯ ಬಾದ್‌ಶಹಾ ಪರಕೀಯ ಪಠಾಣ ರಾಜನನ್ನು ತಮ್ಮ ದೇಶದ ಮೇಲೆ ದಂಡೆತ್ತಿ ಬರಲು ಆಹ್ವಾನ ನೀಡಿ, ತಮ್ಮ ಮಾನ, ಮರ್ಯಾದೆ, ಆಸ್ತಿ ಪಾಸ್ತಿ ಧನದ್ರವ್ಯ ಎಲ್ಲವನ್ನು ದೋಚಲು, ಲೂಟಿ ಮಾಡಲು ಅನುವು ಮಾಡಿಕೊಟ್ಟರು.

ಆಫ್ಘಾನಿಸ್ತಾನದ ರಾಜ ಶಾ ಜಮಾನ್ ತನ್ನ ಬಲಿಷ್ಠ ಸೇನಾಪಡೆಯೊಂದಿಗೆ ನವೆಂಬರ್ ೧೭೯೭ರಲ್ಲಿ ಭಾರತದ ಮೇಲೆ ತನ್ನ ದಂಡಯಾತ್ರೆ ಪ್ರಾರಂಭಿಸಿದ. ಅವನು ದಂಡೆತ್ತಿ ಬರುವ ಸುದ್ದಿ ಅರಿತ ಸಿಖ್ ಮಿಸಾಲ್‌ರು ಅವನಿಗೆ ಅಧೀನರಾಗಿ, ಅವನ ಸಾಮಂತ ರಾಜರಾಗಿ ರಾಜ್ಯಭಾರ ಮಾಡುವ ತಮ್ಮ ಅಭಿಲಾಶೆ ತೋರ್ಪಡಿಸಿದರು. ಅವನ ವಿರುದ್ಧ ಯುದ್ಧ ಜರುಗಿಸಿ ತಮ್ಮ ಸ್ವಾತಂತ್ರ್ಯ ಕಾಪಾಡಿಕೊಳ್ಳುವಷ್ಟು ಧೈರ್ಯ, ಸಾಹಸ, ಭಕ್ತಿ, ಸಾಮರ್ಥ್ಯ ಅವರಲ್ಲಿರಲಿಲ್ಲ. ಸಿಖ್ ಮಿಸಾಲರಲ್ಲಿ ಕೆಲವರು ಶಾಹಾನಿಗೆ ದೆಹಲಿಯತ್ತ ಕ್ಷೇಮವಾಗಿ ಪಯಣಿಸಲು ತಮ್ಮ ಸಹಕಾರ ನೀಡುತ್ತೇವೆಂದರು. ಆದರೆ ಶಾ ಜಮಾನ್ ಲೂಟಿ ಹೊಡೆದ ಆಸ್ತಿಪಾಸ್ತಿಗಳಲ್ಲಿ ತಮಗೂ ಒಂದು ಭಾಗ ನೀಡಬೇಕೆಂದು ಶರತ್ತು ಹಾಕಿದರು !

ರಣಜಿತ್ ಸಿಂಗ್ ಮಾತ್ರ, ಶಾ ಜಮಾನ್‌ನ ಆಕ್ರಮಣದ ವಿರುದ್ಧ ಹೋರಾಡಲು ನಿಶ್ಚಯಿಸಿದ. ಅವನು ಮರಾಠ ಸರದಾರ ದೌಲತ್ ರಾವ್ ಸಿಂಧಿಯಾನ ನೆರವು ಕೋರಿದ. ಈರ್ವರು ಒಟ್ಟಿಗೆ ಶಾ ಜಮಾನ್‌ನನ್ನು ಎದುರಿಸಿದರೆ. ಇತರ ಸಿಖ್‌ರು ಕೂಡ ತಮ್ಮ ಜೊತೆಗೂಡಿ ಕಾದಾಡುವರು ಎಂದು ಹೇಳಿದ ರಣಜಿತ್ ಸಿಂಗ್. ಆದರೆ ಮರಾಠರು ರಣಜಿತ್‌ಸಿಂಗ್‌ನ ಆಹ್ವಾನ ಸ್ವೀಕರಿಸಲಿಲ್ಲ. ಅವರು ಶಾ ಜಮಾನ್‌ನ ಬಲಿಷ್ಠ ಸೈನ್ಯದೆದುರು ತಮ್ಮ ಆಟ ಸಾಗಲಿಕ್ಕಿಲ್ಲ ಎಂದು ಬಗೆದು ಹೋರಾಟಕ್ಕೆ ಸಜ್ಜಾಗಲಿಲ್ಲ. ಈಗಾಗಲೇ ಪಠಾಣರಿಂದ ಸೋಲುಂಡಿದ್ದ ಅವರು ಪುನಃ ಅವರ ವಿರುದ್ಧ ಹೋರಾಡಲು ಸಿದ್ಧರಾಗದೆ, ಎದೆಗುಂದಿ ತಟಸ್ಥರಾದರು.೨

A formal council was held by the Sikhs; but a portion only of their leaders were present. The singlessness of purpose, the confident belief in the aid of God, which had animated mechanics and shepherds to resent persecution, and to triumph over Ahmed Shah, no longer possessed the minds of their descendants, born to comparative power and affluence, and who, like rude abd ignorant men broken loose from all law, gave the rein to their desire was for worldly enjoyment. The genuine spirit of Sikhism had again sought the dwelling of the peasant to reproduce itself in another form; the rude system of mixed independence and confederacy, was unsuited to an extendent dominion; it had served its ends of immediate agglomeration, and the "Misls" were in effect dissolved. The mass of the people remained satisfied with their village freedom, to which taxation and inquisition were unknown; but the petty chiefs and their paid followers, to whom their faith was the mere expression of a conventional custom, were anxious for predatory licence, and for additions so their temporal power. Some were willing to join the English, others were ready to link their fortunes with the Mahrattas, and all had become jealous of Runjeeet Singh, who alone was desirous of excluding the stranger invaders,

೨. P 133 History of Sikhs by Cunningham

as the great obstacles to his own ambition of founding a military monarchy which should ensure to the people the congenial occupation of conquest. In truth, Runjeet Singh laboured, with more or less of intelligent design, to give unity and coherence to diverse atoms and scattered elements; to mould the increasing Sikh nation into a well-ordered state or commonwealth, as Govind had developed a sect into a people, and had given application and purpose to the general institutions of Nanuk. †

ರಣಜಿತ್ ಸಿಂಗ್ ಏಕೈಕಯಾಗಿ ಆಕ್ರಮಣಕಾರನ ವಿರುದ್ಧ ಹೋರಾಡಲು ನಿರ್ಧರಿಸಿದ. ಜೀಲಮ್ ನದಿಯವರೆಗೂ ಶಾನ ಸೈನ್ಯವನ್ನು ತಡೆಯಲಿಲ್ಲ. ನದಿ ದಡದ ಮೇಲೆ ನಿರ್ಮಿಸಲಾಗಿದ್ದ ರೋಹ್ವಾಸ್ ಕೋಟೆಯನ್ನು ಶಾ ಜಮಾನ್ ಆಕ್ರಮಿಸಿಕೊಂಡ. ಸುದ್ದಿ ಅರಿತ, ಪಂಜಾಬ್‌ನ ಪ್ರಜೆಗಳು ಪ್ರಾಣಭಯದಿಂದ ಪಟ್ಟಣ, ನಗರ ತ್ಯಜಿಸಿ, ಕಾಡುಗುಡ್ಡ ಸೇರಿದರು. ಪಂಜಾಬ್‌ನ ಬಯಲುಸೀಮೆ ನಿರ್ಜನವಾಯಿತು.

ಶಾ ಜಮಾನ್ ಸಿಂಧೂ ನದಿಯನ್ನು ೬ನೆಯ ಡಿಸೆಂಬರ್ ೧೭೯೬ ರಂದು ದಾಟಿದ. ಲಾಹೋರ್‌ನ ಸುಬೇದಾರ್ ಲೆಹ್ನಾಸಿಂಗ್ ನಗರ ತ್ಯಜಿಸಿ, ಆಕ್ರಮಣಕಾರನಿಗೆ ನಗರವನ್ನು ಆಕ್ರಮಿಸಿಕೊಳ್ಳಲು ಅನುವು ಮಾಡಿಕೊಟ್ಟ. ಶಾ ಜಮಾನ್ ರಣಜಿತ್ ಸಿಂಗ್‌ನಿಗೆ ನಿರೂಪ ಕಳುಹಿಸಿ ಶರಣಾಗುವಂತೆ ಕೋರಿದ. ರಣಜಿತ್‌ಸಿಂಗ್, ಶಾನಿಗೆ ತಾನು ಹೋರಾಟಕ್ಕೆ ಸಿದ್ಧನಿದ್ದೇನೆಂದು ತಿಳಿಸಿ, ಅದಕ್ಕೆ ಸಜ್ಜಾಗಿ ನಿಂತಿದ್ದೇನೆಂದು ಕಚ್ಚಿನಿಂದ ಉತ್ತರಿಸಿದ.

ಶಾ ಜಮನ್, ಯಾವ ಅಡೆತಡೆಗಳನ್ನು ಎದುರಿಸದೆ ಲಾಹೋರ್ ನಗರವನ್ನು ಪ್ರವೇಶಿಸಿ, ಅದನ್ನು ಆಕ್ರಮಿಸಿದ. ಅವನಿಗೆ ತನ್ನ ಸಂಪೂರ್ಣ ಸಹಕಾರ ಮತ್ತು ವಿಧೇಯತೆ ತೋರಿಸಿದ ಪಾಟಿಯಾಲಾದ ರಾಜ ಸಾಹಿಬ್ ಸಿಂಗ್.

ಲಾಹೋರ್ ನಗರದ ನೆರೆಯ ನಗರ ಅಮೃತಸರದಲ್ಲಿ ಸಿಖ್ಖರ ಪಡೆ ಜಮಾಯಿಸಿದ ಸಂಗತಿ ಅರಿತ ಶಾ ಜಮಾನ್, ಅಲ್ಲಿಗೆ ದೌಡಾಯಿಸಿದ. ಈಗಾಗಲೇ ಸಜ್ಜಾಗಿ ನಿಂತಿದ್ದ ರಣಜಿತ್ ಸಿಂಗ್ ಮತ್ತು ಅವನ ೯೦೦೦ ಸಿಖ್ ಸೈನ್ಯ ಶಾ ಜಮಾನ್‌ನನ್ನು ಎದುರಿಸಿತು. ಘೋರ ಕಾಳಗ ಜರುಗಿತು. ಪ್ರಾಣದ ಹಂಗು ತೊರೆದು ಕೆಚ್ಚಿನಿಂದ ಕಾದಿದ ಸಿಖ್ಖರು ಪಠಾಣ ಸೈನ್ಯವನ್ನು ಸೋಲಿಸಿ ಹೊಡೆದೋಡಿಸಿದರು. ಒಂದೇ ದಿನದ ಕದನದಲ್ಲಿ ಶಾ ಜಮಾನ್‌ನ ೨೦೦೦೦ ಸೈನಿಕರು ಹತರಾದರೆ, ೧೫೦೦೦

† Malcolm (Sketch, p. 106, 107) remarks on the want of unanimity

ಸಿಖ್‌ರು ಪ್ರಾಣತ್ಯಾಗ ಮಾಡಿದರು. ಅಮೃತಸರ ನಗರದ ಆಸುಪಾಸಿನ ಸ್ಥಳಗಳಲ್ಲಿ ರಕ್ತದ ಓಕಳಿ ಜರುಗಿತು. ರಾತ್ರೋ ರಾತ್ರಿ ಲಾಹೋರ್ ನಗರಕ್ಕೆ ಹಿಂದಿರುಗಿದ ಶಾ ಜಮಾನ್ ತನ್ನ ಸಹಾಯಕ್ಕೆ ಎಲ್ಲಾ ಮುಸ್ಲಿಮ್ ನವಾಬ್‌ರಿಗೆ ಕರೆ ನೀಡಿದ.

ರಣಜಿತ್ ಸಿಂಗ್‌ನ ಪಾಳೆಯದಲ್ಲಿ ಅವನ ಸ್ವಂತ ಪಡೆಯಿದ್ದರೆ, ಅವನ ಸಹಾಯಕ್ಕೆ ಗುಲಾಬ್ ಸಿಂಗ್, ಲೆಹ್ನಾ ಸಿಂಗ್ ಮತ್ತಿತರು ಸಜ್ಜಾಗಿ ಬಂದರು. ಆದರೆ, ಪಾಟಿಯಾಲಾ, ಜಿಂದ್, ನಾಭಾ ಮತ್ತು ಕಾಪುರ್‌ಥಾಲಾದ ಸಿಖ್ ಮಿಸಾಲ್‌ದಾರರು ತಟಸ್ಥರಾಗಿ ಉಳಿದರು. ರಾಜಾಸ್ಥಾನದ ರಾಜಪುತ್ರರು ಕೂಡ ತಟಸ್ಥರಾಗಿ ಉಳಿದರೆ., ಮರಾಠರು ದಕ್ಷಿಣದಲ್ಲಿ ತಮ್ಮ ಪ್ರಾಬಲ್ಯ ಉಳಿಸಿಕೊಳ್ಳಲು ಹೆಣಗುತ್ತಿದ್ದರು. ಅದೇ ರೀತಿ ಬ್ರಿಟಿಷ್‌ರು ಕೂಡ ತಮ್ಮ ಸಂಸ್ಥಾನಗಳನ್ನು ಉಳಿಸಿಕೊಳ್ಳಲು, ಅವುಗಳ ಮೇಲೆ ತಮ್ಮ ಅಧಿಪತ್ಯ ಸ್ಥಾಪಿಸುವ ನಿಟ್ಟಿನಲ್ಲಿ ನಿರತರಾಗಿದ್ದರು. ದೆಹಲಿಯ ಬಾದ್‌ಶಹನಂತೂ ಸ್ವತಃ ತಾನೇ ಶಾ ಜಮಾನ್‌ನಿಗೆ ಆಹ್ವಾನ ನೀಡಿದ್ದ ಮೇಲೆ ಸಿಖ್‌ರ ನೆರವಿಗೆ ಬರುವ ಆಸೆಯೇ ಇರಲಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ರಣಜಿತ್ ಸಿಂಗ್ ಏಕೈಕನಾಗಿ ಶಾ ಜಮಾನ್ ವಿರುದ್ಧ ಹೋರಾಡಬೇಕಾಗಿ ಬಂದಿದ್ದು ಅತ್ಯಂತ ಅನಿರೀಕ್ಷಿತವಾಗಿದ್ದು, ಶೋಚನೀಯವೂ ಆಗಿತ್ತು. ಆತ ಧೃತಿಗೆಡದೆ, ಶಾನ ಆಕ್ರಮಣವನ್ನು ಎದುರಿಸಲು ಸಜ್ಜಾಗಿ ನಿಂತ.

ಅದೃಷ್ಟವಶಾತ್, ಶಾ ಜಮಾನ್ ಸ್ವದೇಶದಲ್ಲಿ ತನ್ನ ಸಹೋದರನಿಂದ ವಿದ್ರೋಹ ಎದುರಿಸಬೇಕಾಗಿ ಬಂದಿದ್ದರಿಂದ ತ್ವರೆಯಿಂದ ಹಿಂದಿರುಗಿದ. ಆದರೆ ತಾನು ಆಕ್ರಮಿಸಿದ ಲಾಹೋರ್‌ನ ಜನತೆಯಿಂದ ೨೨ ಲಕ್ಷ ರೂಪಾಯಿ ಮೌಲ್ಯದ ನಗನಾಣ್ಯಗಳನ್ನು ವಸೂಲಿ ಮಾಡಿದ. ಶಾ ಜಮಾನ್ ತನ್ನ ದೇಶೀಯನಾದ ಅಹ್ಮದ್ ಖಾನ್‌ನನ್ನು ರೋಹ್ಟಾಸ್‌ನ ರಾಜ್ಯಪಾಲನನ್ನಾಗಿ ಮಾಡಿದ. ಪಠಾಣ ಅಹ್ಮದ್ ಖಾನ್ ತನ್ನ ದೊರೆ ಸಿಖ್‌ರ ಮೇಲೆ ಜರುಗಿಸಿದ ಕಾಳಗವನ್ನು ಮುಂದುವರೆಸಿದ. ಆತ ತನ್ನ ಬಲವಾದ ಪಡೆಯೊಂದಿಗೆ ಜೀಲಮ್ ನದಿಯನ್ನು ದಾಟಿ ಸಿಖ್‌ರ ಒಡೆತನದಲ್ಲಿದ್ದ ಚೆನಾಬ್ ನದಿ ಪ್ರದೇಶದ ಮೇಲೆ ದಾಳಿ ನಡೆಸಿದ. ಸಿಖ್‌ರ ಸೈನ್ಯ ಅಹ್ಮದ್ ಖಾನ್‌ನನ್ನು ಎದುರಿಸಿ ಕಾಳಗ ಜರುಗಿಸಿತು. ಆ ಘೋರ ಕಾಳಗದಲ್ಲಿ ಕೆಚ್ಚಿನಿಂದ ಕಾದಿದ ಸಿಖ್‌ರು ಅಹ್ಮದ್ ಖಾನ್‌ನ ೩ ಸಾವಿರ ಪಠಾಣರನ್ನು ಹತ್ಯೆಗೀಡು ಮಾಡಿದ್ದಲ್ಲದೆ, ಅಹ್ಮದ್ ಖಾನ್‌ನನ್ನು ಹತ್ಯೆ ಮಾಡಿ, ಅವನ ತಲೆಯನ್ನು ರಣಜಿತ್ ಸಿಂಗ್‌ಗೆ ತಲುಪಿಸಿದರು.೩

೧೭೯೭ರಲ್ಲಿ ಆಫ್ಘನ್ ರಾಜ ಶಾ ಜಮಾನ್ ಪ್ರದೇಶದಲ್ಲಿ ತಲೆದೋರಿದ್ದ ವಿದ್ರೋಹವನ್ನು ಹತ್ತಿಕ್ಕಿದ ನಂತರ, ಮತ್ತೊಮ್ಮೆ ಭಾರತದ ಮೇಲೆ ಆಕ್ರಮಣ ಜರುಗಿಸಲು ಮುಂದಾದ. ಅವನ ಆ ಆಕ್ರಮಣಕ್ಕೆ ಆಹ್ವಾನಿಸಿದವರಲ್ಲಿ ಮೈಸೂರಿನ ಟಿಪ್ಪೂ ಸುಲ್ತಾನ್ ಕೂಡ ಒಬ್ಬನಾಗಿದ್ದ ಎಂದಿದ್ದಾರೆ ಇತಿಹಾಸಕಾರರು. ಅವನು ತನ್ನ ಅಸ್ತಿತ್ವವನ್ನು

೩. P 436 History of Sikh People by G. Singh

ಉಳಿಸಿಕೊಳ್ಳಲು ಬ್ರಿಟಿಷ್‌ರಿಂದ ಮತ್ತು ಮರಾಠರಿಂದ ಕಾಪಾಡಿಕೊಳ್ಳಲು ತನ್ನ ಧರ್ಮೀಯನಾದ ಶಾ ಜಮಾನ್‌ನ ಸಹಾಯ ಕೋರಿದ. ಅದಕ್ಕಾಗಿ ಹಣ, ದ್ರವ್ಯ, ಅಶ್ವದಳಗಳ ಕೊಡುಗೆ ನೀಡಿದ. ೪

ಮುಸ್ಲಿಮ್ ನವಾಬರು ಶಾ ಜಮಾನ್‌ಗೆ ಆಹ್ವಾನ ನೀಡಿ, ಅವನ ಆಕ್ರಮಣಕ್ಕೆ ಸಕಲ ಸೌಕರ್ಯ ನೀಡುವ ಭರವಸೆ ನೀಡಿದರು. ಕಾಂಗ್ರಾ ಮತ್ತು ಜಮ್ಮಾ ರಾಜರು ಕೂಡ ಅವನ ಆಕ್ರಮಣಕ್ಕೆ ತಮ್ಮ ಆಹ್ವಾನ ನೀಡಿ ಸಹಕರಿಸಿದರು. ದೂರದ ಔಧ್‌ನ ನವಾಬ ಕೂಡ ಬ್ರಿಟಿಷ್‌ರ ವಿರುದ್ಧ ಕಾದಾಡಲು ಶಾ ಜಮಾನ್‌ನಿಗೆ ಕೋರಿಕೆ ಸಲ್ಲಿಸಿ ತಮ್ಮ ಆಹ್ವಾನ ನೀಡಿದರು. ರೋಹಿಲ್ಲಾ ನವಾಬ್‌ರು ಎಂದಿನಂತೆ ತಮ್ಮ ಸ್ಥಿರ ಆಹ್ವಾನವನ್ನು ಜಮಾನ್‌ಗೆ ಸಲ್ಲಿಸಿ ತೃಪ್ತರಾದರು.

ಹಿಂದೂ ರಾಜ ಮಹಾರಾಜರು, ಸಿಖ್ ಮತ್ತು ಮರಾಠರ ಆಕ್ರಮಣ ಮತ್ತು ಆಳ್ವಿಕೆಗಳನ್ನು ಒಪ್ಪದೆ, ಅವುಗಳಿಂದ ತಪ್ಪಿಸಿಕೊಳ್ಳಲು ಶಾ ಜಮಾನ್‌ನಿಗೆ ಭಾರತದ ಮೇಲೆ ದಂಡೆತ್ತಿ ಬರಲು ಆಹ್ವಾನ ನೀಡಿದರೂ, ಆತ ಮಾತ್ರ ತನ್ನ ಆಕ್ರಮಣಕ್ಕೆ ಬ್ರಿಟಿಷ್‌ರಿಂದ, ದೆಹಲಿಯ ಬಾದ್‌ಶಹಾನಿಂದ ಮತ್ತು ಮುಸ್ಲಿಮ್ ರೋಹಿಲ್ಲಾ ನವಾಬರಿಂದ ಸಹಕಾರ, ಸಹಯೋಗ, ಮತ್ತು ಸಹಾಯ ಹಸ್ತ ಕೋರಿ ಅವರ ಬಳಿ ಒಂದು ನಿಯೋಗ ಕಳುಹಿಸಿದ. ಬ್ರಿಟಿಷ್‌ರು ಆ ನಿಯೋಗಕ್ಕೆ ತಮ್ಮ ಸಹಕಾರ ನೀಡಲು ಯಾವ ಇಚ್ಛೆ ತೋರಿಸದೆ, ಸಿಖ್‌ರಿಗೆ ತಮ್ಮ ಸ್ನೇಹದ ಹಸ್ತ ನೀಡಿದ್ದು ವಿಶೇಷವಾಗಿತ್ತು.

ಶಾ ಜಮಾನ್‌ನ ಆಕ್ರಮಣದ ಸುದ್ದಿ ಅರಿವಾದಾಗ, ಸಿಖ್‌ರು ಅಮೃತಸರದಲ್ಲಿ ಜಮಾಯಿಸಿದರು. (೧೭೯೭) ಆದರೆ, ಪಾಟಿಯಾಲಾದ ಸಿಖ್ ರಾಜಾ ಸಾಹಿಬ್ ಸಿಂಗ್ ಮಾತ್ರ ಶಾ ಜಮಾನ್‌ನಿಗೆ ಶರಣಾಗಿ, ಅವನಿಂದ ಸಹಕಾರ ಕೋರಿದ ಪತ್ರವನ್ನು ತನ್ನ ಹಣೆಗೆ ಒತ್ತಿಕೊಂಡು ಅವನ ಆಕ್ರಮಣಕ್ಕೆ ತನ್ನ ಒಪ್ಪಿಗೆ ಸೂಚಿಸಿದ.

ಯುವಕ ಶಾ ಜಮಾನ್ ೧೯ ಅಕ್ಟೋಬರ್ ೧೭೯೭ ರಂದು ಸಿಂಧೂ ನದಿಯನ್ನು ದಾಟಿ, ಲಾಹೋರ್‌ನ್ನು ಪುನಃ ಆಕ್ರಮಿಸಿ ಅಮೃತಸರದಲ್ಲಿ ಜಮಾಯಿಸಿದ್ದ ಸಿಖ್‌ರನ್ನು ಎದುರಿಸಿ ಅವರನ್ನು ಸಮರದಲ್ಲಿ ಸೋಲಿಸಿ, ನಗರವನ್ನು ಆಕ್ರಮಿಸಿ ದೆಹಲಿಯತ್ತ ದಂಡೆತ್ತಿ ಹೋಗಲು ತೀರ್ಮಾನಿಸಿದ. ಅದರಂತೆ ಸುಮಾರು ಹತ್ತು ಸಾವಿರ ಪಠಾಣ ಸೈನಿಕರನ್ನು ಅಮೃತಸರಕ್ಕೆ ಕಳುಹಿಸಿದ. ನಗರದ ಹೊರವಲಯದಲ್ಲಿ ಕಾದಿದ್ದ ಸಿಖ್ ಸೈನ್ಯವನ್ನು ಪಠಾಣರು ಎದುರಿಸಿ, ಘನ ಘೋರ ಕಾಳಗ ಜರುಗಿಸಿದರು. ಸಿಖ್ ಸೈನ್ಯ, ರಣಜಿತ್ ಸಿಂಗ್, ಸಾಹಿಬ್ ಸಿಂಗ್, ಗುಲಾಬ್ ಸಿಂಗ್, ಜೋಧ್ ಸಿಂಗ್ ಮತ್ತು ಬುಧೌ ಸಿಂಗ್‌ರ ನೇತೃತ್ವದಲ್ಲಿ, ಪಠಾಣರನ್ನು ಸೋಲಿಸಿ ಅವರ ಸೈನ್ಯವನ್ನು ಹಿಮ್ಮೆಟ್ಟಿಸಿದರು.

---

೪. P 436 IBID

ಲಾಹೋರ್‌ನಲ್ಲಿ ಕುಳಿತಿದ್ದ ಶಾ ಜಮಾನ್‌ನಿಗೆ ಸಿಖ್‌ರ ಪ್ರತಿರೋಧವನ್ನು ಎದುರಿಸುವುದು ಕಷ್ಟಸಾಧ್ಯ ಎಂದು ಅರಿತು, ಸಂಧಾನಕ್ಕೆ ಅಣಿಯಾದ. ಅವರೊಂದಿಗೆ ಸಂಧಾನ ಮಾಡಿಕೊಂಡರೆ, ದೆಹಲಿಯ ಮೇಲೆ ಆಕ್ರಮಣ ಎಸಗುವುದು ಸುಲಭವೆಂದು ತೋರಿತು. ಆದರೆ, ಕೊಳ್ಳೆ ಹೊಡೆದು, ಅಪಾರ ಹಣಧನ ವಶಪಡಿಸಿಕೊಂಡು ವಾಪಸ್ಸು ಹೋಗುವ ಎಂದರೆ, ಪ್ರಜೆಗಳೆಲ್ಲಾ ಊರು ತ್ಯಜಿಸಿ ಗುಡ್ಡಗಾಡು ಸೇರಿದ್ದರಿಂದ, ಊರು ನಾಶಮಾಡಿ ಕೊಳ್ಳೆ ಹೊಡೆಯಲು ಏನೂ ಉಳಿದಿರಲಿಲ್ಲ. ಮರಾಠರು ಮತ್ತು ಬ್ರಿಟಿಷ್‌ರು ಕೈ ಜೋಡಿಸಿ, ಪಠಾಣರನ್ನು ಎದುರಿಸುವ ಸಂಧಾನ ಮತ್ತು ಅದಕ್ಕಾಗಿ ಸಜ್ಜು ಮಾಡಿ ತಯಾರಿ ನಡೆಸುವ ಸುದ್ದಿ ತಿಳಿದ ಪಠಾಣ ವೀರ ಶಾ ಜಮಾನ್ ಚಿಂತಾಕ್ರಾಂತನಾದ. ಅವನ ನೆಚ್ಚಿನ ಬಂಟ ಶೇಖ್ ಮೊಹಮದ್ ಖಾನ್ ಎಂಬಾತ ಸಿಖ್‌ರ ಬೇಹುಗಾರನಾಗಿ ವರ್ತಿಸಿದ. ಆತ ಶಾ ಜಮಾನ್‌ನಿಗೆ ಕಾಬೂಲ್‌ನಲ್ಲಿ ಶಾನ ಸಹೋದರ ವಿಪ್ಲವ ಹೂಡಿ ರಾಜ್ಯ ಕಬಳಿಸುವ ಹುನ್ನಾರದಲ್ಲಿದ್ದಾನೆಂಬ ಸುಳ್ಳು ಸಂಗತಿ ಅರುಹಿ ಶಾನ ಮನಸ್ಸನ್ನು ಕೆಡಿಸಿದ.

ರಣಜಿತ್ ಸಿಂಗ್ ಮತ್ತು ಆರು ಇತರ ಸಿಖ್ ಸರದಾರರು, ಶಾ ಜಮಾನ್ ಆಕ್ರಮಿಸಿದ್ದ ಲಾಹೋರ್‌ನ್ನು ಮುತ್ತಿಗೆ ಹಾಕಲು ನಿರ್ಧರಿಸಿದರು. ಅವರ ಸೈನ್ಯ ನಗರವನ್ನು ಸುತ್ತುವರೆದು, ಶಾ ಜಮಾನ್ ಮತ್ತು ಸೈನ್ಯ ಬಿಡಾರ ಹೂಡಿದ ಕೋಟೆಯೊಳಗೆ ಹಸಿವಿನಿಂದ ಕಂಗಾಲಾಗುವಂತೆ ಕ್ರಮ ಕೈಗೊಂಡರು. ನಾಲ್ಕು ಕಡೆಯಿಂದ ಆಕ್ರಮಿಸಿದ ಸಿಖ್ ಸೈನ್ಯವನ್ನು ಎದುರಿಸಲಾರದೆ, ಸ್ವದೇಶದಿಂದ ಸಹಾಯ ಸಿಗದೆ, ಸುತ್ತಲಿನ ಮುಸ್ಲಿಮ್ ನವಾಬರಿಂದ ಯಾವ ನೆರವು ಬರದೆ ಹತಾಶನಾಗಿದ್ದ ಶಾ ಜಮಾನ್ ಸಂಧಾನಕ್ಕೆ ಮುಂದಾದ. ಸಿಖ್‌ರ ಸಂಧಾನಕಾರ ನೇಕಿ ಸಿಂಗ್‌ನನ್ನು ಅಮೃತಸರಕ್ಕೆ ಕಳುಹಿಸಿದ. ಆದರೆ ಸಿಖ್‌ರ ಧಾರ್ಮಿಕ ಮುಖಂಡ, ಹೋರಾಟಗಾರ ಮತ್ತು ಅತ್ಯಂತ ಗೌರವಾನ್ವಿತ ವ್ಯಕ್ತಿಯಾಗಿದ್ದ ಬಾಬಾ ಸಾಹಿಬ್ ಸಿಂಗ್ ಬೇಡಿ, ನೇಕೀ ಸಿಂಗ್‌ನ ತಂದೆ ಸಂಧಾನವನ್ನು ನಿರಾಕರಿಸಿದ. 'ನಮ್ಮ ಪೂರ್ವಿಕರ ಪ್ರದೇಶವನ್ನು ತ್ಯಾಗ ಬಲಿದಾನಗಳಿಂದ ಪಡೆದಿದ್ದೇವೆ. ಅದನ್ನು ಯಾವುದೇ ಕಾರಣಕ್ಕೂ ಪರಕೀಯರಿಗೆ ಬಿಟ್ಟುಕೊಡಲು ತಯಾರಿಲ್ಲ' ಎಂದು ಘೋಷಿಸಿದ. ಈ ಮಧ್ಯೆ ಸಿಖ್ ಮುಖಂಡರಲ್ಲಿ ಒಡಕು ಮೂಡಿತ್ತು. ಕೆಲವರು ಸಂಧಾನಕ್ಕೆ ತಯಾರಿದ್ದರೆ ಇನ್ನು ಕೆಲವರು ಹೋರಾಟಕ್ಕೆ ಸಜ್ಜಾಗಿದ್ದರು. ಸಂಧಾನ ಕಾರ್ಯ ಮುಂದುವರೆಸಲು ಸಿಖ್ ನೇತಾರರ ಇಬ್ಬರು ಸಂಧಾನಕಾರರನ್ನು ಶಾ ಜಮಾನ್‌ನ ಬಳಿ ಕಳುಹಿಸಲಾಯಿತು. ಅವರನ್ನು ಕ್ಷೇಮದಿಂದ, ಆದರಿಂದ ಬರಮಾಡಿಕೊಂಡ ಶಾ ಜಮಾನ್‌ನ ವಜೀರ, ಸಂಧಾನ ಕಾರ್ಯಕಲಾಪ ಪ್ರಾರಂಭಿಸಿದ. ಅದೃಷ್ಟವಶಾತ್, ಇದೇ ಸಮಯದಲ್ಲಿ ಪರ್ಶಿಯಾದ ರಾಜ, ಆಫ್ಘಾನಿಸ್ತಾನದ ಮೇಲೆ ದಂಡೆತ್ತಿ ಬಂದ ಸುದ್ದಿ ಶಾ ಜಮಾನ್‌ಗೆ ತಿಳಿಸಲಾಯಿತು. ಅದರೊಂದಿಗೆ, ಶಾನ ಸಹೋದರ ಪುನಃ ವಿದ್ರೋಹದ ಕಹಳೆ ಊದಿದ್ದ ಸುದ್ದಿ ತಿಳಿದ ಶಾ ಜಮಾನ್ ಒಡನೆ ಲಾಹೋರ್ ನಗರ ತ್ಯಜಿಸಿ, ಸ್ವದೇಶಕ್ಕೆ ದೌಡಾಯಿಸಿದ.

ಅವನು ತನ್ನ ಸೈನ್ಯದೊಂದಿಗೆ ನಗರ ಖಾಲಿ ಮಾಡಿದೊಡದೆ, ಸಿಖ್ ಸರದಾರರಾದ ಚೈತ್ ಸಿಂಗ್ ಮತ್ತು ಮಿಲ್ಕಾಸಿಂಗ್ ಲಾಹೋರ್ ನಗರವನ್ನು ಆಕ್ರಮಿಸಿದರು (ಜನವರಿ ೧೭೯೯) ಇತರ ಸಿಖ್ ಸರದಾರರು ತಮ್ಮ ತಮ್ಮ ಪ್ರಾಂತ್ಯಗಳಿಗೆ ಹಿಂದಿರುಗಿದರು.

ಶಾ ಜಮಾನ್ ಸ್ವದೇಶಕ್ಕೆ ಹಿಂದಿರುಗುವಾಗ ಅಪಾರ ನಷ್ಟ ಅನುಭವಿಸಿದ. ಹಠಾತ್ತನೆ ಮಳೆ ಸುರಿದ ಪರಿಣಾಮ, ನದಿಗಳು ಉಕ್ಕಿ ಹರಿದು, ರಸ್ತೆ ಬಂದಾಗಿ ಅವನ ಸಾಮಾನು ಸರಂಜಾಮು, ಯುದ್ಧ ಸಾಮಗ್ರಿಗಳು ನದಿಯಲ್ಲಿ ಮುಳುಗಿ ಅಪಾರ ಹಾನಿ ಉಂಟಾದವು. ಅವನ ಸೈನಿಕರು ಹಸಿವು, ನೀರಡಿಕೆ, ಕಾಯಿಲೆಗಳಿಂದ ನರಳಿ ಪ್ರಾಣ ಬಿಟ್ಟರು. ಗಡಿನಾಡು ಪಟ್ಟಣ ಪೇಶಾವರ್‌ಗೆ ಬಂದು ತಲುಪುವಷ್ಟರಲ್ಲಿ ಅವನ ಮೇಲೆ ಎರಗಿದ ಕ್ರೂರ, ಗುಡ್ಡಗಾಡು ಜನಾಂಗದವರು ಸಾಕಷ್ಟು ಪ್ರಾಣಹಾನಿ ಎಸಗಿ ಅವನ ಸೈನ್ಯಕ್ಕೆ ಹಣ್ಣುಗಾಯಿ ನೀರುಗಾಯಿ ಮಾಡಿದ್ದರು.

ಭಾರತದ ಮೇಲೆ ಕೈಗೊಂಡ ಆಫ್ಘನ್‌ರ ಆಕ್ರಮಣ ಇದರೊಂದಿಗೆ ಅಂತಿಮವಾಗಿ ಕೊನೆಗೊಂಡಿತು. ಮತ್ತೆಂದಿಗೂ ಅದು ಪುನರಾವರ್ತನೆಗೊಳ್ಳಲಿಲ್ಲ.

“The last abortine expedition closed the long series of irruptions by the Mohamadan Conquerors, who had for seven hundred years swept down from the north upon the plains of India, and had founded dynasties which were only sustained by constant recruitment from their native countries beyond the mountains. Thenceforward the Sikhs were not only to hold the line of the Indus river against fresh invaders, they also cut off the channels of supply between central Asia and the Mohamedan powers to the south of the Sutlej, who were moreover kept in constant alarm by this actively aggressive Hindu community on their northern frontier. . . .'

(P 210 The Rise and Expansion of British Dominion in India by Alfred Lyall)

ಸಿಖ್ಖರ ಸಾಮ್ರಾಜ್ಯ ಸ್ಥಾಪನೆಗೆ ಅದು ನಾಂದಿ ಹಾಡಿ, ಸರದಾರ ರಣಜಿತ್ ಸಿಂಗ್ ಅದರ ಮುಂದಾಳತ್ವ ವಹಿಸುವ ಕಾರ್ಯ ಶುರುವಾಗಿತ್ತು.

ಸರ್ ಆಲ್‌ಫ್ರೆಡ್ ಲ್ಯಾಲ್‌ರ ಮಾತುಗಳು ಇದಕ್ಕೆ ಪೂರಕವಾಗಿದೆ ಎನ್ನಬಹುದು.

“But the Sikhs were making it impossible for any Asiatic

army to penetrate into the heart of the Punjab, without countering the obstinate resistence of men united to defend their faith and their fatherland, in a spirit very unfamiliar to the quiescence of ordinary Hinduism. - (P 210 The Rise and Expansion of British Dominion in India by Alfred Lyall.)

ಅಧ್ಯಾಯ ೭

ಮಹಾರಾಜ ರಣಜಿತ್ ಸಿಂಗ್ – ಆಳ್ವಿಕೆ

"You who govern public affairs, What need have you to employ punishments? Love virtue, and the people will be virtuous, the virtues of a superior man are like the wind; the virtues of a common man are like the grass; the grass, when the wind passes over it, bends"

- Confucius

"ನೀವು ಯಾವ ಸಾರ್ವಜನಿಕ ವ್ಯವಹಾರಗಳನ್ನು ಆಳಿ ನಿಭಾಯಿಸುತ್ತಿದ್ದೀರೋ, ಶಿಕ್ಷೆಯನ್ನು ನೀಡುವ ಕಾರಣವಾದರೂ ಏನಿದೆ? ಉತ್ಕೃಷ್ಟತೆಯ ಗುಣಧರ್ಮವನ್ನು ಪ್ರೀತಿಸಿ, ಆಗ ಪ್ರಜೆಗಳು ಗುಣವಂತರಾಗುವರು. ಉಚ್ಚ ಮಾನವನ ಉತ್ಕೃಷ್ಟತೆ ಗಾಳಿಯ ಹಾಗೆ; ಸಾಮಾನ್ಯ ಮನುಷ್ಯನ ಉತ್ಕೃಷ್ಟತೆ ಹುಲ್ಲಿನ ಹಾಗೆ; ಹುಲ್ಲು, ಗಾಳಿ ಅದರ ಮೇಲೆ ಬೀಸಿದಾಗ, ಬಗ್ಗುತ್ತದೆ."

– ಕನ್‌ಫ್ಯೂಶಿಯಸ್

ಅಫ್ಘನ್ ರಾಜ ಶಾ ಜಮಾನ್ ಸ್ವದೇಶಕ್ಕೆ ಹಿಂದಿರುಗಿದನಂತರ ಭಂಗೀ ಸಿಖ್ ಸರದಾರರಾದ ಲಹ್ನಾ ಸಿಂಗ್, ಗುಜರ್ ಸಿಂಗ್ ಮತ್ತು ಸೋಭಾ ಸಿಂಗ್‌ರ ಮೂವರು ಪುತ್ರರಾದ ಚೇತ್‌ಸಿಂಗ್, ಸಾಹಿಬ್ ಸಿಂಗ್ ಮತ್ತು ಮೋಹನ್ ಸಿಂಗ್‌ರ ವಶಕ್ಕೆ ಲಾಹೋರ್ ನಗರ ಬಂದು, ಅವರು ನಗರ ಮತ್ತು ಸುತ್ತಮುತ್ತಲಿನ ನಾಡನ್ನು ಆಳತೊಡಗಿದರು. ಆದರೆ ಅವರ ಆಡಳಿತ ಮಾತ್ರ ಸುಸೂತ್ರವಾಗಿರದೆ, ಕ್ರೂರತನ, ಹಿಂಸೆ ಮತ್ತು ಸ್ವೇಚ್ಛಾಚಾರಗಳಿಂದ ಕೂಡಿತ್ತು. ಪ್ರಜೆಗಳು, ಅದರಲ್ಲೂ ಬಹುಸಂಖ್ಯಾ ಮುಸ್ಲಿಮರು ಸಿಖ್ ಸಿರದಾರರ ವಿರುದ್ಧ ದಂಗೆ ಏಳುವ ಮನಸ್ಸು ಮಾಡಿದರು. ಅವರ ನಾಯಕರಾದ ಮಿಯಾ ಆಶಾಖ್ ಮೊಹಮದ್ ಮತ್ತು ಮೊಖಾಮ್ ದಿನ್, ಸಿಖ್ ಸರದಾರರ ಕ್ರೂರ ಆಡಳಿತದ ವಿರುದ್ಧ ಸಮರ ಸಾರಿ, ತಮ್ಮ ನೆರವಿಗೆ ಇತರ ಜನಾಂಗದ ಪ್ರಮುಖರನ್ನು ಬರುವಂತೆ ಕರೆ ನೀಡಿದರು. ಸಿಖ್ ಸರದಾರರ ಕ್ರೂರ ಆಡಳಿತ, ಸ್ವೇಚ್ಛಾಚಾರ, ಆಕ್ರಮಕಾರ್ಯಗಳಿಗೆ ಬೇಸತ್ತ ಸರ್ವರೂ ಒಗ್ಗಟ್ಟಾದರು. ಪ್ರಜೆಗಳು ಒಂದು ಫಿರ್ಯಾದು ತಯಾರಿಸಿ, ಈಗಾಗಲೇ ಹೆಸರುವಾಸಿಯಾಗಿದ್ದ ರಣಜಿತ್ ಸಿಂಗ್‌ನಿಗೆ ಲಾಹೋರ್ ನಗರವನ್ನು ತನ್ನ ವಶಕ್ಕೆ ತೆಗೆದುಕೊಂಡು ತಮ್ಮ ಹಿತವನ್ನು ಕಾಪಾಡುವಂತೆ ಅದರಲ್ಲಿ ಕೋರಿದರು. ಎಲ್ಲ ಜಾತಿ, ಧರ್ಮ, ಕುಲದವರ ಕೋರಿಕೆಯ ಮೇರೆಗೆ ರಣಜಿತ್ ಸಿಂಗ್ ಲಾಹೋರ್‌ನ್ನು ಆಕ್ರಮಿಸಲು ತಯಾರಿ

ನಡೆಸಿದ. ರಣಜಿತ್ ಸಿಂಗ್‌ನನ್ನು ತಮ್ಮ ನಗರವನ್ನು ಆಕ್ರಮಿಸಿ ತಮ್ಮನ್ನು ಆಳಲು ಆರಿಸಿದ್ದು, ಅಲ್ಲಿನ ಪ್ರಜೆಗಳಿಗೆ ಮಾತ್ರವಲ್ಲದೆ ಪಂಜಾಬ್‌ನ ಇತರ ಪ್ರದೇಶಗಳಲ್ಲಿ ಆತನ ಸಾಮರ್ಥ್ಯ, ಸಂಸ್ಕೃತಿ, ಮತ್ತು ಮಾನವೀಯತೆಯ ಗುಣಗಳು ಕಾರಣವಾಗಿದ್ದವು. ಜನರ ಕಿವಿಗಳಿಗೆ ಬಿದ್ದು ಹಂಚಿ ಪ್ರಸಿದ್ಧಿ ಪಡೆದಿದ್ದ ರಣಜಿತ್ ಸಿಂಗ್. ಇದನ್ನು ಅರಿತೇ ಲಾಹೋರ್ ನಗರದ ಪ್ರಭಾವಿ ಗಣ್ಯ ಪುರುಷರು ಆತನನ್ನು ತಮ್ಮ ನಗರವನ್ನು ಆಕ್ರಮಿಸಿ, ಭಂಗೀ ಸಿಖ್‌ರ ಕ್ರೂರ ಆಡಳಿತದಿಂದ ತಮ್ಮನ್ನು ಪಾರುಮಾಡಲು ಕೋರಿದರು ಎನ್ನಲಾಗಿದೆ.

ಲಾಹೋರ್ ನಗರದ ಪ್ರಜೆಗಳ ಆಹ್ವಾನ ಸ್ವೀಕರಿಸಿದ ರಣಜಿತ್ ಸಿಂಗ್, ತನ್ನ ಸೈನ್ಯವನ್ನು ಬಲಪಡಿಸಿದ. ಅವನಿಗೆ ಸಹಾಯ ಹಸ್ತ ನೀಡಿದಳು ಸಿಖ್ ಕನ್ಹೈಯಾ ಮಿಸಾಲ್‌ಳ ನಾಯಕಿಯಾಗಿ ಮೆರೆಯುತ್ತಿದ್ದ ಅವನ ಅತ್ತೆ ರಾಣಿ ಸದಾ ಕೌರ್. ಎರಡೂ ನಾಯಕರ ಸೈನ್ಯ ಅಮೃತಸರ ತಲುಪಿ, ಅಲ್ಲಿನ ಗುಡಿಯ ಸರೋವರದಲ್ಲಿ ಮಿಂದು, ಲಾಹೋರ್‌ನತ್ತ ಪ್ರಯಾಣ ಬೆಳೆಸಿದರು. ಲಾಹೋರ್ ನಗರವನ್ನು ಪ್ರವೇಶಿಸಿದ ರಣಜಿತ್ ಸಿಂಗ್ ಮತ್ತು ಅವನ ೫೦೦೦ ಸೈನಿಕರು, ನಗರದ ಪ್ರಸಿದ್ಧ ಕೋಟೆಯನ್ನು ಪ್ರವೇಶಿಸಲು ಸಜ್ಜಾದರು. ಕೋಟೆಯ ಎಲ್ಲಾ ಬಾಗಿಲುಗಳನ್ನು ಮುಚ್ಚಿ ಒಳಗೆ ಭದ್ರವಾಗಿ ಕುಳಿತ ಭಂಗೀ ಸರದಾರರು, ತಮಗೆ ಅರಿವೇ ಇಲ್ಲದೆ, ನಗರದ ಪಿತೂರಿಗಾರರು, ಕೋಟೆಯ ಒಂದು ಬಾಗಿಲನ್ನು ತೆರೆದು ರಣಜಿತ್ ಸಿಂಗ್‌ನಿಗೆ ಕಳ್ಳತನದಲ್ಲಿ ಒಳಗೆ ತೆರಳಲು ಅನುವು ಮಾಡಿಕೊಟ್ಟರು. ಆದರೆ, ಅದಕ್ಕೆ ಒಪ್ಪದ ರಣಜಿತ್ ಸಿಂಗ್, ರಾಜಾರೋಷವಾಗಿ ಕೋಟೆಯ ಒಳಗೆ ಹೋರಾಡುತ್ತಲೇ ಒಳ ಸೇರುವ ಯೋಚನೆ ಮಾಡಿ ಜುಲೈ ೬, ೧೭೯೯ ರಂದು ತನ್ನ ೨೦೦ ಮಂದಿ ಸೈನಿಕರೊಂದಿಗೆ ಕೋಟೆಯ ತರೆದ ಬಾಗಿಲೊಳಗೆ ನುಗ್ಗಿ ಒಳಹೊಕ್ಕನು. ಭಂಗೀ ಸಹೋದರರು ನೆಪಮಾತ್ರಕ್ಕೆ ಪ್ರತಿರೋಧ ತೋರಿಸಿ, ಪಿತೂರಿಗಾರರ ಮಸಲತ್ತಿಗೆ ಮಣಿದು, ಸೋತು, ಶರಣಾಗಿ, ರಣಜಿತ್ ಸಿಂಗ್‌ನಿಂದ ಕ್ಷಮಾದಾನ ಪಡೆದು ಕೋಟೆಯಿಂದ ನಿರ್ಗಮಿಸಿದರು.

೧೬೯೯ರಲ್ಲಿ ಗುರು ಗೋವಿಂದ್ ಸಿಂಗ್‌ರಿಂದ ಸ್ಥಾಪಿತಗೊಂಡ 'ಖಾಲ್ಸಾ' ನೂರು ವರ್ಷಗಳ ನಂತರ ೧೭೯೯ರಲ್ಲಿ ರಣಜಿತ್ ಸಿಂಗ್‌ನಿಂದ ಲಾಹೋರ್ ನಗರವನ್ನು ಆಕ್ರಮಿಸಿ ಸಿಖ್ ಸಾಮ್ರಾಜ್ಯದ ಸ್ಥಾಪನೆಗೆ ನಾಂದಿ ಹಾಡಿತು. ೧, ೨

ಇತಿಹಾಸಕಾರ ಕನ್ನಿಂಗ್‌ಹ್ಯಾಮ್‌ನ ಪ್ರಕಾರ, ಕಾಬೂಲ್‌ನ್ನು ಶಾ ಜಮಾನ್ ಆಳುತ್ತಿದ್ದ (೧೭೯೩). ಆತ ಭಾರತದ ಮೇಲೆ ದಂಡೆತ್ತಿ ಬಂದು ದೆಹಲಿಯ ಮೇಲೆ ತನ್ನ ಪ್ರಭುತ್ವ ಸಾರಲು ಹಾತೊರೆಯುತ್ತಿದ್ದ. ಅವನಿಗೆ ಆಸರೆಯಾಗಿ ನಿಂತು ಭಾರತದ ಮೇಲೆ ದಂಡೆತ್ತಿ ಒಂದು ತಮ್ಮನ್ನು ವಿಧರ್ಮೀಯರ ಹಿಡಿತದಿಂದ ಪಾರು ಮಾಡಲು

---

೧. P 448 History of Sikhs by G.singh
೨. P. F Notes Death of Tippu Sulthan - 1799

ರೋಹಿಲ್ ಖಂಡದ ಪಠಾಣ ಗುಲಾಮ್ ಮೊಹಮ್ಮದ್ ಮತ್ತು ಔಧ್‌ನ ಅಸಫ್‌ದೌಲಾ, ಆಹ್ವಾನ ನೀಡಿದರು. ೧೭೯೭ರಲ್ಲಿ ಶಾ ಜುಮಾನ್ ಲಾಹೋರ್ ತಲುಪಿದ. ಸಿಖ್ಖರೊಂದಿಗೆ ಸಂಧಾನ ಮಾಡಿಕೊಂಡು ದೆಹಲಿಯತ್ತ ನುಗ್ಗಲು ಹವಣಿಸಿದ. ಆದರೆ, ಕಾಬೂಲ್‌ನಲ್ಲಿ ಅವನ ಸಹೋದರ ಮೊಹಮ್ಮದ್ ವಿಪ್ಲವ ಹೂಡಿದ ಪ್ರಯುಕ್ತ ಅಲ್ಲಿಗೆ ಹಿಂದಿರುಗಬೇಕಾಯಿತು.

೧೭೯೮ರಲ್ಲಿ ಶಾ ಜಮಾನ್ ಪುನಃ ಭಾರತದ ಮೇಲೆ ದಂಡಯಾತ್ರೆ ಪ್ರಾರಂಭಿಸಿದ. ಲಾಹೋರ್ ನಗರವನ್ನು ಯಾವ ಪ್ರತಿರೋಧವನ್ನು ಎದುರಿಸದೆ, ಆಕ್ರಮಿಸಿದ. ಕುಸ್ಸೂರ್ ನಗರ ಪ್ರದೇಶವನ್ನು ಆಳುತ್ತಿದ್ದ ಪಠಾಣ ನಿಜಾಮುದ್ದೀನ್, ಶಾ ಜುಮಾನ್‌ನ ಕಣ್ಣುಗಳಿಗೆ ಒಬ್ಬ ಪ್ರಬಲ ಹಾಗೂ ನಿಷ್ಠಾವಂತ ನಾಯಕನ ಹಾಗೆ ತೋರಿತು. ಅವನನ್ನೇ ಸಿಖ್ಖರೊಂದಿಗೆ ಸಮಾಲೋಚನೆ ಜರುಗಿಸಿ, ಶಾಂತಿ ಒಪ್ಪಂದ ಮಾಡಿಕೊಳ್ಳಲು ನೇಮಿಸಿದ. ಪಂಜಾಬ್‌ನ ಪ್ರಬಲ ಸಿಖ್ ಮಿಸಾಲರೊಂದಿಗೆ ಸಂಧಿ ಮಾಡಿಕೊಂಡರೆ, ದೆಹಲಿಯತ್ತ ತನ್ನ ಸೈನ್ಯ ಪಡೆಯನ್ನು ಸಾಗಿಸಿ, ಅಲ್ಲಿ ತನ್ನ ಧ್ವಜವನ್ನು ಹಾರಿಸುವ ಇರಾದೆ ಇಟ್ಟುಕೊಂಡಿದ್ದ ಶಾ ಜಮಾನ್‌ನಿಗೆ ನಿರಾಶೆ ಕಾದಿತ್ತು. ಅವನ ಸಹೋದರ ಕಾಬೂಲ್‌ನಲ್ಲಿ ನೆರೆಯ ಪರ್ಶಿಯಾ ಬಾದ್‌ಶಹಾನೊಂದಿಗೆ ಕೈ ಜೋಡಿಸಿ, ಶಾ ಜಮಾನ್‌ನ್ನು ಪದಚ್ಯುತಿ ಮಾಡಲು ಸಿದ್ಧನಾಗಿದ್ದ ಸಂಗತಿ ಅರಿತು, ಶಾ ಜಮಾನ್ ತನ್ನೂರಿಗೆ ತ್ವರೆಯಿಂದ ಹಿಂದಿರುಗಬೇಕಾಯಿತು. ಅವನು ತನ್ನೊಂದಿಗೆ ತಂದಿದ್ದ ಅನೇಕ ತೋಪುಗಳನ್ನು ತುಂಬಿಹರಿಯುತ್ತಿದ್ದ ಜೀಲಂ ನದಿಯ ಮೇಲೆ ಸಾಗಿಸುವ ಮಹತ್ವಾಕಾರ್ಯಕ್ಕೆ ರಣಜಿತ್ ಸಿಂಗ್‌ನ ನೆರವು ಕೋರಿದ. ರಣಜಿತ್ ಸಿಂಗ್ ಅವನ ಕೋರಿಕೆಯನ್ನು ಮನ್ನಿಸಿದ. ಈಗಾಗಲೇ ರಣಜಿತ್ ಸಿಂಗ್‌ನ ಪ್ರಾಬಲ್ಯ, ರಣಕೌಶಲ್ಯ, ಚಾತುರ್ಯಗಳ ಅರಿವು ಶಾ ಜುಮಾನ್‌ಗೆ ಆಗಿತ್ತು. ರಣಜಿತ್ ಸಿಂಗ್, ಶಾ ಜುಮಾನ್‌ನ ಕೋರಿಕೆಯನ್ನು ಮನ್ನಿಸಿ, ಅತಿಭಾರದ ತೋಪುಗಳನ್ನು ಜೀಲಂ ನದಿಯಾಚೆ ಕಡೆ ಅತ್ಯಂತ ಜಾಗರೂಕತೆಯಿಂದ ಸಾಗಿಸಿ, ಶಾಗೆ ಒಪ್ಪಿಸಿದ. ಅದೇ ಒಂದು ನೆಪ ಮಾಡಿಕೊಂಡ ರಣಜಿತ್‌ಸಿಂಗ್, ಲಹೋರ್ ನಗರವನ್ನು ತನ್ನ ಆಧಿಪತ್ಯಕ್ಕೆ ನೀಡುವಂತೆ ಶಾನ ಮನ ಬದಲಿಸಿದ. ಅಂದಿನಿಂದ ರಣಜಿತ್‌ಸಿಂಗ್‌ನ ಪ್ರತಿಷ್ಠೆ ಹೆಚ್ಚಿತಲ್ಲದೆ, ಅವನಿಗೆ ಒಂದು ರಜಧಾನಿ ದೊರೆತು ಅವನು ಪಂಜಾಬ್ ರಾಜ್ಯದ ರಾಜನಾಗಿ ಮೆರೆಯುವಂತನಾದ. *

ಯಾವುದೇ ಆಕ್ರಮಣಕಾರರು, ಊರು, ನಗರ ಹಳ್ಳಿ ಪ್ರದೇಶಗಳನ್ನು ಜಯಿಸಿದನಂತರ, ಊರು ಕೊಳ್ಳೆ ಹೊಡೆಯುವ ಹವ್ಯಾಸ ಇರಿಸಿಕೊಂಡಿರುವುದು ಸರ್ವೇಸಾಮಾನ್ಯವಾಗಿದ್ದುದನ್ನು ಇತಿಹಾಸದುದ್ದಕ್ಕೂ ಕಂಡುಬರುತ್ತವೆ. ಆದರೆ ಇದಕ್ಕೆ ಅಪವಾದವೆಂಬಂತೆ, ರಣಜಿತ್ ಸಿಂಗ್, ಲಾಹೋರ್ ನಗರವನ್ನು

---

* P 120 History of Sikhs by Cunningham

ವಶಪಡಿಸಿಕೊಂಡನಂತರ, ಊರು ಕೊಳ್ಳೆ ಹೊಡಯವುದನ್ನಾಗಲೀ, ಆಸ್ತಿಪಾಸ್ತಿ ಧ್ವಂಸವನ್ನಾಗಲೀ, ಪ್ರಾಣಹಾನಿ ಮಾಡುವುದನ್ನಾಗಲೀ ಜರುಗಿಸದಂತೆ ಕಟ್ಟುನಿಟ್ಟಿನ ಆಜ್ಞೆ ನೀಡಿದ. ಜನರಲ್ಲಿ ವಿಶ್ವಾಸ ಮೂಡುವಂತೆ ಶಾಂತಿ ಕಾಪಾಡಲು ಸೂಕ್ತ ಕಾರ್ಯಕ್ರಮ ಕೈಗೊಂಡ.

ಲಾಹೋರ್‌ನ್ನು ಆಕ್ರಮಿಸಿ ಆಳತೊಡಗಿದನಂತರ, ರಣಜಿತ್ ಸಿಂಗ್‌ನ ದೃಷ್ಟಿ ಸುತ್ತಮುತ್ತಲಿನ ಪ್ರದೇಶಗಳತ್ತ ಹಾಯಿಸಿ, ನೆರೆಯ ಕಸೂರ್ ನಗರ ಪ್ರದೇಶವನ್ನು ಆಳುತ್ತಿದ್ದ ಪಠಾಣರ ಮೇಲೆ ಅವನ ದೃಷ್ಟಿ ಬಿದ್ದು, ಅದನ್ನು ಆಕ್ರಮಿಸಲು ಮುಂದಾದ. ಕಸೂರ್‌ನ ನವಾಬ ನಿಜಾಮುದ್ದೀನ್‌ನಿಗೆ ರಣಜಿತ್ ಸಿಂಗ್‌ನ ದೃಷ್ಟಿ ತನ್ನ ಮೇಲೆ ಬಿದ್ದಿರುವ ಸಂಗತಿ ಅರಿತು ಭಯಗೊಂಡ. ಅವನು, ರಣಜಿತ್‌ಸಿಂಗ್‌ನ ವೈರಿಗಳಾದ ಭಂಗೀ ಸಹೋದರರ ಸಹಾಯ ಕೇಳಿ, ಅವರ ಸೈನ್ಯದೊಂದಿಗೆ ಲಾಹೋರ್‌ನ್ನು ಮುತ್ತಿಗೆ ಹಾಕಿದ. ಅಷ್ಟರಲ್ಲಿ, ಭಂಗೀ ಸರದಾರ ಗುಲಾಬ್‌ಸಿಂಗ್ ಸಾವನ್ನಪ್ಪಿದ. ಅವರ ಮುತ್ತಿಗೆ ಸಡಿಲಗೊಂಡು, ರಣಜಿತ್ ಸಿಂಗ್ ತನ್ನ ನಗರವನ್ನು ರಕ್ಷಿಸಿಕೊಂಡ.

ರಣಜಿತ್ ಸಿಂಗ್‌ನಿಗೆ ಸಹಾಯ ಹಸ್ತ ನೀಡದೆ, ಅವನ ಮತಬಾಂಧವರು ಭಾರತೀಯರಲ್ಲಿ ನೆಲವೂರಿದ್ದ 'ಅನೈಕ್ಯತೆಯ ವ್ಯಾಧಿ' ಅವರನ್ನು ಆವರಿಸಿ, ಅವನ ವಿರುದ್ಧ ಸಮರ ಹೂಡಿದರು. ಅವರಲ್ಲಿ ಪ್ರಮುಖರಾದ ದಾಲ್ ಸಿಂಗ್ ಮತ್ತು ಸಾಹಿಬ್ ಸಿಂಗ್ ಭಂಗೀಯವರನ್ನು ರಣಜಿತ್ ಸಿಂಗ್ ಎದುರಿಸಿ, ಸೋಲಿಸಿದ. ಈ ಮೊದಲೇ (೧೮೦೦) ಜಮ್ಮು ರಾಜನನ್ನು ಸೋಲಿಸಿ ಅವನನ್ನು ತನ್ನ ಸಾಮಂತನನ್ನಾಗಿ ಮಾಡಿಕೊಂಡು ಅವನಿಂದ ಅಪಾರ ಪ್ರಮಾಣದ ಧನದ್ರವ್ಯಗಳನ್ನು ವಸೂಲಿ ಮಾಡಿದ.

ರಣಜಿತ್ ಸಿಂಗ್‌ನ ಶಕ್ತಿ, ಪ್ರಭಾವ, ಆಡಳಿತಗಳಿಂದ ಪ್ರಭಾವಗೊಂಡ ಬ್ರಿಟಿಷರು ಅವನ ಸ್ನೇಹ ಬಯಸಿ, ಅವನಿಗೆ ತಮ್ಮ ದೂತನನ್ನು ಕಳುಹಿಸಿ, ಖಿಲ್ಲತ್ ಮತ್ತು ಸಂಭಾವನೆ ನೀಡಿ ಗೌರವಿಸಿದರು. ಈಗಾಗಲೇ ಭಾರತದ ಬಹುಭಾಗವನ್ನು ಆಕ್ರಮಿಸಿಕೊಂಡು, ಮರಾಠರನ್ನೂ, ಮೊಘಲರನ್ನೂ ತಮ್ಮ ಕೈ ಮುಷ್ಠಿಯಲ್ಲಿರಿಸಿಕೊಂಡಿದ್ದ ಬ್ರಿಟಿಷರು ಬಲಿಷ್ಠ ಸಿಖ್ ಸರದಾರ ರಣಜಿತ್ ಸಿಂಗ್‌ನ ಪ್ರಾಬಲ್ಯಕ್ಕೆ ಮಣಿದು ಅವನ ಸ್ನೇಹ ಹಸ್ತಕ್ಕೆ ಕೈ ಚಾಚಿದರು.

೧೮೦೧ರಲ್ಲಿ ರಣಜಿತ್ ಸಿಂಗ್, ಲಾಹೋರ್ ನಗರದಲ್ಲಿ ಸಿಂಹಾಸನಾರೂಢನಾಗಿ, ದರ್ಬಾರ್ ಜರುಗಿಸಿ, ನೆರೆದ ಗಣ್ಯರ ಸಮ್ಮುಖದಲ್ಲಿ, ತನ್ನನ್ನು 'ಮಹಾರಾಜ' ನೆಂದು ಘೋಷಿಸಿಕೊಂಡ. ತನ್ನ ಸಾಮಂತರಿಂದ ಕಪ್ಪ ಕಾಣಿಕೆ, 'ನಜರಾನಾ' ಗಳನ್ನು ಪಡೆದುಕೊಂಡ ಗುರು ನಾನಕ್‌ರ ಹೆಸರಿನಲ್ಲಿ ನಾಣ್ಯಗಳನ್ನು ಅಚ್ಚುಹಾಕಿಸಿ, ಸಿಖ್ ಸಮ್ರಾಜ್ಯದ ಸ್ಥಾಪನೆಗೆ ಅಡಿಪಾಯದ ಮುದ್ರೆ ಹಾಕಿದ.

ಪಂಜಾಬ್‌ನ ಒಂದು 'ಗುಜ್ರಾತ್' ಎಂಬ ನಗರ ಪ್ರದೇಶದ ಸರದಾರ ಸಾಹಿಬ್‌ಸಿಂಗ್, ಕಸೂರ್‌ನ ನವಾಬ್ ನಿಜಾಮುದ್ದೀನ್ ನೊಂದಿಗೆ ಕೈ ಜೋಡಿಸಿ, ರಣಜಿತ್ ಸಿಂಗ್‌ನ

ವಿರುದ್ಧ ಪಿತೂರಿ ಜರುಗಿಸಲು ಶುರು ಮಾಡಿದ. ಕೆರಳಿದ ರಣಜಿತ್ ಸಿಂಗ್ ಅವರನ್ನು ಸದೆಬಡಿಯಲು ಒಂದು ಸೈನ್ಯ ಕಳುಹಿಸಿ, ಅವರನ್ನು ಸೆರೆಹಿಡಿದ. ಆದರೆ ಅವರನ್ನು ಹಿಂಸಿಸದೆ, ಅವರಿಗೆ ಕ್ಷಮಾಪಣೆ ನೀಡಿ, ಅವರಿಂದ ಕಪ್ಪ ವಸೂಲಿ ಮಾಡಿದ.

ಕ್ರಮೇಣ ರಣಜಿತ್ ಸಿಂಗ್ ತನ್ನ ಸುತ್ತಮುತ್ತಲಿನ ವೈರಿಗಳಿಂದ ಆಕ್ರಮಣಗೊಂಡ ಕಾಂಗ್ರಾ, ಅಮೃತಸರ, ಗುಜ್ರಾತ್, ಜೀಲಮ್ ನದಿ ಪ್ರದೇಶಗಳ ಮೆಲೆ ದಂಡೆತ್ತಿ ಆ ಪ್ರದೇಶಗಳ ಮೇಲೆ ತನ್ನ ಹತೋಟಿಯನ್ನು ಹೇರಿದ. ಪ್ರಬಲ ಸಿಖ್ ಸರದಾರಗಳಾದ ಅಹ್ಲೂವಾಲಿಯಾ, ಕನ್ಹೈಯಾ, ನಕಾಯಿ ಮುಂತಾದವರು ಅವನ ಸಾಮಂತರಾದರು.

ಬಲಿಷ್ಠ ಪಠಾಣರು ಆಳುತ್ತಿದ್ದ ಮುಲ್ತಾನ್ ಮತ್ತು ಕಸೂರ್‌ಗಳ ಮೇಲೆ ದಂಡೆತ್ತಿ ಅವರನ್ನು ಸೋಲಿಸಿ, ಅವರನ್ನು ತನ್ನ ಸಾಮಂತರನ್ನಾಗಿ ಮಾಡಿಕೊಂಡ ರಣಜಿತ್‌ಸಿಂಗ್.

ಸಿಖ್‌ರ ಪವಿತ್ರನಗರ ಅಮೃತಸರವನ್ನು ವಶಮಾಡಿಕೊಳ್ಳದೆ, ಸಿಖ್ ಸಾಮ್ರಾಜ್ಯದ ಕನಸು ನನಸಾಗಿ ಉಳಿಯುತ್ತದೆ ಮತ್ತು ಪವಿತ್ರ ನಗರ ಸಿಖ್‌ರ ಪ್ರತಿಷ್ಠೆಯ ಪ್ರತೀಕವಾಗಿರುವಾಗ, ಅದು ತನ್ನ ವೈರಿಗಳಾದ ಭಂಗೀ ಸಿಖ್ ಸರದಾರರ ಕೈಲಿ ಉಳಿದುಕೊಂಡಿರುವುದು ರಣಜಿತ್ ಸಿಂಗ್‌ನ ಮನಸ್ಸಿಗೆ ಸಹಿಸಲಾರದ ಸಂಗತಿಯಾಗಿತ್ತು. ಅಮೃತಸರದ ಮೇಲೆ ಆಕ್ರಮಿಸಲು ಏನಾದರೂ ಒಂದು ಕಾರಣ ಬೇಕಾಗಿತ್ತು. ಯಾಕೆಂದರೆ ತನ್ನ ಮತಬಾಂಧವರೆ ಆದ ಭಂಗೀ ಸಿಖ್ ಸರದಾರ ಸಾಹಿಬ್‌ಸಿಂಗ್ ಭಂಗೀ ಮರಣಿಸಿದ ನಂತರ ಅವನ ಎಳೇ ಮಗ ಗುರುದತ್ತ್ ಸಿಂಗ್‌ನಿಗೆ ಅಧಿಕಾರ ದೊರಕಿದ್ದರೂ, ಅವನ ತಾಯಿ ಮಾಯಿ ಸುಖಾನ್, ಮಗನ ಪರವಾಗಿ ರಾಜ್ಯವಾಳುತ್ತಿದ್ದಳು. ರಣಜಿತ್ ಸಿಂಗ್, ಅಮೃತಸರದ ಹಿಂದೂ ವ್ಯಾಪಾರಿ ರೂರ್ ಮಲ್, ಸಿಖ್ ಸರದಾರ್ ದಿಯೋರಿ ಮತ್ತು ಮುಸ್ಲಿಮ್ ಗಣ್ಯಪುರುಷ ಶೇಖ್ ಕಮಲ್‌ದೀನ್‌ರ ಸಹಾಯ ಪಡೆದ. ೧೮೦೨ರಲ್ಲಿ ಅವನು ಭಂಗೀ ಸರದಾರರ ವಶದಲ್ಲಿದ್ದ 'ಭಂಗೀಯಾನ್ ದಿ ತೋಪ್' ಎಂಬ ತುಪಾಕಿಯನ್ನು ತನ್ನ ವಶಕ್ಕೆ ನೀಡಬೇಕೆಂದು ಒಂದು ಕುಂಟು ನೆಪ ಒಡ್ಡಿದ. ಈ ತೋಪು ಕಾಬೂಲ್ ರಾಜ ಅಬ್ದಾಲಿ ಲಾಹೋರ್‌ನ್ನು ಆಕ್ರಮಿಸಿದಾಗ, ಅಲ್ಲಿನ ಹಿಂದೂ ಸಿಖ್‌ರ ಮನೆಗಳನ್ನೂ ಸೂರೆಮಾಡಿ, ಪಾತ್ರೆ ಸಾಮಗ್ರಿ ದೋಚಿ, ಅವುಗಳಿಂದ ಒಂದು ಬೃಹತ್ ಗಾತ್ರ ತೋಪನ್ನು ನಿರ್ಮಿಸಿ ಕೋಟೆಯಲ್ಲಿರಿಸಿದ್ದ. ಭಂಗೀ ಸಹೋದರರು ಲಾಹೋರ್‌ನ್ನು ಆಕ್ರಮಿಸಿ ಆಳತೊಡಗಿದಾಗ ಅದನ್ನು ತಮ್ಮ ವಶಕ್ಕೆ ಪಡೆದುಕೊಂಡು ಅಮೃತಸರದಲ್ಲಿರಿಸಿಕೊಂಡರು. ಇದೇ ತುಪಾಕಿಯನ್ನು ರಣಜಿತ್ ಸಿಂಗ್, ತನ್ನ ವಶಕ್ಕೆ ನೀಡಬೇಕೆಂದು ಕೇಳಿದ. (ಮುಂದೆ ಈ ತುಪಾಕಿಯನ್ನು ಬ್ರಿಟಿಷರು ಸಿಖ್‌ರ ವಿರುದ್ಧ ಜರುಗಿಸಿದ ಯುದ್ಧದಲ್ಲಿ ಜಯ ಗಳಿಸಿದ ನಂತರ, ಲಾಹೋರ್‌ಗೆ ಕೊಂಡೊಯ್ದು ಅಲ್ಲಿ ಒಂದು ಸ್ಮಾರಕ ಚಿಹ್ನೆಯಾಗಿ, ನಗರದ ಒಂದು ಪ್ರಮುಖ ರಸ್ತೆಯಲ್ಲಿರಿಸಿದರು. ಅದು ಈಗಲೂ ನಿಂತಿದೆ ಎಂದಿದ್ದಾರೆ ಇತಿಹಾಸಕಾರರು. ೩

---

೩. P 452 FN Histrory of Sikhs by G. Singh

ಭಂಗೀ ಸರದಾರರಿಂದ ಯಾವ ಸೂಕ್ತ ಉತ್ತರ ಅಥವಾ ಪ್ರತಿಕ್ರಿಯೆ ಬರದಿದ್ದರಿಂದ, ಅದು ಒಂದು ಪ್ರತಿಷ್ಠೆಯಾಗಿ ಉಳಿದಿದ್ದರಿಂದ, ಉಪಾಯ ಕಾಣದ ರಣಜಿತ್ ಸಿಂಗ್ ತನ್ನ ಸೈನ್ಯದೊಂದಿಗೆ ಅಮೃತಸರಕ್ಕೆ ಮುತ್ತಿಗೆ ಹಾಕಿದ. ಹಸುಳೆಯಾಗಿದ್ದ ಭಂಗೀ ಸರದಾರ ಮತ್ತು ಅವನ ತಾಯಿ ನಗರ ತ್ಯಜಿಸಿ ರಣಜಿತ್ ಸಿಂಗ್‌ನಿಗೆ ನಗರವನ್ನು ಆಕ್ರಮಿಸಿಕೊಳ್ಳಲು ಅನುವು ಮಾಡಿಕೊಟ್ಟರು. ಅನಾವಶ್ಯಕ ರಕ್ತ ಚೆಲ್ಲುವುದನ್ನು ತಪ್ಪಿಸಿ, ಪವಿತ್ರ ನಗರವನ್ನು ವಶಪಡಿಸಿಕೊಳ್ಳಲು ಸಹಾಯ ಮಾಡಿದ ಒಬ್ಬ ಅಕಾಲಿ ಫೂಲ್ ಸಿಂಗ್ ಎಂಬಾತ.

ಅಮೃತಸರವನ್ನು ವಶಪಡಿಸಿಕೊಂಡನಂತರ, ರಣಜಿತ್ ಸಿಂಗ್‌ನ ದೃಷ್ಟಿ, ಚಾಂಗ್ ಮತ್ತು ಮುಲ್ತಾನ್ ನಗರಗಳ ಮೇಲೆ ಬಿತ್ತು. ಯಾಕೆಂದರೆ, ಈ ನಗರ ಪ್ರದೇಶಗಳು ಕಾಬೂಲ್ ರಾಜ ಶಾ ಜಮಾನ್‌ನಿಗೆ ಅಧೀನವಾಗಿದ್ದು, ಅವನ ಸಾಮಂತ ಪಠಾಣರು ಆಳುತ್ತಿದ್ದರು. ಆದರೆ ಕಾಬೂಲ್‌ನಲ್ಲಿ ಶಾ ಜಮಾನ್ ಸ್ವತಃ ತನ್ನ ಸಹೋದರನಿಂದಲೇ ವಿದ್ರೋಹ ಎದುರಿಸಿ, ಸೋತು ಸೆರೆಯಾಗಿ ಕಣ್ಣುಗಳನ್ನು ಕೀಳಿಸಿಕೊಂಡು ಹಿಂಸೆಗೀಡಾದ. ಅವನ ಸಿಂಹಾಸನವನ್ನು ಕಿತ್ತುಕೊಂಡ ಸಹೋದರ ಮೊಹಮ್ಮದ್ ಮಾತ್ರ ನೆಮ್ಮದಿಯಾಗಿ ಬಾಳಲಾಗಲಿಲ್ಲ. ಅವನ ಇನ್ನೊಬ್ಬ ಸಹೋದರ ಶಾ ಶೂಜಾ ಎಂಬಾತ, ೧೮೦೩ರಲ್ಲಿ, ಮೊಹಮ್ಮದ್‌ನನ್ನು ಓಡಿಸಿ, ತಾನೇ ಸಿಂಹಾಸನವನ್ನು ಏರಿದ. ಕಾಬೂಲ್‌ನಲ್ಲಿ ಜರುಗುತ್ತಿದ್ದ ಅಜಾಗರೂಕತೆ, ಲಾಹೋರ್‌ನಲ್ಲಿ ರಾಜ್ಯಭಾರ ಮಾಡುತ್ತಿದ್ದ ಸಿಖ್ ಮಹಾರಾಜ ರಣಜಿತ್ ಸಿಂಗ್‌ನಿಗೆ ತನ್ನ ಸ್ಥಾನ ಭದ್ರಪಡಿಸಿಕೊಳ್ಳಲು ಸದವಕಾಶ ಒದಗಿ ಬಂದಿತ್ತು.

೧೮೦೪ರಲ್ಲಿ ರಣಜಿತ್ ಸಿಂಗ್, ತನ್ನ ಸಿಖ್ ಬಾಂಧವರನ್ನು, ಸರದಾರರನ್ನು ಸೈನ್ಯದಲ್ಲಿ ಅಧಿಕಾರ ನೀಡಿ, ಗೌರವಿಸಿದ. ಅವನು ಮುಸ್ಲಿಮ್ ಸರದಾರರಿಗೂ ಸ್ಥಾನ ನೀಡಿ ಗೌರವಿಸಿದ. ಅವರಲ್ಲಿ ಘೌಸ್‌ಖಾನ್ ಮತ್ತು ರೋಶನ್ ಖಾನ್ ಹಿಂದೂಸ್ಥಾನೀ ಎಂಬ ಇಬ್ಬರು ಪಠಾಣರ ಹೆಸರನ್ನು ಇತಿಹಾಸಕಾರರು ನೀಡಿದ್ದಾರೆ. ೪

ಈ ಮಧ್ಯೆ ಪಾನೀಪತ್ ಯುದ್ಧದಲ್ಲಿ ಅಬ್ದಾಲಿ ವಿರುದ್ಧ ಸೋತ ಮರಾಠಾ ಸರದಾರರು ಪುನಃ ತಮ್ಮ ಪ್ರಾಬಲ್ಯವನ್ನು ಉತ್ತರದ ಭಾರತದಲ್ಲಿ ಸ್ಥಾಪಿಸುವ ಸಲುವಾಗಿ ಪ್ರಯತ್ನ ಮಾಡುತ್ತಿದ್ದರು. ಅವರಲ್ಲಿ ಇಂದೋರ್‌ನ ಹೋಳ್ಕರ್ ಸರದಾರ ಜಸವಂತ್ ರಾವ್ ಪ್ರಮುಖನಾಗಿದ್ದ. ಅವನ ವಿರುದ್ಧ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಲಾರ್ಡ್ ಲೇಕ್ ಮಹಾಶಯ ಸೈನ್ಯಾಚರಣೆ ಜರುಗಿಸಿ, ಪಂಜಾಬ್‌ದತ್ತ ಸಾಗುತ್ತಿದ್ದ ಹೋಲ್ಕರ್‌ನನ್ನು ಸೋಲಿಸಲು ಅವನನ್ನು ಹಿಂಬಾಲಿಸಿದ. ಈಗಾಗಲೇ ಬ್ರಿಟಿಷ್‌ರ ಬಲಿಷ್ಠತೆಯನ್ನು ಮನಗಂಡಿದ್ದ ಹೋಲ್ಕರ್, ರಣಜಿತ್ ಸಿಂಗ್‌ನೊಂದಿಗೆ ಸಂಧಿ ಮಾಡಿಕೊಂಡು ಅವರ ವಿರುದ್ಧ ಹೋರಾಡಲು ಮನಸ್ಸು ಮಾಡದೆ, ಲಾರ್ಡ್ ಲೇಕ್ ಮಹಾಶಯನೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡು ಸ್ವಸ್ಥಾನಕ್ಕೆ ಹಿಂದಿರುಗಿದ.

---

೪. P 453 History of Sikhs by G.Singh

ಮರಾಠರ ಪ್ರಾಬಲ್ಯ ಉತ್ತರ ಹಿಂದೂಸ್ಥಾನದಲ್ಲಿ ಕೊನೆಗೊಂಡು, ಅವರು ಮಧ್ಯೆ ಹಿಂದೂಸ್ಥಾನದಲ್ಲಿ ತಮ್ಮ ಸ್ಥಾನ ಭದ್ರಪಡಿಸಿಕೊಂಡು ಆರಾಮಾಗಿ ಬಾಳತೊಡಗಿದರು.

ರಣಜಿತ್ ಸಿಂಗ್‌ನ ಸಿಖ್ ಸಾಮ್ರಾಜ್ಯದ ವಿಸ್ತರಣೆ ಹಂತಹಂತವಾಗಿ ವಿಸ್ತಾರಗೊಂಡು, ಪಂಜಾಬಿನ ಅನೇಕ ನಗರಗಳು, ಪ್ರದೇಶಗಳು ರಾಜನ ಆಳ್ವಿಕೆಗೆ ಒಳಪಟ್ಟವು. ಪಾಟಿಯಾಲಾದ ಸಿಖ್ ರಾಜ ಸಾಹಿಬ್ ಸಿಂಗ್ ಮತ್ತು ಅವನ ರಾಣಿ ಅವ್ರುಸ್ ಕೌರಳ ಮಧ್ಯ ವಿರಸ ಏರ್ಪಟ್ಟು, ರಾಣಿ ತನ್ನ ಎಳೇ ಮಗನ ಹೆಸರಿನಲ್ಲೇ ತಾನೇ ರಾಜ್ಯವಾಳುವ ಆಕಾಂಕ್ಷೆ ಹೊತ್ತು ಪಿತೂರಿ ಶುರು ಹಚ್ಚಿದಳು. ಇದೇ ಸಮಯದಲ್ಲಿ ನೆರೆಯ ನಾಭಾದ ಸಿಖ್ ಸರದಾರ ಜಸವಂತ್ ಸಿಂಗ್, ದೋಲಾಧಿ ಹಳ್ಳಿಯನ್ನು ವಶದಲ್ಲಿರಿಸಿಕೊಳ್ಳಲು ಪಾಟಿಯಾಲಾದ ರಾಜನೊಂದಿಗೆ ವ್ಯಾಜ್ಯ ಹೂಡಿದ. ಎರಡೂ ಸಿಖ್ ಸೈನ್ಯಗಳು ಹೋರಾಡಿ ರಕ್ತ ಹರಿಸಿದವು. ಸುದ್ದಿ ಅರಿತ ರಣಜಿತ್ ಸಿಂಗ್ ಮಧ್ಯ ಪ್ರವೇಶಿಸಿದ. ಇಬ್ಬರ ಜಗಳ ಮೂರನೆಯವನಿಗೆ ಲಾಭವಾಗುವ ರೀತಿಯಲ್ಲಿ, ರಣಜಿತ್ ಸಿಂಗ್, ಎರಡು ಸಿಖ್ ಸೈನ್ಯಗಳನ್ನು ಸೋಲಿಸಿ, ದೊಲಾದಿಯನ್ನು ತಾನೇ ಆಕ್ರಮಿಸಿ ವಶಪಡಿಸಿಕೊಂಡು, ಮುಂದೆ ಅದನ್ನು ಪಾಟಿಯಾಲಾ ರಾಜನಿಗೆ ಬಿಟ್ಟುಕೊಟ್ಟ. ಆದರೆ ಪಾಟಿಯಾಲಾ ರಾಜ ರಾಣಿಯರ ಮಧ್ಯೆ ಇದ್ದ ವಿರಸ ಬಿಕ್ಕಟ್ಟನ್ನು ಪರಿಹರಿಸಲಾಗದೆ ಲಾಹೋರ್‌ಗೆ ಹಿಂದಿರುಗಿದ. ಹಿಂದಿರುಗುವಾಗ, ಲೂಧಿಯಾನಾ ನಗರವನ್ನು ಆಕ್ರಮಿಸಿದ. ಈ ಲೂಧಿಯಾನ ನಗರವನ್ನು ಪಠಾಣ್ ಲೋಧಿಗಳು ೧೪೮೦ರಲ್ಲಿ ಸ್ಥಾಪಿಸಿದ್ದರು. ಅದು ಕ್ರಮೇಣ ಮುಸ್ಲಿಮ್ ರಾಜಪುತ್ರನಾದ ರಾಯ್ ಇಲಿಯಾಸ್ ಖಾನ್‌ನಿಗೆ ಸೇರಿ, ಅವನ ಇಬ್ಬರು ಪತ್ನಿಯರು ಅದನ್ನು ಆಳಿಕೊಂಡಿದ್ದರು. ರಣಜಿತ್ ಸಿಂಗ್ ಆ ವಿಧವೆಯರನ್ನು ನಗರದಿಂದ ಓಡಿಸಿ, ಅದನ್ನು ತನ್ನ ವಶಪಡಿಸಿಕೊಂಡನು. ನಗರವನ್ನು ಜಿಂದ್‌ನ ರಾಜನ ವಶಕ್ಕೆ ನೀಡಿ ಆತನಿಂದ ಕಪ್ಪ ವಸೂಲಿ ಮಾಡಿದನು.

ರಣಜಿತ್ ಸಿಂಗ್ ತನ್ನ ದಂಡಯಾತ್ರೆಯನ್ನು ಪೂರ್ವಪ್ರದೇಶದ ಅಂಬಾಲಾ ತನಕ ಜರುಗಿಸಿ ತನ್ನೂರಿಗೆ ಹಿಂದಿರುಗಿದ. ಕಾರಣ ಅಂಬಾಲಾದಲ್ಲಿ ಬ್ರಿಟಿಷ್‌ರು ಭದ್ರವಾಗಿ ತಳ ಊರಿದ್ದರು. ರಣಜಿತ್ ಸಿಂಗ್‌ನ ಜಗರಾನ್, ಬಡ್ಡೋವಾಲ್, ತಲ್‌ವಾಂಡಿ, ಧಾಖಾ ಮತ್ತು ಬಾಸಿಯಾ ನಗರಗಳು ಅವನ ವಶವಾದವು. ರಣಜಿತ್ ಸಿಂಗ್, ಆ ಪ್ರದೇಶಗಳನ್ನು ತನ್ನ ನೆಚ್ಚಿನ ಸರದಾರಿಗೆ ನೀಡಿ ಅವರಿಂದ ಕಪ್ಪ ವಸೂಲಿ ಮಾಡುವ ಕ್ರಮ ಪಾಲಿಸಿದನು. ಇತಿಹಾಸಕಾರರು, ರಣಜಿತ್ ಸಿಂಗ್‌ನ ಆಪ್ತ ಸರದಾರರ ಪೈಕಿ ದಿವಾನ್ ಮೊಹ್ಕಾಮ್ ಚಂದ್‌ನ ಬಗ್ಗೆ ಕೆಲವು ಮಹತ್ತರ ವಿವರಗಳನ್ನು ನೀಡಿರುತ್ತಾರೆ. ದಿವಾನ್ ಮೊಹ್ಕಮ್ ಚಂದ್ ಸಾಮಾನ್ಯ ಖಾತ್ರಿ ಪಂಗಡದ ವ್ಯಾಪಾರಸ್ಥನ ಮಗನಾಗಿದ್ದ. ರಣಜಿತ್ ಸಿಂಗ್‌ನ ಸೈನ್ಯಕ್ಕೆ ಸೇರಿ ಆತ ತನ್ನ ಶೌರ್ಯ ಪ್ರದರ್ಶಿಸಿದ. ಅವನ ಸಾಮರ್ಥ್ಯ ಗಮನಿಸಿದ ರಣಜಿತ್ ಸಿಂಗ್, ಅವನಿಗೆ ಉನ್ನತ ಹುದ್ದೆ ನೀಡಿ, ಜಲಂಧರ್ ಮತ್ತು ಫಿಲ್ಲೋರ್ ನಗರಗಳನ್ನು ಬಳುವಳಿಯಾಗಿ ನೀಡಿದ. ಫಿಲ್ಲೋರ್ ನಗರದ ಇತಿಹಾಸ ಪ್ರಸಿದ್ಧ ಕೋಟೆಯನ್ನು ಇದೇ ಮೊಹ್ಕಾಮ್ ಚಂದ್ ನಿರ್ಮಿಸಿದ

ಮತ್ತು ಅಲ್ಲೇ ೧೮೧೪ರಲ್ಲಿ ಪ್ರಾಣತ್ಯಾಗ ಮಾಡಿದ. ಅವನ ಮಗ ಮೋತಿರಾಮ್ ಮುಂದೆ ಕಾಶ್ಮೀರದ ರಾಜ್ಯಪಾಲನಾಗಿ ಮೆರೆದ. ಅವನ ಮಕ್ಕಳಾದ ರಾಮ ದಯಾಳ ಮತ್ತು ಕೃಪಾರಾಮ್ ಕೂಡ ರಣಜಿತ್ ಸಿಂಗ್‌ನ ಸೈನ್ಯದಲ್ಲಿ ದುಡಿದರು. ರಾಮ್ ದಯಾಳ್ ಯುದ್ಧದಲ್ಲಿ ಮಡಿದರೆ, ಕೃಪಾರಾಮ್ ತಂದೆಯಂತೆ ಕಾಶ್ಮೀರದ ರಾಜ್ಯಪಾಲನಾಗಿ ಸ್ವಲ್ಪಕಾಲ ಆಡಳಿತ ಜರುಗಿಸಿದ. ಆದರೆ, ಪಂಜಾಬ್‌ನ ಪ್ರಧಾನಮಂತ್ರಿಯಾಗಿ ಮೆರೆದ ಧ್ಯಾನ್‌ಚಂದ್ ಡೋಗ್ರಾನ ಪಿತೂರಿ ಮತ್ತು ಈರ್ಷ್ಯೆಯಿಂದ, ರಣಜಿತ್ ಸಿಂಗ್‌ನ ಮನಸ್ಸಿನಲ್ಲಿ ಭ್ರಾಂತಿ ಉಂಟಾಗಿದ್ದರ ಪ್ರಯುಕ್ತ ತಂದೆ ಮಗ ರಾಜಸ್ಥಾನದ ಪದವಿ ತೊರೆದು, ಕಾಶಿಗೆ ತೆರಳಿ ಅಲ್ಲೇ ಅವರ ಅವಸಾನವಾಯಿತು (೧೮೪೨) ೫

ನೆರೆಯ ಪಂಜಾಬ್‌ನ ಉತ್ತರ ದಿಕ್ಕಿನ ಗುಡ್ಡಗಾಡು ಪ್ರದೇಶಗಳಲ್ಲಿ ರಾಜ ಪದವಿ, ನೆಪಮಾತ್ರಕ್ಕೆ ಆಳುತ್ತಿದ್ದ ರಾಜರ ಕೈಯಲ್ಲಿದ್ದವು. ನೆರೆಯ ನೇಪಾಳದ ಸೈನ್ಯಾಧಿಕಾರಿ ಅಮರ್‌ಸಿಂಗ್ ಥಾಪಾ ಎಂಬವ ಅತ್ಯಂತ ಪ್ರಭಾವಿ ಮತ್ತು ಮಹತ್ವಾಕಾಂಕ್ಷಿಯಾಗಿದ್ದ. ರಾಜ್ಯವಿಸ್ತರಣಾ ಕಾರ್ಯವನ್ನು ಬಲು ಮುತುವರ್ಜಿಯಿಂದ ಮಾಡಲು ಆತ ಮುಂದುವರೆದ. ಗುಡ್ಡಗಾಡು ಪ್ರದೇಶಗಳಾದ ಗರವಾಲ್, ಸಿರಮೂರ್ ಇತ್ಯಾದಿ ಪ್ರದೇಶಗಳ ಮೇಲೆ ದಾಳಿ ನಡೆಸಿದ. ಕಾಂಗ್ರಾ ಪ್ರದೇಶವನ್ನು ಸುತ್ತುಗಟ್ಟಿದ. ಆ ಪ್ರದೇಶದ ರಾಜರು ರಣಜಿತ್ ಸಿಂಗ್‌ನ ಸಹಾಯ ಕೋರಿದರು. ಅದಕ್ಕೆ ಸಮ್ಮತಿಸಿದ ರಾಜ. ಸುದ್ದಿ ಅರಿತ ಥಾಪಾ, ರಾಜನ ಸ್ನೇಹ ಬಯಸಿ, ಅವನಿಗೆ ಕಪ್ಪ ನೀಡಿ, ತನ್ನ ಆಕ್ರಮಣಕ್ಕೆ ಅಡ್ಡಿ ಬರಬಾರದೆಂದು ಕೋರಿದ. ರಣಜಿತ್ ಸಿಂಗ್ ಅವನ ಕರಾರಿಗೆ ಒಪ್ಪಲಿಲ್ಲ. ಇಷ್ಟರಲ್ಲಿ ಥಾಪಾನ ಸೈನ್ಯದಲ್ಲಿನ ಸೈನಿಕರು ರೋಗಬಾಧೆಗೆ ಒಳಗಾಗಿ ಅವರು ಹೋರಾಡದೆ ಸಾವು ನೋವುಗಳಿಗೆ ತುತ್ತಾದರು. ಥಾಪಾ ತೆಪ್ಪಗಾದ. ತನ್ನೂರಿಗೆ ವಾಪಸ್ಸಾದ.

ಮುಲ್ತಾನ್ (ಈಗಿನ ಪಾಕಿಸ್ತಾನದ ಒಂದು ನಗರ) ನಗರ ಪ್ರದೇಶವನ್ನು ಪಠಾಣ ನವಾಬ ಮುಜಾಫರ್ ಖಾನ್ ಆಳುತ್ತಿದ್ದ. ಆತ ಕಸೂರ್‌ನ ಇನ್ನೊಬ್ಬ ಪಠಾಣ ನವಾಬ ಕುತುಬುದ್ದೀನ್‌ನೊಂದಿಗೆ ಸೇರಿ ರಣಜಿತ್ ಸಿಂಗ್‌ನ ರಾಜಧಾನಿ ಲಾಹೋರ್ ಮೇಲೆ ಎರಗಲು ಪ್ರಯತ್ನಿಸುತ್ತಿದ್ದ. ಸುದ್ದಿ ಅರಿತ ರಾಜ ಒಡನೆಯೇ ತನ್ನ ಬಲವಾದ ಸೈನ್ಯದೊಂದಿಗೆ ಮುಲ್ತಾನ್‌ನ ಮೇಲೆ ನುಗ್ಗಿದ. ಒಂದು ತಿಂಗಳ ಕಾಲ ಜರುಗಿದ ಯುದ್ಧದಲ್ಲಿ ಮುಜಾಫರ್ ಖಾನ್‌ನನ್ನು ಸೋಲಿಸಿ ಅವನನ್ನು ಸೆರೆ ಹಿಡಿದ. ಆದರೆ ಅವನ ಹತ್ಯೆ ಮಾಡದೆ, ಅವನಿಗೆ ಜಾಗೀರು ನೀಡಿ ಬಿಡುಗಡೆ ಮಾಡಿದ ರಣಜಿತ್ ಸಿಂಗ್. ಆದರೆ, ಕೃತಘ್ನ ಖಾನ್ ಮೂರೇ ವರ್ಷಗಳಲ್ಲಿ ರಾಜನ ವಿರುದ್ಧ ತಿರುಗಿ ಬಿದ್ದ. ಉಪಾಯ ಕಾಣದೆ ರಣಜಿತ್ ಸಿಂಗ್ ಮತ್ತೊಮ್ಮೆ ಮುಲ್ತಾನ್‌ನ್ನು

---

೫. P 455 History of Sikh People by G.singh

ವಶಪಡಿಸಿಕೊಂಡು, ಖಾನ್‌ನಿಂದ ಕಪ್ಪ ವಸೂಲಿ ಮಾಡಿ ಅವನನ್ನು ಹಿಂಸಿಸದೆ ಕಾಪಾಡಿದ. ಈ ಸಮರದಲ್ಲಿ ಭಾಗಿಯಾಗಿ ಹೋರಾಡಿದ ಸಿಖ್ ಸೈನ್ಯಾಧಿಕಾರಿಗಳಾದ ಸರದಾರ್ ನಿಹಾಲ್ ಸಿಂಗ್ ಅತ್ತಾರಿವಾಲಾ, ಹರಿಸಿಂಗ್ ನಾಲ್ವಾ ಮುಂತಾದವರಿಗೆ ರಣಜಿತ್‌ಸಿಂಗ್ ಜಹಗೀರ್ ನೀಡಿ ಗೌರವಿಸಿದ.

ಪಾಟಿಯಾಲಾದ ರಾಜ ರಾಣಿಯರ ಮಧ್ಯೆ ಇದ್ದ ಜಗಳ ಬಗೆಹರಿಯದೆ ಸುತ್ತಮುತ್ತಲ ರಾಜರಿಗೆ ಅದು ಕಂಟಕಪ್ರಾಯವಾಗಿ, ಪರಿಣಮಿಸಿತ್ತು. ಮಹಾರಾಜ ರಣಜಿತ್‌ಸಿಂಗ್, ಅವರ ಜಗಳ ನಿವಾರಿಸಲು ಮಧ್ಯೆ ಪ್ರವೇಶಿಸಬೇಕಾಯಿತು. ೧೮೦೭ರಲ್ಲಿ ರಾಜ ಪಾಟಿಯಾಲಾ ನಗರಕ್ಕೆ ಪ್ರವೇಶಿಸಿದ. ರಾಣಿ ಪರವಾಗಿ ತನ್ನ ತೀರ್ಪು ನೀಡಿ ಗಂಡ ಹೆಂಡಿರ ಜಗಳಕ್ಕೆ ಇತಿಶ್ರೀ ಹಾಡಿದ.

ನೆರೆಯ ಅಂಬಾಲಾದತ್ತ ರಾಜ ತನ್ನ ದೃಷ್ಟಿ ಹಾಯಿಸಿದ. ಅಲ್ಲಿನ ರಾಣಿಯಾಗಿದ್ದ ಸಿಖ್ ಸರದಾರ ಗುರುಬಕ್ಷಸಿಂಗ್‌ನ ವಿಧವೆ, ರಾಜನನ್ನು ಪ್ರೀತಿಯಿಂದ ಬರಮಾಡಿಕೊಂಡಳು. ಅವನಿಗೆ ಕಪ್ಪ ಕಾಣಿಕೆ ನೀಡಿದಳು.

ಮಹಾರಾಜ ರಣಜಿತ್ ಸಿಂಗ್ ದಿನೇ ದಿನೇ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿ ಬಲಗೊಂಡಿದ್ದನ್ನು ಕಂಡ ಅವನ ಬಂಧು ಮಿತ್ರ ಸಿಖ್ ಸರದಾರರು ಭಯಭೀತಗೊಂಡರು. ಅವರು ತಮ್ಮ ಅಸ್ತಿತ್ವಕ್ಕೆ ಕಂಟಕ ಬಂದಿದೆ ಎಂದು ಬಗೆದರು. ಸಿಖ್ ಸರದಾರರ ಪೈಕಿ, ಪಾಟಿಯಾಲಾ, ನಾಭಾ ಮತ್ತು ಜಿಂದ್ ಪ್ರದೇಶದ ರಾಜರು ಒಂದಾದರು. ರಣಜಿತ್ ಸಿಂಗ್‌ನ ವಿರುದ್ಧ ಕತ್ತಿ ಮಸೆದರು.

'. . . .South Sutlej, the Sikh confederacies were in process of dissolving into a chaos of minute principalities in which every man was for himself and the devil took the hindmost. The spirit of the Khalsa still lived, but its body was being over spread with a thick mail of feudalism. The Phulkia family had created three states, Patiala, Nabha and Jhind. The first was ruled by Raja Sahib Singh, whose weakness approached imbecility and whose territory, though large, was completely anarchical. Raja Bhag Singh, of Jhind was an uncle of Ranjit Singh, and was the first important chief to tie himself closely to the British in the struggle with the Marathas. He was a fairly reliable man, though a jolly liver and hard drinker. Raja Jaswant Singh of Nabha was reckoned by the British the most intelligent - the nearest approaches to the

civilized among the whole set of rude barons. Bhai Lal Singh of Kythal ranked second among the states. He was determined at all costs to be on the winning side, which rendered his policy at times ambiguous. Malerkotla was a pathan possession. Around these 'states' revolved an indefinite number of trivial independence. Anyone with a village might be a raja, if only for a day'

(1 P 3 Metcalfe's Mission to Lahore by Victor G. Kiernan)

ಈಗಾಗಲೇ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಭಾರತದಲ್ಲೆಲ್ಲಾ ತಮ್ಮ ಧ್ವಜ ಪತಾಕೆ ಹಾರಿಸಿ, ಬಲಿಷ್ಠ ಮರಾಠರನ್ನು ಮಣಿಸಿ, ದಿಲ್ಲಿಯ ಮೊಘಲ್ ಸಾಮ್ರಾಟರನ್ನು ತಮ್ಮ ಅಧೀನದಲ್ಲಿ ವಶಪಡಿಸಿಕೊಂಡು ಅವರ ಸಾಮರ್ಥ್ಯವನ್ನು ಕುಗ್ಗಿಸಿ, ದಿಲ್ಲಿಯಲ್ಲಿ ತಮ್ಮ ಒಬ್ಬ ರೆಸಿಡೆಂಟರನ್ನು ನೇಮಕ ಮಾಡಿ ಅಲ್ಲಿ ತಮ್ಮ ಅಧಿಪತ್ಯ ಸ್ಥಾಪಿಸುವುದರಲ್ಲಿ ಸಫಲಗೊಂಡಿದ್ದರು. ಭಾರತದಲ್ಲಿ ಸ್ವತಂತ್ರವಾಗಿ ರಾಜ್ಯಭಾರ ಮಾಡಿ ಸಿಖ್ಖರ ಸಾಮ್ರಾಜ್ಯ ಸ್ಥಾಪಿಸಿ ದಿನೇ ದಿನೇ ಬಲಿಷ್ಠಗೊಳ್ಳುತ್ತಿದ್ದ ರಣಜಿತ್‌ಸಿಂಗ್‌ನ ಆಳ್ವಿಕೆ ಅವರು ಭರತ ಖಂಡದಲ್ಲಿ ತಾವು ಸ್ಥಾಪಿಸಿದ ಸಾಮ್ರಾಜ್ಯಕ್ಕೆ ಕಂಟಕಪ್ರಾಯವಾಗಬಹುದೆಂದು ಅರಿತರು. ಭಾರತದ ಸಕಲ ರಾಜ ಮಹಾರಾಜ, ಸುಲ್ತಾನ್ ಮತ್ತು ನವಾಬರುಗಳನ್ನು ತಮ್ಮ ಕುತಂತ್ರ, ಅಧರ್ಮ, ಕುಟಿಲತೆ ಮತ್ತು ಬಲಿಷ್ಠ ಸೈನ್ಯದಿಂದ ಸದೆಬಡೆದು ತಮ್ಮ ಅಡಿಯಾಳಾಗಿರಿಸಿಕೊಂಡ ಬ್ರಿಟಿಷರಿಗೆ ಈಗ ರಣಜಿತ್ ಸಿಂಗ್‌ನ ಪಂಜಾಬ್ ಪ್ರಾಂತ್ಯವೊಂದೇ ಉಳಿದಿತ್ತು ತಮ್ಮ ಸಾಮ್ರಾಜ್ಯಕ್ಕೆ ಅದನ್ನು ಸೇರಿಸಿಕೊಳ್ಳುವುದಕ್ಕೆ.

ಸಿಖ್ ಸರದಾರರಲ್ಲಿ ಒಡಕು, ವೈಮನಸ್ಸು, ಭೀತಿ, ಈರ್ಷೆ ಇತ್ಯಾದಿಗಳು ಮನೆ ಮಾಡಿ ಭಾರತೀಯರಲ್ಲಿ ಸರ್ವೇ ಸಾಮಾನ್ಯವಾದ 'ಅನೈಕ್ಯತೆಯ ವ್ಯಾಧಿ' ಅವರನ್ನು ಕಾಡಿತ್ತು. ೧೮೦೮ ರಲ್ಲಿ ಮೂರು ಸಿಖ್ ರಾಜ್ಯಗಳ ಒಂದು ನಿಯೋಗ ದೆಹಲಿಗೆ ತೆರಳಿ, ಬ್ರಿಟಿಷ್ ರೆಸಿಡೆಂಟನಿಗೆ ರಣಜಿತ್ ಸಿಂಗ್‌ನಿಂದ ತಮಗೆ ರಕ್ಷಣೆ ನೀಡಲು ಮನವಿ ಪತ್ರ ಅರ್ಪಿಸಿತು. ದೆಹಲಿಯ ಮೊಘಲ್ ದೊರೆಗಳಿಂದ ದೊರೆತ ರಕ್ಷಣೆ ಈಗ ಅಧಿಪತ್ಯದಲ್ಲಿರುವ ಬ್ರಿಟಿಷ್ ದೊರೆಗಳಿಂದ ಅದು ದೊರೆಯಬೇಕೆಂದು ಕೋರಿತು.*

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಗಳಿಗೆ ಪಂಜಾಬ್‌ನ ರಾಜಕೀಯದಲ್ಲಿ ಆಸಕ್ತಿಯಾಗಲೀ, ಅಲ್ಲಿ ಸಿಖ್ಖರ ಮಧ್ಯೆ ಜರುಗುತ್ತಿದ್ದ ಕಚ್ಚಾಟ, ಜಗಳ, ಕದನಗಳ ಬಗ್ಗೆ ವಿಶೇಷ ಅರಿವು ಇರಲಿಲ್ಲ. ಅವರಿಗೆ ಯೂರೋಪ್‌ನಲ್ಲಿ ಬ್ರಿಟನ್ ವಿರುದ್ಧ ಮತ್ತು ಅವರ ಅನೇಕ ವಸಾಹತುಗಳ ವಿರುದ್ಧ ಜರುಗುತ್ತಿದ್ದ ಪಿತೂರಿ, ಅವುಗಳ ಮೇಲೆ ಇದ್ದ ತಮ್ಮ ಅಧಿಕಾರ ಹಕ್ಕುಗಳನ್ನು ಕಬಳಿಸುವ ಹುನ್ನಾರ

---

* P 4 Metcalfe's Mission to Lahore by Victor G. Keirnen

ಎಸುಗುತ್ತಿದ್ದ ಅವರ ಕಡು ವೈರಿ ಫ್ರಾನ್ಸ್ ದೇಶ, ತುರ್ಕಿ ಮತ್ತು ಪ್ರಬಲ ರಶಿಯಾಗಳ ಬಗ್ಗೆ ತಮ್ಮ ಗಮನ ಹರಿಸಿ, ಅವನ್ನು ಬಗೆಹರಿಸಲು ಹೆಚ್ಚಿನ ಮಹತ್ವ ನೀಡಿದ್ದರು. ಫ್ರಾನ್ಸ್, ಭಾರತದಲ್ಲಿ ತಮ್ಮ ಪ್ರಭುತ್ವ ಸ್ಥಾಪಿಸಲು ಹಲವಾರು ಯತ್ನ ಮಾಡಿ ಬ್ರಿಟನ್ ವಿರುದ್ಧ ಸೋಲನ್ನು ಅನುಭವಿಸಿ, ಈಗ, ಪರ್ಶಿಯಾ ದೇಶದಲ್ಲಿ ತಮ್ಮ ಪ್ರಭಾವ ಬೆಳೆಸಿ ಅಲ್ಲಿನ ರಾಜನೊಂದಿಗೆ ಸಂಧಾನ ಜರುಗಿಸಿ, ಅವನ ಸಹಕಾರದೊಂದಿಗೆ, ಆಫ್ಘಾನಿಸ್ಥಾನ್‌ದ ಮೂಲಕ ಭಾರತದೊಳಗೆ ನುಗ್ಗಿ, ಬ್ರಿಟಿಷ್‌ರನ್ನು ಎದುರಿಸಿ, ಅವರನ್ನು ಸದೆಬಡಿದು ತಮ್ಮ ಪ್ರಭುತ್ವ ಸ್ಥಾಪಿಸಿಕೊಳ್ಳಬೇಕೆಂಬ ಇರಾದೆಯ ಸುಳಿವು ಅವರ ಮನಸ್ಸಿಗೆ ಬಂದು ಆತಂಕಗೊಂಡಿದ್ದರು.

ಈ ಮೊದಲೇ ೧೭೯೨ರಲ್ಲಿ, ಭಾರತಕ್ಕೆ ಸಾಗರದ ಮೂಲಕ ಸಾಗಲು ಅಡಚಣೆ ಉಂಟುಮಾಡಿದ ಫ್ರಾನ್ಸ್‌ನ ವಿರುದ್ಧ ಬ್ರಿಟನ್ ಕಾಳಗ ಜರುಗಿಸಬೇಕಾಯಿತು. ಬ್ರಿಟನ್ ತನ್ನ ಸಾಗರೋತ್ತರ ವಸಾಹತು ಪ್ರದೇಶಗಳ ರಕ್ಷಣೆಗೋಸ್ಕರ, ಯೂರೋಪ್‌ನಲ್ಲಿ ವಿವಿಧ ರಾಷ್ಟ್ರಗಳೊಂದಿಗೆ ಕಾದಾಡಬೇಕಾಯಿತು. ಫ್ರಾನ್ಸ್ ೧೮೦೬ರಲ್ಲಿ ಪ್ರಷ್ಯಾವನ್ನು ಸೋಲಿಸಿತು. ಜೂನ್ ೧೮೦೭ರಲ್ಲಿ ಅದು ರಶಿಯಾವನ್ನು ಸೋಲಿಸಿತು. ರಶಿಯಾದ ಜ್ಹಾರ್ ಮತ್ತು ಫ್ರಾನ್ಸ್‌ನ ನೆಪೋಲಿಯನ್ ಬೋನಾಪಾರ್ಟ್ ಶಾಂತಿ ಒಪ್ಪಂದ ಮಾಡಿಕೊಂಡರು. ಫ್ರಾನ್ಸ್‌ನ ಮೇಲೆ ಬ್ರಿಟನ್ ಏನಾದರೂ ಕಾದಾಡಿದರೆ, ಅದು ಫ್ರಾನ್ಸ್‌ನ ಸಹಾಯಕ್ಕೆ ನೆರವು ನೀಡುವುದಾಗಿ ಗುಪ್ತ ಕರಾರು ಮಾಡಿಕೊಂಡರು.

ಆದರೆ ಮುಂದಿನ ಕೆಲವೇ ವರ್ಷಗಳಲ್ಲಿ, ಯೂರೋಪ್‌ನ ರಶಿಯಾ, ಫ್ರಾನ್ಸ್ ಮತ್ತು ಬ್ರಿಟನ್ ರಾಷ್ಟ್ರಗಳು ತಮ್ಮಲ್ಲಿದ್ದ ಪರಸ್ಪರ ದ್ವೇಷ ಅಸೂಯೆ, ಅಪನಂಬಿಕೆಗಳಿಂದ ನರಳಿ, ಹೋರಾಟಕ್ಕೆ ಅನುವಾಗಿ ನಿಂತಿದ್ದರು. ಪರಸ್ಪರ ಶಾಂತಿ ಒಪ್ಪಂದ ಮಾಡಿಕೊಂಡರೂ, ಅದನ್ನು ತಮ್ಮ ಹಿತಾಸಕ್ತಿಗೆ ಬಲಿಕೊಡಲು ನಿಂತಕಾಲಿನಲ್ಲಿ ನಿಂತಿದ್ದರು. ರಶಿಯಾ ತನ್ನ ನೆರೆಯ ರಾಷ್ಟ್ರಗಳನ್ನು ಆಕ್ರಮಿಸಿ, ಪರ್ಶಿಯಾದ ಮೇಲೆ ತನ್ನ ಹದ್ದಿನ ಕಣ್ಣುಗಳನ್ನು ಹಾಯಿಸಿದಾಗ, ಬ್ರಿಟನ್ ಭಯಗೊಂಡಿತು. ಈ ಮಧ್ಯೆ ಫ್ರಾನ್ಸ್ ಕೂಡ ಪರ್ಶಿಯಾದೊಂದಿಗೆ ಸಂಧಿ ಮಾಡಿಕೊಂಡಿತು.

ಒಂದು ವೇಳೆ ರಶಿಯಾ ಆ ದೇಶದ ಮೇಲೆ ಆಕ್ರಮಣ ಜರುಗಿಸಿದರೆ, ಫ್ರಾನ್ಸ್ ಅದರ ನೆರವಿಗೆ ಬರಲು ಒಪ್ಪಂದ ಮಾಡಿಕೊಂಡಿತು. ಅದೇ ರೀತಿ ಬ್ರಿಟನ್ ವಿರುದ್ಧ ಭಾರತದ ಮೇಲೆ ಯುದ್ಧ ಜರುಗಿಸಲು ಪರ್ಶಿಯಾದೊಂದಿಗೆ ಸಂಧಿಗೆ ಸಹಿ ಹಾಕಿತು. ಇದರ ಸುದ್ದಿ ಅರಿತ ಬ್ರಿಟಿಷ್ ಕಂಪನಿ ಸರಕಾರ ಆತಂಕಗೊಂಡಿತು. ೧೮೦೮ರಲ್ಲಿ ಅದು ಪಂಜಾಬ್‌ನ ಸರಹದ್ದು ಪ್ರದೇಶಗಳಲ್ಲಿ ತಮ್ಮ ಸೈನಿಕ ಠಾಣೆಗಳನ್ನು ಸ್ಥಾಪಿಸಿ, ಅವನ್ನು ಬಲಪಡಿಸಲು ನಿರ್ಧರಿಸಿತು. ದೆಹಲಿಯನ್ನು ಕಾಪಾಡಲು, ಕರ್ನಾಲ್ ನಗರದಲ್ಲಿ ಸೈನಿಕ ಠಾಣೆಯನ್ನು ಬಲಪಡಿಸಲಾಯಿತು. ದಕ್ಷಿಣದಿಂದ ಮರಾಠರನ್ನು ಜಮುನಾ ನದಿಯ ದಕ್ಷಿಣದಲ್ಲಿ ಎದುರಿಸಲು ಸುಲಭವೆಂದು ಬಗೆದ ಬ್ರಿಟಿಷ್‌ರು

ಫ್ರಾನ್ಸ್ ಮತ್ತು ರಶಿಯಾದ ಆಕ್ರಮಣವನ್ನು ಪಂಜಾಬ್‌ನ ಮುಖಾಂತರ ಜರುಗಿದರೆ, ಅದನ್ನು ಎದುರಿಸಲು ಕಷ್ಟ ಎಂದು ಮನವರಿಕೆಯಾದ ಬ್ರಿಟಿಷರು ನಾಲ್ಕು ಸಂಧಾನಕಾರರನ್ನು ಲಾಹೋರ್, ಸಿಂಧ್, ಕಾಬೂಲ್ ಮತ್ತು ಟಿಹ್ರಾನ್ (ಪರ್ಶಿಯಾ)ಗೆ ಕಳುಹಿಸಿದರು. ರಣಜಿತ್‌ಸಿಂಗ್‌ನ ರಾಜಧಾನಿ ಲಾಹೋರ್‌ಗೆ ಮೆಟ್‌ಕಾಫ್ ಎಂಬ ಯುವಕ ಅಧಿಕಾರಿಯನ್ನು ಆರಿಸಿ ಕಳುಹಿಸಿದರು. ಈ ನಾಲ್ಕು ಸಂಧಾನಕಾರರನ್ನು ಕಳುಹಿಸಿದ ಉದ್ದೇಶ, ಫ್ರಾನ್ಸ್ ಮತ್ತು ರಶಿಯಾ ದೇಶಗಳು ಭಾರತದ ಮೇಲೆ ಆಕ್ರಮಣ ಜರುಗಿಸುವುದನ್ನು ಎದುರಿಸಲು ಬ್ರಿಟನ್‌ನೊಂದಿಗೆ ಸಂಧಿ ಮಾಡಿಕೊಂಡು, ಅದರ ಸಹಾಯ ಪಡೆದು ತಮ್ಮ ಸ್ವಾತಂತ್ರ್ಯ ಮತ್ತು ಅಸ್ತಿತ್ವವನ್ನು ಕಾಪಾಡಿಕೊಳ್ಳುವದಾಗಿತ್ತು.

ಬ್ರಿಟಿಷ್ ಸಂಧಾನಕಾರ ಮೆಟ್‌ಕಾಫ್ ದೆಹಲಿಯಲ್ಲಿ ಬ್ರಿಟಿಷ್ ರೆಸಿಡೆಂಟ್‌ನ ಕೈಕೆಳಗೆ ದುಡಿಯುತ್ತಿದ್ದ. ಎಲ್ಲಾ ಇಂಗ್ಲಿಷ್‌ನವರಂತೆ ಈತನೂ ಹಣ ಮಾಡಿ ಸ್ವದೇಶಕ್ಕೆ ಹಿಂದಿರುಗುವ ಆಸೆ ಇಟ್ಟುಕೊಂಡಿದ್ದವ. ಕೇವಲ ಶಾಂತಿಯ ಕಾಲದಲ್ಲಿ ಸರಕಾರಿ ನೌಕರಿ ಮಾಡಿಕೊಂಡು, ಕಾಲಕಾಲಕ್ಕೆ ಬಡ್ತಿ ಹೊಂದಿ, ತಿಂಗಳ ಸಂಬಳ ಪಡೆದು ಹಣವಂತನಾಗುವುದು ಬಲು ಕಷ್ಟವೆಂಬುದು ಆತನಿಗೂ ಅರಿವಿತ್ತು. ಕಂಪನಿ ಸರಕಾರ, ಕೂತಲ್ಲೇ ಕುಳಿತು, ನಿಂತಲ್ಲೇ ನಿಂತು, ರಾಜ್ಯವಾಳುತ್ತಿದ್ದರೆ, ತನ್ನಂತಹ ಆಡಳಿತಾಧಿಕಾರಿಗೆ ಲಾಭದ ಬದಲು ನಷ್ಟವೇ ದೊರೆಯುತ್ತದೆ ಎಂಬ ಅರಿವು ಅವನಿಗೆ ಆಗಿತ್ತು. ಹಾಗಾದರೆ ಏನು ಉಪಾಯ? ಬ್ರಿಟಿಷ್ ಸಮ್ರಾಜ್ಯದ ಆಕ್ರಮಣಕಾರಿ, ಪರರಾಜ್ಯ, ರಾಷ್ಟ್ರಗಳ ಮೇಲೆ ಏರಿಹೋಗಿ. ಯುದ್ಧ ಹೂಡಿ, ಆ ರಾಜ್ಯಗಳ ಆಸ್ತಿ–ಪಾಸ್ತಿ, ಸಂಪತ್ತು, ದ್ರವ್ಯ ಲೂಟಿ ಮಾಡುವ ಧ್ಯೇಯ, ಗುರಿಗಳನ್ನು ಮುಂದುವರೆಸಿದರೆ, ಲೂಟಿಯಲ್ಲಿ ತನಗೂ ಅಪಾರ ಲಾಭ ದೊರಕುವುದು ಖಂಡಿತ ಎಂಬ ನಂಬಿಕೆ ಇಟ್ಟುಕೊಂಡಿದ್ದ. ರಾಬರ್ಟ್ ಕ್ಲೈವ್ ಮತ್ತು ಲಾರ್ಡ್ ವೆಲ್ಲೆಸ್ಲಿಯರ ಉದಾಹರಣೆ ಅವನ ಮನಸ್ಸನ್ನು ಆವರಿಸಿತ್ತು. ಮಾಹೆಯಾನ ಎರಡು ಸಾವಿರ ರೂಪಾಯಿಗಳ ಸಂಬಳ ಗೊತ್ತುಮಾಡಿಕೊಂಡ ಮೆಟ್‌ಕಾಫ್ ಲಾಹೋರ್‌ಗೆ ಬಂದಿಳಿದಾಗ, ಅವನಿಗೆ ರಣಜಿತ್‌ಸಿಂಗ್‌ನೊಂದಿಗೆ ಮಾತುಕತೆ ಜರುಗಿಸಿ, ಫ್ರೆಂಚ್‌ರ ವಿರುದ್ಧ ಬ್ರಿಟಿಷ್‌ರೊಂದಿಗೆ ಸಂಧಿ ಮಾಡಿಕೊಳ್ಳುವಂತೆ ತಿಳಿಸಲಾಯಿತು. ರಣಜಿತ್ ಸಿಂಗ್, ತನ್ನ ರಾಜ್ಯದ ಸರಹದ್ದನ್ನು ದೆಹಲಿಯ ಬಳಿ ಜಮುನಾ ನದಿಯ ವರೆಗೆ ವಿಸ್ತರಿಸಲು ಆಸೆಯಿಟ್ಟುಕೊಂಡು, ಅದಕ್ಕಾಗಿ ಮೆಟ್‌ಕಾಫ್‌ನೊಂದಿಗೆ ಮಾತುಕತೆ ಜರುಗಿಸಲು ಸಿದ್ಧನಾಗಿದ್ದ. ಪಂಜಾಬ್‌ನ ಮೇಲೆ ತನ್ನ ಹತೋಟಿಯನ್ನು ಸಂಪೂರ್ಣವಾಗಿ ಇರಿಸಿಕೊಳ್ಳಬೇಕೆಂದರೆ, ಸಿಖ್ ಸರದಾರರು ಅಧಿಕಾರ ಚಲಾಯಿಸುತ್ತಿದ್ದ ಪ್ರದೇಶಗಳಾದ ಸಟ್ಲೆಜ್ ನದಿಯ ಪೂರ್ವ ಪ್ರದೇಶದಿಂದ ಜಮುನಾ ನದಿಯ ಪಶ್ಚಿಮ ದಂಡೆಯವರೆಗೆ ತನ್ನ ಅಧಿಕಾರವನ್ನು ಪಡೆಯಬೇಕಾಗುತ್ತಿತ್ತು.

ಒಂದು ವರ್ಷದ ಕಾಲ ಜರುಗಿದ ಸಮಾವೇಶದಲ್ಲಿ, ಮೆಟ್‌ಕಾಫ್ ಅತ್ಯಂತ ಮುತುವರ್ಜಿಯಿಂದ, ತಾಳ್ಮೆಯಿಂದ, ಕುಶಲತೆಯಿಂದ ಸಂಧಾನ ಜರುಗಿಸಿದ. ಆದರೆ

ಈ ಸುದೀರ್ಘ ಸಂಧಾನದಲ್ಲಿ ಹಲವಾರು ಪ್ರಮುಖ ಘಟನೆಗಳು ಜರುಗಿ ಬ್ರಿಟಿಷ್‌ರಿಗೆ ಭಾಗ್ಯ ಒದಗಿ ಬಂದು, ರಣಜಿತ್ ಸಿಂಗ್ ತನಗೆ ಇಷ್ಟವಿಲ್ಲದಿದ್ದರೂ, ಫ್ರೆಂಚ್‌ರ ವಿರುದ್ಧ ಹೋರಾಡಲು, ಬ್ರಿಟಿಷ್‌ರಿಗೆ ನೆರವು ನೀಡಲು ಒಪ್ಪಿದ. ಆದರೆ, ತನ್ನ ಇಷ್ಟದ ಪ್ರಕಾರ ಸಂಪೂರ್ಣ ಪಂಜಾಬ್ ಮತ್ತು ಸಿಖ್ ಸರದಾರರ ವಶದಲ್ಲಿದ್ದ ಪ್ರದೇಶಗಳ ಮೇಲೆ ತನ್ನ ಅಧಿಕಾರ ಸ್ಥಾಪಿಸಲು ಅಸಮರ್ಥನಾದ ಕಾರಣ, ಬ್ರಿಟಿಷ್‌ರು ಮೂರು ಸಿಖ್ ಸರದಾರರ ಅಹವಾಲನ್ನು ಸ್ವೀಕರಿಸಿ, ಅವರ ರಾಜ್ಯಗಳಲ್ಲಿ ತಮ್ಮ ದಂಡನ್ನು ಇರಿಸಿ, ರಣಜಿತ್ ಸಿಂಗ್‌ನ ವಿರುದ್ಧ ಹೋರಾಡಲು ಸಿದ್ಧತೆ ನಡೆಸಿದರು. ಸಟ್ಲೆಜ್ ನದಿಯ ಪೂರ್ವ ಪ್ರದೇಶಗಳ ಮೇಲೆ ರಣಜಿತ್ ಸಿಂಗ್‌ನ ಹಕ್ಕನ್ನು ಮೊಟಕುಗೊಳಿಸಿದರು. ಅವನೇನಾದರೂ, ತನ್ನ ಸೈನ್ಯವನ್ನು ಸಟ್ಲೆಜ್ ನದಿ ದಾಟಿ, ಆ ಪ್ರದೇಶಗಳ ಮೇಲೆ ದಂಡೆತ್ತಿ ಬಂದರೆ, ಬ್ರಿಟಿಷ್ ವಿರುದ್ಧ ಯುದ್ಧ ಸಾರಿದಂತಾಗುತ್ತದೆ ಎಂದರು.

ಈಗಾಗಲೇ ಅಂಬಾಲಾ, ಲೂಧಿಯಾನಾ ಮತ್ತು ಕರ್ನಾಲ್‌ಗಳನ್ನು ತನ್ನ ವಶದಲ್ಲಿರಿಸಿಕೊಂಡಿದ್ದ ರಣಜಿತ್‌ಸಿಂಗ್, ಆ ನಗರಗಳಿಂದ ಹಿಂದೆಗೆಯಬೇಕಾಯಿತು. ಬ್ರಿಟಿಷ್‌ರು ಅವನ ಮೇಲೆ ಯುದ್ಧ ಜರುಗಿಸಲು ಓಚರ್‌ಲೋನಿ ಎಂಬ ಸೈನ್ಯಾಧಿಕಾರಿಯನ್ನು ನೇಮಿಸಿದರು. ಬ್ರಿಟಿಷ್‌ರ ಈ ಆಕ್ರಮಣಕ್ಕೆ ಅಪಾರ ಹಣ ಖರ್ಚು ಆಗುವುದಿತ್ತು. ಈಗಾಗಲೇ ಭಾರತದಲ್ಲೆಲ್ಲಾ ಸೈನ್ಯಾಚರಣೆ ನಡೆಸಿ ಜಯಗಳಿಸಿದ ಬ್ರಿಟಿಷ್ ಇಂಡಿಯಾ ಕಂಪನಿ ಅಪಾರ ನಷ್ಟಕ್ಕೆ ಗುರಿಯಾಗಿತ್ತು. ಹಣಕಾಸಿನ ಬಿಕ್ಕಟ್ಟಿನಲ್ಲಿ ಸಿಲುಕಿ ಅವರು ಸಾಲಕ್ಕಾಗಿ ಪರದಾಡುತ್ತಿದ್ದರು. ಇಂತಹ ಕಷ್ಟದ ಪರಿಸ್ಥಿತಿಯಲ್ಲಿ ನೆರವಾದನು ದೆಹಲಿಯ ಒಬ್ಬ ಹಿಂದು ಬನಿಯಾ (ಸಾಹುಕಾರ). ಯಾವ ಸ್ವರಾಷ್ಟ್ರೀಯ ಪ್ರಜ್ಞೆ ಇಲ್ಲದ, ಸ್ವದೇಶಾಭಿಮಾನವಿಲ್ಲದ, ಕೇವಲ ಹಣ ಮಾಡುವ ದೃಷ್ಟಿ ಇರಿಸಿಕೊಂಡು, ಲೇವಾದೇವಿ ವ್ಯಾಪಾರ ಮಾಡಿ ಹಣ ಸಂಪಾದಿಸಬೇಕೆಂಬ ಏಕೈಕ ಗುರಿ ಇರಿಸಿಕೊಂಡ, ಬ್ರಿಟಿಷ್‌ರಿಗೆ ಸಹಾಯ ಹಸ್ತ ನೀಡುವ ಮಹಾಪುರುಷ ಎಂಬ ಹೆಮ್ಮೆ ಮತ್ತು 'ಸಾರ್ವಜನಿಕ ಹುಮ್ಮಸ್ಸು' ಹೊಂದಿದ ಹರಸುಖ್‌ರಾಯ್ ಎಂಬಾತ, ರೆಸಿಡೆಂಟ್ ಸೆಟನ್‌ನಿಗೆ ಶೇ. ೩.೫ ರ ಬಡ್ಡಿಯಲ್ಲಿ ಮೂರು ಲಕ್ಷ ರೂಪಾಯಿ ಸಾಲ ನೀಡಿ ಕೃತಾರ್ಥನಾದ.

ಬ್ರಿಟಿಷ್ ಕಂಪನಿ ತಮ್ಮ ಸಹಾಯಕ್ಕೆ ತಮ್ಮ ವೈರಿ ರಣಜಿತ್ ಸಿಂಗ್‌ನ ವಿರುದ್ಧ ಹೋರಾಡಲು ಸೈನ್ಯವನ್ನು ಜಮಾಯಿಸಿ ತಮ್ಮ ರಾಜ್ಯಗಳಲ್ಲಿ ಅವನ್ನು ಇರಿಸಿ, ಕ್ರಮೇಣ ಲಾಹೋರ್‌ನತ್ತ ನುಗ್ಗುವ ಅವರ ಕ್ರಮಕ್ಕೆ ಐದು ಸಿಖ್ ಸರದಾರರೂ ಅತ್ಯಂತ ಸಂತೋಷದಿಂದ ಸಮ್ಮತಿಸಿದರು. ಅವರೊಂದಿಗೆ, ರಣಜಿತ್ ಸಿಂಗ್‌ನ ಅತ್ತೆ ಸದಾ ಕೌರ್ ಕೂಡ ಒಬ್ಬಳಾಗಿದ್ದಳು, ಬ್ರಿಟಿಷ್ ಆಕ್ರಮಣವನ್ನು ಸ್ವಾಗತಿಸಲಿಕ್ಕೆ !

ಓಕ್‌ಟರ್‌ಲೋನಿ (Ochterlony) ತನ್ನ ಪಡೆಯನ್ನು ಸಿಖ್ ಸರದಾರರ ರಾಜ್ಯಗಳಲ್ಲಿ ಚಲಾಯಿಸಿದ. ಅವನಿಗೆ ಮತ್ತು ಬ್ರಿಟಿಷ್ ಸೈನ್ಯಕ್ಕೆ ಹಾರ್ದಿಕ ಸ್ವಾಗತ ನೀಡಿದರು ಸರದಾರರು. ಪಾಟಿಯಾಲಾದ ಸರದಾರನಿಗೆ ಬ್ರಿಟಿಷ್ ಸೈನ್ಯವನ್ನು ಕಂಡು

ಎಷ್ಟು ಖುಷಿ ಪಟ್ಟನೆಂದರೆ, ಮಗುವಿನಂತೆ ಕುಣಿದಾಡಿದ ! *

ನಾಭಾನ ಸರದಾರ ಜಸವಂತ್ ಸಿಂಗ್, ಬ್ರಿಟಿಷ್ ಸೈನ್ಯಾಧಿಕಾರಿಯನ್ನು ಅತ್ಯಂತ ಹಾರ್ದಿಕವಾಗಿ ಸ್ವಾಗತಿಸಿದ. ಮಲೇರ್‌ಕೋಟ್ಲಾದಲ್ಲಿ ಪದಚ್ಯುತಿಗೊಂಡಿದ್ದ ಪಠಾಣ ಅತಾಉಲ್ಲಾ ಖಾನ್‌ನನ್ನು ಪುನಃ ಅಧಿಕಾರ ನೀಡಿದ ಓಕ್‌ಟರ್‌ಲೋನಿ. ಅಲ್ಲಿಂದ ಲೂಧಿಯಾನ ನಗರಕ್ಕೆ ಬಂದಾಗ, ಅವನನ್ನು ಆದರಿಸಿದಳು ಅಲ್ಲಿನ ನವಾಬ ರಾಯ್ ಇಲ್ಯಾಸ್‌ನ ಪತ್ನಿ.

ಯಾವ ತರಹದ ಸ್ವದೇಶಾಭಿಮಾನ, ಸ್ವಧರ್ಮಾಭಿಮಾನ, ಗುರುಗೋಬಿಂದ್ ಸಿಂಗ್ ಬೋಧಿಸಿದ 'ಖಾಲ್ಸಾ' ನೀತಿ ರೀತಿ ತತ್ವಸಾರಗಳ ಆಚಾರ ವಿಚಾರಗಳನ್ನು ಹೊಂದದ ಈ ಸ್ವಾರ್ಥಿ ಸರದಾರರು ತಮ್ಮ ಧರ್ಮೀಯನೇ, ಸ್ವದೇಶೀ, ಸಂಬಂಧೀ ರಣಜಿತ್‌ಸಿಂಗ್‌ನ ವಿರುದ್ಧ ಹೋರಾಡಲು ಪರಕೀಯ ವಿಧರ್ಮ ಆಕ್ರಮಣಕಾರೀ ಸಾಮ್ರಾಜ್ಯಶಾಹೀ ಬ್ರಿಟಿಷ್‌ರೊಡನೆ ಕೈಜೋಡಿಸಿದ್ದು, ಭಾರತದ ಇತಿಹಾಸದ ಪುಟಗಳಲ್ಲಿ ಒಂದು ಕಪ್ಪು ಚುಕ್ಕಿಯಾಗಿ ನಿಂತಿದೆ. ಮೆಟ್‌ಕಾಫ್‌ನ ಮಾತುಗಳನ್ನು ಇಲ್ಲಿ ಉದಹರಿಸಬಹುದು: '. . . .They were accustomed to, and in need of a paramount. When they had been left to themselves for two years between the expulsion of the Marathas, and the advent of Ranjit, even husbands and wives had flown at each other. . .' *

ಈ ಮಧ್ಯ ಬ್ರಿಟಿಷ್ ಏಜೆಂಟ್ ಸರ್ ಚಾರ್ಲ್ಸ್ ಮೆಟ್‌ಕಾಫ್, ರಣಜಿತ್ ಸಿಂಗ್‌ನನ್ನು ಭೇಟಿ ಮಾಡಿ ತನ್ನ ಸರಕಾರದ ಆತಂಕ ಹಾಗೂ ರಾಜನ ರಾಜ್ಯ ವಿಸ್ತೀರ್ಣಾಕಾಂಕ್ಷೆಗೆ ಅಂತ್ಯ ಹಾಡಲು ತಮ್ಮ ಅನಿಸಿಕೆ, ಕಳವಳ ವ್ಯಕ್ತಪಡಿಸಿದ್ದ. ಈಗ ಸಿಖ್ ಸರದಾರರ ನಿಯೋಗದಿಂದ ಅವರು ಉತ್ತೇಜಿತರಾದರು. ಅವರು ಸಟ್ಲೆಜ್ ನದಿಯ ಪೂರ್ವ ದಂಡೆಯ ಸಿಖ್ ರಾಜ್ಯಗಳ ರಕ್ಷಣೆಯ ಭಾರ ಹೊರಲು ಸಮ್ಮತಿಸಿದರು. ೭

'The Phulkian 'misl', one of the most powerful of the original twelve sikh confederates, comprised the states of Patiala, Jhind and Nabha. The founder was one Phul, a Jat of ancient lineage 'connected with Jaiselmer in the Rajputana desert, colonised by Jats who in the eleventh country migrated there from Multan, extending to Sirhind,. . . . .Phul built a village in 1640 calling it after his name. The Delhi

* P 64 Metcalfe's Mission in Lahore
* P 96 Metcalffe's Mission in Lahore.

emperor patronised him. He embraced Sikh religion, and his seven sons became the ancestors of the reigning families of Patiala, Jhind and Nabha. . .'

P 23 The Sikhs and the Sikh wars by Charles Gough

'policy, therefore demanded in the first place, that Malwa Sikhs (Shulkian Sikhs) should be kept apart, and friendly; and in the second that, provided this condition were fulfilled, the trans - Sutlej Sikhs should also be kept friendly.'

(P 38 The Sikhs by J.A. Gordon)

ಬ್ರಿಟಿಷ್ಟರ 'ಒಡೆದು ಆಳು' ನೀತಿ ಸಿಖ್ಖರ ವಿರುದ್ಧ ಕೆಲಸ ಮಾಡಿ ಜಯ ಗಳಿಸಿತ್ತು !

ಬ್ರಿಟಿಷರು ಸರ್ ಡೇವಿಡ್ ಓಕ್‌ರ್‌ಲೋನಿ ಎಂಬ ಸೈನ್ಯಾಧಿಕಾರಿಯ ನೇತೃತ್ವದಲ್ಲಿ ಒಂದು ಪಡೆಯನ್ನು ಪಂಜಾಬ್‌ನತ್ತ ಕಳುಹಿಸಿದರು. ೧೮೦೯ ರಲ್ಲಿ ಈ ಪಡೆ ಪಂಜಾಬ್‌ನತ್ತ ಸಾಗುತ್ತಿದ್ದ ಹಾಗೆ, ಸಿಖ್ ಮಿಸಾಲ್‌ದಾರರು ಅದನ್ನು ಎದುರಿಸಲಾಗದೆ, ಪಡೆಯನ್ನು ಸ್ವಾಗತಿಸಿದರು. ಎಲ್ಲೆಲ್ಲೂ ಬ್ರಿಟಿಷ್ ಪಡೆಗೆ ದೊರೆತ ಸ್ವಾಗತ, ನೆರವು, ಮಹಾರಾಜ ರಣಜಿತ್ ಸಿಂಗ್‌ನಿಗೆ ತನ್ನ ಸಾಮರ್ಥ್ಯ, ಬಲ, ಕೆಚ್ಚು ಬ್ರಿಟಿಷ್ಟರ ಮುಂದೆ ಪ್ರದರ್ಶನಕ್ಕೆ ಒಳಪಡಿಸಲು ಹಿಂಜರಿದ. ಅವನಿಗೆ ಅರಿವಾಗತೊಡಗಿತ್ತು, ಪ್ರಬಲ ಬ್ರಿಟಿಷ್ಟರ ವಿರುದ್ಧ ಹೋರಾಡುವುದು ದುಸ್ಸಾಧ್ಯ ಎಂದು. ೮

೧೮೦೭ – ೦೮ ರಲ್ಲಿ, ಬ್ರಿಟಿಷ್ಟರು ಭಾರತದ ಬಹತೇಕ ಭಾಗಗಳ ಮೇಲೆ ಅಧಿಕಾರ ಸ್ಥಾಪಿಸಿದರೂ, ನೆರೆಯ ಫ್ರಾನ್ಸ್‌ನೊಂದಿಗೆ ಶತಮಾನಗಳ ಹಗೆತನ ನೀಗಿಸಿಕೊಳ್ಳಲು ಶ್ರಮಪಟ್ಟರೂ, ಅ ಎರಡು ದೇಶಗಳ ಮಧ್ಯೆ ಸಂಬಂಧ ಸುಗುಮವಾಗುವ ಲಕ್ಷಣ ಕಾಣಲಿಲ್ಲ. ಎರಡೂ ದೇಶಗಳು ಭಾರತದಲ್ಲಿ ತಮ್ಮ ಆಧಿಪತ್ಯ ಸ್ಥಾಪಿಸಲು ಶ್ರಮ ವಹಿಸಿ, ಅದಕ್ಕಾಗಿ, ತಮ್ಮ ತನು, ಮನ, ಧನ, ಸೈನ್ಯ ಕುಟಿಲೋಪಾಯ, ರಾಜಕೀಯ ಮುತ್ಸದ್ದಿತನ ಉಪಯೋಗಿಸಿದರು. ಆದರೆ ಅವರ ಈ ಸಮರದಲ್ಲಿ, ಬ್ರಿಟಿಷ್ಟರು ಜಯ ಸಾಧಿಸಿ, ಫ್ರೆಂಚ್‌ರನ್ನು ಸೋಲಿಸಿ, ಅವರನ್ನು ಬಂಗಾಳದಲ್ಲಿ ಚಂದರ್‌ನಾಗೋರ್, ದಕ್ಷಿಣದಲ್ಲಿ ಪಾಂಡಿಚೆರಿ, ಮಾಹೆ ಪ್ರದೇಶಗಳಲ್ಲಿ ಮಾತ್ರ ತಮ್ಮ ಆಧಿಪತ್ಯ ಸ್ಥಾಪಿಸಿಕೊಳ್ಳುವದರಲ್ಲಿ ಸಫಲರಾಗಿದ್ದರು.

ಪಶ್ಚಿಮದಲ್ಲಿ ಸಿಖ್ಖರು ಪಂಜಾಬ್‌ನಲ್ಲಿ ತಮ್ಮ ಆಧಿಪತ್ಯ ಸ್ಥಾಪಿಸಿದ್ದರೂ, ಅವರಿಗೆ ಅರಿವಾಗದ ಹಾಗೆ, ದೂರದ ಫ್ರಾನ್ಸ್ ದೇಶದಲ್ಲಿ, ಪಂಜಾಬ್‌ನ ಮುಖಾಂತರ

೮. P 580 The French in India by S.P.Sen

ಭಾರತದ ಮೇಲೆ ದಂಡಯಾತ್ರೆ ಜರುಗಿಸಲು ಸಾಮ್ರಾಟ ನೆಪೋಲಿಯನ್ ಬೊನಾಪಾರ್ಟ್ ಯೋಜನೆ ತಯಾರಿಸುತ್ತಿದ್ದ. ಪರ್ಶಿಯನ್‌ರ ನೆರವಿನಿಂದ, ಆತ ಭಾರತದ ಮೇಲೆ ಆಕ್ರಮಣ ಜರುಗಿಸಲು ಯೋಜನೆ ತಯಾರಿಸಿ, ತನ್ನ ಒಬ್ಬ ಬೇಹುಗಾರ ಜನರಲ್ ಗಾರ್ಡೇನ್‌ನನ್ನು ತೆಹರಾನ್‌ಗೆ ಕಳುಹಿಸಿದ.

ಮಧ್ಯ ಪ್ರಾಚ್ಯ ಮತ್ತು ಯೂರೋಪ್‌ಗಳ ರಾಷ್ಟ್ರಗಳಲ್ಲಿ ಪರಸ್ಪರ ವೈರತ್ವ, ಹಗೆತನ, ಶತಮಾನಗಳಿಂದ ಮನೆಮಾಡಿದ್ದು, ಅನ್ಯೈಕ್ಯತೆಯ ಕಾರಣ, ಅವರು ಪರಸ್ಪರ ಯುದ್ಧಾಚರಣೆಯಲ್ಲಿ ಕಾಲ ಕಳೆದಿದ್ದರು. ಆಕ್ರಮಣಕಾರಿ ರಶಿಯಾ, ರಾಜ್ಯ ವಿಸ್ತೀರ್ಣ ಕಾರ್ಯದಲ್ಲಿ ನೆರೆಯ ರಾಷ್ಟ್ರಗಳ ಮೇಲೆ ಸಮರ ಸಾರಿ, ತುರ್ಕಿ, ಪರ್ಶಿಯಾಗಳಲ್ಲಿ ಹಗೆತನ ಸಂಪಾದಿಸಿತ್ತು. ಆಜನ್ಮ ವೈರಿಗಳಾದ ಇಂಗ್ಲೆಂಡ್ ಮತ್ತು ಫ್ರಾನ್ಸ್ ಈ ಎರಡೂ ರಾಷ್ಟ್ರಗಳ ಮಧ್ಯೆ ಮೂಗು ತೂರಿಸಿ, ತನ್ನ ಹಿತಾಸಕ್ತಿ ಕಾದುಕೊಳ್ಳಲು, ಎರಡೂ ರಾಷ್ಟ್ರಗಳ ಮೇಲೆ, ಸಂದರ್ಭಕ್ಕೆ ಅನುಸಾರ ಸಮರ ಕೈಗೊಳ್ಳುತ್ತಿತ್ತು.

ತುರ್ಕಿ ಮತ್ತು ಪರ್ಶಿಯಾ ರಾಷ್ಟ್ರಗಳು, ಮುಸ್ಲಿಮ್ ರಾಷ್ಟ್ರಗಳಾದರೂ, ಅವರಲ್ಲಿ ದ್ವೇಷವಿದ್ದು, ಪರಸ್ಪರ ಸಮರ ಸಾಗಿಸುತ್ತಿದ್ದರು. ಇಂತಹ ವಿಲಕ್ಷಣ ರಾಜಕೀಯ ಪರಿಸ್ಥಿತಿಯಲ್ಲಿ ಫ್ರಾನ್ಸ್‌ನ ರಾಜ ನೆಪೋಲಿಯನ್ ಪ್ರಸಿದ್ಧ 'ಫಿನ್‌ಕೆನ್‌ಸ್ಟೀನ್ ಒಪ್ಪಂದ' ಮಾಡಿಕೊಂಡ. ಆ ಸಂಧಿಯ ಪ್ರಕಾರ, ನೆಪೋಲಿಯನ್ ಯೂರೋಪ್‌ನ ರಾಷ್ಟ್ರ ಜಾರ್ಜಿಯಾದ ಮೇಲೆ ರಶಿಯಾ ದಾಳಿ ನಡೆಸಿ ಆಕ್ರಮಿಸಿದ್ದನ್ನು ವಿರೋಧಿಸಿ, ಆ ದೇಶದ ಮೇಲಿನ ಪರ್ಶಿಯಾದ ಹಕ್ಕನ್ನು ಅಂಗೀಕರಿಸಿದ. ಪರ್ಶಿಯಾದ ಶಾ, ಫ್ರಾನ್ಸ್‌ನ ವೈರಿ ಇಂಗ್ಲೆಂಡ್‌ನ ಮೇಲೆ ಯುದ್ಧ ಸಾರಿ, ತನ್ನ ರಾಜ್ಯದಲ್ಲಿನ ಎಲ್ಲಾ ಇಂಗ್ಲಿಷ್‌ರನ್ನು ಹೊರದಬ್ಬಿ, ಫ್ರೆಂಚ್‌ರನ್ನು ತಮ್ಮ ರಾಜ್ಯದಲ್ಲಿ ಬರಮಾಡಿಕೊಂಡು, ಅವರಿಂದ ಯುದ್ಧ ಸಾಮಗ್ರಿಗಳ ತಯಾರಿಕೆಯ ಕಾರ್ಖಾನೆ ತೆರೆಯಲು ಅನುಮತಿ ನೀಡಿದ. ಮುಂದೆ ಫ್ರೆಂಚ್‌ರು ಭಾರತದ ಮೇಲೆ ಆಕ್ರಮಣ ಜರುಗಿಸಲು, ಆಫ್ಘನರ ಸ್ನೇಹ ಸಂಪಾದಿಸಿ, ಕ್ರಮೇಣ ಪಂಜಾಬ್‌ನ ಸಿಖ್‌ರೊಂದಿಗೆ ಜೊತೆಗೂಡಿ, ಇಂಗ್ಲಿಷ್‌ರ ವಿರುದ್ಧ ಸಮರ ಸಾಗಿಸುವ ಯೋಜನೆಗೆ ಸಹಿ ಹಾಕಿದ.

ಆದರೆ, ಈ ಸಂಧಿಗೆ ಸಹಿ ಹಾಕಿದ ಫ್ರಾನ್ಸ್ ಪರ್ಶಿಯಾದ ಯಾವ ಯೋಜನೆಗಳಿಗೆ ಸಹಾಯ ಹಸ್ತ ನೀಡದ ಕಾರಣ, ಪರ್ಶಿಯಾ, ರಶಿಯಾ ಮತ್ತು ತುರ್ಕಿಯರ ವಿರುದ್ಧ ತಮ್ಮ ಅಸ್ತಿತ್ವ ಕಾದುಕೊಳ್ಳಲು, ಬ್ರಿಟಿಷ್‌ರ ಮೊರೆ ಹೋಗಬೇಕಾಗಿ ಬಂದಿತು.*

ಸರ್ ಥಾಮಸ್ ರೋ, ಮೊಘಲ್ ಬಾದ್‌ಶಹಾ ಜಹಂಗೀರ್‌ನ ಆಳ್ವಿಕೆಯಲ್ಲಿ ಇಂಗ್ಲೆಂಡ್‌ನ ದೂತನಾಗಿ ಬಂದು, ತನ್ನ ಅನುಭವದ ಕಥೆಗಳನ್ನು ದಾಖಲಿಸಿದ್ದಾನೆ. ಅವನ ಮಾತುಗಳಲ್ಲೇ ಹೇಳುವುದಾದರೆ: '. . . .The Persian King hath

---

* P 580 The French in India by S.P. Sen

lately with fire and sword wasted and subdued the poor free Georgian Christians, and with his own army stroke off his eldest son`s head. Revenge is like to follow as the Turk preparing to enter his country with terrible hostility by the way of Baghdad.'

(P 102-02 The Embassy of Sir Thomas Roe in India)

ಅವನು ಬ್ರಿಟಿಷ್‌ರೊಂದಿಗೆ ಸಂಧಿ ಮಾಡಿಕೊಂಡ. ಏಪ್ರಿಲ್ ೧೫, ೧೮೦೯ ರಂದು ರಣಜಿತ್ ಸಿಂಗ್ ಬ್ರಿಟಿಷ್‌ರೊಂದಿಗೆ ಸಂಧಿ ಮಾಡಿಕೊಂಡರ ಪ್ರಯುಕ್ತ, ಸಟ್ಲೆಜ್ ನದಿಯ ಎಡ ದಂಡೆಯ ಮೇಲೆ ಪೂರ್ವಕ್ಕೆ ತನ್ನ ಹಕ್ಕನ್ನು ಬಿಟ್ಟುಕೊಟ್ಟು, ನದಿಯ ಪಶ್ಚಿಮ ಹಾಗೂ ಉತ್ತರ ದಿಕ್ಕಿನ ಪ್ರದೇಶಗಳ ಮೇಲೆ ಸಾಮ್ರಾಜ್ಯ ವಿಸ್ತರಿಸಿ, ತನ್ನ ಆಧಿಪತ್ಯವನ್ನು ಸ್ಥಾಪಿಸಲಿಕ್ಕೆ ಅನುವು ಮಾಡಿಕೊಡಲಾಯಿತು. ಈ ಸಂಧಿಯಿಂದಾಗಿ, ಲೂಧಿಯಾನ ನಗರ ಅವನ ಕೈವಶದಿಂದ ತಪ್ಪಿ, ಅದು ಬ್ರಿಟಿಷ್‌ರ ದಂಡು ಪ್ರದೇಶವಾಗಿ ಮಾರ್ಪಟ್ಟು, ಅಲ್ಲಿ ಅವರು ಒಂದು ಪ್ರಬಲ ಸೈನ್ಯ ಠಾಣೆಯನ್ನು ನಿರ್ಮಿಸಿದರು. ಲೂಧಿಯಾನದ ಎದುರು ಬದಿಯಲ್ಲಿಯೇ ಇದ್ದ ಪ್ರಸಿದ್ಧ ಫಿಲ್ಲೌರ್ ಕೋಟೆಯನ್ನು ರಣಜಿತ್‌ಸಿಂಗ್ ಬಲಪಡಿಸಿದ. ಅದೇ ರೀತಿ ಅಮೃತಸರದ ಗೋವಿಂದ್‌ಗಢ ಕೋಟೆಯನ್ನು ಬಲಪಡಿಸಿದ.

ಮಹಾರಾಜಾ ರಣಜಿತ್‌ಸಿಂಗ್‌ನ ಹಿಡಿತ ಹಾಗೂ ಆಕ್ರಮಣಗಳಿಂದ ತಪ್ಪಿಸಿಕೊಂಡ ಸಿಖ್ ಮಿಸಾಲದಾರರು ಈಗ ಸ್ವತಂತ್ರರಾದರು. ಆದರೆ ಅವರು ಪರಸ್ಪರ ಕಚ್ಚಾಡುವುದನ್ನು ನಿಲ್ಲಿಸಲಿಲ್ಲ. ಅನೈಕ್ಯತೆಯ ವ್ಯಾಧಿ ಅವರನ್ನು ಆವರಿಸಿತ್ತು. ಅವರ ಕಚ್ಚಾಟ, ಪರಸ್ಪರ ಯುದ್ಧಾಚರಣೆ, ಬ್ರಿಟಿಷ್‌ರಿಗೆ ಮಧ್ಯೆ ಪ್ರವೇಶಕ್ಕೆ ಅಣತಿ ನೀಡಿತ್ತು. ಸಿಖ್ ಮಿಸಾಲ್‌ದಾರರನ್ನು ಅತ್ಯಂತ ಚಾಣಾಕ್ಷತನದಿಂದ, ಕೆಲವೊಮ್ಮೆ ಬಲಾತ್ಕಾರದಿಂದ, ಸೈನ್ಯಾಚರಣೆಯಿಂದ, ತಮ್ಮ ಅಧೀನಕ್ಕೆ ಎಳೆದು ಅವರ ಮೇಲೆ ತಮ್ಮ ಸಾರ್ವಭೌಮತ್ವವನ್ನು ಹೇರಿ ಸಂತಸಪಟ್ಟರು ಬ್ರಿಟಿಷ್‌ರು. ತಮ್ಮ ಬಂಧುವಾಗಿದ್ದ ಸಿಖ್ ಸಂಜಾತ ಮಹಾರಾಜಾ ರಣಜಿತ್‌ಸಿಂಗ್‌ನ ಸಾರ್ವಭೌಮತ್ವವನ್ನು ಒಪ್ಪದ ಸಿಖ್ ಮಿಸಾಲ್‌ದಾರರು ಪರಕೀಯ ಬ್ರಿಟಿಷ್‌ರ ಸಾರ್ವಭೌಮತ್ವವನ್ನು ಆಲಂಗಿಸಿದ್ದು ಭಾರತದ ಇತರ ರಾಜ ಮಹಾರಾಜ, ನವಾಬ, ಪಾಳೇಗಾರರ ರೀತಿಯಲ್ಲೇ ಜರುಗಿದ್ದು ದೇಶದ ಇತಿಹಾಸದಲ್ಲಿ ಅದು ನೂತನ ರೀತಿಯದ್ದೇನೂ ಆಗಿರಲಿಲ್ಲ.

ಕ್ರಮೇಣ ಮುಂದಿನ ದಿನಗಳಲ್ಲಿ ರಣಜಿತ್ ಸಿಂಗ್ ಸಟ್ಲೆಜ್ ನದಿಯ ಉತ್ತರ ದಿಕ್ಕಿನತ್ತ ತನ್ನ ದೃಷ್ಟಿ ಹರಿಸಿ, ಆಕ್ರಮಣ ಜರುಗಿಸಿದ. ಹಿಮಾಲಯ ಪರ್ವತದ ಬೆಟ್ಟ ಪ್ರದೇಶದ ಕಾಂಗ್ರಾ ರಾಜ್ಯವನ್ನು, ಆಳುತ್ತಿದ್ದ ನೇಪಾಳದ ಗೂರ್ಖಾ ಸೈನ್ಯಾಧಿಕಾರಿಯಾದ ಅಮರ್‌ಸಿಂಗ್ ಥಾಪಾನನ್ನು ಸೋಲಿಸಿ ಕಾಂಗ್ರಾ ಕೋಟೆಯನ್ನು ವಶಪಡಿಸಿ, ಗೂರ್ಖಾರಿಂದ ರಾಜ್ಯವನ್ನು ಕಾಪಾಡಿದ. ಗೂರ್ಖಾಗಳ ಉಪಟಳವನ್ನು ಬ್ರಿಟಿಷ್‌ರು

ಕೂಡ ೧೮೧೪–೧೫ ರಲ್ಲಿ ಕೊನೆಗೊಳಿಸಿದರು.

ರಣಜಿತ್ ಸಿಂಗ್, ಬೆಟ್ಟ ಗುಡ್ಡ ಪ್ರದೇಶದ ಸಕಲ ಹಿಂದೂ ರಾಜರನ್ನು ತನ್ನ ಸಾಮಂತರನ್ನಾಗಿ ಮಾಡಿಕೊಂಡು, ಅವರಿಂದ ಕಪ್ಪ ಕಾಣಿಕೆ ವಸೂಲಿ ಮಾಡಿಕೊಂಡ.

೧೮೧೦ ರಲ್ಲಿ ಮುಲ್ತಾನ್‌ನಿನ ಪಠಾಣ ನವಾಬ ದಂಗೆ ಎದ್ದ. ನವಾಬ ಮುಜಾಫರ್ ಖಾನ್‌ನ ಮೇಲೆ ಸೈನ್ಯಾಚರಣೆ ನಡೆಸಿದ. ರಣಜಿತ್ ಸಿಂಗ್ ಸಫಲಗೊಂಡರೂ, ತನ್ನ ಅಪ್ರತಿಮ ಸೈನ್ಯಾಧಿಕಾರಿಗಳನ್ನೂ ಕಳೆದುಕೊಂಡ. ನೂರಾರು ಸಿಖ್ ಸೈನಿಕರು ಯುದ್ಧದಲ್ಲಿ ಹುತಾತ್ಮರಾದರು. ಅಂತಿಮವಾಗಿ ಸಿಖ್ಖರ ವೀರತನ, ಶೌರ್ಯದಿಂದ ಮುಲ್ತಾನ್‌ನಿನ ಕೋಟೆಯನ್ನು ವಶಪಡಿಸಿಕೊಂಡ ರಣಜಿತ್ ಸಿಂಗ್. ನವಾಬನನ್ನು ಶಿಕ್ಷಿಸದೆ, ಶರಣಾದ ಅವನನ್ನು ಕ್ಷಮಿಸಿ, ಅವನಿಗೆ ನಗರವನ್ನು ಬಿಟ್ಟುಕೊಟ್ಟ. ಆದರೆ, ಅವನ ಭಾವನೆಂಟನನ್ನು ಸೆರೆಹಿಡಿದು, ಒತ್ತೆಯಾಳಾಗಿ ಇಟ್ಟುಕೊಂಡು ನವಾಬನ ಬಲ ಮುರಿದ.

ರಣಜಿತ್ ಸಿಂಗ್ ಪಂಜಾಬ್‌ನ ಬಹುತೇಕ ಭಾಗಗಳ ಒಡೆಯನಾಗಿ ವಿಜೃಂಭಿಸಿದ. ಇತಿಹಾಸಕಾರರ ಪ್ರಕಾರ, ಆತ, ಸೈನ್ಯಾಚರಣೆದಲ್ಲದೆ, ಕುಶಾಗ್ರಮತೆ, ಮಾತುಕತೆ, ಉದಾರ ಹೃದಯವಂತಿಕೆ, ಧಾರ್ಮಿಕ ಸಹಿಷ್ಣುತೆ ಮತ್ತು ರಾಜಕೀಯ ಮುತ್ಸದ್ದೀತನಗಳಿಂದ ರಾಜ್ಯವಿಸ್ತೀರ್ಣ ಕಾರ್ಯ ಜರುಗಿಸಿ, ಸಫಲತೆ ಪಡೆದ.

'Runjeet Singh never thought his own, or the Sikh sway was to be confined to the Punjab, and his only wish was to lead armies as far as faith in the Khalsa and confidence in his skill would take brave and believing men. He troubled himself not at all with the theory or the practical niceties of administration, and he would rather have added a province to his rule, than have received the assurances of his English neighbors that he legislated with discrimination in commercial affairs, and with a just regard for the amelioration of his ignorant and fanatical subjects of various persuasions. He took from the land as much as it could readily yield, and he took from merchants as much as they could profitably give; he put down open marauding; the Sikh peasantry enjoyed a light assessment; no local officer dared to oppress a member of the Khalsa; and if elsewhere the farmers of revenue were resisted in their tyrannical proceedings, they were more likely to be changed than to be supported by bat-

talions. He did not ordinarily punish men who took redress into their own hands, for which, indeed, his subordinates were prepared, and which they guarded, against as they could. The whole wealth, and the whole energies, of the people, were devoted to war, and to the preparation of military means and equipment. The system is that common to all feudal governments, and it gives much scope to individual ambition, and tends to produce independence of character. It suited the mass of the Sikh population; they had ample employment, they loved contention, and they were pleased that city after city admitted the supremacy of the Khalsa, and enabled them to enrich their families, But Runjeet Singh never arrogated to himself the title or the powers of despot or tyrant. He was assiduous in his devotions; he honoured men of reputed sanctity, and enabled them to practise an enlarged charity, he attributed every success to the favour of God, and he styled himself and people collectively the 'Khalsa', or commonwealth of Govind. . . . .'
(P 171 History of Sikhs by Cunningham)

ಪಂಜಾಬ್‌ನ ಬಹುತೇಕ ಪ್ರದೇಶಗಳನ್ನು ವಶಪಡಿಸಿಕೊಂಡ ನಂತರ, ರಣಜಿತ್ ಸಿಂಗ್‌ನ ದೃಷ್ಟಿ ಪಠಾಣರು ಆಕ್ರಮಿಸಿ ಆಳುತ್ತಿದ್ದ ಕಾಶ್ಮೀರ, ಪೇಶಾವರ್, ಕೋಹಾಟ್, ಬನ್ನೂ, ದೆರಾ ಇಸ್ಮೈಲ್‌ಖಾನ್, ಮತ್ತು ಹಜ಼ಾರಾ ಪ್ರಾಂತ್ಯಗಳ ಮೇಲೆ ಬಿತ್ತು. ಇದೇ ಸಮಯದಲ್ಲಿ ಸಿಖ್ಖರ ಶತ್ರುಗಳಾಗಿ ಅವರ ಪ್ರತಿಸ್ಪರ್ಧಿಗಳಾಗಿ, ನಿರಂತರವಾಗಿ ಕಾದಾಡುತ್ತಿದ್ದ ಆಫ್ಘನ್ ಸುಲ್ತಾನ್ ಶಾ ಶೂಜಾ ತನ್ನ ಸಿಂಹಾಸನ ಕಳೆದುಕೊಂಡು ಭಾರತಕ್ಕೆ ಓಡಿ ಬಂದಿದ್ದ. ಆತ ರಣಜಿತ್ ಸಿಂಗ್‌ನ ಸಹಾಯ ಬೇಡಿದ. ಆದರೆ ಅವನು ರಣಜಿತ್ ಸಿಂಗ್‌ನಿಂದ ಯಾವ ಸಹಾಯ ಪಡೆಯದೆ, ತನ್ನ ರಾಜ್ಯಕ್ಕೆ ಹಿಂದಿರುಗಲಾರದೆ, ಪೆಶಾವರ್‌ನಲ್ಲಿ ನಿಂತ. ಅಲ್ಲಿನ ಆಫ್ಘನ್ ರಾಜ್ಯಪಾಲ ಅವನಿಗೆ ಆಶ್ರಯ ನೀಡದೆ ಕಾಶ್ಮೀರಕ್ಕೆ ಕಳುಹಿಸಿ ಅಲ್ಲಿ ಅವನ ಸೆರೆಯಾಗಿಸಿದ. ಶಾ ಶೂಜಾನ ಸಹೋದರ ಶಾ ಜಮಾನ್ ತನ್ನ ರಾಜ್ಯ ಮತ್ತು ಕಣ್ಣುಗಳನ್ನು ಕಳೆದುಕೊಂಡು ಲಾಹೋರ್‌ಗೆ ಬಂದು ರಣಜಿತ್ ಸಿಂಗ್‌ನ ಆಶ್ರಯ ಪಡೆದ. ಆಫ್ಘಾನಿಸ್ತಾನದ ರಾಜಧಾನಿ ಕಾಬೂಲ್‌ನಲ್ಲಿ ಆಳುತ್ತಿದ್ದ ಪ್ರಧಾನ ಮಂತ್ರಿ ಫತೇ ಖಾನ್, ಕಾಶ್ಮೀರದಲ್ಲಿ ತನ್ನ ಪರವಾಗಿ ಆಳುತ್ತಿದ್ದ ರಾಜ್ಯಪಾಲ ಸ್ವತಂತ್ರನಾಗಿ ಆಳುತ್ತಿರುವ ಸಂಗತಿ ಅರಿತು ಅವನನ್ನು ಸ್ಥಾನಪಲ್ಲಟ

ಮಾಡಿ, ತನ್ನ ಪ್ರಭುತ್ವ ಸ್ಥಾಪಿಸಲು ರಣಜಿತ್‌ಸಿಂಗ್‌ನ ಸಹಾಯ ಕೋರಿದ. ಯಾಕೆಂದರೆ, ಕಾಶ್ಮೀರವನ್ನು ಸುತ್ತುವರೆದ ರಣಜಿತ್‌ಸಿಂಗ್‌ನ ರಾಜ್ಯವನ್ನು ಅತಿಕ್ರಮಿಸಿ, ತನ್ನ ಸೈನ್ಯಾಚರಣೆ ಮಾಡಿ ಕಾಶ್ಮೀರ ರಾಜ್ಯ ಪ್ರವೇಶಿಸಿ, ಅಲ್ಲಿನ ರಾಜ್ಯಪಾಲನನ್ನು ಎದುರಿಸಲು ಸುಲಭಸಾಧ್ಯವಾಗಿರಲಿಲ್ಲ.

ಮಹಾರಾಜ ರಣಜಿತ್ ಸಿಂಗ್‌ನಿಗೆ ಕಾಶ್ಮೀರದ ರಾಜಕೀಯದಲ್ಲಿ ಪ್ರವೇಶಿಸಿ, ಪಠಾಣರಿಗೆ ಸಹಾಯ ಮಾಡುವ ನೆಪದಿಂದ ಮತ್ತು ಅಲ್ಲಿ ಬಂಧಿಯಾಗಿದ್ದ ಶಾ ಶೂಜಾನನ್ನು ಸೆರೆಯಿಂದ ಬಿಡಿಸಲು, ಅವನ ಪತ್ನಿಯ ಕೋರಿಕೆ, ಅನುಕೂಲ ಸಿಂಧುವಾಗಿ ಪರಿಣಮಿಸಿದ್ದವು. ಆಫ್ಘನ್ ಪ್ರಧಾನ ಮಂತ್ರಿ ಫತೇ ಖಾನ್‌ನೊಂದಿಗೆ ರಣಜಿತ್ ಸಿಂಗ್ ಮಾಡಿಕೊಂಡ ಒಪ್ಪಂದದಲ್ಲಿ ಸಿಖ್ ಸೈನ್ಯದ ಸಹಾಯದಿಂದ ಕಾಶ್ಮೀರವನ್ನು ಗೆದ್ದ ನಂತರ, ಆ ಪ್ರದೇಶದ ೧/೩ ಭಾಗವನ್ನು ಮತ್ತು ಕೊಳ್ಳೆಯಲ್ಲಿ ೧/೩ ಭಾಗವನ್ನು ತನಗೆ ಬೀಡಬೇಕೆಂದಾಗಿತ್ತು. ಅದಕ್ಕೆ ಒಪ್ಪಿದ ಫತೇ ಖಾನ್ ಮಾತ್ರ ಸಿಖ್ ಸೈನ್ಯದ ನೆರವು ಪಡೆದು ಕಾಶ್ಮೀರವನ್ನು ಅಕ್ರಮಿಸಿ, ಸಿಖ್ ಸೈನಿಕರನ್ನು ಅಲ್ಲಿಂದ ಓಡಿಸಿದ. ಆದರೆ, ಅಲ್ಲಿ ಬಂಧಿಯಾಗಿದ್ದ ಶಾ ಶ್ರಜಾನನ ಬಿಡುಗಡೆಯಾಗಿ ಅವನು ಲಾಹೋರ್‌ಗೆ ಬಂದಿಳಿದ.

ಕಾಶ್ಮೀರದ ರಾಜ್ಯಪಾಲನನ್ನು ಪದಚ್ಯುತಿಗೊಳಿಸಿದಂತೆ, ಅಟ್ಟೋಕ್ ಕೋಟೆ ಮತ್ತು ಪ್ರದೇಶವನ್ನು ಆಳಿಕೊಂಡಿದ್ದ ಅವರ ಸಹೋದರ ಜಹಂದರ್ ಖಾನ್‌ನಿಗೆ ತನ್ನ ಸ್ಥಾನ ಅಭದ್ರವಾಗಿದ್ದ ವಿಷಯ ಅರಿತು ಭಯಗೊಂಡ. ಅವನು ರಣಜಿತ್ ಸಿಂಗ್‌ನ ಸಹಾಯ ಕೋರಿದ. ಅಟ್ಟೋಕ್ ಕೋಟೆಯನ್ನು ಆಕ್ರಮಿಸಿಕೊಳ್ಳುವಂತೆ ಆಮಂತ್ರಣ ನೀಡಿದ. ೧೦

ಸಿಂಧೂ ಮತ್ತು ಕಾಬೂಲ್ ನದಿಗಳ ಸಂಗಮ ಸ್ಥಳದಲ್ಲಿದೆ. ಈ ಅಟ್ಟೋಕ್ ಕೋಟೆ.

". . . .It is one of the best fortresses of the Great Mogul (Aurangzeb) and they do not permit any stranger to enter it if he does not hold a passport from the Emperor. . ."

ಪಠಾಣರು ತಮ್ಮ ಭದ್ರಕೋಟೆ ಅಟ್ಟೋಕ್‌ನನ್ನು ಕಳೆದುಕೊಳ್ಳಲು ಸಿದ್ಧರಿರಲಿಲ್ಲ. ಕಾಬೂಲ್‌ನ ಮಂತ್ರಿಯ ಸಹೋದರ ದೋಸ್ತ್ ಮೊಹಮ್ಮದ್ ಖಾನ್, ಒಂದು ದಂಡನ್ನು ಹೊತ್ತು ಅಟ್ಟೋಕ್‌ನ್ನು ಮರಳಿ ಪಡೆಯಲು ಯತ್ನಿಸಿದ. ವೀರಾವೇಷದಿಂದ ಕಾದಾಡಿದ ಸಿಖ್ ಸೈನ್ಯ ದೋಸ್ತ್ ಮೊಹಮ್ಮದ್‌ನನ್ನು ಸೋಲಿಸಿತು. ಆ ನಿರ್ಣಾಯಕ ಯುದ್ಧ ಪಾಣೀಪತ್ ಯುದ್ಧದಷ್ಟೇ ಪ್ರಮುಖವಾಗಿ ಪರಿಣಮಿಸಿದೆ ಎಂದರು

೧೦. P 76 Travel in India by Tavernier

ಇತಿಹಾಸಕಾರರು. ಯಾಕೆಂದರೆ, ಪಠಾಣರ ಸೋಲು ಅವರು ಪುನಃ ಭಾರತದ ನೆಲದಲ್ಲಿ ತಲೆ ಎತ್ತದಂತೆ ಮಾಡಿತು. ೧೧

೧೮೧೦ ರಲ್ಲಿ ಜಮ್ಮೂ ಪ್ರದೇಶದ ಡೋಗ್ರಾ ಬುಡಕಟ್ಟಿಗೆ ಸೇರಿದ ರಾಜಪುತ್ರ ವಂಶದ ಗುಲಾಬ್ ಸಿಂಗ್ ಎಂಬಾತ ರಣಜಿತ್ ಸಿಂಗ್‌ನ ಸೈನ್ಯದಲ್ಲಿ ನೇಮಕಗೊಂಡ. ಆತ ಧೀರನೂ ಕುಶಲಮತಿಯೂ ಆಗಿದ್ದ. ಆತ ೧೭೬೧ ರಲ್ಲಿ ಜನ್ಮ ತಳೆದ. ಆತನ ಇಬ್ಬರು ಸಹೋದರರಾದ ಧ್ಯಾನ್‌ಸಿಂಗ್ ಮತ್ತು ಸುಚೇತಾ ಸಿಂಗ್, ಗುಲಾಬ್ ಸಿಂಗ್‌ನನ್ನು ಹಿಂಬಾಲಿಸಿ ಸಿಖ್ ಸೈನ್ಯದಲ್ಲಿ ಸೇವೆ ಸಲ್ಲಿಸಿದರು. ಮೂರು ಸಹೋದರರು ತಮ್ಮ ಧೈರ್ಯ ಸಾಹಸಗಳಿಂದ ರಣಜಿತ್ ಸಿಂಗ್‌ನ ಪ್ರೀತಿ, ಆದರ ಗಳಿಸಿ ಶೀಘ್ರವಾಗಿ ಉನ್ನತ ಪದವಿ ಗಳಿಸಿದರು. ರಾಜ ಅವರಿಗೆ 'ರಾಜ' ಪದವಿ ನೀಡಿ ಗೌರವಿಸಿದ. ಧ್ಯಾನ್‌ಸಿಂಗ್, ಮುಂದೆ, ಪ್ರಧಾನ ಮಂತ್ರಿಯೂ ಆದ. ಗುಲಾಬ್‌ಸಿಂಗ್‌ನನ್ನು ಜಮ್ಮೂ ಪ್ರದೇಶದ ರಾಜ್ಯಪಾಲನನ್ನು ಮಾಡಲಾಯಿತು. ಮೂವರು ಸಹೋದರರೂ, ತಮ್ಮ ಯುದ್ಧ ಕುಶಲತೆ, ನಿಪುಣತೆ, ಚತುರತೆಗಳಿಂದ ಸ್ವತಂತ್ರವಾಗಿ ತಮ್ಮದೇ ರೀತಿ ನೀತಿ ಅಳವಡಿಸಿ, ನೆಪಮಾತ್ರಕ್ಕೆ ಲಾಹೋರ್‌ನ ಮಹಾರಾಜ ರಣಜಿತ್ ಸಿಂಗ್‌ನಿಗೆ ತಲೆಬಾಗಿ, ಆಳ್ವಿಕೆ ನಡೆಸುವುದರಲ್ಲಿ ಯಶಸ್ವಿ ಪಡೆದರು. ಅವರು ರಣಜಿತ್ ಸಿಂಗ್ ಬದುಕಿರುವವರೆಗೂ ಅವನ ಸಾಮಂತರಾಗಿ, ಬ್ರಿಟಿಷ್‌ರ ವಿರುದ್ಧ ಹಗೆತನ ಸಾರಿ, ರಾಜನಿಷ್ಠೆಯನ್ನು ತೋರಿದರು. ರಣಜಿತ್ ಸಿಂಗ್‌ನ ಮರಣದನಂತರ, ಅವರು ತಮ್ಮ ನೈಜಗುಣ ತೋರ್ಪಡಿಸಿ, ಬ್ರಿಟಿಷ್‌ರಿಗೆ ತಲೆಬಾಗಿ ಅವರಿಗೆ ಸರ್ವತೋಮುಖ ಸಹಾಯ ನೀಡಿ, ಜಮ್ಮೂ ಮತ್ತು ಕಾಶ್ಮೀರದ ರಾಜ ಪ್ರಭುತ್ವ ಅವರಿಂದ ದಕ್ಕಿಸಿಕೊಂಡರು. ೧೨

೧೮೧೬ರಲ್ಲಿ ರಣಜಿತ್ ಸಿಂಗ್ ಪುನಃ ಮುಲ್ತಾನ್ ಮೇಲೆ ಸೈನ್ಯಾಚರಣೆ ಜರುಗಿಸಬೇಕಾಯಿತು. ಮುಲ್ತಾನ್‌ನ ಆಫ್ಘನ್ ನವಾಬ ತನಗೆ ಸಾಮಂತನಾಗಿ ಕಪ್ಪ ನೀಡುವುದನ್ನು ನಿಲ್ಲಿಸಿ ಸ್ವತಂತ್ರನಾಗಿ ತನ್ನ ವಿರುದ್ಧ ಕತ್ತಿ ಮಸೆಯುತ್ತಿದ್ದ. ಪಠಾಣ ನವಾಬ ಮುಜಾಫರ್‌ಖಾನ್ ವಿಧರ್ಮಿ ಸಿಖ್ಖರ ಸ್ವಾಮಿತ್ವ ಒಪ್ಪಿಕೊಳ್ಳಲು ಮನಸ್ಸು ಮಾಡದೆ ತನ್ನ ಸ್ವತಂತ್ರತೆಯನ್ನು ಕಾಪಾಡಲು ಯತ್ನ ನಡೆಸಿದ್ದ. ಮಹಾರಾಜಾ ರಣಜಿತ್ ಸಿಂಗ್, ತನ್ನ ನೆಚ್ಚಿನ ಕೆಚ್ಚಿನ ಸೈನ್ಯಾಧಿಕಾರಿಗಳಾದ ದಿನಾನ್ ಚಂದ್, ಹರಿ ಸಿಂಗ್ ನಾಲ್ವಾ, ಶಾಮ್ ಸಿಂಗ್ ಅತ್ತಾರಿಗಳನ್ನು ರಾಜಕುಮಾರ ಖರಕ್ ಸಿಂಗ್‌ನ ನೇತೃತ್ವದಲ್ಲಿ ಮುಲ್ತಾನ್‌ನ ಮೇಲೆ ಹೋರಾಟ ಜರುಗಿಸಲು ಕಳುಹಿಸಿದ. ಘನಘೋರ ಕಾಳಗದಲ್ಲಿ ಅನೇಕ ಸಿಖ್ ಸರದಾರರು ಮರಣವನ್ನಪ್ಪಿದರು. ನವಾಬ ಮುಸಾಫರ್ ಖಾನ್ ಹೋರಾಡಿ ಸಾವನ್ನಪ್ಪಿದ. ನವಾಬ್‌ನ ಐದು ಮಕ್ಕಳು ಕೂಡ ಹೋರಾಡಿ ಸಾವನ್ನಪ್ಪಿದರು. ಉಳಿದ ಇಬ್ಬರು ಮಕ್ಕಳನ್ನು ಸೆರೆಹಿಡಿಯಲಾಯಿತು. ಮುಲ್ತಾನ್

೧೧. P 471 History of Sikh People by G.Singh
೧೨. P 468. History of Sikh People by G.Singh

ಕೋಟೆಯನ್ನು ಆಕ್ರಮಿಸಿದ ಸಿಖ್ ಸೈನ್ಯ ಊರು ನಾಶಮಾಡಿ, ಧನದ್ರವ್ಯ ಲೂಟಿ ಮಾಡಿದರು.

೨೦ನೆಯ ಏಪ್ರಿಲ್, ೧೮೧೯ ರಂದು, ಮಹಾರಾಜ ರಣಜಿತ್ ಸಿಂಗ್, ಸ್ವಯಂ ಕಾಶ್ಮೀರದ ಮೇಲೆ ದಾಳಿ ನಡೆಸಿದ. ಈ ಮೊದಲೇ ಕಾಶ್ಮೀರದ ಮೇಲೆ ದಾಳಿ ಜರುಗಿಸಿ ಸೋಲುಂಡು ಅನುಭವ ಪಡೆದ ರಾಜ, ಸಾಕಷ್ಟು ಮುಂಜಾಗ್ರತೆ ವಹಿಸಿ ತನ್ನ ಅಪಾರ ಸೈನ್ಯದೊಂದಿಗೆ, ಪಠಾಣರ ವಶದಲ್ಲಿದ್ದ ರಾಜೌರಿ, ಭೀಮ್‌ಬರ್, ತರಾಯಿ, ಪೂಂಚ್, ಪೀರ್ ಪಂಜಾಲ್ ಬೆಟ್ಟಪ್ರದೇಶ, ಸೋಫಿಯಾನ್ ಮುಂತಾದ ಪ್ರದೇಶಗಳನ್ನು ಜಯಿಸಿದ. ಜುಲೈ ೪, ೧೮೧೯ರಂದು ಶ್ರೀನಗರ ಪಟ್ಟಣವನ್ನು ಸಿಖ್ ಸೈನ್ಯ ಪ್ರವೇಶಿಸಿತು. ಶಹಾಬಾದ್ ನಗರದಲ್ಲಿ ತಂಗಿದ್ದ ರಣಜಿತ್‌ಸಿಂಗ್‌ನಿಗೆ ತನ್ನ ಸೈನ್ಯ ರಾಜಧಾನಿ ಶ್ರೀನಗರವನ್ನು ಪ್ರವೇಶಿಸಿ ಆಕ್ರಮಿಸಿದ್ದ ಸುದ್ದಿ ತಿಳಿಸಿದಾಗ ಆತನ ಆನಂದಕ್ಕೆ ಪಾರವೇ ಇರಲಿಲ್ಲ. ಕಾಶ್ಮೀರದ ೪೫೦೦ ವರ್ಷಗಳ ಇತಿಹಾಸದಲ್ಲಿ ಪ್ರಪ್ರಥಮವಾಗಿ ಪರಕೀಯರ ಉಚ್ಚಾಟನೆಯಾಗಿ, ಭಾರತೀಯ ಸೈನ್ಯ ಪುನಃ ಆ ಪ್ರದೇಶವನ್ನು ಪಡೆದುಕೊಂಡಿತ್ತು. ೧೩

ರಣಜಿತ್ ಸಿಂಗ್, ಸಿಖ್ ಧರ್ಮಪೀಠವಿದ್ದ ಅಮೃತಸರಕ್ಕೆ ತೆರಳಿ, ಅಲ್ಲಿನ ಗುರುದ್ವಾರಕ್ಕೆ ತನ್ನ ನಮನ ಸಲ್ಲಿಸಿ, ಅದರ ಗೋಪುರಕ್ಕೆ ಚಿನ್ನದ ಮುಲಾಮು ಹೊಡೆಸಿದ. ಅಂದಿನಿಂದ ಆ ಗುಡಿಗೆ "ಚಿನ್ನದ ಗುಡಿ" ಎಂಬ ಹೆಸರು ನಿಂತಿತು ಎನ್ನಲಾಗಿದೆ.

ಕಾಶ್ಮೀರವನ್ನು ಆಳಲು ದಿವಾನ್ ಮೋತಿರಾಮ್‌ನನ್ನು ನೇಮಿಸಲಾಯಿತು. ಆದರೆ ಅವನ ಮೃದು ಧೋರಣೆಯಿಂದಾಗಿ ಕಾಶ್ಮೀರದಲ್ಲಿ ಅಶಾಂತಿ ಉಂಟಾದಾಗ, ಸಿಸ್ತಿನ ಸಿಪಾಯಿ ಸರದಾರ್ ಹರಿಸಿಂಗ್ ನಾಲ್ವಾನನ್ನು ದಿವಾನನ್ನಾಗಿ ನೇಮಕ ಮಾಡಿದ ರಾಜ. ಅವನ ಆಳ್ವಿಕೆಯಲ್ಲಿ ದೇಶ ಸುಭದ್ರತೆಯಿಂದ ಕಂಗೊಳಿಸಿತು.

ಕಾಶ್ಮೀರವನ್ನು ತನ್ನ ಹಿಡಿತದಲ್ಲಿರಿಸಿಕೊಳ್ಳಬೇಕಾದರೆ, ಅದರ ಪಶ್ಚಿಮದ್ವಾರ ಪ್ರದೇಶಗಳಾದ ಆಫ್ಘನ್ ನಾನಾ ಬುಡಕಟ್ಟು ಪ್ರದೇಶಗಳನ್ನು ತನ್ನ ಸುಪರ್ದಿನಲ್ಲಿ ಇರಿಸಿಕೊಳ್ಳುವುದು ಅವಶ್ಯಕ ಎಂದು ಅರಿತ ರಾಜ ರಣಜಿತ್ ಸಿಂಗ್, ಹಜಾರಾ ಮತ್ತು ಮೋಂಘಿರ್ ಪ್ರದೇಶಗಳ ಮೇಲೆ ದಾಳಿ ಜರುಗಿಸಿದ. ಈ ಹಜಾರಾ ಪ್ರದೇಶದಲ್ಲಿ ಅನೇಕ ಬಲಿಷ್ಠ ಕ್ರೂರ ಪಠಾಣರು ಆಳುತ್ತಿದ್ದರು. ಈ ಪ್ರದೇಶದ ಬುಡಕಟ್ಟು ಜನರು ಹುಟ್ಟಿನಿಂದಲೇ ಹೋರಾಟ ಎಸಗಿ, ರಕ್ತ ಚೆಲ್ಲುವ ಪ್ರವೃತ್ತಿ ಇರಿಸಿಕೊಂಡವರು, ಸಾವಿಗಂಜದ ವೀರರಾಗಿದ್ದರು. ಅಶಿಸ್ತು, ಅಕ್ರಮ, ಅನೀತಿ, ಅಸಂಸ್ಕೃತ ಬುಡಕಟ್ಟಿನ ಜನರು ಉತ್ತಮ ಸೈನಿಕರಾಗಿದ್ದರೂ ಸಾವಿಗಂಜದೆ ಹೋರಾಟ ಜರುಗಿಸಬಲ್ಲವರಾದರೂ, ಅವರನ್ನು ಶಿಸ್ತುಬದ್ಧ ನಾಗರೀಕನ್ನಾಗಿ ಮಾಡಿ, ಅವರ ಮೇಲೆ ಅಧಿಕಾರ ಚಲಾಯಿಸುವ ಕಾರ್ಯ ಮಾತ್ರ ಯಾವ ಆಡಳಿತಗಾರರು, ನವಾಬರು, ರಾಜರು, ಬಾದ್‌ಶಹರಿಗೆ ಆಗಿರಲಿಲ್ಲ. ಪ್ರಾಚೀನ ಕಾಲದಿಂದಲೂ, ಅವರನ್ನು

---

೧೩. P 474 History of Sikh People by Cunningham

ಬಗ್ಗುಬಡಿದು ಆಳಲು ಶ್ರಮಿಸಿದ ಸುಲ್ತಾನ್‌ರಾಗಲೀ, ಮೊಘಲ್ ವಂಶದವರಾಗಲೀ, ಕ್ರಮೇಣ ಬ್ರಿಟಿಷ್ ಸಾರ್ವಭೌಮದವರಿಂದಾಗಲೀ, ಯಶಸ್ಸು ಸಾಧಿಸಲಾಗದೇ ಇರುವುದು ಐತಿಹಾಸಿಕ ಸತ್ಯ !

೧೮೧೮ ರಲ್ಲಿ ರಣಜಿತ್ ಸಿಂಗ್ ಈ 'ಹಜಾರಾ' ಪ್ರದೇಶವನ್ನು ಗೆದ್ದು, ಅಲ್ಲಿ ತನ್ನ ಸಿಖ್ ಸರದಾರರನ್ನು ಆಡಳಿತ ಜರುಗಿಸಲು ನೇಮಿಸಿದರೂ, ಮಖನ್ ಸಿಂಗ್ ಎಂಬ ನಿಷ್ಠಾವಂತ ಸೈನ್ಯಾಧಿಕಾರಿ, ದಿವಾನ್ ರಾಮ್ ದಯಾಲ್, ಸರದಾರ್ ಅಮರ್‌ಸಿಂಗ್ ಮಜೀಥಿಯಾ ಎಂಬವರ ಹತ್ಯೆ ಜರುಗಿಸಿದರು ಪಠಾಣರು. ಅವರನ್ನು ಹದ್ದುಬಸ್ತಿನಲ್ಲಿಡಲು, ಕೆಚ್ಚೆದೆಯ ಸೈನ್ಯಾಧಿಕಾರಿ ಸರದಾರ್ ಹರಿಸಿಂಗ್ ನಾಲ್ವಾನನ್ನು ಆ ಪ್ರದೇಶದ ರಾಜ್ಯಪಾಲನನ್ನಾಗಿ ಮಾಡಿದ ರಣಜಿತ್ ಸಿಂಗ್. ಅವನ ನಂಬುಗೆ ಹುಸಿಯಾಗಲಿಲ್ಲ. ಹರಿ ಸಿಂಗ್, ಪಠಾಣ ಕೊಲೆಗಾರರನ್ನು ಹಿಡಿದು, ತೋಪಿನ ಬಾಯಿಗೆ ಅವರನ್ನು ಇಟ್ಟು ಹತ್ಯೆ ಮಾಡಿದಾಗ, ಪಠಾಣರು ಭಯಗೊಂಡು, ಸಿಖ್‌ರ ಪ್ರಭುತ್ವಕ್ಕೆ ಮಣಿದರು. ೧೪

ರಣಜಿತ್‌ಸಿಂಗ್‌ನಿಗೆ 'ಅನ್ಯೈಕ್ಯತೆಯ ವ್ಯಾಧಿ' ಕಾಡದೆ ಬಿಡಲಿಲ್ಲ. ೧೮೨೧ ರಲ್ಲಿ ಅವನ ಅತ್ತೆ ರಾಣಿ ಸದಾ ಕೌರ್, ಅಳಿಯನ ವಿರುದ್ಧ ಪಿತೂರಿ, ಸಮರ ಸಾರಿದಳು. ಈಕೆ ಒಬ್ಬ ಯೋಧನ ಮಗಳಾಗಿದ್ದು, ಕ್ಷಾತ್ರ ಗುಣಗಳನ್ನು ಹೊಂದಿದ್ದಳು. ತಾನೇ ಸ್ವತಃ ಸಾಮ್ರಾಜ್ಞಿಯಾಗಬೇಕೆಂಬ ಆಸೆ ಹೊತ್ತು ಅಳಿಯನ ವಿರುದ್ಧ ರಣಕಹಳೆ ಊದಿದಳು. ಈ ಮೊದಲು ಅಳಿಯನೊಂದಿಗೆ ಆತ ಲಾಹೋರ್‌ನ ಮೇಲೆ ಯುದ್ಧಾಚರಣೆಯಲ್ಲಿ ಸ್ವತಃ ಕತ್ತಿ ಹಿಡಿದು ಭಾಗಿಯಾಗಿ, ಹೋರಾಡಿದ ವೀರ ಮಹಿಳೆಯಾಗಿದ್ದರೂ, ಅಳಿಯನ ವಿರುದ್ಧ ಪಿತೂರಿ ನಡೆಸಿ, ಬ್ರಿಟಿಷ್‌ರೊಂದಿಗೆ ರಹಸ್ಯ ವ್ಯವಹಾರ ಜರುಗಿಸಿದ ಸಂಗತಿ ಅರಿತ ರಣಜಿತ್ ಸಿಮಗ್, ಅವಳ ಆಸ್ತಿಯನ್ನು ಮುಟ್ಟುಗೋಲು ಹಾಕಿ ಜೀವನ ನಿರ್ವಹಣೆಗೆ ಕನಿಷ್ಟ ಮೊತ್ತದ ಪಿಂಚಣಿ ನೀಡಿ ಅವಳನ್ನು ಅವಮಾನಿಸಿದ. ಅವಳ ಮಗಳು, ರಾಜನ ಪತ್ನಿ ಮತ್ತು ಅವನ ಇಬ್ಬರು ಮಕ್ಕಳು, ಗಂಡನ ವರ್ತನೆಯನ್ನು ಸಹಿಸದೆ, ಗಂಡನನ್ನು ತೊರೆದು ತಾಯಿಯ ಸಂಗಡ ವಾಸ ಮಾಡಲು ಪ್ರಾರಂಭಿಸಿದಳು. ಅಂತಿಮವಾಗಿ ಗೃಹಬಂಧನದಲ್ಲಿದ್ದ ಆಕೆ ೧೮೩೨ರಲ್ಲಿ ಪ್ರಾಣ ನೀಗುತ್ತಾಳೆ.

ಆಫ್ಘನ್ ಸುಲ್ತಾನರು, ನವಾಬರು ಮತ್ತು ಇತರ ಪಠಾಣ ನಾಯಕರು ಮಹಾರಾಜ ರಣಜಿತ್ ಸಿಂಗ್‌ನ ಆಕ್ರಮಣ ಮತ್ತು ತಮ್ಮ ರಾಜ್ಯಗಳ ಮೇಲಿನ ಆಳ್ವಿಕೆಯನ್ನು ಸಹಿಸದೆ, ಒಗ್ಗಟ್ಟಾಗಿ, ಸಿಖ್‌ರ ಮೇಲೆ ಬೀಳಲು ಮನಸ್ಸು ಮಾಡಿದರು. ಅವರು 'ಜಿಹಾದ್' (ಧರ್ಮಯುದ್ಧ) ಜರುಗಿಸಲು ನಿಶ್ಚಯಿಸಿ, ಮೊಹಮ್ಮದ್ ಅಜೀಮ್ ಬಾರಕ್‌ಜೈನ್‌ನ ನೇತೃತ್ವದಲ್ಲಿ ಅಟ್ಟೋಕ್‌ನ ಬಳಿ 'ಜಹಂಗೀರಾ' ಎಂಬ ಸ್ಥಳದಲ್ಲಿ ಸೇನೆಯನ್ನು ಜಮಾಯಿಸಿದರು. ಅವರು ಸಿಖ್‌ರ ವಿರುದ್ಧ ಯುದ್ಧ ಜರುಗಿಸುವ

---

೧೪. P 480 (notes) History of Sikhs by G.Singh

ಮೊದಲೇ, ಸುದ್ದಿ ಅರಿತ ರಣಜಿತ್ ಸಿಂಗ್ ತನ್ನ ಎಲ್ಲಾ ಬಲಿಷ್ಠ ವೀರ ಸೇನಾನಿಗಳನ್ನು ಆಫ್ಘನ್ನರ ವಿರುದ್ಧ ಕದನ ಜರುಗಿಸಲು ನೇಮಕ ಮಾಡಿದ. ತಾನೇ ಸ್ವತಃ ಕತ್ತಿ ಹಿಡಿದು ಯುದ್ಧರಂಗಕ್ಕೆ ಧಾವಿಸಿದ. ಎರಡೂ ಕಡೆ ವೀರರು ಹೋರಾಡಿ ಸಾವನ್ನಪ್ಪಿದರು. ಪಠಾಣರು ಎಷ್ಟೇ ವೀರಾವೇಷದಿಂದ ಕಾದಾಡಿದರೂ ಸಿಖ್ಖರ ಕಲಿತನದ ಮುಂದೆ ಅವರ ಆಟ ಸಾಗದೆ, ಅವರು ಸೋತು ಶರಣಾದರು. ಆದರೆ, ಸಿಖ್ಖರ ವೀರ ಸೇನಾನಿಗಳಲ್ಲಿ ಅಕಾಲಿ ಘೂಲಾ ಸಿಂಗ್‌ನ ವೀರ ಮರಣವಾಯಿತು. ಯುದ್ಧದಲ್ಲಿ ಜಯಗಳಿಸಿದರೂ, ತನ್ನ ನೆಚ್ಚಿನ ಸೇನಾನಿ ಘೂಲಾ ಸಿಂಗ್‌ನ ಮರಣ ರಣಜಿತ್ ಸಿಂಗ್‌ನಿಗೆ ಅಪಾರ ನೋವು ದುಃಖ ತಂದೊಡ್ಡಿತು ಎಂದರು ಇತಿಹಾಸಕಾರರು. ಶಿವಾಜಿಯ ನೆಚ್ಚಿನ ನಾಯಕ 'ಸಿಂಹಗಡ'ವನ್ನು ಜಯಿಸಿದರೂ, ಸಾವನ್ನಪ್ಪಿದ್ದು, ರಾಜನಿಗೆ ಅಪಾರ ದುಃಖ ಒದಗಿ ಆತನ ಬಾಯಿಯಿಂದ 'ಗಢ ಆಲಾ, ಪಣ ಸಿಂಹ ಫೇಲಾ' ಎಂಬ ಉದ್ಗಾರ ಬಂದಿದ್ದು ಇತಿಹಾಸ ಪ್ರಸಿದ್ಧವಾದ ಹಾಗೆ, ರಣಜಿತ್ ಸಿಂಗ್ ತನ್ನ ನೆಚ್ಚಿನ ವೀರ ನಾಯಕನ ಸಾವು, ಜಯ ತಂದರೂ, ಮರೆಯಲಾಗದಾಗಿತ್ತು.

ಪಶ್ಚಿಮದ ಕ್ರೂರ ಪಠಾಣರನ್ನು ಅಡಗಿಸಿದ ನಂತರ, ರಣಜಿತ್ ಸಿಂಗ್ ಪೂರ್ವ ಪ್ರದೇಶದ ಮುಸ್ಲಿಮರ ವಿರೋಧ ಎದುರಿಸಬೇಕಾಯಿತು. ಉತ್ತರ ಭಾರತದ ಬಹುತೇಕ ಮುಸ್ಲಿಮ್‌ರು, ತಮ್ಮ ಅಧೀನತೆಯನ್ನು ಬ್ರಿಟಿಷ್‌ರಿಗೆ ಒಪ್ಪಿಸಿದರೂ, ಪಂಜಾಬ್‌ನಲ್ಲಿ ಸಿಖ್ಖರ ಪ್ರಾಬಲ್ಯ ಸಹಿಸಲಾರದೆ, ಕಾಪಿರ್‌ರು ತಮ್ಮ ಧರ್ಮೀಯರೇ ಆದ ಪಠಾಣರನ್ನು ಸೋಲಿಸಿ, ಅವರ ನಾಡನ್ನು ಕಬಳಿಸಿ ಆಳತೊಡಗಿದ್ದನ್ನು ನೋಡಿ ಸಹಿಸಲಾಗಲಿಲ್ಲ.

೧೭೮೬ರಲ್ಲಿ ಉತ್ತರ ಪ್ರದೇಶದ ಬರ್‍ಯೆಲಿ ನಗರದಲ್ಲಿ ಜನ್ಮ ತಳೆದ ಸಯದ್ ಅಹಮದ್ ಬ್ರೆಲ್ವೀ ಮುಸ್ಲಿಮ್‌ರ ಮುಖಂಡನಾಗಿ ಹೊರಹೊಮ್ಮಿದ್ದ. ೧೮೨೬ರಲ್ಲಿ ಆತ ಮೆಕ್ಕಾಯಾತ್ರೆ ಮುಗಿಸಿ, ಹಿಂದಿರುಗುವಾಗ ಕಾಬೂಲ್‌ನ ಅಮೀರ್ ದೋಸ್ತ್ ಮೊಹಮ್ಮದ್ ಖಾನ್‌ನನ್ನು ಭೇಟಿ ಮಾಡಿದ. ಸಿಖ್ಖರ ವಿರುದ್ಧ ಕದನ ಜರುಗಿಸಲು ಅವನಿಂದ ಸೈನ್ಯ ಮತ್ತು ಹಣ ಕೋರಿದ. ದೋಸ್ತ್ ಮೊಹಮ್ಮದ್ ಅವನ ಕೋರಿಕೆಯನ್ನು ನೆರವೇರಿಸಲು ಒಪ್ಪಿದ. ಪೆಶಾವರ್‌ನಲ್ಲಿ ಆಳ್ವಿಕೆ ನಡೆಸುತ್ತಿದ್ದ ಅಮೀರ್‌ನ ಸಹೋದರರಾದ ಸುಲ್ತಾನ್ ಮೊಹಮ್ಮದ್ ಮತ್ತು ಯಾರ್ ಮೊಹಮ್ಮದ್‌ರಿಗೆ ಸಿಖ್ಖರ ವಿರುದ್ಧ ಹೋರಾಡಲು ಯೋಜಿಸುತ್ತಿದ್ದ ಸಯದ್ ಮೊಹಮ್ಮದ್‌ನಿಗೆ ಸಹಾಯ ನೀಡುವಂತೆ ಕರೆ ನೀಡಿದ. ಸಯ್ಯದ್ ಮೊಹಮ್ಮದ್‌ನ ಯುದ್ಧ ಕಹಳೆಗೆ ಉತ್ತರ ಭಾರತದ ಮುಸ್ಲಿಮ್‌ರು ಓಗೊಟ್ಟರು. 'ಜಿಹಾದ್' ಧರ್ಮಯುದ್ಧಕ್ಕೆ ಸಾವಿರಾರು 'ಗಾಜೀ'ಗಳು ಪ್ರಾಣ ತೊರೆದು ಹೋರಾಡಲು 'ಅಕೋರಾ ಖತ್ತಕ್' ಎಂಬ ಸಮತಟ್ಟಾದ ಪ್ರದೇಶದಲ್ಲಿ ಜಮಾಯಿಸಿದರು. ಸಿಖ್ ಸರದಾರ ಪ್ರಸಿದ್ಧ ನೀತಾ ಹರಿಸಿಂಗ್ ನಾಲ್ವಾ ಸುದ್ದಿ ಅರಿತ ತಕ್ಷಣ ತನ್ನ ಸೈನ್ಯದೊಡನೆ ಅಲ್ಲಿಗೆ ಧಾವಿಸಿ, 'ಗಾಜೀ'ಗಳ ವಿರುದ್ಧ ಯುದ್ಧ ಜರುಗಿಸಿದ. ಕೇವಲ ಧಾರ್ಮಿಕ ನಿಷ್ಠೆ ಮತ್ತು ಹುತಾತ್ಮರಾಗಬೇಕೆಂಬ ಬಯಕೆ ಹೊತ್ತ ಮುಸ್ಲಿಮರು ಯುದ್ಧಕಲೆಯಲ್ಲಿ ನಿಷ್ಣಾತರಾಗಿದ್ದ ಸಿಖ್ ಸೈನ್ಯದ ಮುಂದೆ ಅವರ ಆಟ ಸಾಗಲಿಲ್ಲ. ಸಾವಿರಾರು

ಮುಸ್ಲಿಮ್‌ರು ಸಿಖ್‌ರ ಕತ್ತಿಗಳಿಗೆ ಆಹಾರವಾದರು. ಅವರ ಮುಖಂಡ ಸಯದ್ ಮೊಹಮ್ಮದ್ ಬ್ರೆಲ್ವೀ ಮತ್ತು ಅವನ ಸಂಗಡಿಗರು ಯುದ್ಧರಂಗ ತ್ಯಜಿಸಿ ಪಲಾಯನ ಮಾಡಿದರೂ, ಅವರನ್ನು ಸಿಖ್‌ರು ೧೮೩೧ರಲ್ಲಿ ಬಾಲಾಕೋಟ್ ಎಂಬಲ್ಲಿ ಸೆರೆ ಹಿಡಿದು ಕೊಂದರು. ೧೫

'. . .The death of the Syed broke the only link that hold his followers together, and in the retreat many of the parties from different regions fall upon one another for plunder. Khaibaris and Eusafzais were equal to the best in this matter, and cut down several of the Hindustani fanatics, i.e. the Indian followers of Syed Ahmed, who had joined them for protection, and whose clothing or equipment seemed to them a desirable acquisition.'

(P. 118 The Fall of Sikh Empire by Gordan)

***

ರಣಜಿತ್ ಸಿಂಗ್ ತನ್ನ ಸೈನ್ಯದಲ್ಲಿ ಯುರೋಪಿಯನ್ನ್‌ರನ್ನು ನೇಮಕಮಾಡಿಕೊಂಡಿದ್ದ. ಅವರುಗಳ ವಿವರ ಹೀಗಿದೆ

೧೬. ಜನರಲ್ ವೆಂಚುರಾ : ಈತ ರಣಜಿತ್ ಸಿಂಗ್‌ನ ಸೈನ್ಯದಲ್ಲಿ ಸೇರ್ಪಡೆಯಾದ ಮೊತ್ತಮೊದಲ ಯೂರೋಪಿಯನ್ ಸೈನ್ಯಾಧಿಕಾರಿಯಾಗಿದ್ದ. ಈತ ಇಟಾಲಿಯನ್ ಆಗಿದ್ದು ಫ್ರಾನ್ಸ್‌ನ ಸಾಮ್ರಾಟ ನೆಪೋಲಿಯನ್‌ನ ಸೈನ್ಯದಲ್ಲಿ 'ಕರ್ನಲ್' ಪದವಿ ಹೊಂದಿದ್ದ. ಬ್ರಿಟನ್‌ನಿಂದ ಸೋಲನ್ನು ಅನುಭವಿಸಿದ ಫ್ರಾನ್ಸ್‌ನ ಅನೇಕ ಸೈನಿಕರು, ಅಧಿಕಾರಿಗಳು, ದೇಶದಿಂದ ಕಾಲ್ಕಿತ್ತು ಹೊಟ್ಟೆಪಾಡಿಗೆ ಹೊರರಾಜ್ಯಗಳಿಗೆ ವಲಸೆ ಹೋಗಿದ್ದವರಲ್ಲಿ ಈತನೂ ಒಬ್ಬನಾಗಿದ್ದ. ಊರೂರು ಸುತ್ತಿ ಅಂತಿಮವಾಗಿ ಪರ್ಶಿಯಾ ಮುಖಾಂತರ ಭಾರತಕ್ಕೆ ಬಂದು, ರಣಜಿತ್ ಸಿಂಗ್‌ನ ಸೈನ್ಯಕ್ಕೆ ಸೇರಿ ಸೇವೆ ಸಲ್ಲಿಸಿದ ಈ ಇಟಾಲಿಯನ್ ವೀರ. ಪರಕೀಯ ಯೋರೋಪಿಯನ್‌ರ ಬಗ್ಗೆ ಅಪನಂಬಿಕೆ ಇಟ್ಟುಕೊಂಡಿದ್ದ ರಣಜಿತ್ ಸಿಂಗ್, ಯಾವುದೇ ಪರಕೀಯರನ್ನು ಸಂಶಯದಲ್ಲಿ ನೋಡಿ, ಕ್ರಮೇಣ ಅವರನ್ನು ಸೂಕ್ಷ್ಮವಾಗಿ ಪರೀಕ್ಷಿಸಿ, ತನ್ನ ಸಂಶಯವನ್ನು ಪರಿಹಾರ ಮಾಡಿಕೊಂಡ ಮೇಲೆ ಅವರಿಗೆ ನೌಕರಿ ನೀಡುವ ಅಭ್ಯಾಸ ಇರಿಸಿಕೊಂಡಿದ್ದನು. ವೆಂಚುರಾನಿಗೆ ಕೂಡಲೇ ತನ್ನ ಸೈನ್ಯದಲ್ಲಿ ನೌಕರಿ ನೀಡದೇ, ತಾಳ್ಮೆಯಿಂದ ಅವನನ್ನು ಪರೀಕ್ಷಿಸಿದ. ಅಂತಿಮವಾಗಿ ವೆಂಚುರಾನ ಸಾಮರ್ಥ್ಯ, ಗುಣಗಳ ಪರಿಚಯವಾದ ಮೇಲೆ, ಸೈನ್ಯದ ಒಂದು ಬ್ರಿಗೇಡ್‌ನ ಸೈನ್ಯಾಧಿಕಾರಿಯನ್ನಾಗಿ ಮಾಡಿದ. ವೆಂಚುರಾ, ರಣಜಿತ್ ಸಿಂಗ್‌ನಿಗೆ ತನ್ನ ಮೇಲೆ ಇರಿಸಿದ ಪ್ರೀತಿ ವಿಶ್ವಾಸಕ್ಕೆ ಭಂಗ ತರದಂತೆ ಅವನ

ಸೇವೆಯನ್ನು ರಾಜ ಬದುಕಿರುವವರೆಗೂ ಮಾಡಿದ.

ರಣಜಿತ್ ಸಿಂಗ್, ಯೋರೋಪಿಯನ್‌ರನ್ನು ನೌಕರಿಯಲ್ಲಿರಿಸಿಕೊಳ್ಳುವಾಗ, ಮೂರು ಶರತ್ತುಗಳನ್ನು ಹಾಕುತ್ತಿದ್ದ. ಅವರು ದನದ ಮಾಂಸ ತಿನ್ನಬಾರದು, ಗಡ್ಡ ಬೋಳಿಸಬಾರದು, ಮತ್ತು ತಂಬಾಕು ಸೇದಬಾರದು. ಮೊದಲ ಎರಡೂ ಶರತ್ತುಗಳನ್ನು ಯೂರೋಪಿಯನ್ನರು ಸಮ್ಮತಿಸಿದರೂ, ಕೊನೆಯದನ್ನು ಮಾತ್ರ ತ್ಯಜಿಸಲಿಲ್ಲ !

ಜನರಲ್ ವೆಂಚುರಾ, ರಣಜಿತ್ ಸಿಂಗ್ ಪಠಾಣರ ವಿರುದ್ಧ ಜಯಿಸಿದ ಹೋರಾಟದಲ್ಲಿ ಭಾಗಿಯಾಗಿ, ತನ್ನ ಶಿಸ್ತು, ಕೆಚ್ಚು, ಪ್ರಾಣ ಒತ್ತೆಯಿಟ್ಟು ಹೋರಾಡುವ ಮನೋಬಲಗಳಿಂದ ಜಯಗಳು ರಣಜಿತ್ ಸಿಂಗ್‌ನ ಆದರ ಗಳಿಸಿದ. ಅವನಿಗೆ ಮಾಸಿಕ ೨೦೦೦ ರೂಪಾಯಿಗಳ ಸಂಬಳ ನೀಡಿದ್ದಲ್ಲದೆ, ಜಾಗೀರು ನೀಡಿ ಸನ್ಮಾನಿಸಿದ.

೧೮೨೫ರಲ್ಲಿ ಲೂಧಿಯಾನಾದಲ್ಲಿ ವಾಸವಾಗಿದ್ದ 'ವಿಕ್ಟೋರಿನ್' ಎಂಬ ಯೂರೋಪಿಯನ್ ಮಹಿಳೆಯನ್ನು ಲಗ್ನವಾದ.

ರಣಜಿತ್ ಸಿಂಗ್‌ನ ಮರಣದ ನಂತರ, ವೆಂಚುರಾ, ಅವನ ಉತ್ತಾಧಿಕಾರರ ಸೇವೆ ಮಾಡಿ, ಅಂತಿಮವಾಗಿ ಪ್ಯಾರಿಸ್‌ಗೆ ೧೮೪೫ರಲ್ಲಿ ಹಿಂದಿರುಗಿದ. ರಣಜಿತ್ ಸಿಂಗ್ ಮತ್ತು ಸಿಖ್ ಸೈನಿಕರು ವೆಂಚುರಾನನ್ನು ಅತ್ಯಂತ ಪ್ರೀತಿ, ವಿಶ್ವಾಸಗಳಿಂದ ಆರಾಧಿಸಿ, ಅವನ ಹೆಸರನ್ನು ಸಿಖ್ ಇತಿಹಾಸದ ಪುಟಗಳಲ್ಲಿ ಅಮರವಾಗಿಸಿದ್ದಾರೆ.

ಜನರಲ್ ಅಲ್ಲಾರ್ಡ್ : ರಣಜಿತ್ ಸಿಂಗ್‌ನ ಸೈನ್ಯದ ಇನ್ನೊಬ್ಬ ಪ್ರಮುಖ ಯೂರೋಪಿಯನ್ ಸೈನ್ಯಾಧಿಕಾರಿಯ ಹೆಸರು ಜೀನ್ ಫ್ರಾಂಕಾಯಿಸ್ ಅಲ್ಲಾರ್ಡ್. ಈತ ಫ್ರಾನ್ಸ್ ದೇಶದವ. ಮೆಡಿಟರೇನಿಯನ್ ಸಮುದ್ರ ತೀರದ ಪುಟ್ಟ ರೇವು ಪಟ್ಟಣ ಸೈಂಟ್ ಟ್ರೂಪೆಜ್ ಎಂಬಲ್ಲಿ ಮಾರ್ಚ್ ೮, ೧೭೮೫ರಂದು ಜನ್ಮ ತಳೆದ. ಫ್ರೆಂಚ್ ಸೈನ್ಯದಲ್ಲಿ ಸೇವೆ ಸಲ್ಲಿಸಿದ ಈತ, ನೆಪೋಲಿಯನ್ ಇಟಲಿ ಮತ್ತು ಸ್ಪೇನ್ ದೇಶಗಳ ಮೇಲೆ ಜರುಗಿಸಿದ ಆಕ್ರಮಣಕಾರಿ ಯುದ್ಧಗಳಲ್ಲಿ ಭಾವಹಿಸಿದ. ಸ್ಪೇನ್‌ನಲ್ಲಿ ಜರುಗಿದ ಯುದ್ಧದಲ್ಲಿ ಗಾಯಗೊಂಡರೂ ಎದೆಗೊಂದದೆ, ಸೈನ್ಯದ ಸೇವೆಯನ್ನು ಮುಂದುವರಿಸಿದ. ಪ್ರಸಿದ್ಧ ವಾಟರ್‌ಲೂ ಕದನದಲ್ಲಿ ಬ್ರಿಟನ್‌ನಿಂದ ಫ್ರಾನ್ಸ್ ಪರಾಭವಗೊಂಡ ನಂತರ, ಅವನ ಜೀವನದಲ್ಲಿ ಮಹತ್ತರ ಬದಲಾವಣೆಯಾದವು. ದೇಶ ತ್ಯಜಿಸಿ ಅಮೆರಿಕಾಕ್ಕೆ ವಲಸೆ ಹೋಗುವ ಮನಸ್ಸಾದಾಗ, ಸ್ನೇಹಿತ ವೆಂಚುರಾನ ಪತ್ರದಿಂದ ಉತ್ತೇಜಗೊಂಡು, ಪರ್ಶಿಯಾ ದೇಶಕ್ಕೆ ಬಂದಿಳಿದ. ಪರ್ಶಿಯಾದ ರಾಜಕುಮಾರ ಅಬ್ಬಾಸ್ ಮಿರ್ಜಾನ ಬಳಿ ನೌಕರಿ ಮಾಡಿದರು ಇಬ್ಬರೂ ಸ್ನೇಹಿತರು. ಆದರೆ ಸಾಕಷ್ಟು ವರಮಾನ ದೊರೆಯದ ಕಾರಣ, ಅವರಿಬ್ಬರೂ, ಅಬ್ಬಾಸ್‌ನಿಂದ ಬಿಡುಗಡೆ ಹೊಂದಿ, ಭಾರತದತ್ತ ನಡೆದರು. ವೆಂಚುರಾನ ತರಹ, ಅಲ್ಲಾರ್ಡ್ ಕೂಡ ಈತನ ರಣಕೌಶಲ್ಯ, ರಣೋತ್ಸಾಹ, ಶಿಸ್ತು ಇತ್ಯಾದಿಗಳನ್ನು ಕಂಡು, ಸಂಪ್ರೀತನಾದ ರಣಜಿತ್ ಸಿಂಗ್, ಅವನನ್ನು ಅಶ್ವದಳದ ಮುಖ್ಯಸ್ಥನನ್ನಾಗಿ ಮಾಡಿದ. ಅಲ್ಲಾರ್ಡ್

ಅದರಲ್ಲಿ ಮಿಂಚಿದ. ಅವನು, ರಣಜಿತ್ ಸಿಂಗ್‌ನ ಎಲ್ಲಾ ಆಕ್ರಮಣಕಾರಿ ಯುದ್ಧಗಳಲ್ಲಿ ಭಾಗವಹಿಸಿ, ಜಯಭೇರಿ ಗಳಿಸಿದ.

ಜನರಲ್ ಅಲ್ಲಾರ್ಡ್‌ನನ್ನು ಇತಿಹಾಸಕಾರರು ಗಣಗಾನ ಮಾಡಿದ್ದಾರೆ. ಆತ ಒಬ್ಬ ಸುಸಂಸ್ಕೃತ ಗುಣವಂತನಾಗಿದ್ದು, ನಯ ವಿನಯ ಗುಣಗಳನ್ನು ಹೊಂದಿದ್ದ. ಸ್ಥಳೀಯ ನಾಗರೀಕರೊಂದಿಗೆ ಅತ್ಯಂತ ಸಭ್ಯತೆ, ನಮ್ರತೆ, ನಡೆವಳಿಕೆ ಇಟ್ಟುಕೊಂಡು ಅವರ ಆದರ, ಸ್ನೇಹ ಮತ್ತು ಗೌರವ ಸಂಪಾದಿಸಿದ. ಮಹಾರಾಜ ರಣಜಿತ್ ಸಿಂಗ್. ಆತನ ಆತ್ಮೀಯತೆ, ನಯ ವಿನಯ, ನಡೆವಳಿಕೆಗಳಿಗೆ ಮಾರುಹೋಗಿ, ಅವನನ್ನು ಅತ್ಯಂತ ಗೌರವಾನ್ವಿತ ವ್ಯಕ್ತಿಯನ್ನಾಗಿ ಪರಿಗಣಿಸಿ, ಸಕಲ ಮರ್ಯಾದೆ, ಗೌರವ, ಪದವಿ ನೀಡಿ ಸಂತೋಷ ಪಟ್ಟಿದ್ದ. ಆದರೆ ದುರದೃಷ್ಟವಶಾತ್, ಅಲ್ಲಾರ್ಡ್ ಹೃದಯರೋಗದಿಂದ ನರಳಿ, ತನ್ನ ೫೪ ವರ್ಷದಲ್ಲಿ, ಪೆಶಾವರ್‌ನಲ್ಲಿ ೧೮೩೯ ಜನವರಿ ೨೩ ರಂದು ಸಾವನ್ನಪ್ಪಿದ. ಈಗಾಗಲೇ ಸ್ವತಃ ಕಾಯಿಲೆಯಿಂದ ನರಳುತ್ತಿದ್ದ ರಣಜಿತ್ ಸಿಂಗ್, ಆತ್ಮೀಯ ಅಲ್ಲಾರ್ಡ್‌ನ ಸಾವಿನಿಂದ ದುಃಖಪೀಡಿತನಾಗಿ, ಅವನ ದೇಹ ಮನಸ್ಸು ಕುಗ್ಗಿತು.

ಅಲ್ಲಾರ್ಡ್‌ನ ಪಾರ್ಥಿವ ಶರೀರವನ್ನು ಲಾಹೋರ್‌ನಲ್ಲಿ ಅಂತ್ಯಸಂಸ್ಕಾರ ಮಾಡಲಾಯಿತು.

ಜನರಲ್ ಅವಿಟಬೈಲ್ : ಪಾವ್ಲೋ ಡಿ ಬಾರ್ತೋಮಿಯೋ ಅವಿಟಬೈಲ್ ಇಟಲಿಯ ನೇಪಲ್ಸ್ ರಾಜ್ಯ ಅಗೆರೊಲೋ ಎಂಬ ನಗರದಲ್ಲಿ, ೨೫ನೆಯ ಅಕ್ಟೋಬರ್ ೧೭೯೧ ರಂದು ಜನ್ಮ ತಾಳಿದ. ೧೮೦೭ ರಿಂದ ೧೮೧೯ ರ ವರೆಗೆ ಸ್ಥಳೀಯ ಅಧಿಕಾರಿಯಾಗಿ ನೌಕರಿ ಸಲ್ಲಿಸಿ ಫ್ರಾನ್ಸ್‌ನ ಚಕ್ರವರ್ತಿ ಜೋಸೆಫ್ ಬೋನೋಪಾರ್ಟ್‌ನ ಸೈನ್ಯದಲ್ಲಿ ಸೇವೆ ಸಲ್ಲಿಸಿ ಉನ್ನತ ಪದವಿ ಗಳಿಸಿದ. ನೆಪೋಲಿಯನ್‌ನ ಸೋಲಿನಿಂದ, ನೇಪಲ್ಸ್ ಸ್ವಾತಂತ್ರ್ಯ ಗಳಿಸಿತು. ಅವಿಟಬೈಲ್‌ನ ದಕ್ಷತೆ, ಶೌರ್ಯ ಮತ್ತು ಸಾಹಸಗಳಿಗೆ, ಅವನ ಮೇಲಧಿಕಾರಿ, ಅವನಿಗೆ ಉನ್ನತ ದರ್ಜೆ ನೀಡಬೇಕೆಂದು ಶಿಫಾರಸ್ಸು ಮಾಡಿದರೂ, ಅದು ಅವನಿಗೆ ದಕ್ಕದ ಕಾರಣ, ಬೇಸತ್ತ ಅವನು ಸೈನ್ಯ ತ್ಯಜಿಸಿ, ಅಮೆರಿಕಾದತ್ತ ಕಣ್ಣು ಹಾಯಿಸಿದ. ಅವನು ಯಾತ್ರಿಸಿದ ಹಡಗು, ಅಮೆರಿಕಾಗೆ ಚಲಿಸುವ ಮಧ್ಯದಲ್ಲೇ, ಮೆಡಿಟರೇನಿಯನ್ ಸಮುದ್ರದ ರೇವುಪಟ್ಟಣ ಮರ್ಸೈಲ್ಸ್ ಬಳಿ, ದುರ್ಘಟನೆಗೆ ಈಡಾಗಿ ನೀರಿನಲ್ಲಿ ಮುಳುಗಿತು. ಹೇಗೋ ಪಾರಾದ ಅವಿಟಬೈಲ್, ಅಮೆರಿಕಾಕ್ಕೆ ತೆರಳುವ ಬದಲು, ನೆರೆಯ ತುರ್ಕಿ ರಾಜ್ಯದ ಕಾನ್‌ಸ್ಟಾಂಟಿನೋಪಲ್ (ಈಗಿನ ಇಸ್ತಾನ್‌ಬುಲ್) ನಗರಕ್ಕೆ ತೆರಳಿದ. ಅಲ್ಲಿ ಪರ್ಶಿಯನ್ ಸೈನ್ಯದಲ್ಲಿ ಯೂರೋಪಿಯನ್‌ರನ್ನು ಭರ್ತಿ ಮಾಡಲು ಬಂದಿದ್ದ ಒಬ್ಬ ಪರ್ಶಿಯನ್ ಅಧಿಕಾರಿಯ ಮೂಲಕ, ಪರ್ಶಿಯಾಗೆ ಬಂದಿಳಿದ. ಟೆಹರಾನ್ ನಗರಕ್ಕೆ ೧೮೨೦ರಲ್ಲಿ ಬಂದ ಅವನು ಪರ್ಶಿಯನ್ ರಾಜನ ಸೈನ್ಯಕ್ಕೆ ಸೇರಿ ೬ ವರ್ಷಗಳ ಕಾಲ ಸೇವೆ ಸಲ್ಲಿಸಿದ. ಆದರೆ ಅವನಿಗೆ ಅಲ್ಲಿ ಉನ್ನತ ಪದವಿ – 'ಕರ್ನಲ್'– ದೊರೆತರೂ ಉತ್ತಮ ಸಂಬಳ, ಭತ್ಯೆ, ವರಮಾನ ದೊರೆಯದ

ಕಾರಣ, ಭಾರತದತ್ತ ದೃಷ್ಟಿ ಹೊರಳಿಸಿದ. ಅವನ ಸ್ನೇಹಿತ ವೆಂಚುರಾ ಈಗಾಗಲೇ ಪಂಜಾಬ್‌ನಲ್ಲಿದ್ದು ಅವನಿಂದ ಒಳ್ಳೆಯ ಸುದ್ದಿ ಸಂಗತಿ ಅರಿತು, ತಾನು ಕೂಡ ಭಾರತಕ್ಕೆ ಬಂದರೆ, ಸೂಕ್ತ ಪದವಿ, ವರಮಾನ ದೊರಕುವುದೆಂದು ಅರಿತು, ತನ್ನ ಸಂಗಡ ಇನ್ನೊಬ್ಬ ಯೂರೋಪಿಯನ್ 'ಕೋರ್ಟ್' ಎಂಬಾತನೊಂದಿಗೆ ಆಫ್ಘಾನಿಸ್ಥಾನದ ಮೂಲಕ ಪಂಜಾಬ್‌ಗೆ ಬಂದ.

ರಣಜಿತ್ ಸಿಂಗ್, ಅವಿಟಬೈಲ್‌ನ ಸಾಹಸ, ಶೌರ್ಯ, ದಕ್ಷತೆಗಳನ್ನು ಅರಿತು, ಅವನನ್ನು ಸೈನ್ಯದಲ್ಲಿ ಸೇರಿಸಿಕೊಳ್ಳದೆ, ವಜೀರಾಬಾದ್‌ನ ರಾಜ್ಯಪಾಲನನ್ನಾಗಿ ಮಾಡಿದ. ಅವನು, ಅತ್ಯಂತ ದಕ್ಷತೆಯಿಂದ, ಹಿಂದೂ, ಮುಸ್ಲಿಮ್, ಸಿಖ್ ನಾಗರಿಕರನ್ನು ಯಾವ ತಾರತಮ್ಯ ತೋರಿಸದೆ, ಕಠಿಣ ಶಿಸ್ತಿನಿಂದ ಆಡಳಿತ ನಡೆಸಿದ.

ರೆವೆರೆಂಡ್ ಜೋಸೆಫ್ ವೂಲ್ಫ್ (Joseph Woolff) ಎಂಬಾತ, ೧೮೩೨ರಲ್ಲಿ ವಾಜಿರಾಬಾದ್‌ನಲ್ಲಿ ಯಾತ್ರಿಸುವಾಗ, ತಾನು ಕಂಡ, ಅನುಭವಿಸಿದ ಯುಕ್ತಾನುಭವ ಮತ್ತು ಅವಿಟಬೈಲ್‌ನ ಆಡಳಿತದ ವೈಖರಿಯ ವರ್ಣನೆಯನ್ನು ಹೀಗೆ ಚಿತ್ರಿಸಿದ್ದಾನೆ :

"This famous Neopolian spoke Italian, French, Persian and Hindustani with equal facility. He had improved the town of Wazirabad to a remarkable extent. He kept the streets of the city clean, and had a fine place and a beautiful carriage for himself. He was a clever, cheerfull man, and full of fun.."

೧೮೩೪ರಲ್ಲಿ ಅವನನ್ನು ಪೆಶಾವರ್ ನಗರಕ್ಕೆ ವರ್ಗಾಯಿಸಲಾಯಿತು. ಯಾಕೆಂದರೆ, ರಣಜಿತ್ ಸಿಂಗ್, ಬಹಳ ಕಷ್ಟಪಟ್ಟು ಆಡಳಿತದಲ್ಲಿದ್ದ ಆ ನಗರ ಪ್ರದೇಶವನ್ನು ವಶಪಡಿಸಿಕೊಂಡಿದ್ದನು. ಆದರೆ ವಿವಿಧ ಬುಡಕಟ್ಟಿಗೆ ಸೇರಿದ ಪಠಾಣರನ್ನು ಮಣಿಸಿ ಆಳುವುದು ಅತ್ಯಂತ ಪ್ರಯಾಸಕರವಾಗಿತ್ತು. ಪ್ರಾಣಕ್ಕೆ ಕಿಂಚಿತ್ತು ಬೆಲೆ ನೀಡದ ಪಠಾಣರು, ಹುಟ್ಟು ಹೋರಾಟಗಾರರು. ಅವರನ್ನು ಮಣಿಸಲು ಯಾವ ಸಾಮ್ರಾಟನಿಗೂ ಅಸಾಧ್ಯವೆನಿಸಿದ್ದುದು ಇತಿಹಾಸದುದ್ದಕ್ಕೂ ಕಾಣಬಹುದಾಗಿದೆ.

'Persia is, as has been well said, a fragment of central Asia that has accidentally became, geographically and politically, part of India. Of all the cities of plains its inhabitants have been and are the most savage and unruly....'

ವಸ್ತುಸ್ಥಿತಿ ಹೀಗಿರುವಾಗ, ರಣಜಿತ್ ಸಿಂಗ್, ತನ್ನ ಯಾವುದೇ ಅಧಿಕಾರಿಗಳನ್ನು, ಸೈನ್ಯಾಧಿಕಾರಿಗಳನ್ನು, ರಾಜ್ಯಪಾಲರನ್ನು ಅಲ್ಲಿಗೆ ಆಡಳಿತದ ಕಾರ್ಯವನ್ನು ಜರುಗಿಸಲು ಕಳುಹಿಸಿ, ಅವರಿಂದ ಆ ಕಾರ್ಯ ಅಸಾಧ್ಯವೆನಿಸಿದಾಗ, ಈ ನಿರ್ದಯಿ, ಆದರೆ ಉಕ್ಕಿನ ಮನುಷ್ಯ ಶಿಸ್ತಿನ ಸಿಪಾಯಿ ಅವಿಟಬೈಲ್‌ನನ್ನು ಅಲ್ಲೇ ಆಡಳಿತ ಜರುಗಿಸಲು

ಕಳುಹಿಸಿದ್ದು ಸ್ವಾಭಾವಿಕವಾಗಿತ್ತು.

ಅವಿಟಬೈಲ್, ಆ ಅನಾಗರಿಕ ಕ್ರೂರ ಪಠಾಣರನ್ನು ಅತ್ಯಂತ ನಿರ್ದಯೆದಿಂದ, ಕಠಿಣ ಶಿಸ್ತಿನ ನಿಯಮಾವಳಿಗಳಿಂದ, ಕ್ರೂರ ಹಿಂಸಾವಳಿಗಳಿಂದ ಆಳಿದ. ಕ್ಷುಲ್ಲಕ ಕಾರಣಗಳಿಗೆ, ಮರಣದಂಡನೆ ನೀಡಿ, ನೇಣುಗಂಬಕ್ಕೆ ಅಪರಾಧಿಗಳನ್ನು ಏರಿಸಿ, ಜನಸಾಮಾನ್ಯರನ್ನು ಭಯಭೀತಗೊಳಿಸಿದ.

ಆದರೆ, ಅವನು ಎಷ್ಟೇ ಕ್ರೂರತನ ತೋರಿಸಿದರೂ, ಅವನು ಒಬ್ಬ 'ಧೀರ ಚೈತನ್ಯಪೂರ್ಣ ಮತ್ತು ಬುದ್ಧಿವಂತ' ನಾಗಿದ್ದನೆಂದು ಹೊಗಳಿದರು ಇತಿಹಾಸಕಾರರು. ಪೆಶಾವರ್‌ನ ಶಾಂತಿ ಬಯಸುವ ಹಿಂದೂ ಮತ್ತು ಮುಸ್ಲಿಮ್ ನಾಗರಿಕರು ಮಾತ್ರ ಅವಿಟಬೈಲ್‌ನ ಕ್ರೂರ ಆಡಳಿತವನ್ನು ಮೆಚ್ಚಿದರು, ಯಾಕೆಂದರೆ, ಕ್ರೂರ ಪಠಾಣರಿಗೆ ಅವರ ಅನಾಗರೀಕ ವರ್ತನೆಗಳಿಗೆ, ವಿನಾಕಾರಣ ರಕ್ತ ಹರಿಸುವ ಚಪಲತೆಗೆ, ಅವಿಟಬೈಲ್‌ನು ತೆಗೆದುಕೊಂಡ ಕ್ರೂರ ಆಡಳಿತಾ ಪದ್ಧತಿ ಅವರ ಜೀವನಕ್ಕೆ ನೆಮ್ಮದಿ, ಶಾಂತಿ, ಸುಖ ಲಭಿಸಿದ್ದವು.

ರಣಜಿತ್ ಸಿಂಗ್‌ನ ಮರಣದ ನಂತರ, ಜರುಗಿದ ಅರಮನೆಯ ಕ್ರಾಂತಿ, ಅವನ ಮಕ್ಕಳಲ್ಲಿ ಅಧಿಕಾರಕ್ಕಾಗಿ ಕಚ್ಚಾಟ, ಸಿಖ್ ಸೈನ್ಯದಿಂದ ದಂಗೆ ಇತ್ಯಾದಿಗಳಿಂದ, ಜನರಲ್ ಅವಿಟಬೈಲ್‌ನ ಅಧಿಕಾರ ಪೆಶಾವರ್‌ನಲ್ಲಿ ಕೊನೆಗೊಂಡು, ನೆರೆಯ ಆಫ್ಘಾನಿಸ್ತಾನದ ಜಲಾಲಾಬಾದ್ ನಗರದಲ್ಲಿ ಅವನು ಆಶ್ರಯ ಪಡೆಯಬೇಕಾಯಿತು. ಬ್ರಿಟಿಷ್‌ರು ಪಂಜಾಬ್‌ನ್ನು ಆಕ್ರಮಿಸಿ ಆಳತೊಡಗಿದ ನಂತರ, ಆತ ಬ್ರಿಟಿಷ್‌ರ ಆಶ್ರಯ ಮತ್ತು ಆಥಿತ್ಯ ಪಡೆದು, ಕ್ರಮೇಣ ಕ್ಷೇಮದಿಂದ ತನ್ನ ಸ್ವದೇಶ ಇಟಲಿಯ ನೇಪಲ್ಸ್ ನಗರಕ್ಕೆ ಹಿಂದಿರುಗಿದ. ರಣಜಿತ್ ಸಿಂಗ್‌ನಿಂದ ವಾರ್ಷಿಕ ೩೦೦೦ ಪೌಂಡ್‌ಗಳಷ್ಟು ಸಂಬಳ ಪಡೆದು, ಜಾಗಿರ್‌ನಿಂದ ಸಾಕಷ್ಟು ವರಮಾನ ಪಡೆದ ಅವಿಟಬೈಲ್, ನೇಪಲ್ಸ್‌ನಗರದ ಹೊರವಲಯದ 'ಕ್ಯಾಸ್ಟಲಮೇರ್' ಎಂಬಲ್ಲಿ ಮಹಲ್ ನಿರ್ಮಿಸಿ ವಾಸ್ತವ್ಯ ಹೂಡಿದ. ಆದರೆ ವಿಪರಿಮಿತ ಕುಡಿತ ಮತ್ತು ಐಶಾರಾಮಿ ಜೀವನೆ ಸಾಗಿಸಿದ ಅತ ಬಹುಬೇಗ ಸಾವಿನ ಬೆನ್ನು ಹತ್ತಿದ. ಅವನು ಕಷ್ಟಪಟ್ಟು ತನ್ನ ಜೀವನವನ್ನೇ ಪಣತೊಟ್ಟು, ಭಯಂಕರ, ಅದ್ಭುತ, ಆಪತ್ಕಾರಿ ಯೋಧರ ಜೀವನ ಸಾಗಿಸಿ, ಅಪಾರ ಐಶ್ವರ್ಯ ಸಂಪಾದಿಸಿದರೂ, ಅವನ್ನ ಮರಣದ ನಂತರ ವಾರಸುದಾರರು, ಕೋರ್ಟ್ ಮೆಟ್ಟಿಲು ಹತ್ತಿ ಅವನ ಆಸ್ತಿಗಾಗಿ ಕಾದಾಡಿ, ನ್ಯಾಯವಾದಿಗಳ ಜೇಬನ್ನು ತುಂಬಿ, ಅವಿಟಬೈಲ್‌ನ ಆಸ್ತಿಯನ್ನು ಹಣವನ್ನು ನೀರಿನಂತೆ ಖರ್ಚು ಮಾಡಿದರು. 'ಅವಿಟಬೈಲ್‌ನ ದಾಯಾದಿಗಳು' (Avitabile`s Cousins) ಎಂಬ ಹೆಸರು ಇಟಲಿಯಲ್ಲಿ ಅನ್ವರ್ಥವಾಗಿ ಉಳಿಯಿತು ಎಂದರು ಇತಿಹಾಸಕಾರರು. 'Thus for the hundredth time did the pen profit by that which the sword had earned.' *

* P 82 The Fall of the Sikhs Empire by Alexander Gardner

ಜನರಲ್ ಕೋರ್ಟ್ : ಕ್ಲಾಡ್ ಆಗಸ್ಟ್ ಕೋರ್ಟ್ (Claude Auguste Court) ಫ್ರಾನ್ಸ್ ದೇಶದ ನಾಗರಿಕನಾಗಿ, ೨೬ನೆಯ ಸೆಪ್ಟೆಂಬರ್, ೧೭೯೩ರಲ್ಲಿ ಜನಿಸಿದ. ಅವನ ಜನ್ಮಸ್ಥಳದ ವಿವರ ದೊರಕಿಲ್ಲ. ಆದರೆ ಫ್ರೆಂಚ್ ಸೈನ್ಯದಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದ ಆತ ಹಲವಾರು ಯುದ್ಧಗಳಲ್ಲಿ ಭಾಗವಹಿಸಿ, ಗಾಯಗೊಂಡು, ಅಂತಿಮವಾಗಿ, ಜನ್ಯಕ್ಕೆ ರಾಜೀನಾಮೆ ಇತ್ತು, ಪರ್ಶಿಯಾ ದೇಶದತ್ತ ಪಯಣಿಸಿ, ಅಲ್ಲಿ ಅವಿಟಬೈಲ್‌ನ ಸ್ನೇಹ ಒದಗಿಬಂದು, ಅವನೊಂದಿಗೆ ಪಂಜಾಬ್‌ಗೆ ತಲುಪಿದ. ರಣಜಿತ್ ಸಿಂಗ್‌ನ ಸೈನ್ಯದಲ್ಲಿ ದಾಖಲಾಗಿ, ಅದರ ತೋಪು ದಂಡಿನಲ್ಲಿ ಮುಖ್ಯಾಧಿಕಾರಿಯಾಗಿ ನೇಮಿಸಲ್ಪಟ್ಟ. ತೋಪು (Artillery) ಬಂದೂಕುಗಳ ನಿರ್ಮಾಣ, ನಿರ್ವಹಣೆ, ಉಪಯೋಗಿಸುವ ಕಲೆ, ಜಾಣ್ಮೆ, ಕುಶಲತೆ ಕೋರ್ಟ್‌ನಲ್ಲಿದ್ದ ಕಾರಣ, ಅವನು ಅವುಗಳ ಉಪಯೋಗವನ್ನು ತನ್ನ ಸ್ವಾಭಾವಿಕ ಕಾರ್ಯಕುಶಲತೆಯಿಂದ ಮಾಡಿ ತೋರಿಸಿದ. ರಣಜಿತ್‌ಸಿಂಗ್ ತನ್ನ ಸೈನ್ಯದ ತೋಪು ಖಾನೆಯನ್ನು ಅವನ ಸಹಾಯದಿಂದ ಬಲಪಡಿಸಿ, ಅದರ ಉಪಯೋಗವನ್ನು ಅನೇಕ ಯುದ್ಧಗಳಲ್ಲಿ ಮಾಡಿ ಜಯ ಗಳಿಸಿದ. ರಣಜಿತ್ ಸಿಂಗ್, ಕೋರ್ಟ್ ನಿರ್ಮಿಸಿದ ಒಂದು ತೋಪನ್ನು ಕಂಡು, ಅತ್ಯಂತ ಸುಪ್ರೀತನಾಗಿ, ಆತನಿಗೆ ೩೦೦೦೦ ರೂಪಾಯಿ ಹಣವನ್ನು ಉದಾರವಾಗಿ ನೀಡಿದ.

ರಣಜಿತ್ ಸಿಂಗ್, ಯೂರೋಪಿಯನ್‌ರನ್ನು ತನ್ನ ಸೈನ್ಯದಲ್ಲಿ ಭರ್ತಿ ಮಾಡಿಕೊಳ್ಳುವಾಗ, ಮೂರು ಶರತ್ತು ಹಾಕುತ್ತಿದ್ದ ಸಂಗತಿ ಈಗಾಗಲೇ ವಿವರಿಸಿದೆಯಷ್ಟೆ. ಸ್ಥಳೀಯ ಮಹಿಳೆಯರೊಂದಿಗೆ ಲಗ್ನ ಮಾಡಿಕೊಳ್ಳಬೇಕೆಂಬ ನಿರ್ಬಂಧವನ್ನು ವೆಂಚುರಾ ಮುರಿದು, ಒಬ್ಬ ಯೂರೋಪಿಯನ್ ಕನ್ಯೆಯನ್ನು ಲಗ್ನವಾಗಿದ್ದರೆ, ಇನ್ನಿತರರು ಸ್ಥಳೀಯ ಕನ್ಯೆಯನ್ನು ಲಗ್ನವಾಗಿ ಸುಖಸಂಸಾರ ಸಾಗಿಸಿದರು. ಕೋರ್ಟ್ ಕೂಡ, ಕಾಶ್ಮೀರಿ ಯುವತಿಯನ್ನು ಲಗ್ನವಾಗಿ, ಸಂಸಾರ ಸಾಗಿಸಿದ.

ಕೋರ್ಟ್, ರಣಜಿತ್‌ಸಿಂಗ್‌ನ ಸೈನ್ಯದಲ್ಲಿ ಸೈನ್ಯಾಧಿಕಾರಿಯಾಗಿ, ಅವನ ತೋಪುಖಾನೆಯ ಮುಖ್ಯಸ್ಥನಾಗಿ ಮೆರೆದರೂ, ಅವನ ಆಸಕ್ತಿ ಪುರಾತತ್ವ (Archeology) ಯಲ್ಲಿ ಇರಿಸಿಕೊಂಡಿದ್ದ. ಗತ ಇತಿಹಾಸದ ನಾಣ್ಯಗಳ ಸಂಗ್ರಹಣೆ, ಮತ್ತು ಇತರ ಪುರಾತನ ವಸ್ತುಗಳನ್ನು ತನ್ನ ಮನೆಯಲ್ಲಿರಿಸಿಕೊಂಡಿದ್ದ, ಒಂದು ಸುಂದರ ವಸ್ತು ಸಂಗ್ರಹಾಲಯವೇ ಆಗಿತ್ತು ಅದು ಎಂದಿದ್ದಾರೆ ಇತಿಹಾಸಕಾರರು. ಕಲ್ಕತ್ತಾದ ಏಶಿಯಾಟಿಕ್ ಸೊಸೈಟಿಯ ಪತ್ರಿಕೆಯ ಹಾಳೆಗಳಲ್ಲಿ ಅವನು ಬರೆದ ಅನೇಕ ಅನ್ವೇಷಣಾ ಕೃತಿಗಳನ್ನು ಕಾಣಬಹುದಾಗಿದೆ ಎಂದಿದ್ದಾರೆ. *

ರಣಜಿತ್ ಸಿಂಗ್‌ನ ಮರಣದೊಂದಿಗೆ ಜನರಲ್ ಕೋರ್ಟ್‌ನ ಅದೃಷ್ಟ ಮತ್ತು ಜೀವನ ಎರಡೂ ಬದಲಾಯಿತು. ರಾಜಕುಮಾರ ಶೇರ್ ಸಿಂಗ್ ತನ್ನ ಸಹೋದರ

* P 83 The Fall of Sikh Empire by Gardner

ಖರಕ್‌ಸಿಂಗ್‌ನ ಸಿಂಹಾಸನವನ್ನೇರಿಕೆಯಿಂದ ದಾಯಾದಿ ಈರ್ಷ್ಯೆಯಿಂದ ನರಳಿದ. ಮುಂದೆ ಆತ ಲಾಹೋರ್‌ನ ಕೋಟೆಗೆ ಮುತ್ತಿಗೆ ಹಾಕುವಾಗ, ಅವನು ಜನರಲ್‌ಗಳಾದ ವೆಂಚುರಾನನ್ನು ತನ್ನ ಸಹಾಯಕ್ಕೆ ಬರಲು ಕೇಳಿದಾಗ, ಆತ ಒಪ್ಪಿದ್ದಲ್ಲದೆ, ಸ್ನೇಹಿತ ಕೋರ್ಟ್‌ನನ್ನು ಕೂಡ ತನ್ನ ಬಳಿಗೆ ಕರೆತಂದು, ಅವನ ಸಹಾಯದಿಂದ ಲಾಹೋರ್‌ನ ಕೋಟೆಯನ್ನು ಆಕ್ರಮಿಸಲು ಸೈನ್ಯಾಚರಣೆ ಜರುಗಿಸಿದ.

ಸಿಖ್ ಅರಸು ಮನೆತನದಲ್ಲಿ ಜರುಗಿದ ಅಂತಃಕಲಹ, ಖರಕ್‌ಸಿಂಗ್ ಮತ್ತು ಶೇರ್ ಸಿಂಗ್‌ರ ಮರಣ, ಅದರಿಂದ ಉಂಟಾದ ಸಿಖ್ ಸೈನ್ಯದಲ್ಲಿ ದಂಗೆ, ಪಿತೂರಿ, ಯೂರೋಪಿಯನ್ ಸೈನಿಕರನ್ನು ಕಾಡಿತು. ಸಿಖ್ ಸೈನಿಕರು, ಕೋರ್ಟ್‌ನ ಮನೆಯನ್ನು ಅವನ ಕೈಕೆಳಗಿನ ಸೈನಿಕರೇ ದಂಗೆ ಎದ್ದು ಧ್ವಂಸ ಮಾಡಿದರು. ಹೇಗೋ ಪಾರಾದ ಕೋರ್ಟ್ ಸ್ನೇಹಿತ ವೆಂಚುರಾನ ಆಶ್ರಯ ಪಡೆದ. ಅಲ್ಲಿಂದ ತಪ್ಪಿಸಿಕೊಂಡ ಕೋರ್ಟ್, ಬ್ರಿಟಿಷ್‌ರ ವಶದಲ್ಲಿದ್ದ ಸಟ್ಲೆಜ್ ನದಿಯ ಆಚೆ ದಡಕ್ಕೆ ಬಂದು ಅವರ ಆಶ್ರಯ ಪಡೆದ. ಆದರೆ, ಸಿಖ್ ಸರಕಾರ ಅವನ ಬೆನ್ನುಹತ್ತಿ, ಲಾಹೋರ್‌ಗೆ ಹಿಂದಿರುಗಲು ಆಜ್ಞೆ ಮಾಡಿತು. ಹೆಂಡತಿ ಮಕ್ಕಳನ್ನು ಬ್ರಿಟಿಷ್‌ರ ಆಶ್ರಯದಲ್ಲಿ ಬಿಟ್ಟು ಕೋರ್ಟ್ ಲಾಹೋರ್‌ಗೆ ಬಂದು ಕೆಲಸಕ್ಕೆ ಹಾಜರಾದ.

ಅಂತಿಮವಾಗಿ, ಪಂಜಾಬ್‌ನ ಪತನವಾದಾಗ, ಕೋರ್ಟ್ ಸ್ವದೇಶ ಫ್ರಾನ್ಸ್‌ಗೆ ಹಿಂದಿರುಗಿದ. ಅವನ ಭಾರತೀಯ ಪತ್ನಿಯನ್ನು ಕ್ರಿಶ್ಚಿಯನ್ ಧರ್ಮಾನುಸಾರ ಪುನಃ ವಿವಾಹವಾಗಿ, ಬ್ರಿಟಿಷ್ ಸರಕಾರ ನೀಡಿದ ಪಿಂಚಣಿಯಿಂದ ಸುಖ ಸಂಸಾರ ಸಾಗಿಸಿದ.*

ಮಹಾರಾಜಾ ರಣಜಿತ್ ಸಿಂಗ್, ಇಡೀ ಭಾರತವನ್ನು ವಿವಿಧ ರಾಜ ಮಹಾರಾಜ ನವಾಬ, ಬಾದ್‌ಶಹಾರೊಂದಿಗೆ ಸಂಧಿ ಒಪ್ಪಂದ ಮಾಡಿಕೊಂಡು, ಪರೋಕ್ಷವಾಗಿ ಆಳುತ್ತಿದ್ದ ಈಸ್ಟ್ ಇಂಡಿಯಾ ಕಂಪನಿಯೊಂದಿಗೆ ಸ್ನೇಹ ಸೌಹಾರ್ದದಿಂದ ವರ್ತಿಸಿ, ಅವರ ಸ್ನೇಹ ಹಸ್ತವನ್ನು ಒಪ್ಪಿಸಿಕೊಂಡು ತನ್ನ ದೇಶದ ಸ್ವಾತಂತ್ರ್ಯವನ್ನು ಕಾಪಾಡಿಕೊಂಡಿದ್ದನು. ಬ್ರಿಟಿಷ್‌ರ ಪ್ರಬಲ ಸೈನ್ಯ, ಅವರ ಶಿಸ್ತು, ಅಧಿಕಾರ ಜರುಗಿಸುವ ರೀತಿ ನೀತಿ ಎಲ್ಲವೂ ಅವನಿಗೆ ಮನವರಿಕೆಯಾಗಿದ್ದವು. ಸೈನಿಕ ಶಿಕ್ಷಣದಲ್ಲಿರುವ ಅವರ ಶಿಸ್ತಿನ ಕ್ರಮ, ಕಠಿಣ ನಿಯಮಾವಳಿಗಳು, ಅವನ್ನು ಅನುಸರಿಸುವ ರೀತಿ ನೀತಿ ಎಲ್ಲವೂ ಅನುಕರಣಯಾಗಿದ್ದು, ರಣಜಿತ್ ಸಿಂಗ್ ತನ್ನ ಸೈನ್ಯದಲ್ಲಿ ಅವನ್ನು ಅಳವಡಿಸಲು ಶ್ರಮವಹಿಸಿದ್ದ. ಯೂರೋಪಿಯನ್ ಸೈನ್ಯಾಧಿಕಾರಿಗಳ ನೆರವನ್ನು ಪಡೆದ. ಅವರಲ್ಲಿ ಅಲ್ಲಾರ್ಡ್, ವೆಂಚುರಾ ಮತ್ತು ಕೋರ್ಟ್ ಎಂಬುವರ ಹೆಸರನ್ನು ಇತಿಹಾಸಕಾರರು ನಮೂದಿಸಿರುತ್ತಾರೆ. ೧೭

---

* P 84 The Fall of Sikh Empire by Gardner

೧೭ P 476-477 History of Sikh People FN

ಪುಟ ೨೨೭ – ರಣಜಿತ್ ಸಿಂಗ್, ತನ್ನ ಸೈನ್ಯದಲ್ಲಿ ಯೋರೋಪಿಯನ್ನರನ್ನು ನೇಮಕ ಮಾಡಿಕೊಂಡು ತನ್ನ ಸೈನಿಕರಿಗೆ ಸೂಕ್ತ ಶಿಕ್ಷಣ ನೀಡಲು ಯತ್ನಿಸಿದರೂ ಅದು ಬ್ರಿಟಿಷ್ಷರ ಯುದ್ಧ ಚಾತುರ್ಯ ಹೋರಾಟ ಜರುಗಿಸುವ ಚಾಣಾಕ್ಷತನ, ಯೋಚನೆಗಳು ಫಲ ನೀಡಲಿಲ್ಲ. ಇದರ ಬಗ್ಗೆ ಸರ್ ಲ್ಯಾಲ್‌ನ ಹೇಳಿಕೆ ಹೀಗಿದೆ :

17. P 227 British Dominiaon in India by Lyall

'And since all the Indian States and dynasties with whom we fought depended for their existence on success in war, an overthrow placed them entirely at our mercy. For in almost every case their territorial title was derived only from recent occupation, and their possession was cemented by little or no national sympathies; so that, unless the conqueror thought fit to set up again the fallen ruler, the people merely underwent a change of masters. The whole attempt of the native powers to imitate the military methods of Europe proved a delusion and a snare. It led them to suppose that they could put themselves on an equality with the English by a system that really placed them at a disadvantage, and to maintain, upon a false estimate of their strength, large military establishments under foreign officers, which it soon became the chief object of the English government to disband or destroy. Nothing was easier for the English, with their command of money and war material, than to increase their own desciplined army in India up to whatever point might be necessary for maintaining superiority.Nothing on the other hand, was more difficult than for an Indian prince to repair his losses of cannon and trained soldiers. Nor is it hard to understand how, in these conditions of military and politival inequality, every successive campaign in India for the last hundred years has resulted in an increase of the English territory. In fact the whole country has thus passed gradually under the dominion of the government which excelled all the other leading States in the art of disciplined fighting,

and whose stability did not in any event depend upon the life or luck of single ruler or general or upon the issue of a single battle, because its resources were drawn from an immense reserve of civilized wealth and energy beyond the sea.'

೧೮೨೭ ರಲ್ಲಿ ರಣಜಿತ್‌ಸಿಂಗ್, ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಗವರ್ನರ್ ಜನರಲ್ ಲಾರ್ಡ್ ಆಮ್‌ಹರ್ಸ್ಟ್, ಶಿಮ್ಲಾದಲ್ಲಿ ತಂಗಿದ್ದಾಗ, ದಿವಾನ್ ಮೋತಿರಾಮ್‌ನನ್ನು ಅವನ ಬಳಿಗೆ ಕಳುಹಿಸಿ, ಗೌರವಾರ್ಪಣೆ ಸಲ್ಲಿಸಿದ. ಅದೇ ರೀತಿ ಬ್ರಿಟಿಷ್ ಪೊಲಿಟಿಕಲ್ ಏಜೆಂಟ್ ಕ್ಯಾಪ್ಟನ್ ವೇಡ್ ಎಂಬಾತ, ಅಮೃತಸರಕ್ಕೆ ಅದೇ ವರ್ಷ ಭೇಟಿ ಇತ್ತ. ಸಿಖ್ ಸಾಮ್ರಾಟನೊಂದಿಗೆ ಉತ್ತಮ ಸಂಬಂಧ ಇರಿಸಿಕೊಳ್ಳುವ ನಿಟ್ಟಿನಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಸೂಕ್ತ ಆಡಳಿತಾಕ್ರಮಗಳನ್ನು ವ್ಯವಸ್ಥೆಗಳನ್ನು ಜಾರಿಗೆ ತಂದಿತ್ತು. ರಣಜಿತ್ ಸಿಂಗ್‌ನ ಮತ್ತು ಸಿಖ್ ಸರದಾರರ ಬಲಾಬಲವನ್ನು ಆಸ್ಥೆಯಿಂದ ಅವಲೋಕಿಸಿದ್ದ ಬ್ರಿಟಿಷ್‌ರು ಅವರ ಸ್ನೇಹವನ್ನು ಬಯಸಿದ್ದರಲ್ಲಿ ಯಾವ ಉತ್ಪ್ರೇಕ್ಷೆಯೂ ಇರಲಿಲ್ಲ. ಕ್ರೂರ, ಪ್ರಬಲ ತುಂಟಕೋರ ಮತ್ತು ವಿದ್ರೋಹಿ ಪಠಾಣರನ್ನು ಎದುರಿಸಲು ತೋರಿಸಿದ ಸಿಖ್ಖರ ಕ್ಷಾತ್ರತನ, ಶೌರ್ಯ ಮತ್ತು ಎದೆಗಾರಿಕೆ, ಬ್ರಿಟಿಷ್‌ರಿಗೆ ಎರಡು ಬಗೆಯಲ್ಲಿ ತಮ್ಮ ಹಿತಾಸಕ್ತಿಗಳನ್ನು ಕಾದುಕೊಳ್ಳುವುದರಲ್ಲಿ ನೆರವಾಗಿದ್ದವು. ಪಠಾಣರ ಆಕ್ರಮಣ ನೇರವಾಗಿ ಎದುರಿಸದೆ, ಅವರನ್ನ ಹದ್ದುಬಸ್ತಿನಲ್ಲಿ ಇಡಲು ಸಿಖ್ಖರನ್ನು ಉಪಯೋಗಿಸಿದರೆ, ತಮ್ಮ ಸ್ವಾತಂತ್ರ್ಯ ಮತ್ತು ಅಭಿಲಾಷೆಗಳನ್ನು ಕಾಪಾಡಿಕೊಳ್ಳಬಹುದು. ಎರಡನೆಯದಾಗಿ, ಆಫ್ಘಾನಿಸ್ತಾನ ಮತ್ತು ತಾವು ಆಳುತ್ತಿದ್ದ ಭಾರತದ ಭಾಗಗಳ ಮಧ್ಯೆ ಒಂದು ತಡೆಗೋಡೆ ರಾಜ್ಯವಿದ್ದರೆ, ತಮಗೆ ಕ್ಷೇಮ ಎಂದು ಅವರು ಬಗೆದಿದ್ದರು.

ಬ್ರಿಟಷ್‌ರು ಮಾತ್ರವಲ್ಲದೆ, ದೂರದ ಯೂರೋಪ್‌ನ ರಶಿಯಾ ಕೂಡ ಸಿಖ್ಖರ ಪ್ರಾಬಲ್ಯ ಅರಿತು ಅವರ ಸಖ್ಯ ಸಂಪಾದಿಸಲು ೧೮೧೪ ಮತ್ತು ೧೮೨೨ ರಲ್ಲಿ ಅವರ ಸ್ನೇಹ ಕೋರಿ ಶುಭಾಶಯ ಕಳುಹಿಸಿದ್ದರು. ೧೮

೨೬ ಅಕ್ಟೋಬರ್ ೧೮೩೧ರಲ್ಲಿ ಸಿಖ್ ಸಾಮ್ರಾಟ ಮಹಾರಾಜ ರಣಜಿತ್ ಸಿಂಗ್, ಸ್ವತಃ ಬ್ರಿಟಿಷ್ ಗವರ್ನರ್ ಜನರಲ್‌ನನ್ನು ರೂಪಾರ್ ನಗರದಲ್ಲಿ ಭೇಟಿ ಮಾಡಿದ. ಬ್ರಿಟಿಷ್‌ರು ಆ ಸಮಾವೇಶದಲ್ಲಿ ಕೆಲವು ಮುಖ್ಯವಾದ ಐತಿಹಾಸಿಕ ಸಂಗತಿಗಳ ಬಗ್ಗೆ ಚರ್ಚಿಸಿ, ಸಿಖ್ ಸಾಮ್ರಾಟನಿಂದ ತಮ್ಮ ಹಿತಾಸಕ್ತಿ ಕಾಪಾಡಲು ಅವನಿಂದ ಆಶ್ವಾಸನೆ ಮತ್ತು ಒಡಂಬಡಿಕೆ ಮಾಡಿಕೊಳ್ಳಲು ಮುಂದಾದರು. ಬ್ರಿಟಿಷ್‌ರಿಗೆ ಯೂರೋಪ್‌ನ ರಶಿಯಾ ಪ್ರಬಲ ಪ್ರತಿಸ್ಪರ್ಧಿಯಾಗಿ ಭಾರತದ ಬಾಗಿಲನ್ನು ಒಡೆಯುವ ಪ್ರಯತ್ನದಲ್ಲಿದ್ದಾರೆಂಬ ನಂಬಿಕೆ ಬಲವಾಗಿ ಬೆಳೆತು, ಇರಾನ್‌ನ ಉತ್ತರ ಭಾಗದ ಕೆಲವು ಪ್ರದೇಶಗಳನ್ನು ರಶಿಯನ್ನರು ಆಕ್ರಮಿಸಿದ ಅವರ ಕಾರ್ಯ ಅವರ ನಂಬಿಕೆಗೆ

೧೮. P 485 History of Sikh People FN

ಇಂಬು ನೀಡಿತ್ತು.

ರಣಜಿತ್ ಸಿಂಗ್ ಬ್ರಿಟಿಷ್‌ರೊಡನೆ ಮಾತು ಜರುಗಿಸಿ, ಅದರ ಸೂತ್ರ ಸಂಧಾನಗಳಿಗೆ ಸಹಿ ಹಾಕುವುದು ರಾಜನ ಪ್ರಮುಖ ಸರದಾರಗಳಿಗೆ ಒಪ್ಪಿಗೆಯಾಗಿರಲಿಲ್ಲ. ಅವರು ತಮ್ಮ ರಾಜ್ಯದ ಭದ್ರತೆಗೆ, ಅಳುವಿಗೆ, ಆಳ್ವಿಕೆಗೆ ತಮ್ಮ ಶಕ್ತಿ, ಯುಕ್ತಿ, ಪ್ರಭಾವಗಳ ಮೇಲೆ ನಂಬಿಕೆ ಇಟ್ಟು, ತಮ್ಮ ಸ್ವಾತಂತ್ರ್ಯ ಕಾಪಾಡಿಕೊಂಡಿರಬೇಕೆಂಬುದೇ ಆಗಿತ್ತು. ಆದರೆ ರಣಜಿತ್ ಸಿಂಗ್ ತನ್ನ ವೈಯಕ್ತಿಕ ಖಾಸಗಿ ಹಿತಾಸಕ್ತಿಗಳಿಗೆ ಬೆಲೆ ನೀಡಿ, ತನ್ನ ನಂತರ ತನ್ನ ಉತ್ತರಾಧಿಕಾರಿಯಾಗಿ ಸಿಂಹಾಸನವನ್ನು ಅಲಂಕರಿಸಲು ತನ್ನ ಮಗ ಖರಕ್ ಸಿಂಗ್‌ನನ್ನು ಆರಿಸಿ, ಅವನನ್ನು ಬ್ರಿಟಿಷ್‌ರಿಗೆ ಪರಿಚಯಿಸಿ ಅವರಿಂದ ಮನ್ನಣೆ ಪಡೆಯಲು ಹಾತೊರೆದ. ಅವನಿಗೆ ಬ್ರಿಟಿಷ್‌ರ ಪ್ರಾಬಲ್ಯ, ಶಕ್ತಿ, ಅಧಿಕಾರಿಗಳ ಬಗ್ಗೆ ಅರಿವಿದ್ದು ಅವರ ಸಹಕಾರದ ಅವಶ್ಯಕತೆಯನ್ನು ಮನಗಂಡಿದ್ದ. ಅದರಂತೆಯೇ ಬ್ರಿಟಿಷ್‌ರಿಗೆ ರಾಜಕುಮಾರ ಖರಕ್ ಸಿಂಗ್‌ನನ್ನು ಉತ್ತರಾಧಿಕಾರಿಯೆಂದು ಪರಿಚಯಿಸಿದ. ರಾಜನ ಆಸ್ಥಾನಿಕರು ಖರಕ್‌ಸಿಂಗ್‌ನ ಆಯ್ಕೆಯನ್ನು ಒಪ್ಪದಿದ್ದರೂ, ರಾಜನಿಗೆ ಪ್ರತಿರೋಧಿಸಲಿಲ್ಲ. ಸರದಾರ್ ಹರಿಸಿಂಗ್ ನಾಲ್ವಾನೊಬ್ಬನೇ, ತನ್ನ ಪ್ರತಿರೋಧವನ್ನು ವ್ಯಕ್ತಪಡಿಸುವಾಗ, ಗುಪ್ತತೆಯನ್ನು ಕಾಪಾಡದೆ, ಬಹಿರಂಗವಾಗಿ ತನ್ನ ವಿರೋಧವನ್ನು ವ್ಯಕ್ತಪಡಿಸಿದ್ದೇ ಅವನಿಗೆ ಮುಳುವಾಯಿತು. ಖರಕ್‌ಸಿಂಗ್, ಒಬ್ಬ ನಿಷ್ಪ್ರಯೋಜಕ, ಮೆದು ಸ್ವಭಾವದ, ಮೃದು ಧೋರಣೆಯ ನಿಸ್ಸಹಾಯಕ, ಮೋಜುಗಾರನೆಂದು, ಅವನಿಂದ ಸಿಖ್ ಸಾಮ್ರಾಜ್ಯದ ಉಳಿವು ದುಸ್ಸಾಧ್ಯ ಎಂಬ ನಂಬಿಕೆ ಅವನಲ್ಲಿದ್ದ ಕಾರಣ, ರಣಜಿತ್ ಸಿಂಗ್‌ನ ಇನ್ನೊಬ್ಬ ಕುಮಾರ ಶೇರ್ ಸಿಂಗ್, ರಾಜ ಪದವಿ ಪಡೆಯಲು ಯೋಗ್ಯ ಎಂಬ ಭಾವನೆ ವ್ಯಕ್ತಪಡಿಸಿದ್ದರಿಂದ, ರಣಜಿತ್‌ಸಿಂಗ್ ಮತ್ತು ಖರಕ್‌ಸಿಂಗ್‌ರ ವೈರತ್ವ ಪಡೆದುಕೊಂಡ. ಅವನನ್ನು ರಾಜಧಾನಿಯಲ್ಲಿರಗೊಡದೆ, ರಣಜಿತ್‌ಸಿಂಗ್ ಗಡಿಭಾಗದಲ್ಲಿ ಪಠಾಣರೊಡನೆ ಹೋರಾಟದಲ್ಲಿ ಮಗ್ನರಾಗಿರುವಂತೆ ನೋಡಿಕೊಂಡ. ಮುಂದೆ, ಶೂರ ವೃದ್ಧ, ನಾಲ್ವಾ ಮರಣಿಸಿದ ನಂತರ, ಅವನ ಸಕಲ ಆಸ್ತಿಯನ್ನು ಮುಟ್ಟುಗೋಲು ಹಾಕಿ, ಅವನ ಸಂಸಾರ ವರ್ಗದವರಿಗೆ ಪಿಂಚಣಿ ನೀಡಿ ತಮ್ಮ ಹಗೆಯನ್ನು ತೋರಿಸಿಕೊಂಡ ಖರಕ್‌ಸಿಂಗ್.

ಸರದಾರ್ ಹರಿಸಿಂಗ್ ನಾಲ್ವಾನ ಎಣಿಕೆ ಸುಳ್ಳಾಗಿರಲಿಲ್ಲ. ಬ್ರಿಟಿಷ್‌ರು, ರಣಜಿತ್‌ಸಿಂಗ್‌ನೊಂದಿಗೆ ಮಾಡಿಕೊಂಡ ಒಪ್ಪಂದದಲ್ಲಿ, ಬ್ರಿಟಿಷ್‌ರಿಗೆ ಮಹತ್ತರ ಲಾಭ ಲಭಿಸಿತು. ಅವರಿಗೆ ಮೊತ್ತಮೊದಲಿಗೆ ಚಿನಾಬ್ ನದಿಯಲ್ಲಿ ನಾವೆ ಓಡಿಸುವ, ದಕ್ಷಿಣದ ಸಿಂಧ್ ಪ್ರಾಂತ್ಯದ ಮೇಲೆ ತಮ್ಮ ಹಕ್ಕನ್ನು ಇರಿಸಿಕೊಳ್ಳುವ ಮತ್ತು ರಶಿಯನ್‌ರು ಭಾರತದ ಮೇಲೆ ಆಕ್ರಮಿಸುವ ವೇಳೆಯಲ್ಲಿ ಅವರನ್ನು ಎದುರಿಸಲು ಸಿಖ್‌ರು ಸಿದ್ಧರಿರಬೇಕೆಂಬ ಸೂತ್ರಗಳಿಗೆ ರಣಜಿತ್‌ಸಿಂಗ್ ಸಹಿ ಹಾಕಿದ್ದ. ಸಿಖ್ ಸಾಮ್ರಾಜ್ಯದ ಮತ್ತು ವಂಶದ ರಾಜ್ಯಾಡಳಿತ ನಾಶಕ್ಕೆ ಇದು ನಾಂದಿ ಹಾಡಿತು ಎಂದರು ಇತಿಹಾಸಕಾರರು. ೧೯

---

೧೯. 487 Story of Sikh People by G.Singh

"Thus the self - same hero, the formidable conqueror and consolidator of the Sikh empire, who chose to rule always in the name of the Guru and the Khalsa, also became a victim of his overpowering affection for an inbecile son, and conspired himself for the destruction of a plant which under his superb and God-given intelligence and leadership, the whole Khalsa (indeed his hole country irrespective of caste or creed) had nurtured with their blood and tears. The hard work of two centuries was sacrificed over personal whim and a vain desire to perpetuate his line, unmindful of the tradition of his faith whose last guru had enjoined upon his followers not to commemorate his memory even by raising a small platform in his honour. Nations are not so much destroyed by outsiders, as by their inner discords and personal varieties whims and vainglorious ambitions of its rulers, while sacrifice and the vision of a common future crown their efforts forsure with victory and grandeur' 20

ಇತಿಹಾಸಕಾರ ಡಾ, ಗೋಪಾಲ್ ಸಿಂಗ್‌ರ ಕರಳು ಕುಲುಕುವ, ಮನ ಕರುಗುವ, ಉವಾಚಗಳು ಎಂದೆಂದಿಗೂ ಮರೆಯಲಾಗದ ಸತ್ಯಚರಿತ್ರೆ. ಒಂದು ರಾಷ್ಟ್ರದ ಹಿತಕ್ಕಿಂತ, ಅದನ್ನು ತಮ್ಮ ರಕ್ತಮಾಂಸಗಳ ಬಲಿದಾನದ ಮುಖಾಂತರ ನಿರ್ಮಿಸಿದ ಗುರು ಮತ್ತು ಸಿಖ್ಖರ ಪರಂಪರೆಗಿಂತ, ಇನ್ನೂರು ವರ್ಷಗಳ ನಿರಂತರ ಹೋರಾಟಗಳ ಪರಿಶ್ರಮದಿಂದ ಸಾಮ್ರಾಜ್ಯ ಸ್ಥಾಪಿಸಿದ್ದಕ್ಕಿಂತ, ಜಾತಿ, ಧರ್ಮ, ಕುಲ, ಪಂಗಡಗಳಿಗಿಂತ ಸ್ಥಾಪಿಸಿದ ಧರ್ಮ, 'ಖಾಲ್ಸಾ'ಗಳ ಹಿತವೇ ಉತ್ತಮಧರ್ಮ ಎಂದು ಸಾರಿದ ನಿಸ್ವಾರ್ಥ ಗುರುಗಳು ಹಾಕಿಕೊಟ್ಟ ಮೇಲ್ಪಂಕ್ತಿಗಿಂತ, ತನ್ನ ವಂಶವನ್ನು ಬೆಳೆಸಲು ಒಬ್ಬ ನಾಲಾಯಕ, ಪುಕ್ಕಲ (imbicile) ಪುತ್ರನನ್ನು ಉತ್ತರಾಧಿಕಾರಿಯನ್ನಾಗಿ ಮಾಡಿ ತನ್ನ ಕುಲದ ನಾಶ, ಸಿಖ್ ಸಾಮ್ರಾಜ್ಯದ ನಾಶ, ಎಲ್ಲದಕ್ಕೂ ಮಿಗಿಲಾಗಿ, ಪರಕೀಯರ ಗುಲಾಮರಾಗಿ ಅವರ ಕಪಿಮುಷ್ಠಿಯಲ್ಲಿ ಸಿಕ್ಕಿಹಾಕಿಕೊಂಡು, ತಮ್ಮ ವ್ಯಕ್ತಿತ್ವ, ಧರ್ಮ, ಸಂಸ್ಕೃತಿಗಳ ನಾಶಕ್ಕೆ ಕಾರಣಪುರುಷನಾಗಿದ್ದು, ಭಾರತೀಯ ಇತಿಹಾಸದಲ್ಲಿ ಜರುಗಿಸಿದ ಅತ್ಯಂತ ಕ್ರೂರ ಹಾಗೂ ವಿಷಾದನೀಯ ಪ್ರಸಂಗ ಎಂದು ಹೇಳಬಹುದು.

ಬ್ರಿಟಿಷ್‌ರೊಂದಿಗೆ ಒಡಂಬಡಿಕೆ ಮಾಡಿಕೊಂಡನಂತರ, ರಣಜಿತ್‌ಸಿಂಗ್, ಗಡಿಭಾಗದ

---

20. P 490 Story of Sikh people by G. Singh

ಆಯಕಟ್ಟಿನ ಪ್ರದೇಶ, ಪಠಾಣರು ಮತ್ತು ಮೊಘಲ್‌ರಿಂದ ನಿರಂತರವಾಗಿ ಆಳಲ್ಪಟ್ಟ ಪೇಶಾವರ್ ನಗರದ ಮೇಲೆ ಆಕ್ರಮಣ ಜರುಗಿಸಿದ. ಈ ಪೇಶಾವರ್ ನಗರ ಖೈಬರ್ ಪಾಸ್‌ನ ಹೆಬ್ಬಾಗಿಲಾಗಿದ್ದು ಯಾವುದೇ ಆಕ್ರಮಣಕಾರರು ಆ ನಗರದ ಮುಖಾಂತರವೇ ಭಾರತದ ಮೇಲೆ ಆಕ್ರಮಣ ಜರುಗಿಸಿ. ಅದನ್ನು ತಮ್ಮ ಭದ್ರವಾದ ನೆಲೆಯನ್ನಾಗಿಸಿಕೊಂಡಿದ್ದರು. ಪಠಾಣರು ಆ ನಗರವನ್ನು ತಮ್ಮ ಕೈವಶ ಮಾಡಿಕೊಂಡು, ಕಾಬೂಲ್‌ಗೆ ಆಧೀನರಾಗಿ ಆಳುತ್ತಿದ್ದರು. ಮೊಘಲ್‌ರು ಅದರ ಮಹತ್ವವನ್ನು ಅರಿತು ಅದನ್ನು ತಮ್ಮ ಕೈವಶ ಮಾಡಿಕೊಳ್ಳಲು ಅಪಾರವಾಗಿ ಶ್ರಮಿಸಿದರೂ, ಪಠಾಣರನ್ನು ಸಂಪೂರ್ಣವಾಗಿ ಸೋಲಿಸದೆ, ಅವರನ್ನು ಕೇವಲ ತಮ್ಮ ಸಾಮಂತರನ್ನಾಗಿಸಿಕೊಂಡು ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿ, ಅವರು ಪರಸ್ಪರ ಹೊಡೆದಾಡುಕೊಳ್ಳುವಂತೆ ಮಾಡಿ ತಮ್ಮ ರಕ್ಷಣೆ ಕಾರ್ಯ ನೋಡಿಕೊಂಡಿದ್ದರು. ಈಗ ೮೦೦ ವರ್ಷಗಳ ನಂತರ, ಮೊತ್ತಮೊದಲ ಬಾರಿ ಸಿಖ್ಖರು ಪೇಶಾವರ್ ನಗರ ಪ್ರದೇಶದ ಮೇಲೆ ದಾಳಿ ಜರುಗಿಸಿ, ಅದನ್ನು ವಶಪಡಿಸಿಕೊಳ್ಳುವಲ್ಲಿ ಸಫಲತೆ ಪಡೆದರು.

ಅಫ್ಘನ್ ಬುಡಕಟ್ಟಿನ ಪಠಾಣರು ನಾಮಮಾತ್ರಕ್ಕೆ ಇಸ್ಲಾಮ್ ಸ್ವೀಕರಿಸಿದ್ದರೂ, ಅದರೊಂದಿಗೆ ಕೇವಲ ಹೆಸರಿನ ನೆಂಟು ಇರಿಸಿಕೊಂಡಿರುತ್ತಾರೆ. ಅವರಾಡುವ ಭಾಷೆ 'ಪುಷ್ಟೂ' ಎಂದಾಗಿದ್ದು, ಅದು ಪರ್ಶಿಯನ್‌ಗೆ ಹತ್ತಿರವಾಗಿದೆ. ದೈಹಿಕವಾಗಿ ಬಲಿಷ್ಠರಾಗಿದ್ದು, ಎತ್ತರದ ನಿಲುವು, ತಿಳಿನೀಲಿ ಕಣ್ಣುಗಳು, ಬಿಳಿಯಲ್ಲದಿದ್ದರೂ, ಕಂದು – ಬಿಳಿ ಮಿಶ್ರ ಬಣ್ಣ ಹೊಂದಿದ ಈ ಪಠಾಣರು ಯುದ್ಧಪ್ರಿಯರು. ಯುದ್ಧ ಇವರಿಗೆ ಸ್ವಾಭಾವಿಕವಾದ ಕಾಲಾವಕಾಶವಾಗಿದೆ. ಅವರಿಗೆ ತಮ್ಮ ಹಾಸಿಗೆಯಲ್ಲಿ ಮರಣಿಸುವುದೆಂದರೆ ಅತ್ಯಂತ ನಾಚಿಕೆಗೇಡಿನ ವಿಷಯ ! ಯುದ್ಧಭೂಮಿಯಲ್ಲಿ ಹೋರಾಡಿ ಸಾಯುವುದು ತಮ್ಮ ಜನ್ಮಸಿದ್ಧ ಹಕ್ಕು ಎಂದು ಭಾವಿಸುವ ಪಠಾಣರು, ಶಾಂತಿಕಾಲದಲ್ಲಿ ತಮ್ಮಲ್ಲೇ ಪರಸ್ಪರ ಕಾದಾಡಿ ಸಾಯುವುದರಲ್ಲಿ ಸಂತಸ ಪಡುತ್ತಾರೆ ! ಯುದ್ಧವಾಡುವುದು ಒಂದು ಲಾಭದಾಯಕ ಕಾಯ ಅವರ ಪಾಲಿಗೆ. ಶತ್ರುಗಳ ನಾಶವಷ್ಟೇ ಅಲ್ಲದೆ, ಅವರ ಪ್ರತಿಯೊಂದು ವಸ್ತುವನ್ನು ಪಡೆಯಲು, ತಾವು ಪ್ರಾಣ ಬಿಡುತ್ತಾರೆ ! ಕೇವಲ ರಾಜ್ಯವಿಸ್ತೀರ್ಣವಲ್ಲದೆ, ಶತ್ರುವಿನ ಜಾನುವಾರು, ಒಂದು ಕುಡಿಯುವ ಬಾವಿ, ಒಂದು ಬಂದೂಕು, ಒಂದು ಗುಂಡು ಅಥವಾ ಎದುರಾಳಿಯ ಸ್ತ್ರೀಗಾಗಿ ಕಾದಾಡುತ್ತಾರೆ !

ಈ ರೀತಿ ಕಾದಾಡಿ. ಸಂಪೂರ್ಣ ಕುಲನಾಶವಾಗುವ ಸಂದರ್ಭ ಹೆಚ್ಚಾದಾಗ, ದೈವನಿಯಮದ ಪ್ರಕಾರ, ಕೆಲವು ತಿಂಗಳ ಕಾಲದಲ್ಲಿ ಹೋರಾಟ ಸಲ್ಲ ಎಂಬ ನಿಯಮಕ್ಕೆ ಅನುಗುಣವಾಗಿ, ಶಾಂತಿ ಪಾಲಿಸಿ, ಸಂಸಾರ ವೃದ್ಧಿ ಮಾಡಿಕೊಂಡು, ಹುಟ್ಟಿದ ಮಕ್ಕಳನ್ನು ಸಾಕಿ, ಅವರನ್ನು ಯೋಧರನ್ನಾಗಿ ಮಾಡಲು ಸಕಲ ಪ್ರಯತ್ನ ಮಾಡುತ್ತಾರೆ.

ಅಫ್ಘನ್ ಬುಡಕಟ್ಟಿನ ಜನರನ್ನು ತಮ್ಮ ಹಿಡಿತದಲ್ಲಿರಿಸಿಕೊಳ್ಳಲು ಪರ್ಶಿಯನ್‌ರು,

ಅರಬ್ಬರು, ರಶಿಯನ್‌ರು, ಬ್ರಿಟಿಷ್‌ರು, ಮೊಘಲ್‌ರು ಎಷ್ಟೇ ಹೆಣಗಿದರೂ ಸಫಲರಾಗದಿದ್ದುದು ಇತಿಹಾಸದ ಪುಟಗಳಲ್ಲಿ ಕಾಣಬಹುದಾಗಿದೆ. ಇಂತಹ ಅಫ್ಘನ್ನರನ್ನು ತಮ್ಮ ಗಡಿಯೊಳಗೆ ನುಸುಳಿಬಾರದಂತಹ ಧೈರ್ಯದ ಕಾರ್ಯಕ್ರಮ ಹಾಕಿಕೊಂಡ ಸಿಖ್ ಸಾಮ್ರಾಟ ರಣಜಿತ್ ಸಿಂಗ್. ಅವನು ಪಠಾಣರ ಭದ್ರಕೋಟೆಯಾದ ಪೇಶಾವರ್‌ನ್ನು ಅಕ್ರಮಿಸಿಕೊಂಡಿದ್ದು ಅಲ್ಲಿ ಆಳ್ವಿಕೆ ಜರುಗಿಸಿದ್ದು ಅತ್ಯಂತ ಅಭೂತಪೂರ್ವವಾಗಿದೆ ಎಂದರು ಇತಿಹಾಸಕಾರರು.

ಮೇ ೬, ೧೮೩೪ ರಂದು ಜರುಗಿದ ಯುದ್ಧಾಚರಣೆ ಕೆಚ್ಚೆದೆಯ ಸಿಖ್ ಸರದಾರರಾದ ಹರಿಸಿಂಗ್ ನಾಲ್ವಾ ಮತ್ತು ಕನ್ವರ್ ನೌನಿಹಾಲ್‌ಸಿಂಗ್‌ರ ನೇತೃತ್ವದಲ್ಲಿ ಜರುಗಿ, ಕೆಲವೇ ದಿನಗಳಲ್ಲಿ ಪಠಾಣರನ್ನು ಸೋಲಿಸಿ, ಪೇಶಾವರ್‌ನ್ನು ಆಕ್ರಮಿಸಿದರು. ಸುದ್ದಿ ಅರಿತ ಕಾಬೂಲ್‌ನ ಅಮಿರ್ ದೋಸ್ತ್ ಮೊಹಮ್ಮದ್ ಕೆರಳಿ ಕೆಂಡವಾದ. ಆದರೆ ಸಿಖ್‌ರ ಅಪಾರ ಸೈನ್ಯದ ಮುಂದೆ ತನ್ನ ಆಟ ಸಾಗದೆ, ಮಾತುಕತೆಯ ಮುಖಾಂತರ ಸಮಸ್ಯೆ ಬಗೆಹರಿಸಲು ರಣಜಿತ್ ಸಿಂಗ್‌ನಿಗೆ ಕರೆ ನೀಡಿದ. ರಾಜ ಅವನ ಮಾತನ್ನು ನಂಬಿ, ತನ್ನ ಇಬ್ಬರು ಸಂಧಾನಕಾರರಾದ ಫಕೀರ್ ಮೊಹಮ್ಮದ್ ಮತ್ತು ಅಮೆರಿಕನ್ ಅಧಿಕಾರಿ ಹಾರ್‌ಲೋನ್ ಎಂಬುವರನ್ನು ಕಾಬೂಲ್‌ಗೆ ಕಳುಹಿಸಿದ. ಕುಟಿಲ ಅಮೀರ್ ಅವರೊಂದಿಗೆ ಮಾತುಕತೆ ನಡೆಸದೆ ಅವರನ್ನು ಬಂಧಿಸಿದ ಸುದ್ದಿ ಅರಿತ ಮಹಾರಾಜ ಕುಪಿತಗೊಂಡು, ಅಫ್ಘಾನಿಸ್ಥಾನದ ಜಲಾಲಾಬಾದ್ ನಗರದ ಮೇಲೆ ದಾಳಿ ನಡೆಸಲು ಸಿದ್ಧನಾದ. ಅದನ್ನು ಅರಿತ ಅಮೀರ್ ಇಬ್ಬರನ್ನು ಸೆರೆಯಿಂದ ಬಿಡಿಸಿದ. ರಣಜಿತ್ ಸಿಂಗ್ ಕೂಡ ಕಾಬೂಲ್ ಮೇಲೆ ನುಗ್ಗಲು ಮನಸ್ಸು ಮಾಡದೆ, ಗೆದ್ದ ಪ್ರದೇಶಗಳಲ್ಲಿ ಕೋಟೆ ಕೊತ್ತಲಗಳನ್ನು ನಿರ್ಮಿಸಿ, ಅವುಗಳ ಸುಭದ್ರತೆಗೆ ಸೂಕ್ತ ಕ್ರಮ ಕೈಗೊಂಡ. ೨೧

ರಣಜಿತ್ ಸಿಂಗ್ ತಾನು ಗೆದ್ದ ಗಡಿ ಪ್ರದೇಶವಾದ ಪೇಶಾವರ್‌ನ್ನು ಗೆದ್ದರೂ, ಅದನ್ನು ಗೆಲ್ಲಲು ನೆರವಾದ ಅಪ್ರತಿಮ ವೀರ ಸರದಾರ ಹರಿಸಿಂಗ್ ನಾಲ್ವಾನನ್ನು ಉಳಿಸಿಕೊಳ್ಳಲಾಗಲಿಲ್ಲ. ಕಾಬೂಲ್ ಅಮೀರ್, ತನ್ನ ರಾಜ್ಯದ ಜಾಮ್‌ರೂಡ್ ಕೋಟೆಯನ್ನು ಕಳೆದುಕೊಂಡ ಸಂಗತಿ ಅರಿತು ಸುಮ್ಮನೆ ಕುಳಿತುಕೊಳ್ಳಲಿಲ್ಲ. ಆತ ಒಂದು ಬಲಿಷ್ಠ ಪಠಾಣ ಸೈನ್ಯವನ್ನು ಅದನ್ನು ಮರುವಶ ಪಡಿಸಿಕೊಳ್ಳಲು ಕಳುಹಿಸಿದ. ಅದನ್ನು ಕಾಯುತ್ತಿದ್ದ ಮಿರ್ಜಾ ಮಹಾನ್ ಸಿಂಗ್ ತನ್ನ ೬೦೦ ಸೈನಿಕರಿಂದ ಪಠಾಣರ ಆಕ್ರಮಣವನ್ನು ಎದುರಿಸಲಾಗದೆ, ಸಂದೇಶವನ್ನು ಹರಿಸಿಂಗ್ ನಾಲ್ವಾನಿಗೆ ತಲುಪಿಸಿದ. ಹರಿಸಿಂಗ್ ಒಡನೆಯೇ ತನ್ನ ಸೈನಿಕರೊಂದಿಗೆ ಅವನ ರಕ್ಷಣೆಗೆ ಬಂದು, ಪಠಾಣರನ್ನು ಎದುರಿಸಿ ಅವರನ್ನು ಓಡಿಸಿದ. ಆದರೆ, ದುರದೃಷ್ಟವಶಾತ್, ಆ ಯುದ್ಧಾಚರಣೆಯಲ್ಲಿ ಅವನಿಗೆ ಗುಂಡು ತಾಕಿ ಮರಣವನ್ನಪ್ಪಿದ.

---

೨೧. P 492 History of Sikh Peole by G. Singh

ವೀರ ಹರಿಸಿಂಗ್‌ನ ಮರಣ ರಣಜಿತ್‌ಸಿಂಗ್‌ನ ಬಲಗೈ ಮುರಿದಂತಾಯಿತು. ಅವನು ಅಪಾರವಾಗಿ ಶೋಕಿಸಿದ. ಆದರೆ, ರಣಜಿತ್‌ಸಿಂಗ್ ಇದುವರೆಗೂ ಪಾಲಿಸಿದ ನಿಯಮದ ಪ್ರಕಾರ, ಮರಣಿಸಿದ ಪ್ರಮುಖ ಸರದಾರರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು, ವಾರಸುದಾರರಿಗೆ ಕೇವಲ ಪಿಂಚಣಿ ನೀಡುವ ನಿಯಮವನ್ನು ಹರಿಸಿಂಗ್ ನಾಲ್ವಾನಿಗೂ ಪಾಲಿಸಿದ.

ರಣಜಿತ್‌ಸಿಂಗ್‌ನ ಕಣ್ಣು ಫಲವತ್ತಾದ ಮತ್ತು ಆಯಕಟ್ಟಿನ ಪ್ರದೇಶವಾದ ಸಿಂಧ್‌ನ ಮೇಲೆ ಬಿದ್ದಿತು. ಆದರೆ ಸಿಂಧ್‌ನ ಅಮೀರ್‌ರು ಬ್ರಿಟಿಷ್‌ರ ಸ್ನೇಹ ಬಯಸಿ, ಅವರ ರಕ್ಷಣೆ ಪಡೆಯಲು ಮುಂದಾದರು. ಬ್ರಿಟಿಷ್‌ರ ಶಕ್ತಿಗೆ ಭಾರತದ ಎಲ್ಲಾ ಪ್ರದೇಶಗಳ ರಾಜ ಮಹಾರಾಜರು, ನವಾಬರು ಮಣಿದಿದ್ದ ಸಂಗತಿ ಅರಿತಿದ್ದ ಸಿಂಧ್‌ನ ಅಮೀರ್‌ರು ಬ್ರಿಟಿಷ್‌ರು ಅಪೇಕ್ಷಿಸಿದ್ದ ಸಿಂಧೂ ನದಿಯ ಮೇಲೆ ತಮ್ಮ ಹಕ್ಕು ಪ್ರತಿಪಾದಿಸಿ, ಅದರಲ್ಲಿ ನಾವೆ ಓಡಿಸುವ ಹಕ್ಕಿಗಾಗಿ ತಮ್ಮ ಒಪ್ಪಿಗೆ ಸೂಚಿಸಿ, ಅವರ ಸಖ್ಯ, ಸಹಾಯ ಸಂಪಾದಿಸಿದ್ದ ಸಂಗತಿ ಅರಿತ ರಣಜಿತ್‌ಸಿಂಗ್ ಸಿಂಧ್‌ನ ಮೇಲೆ ಆಕ್ರಮಣಕ್ಕೆ ಧೈರ್ಯ ತೋರಿಸಲಿಲ್ಲ. ಆದರೆ, ಕಾಶ್ಮೀರ ಮತ್ತು ಟಿಬೆಟ್‌ಗಳ ಮಧ್ಯೆ ಇರುವ ಲಡಾಕ್‌ನ್ನು ಆಕ್ರಮಿಸಲು ತನ್ನ ಡೋಗ್ರಾ ಸೈನ್ಯಾಧಿಕಾರಿ ಜೋರಾವಾರ್ ಸಿಂಗ್‌ನಿಗೆ ಅಪ್ಪಣೆ ನೀಡಿದ. ಆತ ಲಡಾಕ್‌ನ್ನು ಆಕ್ರಮಿಸಿ ಅದರ ರಾಜನಿಂದ ಕಪ್ಪ ಪಡೆದ. ನೇಪಾಳದ ಗುರ್ಖಾರನ್ನು ಸೋಲಿಸಿ ಬ್ರಿಟಿಷ್‌ರು ಅವರನ್ನು ತಮ್ಮ ಹದ್ದುಬಸ್ತಿನಲ್ಲಿಟ್ಟಿದ್ದ ವಿಷಯ ಅರಿತ (೧೮೧೪-೧೬) ರಣಜಿತ್‌ಸಿಂಗ್ ಗೂರ್ಖಾರನ್ನು ತನ್ನ ಸೈನ್ಯದಲ್ಲಿ ದಾಖಲು ಮಾಡಲಾರಂಭಿಸಿದ. ಗೂರ್ಖಾ ಸೈನ್ಯಾಧಿಕಾರಿ ಅಮರ್‌ಸಿಂಗ್ ಥಾಪಾನ ಮಗ ಸಿಖ್ ಸೈನ್ಯಕ್ಕೆ ಸೇರಿ ಅಧಿಕಾರಿಯಾಗಿ ಮಿಂಚಿದ.

ಕಾಬೂಲ್‌ನಲ್ಲಿ ವಿಪ್ಲವ ತಲೆದೋರಿ ಅಲ್ಲಿ ಆಳುತ್ತಿದ್ದ ಶಾ ಶೂಜಾನ ಪದಚ್ಯುತಿ ಆಯಿತು. ಸಿಖ್ ಮತ್ತು ಬ್ರಿಟಿಷ್‌ರಿಗೆ ಅವನ ಪದಚ್ಯುತಿಯಿಂದ ಮತ್ತು ಕಾಬೂಲ್‌ನಲ್ಲಿ ಸ್ಥಿರ ಸರಕಾರವಿರದೆ, ನೆರೆಯ ಪರ್ಶಿಯಾ ಮತ್ತು ದೂರದ ರಶಿಯಾ ರಾಷ್ಟ್ರಗಳು ಆ ರಾಜ್ಯವನ್ನು ಆಕ್ರಮಿಸಿ, ಕ್ರಮೇಣ ಭಾರತದ ಮೇಲೆ ತಮ್ಮ ಆಕ್ರಮಣಾ ಕಾರ್ಯ ಮುಂದುವರಿಸಬಹುದೆಂಬ ಭೀತಿ ಉಂಟಾಯಿತು. ಬ್ರಿಟಿಷ್‌ರು ಸಿಖ್ ಸಾಮ್ರಾಟನ ಸಹಾಯ ಕೋರಿದರು. ಈರ್ವರೂ ಸೇರಿ ಅಫ್ಘಾನಿಸ್ತಾನದ ಮೇಲೆ ದಾಳಿ ನಡೆಸಿ, ಶಾ ಶೂಜಾನನ್ನು ಅಲ್ಲಿನ ಸಿಂಹಾಸನದಲ್ಲಿ ಕೂರಿಸಿದರೆ ತಮಗೆ ಕ್ಷೇಮ ಎಂದು ಸಾರಿದರು. ಒಲ್ಲದ ಮನಸ್ಸಿನಲ್ಲಿ ರಣಜಿತ್ ಸಿಂಗ್ ಬ್ರಿಟಿಷ್‌ರ ಸಲಹೆಯನ್ನು ಒಪ್ಪಿದ. ಯಾಕೆಂದರೆ, ಕಾಬೂಲ್‌ನ್ನು ಗೆದ್ದರೂ, ಅಲ್ಲಿನ ಕ್ರೂರ, ಅಜಾಗ್ರತೆಯ, ಅಸಂಸ್ಕೃತ ಪಠಾಣರನ್ನು ಮಣಿಸಿ ಅಧಿಕಾರ ಚಲಾಯಿಸಲು ಅಸಾಧ್ಯ ಎಂದು ಮನಗಂಡಿದ್ದ. ಅತ್ಯಂತ ಸ್ವಾಭಿಮಾನಿ ಸ್ವತಂತ್ರಪ್ರಿಯರಾದ ಆಫ್ಘನ್ನರನ್ನು ಆಳುವುದು ದುಸ್ಸಾಧ್ಯ ಎಂದು ಅರಿತಿದ್ದ ರಣಜಿತ್ ಸಿಂಗ್, ಆ ದೇಶದ ಹೆಬ್ಬಾಗಿಲಾದ ಪೆಶಾವರ್‌ನ್ನು ತನ್ನ ಹಿಡಿತದಲ್ಲಿಟ್ಟುಕೊಂಡರೆ, ಪಠಾಣರನ್ನು ಅವರ ಜಾಗದಲ್ಲೇ, ಅವರು ಪರಸ್ಪರ ಹೊಡೆದಾಡಿ, ತನ್ನ ರಾಜ್ಯದೊಳಗೆ

ನುಸುಳುವಂತಾಗದಂತೆ ನೋಡಿಕೊಳ್ಳಬಹುದೆಂದು ತಿಳಿದಿದ್ದನು.

ಶಾ ಶೂಜಾ, ಬ್ರಿಟಿಷ್ ಮತ್ತು ರಣಜಿತ್ ಸಿಂಗ್‌ರೊಂದಿಗೆ ಒಂದು ಒಪ್ಪಂದಕ್ಕೆ ಸಹಿ ಹಾಕಿದ. ಅದರ ಪ್ರಕಾರ, ಇದುವರೆಗೂ ಸಿಂಧ್ ಮೇಲೆ ಅಧಿಕಾರ ಸ್ಥಾಪಿಸಿದ್ದ ಶೂ ಶಾಜಾನ ಅಧಿಕಾರ ಕೊನೆಗೊಂಡು, ಬ್ರಿಟಿಷ್‌ರಿಗೆ ಆ ಅಧಿಕಾರ ನೀಡುವುದಾಗಿತ್ತು. ರಣಜಿತ್ ಸಿಂಗ್‌ನಿಗೆ ೧೫ ಲಕ್ಷ ರೂಪಾಯಿ ಸೈನ್ಯಾಚರಣೆಯ ಖರ್ಚು ನೀಡುವುದಾಗಿತ್ತು. ಸಿಂಧೂ ನದಿಯ ಆಚೆ ದಡದಲ್ಲಿ ನಿಂತಿರುವ ಶಿಕಾರಿಪುರ ಪ್ರದೇಶಗಳ ಆಡಳಿತದ ಬಗ್ಗೆ ಸಿಖ್ ಮತ್ತು ಬ್ರಿಟಿಷ್‌ರು ಮಾತುಕತೆಯ ಮುಖಾಂತರ ಬಗೆಹರಿಸಿಕೊಳ್ಳಬೇಕಾಗಿತ್ತು.

ಆದರೆ ಇವು ಯಾವುದೂ ಕೈಗೊಂಡು ಮುಕ್ತಾಯಗೊಳ್ಳುವ ಮೊದಲೇ ಮಹಾರಾಜ ರಣಜಿತ್‌ಸಿಂಗ್ ಸಾವನ್ನಪ್ಪಿದ. ೧೮೩೪ ರಲ್ಲೇ ಒಂದು ಬಾರಿ ಪಾರ್ಶ್ವವಾಯುವಿನಿಂದ ಬಳಲಿದ ರಾಜ, ಕ್ರಮೇಣ ಚೇತರಿಸಿಕೊಂಡರೂ, ೧೮೩೯ರಲ್ಲಿ ಅವನು ಮತ್ತೊಮ್ಮೆ ಪಾರ್ಶ್ವವಾಯುಗೆ ತುತ್ತಾಗಿ, ೨೭ನೆಯ ಜೂನ್ ತಿಂಗಳು, ೧೮೩೯ರಲ್ಲಿ ಸಾವನ್ನಪ್ಪಿದ.

ರಣಜಿತ್‌ಸಿಂಗ್‌ನ ಸಾವಿನಿಂದ ಪಂಜಾಬ್ ಅನಾಥವಾಯಿತು. ಪುನಃ ಅಂತಹ ವೀರಪುರುಷನ ಜನನವಾಗಲಿಲ್ಲ ಎಂದು ಇತಿಹಾಸಕಾರರು ಸಾರಿದರು.

ಅಧ್ಯಾಯ ೮
ರಣಜಿತ್ ಸಿಂಗ್ – ಸಾಮಾನ್ಯ ಜ್ಞಾನಿ

'ಸಾಮಾನ್ಯ ಜ್ಞಾನವೇ ಅಂತರ್ಬೋಧೆ, ಅದು ಸಾಕಷ್ಟು ಪ್ರಮಾಣದಲ್ಲಿದ್ದರೆ, ಮಹಾಪ್ರತಿಭೆಯಾಗುತ್ತದೆ'

– ಜೆ. ಬಿಲ್ಲಿಂಗ್ಸ್

ರಣಜಿತ್ ಸಿಂಗ್ ಒಬ್ಬ ಮಹಾನ್ ಯೋಧ, ಅಪ್ರತಿಮ ಪರಾಕ್ರಮಿ, ಆಕ್ರಮಣಕಾರಿ (Conqueror) ಎಂದು ಕರೆದು ಹಾಡಿದ್ದಾರೆ ಇತಿಹಾಸಕಾರರು. ಆತ ಗೆದ್ದು ಸಂಪಾದಿಸಿದ ಅನೇಕ ರಾಜ್ಯಗಳನ್ನು ಒಟ್ಟುಗೂಡಿಸಿ ಒಂದು ಬಲಿಷ್ಠ ರಾಷ್ಟ್ರವನ್ನು ನಿರ್ಮಿಸಿದ ರಾಷ್ಟ್ರನಿರ್ಮಾಪಕ ಎಂದು ವರ್ಣಿಸಿದ ಇತಿಹಾಸಕಾರರು, ಭಾರತ ಖಂಡದ ಕೊನೆಯ ಸ್ವತಂತ್ರ ರಾಷ್ಟ್ರ ನಿರ್ಮಾಮಪಕನೂ ಆಗಿದ್ದ, ರಣಜಿತ್ ಸಿಂಗ್ ಒಬ್ಬ ಮಹಾನ್ ರಾಷ್ಟ್ರ ನಾಯಕ, ನಿರ್ಮಾಪಕ, ಯೋಧ ಎಂಬುದಾಗಿ ಕರೆಸಿಕೊಂಡರೂ, ಆತ ನಿರಕ್ಷರಸ್ಥನಾಗಿದ್ದ ! ಆದರೆ ಅವನ ಚಾಣಾಕ್ಷ ಬುದ್ಧಿ, ತೀಕ್ಷ್ಣ ಹಾಗೂ ಜಾಗರೂಕತೆಯ ದೃಷ್ಟಿ, ವಿವೇಚನಾಪರತೆ, ಶ್ರದ್ಧೆ, ಮುಂದಾಲೋಚನೆ, ಚಾಕಚಕ್ಯತೆ ಬೆರಗುಗೊಳಿಸುವಂತಿತ್ತು ಎಂದಿದ್ದಾರೆ ಇತಿಹಾಸಕಾರರು.

ಯುದ್ಧಾಚರಣೆಯಲ್ಲಿ ಸ್ವತಃ ಕತ್ತಿ ಹಿಡಿದು ಮುಂದಾಳತ್ವ ವಹಿಸಿ ಅಶ್ವಾರೂಢನಾಗಿ ಹೋರಾಡುತ್ತಿದ್ದ ರಣಜಿತ್ ಸಿಂಗ್ ಯುದ್ಧದಲ್ಲಿ ಜಯ ಗಳಿಸದೆ ಹಿಂದಿರುಗುತ್ತಿರಲಿಲ್ಲವಂತೆ ! ಸೆರೆ ಸಿಕ್ಕ ಯಾವುದೇ ಯೋಧ ರಾಜ ಮಹಾರಾಜ, ನವಾಬರನ್ನು ವಧಿಸದೆ, ಹಿಂಸಿಸದೆ, ಅವಮಾನಿಸದೆ, ಅವರನ್ನು ಯೋಗ್ಯರೀತಿಯಲ್ಲಿ ನೋಡಿಕೊಂಡ ಅಪ್ಪಟ ಮಾನವತಾವಾದಿ, ಉದಾರ ಹೃದಯವುಳ್ಳ ಮಹಾರಾಜನಾಗಿದ್ದ ! ಕೊಟ್ಟ ಮಾತಿಗೆ ತಪ್ಪದ ಮಹಾನ್ ನಾಯಕನಾಗಿ ಮೆರೆದ ರಣಜಿತ್ ಸಿಂಗ್. ಜಾತಿ, ಮತ, ಧರ್ಮಗಳ ಭೇದಭಾವ ಎಣಿಸದೆ, ಸರ್ವರನ್ನೂ ಏಕಭಾವನೆಯಿಂದ ಕಂಡು, ತನ್ನ ಉದಾರತೆ, ಅತ್ಯುನ್ನತ ಹೃದಯವೈಶಾಲ್ಯತೆಯಿಂದ ಶತ್ರುಗಳನ್ನು ಕಂಡು, ಅವರ ಸೋಲಿನಿಂದ ಅವರಿಗೆ ಅವಮಾನವಾಗದಂತೆ ನೋಡಿಕೊಂಡು, ಆದರದಿಂದ, ಅವರನ್ನು ತನ್ನ ಸಾಮಂತರನ್ನಾಗಿ ಮಾಡಿಕೊಂಡು, ಅವರಿಗೆ ಸೂಕ್ತ ಸ್ಥಾನಮಾನ ನೀಡಿ ಗೌರವಿಸುವ ಪರಿಪಾಠ ಇರಿಸಿಕೊಂಡ ಮಹಾರಾಜ, ಪಂಜಾಬ್‌ನಲ್ಲಿದ್ದ ಬಹುಸಂಖ್ಯಾ ಮುಸ್ಲಿಮ್ ಪ್ರಜೆ ಮತ್ತು ನವಾಬ್‌ರ ವಿಶ್ವಾಸ ಪ್ರೀತಿ ಗಳಿಸಿ ರಾಜ್ಯಭಾರ ಮಾಡಿ ಕೀರ್ತಿ ಗಳಿಸಿದ. ಅವನ ಸೈನ್ಯದಲ್ಲಿ ಮುಸ್ಲಿಮ್ ಸೈನಿಕರು ಮತ್ತು ಅಧಿಕಾರಿಗಳಿದ್ದರೆ, ಹಿಂದೂ ಡೋಗ್ರಾಗಳು, ನೇಪಾಳೀ ಗೂರ್ಖಾಗಳು, ತನ್ನ ಧರ್ಮೀಯರೇ ಆದ ಸಿಖ್ಖರ ದಂಡೇ ಇದ್ದವು.

"The Punjab state" (Under Ranjit Singh writes Vincent

ಅವರು ರಾಜನ ಬಗ್ಗೆ ಇಟ್ಟ ಪ್ರೀತಿ ವಿಶ್ವಾಸಗಳ ದ್ಯೋತಕವಾಗಿತ್ತು.

ರಣಜಿತ್ ಸಿಂಗ್‌ನ ಸೈನ್ಯ, ಆದ್ಯದಲ್ಲಿ ಎಲ್ಲಾ ಭಾರತೀಯ ರಾಜರ ತರಹ ಅಶಿಸ್ತು, ಸೂಕ್ತ ಸೈನಿಕ ಶಿಕ್ಷಣದ ಅಭಾವದಿಂದ ಕೂಡಿದ್ದರೆ, ಕ್ರಮೇಣ ಬ್ರಿಟಿಷ್ ಸೈನ್ಯದ ಶಿಸ್ತಿನ ಸಿಪಾಯಿಗಳ ಶಿಕ್ಷಣ ವಿಧಾನವನ್ನು ಅನುಸರಿಸಿ, ತನ್ನ ಸೈನ್ಯದಲ್ಲಿ ಯೂರೋಪಿಯನ್ ಸೈನ್ಯಾಧಿಕಾರಿಗಳ ನೇಮಕ ಮಾಡಿ, ಅವರಿಂದ ಶಿಸ್ತಿನ ಯುದ್ಧ ವಿಧಾನಗಳನ್ನು ಜಾರಿಗೆ ತಂದ. ಅವನ ಸೈನ್ಯದಲ್ಲಿ ಸಿಖ್ ಸಂಜಾತರೊಂದಿಗೆ, ಹಿಂದೂ ಗೂರ್ಖಾ, ಮುಸ್ಲಿಮ್ ಪಠಾಣರು ಜೊತೆಜೊತೆಯಾಗಿ ಹೋರಾಡಿದರು.

ರಣಜಿತ್ ಸಿಂಗ್‌ನ ಸೈನ್ಯದಲ್ಲಿ ದಕ್ಷಿಣ ಭಾರತದ 'ತೆಲಿಂಗರು' ಮತ್ತು ಉತ್ತರ ಭಾರತದ 'ಪೂರ್ಬಿಯಾ'ಗಳ ಜೊತೆಗೆ ಮುಸ್ಲಿಮ್ 'ರೋಹಿಲ್ಲಾ'ಗಳ ತುಕಡಿಗಳಿದ್ದವು ಎಂದಿದ್ದಾರೆ ಇತಿಹಾಸಕಾರರು.

ಸೈನಿಕರಿಗೆ ಮಾಹೆಯಾನ ೬ ರೂಪಾಯಿಗಳ ಸಂಬಳ ನೀಡಲಾಗುತ್ತಿತ್ತು. ಇದು ಬ್ರಿಟಿಷ್ ಸೈನ್ಯದ ಸಿಪಾಯಿಗಳಿಗೆ ದೊರಕುತ್ತಿದ್ದ ಸಂಬಳಕ್ಕಿಂತ ಸ್ವಲ್ಪ ಕಡಿಮೆಯಾಗಿತ್ತು ಎಂದಿದ್ದಾರೆ. 'Metcalfe remarked that all the Indian rulers were now forming similar corps, and Ranjit's was about as good as any other; it would not stand against a well - trained army, but it was Ranjit`s best weapon for subjugating petty chiefs. This last is doubtless true. However much Ranjit may have begun to be identified with the Khalsa, it was initially by use of foreign mercenaries, not by appealing to the nation, that he overthrew Sikh`s feudalism. It may be that he only dicovered as he went on the dynamic force of Sikhism. Nature had not made him a fanatic.'

(P 103 Metcalfe's Mission)

ರಣಜಿತ್ ಸಿಂಗ್ ಸೈನ್ಯದಲ್ಲಿ ಜಾಟ್ ಪಂಗಡದವರು ಅಧಿಕ ಸಂಖ್ಯೆಯಲ್ಲಿದ್ದರು ಎಂದು ಹೇಳಲಾಗಿದೆ. ಅವರು ಸ್ವಾಭಾವಿಕವಾಗಿ ಶೂರರೂ, ಎದೆಗಾರಿಕೆಯುಳ್ಳವರಾಗಿದ್ದರು. ಬಹಳ ಅಪರೂಪವೆನಿಸಿದರೂ, ಅವರು ಸೈನ್ಯದಲ್ಲಿ ಭರ್ತಿಯಾಗಿ ಸೈನಿಕರಾಗಿ ಸೇವೆ ಸಲ್ಲಿಸಲು ಹಾತೊರೆದರೂ, ಸಾಮಾನ್ಯ ರೈತರಾಗಿ, ಜಮೀನುದಾರರಾಗಿ, ಹೊಲ ಗದ್ದೆಗಳಲ್ಲಿ ದುಡಿಯುವ ಕುಶಲಕರ್ಮಿಗಳಾಗಿಯೂ ವಿಜೃಂಭಿಸಿದರು. ಭಾರತದ ಇತರ ಪ್ರಾಂತ್ಯಗಳಲ್ಲಿ, ರೈತಾಪಿ ಜನರು ತಮ್ಮ ಕುಲಕಸಬು ಮಾಡಿಕೊಂಡು ಜೀವನ ಸಾಗಿಸಿದರೆ, ಪಂಜಾಬ್‌ನ ಜಾಟ್‌ರು ಮಾತ್ರ ರೈತರಾಗಿದ್ದಾಗ್ಯೂ, ವೀರ ಯೋಧರಾಗಿ ಹೋರಾಟದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ದಕ್ಷಿಣದಲ್ಲಿ

Smith " was neither a traditional Indian territorial state and monarchy,nor merely a dictatorship of one community over another. There was an element of partnership with other communities. Ranjit did not claim the despotic sway of a traditional monarchy over his own Sikhs. He was in some sense, its elected chief, and, like Augustus Ceasar, he was careful never to push his pretentious too far. To the end, though taking the title of Maharaja, he claimed to be no more than the general of the Khalsa" ೧

ಸಿಖ್ ಮಹಾರಾಜನಾಗಿ ವಿಜೃಂಭಿಸಿದರೂ, 'ಖಾಲ್ಸಾ' ಪಂಥದ ಹೆಸರಿನಲ್ಲಿ ನಾಣ್ಯಗಳನ್ನು ಮುದ್ರಿಸಿದರೂ, ಸಿಖ್ ಧರ್ಮಾನುಯಾಯಿಯಾಗಿ, ಸಕಲ ಧರ್ಮೀಯರನ್ನು ಪ್ರೀತಿಸಿ, ಅವರ ಸುಖ ಸೌಖ್ಯಗಳನ್ನು ಕಾಪಾಡಿಕೊಂಡು, ಯಾವ ತಾರತಮ್ಯ ಮಾಡದೆ, ಅವರ ಪ್ರೀತಿ ವಿಶ್ವಾಸ ಗಳಿಸಿದ ಕೀರ್ತಿ ಅವನದಾಗಿತ್ತು. ಸರ್ವ ಧರ್ಮಗಳ ಪುಣ್ಯ ಕ್ಷೇತ್ರಗಳ ಯಾತ್ರೆ ಮಾಡಿ, ಸಕಲರ ಪ್ರೀತಿ ಪಾತ್ರ ಪುಣ್ಯಗಳಿಗೆ ಪಾತ್ರನಾದ. ಆದರೆ, ಸಿಖ್ ಧರ್ಮದ ಕಟ್ಟಾ ಅನುಯಾಯಿಯಾಗಿದ್ದ ರಣಜಿತ್‌ಸಿಂಗ್, ತನ್ನ ಭಕ್ತಿ ಭಾವನೆಗಳನ್ನು ಹಲವಾರು ರೀತಿಯಲ್ಲಿ ವ್ಯಕ್ತಪಡಿಸಿದ. ಪ್ರಸಿದ್ಧ ಅಮೃತಸರದ ಗುರುದ್ವಾರದ ಗೋಪುರವನ್ನು ಬಂಗಾರದ ತಗಡಿನಿಂದ ಶೃಂಗರಿಸಿದ. ನಗರದ ಹೂವಿನ ತೋಟಕ್ಕೆ ಗುರು ರಾಮದಾಸ್‌ರ ಹೆಸರನ್ನಿರಿಸಿದ (ರಾಮ್‌ಬಾಗ್). ನಗರದ ಕೋಟೆಗೆ ಗುರು ಗೋವಿಂದ್ ಸಿಂಗ್‌ರ ಹೆಸರನ್ನಿತ್ತು (ಗೋವಿಂದ್‌ಗಢ್) ಗುರುದ್ವಾರಕ್ಕೆ ಹಣ, ನೆಲಗಳ ಕಾಣಿಕೆ ನೀಡಿದ. ನಾನ್‌ಕಾನಾ ಸಾಹಿಬ್ ಗುರುದ್ವಾರ ಮತ್ತು ನಾಂದೇಡ್ ಗುರುದ್ವಾರಗಳಿಗೆ ಭೂದಾನ ಮಾಡಿದ. ಅದೇ ರೀತಿ ಹಿಂದೂ ಪುಣ್ಯಕ್ಷೇತ್ರಗಳಿಗೆ ದಾನ ಧರ್ಮ ಮಾಡಿದ. ಕಾಶಿಯ ವಿಶ್ವನಾಥ ಗುಡಿಯ ಗೋಪುರಕ್ಕೆ ಚಿನ್ನದ ಮುಲಾಮು ಹಚ್ಚಿಸಿದ. ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಪೆಟ್ಟು ಬೀಳದಂತೆ ತನ್ನ ರಾಜ್ಯದಲ್ಲಿ ಗೋಹತ್ಯೆಯನ್ನು ನಿಷೇಧಿಸಿದ. ಮುಸ್ಲಿಮ್‌ರ ಆಪ್ತತೆ ಮತ್ತು ಆದರವನ್ನು ಗಳಿಸಲು ಅವರ ಮೌಲ್ವಿ ಮತ್ತು ಸಯ್ಯದ್‌ರನ್ನು ಪ್ರೀತಿ ವಿಶ್ವಾಸದಿಂದ ನೋಡಿಕೊಂಡು ಅವರಿಗೆ ಧನ, ಭೂದಾನ ಇತ್ಯಾದಿ ಮಾಡಿದ. ರಣಜಿತ್‌ಸಿಂಗ್‌ನ ಬಗ್ಗೆ ಮುಸ್ಲಿಮ್ ಕವಿ ಶಾ ಮೊಹಮ್ಮದ್ ರಚಿಸಿದ ಕಾವ್ಯ ಇಂದಿಗೂ ಪ್ರಸಿದ್ಧಿ ಪಡೆದು ಜನರ ಬಾಯಿಗಳಲ್ಲಿ ಹಾಡಲಾಗುತ್ತದೆ. ೨

ರಣಜಿತ್ ಸಿಂಗ್‌ನ ಆಸ್ಥಾನದಲ್ಲಿ ವಿಜೃಂಭಿಸಿದ ಯಾವುದೇ ಮುಸ್ಲಿಮ್ ಅಧಿಕಾರಿ, ಸೈನ್ಯಾಧಿಕಾರಿ, ಅಥವಾ ಸಾಮಾನ್ಯ ಕಾರಕೂನರಾಗಲೀ, ರಾಜನಿಗೆ ದ್ರೋಹ ಬಗೆಯದಿದ್ದು,

೧. P 505 History of Sikh People by G. Singh
೨. P 506 History of Sikh People by G. Singh

ರೈತರಾಗಿದ್ದ ಹಲವಾರು ಪಂಗಡಗಳು ಮರಾಠಾ ಸೈನ್ಯದಲ್ಲಿ ಭರ್ತಿಯಾಗಿ ಹೋರಾಡಿದ ಸಂಗತಿಗಳನ್ನು ಇತಿಹಾಸಕಾರರು ದಾಖಲಿಸಿದ್ದರೂ, ಭಾರತದ ಇತಿಹಾಸದುದ್ದಕ್ಕೂ ಜಾತಿ ಪದ್ಧತಿಯ ಪ್ರಕಾರ ಕೇವಲ ಕ್ಷತ್ರಿಯ ಕುಲದವರು ಸೈನ್ಯದಲ್ಲಿ ಸೇವೆ ಸಲ್ಲಿಸಿ ಜೀವನ ಸಾಗಿಸಿದ ಐತಿಹಾಸಿಕ ಸತ್ಯವನ್ನು ಸಾದರಪಡಿಸಿದ್ದಾರೆ. ಸಿಪಾಯಿ ದಂಗೆಯ ಕಾಲದಲ್ಲಿ, ದೆಹಲಿಯ ಆಸುಪಾಸಿನಲ್ಲಿ ಯುದ್ಧ ಜರುಗುತ್ತಿರುವಾಗ, ಸನಿಹದಲ್ಲೇ ಹೊಲ ಉಳುತ್ತಿರುವ ರೈತ, ತನಗೆ ಆ ಕದನ ಯಾವ ಸಂಬಂಧವಿಲ್ಲದವರಂತೆ ತನ್ನ ಕಾರ್ಯವನ್ನು ನಿರ್ಲಿಪ್ತತೆಯಿಂದ ಮಾಡುತ್ತಿದ್ದ ವಿಷಯವನ್ನು ಇತಿಹಾಸಕಾರರು ಬಯಲು ಮಾಡಿರುತ್ತಾರೆ. *

ಭಾರತದ ಜನಜೀವನದಲ್ಲಿ ಜಾತಿಪದ್ಧತಿ ಬಲವಾಗಿ ಬೇರೂರಿ, ಕೇವಲ ಕ್ಷತ್ರಿಯ ಕುಲದವರು ಯುದ್ಧರಂಗದಲ್ಲಿ ತಮ್ಮ ಸಾಮರ್ಥ್ಯ ತೋರಿಸಿ, ರಕ್ತ ಚೆಲ್ಲಿ ಬಲಿದಾನಗೈದ ಸಂಗತಿ ಅತ್ಯಂತ ಅಪೂರ್ವವಾಗಿದೆ. ಆದರೆ ಇದಕ್ಕೆ ಅಪವಾದವೆಂಬಂತೆ, ಪಂಜಾಬ್‌ನ ಸಿಖ್ ಸೈನ್ಯದಲ್ಲಿ ಎಲ್ಲಾ ಜಾತಿ, ಧರ್ಮ, ಬುಡಕಟ್ಟಿನ ಜನರು ಸೇವೆ ಸಲ್ಲಿಸಿ, ಯುದ್ಧಗಳಲ್ಲಿ ಭಾಗವಹಿಸಿದರು.

ರಣಜಿತ್‌ಸಿಂಗ್ ತನ್ನ ಸೈನ್ಯವನ್ನು ಬ್ರಿಟಿಷ್ ಸೈನ್ಯದಲ್ಲಿ ರೂಢಿಯಲ್ಲಿದ್ದ ಶಿಸ್ತು, ಯುದ್ಧ ಜರುಗಿಸುವ ಚಾತುರ್ಯ ಮುಂತಾದ ಅಪೂರ್ವ ಕುಶಲತೆಗಳಿಂದ ರೂಪಿಸಿ, ಬಲವರ್ಧಿಸಿದ.

'. . . .Ranjit Singh studied the ways of the English, and applied the knowledge which he obtained; he supplemented that by employing able European officers - Allard, Ventura, Avitable and others - who had learned in the school of the Napoleonic wars; and the result, as we have said, was that the Sikh Army was the most efficient, the hardest to overcome that we have ever faced in India.'

ರಣಜಿತ್ ಸಿಂಗ್ ಬ್ರಿಟಿಷ್‌ರ ಸೈನ್ಯ ಪದ್ಧತಿಯನ್ನು ಅನುಸರಿಸಿ, ತನ್ನ ಸೈನ್ಯವನ್ನು ಬಲಪಡಿಸಿದರೂ, ಅವರ ವಿರುದ್ಧ ಸೈನ್ಯಾಚರಣೆ ಜರುಗಿಸಿ, ತನ್ನ ಸಾಮರ್ಥ್ಯ ಪ್ರದರ್ಶಿಸಲು ಯತ್ನಿಸಲಿಲ್ಲ. ಯಾಕೆಂದರೆ, ಅವನಿಗೆ ಅರಿವಾಗಿತ್ತು, ತನ್ನ ಸೈನ್ಯ ಎಷ್ಟೇ ಬಲಗೊಂಡಿದ್ದರೂ, ವೀರಾವೇಷದಿಂದ ಹೋರಾಡಿದರೂ, ಬ್ರಿಟಿಷ್‌ರ ಸಾಮರ್ಥ್ಯದ ಬಗ್ಗೆ ಅವನಿಗೆ ಅರಿವು ಮೂಡಿತ್ತು. ಸಂಪೂರ್ಣ ಭರತ ಖಂಡವನ್ನು ಆಕ್ರಮಿಸಿ, ಈಗ ಪಂಜಾಬ್‌ನ್ನು ಕಬಳಿಸಲು ಸಿದ್ಧವಿದ್ದ ಬ್ರಿಟಿಷ್‌ರ ವಿರುದ್ಧ ಹೋರಾಡಲು ತನ್ನ ಸೈನ್ಯಕ್ಕೆ ಹುರುಪಿದ್ದರೂ, ಕೆಚ್ಚಿದ್ದರೂ, ಯುದ್ಧ ಕುಶಲತೆ, ಚಾತುರ್ಯ ಮತ್ತು ಯುದ್ಧ ಸಾಮಗ್ರಿಗಳ ಕೊರತೆ ಎದ್ದು ಕಾಣುವಂತಿರುವುದು ಅವನ ಮನಸ್ಸಿಗೆ ಬಂದಿತ್ತು.

ರಣಜಿತ್ ಸಿಂಗ್‌ನ ಸೈನಿಕ ಅಧಿಕಾರಿಗಳು, ಸರದಾರರು, ಬ್ರಿಟಿಷ್‌ರ ವಿರುದ್ಧ ಯುದ್ಧ ಜರುಗಿಸಲು ಪ್ರಚೋದಿಸಿದಾಗ, ಅವನು ತಲೆಯಾಡಿಸಿ ಉತ್ತರಿಸಿದ: 'ಮರಾಠರ ೨ ಲಕ್ಷ ಸೈನಿಕರ ಗತಿ ಏನಾಯಿತು ಎಂಬುದು ನಿಮಗೆ ಅರಿವಿದೆಯೇ?' ಹೋಲ್ಕರ್ ಮರಾಠಾ ಸರದಾರ ಬ್ರಿಟಿಷ್‌ರ ವಿರುದ್ಧ ಹೋರಾಡಿ, ಸೋಲನ್ನು ಅನುಭವಿಸಿದ ಸಂಗತಿ ಅವನಿಗೆ ಅರಿವಾಗಿ ಅದರ ಉದಾಹರಣೆಯನ್ನು ನೀಡಿದ ರಣಜಿತ್ ಸಿಂಗ್.

ಬ್ರಿಟಿಷ್‌ರು ಸಂಪೂರ್ಣ ಭಾರತವನ್ನು ಆಕ್ರಮಿಸಿ ಪಂಜಾಬ್‌ನ ಬಾಗಿಲ ಬಡಿಯುತ್ತಿರುವ ಸಂಗತಿ ಅರಿತಿದ್ದ ಅವನು ಅವರ ಸಾಮರ್ಥ್ಯ, ಜ್ಞಾನ, ಸಂಪತ್ತು, ಯುದ್ಧ ಕುಶಲತೆ ತನ್ನ ರಾಜ್ಯವನ್ನು ಆಕ್ರಮಿಸಲು ತಡವಾಗುವುದಿಲ್ಲ ಎಂಬುದನ್ನು ಈಗಾಗಲೇ ಅವನಿಗೆ ಮನವರಿಕೆಯಾಗಿತ್ತು. ಇಂಗ್ಲಿಷ್‌ನವರ ಆಡಳಿತದ ಬಗ್ಗೆ ತನಗೆ ಮನವರಿಕೆ ಮಾಡಲು ಕಳುಹಿಸಿದ ಒಬ್ಬ ಸಿಖ್ ಬೇಹುಗಾರ ಯುವಕ, ಬ್ರಿಟಿಷ್‌ರು ರಚಿಸಿದ ಭಾರತದ ಭೂಪಟವನ್ನು ತಂದು ರಣಜಿತ್ ಸಿಂಗ್‌ನ ಮುಂದೆ ಇರಿಸಿದಾಗ, ಅದರಲ್ಲಿ ಕಾಣಿಸಿದ ಕೆಂಪು ಬಣ್ಣದ ಪ್ರದೇಶ, ಪ್ರಾಂತ್ಯಗಳ ಚಿತ್ರಣವನ್ನು ನೋಡಿ, ಅದರ ವಿವರಣೆ ಕೇಳಿದಾಗ ಆ ಯುವಕ ಉತ್ತರಿಸಿದ ! 'ಈ ಕೆಂಪು ಬಣ್ಣದ ಪ್ರದೇಶಗಳೆಲ್ಲವೂ ಇಂಗ್ಲಿಷ್‌ರ ವಶದಲ್ಲಿರುವ ಪ್ರದೇಶಗಳು'

ರಣಜಿತ್ ಸಿಂಗ್ ಅವನ ಮಾತುಗಳನ್ನು ಕೇಳಿ ಅತ್ಯಂತ ಬೇಸರದಿಂದ ನುಡಿದ : 'ಉಳಿದ ಎಲ್ಲವೂ ಕೆಂಪಾಗುವುವು !'

ಪಂಜಾಬ್‌ನ ಪ್ರಾಂತ್ಯವೊಂದು ಹೊರತುಪಡಿಸಿದರೆ ಮಿಕ್ಕ ಎಲ್ಲಾ ಪ್ರಾಂತಗಳ ಬಣ್ಣ ಕೆಂಪಾಗಿದ್ದು ಕ್ರಮೇಣ ಅದು ಕೂಡ ಕೆಂಪು ಬಣ್ಣಕ್ಕೆ ತಿರುಗುವುದು ರಣಜಿತ್ ಸಿಂಗ್‌ನ ಮನಸ್ಸಿಗೆ ಈಗಾಗಲೇ ಬಂದಿದ್ದು ಕೇವಲ ಊಹೆಯಾಗಿರಲಿಲ್ಲ ! *

ಸಾರ್ವಜನಿಕ ಹಾಗೂ ಲೌಕಿಕ ವಿಚಾರಗಳ ಆಡಳಿತದ ಬಗ್ಗೆ, ರಣಜಿತ್‌ಸಿಂಗ್ ಅತ್ಯಂತ ಕುಶಲತೆ ಮತ್ತು ಬುದ್ಧಿವಂತಿಕೆಯಿಂದ, ಅವುಗಳ ಸುಪರ್ದಿಗಳನ್ನು ಉಚ್ಚಮಟ್ಟದ ಮುತ್ಸದ್ಧಿಗಳನ್ನು ಆರಿಸಿ, ನೇಮಕ ಮಾಡಿ, ಉತ್ತಮ ಆಡಳಿತಾವಸ್ಥೆಯನ್ನು ಜರುಗಿಸಿದ. ಪುರಾತನ ಭಾರತೀಯ ಕಾನೂನು ಪರಿಪಾಲನಾ ಪದ್ಧತಿಯಾದ ಗ್ರಾಮ ಪಂಚಾಯತ್ ವ್ಯವಸ್ಥೆಯನ್ನು ಭದ್ರಪಡಿಸಿದ. ಪಂಚಾಯತ್‌ನಲ್ಲಿ ಸಮಸ್ಯೆ ಪರಿಹಾರವಾಗದ ಪಕ್ಷದಲ್ಲಿ, ನೇರ ರಜನ ಸಮಕ್ಷಮಕ್ಕೆ ಅಥವಾ ಫಿರ್ಯಾದು ಬಂದ ತಕ್ಷಣ ಅದನ್ನು ಪರಿಹರಿಸುವ ಹಕ್ಕು ಇರಿಸಿಕೊಂಡ. ಆದರೆ ಅವನು ಎಂದೂ ಕಾನೂನು ಮೀರಿ, ಅಥವಾ ತನ್ನ ಮಂತ್ರಿಮಂಡಲದ ಸಲಹೆಗಳನ್ನು ಸ್ವೀಕರಿಸದೆ, ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳುತ್ತಿರಲಿಲ್ಲ. ಮರಣದಂಡನೆಯನ್ನು ಎಂದೂ ವಿಧಿಸಲಿಲ್ಲ ರಣಜಿತ್ ಸಿಂಗ್ ತನ್ನ ಅಧಿಕಾರಾವಸ್ಥೆಯಲ್ಲಿ ! ಕರುಣಾಳು, ಹೃದಯವೈಶಾಲ್ಯತೆಯನ್ನು ತೋರಿದ ಅಪರೂಪದಲ್ಲಿ ಅಪರೂಪ ರಾಜನಾಗಿ ಕಂಗೊಳಿಸಿದ ರಣಜಿತ್ ಸಿಂಗ್ !

---

* P 33 The Sikhs and Sikh wars by Charles Gough

ಇದುವರೆಗೂ ಜಾರಿಯಲ್ಲಿದ್ದ 'ಅಖಿಲ್ ತಖ್ತ್' ಎಂಬ ಸಿಖ್ ಸಂಘಟನೆಯ ನಿರೂಪ ಹೊರಡಿಸುವ 'ಗುರುಮತ' ಎಂಬ ಆಜ್ಞೆ ನೀಡುವ ಅಧಿಕಾರವನ್ನು ರದ್ದುಪಡಿಸಿ, ಅದರ ಬದಲು ಸಕಲ ಧರ್ಮೀಯರ ಮಂತ್ರಿಮಂಡಲವನ್ನು ರಚಿಸಿ, ರಾಜ್ಯಾಡಳಿತದ ಬಗ್ಗೆ ಸಲಹೆ ತೆಗೆದುಕೊಳ್ಳುವ ಪದ್ಧತಿಯನ್ನು ಜಾರಿಗೆ ತಂದ.

ಪಂಜಾಬ್‌ನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿ, ಅವನ್ನು 'ಸುಭಾ' ಎಂದು ಕರೆದು, ಲಾಹೋರ್, ಮುಲ್ತಾನ್, ಕಾಶ್ಮೀರ ಮತ್ತು ಪೆಶಾವರ್ ಸುಭಾಗಳಿಗೆ 'ನಾಝಿಮ್' (ಗವರ್ನರ್)ನ ನೇಮಕ ಮಾಡಿದ. ಅವನ ಕೈಕೆಳಗೆ ಒಬ್ಬ 'ಕಾರ್ದಾರ್' ಅಂದರೆ ಜಿಲ್ಲಾಧಿಕಾರಿಯ ನೇಮಕ ಮಾಡಿದ. ಅವರೆಲ್ಲರಿಂದಲೂ ಕಾಲಕಾಲಕ್ಕೆ ನಿಯಮಾನುಸಾರ, ಮಹಾರಾಜನಿಗೆ ಪತ್ರಮುಖೇನ ವರದಿ, ಟಿಪ್ಪಣಿ, ವಾರ್ತೆಗಳನ್ನು ಒಪ್ಪಿಸಿಕೊಳ್ಳಲಾಗುತ್ತಿತ್ತು.

ರಣಜಿತ್ ಸಿಂಗ್, ತನ್ನ ಆಳ್ವಿಕೆಯಲ್ಲಿ ಬಡವ ಬಲ್ಲಿದರೆನ್ನದೆ, ಯಾವ ಪ್ರಜೆಗೂ ವಿನಾಕಾರಣ ತೊಂದರೆ, ಕಷ್ಟನಷ್ಟ, ಉಪದ್ರ, ಪೀಡನೆ ನೀಡದಂತೆ ಕಠಿಣ ನಿಯಮಗಳನ್ನು ಜಾರಿಗೆ ತಂದಿದ್ದ. ಯಾರೇ ನಿರುದ್ರಪಿ ವ್ಯಕ್ತಿಗೆ ವಿನಾಕಾರಣ ಒಕ್ಕಲೆಬ್ಬಿಸುವ ಮನೆ ಮುರಿಯುವ, ಗುಳೇ ಹೋಗುವ ಕಾರ್ಯಗಳನ್ನು ಅಧಿಕಾರಿಗಳು ಮಾಡದಂತೆ ಕಟ್ಟುನಿಟ್ಟಿನ ಆದೇಶವನ್ನು ನೀಡಿದ ನಿದರ್ಶನವನ್ನು ಇತಿಹಾಸಕಾರರು ನೀಡಿರುತ್ತಾರೆ.೫

ಸಾಮಾನ್ಯ ಎತ್ತರದ, ಕಂದು ಮೈ ಬಣ್ಣ ಹೊಂದಿದ್ದು ರಣಜಿತ್ ಸಿಂಗ್‌ನ ಒಂದು ಕಣ್ಣು ಕುರುಡಾಗಿದ್ದು, ಮುಖ ಸಿಡುಬಿನಿಂದ ಅಂದಗೆಟ್ಟರೂ, ಅವನ ಬಲಗಣ್ಣು ದೊಡ್ಡ ಗಾತ್ರವಾಗಿದ್ದು, ಅದರ ತೀಕ್ಷ್ಣತೆ ಮತ್ತು ಎದೆಯುದ್ದ ಬೆಳಸಿದ ಗಡ್ಡ, ಅವನಿಗೆ ಅಪೂರ್ವ ಶೋಭೆ ತಂದಿತ್ತು. ವೀರಯೋಧನಾದ ರಣಜಿತ್ ಸಿಂಗ್, ತನ್ನ ಜೀವಮಾನವೆಲ್ಲಾ ಯುದ್ಧರಂಗದಲ್ಲೇ ಕಳೆದು ಶತ್ರುಗಳಿಗೆ ಸಿಂಹಸ್ವಪ್ನವಾಗಿದ್ದ. ಜನರಿಂದ, ಶತ್ರುಗಳಿಂದ, ಪ್ರತಿಸ್ಪರ್ಧಿಗಳಿಂದ, ಇತಿಹಾಸಕಾರರಿಂದ ಅವನನ್ನು 'ಪಂಜಾಬ್‌ನ ಸಿಂಹ' (Lion of Punjab) ಎಂದು ಕರೆದಿರುವುದು ಉತ್ಪ್ರೇಕ್ಷೆಯಾಗಿರಲಿಲ್ಲ. ೬

ಸಂಧಾನಕಾರ ಮೆಟ್‌ಕಾಫ್ ಲಾಹೋರ್‌ನಲ್ಲಿ ಒಂದು ವರ್ಷದ ಕಾಲ (೧೮೦೮-೦೯) ರಣಜಿತ್ ಸಿಂಗ್‌ನೊಂದಿಗೆ ಸಂಧಾನ ಜರುಗಿಸಿ ಬ್ರಿಟನ್‌ನೊಂದಿಗೆ ಒಂದು ಸಂಧಿ ಮಾಡಿಕೊಳ್ಳುವ ನಿಟ್ಟಿನಲ್ಲಿರುವಾಗ, ಅವನು ರಣಜಿತ್ ಸಿಂಗ್‌ನ ವ್ಯಕ್ತಿತ್ವದ ಬಗ್ಗೆ ಈ ರೀತಿ ದಾಖಲಿಸಿದ್ದಾನೆ :

'.....Ranjit Singh has succeeded in establishing throughout the territories subject to him a species of Government which never existed before amongst the Sikhs. He is absolute.

---

೫. P 513 History of Sikh People by G. Singh
೬. P 98 Metcalfe's Mission to Lahore

Everywhere, when he means to introduce his authority, he takes care to destroy the independence of the former chief. . . . . .It seems to be a peculiar part of his policy to destroy all distinctions, and to make the high and the low equally his servants. . . . .'

ಸೌಂದರ್ಯಾರಾಧಕನಾಗಿದ್ದ ರಣಜಿತ್‌ಸಿಂಗ್, ತನ್ನ ಆಸ್ಥಾನವನ್ನು ಶೃಂಗರಿಸಿ, ಅದನ್ನು ಆಕರ್ಷಕ ವ್ಯಕ್ತಿ ಮತ್ತು ವಸ್ತುಗಳಿಂದ ಅಲಂಕರಿಸುತ್ತಿದ್ದ. ತಾನು ಸ್ವತಃ ಆಭರಣಗಳನ್ನು ಧರಿಸದಿದ್ದರೂ, ಕೇವಲ ಒಂದು ಮುತ್ತು ಹವಳದ ಹಾರ ಧರಿಸಿದರೆ, ತನ್ನ ಆಸ್ಥಾನಿಕರು ಮಾತ್ರ ಅತ್ಯುನ್ನತ ಬೆಲೆಬಾಳುವ ಆಭರಣಗಳನ್ನು ಧರಿಸಿ ಬಂದು ಆಸೀನರಾಗಬೇಕೆಂದು ಇಚ್ಛಿಸುತ್ತಿದ್ದ.

ಅವನ ಆಸ್ಥಾನದಲ್ಲಿ ಕಲೆಗಾರರು, ಸಂಗೀತಗಾರರು ನಾಟಕಕಾರರಿಗೆ ಪ್ರೋತ್ಸಾಹ ನೀಡಿ, ಅವರು ನೆಮ್ಮದಿಯ ಜೀವನ ಸಾಗಿಸುವಂತೆ ಮಾಡಿದ. ಮೊಘಲ್ ಆಸ್ಥಾನದಿಂದ ಹೊರಬಿದ್ದ ಅನೇಕ ಕಲೆಗಾರರು ಅವನ ಆಸ್ಥಾನದಲ್ಲಿ ಪ್ರೋತ್ಸಾಹ, ಆಸರೆ ಕಂಡುಕೊಂಡರು.

ರಾಜ್ಯದ ಆಡಳಿತದ ಭಾಷೆ ಪರ್ಶಿಯನ್ ಆದರೂ, ಪಂಜಾಬಿ ಭಾಷೆಗೆ ಪ್ರೋತ್ಸಾಹ ನೀಡಲಾಯಿತು. ಪಾಠಶಾಲೆಗಳಿಗೆ, ಮದರಸಾಗಳಿಗೆ, ಧರ್ಮಶಾಲೆಗಳಿಗೆ ಉತ್ತೇಜನ ನೀಡಿ ಹಣದ ಸಹಾಯ ಮಾಡಿದ. ಹಲವಾರು ಪಂಜಾಬಿ ಕವಿಗಳಿಗೆ ಜಾಗೀರುಗಳನ್ನು ನೀಡಿ ಆದರಿಸಿದ.

ಆದರೆ, ರಣಜಿತ್‌ಸಿಂಗ್, ಎಲ್ಲಾ ಭಾರತೀಯ ರಾಜ ಮಹಾರಾಜರ ತರಹ, ಸಾರ್ವಜನಿಕ ವಿದ್ಯಾಸಂಸ್ಥೆಗಳನ್ನು ಹುಟ್ಟುಹಾಕಿ, ಸರ್ವರಿಗೂ ವಿದ್ಯಾಭ್ಯಾಸ ನೀಡುವ ಕಾರ್ಯಕ್ಕೆ ಕೈಹಾಕಲಿಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಆಳುವ ರಾಜರು ಕೈಗೆತ್ತಿಕೊಂಡ ರೀತಿಗಳಲ್ಲಿ, ವಿದ್ಯಾಶಾಲೆ, ಕಾಲೇಜ್ ಅಥವಾ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿ, ಜನರಿಗೆ ವಿದ್ಯಾಭ್ಯಾಸ ನೀಡುವ ಪ್ರಯತ್ನ ನೀಡಲಿಲ್ಲ. ಪ್ರಾಚೀನ ಕಾಲದಿಂದಲೂ ಆಚರಿಸಿಕೊಂಡು ಬಂದ ರೀತಿಯಲ್ಲೇ ಕೇವಲ ಕಾಶೀ ಅಥವಾ ಇನ್ನಿತರ ಧಾರ್ಮಿಕ ಕೇಂದ್ರಗಳಲ್ಲಿ ಧಾರ್ಮಿಕ ವಿದ್ಯಾಭ್ಯಾಸ ನೀಡುವ ಯತ್ನ ಮುಂದುವರೆಸಿದ. ಬುದ್ಧಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿರುವಾಗ, ಸ್ಥಾಪಿಸಿದ ನಲಂದಾ ವಿಶ್ವದ್ಯಾಲಯದ ತರಹ, ಯಾವುದೇ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಪಂಜಾಬ್ ಕೂಡ ಬ್ರಿಟಿಷ್‌ರ ಆಳ್ವಿಕೆಗೆ ಕಾಯಬೇಕಾಯಿತು. ಸರ್ವ ಶಿಕ್ಷಣ ಅಭ್ಯಾಸಕ್ಕಾಗಿ, ಪಾಶ್ಚಾತ್ಯರು ತೋರುವ ಕಾಳಜಿ, ಮುತುವರ್ಜಿ, ಅಭಿರುಚಿ, ಅವನಲ್ಲಿ ಕಾಣದಿದ್ದುದು ಒಂದು ದುರಂತವಾಗಿತ್ತು. ಬ್ರಿಟನ್‌ನ ವಸಾಹತು ರಾಜ್ಯವಾಗಿ ಸ್ಥಾಪಿತಗೊಂಡ ಅಮೆರಿಕಾದಲ್ಲಿ, ಆರಂಭದಲ್ಲಿಯೇ ಪ್ರತಿ ೫೦ ಕುಟುಂಬಗಳಿಗೆ ಒಂದು ಶಾಲೆ ಸ್ಥಾಪಿಸಿದ್ದನ್ನು ಇತಿಹಾಸಕಾರರು ದಾಖಲಿಸಿರುತ್ತಾರೆ. ೧೬೩೬ರಲ್ಲಿ ಪ್ರಸಿದ್ಧ ಹಾರ್ವರ್ಡ್ ವಿಶ್ವವಿದ್ಯಾಲಯ ಸ್ಥಾಪಿಸಲ್ಪಟ್ಟಿತು.

ಕ್ರಿಶ್ಚಿಯನ್ ಪಾದ್ರಿಗಳು ಚರ್ಚ್‌ಗಳನ್ನು ಸ್ಥಾಪಿಸಿ, ಧಾರ್ಮಿಕ ಶಾಲೆಗಳನ್ನು ಆಸಕ್ತ ಭಕ್ತರಿಗೆ ನೈತಿಕ, ಸಾಮಾಜಿಕ ಮೌಲ್ಯಗಳ ಪ್ರವಚನ ಮಾಡಿ ಅವರನ್ನು ನೀತಿಯುತ ದಾರಿಯಲ್ಲಿ ಸಾಗುವ ಕಾರ್ಯ ಮಾಡಿದ್ದನ್ನು ಇತಿಹಾಸಕಾರರು ಸ್ಮರಿಸಿದ್ದಾರೆ. *

ಅಮೆರಿಕಾದ ನಾಗರೀಕರು, ತಮ್ಮನ್ನು ಆಳುತ್ತಿದ್ದ ಬ್ರಿಟಿಷ್‌ರ ವಿರುದ್ಧ ಸುಮರ ಸಾರಿ ಯುದ್ಧ ಜರುಗಿಸಿ, ಜಯ ಸಾಧಿಸಿದ್ದು ಸರ್ವರಿಗೂ ಅರಿತ ವಿಷಯಷ್ಟೆ. ಆದರೆ, ಸ್ವಾತಂತ್ರ್ಯಕ್ಕಾಗಿ ಅವರು ಪಟ್ಟು ಕಷ್ಟ, ನಷ್ಟ, ರಕ್ತ ಹರಿಸುವಿಕೆ ಎಲ್ಲವೂ ಅವರ ನರನರಗಳಲ್ಲಿ, ಹರಿಯುತ್ತಿದ್ದ ಸ್ವತಂತ್ರವಾಗಿ ಜೀವಿಸಬೇಕೆಂಬ ಹೆಬ್ಬಯಕೆ. ಅವರ ಮೈಮನಗಳಲ್ಲಿ ಹುದುಗಿದ್ದ ಜ್ಞಾನಾರ್ಜನೆ ಹೊಂದುವ ಅತೀವ ಹಂಬಲ ಮತ್ತು ಜ್ಞಾನದಾಹವಿದ್ದವನಿಗೆ, ಅದನ್ನು ಪಡೆದ ನಂತರ ಉಂಟಾಗುವ ಆನಂದ ಕಾರಣವಾಗಿತ್ತು. ಅದರಿಂದ ಪ್ರಚೋದನೆಗೊಂಡು, ಜೀವನದಲ್ಲಿ ಏನನ್ನಾದರೂ ಸಾಧಿಸಬೇಕೆಂಬ ಹೆಬ್ಬಯಕೆ ಕೂಡ ಅತ್ಯಂತ ವಿಶೇಷತೆಯಾಗಿದೆ.

ಬ್ರಿಟನ್‌ನಿಂದ ಸ್ವಾತಂತ್ರ್ಯ ಪಡೆಯಬೇಕೆಂಬ ಉತ್ಕಟ ಬಯಕೆ ಅಮೆರಿಕನರಿಗೆ ಉಂಟಾಗಿದ್ದು ಅಲ್ಲಿನ ಮೇಧಾವಿ ಬುದ್ಧಿಜೀವಿಗಳೇ ಕಾರಣ ಎಂದಿದ್ದಾರೆ ಇತಿಹಾಸಕಾರರು. ಉದಾಹರಣೆಗಾಗಿ, ಥಾಮಸ್ ಜಾಫರ್‌ಸನ್, ಬೆಂಜಮಿನ್ ಫ್ರಾಂಕ್ಲಿನ್, ಜಾರ್ಜ್ ವಾಶಿಂಗ್ಟನ್, ಜಾನ್ ಆಡಮ್ಸ್ ಮುಂತಾದವರು ವಿದ್ಯಾವಂತರಷ್ಟೇ ಅಲ್ಲದೆ ಮೇಧಾವಿಗಳಾಗಿದ್ದರು. ಜಾನ್ ಆಡಾಮ್ಸ್‌ನ ಮಾತುಗಳಲ್ಲಿ ಹೇಳುವುದಾದರೆ, “Be it remembered, that liberty must at all hazards be supported. We have a right to it, derived from our Maker. But if we have not, our fathers have earned and bought it for us at the expense of their ease, their estates, their pleasure and their blood. . . .'

'And liberty cannot be preserved without a general knowledge among the people who have a right from the frame of their nature to knowledge, as their great Creator who does nothing in vain, has given them understandings and a desire to know. But besides this they have a right, an indisputable unalienable, indefeasible divine right to the most dreaded and envied kind of knowledge, I mean of the charecters and conduct of their rulers'.

ಜಾನ್ ಆಡಮ್ಸ್, ಜನರ ಜಡತೆ, ನಿಷ್ಕ್ರಿಯತೆ, ಚಿಂತನೆಗೈಯ್ಯದಿರುವಿಕೆ,

* P 34 A Short History of the United States by Allan Nevis

ಯೋಜನಾರಹಿತೆಗಳ ಬಗ್ಗೆ ಕಿಡಿ ಕಾರಿದ. ಜನರ ಸಕಲ ಸಂಕಷ್ಟಗಳಿಗೆ ಅವರ ಪುಕ್ಕುಲುತನವೇ ಕಾರಣ ಎಂದ.

'Government is a plain, simple, intelligent thing, founded in nature and reason, quite comprehensible by commonsense. The true source of our suffering has been our timidity. We have been afraid to think. . . . . Let us dare to read, think, speak and write. . . .Let it be known that British liberty are not the grants of the princes or parliaments . . . .That many our rights are inherent and in essential, agreed as maxims and inherent and essential, and established as preliminaries, even before parliament existed. . . .(P 60 John Adams by David Mc Cullough)

ಭಾರತದ ಯಾವುದೇ ಭಾಗದ ರಾಜ್ಯಗಳಲ್ಲಿ, ಆ ರಾಜ್ಯಗಳ ಆಡಳಿತಗಾರರು ಮುಸ್ಲಿಮ್‌ರಾಗಲೀ ಅಥವಾ ಹಿಂದೂಗಳಾಗಲೀ ಅಥವಾ ಇನ್ನಿತರ ಧರ್ಮೀಯರಾಗಿರಲೀ, ವಾಣಿಜ್ಯ ಮತ್ತು ಹಣಕಾಸು ವ್ಯವಹಾರದ ಇಲಾಖೆಯ ಜವಾಬ್ದಾರಿ ಕಾಯಕವನ್ನು ಹಿಂದೂ ಕಾಯಸ್ಥ, ಅಥವಾ ಬ್ರಾಹ್ಮಣ ಪಂಗಡದವರಿಗೆ ವಹಿಸಿಕೊಡುವ ರೀತಿ ನೀತಿ ಕಾಣಬಹುದಾಗಿದೆ. ಇತಿಹಾಸದುದ್ದಕ್ಕೂ ಈ ನೀತಿ ಅಳವಡಿಸಿಕೊಂಡಿದ್ದು, ಪ್ರಾಯಶಃ ಆ ಪಂಗಡದ ಬುದ್ಧಿಶಕ್ತಿ, ಪ್ರಾಮಾಣಿತೆ, ಹಣಕಾಸಿನ ವ್ಯವಹಾರಗಳಲ್ಲಿರುವ ಅಗಾಧವಾದ ಚತುರತೆ, ನಿಪುಣತೆ ಮತ್ತು ನೈತಿಕತೆ ಕಾರಣವಿರಬಹುದು. ರಣಜಿತ್ ಸಿಂಗ್‌ನ ದರಬಾರಿನಲ್ಲಿ ಕೂಡ, ಇದೇ ಪಂಗಡದವರನ್ನು ಆರಿಸಿ, ತನ್ನ ರಾಜ್ಯದ ಹಣಕಾಸಿನ ವ್ಯವಹಾರದ ಇಲಾಖೆಯನ್ನು ಅವರಿಗೆ ವಹಿಸಿಕೊಟ್ಟಿದ್ದ. ಆಫ್ಘಾನಿಸ್ಥಾನದ ಆಸ್ಥಾನದಲ್ಲಿ ನೌಕರಿಯಲ್ಲಿದ್ದ ಭವಾನಿ ದಾಸ ಮತ್ತು ಅವನ ಸಹೋದರ ದೇವಿದಾಸ್‌ರನ್ನು ತನ್ನ ಆಸ್ಥಾನಕ್ಕೆ ಬರಮಾಡಿಕೊಂಡು, ಅವರಿಗೆ ತನ್ನ ಸರಕಾರದ ಮುಖ್ಯ ಇಲಾಖೆಗಳಾದ ಸೈನ್ಯ ಮತ್ತು ಕಂದಾಯ ಇಲಾಖೆಗಳ ಜವಾಬ್ದಾರಿಯನ್ನು ವಹಿಸಿದ. ಇದರ ಪರಿಣಾಮ, ಸರಕಾರದ ವ್ಯವಹಾರದಲ್ಲಿ ಶಿಸ್ತಿನ ನಿಯಮಾವಳಿ ಮತ್ತು ಅವುಗಳ ಅನುಷ್ಠಾನಗಳಿಂದ ರಾಜ್ಯದ ಬೊಕ್ಕಸ ತುಂಬಿ ಹರಿಯಿತು ಎಂದಿದ್ದಾರೆ ಇತಿಹಾಸಕಾರರು. ೭

ರಣಜಿತ್ ಸಿಂಗ್‌ನ ಮೊಹರು (ಮುದ್ರೆ) ಒಬ್ಬ ಹಿಂದೂ ದಿವಾನ, ಕರಮ್‌ಚಂದ್‌ನೆಂಬವನಿಗೆ ನೀಡಿದ್ದು, ರಾಜನ ನಂಬಿಕೆಗೆ ಅರ್ಹನಾದ ಹಿಂದೂ ಧರ್ಮೀಯನಾಗಿದ್ದ.

---

೭ P 458 History of Sikh People by G.Singh

ರಾಜನ ಆಸ್ಥಾನದಲ್ಲಿ ಮಿಂಚಿದ ಮುಸ್ಲಿಮ್ ಗಣ್ಯ ವ್ಯಕ್ತಿಗಳ ಪೈಕಿ, ಲಾಹೋರ್ ನಗರದ ಮೂರು ಸಹೋದರರುಗಳಾದ ಅಜೀಮುದ್ದಿನ್, ನೂರುದ್ದೀನ್ ಮತ್ತು ಇಮಾಮುದ್ದೀನ್‌ರ ಹೆಸರುಗಳು ಅಮರವಾಗಿವೆ. ಅವರು ಲಾಹೋರ್‌ನ ಪ್ರಸಿದ್ಧ ಸಂತ ಮತ್ತು ವೈದ್ಯ ಸಯದ್ ಗುಲಾಮ್ ಮೊಹಮ್ಮದ್ ಬುಖಾರಿಯ ಮಕ್ಕಳಾಗಿದ್ದರು. ಈ ವೈದ್ಯ ಶತಮಾನಗಳ ಹಿಂದೆ ಪರ್ಶಿಯಾದ ಬೊಖಾರಾ ನಗರದಿಂದ ಭಾರತಕ್ಕೆ ವಲಸೆ ಬಂದಿದ್ದರಿಂದ ಅವನ ಸಂತತಿಗೆ ಬುಖಾರಿ ಎಂದು ಹೆಸರನ್ನಿಟ್ಟು ಕರೆಯಲಾಯಿತು.

ಅಜೀಮುದ್ದೀನ್, ರಣಜಿತ್‌ಸಿಂಗ್‌ನ ಮುಖ್ಯ ಸಲಹೆಗಾರ ಮತ್ತು ಸಂಧಾನಕಾರ ಆಗಿದ್ದ. ಬ್ರಿಟಿಷ್‌ರೊಂದಿಗೆ ಮತ್ತು ಆಫ್ಘನ್ ಅಮೀರ್‌ರೊಂದಿಗೆ ಸಂಧಾನಕಾರನಾಗಿ ಮಿಂಚಿದ. ಆಫ್ಘನ್ ಅಮೀರ್ ದೋಸ್ತ್ ಮೊಹಮ್ಮದ್, ಆತ ಒಬ್ಬ ಕಾಫರ್‌ನ ಸೇವೆ ಮಾಡಿ, ತನ್ನದೇ ಧರ್ಮೀಯರ ವಿರುದ್ಧ ಹೋರಾಡುವುದರ ಬಗ್ಗೆ ಅಜೀಜುದ್ದೀನ್‌ನನ್ನು ಹಂಗಿಸಿದಾಗ, ಆತ ಹೇಳುತ್ತಾನೆ: 'ಆಕ್ರಮಣದ ವಿರುದ್ಧ ಹೋರಾಡಿ ನನ್ನ ದೇಶವನ್ನು ಕಾಪಾಡುವುದನ್ನು ಕರ್ತವ್ಯವಲ್ಲವೇ? ಮತ್ತು ಉಪ್ಪು ತಿಂದ ಮನೆಗೆ ದ್ರೋಹ ಬಗೆಯಬಾರದಲ್ಲವೆ? ತಾವು ಕೂಡ ಅಧಿಕಾರಕ್ಕಾಗಿ ಹೋರಾಡುತ್ತಿದ್ದೀರಲ್ಲದೆ ಇಸ್ಲಾಮ್‌ನ ಪರವಾಗಿ ಅಲ್ಲ !'

ಲಾರ್ಡ್ ವಿಲಿಯಂ ಬೆಂಟಿಂಕ್‌ನನ್ನು ೧೮೩೧ರಲ್ಲಿ ಭೇಟಿಯಾದಾಗ, ಆತ ಅಜೀಜುದ್ದೀನ್‌ನನ್ನು ರಣಜಿತ್‌ಸಿಂಗನ ಒಕ್ಕಣ್ಣೆ ಬಗ್ಗೆ ಅರಿಯಲು ಕೇಳಿದಾಗ, ಅವನು ಉತ್ತರಿಸುತ್ತಾನೆ : 'ನನ್ನ ಧಣಿಯ ಮುಖಲಕ್ಷಣ ಹೇಗೆ ಸೂರ್ಯನ ಪ್ರಭೆಯಂತೆ ಹೊಳೆಯುತ್ತದೆ. ನಾನು ಎಂದೂ ಅವನ ಮುಖವನ್ನು ನೇರವಾಗಿ ನೋಡಬಲ್ಲನಾಗಲಿಲ್ಲ. ಅವನ ಸುಂದರ ಪಾದಕಮಲಗಳನ್ನು ನೋಡಿ ಬಲ್ಲವನಾಗಿದ್ದೇನೆ, ಅವನ ಕಣ್ಣುಗಳನ್ನಲ್ಲ!'

೧೮೩೮ರಲ್ಲಿ, ರಣಜಿತ್ ಸಿಂಗ್ ಪಾರ್ಶ್ವವಾಯುವಿನಿಂದ ನರಳುತ್ತಿರುವಾಗ, ಅವನ ವಾಕ್ ಬಂದಾದಾಗ, ಇದೇ ಆಪ್ತ ಆಸ್ಥಾನಿಕ ಅಜೀಜುದ್ದೀನ್, ಮಾತು ಬಾರದ ರಾಜನ ಕೈ ಬಾಯಿ ಸಂಜ್ಞೆಗಳನ್ನು ಅರ್ಥೈಸಿ, ನುಡಿಯುವಂತನಾದ. ಅವನ ಸಕಲ ಇಷ್ಟಾರ್ಥಗಳನ್ನು, ಉಪಚಾರಗಳನ್ನು ಆರೈಕೆಗಳನ್ನು ಅಜೀಜುದ್ದೀನ್ ಮಾಡಿದ. 'ಒಬ್ಬ ಪುತ್ರ ತನ್ನ ತಂದೆಗೆ ಮಾಡಿದಷ್ಟು ಕೆಲಸಕಾರ್ಯಗಳನ್ನು ಅಜೀಜುದ್ದೀನ್ ಮಾಡಿದ' ಎಂದು ಇತಿಹಾಸಕಾರರು ಹೊಗಳಿದರು. ೮

ಅಜೀಜುದ್ದೀನ್‌ನ ಸಹೋದರ ನೂರುದ್ದೀನ್, ರಣಜಿತ್ ಸಿಂಗ್‌ನ ಆಸ್ಥಾನದಲ್ಲಿ ಗೃಹಮಂತ್ರಿಯಾಗಿ ಶೋಭಿಸಿದ : ಅವನನ್ನು 'The Home Minister, almoner, director of royal palaces and gardens, one of the three custodians of the keys of the royal treasury, commandant of the arsenal of the Fort, a judge extraordinary' ಎಂದು

---

೮. P 465 History of Sikh People by G. Singh

ಹೊಗಳಿದ್ದಾರೆ ಇತಿಹಾಸಕಾರರು. ೯

ನೂರುದ್ದೀನ್, ರಣಜಿತ್‌ಸಿಂಗ್‌ನ ಊಟ ಉಪಚಾರದ ಹೊಣೆ ಹೊತ್ತನಲ್ಲದೆ, ಅವನಿಗೆ ಉಣಬಡಿಸುವ ಭೋಜನವನ್ನು ತಾನು ಮೊದಲು ತಿಂದು, ರುಚಿ ನೋಡಿ ಆಮೇಲೆ ರಾಜನಿಗೆ ನೀಡುವ ಕ್ರಮಪಾಠವನ್ನು ಇರಿಸಿಕೊಂಡಿದ್ದ.

ಮೂರನೆಯ ಸಹೋದರ, ಇಮಾಮುದ್ದೀನ್, ಅಮೃತಸರದ ಕೋಟೆಯ ಸುಪರ್ದಿ ನೋಡಿಕೊಳ್ಳುವುದಲ್ಲದೆ, ಸುತ್ತಮುತ್ತಲಿನ ಪ್ರದೇಶಗಳ ರಾಜ್ಯಪಾಲನಾಗಿ ಕಾರ್ಯ ನಿರ್ವಹಿಸುತ್ತಿದ್ದ. ರಣಜಿತ್ ಸಿಂಗ್‌ನ ಅನೇಕ ಯುದ್ಧಾಚರಣೆಗಳಲ್ಲಿ ಭಾಗವಹಿಸಿದ ಕೀರ್ತಿ ಆತನಿಗೆ ಇದೆ.

ಎಲ್ಲಾ ರಾಜ ಮಹಾರಾಜ, ನವಾಬ, ಬಾದ್‌ಶಹಾರ ತರಹ ರಣಜಿತ್‌ಸಿಂಗ್, ವಿವಿಧ ಕಾರಣಗಳಿಗೆ, ಪ್ರಮುಖವಾಗಿ ರಾಜಕೀಯ, ರಾಜತಾಂತ್ರಿಕ, ಶಾಂತಿ ಕಾಪಾಡುವಿಕೆ ಮತ್ತು ವೈಯಕ್ತಿಕ ಕಾರಣಗಳಿಗೆ, ೨೧ ರಾಣಿಯರನ್ನು ಹೊಂದಿದ್ದ. ಅವರಿಂದ ೭ ಪುತ್ರಗಳನ್ನು ಪಡೆದ. ೧೦

ರಾಣಿಯರ ಹೆಸರು ಮತ್ತು ಅವರ ಮಕ್ಕಳ ಹೆಸರುಗಳನ್ನು ಈ ಇತಿಹಾಸಕಾರ ನೀಡಿದ್ದಾನೆ.

ರಣಜಿತ್‌ಸಿಂಗ್, ವಿವಿಧ ಜಾತಿ, ಧರ್ಮ, ಕುಲ, ಪಂಗಡಗಳಿಂದ ಹಂಚಿ ಹೋರಾಡಿ, ಪರಕೀಯರ ಮತ್ತು ಸ್ಥಳೀಯ ಜನಾಂಗದವರ ಆಕ್ರಮಣ, ಆಳ್ವಿಕೆ ಮತ್ತು ದುರಾಡಳಿತಗಳಿಂದ ನರಳುತ್ತಿದ್ದ ಪಂಜಾಬ್ ಮತ್ತು ಸುತ್ತಮುತ್ತಲಿನ ಪ್ರಾಂತ್ಯಗಳನ್ನು ತನ್ನ ಪ್ರಚಂಡ ಪರಾಕ್ರಮದಿಂದ, ಗೆದ್ದು, ಒಗ್ಗೂಡಿಸಿ, ಒಂದು ಪ್ರಬಲ ರಾಷ್ಟವನ್ನಾಗಿ ಮಾಡಿ, 'ಪಂಜಾಬ್ ಕೇಸರಿ' ಎಂಬ ಹೆಸರನ್ನು ಸಾರ್ಥಕ ಮಾಡಿಕೊಂಡ.

ಭಾರತದ ಇತಿಹಾಸದಲ್ಲಿ ಸಾವಿರಾರು ವರ್ಷಗಳಿಂದ ಪಶ್ಚಿಮದ ಖೈಬರ್ ಕಣಿವೆಯಿಂದ ನಿರಂತರ ದಾಳಿ, ಆಕ್ರಮಣ ಜರುಗಿಸಿ, ಭಾರತೀಯರ ಮೇಲೆ ತಮ್ಮ ಅಧಿಕಾರ ಸ್ಥಾಪಿಸಿ, ದೇಶದ ಜನರ ಆಸ್ತಿಪಾಸ್ತಿ ಲೂಟಿ ಮಾಡಿ, ಅವರನ್ನು ತಮ್ಮ ಗುಲಾಮರನ್ನಾಗಿ ಮಾಡಿಕೊಂಡ ಇತಿಹಾಸವನ್ನು ಬದಲಿಸಿ, ಮೊತ್ತಮೊದಲ ಬಾರಿ, ಭಾರತದ ಹೆಬ್ಬಾಗಿಲನ್ನು ರಕ್ಷಿಸಿದ ಮತ್ತು ತನ್ನ ಭುಜಬಲದಿಂದ ಹೋರಾಟ ನಡೆಸಿ, ಶತ್ರುಗಳ ಪಾಲಯದಲ್ಲಿ ತನ್ನ ಸಾಮರ್ಥ್ಯ ತೋರಿಸಿ, ಅವರನ್ನು ಬಗ್ಗು ಬಡಿದ ಕೀರ್ತಿ ರಣಜಿತ್‌ಸಿಂಗ್‌ನಾಗಿದೆ.

"The man who fought only when he must, and was honoured by the rulers of Europe, and looked upon with envy

---

೯. P 465 History of Sikh History by G.Singh
೧೦. P 516 History of Sikh History by G.Singh

and pride by the rulers of Asia and his fellow princes in India, not only for his military successes, but for his statesmanship, and who had entered the annuls of Time as a warrior in line with Alexander and Napolean and, as an integrator in line with Bismark and Garibaldi, and as a man of devotion and charity like Harishchandra and Hatim Tai of anciet love. . .' ಎಂದು ಹೊಗಳಿದ್ದಾರೆ ಪ್ರಸಿದ್ಧ ಇತಿಹಾಸಕಾರ ಡಾ. ಗೋಪಾಲ್ ಸಿಂಗ್. (ಪುಟ ೫೦೩, History of Sikhs by G.Singh)

ರಣಜಿತ್ ಸಿಂಗ್, ತನ್ನ ಉದಾರ ರೀತಿ, ನೀತಿ, ಹೃದಯವೈಶಾಲ್ಯತೆ, ಎದೆಗಾರಿಕೆ ಮುಂತಾದ ನೈತಿಕ, ಸಾಮಾಜಿಕ ಹಾಗೂ ರಾಜಕೀಯ ಮೌಲ್ಯಗಳಿಂದ ಸಿಖ್ ರಾಷ್ಟ್ರ ಸ್ಥಾಪಿಸಿಜ ಫಲವಾಗಿ, ಸಾಮಾನ್ಯ ಜನರ ವಿಧೇಯತೆಯನ್ನು ಗಳಿಸಿದ. ಈ ವಿಧೇಯತೆಯೇ ಅತ್ಯಂತ ಪ್ರಮುಖ ಅಂಶವಾಗಿದೆ. ಒಂದು ದೇಶದ ಸರಕಾರದ ಅಸ್ತಿತ್ವ ಮತ್ತು ಉಳಿಯುವಿಕೆಗೆ ಎಂದಿದ್ದಾರೆ ಇತಿಹಾಸಕಾರರು. ಯಾವುದೇ ಸರಕಾರ ಉಳಿಯಬೇಕಾದರೆ, ಪ್ರಜೆಗಳ ವಿಧೇಯತೆ ಪ್ರಮುಖ ಪಾತ್ರ ವಹಿಸುತ್ತದೆ. ಪ್ರಜೆಗಳು ವಿಧೇಯರಾಗಬೇಕಾದರೆ, ಸರಕಾರದ ಮುಖ್ಯಸ್ಥರು, ಅಥವಾ ಆಳುವವರು ಪ್ರಜೆಗಳ ಹಿತಕ್ಕಾಗಿ, ಒಳಿತಿಗಾಗಿ, ಅವರ ರಕ್ಷಣೆಗಾಗಿ, ನಿಸ್ವಾರ್ಥದಿಂದ ದುಡಿಯಬೇಕು. ಎಲ್ಲದಕ್ಕಿಂತಲೂ ಮುಖ್ಯವಾಗಿ, ಪ್ರಾಚೀನ ಗ್ರೀಕ್ ಜ್ಞಾನಿ ಸೋಲನ್ ಸಾರಿದ ಹಾಗೆ, 'ಎಲ್ಲಿಯವರೆಗೆ ಆಳುವವರು ತಾವು ಸಾರಿದ, ದೃಢಪಡಿಸಿದ ನಿಯಮ ಕಾನೂನುಗಳನ್ನು ಪಾಲಿಸುವರೋ, ಅಲ್ಲಿಯವರೆಗೆ ಪ್ರಜೆಗಳು ಅವರಿಗೆ ವಿಧೇಯರಾಗಿಡಿಣತ್ತಾರೆ.' ಆಳುವವರೇ, ತಾವೇ ನಿರ್ಮಿಸಿದ ಕಾನೂನು ಕಟ್ಟಳೆಗಳನ್ನು ಗಾಳಿಗೆ ತೂರುತ್ತಾರೋ, ಆಗ ಪ್ರಜೆಗಳು ಅವರಿಗೆ ವಿಧೇಯರಾಗಿರುವುದಿಲ್ಲ.

ಹೆಸರಾಂತ ಜ್ಞಾನಿ ಸೈಮನ್ ವೀಲ್ ಹೇಳಿದ್ದನ್ನು ಇಲ್ಲಿ ಉದಹರಿಸಬಹುದು :

The State in its administrative function should appear as the manager of the country's resources; a more or less capable manager, who is expected to be on the whole rather less capable than otherwise, because his task is difficult one and carried out under morally unfavourable conditions. Obedience is none the less obligatory, not because of any particular right to issue commands possessed by the State, but because obedience is essential for the country's preservation and tranquillity. We must obey the State, however it happens to be, rather like loving children left by their par-

ents, gone abroad, in the charge of some mediocre governess, but who obey her nevertheless out of love for their parents. If the State happens not to be mediocre, so much the better; besides, the pressure of public opinion must always be exercised in the manner of stimulant encouraging it to leave the path of mediocrity; but whether mediocre or not, the obligation of obedience remains the same.

It is cerainly not an unlimited obligation, but its only valid limit is a revolt on the part of conscience. No criterion can be offered indicating exactly what this limit is; it is even impossible for each of us to prescribe one for himself once and for all: when you feel you can't obey any longer, you just have to disobey. But there is at least one neccessary condition, although insufficient of itself, making it possible to disobey without being guilty of crime; this is to be urged forward by so imperious an obligation that one is constrained to scorn all risks of whatever kind. If one feels inclined to disobey, but one is dissuaded by the excessive danger involved, that is altogether unpardonable, whether it be because one contemplated an act of disobedience, or else because one failed to carry it out, as the case may be. Besides, whenever one isn't strictly obliged to disobey, one is under the strict obligation to obey. a country cannot possess liberty unless it is recognized that disobedience toward the authorities, every time it doesn't proceed from an overriding sense of,duty, is more dishonorable than theft. That means to say that public order ought to be regarded as more sacred than private property. The authorities could popularize this way of looking at things by means of education and other suitable methods, which would have to be thought out.

(P. 178-79 - The Need for Roots by Simone Weil)

ಅಧ್ಯಾಯ ೯

ರಣಜಿತ್ ಸಿಂಗ್ ನಂತರದ ಪಂಜಾಬ್

Man's Power of choice enables him to think like and an angel or a devil, a king or a slave.

ಮನುಷ್ಯನ ಆಯ್ಕೆಯ ಅಧಿಕಾರ ಅವನನ್ನು ಒಬ್ಬ ದೇವ ಅಥವಾ ಒಬ್ಬ ದೆವ್ವ, ಒಬ್ಬ ರಾಜ ಅಥವಾ ಒಬ್ಬ ಗುಲಾಮನ ತರಹ ಯೋಚಿಸುವಂತವನಾಗುತ್ತಾನೆ.

– ಫ್ರೆಡೆರಿಕ್ ಬೈಲ್ಸ್

ರಣಜಿತ್‌ಸಿಂಗ್ ಒಬ್ಬ ಹೃದಯಶ್ರೀಮಂತಿಕೆಯುಳ್ಳ ಮಹಾರಾಜ, ವೀರಯೋಧ, ನೈತಿಕ ಮೌಲ್ಯಗಳನ್ನು ಹೊಂದಿದ ಒಬ್ಬ ಮಹಾನ್ ನಾಯಕ, ಒಂದು ಸಮಾನ ಆದರೆ ಭವ್ಯ ರಾಜಕೀಯ ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ತನ್ನ ನೂತನ ರಾಷ್ಟ್ರದಲ್ಲಿ ನಿರ್ಮಾಣ ಮಾಡಿದ ಕೀರ್ತಿವಂತ, ಹೊರರಾಜ್ಯಗಳ ಪೀಡಕ, ಲೂಟಿಕೋರರ, ಕ್ರೂರ ದಾಳಿಕೋರರನ್ನು ಪ್ರಚಂಡ ಧೈರ್ಯ ಸ್ಥೈರ್ಯಗಳಿಂದ ಎದುರಿಸಿದ ಅಪ್ರತಿಮ ವೀರಪುರಷ ಎಂದೆಲ್ಲಾ ಹೊಗಳಿಸಿಕೊಂಡಾತ ಅಂತಿಮವಾಗಿ ಪುತ್ರವಾತ್ಸಲ್ಯಕ್ಕೆ ಮರುಳಾಗಿ, ನಿರ್ವೀರ್ಯತೆ, ಚೈತನ್ಯರಹಿತ, ನಿಷ್ಕ್ರಿಯ, ಅಯೋಗ್ಯ, ಕ್ರಿಯಾಶೂನ್ಯ ಮಗನಾದ ಖರಕ್ ಸಿಂಗ್‌ನನ್ನು ಆರಿಸಿ, ಅವನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಿದ್ದು ಒಂದು ಘೋರ ತಪ್ಪು ಆಗಿ, ತಾನೇ ತನ್ನ ಬಲ ಮತ್ತು ಯುಕ್ತಿಗಳಿಂದ, ತನ್ನ ಸಿಖ್, ಮುಸ್ಲಿಮ್ ಸೈನಿಕರ ಮತ್ತು ಸೈನ್ಯಾದಿಕಾರಿಗಳ ರಕ್ತ ಹರಿಸಿ ರೂಪಿಸಿದ ರಾಷ್ಟ್ರದ ಅಂತ್ಯಕ್ಕೆ ದಾರಿ ಮಾಡಿಕೊಟ್ಟ, ಅದು ಸಿಖ್ ರಾಷ್ಟ್ರಕ್ಕಲ್ಲದೇ ಭಾರತ ತನ್ನ ದಾಸ್ಯತನದಿಂದ ಹೊರಬರಲು ಅಸಾಧ್ಯವಾಗಿ, ಮತ್ತೊಂದು ಪರಕೀಯ ರಾಷ್ಟ್ರದವರ ಗುಲಾಮಗಿರಿಗೆ ತಲೆಬಾಗಿ ಬಾಳಲು ಸಹಕಾರಿಯಾಗಿತ್ತು.

ಯಾವುದೇ ದೇಶದ ರಾಜಕೀಯದಲ್ಲಿ, ಅಧಿಕಾರಕ್ಕಾಗಿ ಹೋರಾಟ ಸಾಗಿಸುವುದು ಸ್ವಾಭಾವಿಕ. ಆದರೆ, ಅದರಿಂದ ಆಗುವ ಅನಾಹುತವೇ ಅಪಾರ. ಸೈಮೋನ್ ವೀಲ್‌ಳ ಉವಾಚ ಇಂದಿಗೂ ಪ್ರಸಕ್ತ ಭಾರತೀಯ ರಾಜಕೀಯಕ್ಕೆ ಅನ್ವಯಿಸಬಹುದು.೧೧

Politics are practically never looked upon as an art of so high a category. But that is because we have for centuries been accustomed to regard them solely, or at least principally, as a technique for acquiring and holding on to power.

Now, power is not an end. By nature, in essence and by

definition, it constitues exclusively a means. It is to politics what a piano is to musical composition. A composer who requires a piano in order to be able to invent his modies will find himself in an embarrassing situation if he happens to be staying in a village where there isn't one. But if one is procured for him, it is then up to him to compose.

Fools that we are, we had confused the manufacture of a piano with the composition of a sonata.

An educational method which is not inspired by the conception of a certain form of human perfection is not worth very much. When it is a matter of educating a whole people, this conception should be that of a civilization. It must not be sought in the past, which only contains imperfect models; far less still in our dreams of the future, which are necessarily as mediocre as we ourselves are, and consequently vastly inferior to the past. The inspiration for such an education must be sought, like the method itself, among the truths eternally inscribed in the nature of things.

Here are a few indications on this subject.

Four obstacles above all separate us from a form of civilization likely to be worth something; our false inception of greatness; the degradation of the sentiment of justice; our idolization of money; and our lack of religious inspiration. We may use the first person plural without any hesitation, for it is doubtful whether at the present moment there is a single human being on the surface of the globe who is free from that quadruple defect, and more doubtful still whether there is a single one belonging to the white race. But if there are one or two, which, in spite of everything, is to be hoped, they remain hidden.

Our conception of greatness is the most serious defect

of all, and the one concerning which we are least conscious that it is a defect; at least, a defect in ourselves; for in our enemies it shocks us. But in spite of the warning contained in Christ's parable of the mote and the beam, it never occurs to us to recognize it as ours.

Our conception of greatness is the very one that has inspired Hitler's whole life. When we denounce it with out the remotest recognition of its application to ourselves, the angels must either cry or laugh, if there happen to be angels who interest themselves in our propaganda.

(P 218 The Need for Roots by Simone weil)

ಸೆಪ್ಟೆಂಬರ್, ೧೮೩೯, ಒಂದರಂದು, ಸಿಂಹಾಸನವೇರಿದ ಖರಕ್ ಸಿಂಗ್, ಈಗಾಗಲೇ, ಅವನ ವಿರುದ್ಧ ಹಗೆತನ ಸಾಧಿಸಲು ಪ್ರಧಾನಮಂತ್ರಿ ಧ್ಯಾನ್ ಸಿಂಗ್, ರಾಜನ ಪದಚ್ಯುತಿಗೆ ಪಿತೂರಿ ಜರುಗಿಸಲು ಸಂಚು ಮಾಡತೊಡಗಿದ. ವಿರೋಧಿಗಳಾದ ಡೋಗ್ರಾ ರಾಜರು, ರಾಜಕುಮಾರ ನೌನಿಹಾಲ್‌ಸಿಂಗ್, ಸಂಧನ್‌ವಾಲಿಯಾ ಸರದಾರರನ್ನು ಕರೆದು ಸಭೆ ಸೇರಿಸಿದ. ಖರಕ್ ಸಿಂಗ್, ಗುಪ್ತವಾಗಿ ಬ್ರಿಟಿಷ್‌ರೊಂದಿಗೆ ಸಂಧಾನ ನಡೆಸುತ್ತಿರುವುದಾಗಿ ಸುಳ್ಳು ಸುದ್ದಿ ಹಬ್ಬಿಸಿ, ಅದರ ದೃಢತೆಗೆ ಸುಳ್ಳು ಕಳ್ಳ ಪತ್ರ ವ್ಯವಹಾರದ ಪ್ರತಿಗಳನ್ನು ಅವರ ಮುಂದೆ ಇರಿಸಿ, ಅವರನ್ನು ತನ್ನೆಡೆಗೆ ಸೆಳೆದ. ಸಭೆ ಸೇರಿದವರೆಲ್ಲರೂ, ರಾಜನ ಅಧಿಕಾರವನ್ನು ಕುಂಠಿತಗೊಳಿಸಿ, ಅವನ ಬಂಧು ಮತ್ತು ಹಿತೈಷಿ ೨೦ ವರ್ಷದ ಚೇಟ್ ಸಿಂಗ್ ಬಾಜ್ವಾನ ಹತ್ಯೆ ಮಾಡಿ, ರಾಜನ ಮಗ ಕುನ್ವರ್ ನೌನಿಹಾಲ್ ಸಿಂಗ್‌ನನ್ನು ತಂದೆಯ ಸ್ಥಾನದಲ್ಲಿರಿಸಲು ನಿರ್ಣಯ ತೆಗೆದುಕೊಳ್ಳಲಾಯಿತು.

ಅಕ್ಟೋಬರ್ ೯, ೧೮೩೯ ರಂದು ಪಿತೂರಿಗಾರರು, ಲಾಹೋರ್‌ನ ಕೋಟೆಯೊಳಗೆ ನುಸುಳಿ, ಚೇಟ್ ಸಿಂಗ್‌ನ ಹತ್ಯೆ ಮಾಡಿ, ಖರಕ್ ಸಿಂಗ್‌ನನ್ನು ಸೆರೆಹಿಡಿದು ಅದೇ ಕೋಟೆಯಲ್ಲಿರಿಸಿದರು.

ರಣಜಿತ್ ಸಿಂಗ್‌ನ ಮೊಮ್ಮಗ ನೌನಿಹಾಲ್ ಸಿಂಗ್ ತಾತನ ತರಹ ವೀರಯೋಧನಾಗಿದ್ದ. ತಂದೆಯ ತರಹ ಚೈತನ್ಯರಹಿತನಾಗಿರದೆ, ಅಧಿಕಾರ ಕೈಗೆ ದೊರಕಿದ ಕೂಡಲೇ ಕಾರ್ಯತೃಪ್ತನಾದ. ಜನಪ್ರಿಯತೆ ಗಳಿಸಿದ ಆತ ರಾಷ್ಟ್ರವನ್ನು ಬಲಪಡಿಸಲು ಮುಂದಾದ. ಆದರೆ ದುರದೃಷ್ಟವಶಾತ್ ಅವನು ಬಹಳ ಕಾಲ ಬಾಳಲಿಲ್ಲ. ತಂದೆ ರೋಗಪೀಡಿತನಾಗಿ, ನವೆಂಬರ್ ೫, ೧೮೪೦ ರಂದು ಪ್ರಾಣ ತ್ಯಜಿಸಿದ ದಿನವೇ ತಂದೆಯ ಶವಸಂಸ್ಕಾರ ಮಾಡಿ ದುಃಖ ಪೀಡಿತನಾದ ಮಗ

ನೌನಿಹಾಲ್‌ಸಿಂಗ್, ಅರಮನೆಗೆ ಹಿಂದಿರುಗುವಾಗ, ಲಾಹೋರ್ ಕೋಟೆಯ 'ರೋಶ್ನೀ' ಬಾಗಿಲನ್ನು ದಾಟಿ ಒಳಸೇರುವ ಸಮಯದಲ್ಲೇ ಬಾಗಿಲಿನ ಮೇಲ್ ಭಾಗದ ಕಲ್ಲು ಛಾವಣಿ ಕುಸಿದು, ಅವನ ತಲೆಯ ಮೇಲೆ ಉರುಳಿಬಿದ್ದು ತೀವ್ರ ಗಾಯಗೊಂಡ. ಅವನ ಜೊತೆಯಲ್ಲಿದ್ದ ಕಾಶ್ಮೀರದ ರಾಜ ಗುಲಾಬ್‌ಸಿಂಗ್‌ನ ಮಗ ಉಧಾಮ್ ಸಿಂಗ್‌ನ ಮೃತ್ಯು ಕೂಡ ಆಯಿತು. ಗಾಯಗೊಂಡ ರಾಜಕುಮಾರನನ್ನು ಹೊತ್ತು ಅರಮನೆಗೆ ಸಾಗಿಸಿದರೂ, ಅವನಿಗೆ ಔಷಧೋಪಚಾರ ನೀಡಿದರೂ ಅವನು ಸಾವನ್ನಪ್ಪಿದ. ಇತಿಹಾಸಕಾರರು ಅವನ ಸಾವು ಆಕಸ್ಮಿಕವಾಗಿದ್ದಲ್ಲದೆ, ತಂದೆ ಖರಕ್ ಸಿಂಗ್ ಮತ್ತು ಚೇಟ್‌ಸಿಂಗ್‌ರ ಅನುಯಯಿಗಳಿಂದ ಕೊಲೆಯ ಸಂಚಿನಿಂದ ಆಯಿತು ಎಂದು ಹೇಳಿದ್ದಾರೆ.

ರಾಜಕುಮಾರನ ನೌನಿಹಾಲ್ ಸಿಂಗ್‌ನ ಅಕಾಲಿಕ ಮರಣದಿಂದ, ರಾಜ್ಯದಲ್ಲಿ ಅಜಾಗರೂಕತೆ ಉಂಟಾಯಿತು. ಸಿಂಹಾಸನಕ್ಕಾಗಿ, ಅಧಿಕಾರಕ್ಕಾಗಿ, ರಾಜ್ಯದ ಹಿತಾಸಕ್ತಿಯನ್ನು ಬದಿಗಿಟ್ಟು ಸಕಲರೂ ಕಿತ್ತಾಡತೊಡಗಿದರು. ಪ್ರಧಾನ ಮಂತ್ರಿ ಧ್ಯಾನ್ ಸಿಂಗ್, ತನ್ನ ಸ್ಥಾನ ಭದ್ರವಾಗಿಸಲು, ಸರ್ವ ರೀತಿಯಲ್ಲೂ ಕುಟಿಲೋಪಾಯಗಳನ್ನು ಉಪಯೋಗಿಸಿದ. ಆದರೆ ಗತಿಸಿದ ನೌನಿಹಾಲ್‌ರನ ತಾಯಿ ರಾಣಿ ಚಾಂಗ್‌ಕೌರ್, ತನ್ನ ಹಿತೈಷಿ ಹರಿದ್ವಾರದಲ್ಲಿದ್ದ ಸರದಾರ್ ಅತ್ತರ್‌ಸಿಂಗ್ ಸಂಧಾನ್‌ವಾಲಿಯಾನನ್ನು ಕರೆಸಿ ಸಮಾಲೋಚನೆ ನಡೆಸಿದಳು. ತನ್ನ ಸೊಸೆ ರಾಣಿ ಗಿಲಾನ್ ಉರುಫ್ ಸಾಹಿಬ್ ಕೌರ್ ಗರ್ಭಿಣಿಯಾಗಿದ್ದು, ಹುಟ್ಟುವ ಗಂಡು ಮಗುವಿಗೆ ರಾಜ್ಯದ ಪಟ್ಟ ಕಟ್ಟುವ ಪಣ ತೊಟ್ಟಳು. ಅಲ್ಲಿಯವರೆಗೆ ತಾನು 'ರೀಜಂಟ್', ಮೇಲ್ವಿಚಾರಕಳಾಗಿ ಅಧಿಕಾರ ವಹಿಸಿ ರಾಜ್ಯಭಾರ ಮಾಡುತ್ತೇನೆಂದಳು. ಒಂದು ವೇಳೆ, ಹೆಣ್ಣುಮಗುವಿನ ಜನನವಾದರೆ, ರಾಜಕುಮಾರ ಖೇರ್‌ಸಿಂಗ್‌ನನ್ನು ರಾಜಪದವಿಗೆ ಏರಿಸುವಳೆಂದಳು. ನಾಲ್ಕು ಜನರ ಮಂತ್ರಿಮಂಡಲದ ರಚನೆಯಾದರೂ ಅವರಲ್ಲಿ ಒಡಂಬಡಿಕೆ, ಒಗ್ಗಟ್ಟಿಲ್ಲದೆ, ಕೆಲಸ ಕಾರ್ಯಗಳ ನಿಲುಗಡೆಯಾಯಿತು.

ಡೋಗ್ರಾ ರಾಜ ಧ್ಯಾನ್‌ಸಿಂಗ್ ತನ್ನ ಪಂಗಡದ ಹಿತಾಸಕ್ತಿ ಇರಿಸಿಕೊಳ್ಳಲು ರಾಜಧಾನಿಯನ್ನು ತ್ಯಜಿಸಿ ಜಮ್ಮೂ ನಗರಕ್ಕೆ ತೆರಳಿದ. ಶೇರ್‌ಸಿಂಗ್‌ನನ್ನು ಬೆಂಬಲಿಸಿದ ಆತ, ಅವನನ್ನು ಲಾಹೋರ್‌ಗೆ ಬಂದು ಕೋಟೆಯನ್ನು ಆಕ್ರಮಿಸಿಕೊಳ್ಳಲು ಸೂಚಿಸಿದ. ಆದರೆ ಸ್ವತಃ ಅವನೇ ಅಲ್ಲಿಗೆ ತೆರಳದೆ, ಸಿಖ್ ರಾಜ ಕುಟುಂಬದ ಮಧ್ಯೆ ಹುಳಿ ಹಿಂಡಿ ಅವರು ಪರಸ್ಪರ ಕಲಹ, ವೈಮನಸ್ಸು, ಹೋರಾಟ ಜರುಗಿಸಿದರೆ, ತಾನು ತನ್ನ ಡೋಗ್ರಾ ಪಂಗಡದ ಹಿತ ಸಾಧಿಸಿ, ಒಂದು ಸ್ವತಂತ್ರ ಪ್ರತ್ಯೇಕ ಡೋಗ್ರಾ ರಾಜ್ಯ ಸ್ಥಾಪಿಸುವ ಮಹತ್ವದ ವಿಚಾರ ಮಾಡಿದ. ಇಬ್ಬರ ಜಗಳದಲ್ಲಿ ಮೂರನೆಯವರಿಗೆ ಲಾಭದ ತಂತ್ರವನ್ನು ಅತ್ಯಂತ ಬಲವಾಗಿ ನಂಬಿದ ಧ್ಯಾನ್‌ಸಿಂಗ್ ಸಮಯಸಾಧಕನಾಗಿ ವಿಜೃಂಭಿಸಿದ.

ಲಾಹೋರ್‌ಗೆ ಬಂದಿಳಿದ ಶೇರ್‌ಸಿಂಗ್, ತನಗೆ ನೀಡಿದ ಭರವಸೆ ಮತ್ತು ಸಹಾಯ

ಧ್ಯಾನ್‌ಸಿಂಗ್‌ನಿಂದ ಕಾಣದಿದ್ದಾಗ, ತಾನೇ ಸ್ವತಃ ಆಳುತ್ತಿದ್ದ ಮಹಾರಾಣಿ ಚಾಂಗ್‌ಕೌರ್‌ಳೊಂದಿಗೆ ಸಂಧಾನ ಜರುಗಿಸಿದ. ಆದರೆ ಅರಮನೆಯ ವಿದ್ಯಮಾನಗಳನ್ನು ಅರಿತು, ಅಭ್ಯಾಸ ಮಾಡುತ್ತಿದ್ದ ಅನೇಕ ಸಿಖ್ ಸರದಾರರು ಮತ್ತು ಸೈನಿಕರು ಬೇಸತ್ತರು. ಯಾವ ಕುಟುಂಬ, ಗುರು, ಸಮಾಜ, ಧರ್ಮಗಳಿಗಾಗಿ ಕಾದು, ನೆತ್ತರು ಸುರಿಸಿ, ಸ್ವತಂತ್ರ ರಾಜ್ಯ ಸ್ಥಾಪಿಸುವುದಕ್ಕೆ ಹೆಣಗಿದ್ದರೋ, ಅವರ ಹಿತಾಸಕ್ತಿಯನ್ನು ಕಡೆಗಣಿಸಿ, ಕೇವಲ ತಮ್ಮ ಸ್ವಾರ್ಥಸಾಧನೆಗಾಗಿ ಕಚ್ಚಾಟ ಸಾಗಿಸುವುದನ್ನು ಕಂಡು, ಅವರು ಸುಮ್ಮನಿರಲಾಗಲಿಲ್ಲ. ಯಾವುದೇ ರಾಜ್ಯದ ಅಧಿಕಾರ ಅದರ ಸೈನ್ಯದ ಬಲದ ಮೆಲಿರುವುದು ಸತ್ಯವಷ್ಟೇ. ಈಗ ಸಿಖ್ ಸೈನಿಕರ ಸರದಿಯಾಗಿತ್ತು ರಾಜ್ಯದ ರಾಜ್ಯಭಾರದ ಹೊಣೆ ಹೊರೆಯಲಿಕ್ಕೆ ! ಅವರು ತಮ್ಮಲ್ಲೇ ಒಂದು ಸಂಘ ಕಟ್ಟಿಕೊಂಡರು. ಅದಕ್ಕೆ 'ಪಂಚೀ' ಎಂದು ಕರೆದರು.

'The third great factor in the situation was the Sikh army, of which the special peculiarity was its democratic character; fact, it may, perhaps, be most easily realised by the analogy of a trade union. Apart from military organization of officers and men, there was a system of what were called Panchayats or communities of five chosen by the men, for companies, regiments and battalions, dariving their form from the prevalent customs of village governments. These committees guided the united action of the soldiery, were able to appear as respresenting the Khalsa in arms and to dictate to the 'Durbar' or courts itself. As yet, however, they did not know their own power. The political aspirants were already aware of the advantage to be derived from having the army with them, but the army itself did not for some time begin to take the intiative. When the army did assert itself, it did so in the name of the Khalsa and the position presents a closer resemblance to the days when in England the army of the Parliament dictated to the Government, than to any other.'

(P 39 The Sikhs and The Sikhs wars by Charles Gough)

ಶೇರ್‌ಸಿಂಗ್, 'ಪಂಚೀ' ಗಳನ್ನು ಸಂಪರ್ಕಿಸಿ ಅವರ ಸಹಾಯ ಬೇಡಿದ. ಅವರು ಕೋರಿದ ಹೆಚ್ಚಿನ ಸಂಬಳ ಭತ್ಯೆ ಇತ್ಯಾದಿಗಳನ್ನು ಪೂರೈಸಲು ಒಪ್ಪಿದ. ಅವರು

ನೀಡಿದ ಅಭಯದಿಂದ ಉತ್ತೇಜಿತನಾಗಿ ಲಾಹೋರ್ ಕೋಟೆಯ ಮೇಲೆ ದಾಳಿ ನಡೆಸಿದ. ಕೋಟೆಯ ಒಳಗಿದ್ದ ರಾಣಿ ಚಾಂದ್‌ಕೌರ್ ಮತ್ತು ಅವಳ ಪರಿವಾರದವರು ಶಾಂತಿ ಬಯಸಿ, ಕೋಟೆಯಿಂದ ಹೊರಬಂದಳು. ಅವಳೊಂದಿಗೆ, ಡೋಗ್ರಾ ರಾಜರಾದ ಗುಲಾಬ್‌ಸಿಂಗ್, ಹರಿಸಿಂಗ್ ಮತ್ತು ಸಂಧಿಯಾನ್ ವಾಲಿ ಸರದಾರರು ಶಾಂತಿ ಒಪ್ಪಂದಕ್ಕೆ ಸಹಿ ಹಾಕಿ, ಜಮ್ಮೂ ನಗರದತ್ತ ಪಯಣಿಸಿದರು. ರಾಣಿಗೆ ೯ ಲಕ್ಷ ವಾರ್ಷಿಕ ಪಿಂಚಣಿ ಮತ್ತು ಜಮ್ಮೂವಿನ ಆಸುಪಾಸಿನ ಪ್ರದೇಶದ ಜಾಗೀರ್ ನೀಡಲಾಯಿತು. ಅದರ ಉಸ್ತುವಾರಿಯ ಹೊಣೆಯನ್ನು ಡೋಗ್ರಾ ರಾಜ ಗುಲಾಬ್ ಸಿಂಗ್‌ಗೆ ನೀಡಲಾಯಿತು. ಕೋಟೆಯಿಂದ ನಿರ್ಗಮಿಸಿದ ಗುಲಾಬ್‌ಸಿಂಗ್, ತನ್ನೊಂದಿಗೆ ೮೦ ಲಕ್ಷ ಹಣ, ದ್ರವ್ಯ, ಆಭರಣಗಳನ್ನು ಕೊಂಡೊಯ್ದ. *

ಶೇರ್‌ಸಿಂಗ್, ಜನವರಿ ೨೭, ೧೮೪೧ ರಂದು ಸಿಂಹಾಸನವನ್ನೇರಿದ. ಧ್ಯಾನ್‌ಸಿಂಗ್ ಪ್ರಧಾನಿಮಂತ್ರಿಯಾದ. ಈಗ ಅವನಿಗೆ ದಾರಿ ಸುಗುಮವಾಗಿತ್ತು ರಾಜ್ಯವನ್ನು ಉನ್ನತಮಟ್ಟಕ್ಕೆ ಏರಿಸಲು. ಅವನ ಶತ್ರುಗಳಾದ ಸರದಾರ್ ಅತ್ತರ್‌ಸಿಂಗ್ ಮತ್ತು ಅಜಿತ್‌ಸಿಂಗ್ ಸಂಧಾನ್‌ವಾಲಿಯಾ ಬ್ರಿಟಿಷ್ ಆಡಳಿತದಲ್ಲಿದ್ದ ಲೂಧಿಯಾನಕ್ಕೆ ಓಡಿ ತಪ್ಪಿಸಿಕೊಂಡಿದ್ದರು. ಸರದಾರ್ ಲೆಹ್ನಾಸಿಂಗ್‌ನನ್ನು ಸೆರೆ ಹಿಡಿಯಲಾಯಿತು.

ಬಲ್ಟೀಸ್ಥಾನದ ಪಠಾಣ ನವಾಬ ಅಹ್ಮದ್‌ಶಾ ಲಡಾಕ್‌ನ ಮೇಲೆ ಆಕ್ರಮಣ ಮಾಡಿದ ಸುದ್ದಿ ಅರಿತ ಶೇರ್‌ಸಿಂಗ್, ಒಡನೆಯೇ ಒಂದು ಬಲಿಷ್ಠ ಸೈನ್ಯ ತೆಗೆದುಕೊಂಡು ಅಲ್ಲಿಗೆ ಧಾವಿಸಲು ತನ್ನ ಸರದಾರರಿಗೆ ಆಜ್ಞಾಪಿಸಿದ. ಅವರು ಪಠಾಣನ ಆಕ್ರಮಣವನ್ನು ತಡೆದು ಲಡಾಕ್‌ನ್ನು ರಕ್ಷಿಸಿದರು. ಇದೇ ಸಮಯದಲ್ಲಿ ಸಿಖ್ ಸೈನ್ಯ ತಿಬೆಟ್‌ನ ರಾಜಧಾನಿ ಲ್ಹಾಸಾ ತಲುಪಿತು ಎಂದಿದ್ದಾರೆ ಇತಿಹಾಸಕಾರರು. ಚೀನಾದ ಚಕ್ರವರ್ತಿ ಮತ್ತು ತಿಬೆಟ್‌ನ ದಲೈ ಲಾಮಾರೊಂದಿಗೆ ಲಡಾಕ್‌ನ ಮೇಲೆ ತಮ್ಮ ಅಧಿಕಾರವಿರಿಸಿಕೊಳ್ಳಲು ಒಂದು ಸಂಧಿ ಮಾಡಿಕೊಂಡರು. ಭಾರತದ ಗಡಿ ಅಂದಿನಿಂದ ಲಡಾಕ್ ಪ್ರದೇಶದವರೆಗೆ ಸೀಮಿತಗೊಂಡಿತು ಎಂದರು ಇತಿಹಾಸಕಾರರು. ೧೩

ರಾಜಕುಟುಂಬದಲ್ಲಿ ಶಾಂತಿ, ಒಮ್ಮನಸ್ಸು, ನೆಮ್ಮದಿ ಹೊಂದುವ ಬಯಕೆ ಹೊತ್ತ ಶೇರ್‌ಸಿಂಗ್, ತನ್ನ ಒಬ್ಬ ಸಂಬಂಧಿಯನ್ನು ರಾಣಿ ಚಾಂದ್ ಕೌರ್‌ಳ ಬಳಿ ಕಳುಹಿಸಿ ಆಕೆಯನ್ನು ತಾನು ಲಗ್ನವಾಗುವುದಾಗಿ ತಿಳಿಸಿದ. ಈ ಲಗ್ನದಿಂದ ಎರಡೂ ಕುಟುಂಬಗಳ ಮಧ್ಯೆ ಇದ್ದ ಕಲಹ, ವೈಮನಸ್ಸು, ಅವಿಶ್ವಾಸಗಳು ದೂರವಾಗಿ, ರಾಜ್ಯದ ಸುಭದ್ರತೆಗೆ ಅದು ನಾಂದಿ ಹಾಡಬಹುದು ಎಂದು ತಿಳಿಸಿದ. ಆಕೆ, ಕೂಡಲೇ ರಾಜನ ಸೂಚನೆಗೆ ಸಮ್ಮತಿಸದಿದ್ದರೂ, ಕೆಲ ಕಾಲದ ನಂತರ ತನ್ನ ಒಪ್ಪಿಗೆ ನೀಡಿದಳು. ಆದರೆ ಸುದ್ದಿ ಅರಿತ ಗುಲಾಬ್ ಸಿಂಗ್ ಹೆದರಿದ. ರಾಣಿಯ ಲಗ್ನದಿಂದ ಎರಡೂ ಮನೆತನಗಳ

---

* P 533 History of Sikhs by G. Singh

೧೩. P 534 History of Sikh People by G.Singh

ಒಗ್ಗೂಡುವಿಕೆ ತನ್ನ ಹಿತಾಸಕ್ತಿ, ಆಸೆ, ಆಕಾಂಕ್ಷೆಗಳಿಗೆ ಧಕ್ಕೆ ಬರುತ್ತದೆ ಎಂದು ಬಗೆದು, ಈಗಾಗಲೇ ಜಮ್ಮೂ ಪ್ರದೇಶದಲ್ಲಿ ತನ್ನ ಹತೋಟಿ ಇರಿಸಿಕೊಂಡು, ರಾಣಿಯ ಸಂಪತ್ತನ್ನು ಲೂಟಿ ಹೊಡೆದ ಆತ ಈ ಲಗ್ನದಿಂದ ತನ್ನ ಉಳಿಗಾಲವಾಗುವುದಿಲ್ಲ ಎಂದು ಬಗೆದ. ಆತ ಪಿತೂರಿ ಹೂಡಿದ. ರಾಣಿಯ ಸಹೋದರ ಚಂದಾ ಸಿಂಗ್ ಕನ್ಹಯ್ಯಾನೊಂದಿಗೆ ಸಮಾಲೋಚಿಸಿದ. ರಾಣಿಗೆ ಲಗ್ನವಾಗಲು ತಡೆಒಡ್ಡುವಂತೆ ಅವನ ಮನಸ್ಸನ್ನು ತಿರುಗಿಸಿದ. ಸಹೋದರ, ಶೇರ್‌ಸಿಂಗ್ ರಾಣಿಯನ್ನು ಲಗ್ನವಾದ ನಂತರ ಕೊಲೆ ಮಾಡಿ ಅವಳನ್ನು ಮುಗಿಸುವ ಹಂಚಿಕೆ ಹಾಕಿದ್ದಾನೆಂದು ಆಕೆಗೆ ಹೆದರಿಸಿದ. ರಾಣಿ ಅವನ ಮಾತಿಗೆ ಹೆದರಿ, ತನ್ನ ನಿರ್ಧಾರವನ್ನು ಹಿಂತೆಗೆದುಕೊಂಡಳು. ಆದರೆ ಶೇರ್‌ಸಿಂಗ್ ಆಕೆಯನ್ನು ಸಾಯಿಸಲಿಲ್ಲ. ಗುಲಾಬ್ ಸಿಂಗ್‌ನೇ ಆಕೆಯ ಕೊಲೆಯನ್ನು ತಾನು ನೂತನವಾಗಿ ನೌಕರಿಯಲ್ಲಿರಿಸಿದ ನಾಲ್ಕು ಹೆಣ್ಣು ನೌಕರರಿಂದ, ವಿಷಪ್ರಾಶನ ಮಾಡಿಸಿ ಸಾಯಿಸಿದನು. ಗುಲಾಬ್‌ಸಿಂಗ್ ರಾಣಿಯ ಸಾವಿನಿಂದ ಆಕೆಯ ಸಮಸ್ತ ಆಸ್ತಿಪಾಸ್ತಿಯನ್ನು ಹೊಡೆದುಕೊಂಡು ಶ್ರೀಮಂತನಾದ. ೧೪

14. P 27 The Country of the Sikhs by Stein Bach

'. . . .She was murdered by her own slave girls at the instigation of Sher Singh and Dhyan Singh making good the political axiom that the loss of life soon follows the loss of power. . .'

(P 27 The Country of the Sikhs by Stein Bach)

ಇತ್ತ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಡಳಿತಗಾರರು ಸುಮ್ಮನೆ ಕುಳತಿರಲಿಲ್ಲ. ಅವರು ರಣಜಿತ್ ಸಿಂಗ್ ಜೀವಿಸಿರುವವರೆಗೂ ಪಂಜಾಬ್ ಪ್ರಾಂತ್ಯವನ್ನು ಒಂದು ತಡೆಗೋಡೆಯ ತರಹ (Buffer state) ಆಫ್ಘನೀಸ್ಥಾನ್ ಪರ್ಶಿಯಾ, ದೂರದ ರಶಿಯಾ ಮತ್ತು ತಮ್ಮ ಅಜೀವ ಪ್ರತಿಸ್ಪರ್ಧಿಯಾದ ಫ್ರಾನ್ಸ್ ದೇಶಗಳಿಂದ ಭಾರತದ ಮೇಲೆ ಆಕ್ರಮಣ ತಪ್ಪಿಸಲು, ಉಪಯೋಗಿಸುತ್ತಿದ್ದರು. ಈಗ ಪಂಜಾಬ್ ಆಂತರಿಕ ದಳ್ಳುರಿಯಿಂದ ಉರಿಯುತ್ತಿದ್ದ ವಿಷಯ ಅವರ ಗಮನಕ್ಕೆ ಬಂದ ಕೂಡಲೆ, ಅವರು ಕಾರ್ಯಪ್ರವರ್ತರಾದರು. ಪಂಜಾಬ್‌ನ ಆಂತರಿಕ ವ್ಯವಹಾರಗಳಲ್ಲಿ ಕೈಹಾಕಿ, ತಮ್ಮ ಪ್ರಭಾವ ಬೀಳಲು ಪ್ರಯತ್ನ ಪ್ರಾರಂಭಿಸಿದರು. 'ಅನೈಕ್ಯತೆಯ ವ್ಯಾಧಿ' ಭಾರತೀಯರನ್ನು ಕಾಡಿ, ಅವರನ್ನು ಪರಕೀಯರ ಗುಲಾಮರನ್ನಾಗಿ ಮಾಡಿ, ಈಗ ಕೊನೆಯ ಸ್ವತಂತ್ರ ಪಂಜಾಬಿ ಸಿಖ್ ರಾಷ್ಟ್ರದ ಸರದಿಯಾಗಿತ್ತು. ಆ ವ್ಯಾಧಿ ರಾಜ್ಯದ ಆಡಳಿತಗಾರರನ್ನು ಕಾಡಿತು.

He had really accomplished the enterprise with smaller means and resources than those possessed by the English when they had fixed themselves securely in Bengal with a

base on the sea; and great host which he routed at Paniput at the beginning of his campaign, was a far more formidable army than the English ever encountered in India until they met the Sikhs, at the end of a century's fighting. nOw, what had been done before could be done again, and was indeed likely to be done again, for the whole country was quite incapable of resisting foreign invasion. So when at the opening of the eighteenth century the Moghul empire was evidently declining towards a fall, and people were speculating upon what might come after it, we find floating in the minds of cool observers the idea that the next conquest of India might possibly be made by Europeans.

Lyall writes in his book that M. de Conde or M. de Turenne with 20,000 men could conquuer all india; and who in his letter to Colbert lays particular stress first on the riches, secondly on the weakness, of Bengal. But in 1746 one Colonel James Mill, who had been twenty years in India, submitted to the Australian Emperor a scheme for conquering Bengal as a very feasible and profitable undertaking. 'The whole country of Hindusthan,' he says, 'or empire of the Great Moghul, is, and ever has been, in a state so feeble and defenceless that it is almost a miracle that no prince of Europe, with a martime power at command, has not as yet thought of making such acquisitions there as at one stroke would put him and his subjects in possession of infinite wealth. . .

He discerns the central points, he places, his finger upon the elementary causes of India's permanent weakness, her political instability within, and her sea-coast exposed and undefended externally. Within ten or twelve years the English had carried out Colonel Mill's scheme; and it will be shown hereafter that when Bengal had been taken the fur-

ther expansion of our dominion was quite clearly foreseen. By those on the spot it was treated not as accidental but as inevitable.

(P 126 Britsh Dominion in India by Lyall)

ಬ್ರಿಟಿಷ್ ಏಜೆಂಟ್ ಕ್ಲಾರ್ಕ್ ಅಮೃತಸರಕ್ಕೆ ಬಂದು ಮಹಾರಾಜ ಶೇರ್‌ಸಿಂಗ್‌ನೊಂದಿಗೆ ಸಮಾಲೋಚನೆ ಜರುಗಿಸಿದನು. ತಮ್ಮ ಪ್ರದೇಶದಲ್ಲಿ ಆಶ್ರಯ ಪಡೆದ ಸರದಾರ ಅತ್ತರ್‌ಸಿಂಗ್ ಮತ್ತು ಅಜಿತ್ ಸಿಂಗ್ ಸಂಧಾನ್‌ವಾಲಿಯಾರನ್ನು ವಾಪಸ್ಸು ಕರೆಸಿಕೊಂಡು, ಅವರಿಗೆ ಸೂಕ್ತ ಸ್ಥಾನಮಾನ ನೀಡುವುದಲ್ಲದೆ, ಸೆರೆಯಲ್ಲಿದ್ದ ಲೆಹ್ನಾಸಿಂಗ್‌ನನ್ನು ಬಿಡುಗಡೆ ಮಾಡಬೇಕೆಂಬ ಕೋರಿಕೆ ಸಲ್ಲಿಸಿದ ಕ್ಲಾರ್ಕ್. ಬ್ರಿಟಿಷ್‌ರ ಒತ್ತಡಕ್ಕೆ ಮಣಿದ ಶೇರ್‌ಸಿಂಗ್ ಅವರ ಕೋರಿಕೆಯನ್ನು ಮನ್ನಿಸಿದ. ಅದೇ ಮುಳುವಾಯಿತು ಶೇರ್‌ಸಿಂಗ್‌ನಿಗೆ. ಮೂವರು ಸರದಾರರ ಬಿಡುಗಡೆಯಾಗಿ, ಆಸ್ಥಾನದಲ್ಲಿ ಸೂಕ್ತ ಸ್ಥಾನಮಾನ ದೊರೆತು ಅವರು ರಾಜನ ಆಪ್ತತೆಯನ್ನು ಕೂಡ ಪಡೆದರು. ಶೇರ್‌ಸಿಂಗ್ ಅವರನ್ನು ಕರುಣೆಯಿಂದ, ಪ್ರೀತಿಯಿಂದ ಕಂಡರೂ, ಅವರ ಸಂಪೂರ್ಣ ವಿಧೇಯತೆ, ಬದ್ಧತೆಗಳನ್ನು ಪಡೆಯಲಿಲ್ಲ. ಕುತಂತ್ರಿ ಜಮ್ಮೂ ರಾಜ ಧ್ಯಾನ್‌ಸಿಂಗ್ ಸುಮ್ಮನೆ ಕೂಡಲಿಲ್ಲ. ಅವನು ಮೂವರು ಸರದಾರರನ್ನು ಸಂಪರ್ಕಿಸಿ, ಅವರು ರಾಜನ ವಿರುದ್ಧ ಪಿತೂರಿ ಎಸಗುವಂತೆ ತಂತ್ರ ರೂಪಿಸಿದ. ಅವರೂ ಕೂಡ, ರಾಜ ಶೇರ್‌ಸಿಂಗ್, ಡೋಗ್ರಾ ಪ್ರಧಾನಿ ವಿರುದ್ಧ ಹಗೆತನ ಹೊರುವಂತೆ ಮಾಡಿ, ಅವನಿಂದ ಕುಟಿಲತೆಯಿಂದ ಧ್ಯಾನ್‌ಸಿಂಗ್‌ನ ಹತ್ಯೆ ಮಾಡುವ ಆಜ್ಞೆಯನ್ನು ತಯಾರು ಮಾಡಿ, ರಾಜನ ಸಹಿ ಪಡೆದು, ಅದನ್ನು ಧ್ಯಾನ್‌ಸಿಂಗ್‌ಗೆ ತೋರಿಸಿ, ಅವನನ್ನು ಕೆರಳುವಂತೆ ಮಾಡಿದರು. ಪಿತೂರಿಗಾರರು, ರಾಜ ಶೇರ್‌ಸಿಂಗ್‌ನ ಹತ್ಯೆ ಮಾಡಲು ಧ್ಯಾನ್‌ಸಿಂಗ್‌ನ ಅಪ್ಪಣೆ ಮತ್ತು ಸಹಾಯ ಪಡೆದು ಕಾರ್ಯೋನ್ಮುಖರಾದರು. ಸಮಯ ಸಾಧಿಸಿ, ಶೇರ್‌ಸಿಂಗ್ ತನ್ನ ಒಬ್ಬನೇ ಅಂಗರಕ್ಷಕನೊಂದಿದ್ದಾಗ, ಅವನ ಹತ್ಯೆ ಎಸಗಿದರು. ಅವನ ೧೨ ವರ್ಷ ವಯಸ್ಸಿನ ಮಗ ಕನ್ವರ್ ಪ್ರತಾಪ್‌ಸಿಂಗ್‌ನನ್ನು ಅವನು ಎಷ್ಟೇ ಬೇಡಿಕೊಂಡರೂ, ಅವನ ಕತ್ತು ಕಡಿದು ಹಾಕಿದರು. ಹತ್ಯೆಯಾದ ಈರ್ವರ ಶವಗಳನ್ನು ಡೋಗ್ರಾ ಪ್ರಧಾನಿ ಧ್ಯಾನ್‌ಸಿಂಗ್‌ನ ಮನೆಗೆ ತೆರಳಿ ಅವನ ಮುಂದೆ ಬಿಸಾಡಿದರು. ಅದನ್ನು ನೋಡಿದ ಧ್ಯಾನ್‌ಸಿಂಗ್ ಬೆಚ್ಚಿ ಬಿದ್ದ. ಹೆದರಿದ ಆತ, ಐದು ವರ್ಷ ವಯಸ್ಸಿನ ರಣಜಿತ್‌ಸಿಂಗ್‌ನ ಮಗ ದಿಲೀಪ್‌ಸಿಂಗ್‌ನಿಗೆ ಪಟ್ಟ ಕಟ್ಟುವಂತೆ ಕೊಲೆಗಾರರನ್ನು ಕೋರಿದ. ಆದರೆ ಅವನ ಮಾತಿಗೆ ಸೊಪ್ಪು ಹಾಕದ ಕೊಲೆಗಾರರು, ಧ್ಯಾನ್‌ಸಿಂಗ್‌ನನ್ನು ಎಳೆದು ತಂದು ಅವನ ಕತ್ತನ್ನು ಕಡಿದರು ! ಪಿತೂರಿಗಾರ ಧ್ಯಾನ್‌ಸಿಂಗ್ ತನ್ನ ಸಾವನ್ನು ತನ್ನ ಕೈಯಿಂದಲೇ ಪಡೆದಿದ್ದ !

ಪ್ರಧಾನಿ ಧ್ಯಾನ್‌ಸಿಂಗ್‌ನ ಹತ್ಯೆಯ ಸುದ್ದಿ ತಿಳಿದ ಆತನ ಮಗ ಹಿರಾಸಿಂಗ್ ಕ್ರೋಧದಿಂದ ಉರಿದೆದ್ದ. ಪ್ರತೀಕಾರದ ರೊಚ್ಚು ಅವನ ಮೈಮನಗಳಲ್ಲಿ

ಕುದಿಯತೊಡಗಿತ್ತು. ಆತ ತನ್ನ ಇದ್ದಬದ್ದ ಸೇವಕ ಸೈನಿಕರನ್ನು ಒಟ್ಟುಗೂಡಿಸಿದ. ಸಿಖ್ ಸೈನ್ಯವನ್ನು ಉದ್ರೇಕಿಸಿದ. ಸಿಖ್ ಸೈನ್ಯದಲ್ಲಿ ನೌಕರಿಯಲ್ಲಿದ್ದ ಯೂರೋಪಿಯನ್ ಸೈನ್ಯಾಧಿಕಾರಿಗಳ ಒಪ್ಪಿಗೆ ಪಡೆದ. ಲಾಹೋರ್‌ನ ಕೋಟೆಯೊಳಗೆ ಬಚ್ಚಿಟ್ಟುಕೊಂಡಿದ್ದ ಪಿತೂರಿಗಾರರನ್ನು ಸೆರೆ ಹಿಡಿದ. ಅವರ ಹತ್ಯೆ ಮಾಡಿದ.

ಐದು ವರ್ಷ ವಯಸ್ಸಿನ ದಿಲೀಪ್ ಸಿಂಗ್‌ನನ್ನು ಸೆಪ್ಟೆಂಬರ್ ೧೮೪೩ ರಲ್ಲಿ ಮಹಾರಾಜನೆಂದು ಘೋಷಿಸಲಾಯಿತು. ಅವನ ರೀಜೆಂಟ್‌ಳಾಗಿ, ರಾಣಿ ಜಿಂಡನ್ ನೇಮಕಗೊಂಡಳು. ಪ್ರಧಾನಿಯಾಗಿ ಹರಿಸಿಂಗ್ ನೇಮಕಗೊಂಡ. ಅವನು ಅತ್ಯಂತ ಪ್ರಭಾವಶಾಲಿ ಪ್ರಧಾನಿಯಾಗಿ ಹೊರಹೊಮ್ಮಿದ. ಅವನ ಬಲಗೈ ಬಂಟನಾಗಿ, ಬ್ರಾಹ್ಮಣಕುಲದ ಜೋತಿಷಿ ಪಂಡಿತ್ ಜಲ್ಲಾ ವಿಜೃಂಭಿಸಿದ. ೧೬

ಹಿರಾ ಸಿಂಗ್‌ನ ಬಗ್ಗೆ ಇತಿಹಾಸಕಾರರು ಸಾಕಷ್ಟು ಬೆಳಕು ಚೆಲ್ಲಿರುತ್ತಾರೆ. ರಣಜಿತ್‌ಸಿಂಗ್, ಡೋಗ್ರಾ ಪ್ರಧಾನಿಯ ಮಗ ಹಿರಾಸಿಂಗ್‌ನನ್ನು ತನ್ನ ಮಗನಂತೆಯೇ ಕಂಡು, ಅವನಿಗೆ ಅವನ ೧೩ನೆಯ ವಯಸ್ಸಿನಲ್ಲೇ 'ರಾಜಾ' ಬಿರುದು ನೀಡಿ ಗೌರವಿಸಿದ. ರಾಜ ತನ್ನ ಬಳಿ ಬಾಲಕ ಹಿರಾಸಿಂಗ್ ಬಂದಾಗ ಅವನಿಗೆ ಕುರ್ಚಿ ನೀಡಿ ಕುಳ್ಳಿರಿಸಿದರೆ, ಅವನ ತಂದೆ ಡೋಗ್ರಾ ಪ್ರಧಾನಿ ಧ್ಯಾನ್‌ಸಿಂಗ್, ತನ್ನ ಹಿಂದೆ ಕೈಕಟ್ಟಿ ನಿಲ್ಲುವಂತೆ ಮಾಡುತ್ತಿದ್ದ ! ಬಾಲಕನು ಪವಡಿಸುವ ಹಾಸಿಗೆಯ ದಿಂಬಿನ ಕೆಳಗೆ ಐದು ನೂರು ರೂಪಾಯಿಗಳ ಹಣವನ್ನು ಇರಿಸಿ, ಬೆಳಿಗ್ಗೆ ಅವನು ಎದ್ದ ಕೂಡಲೆ, ಅ ಹಣವನ್ನು ಅವನಿಂದ ಬಡವರಿಗೆ ದಾನ ಮಾಡುವ ಕ್ರಮ ಇರಿಸಿಕೊಂಡಿದ್ದ.

ಹಿರಾಸಿಂಗ್ ತನ್ನ ಕುಟುಂಬವನ್ನು ಜಮ್ಮೂವಿನಲ್ಲೇ ಇರಿಸಿ ತನ್ನ ವಾಸ್ತವ್ಯಕ್ಕೆ ಲಾಹೋರ್‌ನಲ್ಲಿ ಒಂದು ಮಹಲ್ ನಿರ್ಮಿಸಿ ಅಲ್ಲೇ ವಾಸಿಸುತ್ತಿದ್ದ. ಅದಕ್ಕೆ ಈಗಲೂ 'ಹಿರಾ ಮಂಡಿ' ಎಂದು ಕರೆಯುಲಾಗುತ್ತದೆ. (ಈಗ ಅದು ಒಂದು ನೃತ್ಯಗೃಹವಾಗಿದೆಯಂತೆ) ಹಿರಾಸಿಂಗ್‌ನನ್ನು ಸಿಖ್ ಸೈನಿಕರು ಪ್ರೀತಿಸಿ ಆರಾಧಿಸಿದರು. ಅವನು ಮಾತ್ರ ನಿರಂಕುಶ ಪ್ರಭುವಾಗಿ ಹೊರಹೊಮ್ಮಿದ. ಸೈನಿಕರಿಗೆ ವಿಶಿಷ್ಟ ಭತ್ಯೆ ನೀಡಿ ಅವರ ಪ್ರೀತಿ ಗಳಿಸಿದರೂ, ಅನೇಕ ಬಾರಿ ತಾನು ನೀಡಿದ ಆಶ್ವಾಸನೆಗಳನ್ನೂ ಈಡೇರಿಸದೆ ನಂಬಿಕೆದ್ರೋಹ ಎಸಗುವ ವ್ಯಕ್ತಿಯಾಗಿ ಜನರ ಕೆಂಗೆಣ್ಣಿಗೆ ತುತ್ತಾದ. ರಣಜಿತ್‌ಸಿಂಗ್ ತೋರಿದ ಅಪರಿಮಿತ ಪ್ರೀತಿ, ವಿಶ್ವಾಸ, ಆದರ, ಧನ ವಸ್ತುಗಳ ಕೊಡುಗೆಗಳಿಂದ ಅವನು ದಾರಿ ತಪ್ಪಿದ ಮಗನಂತೆ, ಕ್ರೂರತನ, ಅಸೂಯೆ, ಶತ್ರುತ್ವಗಳ ಮೂಟೆ ಹೊತ್ತು, ತನ್ನ ದಾರಿಗೆ ಅಡ್ಡ ಬಂದ ನೌಕರರನ್ನು ಹಿಂಸಿಸಲು ಪ್ರಾರಂಭಿಸಿದ. ಬಾಲಬಡಕರಿಗೆ, ಆಷಾಢಭೂತಿಗಳಿಗೆ ಮುಖಸ್ತುತಿ ಮಾಡುವ ಹುಂಬರಿಗೆ ಮಣೆ ಹಾಕಿ ಅವರ ಬೇಡಿಕೆಗಳನ್ನು ಮನಃಪೂರ್ವಕವಾಗಿ ಪೂರೈಸಿದ. ತನ್ನ ಇಷ್ಟಕ್ಕೆ ವಿರೋಧಿಸಿದವರನ್ನು ಅನಾದರಿಸಿ, ಅವಹೇಳನ ಮಾಡಿ ಹಿಂಸೆಗೀಡು ಮಾಡಿದ.

೧೬. P 538 History of sikh people by G.Singh

ರಾಜ್ಯದ ಹಿತಕ್ಕಾಗಿ ದುಡಿದ, ಪ್ರಾಮಾಣಿಕ ಹಾಗೂ ನಿಷ್ಠಾವಂತ ರಾಜಾಧಿಕಾರಿಗಳಾದ, ಮುಲ್ತಾನ್ ರಾಜ್ಯಪಾಲ ಸಾವನ್‌ಮಲ್, ಜಮಾದಾರ್ ಕುಶಾಲ್‌ಸಿಂಗ್‌ರ ವಿರುದ್ಧ ಸಮರವನ್ನೇ ಸಾಗಿಸಿ, ಅವರ ಜಾಗೀರುಗಳನ್ನು ಮುಟ್ಟುಗೋಲು ಹಾಕಿ, ಅಂತಿಮವಾಗಿ ಅವರ ಹತ್ಯೆ ಮಾಡಿದ. ರಾಜಕುಮಾರ ಕಶ್ಮೀರಾ ಸಿಂಗ್ ಮತ್ತು ಅತ್ತರ್‌ಸಿಂಗ್ ಸಂಧಾನವಾಲಿಯಾರವರನ್ನು ಹೊಡೆದೋಡಿಸಿ ಅವರು ಆಸರೆ ಪಡೆದಿದ್ದ ಸ್ಥಳಕ್ಕೆ ದಂಡು ಕಳುಹಿಸಿ ಅವರ ಹತ್ಯೆಗೈದ. ಭಾಯಿ ಬೀರ್‌ಸಿಂಗ್ ಎಂಬ ಒಬ್ಬ ಪ್ರಸಿದ್ಧ ಸಿಖ್ ಸಂತನನ್ನು ಕೊಂದ. ಇದರಿಂದ ಕ್ರೋಧಗೊಂಡ ಸಿಖ್ ಸೈನಿಕರನ್ನು, ಹಣದ ಆಮಿಷ ತೋರಿಸಿ ತಾತ್ಕಾಲಿಕ ಶಾಂತಿ ಪಡೆದುಕೊಂಡ. ತಂದೆ ಗುಲಾಬ್‌ಸಿಂಗ್‌ನನ್ನು ಕಾಶ್ಮೀರದ ರಾಜ್ಯಪಾಲನನ್ನಾಗಿ ಮಾಡಿದ ಮೇಲೆ, ತನ್ನಲ್ಲಿ ಗುಪ್ತವಾಗಿ ಹುದುಗಿದ್ದ ಮಹದಾಸೆಯಾದ ಪಂಜಾಬ್‌ನ ಮಹಾರಾಜನಾಗುವ ಕನಸ್ಸನ್ನು ನನಸು ಮಾಡುವ ನಿಟ್ಟಿನಲ್ಲಿ ಕಾರ್ಯಸಾಧನೆ ಮಾಡುವತ್ತ ದೃಷ್ಟಿ ಹರಿಸಿದ. ಅವನ ಈ ಕನಸ್ಸನ್ನು ನನಸು ಮಾಡುವ ಕಾಯಕದಲ್ಲಿ ತಂದೆ ಗುಲಾಬ್‌ಸಿಂಗ್ ತನ್ನ ಕೈಲಾದ ಸಹಾಯ ಮಾಡಿದ. ಈಗಾಗಲೇ ಡೋಗ್ರಾ ರಾಜರ ಆಧೀನದಲ್ಲಿದ್ದ ಜಮ್ಮೂ, ಕಾಶ್ಮೀರ್‌ಗಳ ಜೊತೆಗೆ, ಸಿಖ್ ರಾಜ್ಯಕ್ಕೆ ಸೇರಿದ ಪೆಶಾವರ್, ಮುಲ್ತಾನ್ ದೇರಾ ಇಸ್ಮೈಲ್‌ಖಾನ್ ಪ್ರದೇಶಗಳನ್ನು ತನ್ನ ಹತೋಟಿಗೆ ತೆಗೆದುಕೊಂಡು, ತಾನೇ ಸಂಪೂರ್ಣ ಪಂಜಾಬ್‌ನ ಮಹಾರಾಜ ಎಂದು ಘೋಷಿಸಿಕೊಳ್ಳಲು ತಯಾರಿ ನಡೆಸಿದ.

'. . . .there are perhaps no charecterless in Punjab history more repulsive than Rajas Dhyan Singh and Gulab Singh, their splendid talents and undoubted bravery only render more conspicuous their atrocious cruelty, their treachary, their avarice and their unscrupulous ambition." (Sir Lapel Griffin)

ಸರ್ ಲೆಪೆಲ್ ಗ್ರಿಫಿನ್ ಎಂಬ ಇಂಗ್ಲಿಷ್ ಗಣ್ಯ ಪುರುಷ ನುಡಿದ ಈ ಉವಾಚ, ಡೋಗ್ರಾ ಕುಟುಂಬದವರ ಗುಣ ವಿಶೇಷಗಳನ್ನು ಚಿತ್ರಿಸುತ್ತವೆ. ೧೭

ಹಿರಾಸಿಂಗ್‌ನ ಹಿರಿಯಾಸೆಗೆ ಇಂಬು ನೀಡಿದ ಅವನ ಆಪ್ತ ಸ್ನೇಹಿತ ಜ್ಯೋತಿಷಿ ಜಲ್ಲಾ ಪಂಡಿತ್. ಅವನು ನೀಡಿದ ಸಲಹೆ ಮತ್ತು ಭವಿಷ್ಯ ಸೂಕ್ತಿಗಳು ಹರಿಸಿಂಗ್‌ನಿಗೆ ವೇದವಾಕ್ಯಗಳಾಗಿದ್ದವು. ಹಿರಾಸಿಂಗ್‌ನ ಬಲಗೈ ಬಂಟನಾಗಿ ಮೆರೆದ ಜ್ಯೋತಿಷಿ ಸರ್ವರನ್ನು ಎದುರು ಹಾಕಿಕೊಂಡ. ಅವನ ಪ್ರಭಾವ ಮತ್ತು ಶಕ್ತಿ ಅರಿತ ಇತರ ಸರದಾರರು, ಆಸ್ಥಾನದ ಸ್ಥಾನಿಕರು ಅವನನ್ನು ಕೊನೆಗಾಣಿಸಲು ಸಮಯ ಕಾದರು. ಅವನ ಉಪಟಳ ತಾಳಲಾರದೆ, ಸ್ವಯಂ ಗುಲಾಬ್‌ಸಿಂಗ್, ಜ್ಯೋತಿಷಿಯ ಜಮ್ಮೂವಿನ ಕುಟುಂಬ ವರ್ಗದವರನ್ನು ಸೆರೆಹಿಡಿದು ಸೆರೆಮನೆಗೆ ನೂಕಿದ. ಅವರನ್ನು ಉಪವಾಸ

---

೧೭. P 540 History of sikh people by G.Singh

ಕೆಡವಿದ. ಕೊನೆಗೆ ಹರಿಸಿಂಗ್‌ನ ಆದೇಶದಂತೆ ಅವರು ಬಿಡುಗಡೆಯಾದರೂ ತಪ್ಪಿಸಿಕೊಂಡು ರಾಜಧಾನಿಗೆ ಬರುವಾಗ, ದಾರಿಯಲ್ಲಿ ೩೦ ಮಂದಿಯ ಅವರ ಕುಟುಂಬದ ವರ್ಗದವರ ಹತ್ಯೆ ಮಾಡಲಾಯಿತು. ಡೋಗ್ರಾ ಸಹೋದರರು, ಹತ್ಯೆಯಾದ ಧ್ಯಾನ್‌ಸಿಂಗ್‌ನ ಮಗ ಹಿರಾಸಿಂಗ್ ಪ್ರಧಾನಿಯಾಗಿ ತಮ್ಮ ಮೇಲೆ ಅಧಿಕಾರ ಜರುಗಿಸಿ ತಮ್ಮ ಅಸ್ತಿತ್ವಕ್ಕೆ ಸಂಚಕಾರ ನೀಡುವ ದಾರಿಯಲ್ಲಿ ಸಾಗಿದ್ದನ್ನು ಅರಿತು ಅವರು ಜಾಗರೂಕರಾದರು. ಅವರು ಹಿರಾಸಿಂಗ್‌ನಿಗೆ ಬುದ್ಧಿವಾದ ಹೇಳಿದರು. ಜ್ಯೋತಿಷಿಯ ಕೈ ಬಿಡುವಂತೆ ಸಲಹೆ ನೀಡಿದರು. ಹಿರಾ ಸಿಂಗ್ ಮಾತ್ರ ಅಧಿಕಾರದ ಮದದಲ್ಲಿ ಹುಚ್ಚನಾಗಿದ್ದ. ಜ್ಯೋತಿಷಿಯ ಕೈ ಮುಷ್ಠಿಯಲ್ಲಿ ಸಿಲುಕಿದ ಆತ ತನ್ನ ಅವನತಿಯನ್ನು ಮತ್ತು ತನ್ನ ನಾಶವನ್ನು ಆ ಭವಿಷ್ಯಕಾರನ ಭವಿಷ್ಯದಲ್ಲಿ ಕಾಣಲಾರದೆ, ವಿನಾಶದಂಚಿಗೆ ತಲುಪಿದನು.

ಇನ್ನೊಬ್ಬರ ಕಂಟಕ, ಸುಖದುಃಖಗಳ ಭವಿಷ್ಯವನ್ನು ನುಡಿಯಲು ಸಮರ್ಥನೆಂದು ಸಾರಿ, ಹಿರಾಸಿಂಗ್‌ನ ಸ್ನೇಹ ಸಂಪಾದಿಸಿ ಅವನಂತೆ ತಾನು ಅಧಿಕಾರವನ್ನು, ಅಂತಸ್ತನ್ನು, ಹಣವನ್ನು, ಸಂಪಾದಿಸಿದರ ಪ್ರಯುಕ್ತ ಅವನ ಅಹಂಕಾರದ ಬೇಗೆ ಮಿತಿ ಮೀರಿತು. ಆತ, ಗುಲಾಬ್‌ಸಿಂಗ್‌ನಲ್ಲದೆ, ಸಮಸ್ತ ಪ್ರಜೆಗಳನ್ನು ಮತ್ತು ರಾಜ್ಯದ ಸೈನ್ಯದ ದ್ವೇಷ ಕಟ್ಟಿಕೊಂಡನು. ರಾಣಿ ಜಿಂದಾನ್‌ಳ ಮೇಲೆ ತನ್ನ ಅಧಿಕಾರ ಸ್ಥಾಪಿಸಲು ಉದ್ಯುಕ್ತನಾಗಿ, ಅವಳ ಬಗ್ಗೆ ಇಲ್ಲಸಲ್ಲದ ಅಪವಾದ ಮಾಡಲುಪಕ್ರಮಿಸಿದೊಡನೆ, ರಾಣಿಗೆ ಸುಮ್ಮನಾಗಿರಲು ಸಾಧ್ಯವಾಗದೇ, ಸೈನ್ಯದ ನೆರವು ಪಡೆಯಲು ಮುಂದಾದಳು. ಸಿಖ್ ಸೈನ್ಯದ 'ಪಂಚ'ರಿಗೆ ತನ್ನ ಅಹವಾಲನ್ನು ಹೇಳಿ ಅವರ ಸಹಾಯ ಕೋರಿದಳು. ತಮ್ಮ ನೆಚ್ಚಿನ ರಾಣಿಗೆ ಆದ ಅವಮಾನ ಸಂಕಟ, ಕಷ್ಟ ನಷ್ಟ ಅವರನ್ನು ರೊಚ್ಚಿಗೆಬ್ಬಿಸಿತು. ಅವರು ಜಲ್ಲಾ ಪಂಡಿತ್ ಮತ್ತು ಪ್ರಧಾನಿ ಹಿರಾ ಸಿಂಗ್‌ರ ವಿರುದ್ಧ ಸಮರ ಸಾರಿದರು. ಸಂಗತಿ ಅರಿತ ಹಿರಾಸಿಂಗ್ ಗುಲಾಬ್‌ಸಿಂಗ್‌ನ ಮೊರೆಹೋದ. ಆತ ತನ್ನ ಡೋಗ್ರಾ ಸೈನ್ಯ ಪಡೆ ಕಳುಹಿಸಿದ. ಆದರೆ, ಅಷ್ಟರಲ್ಲಿ, ಸಿಖ್ ಸೈನ್ಯ ತ್ವರೆಯಿಂದ ಹಿರಾಸಿಂಗ್‌ನನ್ನು ಸೆರೆಹಿಡಿಯಲು ಮುಂದಾಯಿತು. ಹಿರಾ ಸಿಂಗ್ ಜಮ್ಮೂಗೆ ಓಡಿಹೋಗಲು ಯತ್ನಿಸಿದಾಗ ಅವನನ್ನು ಮತ್ತು ಜ್ಯೋತಿಷಿ ಜಲ್ಲಾರನ್ನು ಹಿಡಿದು ಸಿಖ್ ಸೈನಿಕರು ಕೊಂದರು. ಜ್ಯೋತಿಷಿಯ ಮಾತುಗಳನ್ನು ನಂಬಿದ ಹರಿಸಿಂಗ್ ಕೆಟ್ಟದ್ದಲ್ಲದೆ, ಸ್ವತಃ ಸಾವನ್ನಪ್ಪಿದ.

ರಾಣಿ ಜಿಂಡಾನ್‌ಳ ಸಹೋದರ ಜವಹರ್‌ಸಿಂಗ್ ಪ್ರಧಾನಿಯಾದ. ಆಕೆಯ ಮಿತ್ರ ಮತ್ತು ಆಪ್ತ ವಿಶ್ವಾಸಿ ಲಾಲ್‌ಸಿಂಗ್ ರಾಣಿಯ ಮುಖ್ಯ ಸಲಹೆಗಾರನಾಗಿ ನೇಮಕವಾದನು.

ಲಾಹೋರ್‌ನ ಸಿಖ್ ಸಾಮ್ರಾಜ್ಯದ ರಾಜಸ್ಥಾನದಲ್ಲಿ ಜರುಗುತ್ತಿದ್ದ ಅಜಾಗರೂಕತೆ, ಅಸ್ಥಿರತೆ, ಸಂಧಿಗ್ಧ ಪರಿಸ್ಥಿತಿ ಎಲ್ಲವೂ ಜಮ್ಮೂವಿನಲ್ಲಿ ರಾಜ್ಯಪಾಲನಾಗಿ ಆಳುತ್ತಿದ್ದ

ಗುಲಾಬ್‌ಸಿಂಗ್‌ನಿಗೆ ಸ್ವತಂತ್ರವಾಗಿ ತನ್ನ ರಾಜ್ಯವನ್ನಾಳುವ ಹೆಬ್ಬಯಕೆ ಉಂಟಾಯಿತು. ಸಿಖ್ ಸರ್ಕಾರಕ್ಕೆ ನೀಡುತ್ತಿದ್ದ ಕಪ್ಪ ಕಾಣಿಕೆಗಳನ್ನು ನಿಲ್ಲಿಸಿದ. ಇದರಿಂದ ಕೋಪಗೊಂಡ ಸಿಖ್ ಸರದಾರರು, ಜಮ್ಮೂವಿನ ಮೇಲೆ ಯುದ್ಧಾಚರಣೆಯನ್ನು ಸಾಗಿಸಿದರು. ಅವರನ್ನು ಎದುರಿಸಲಾಗದ ಗುಲಾಬ್‌ಸಿಂಗ್, ಶರಣಾದ. ನಾಲ್ಕು ಲಕ್ಷ ಹಣವನ್ನು ನೀಡಿ ಶಾಂತಿ ಒಪ್ಪಂದ ಮಾಡಿಕೊಂಡ. ಸಂತೃಪ್ತರಾದ ಸಿಖ್‌ಸೈನ್ಯ ವಾಪಸ್ಸಾಗುವಾಗ ಗುಲಾಬ್‌ಸಿಂಗ್ ಅವರನ್ನು ಅಡ್ಡಿ ಕಟ್ಟಿ ತಾನು ನೀಡಿದ ಹಣವನ್ನು ಲೂಟಿ ಮಾಡಿದ. ಇದರಿಂದ ಕ್ರುದ್ಧರಾದ ಸಿಖ್‌ರು ಒಂದು ದೊಡ್ಡ ಪಡೆ ಕಟ್ಟಿಕೊಂಡು, ಜಮ್ಮೂವಿನತ್ತ ಸಾಗಿ, ಗುಲಾಬ್‌ಸಿಂಗ್‌ನ ಸೈನ್ಯವನ್ನು ಎದುರಿಸಿ ಸೋಲಿಸಿದರು. ಶರಣಾದ ಗುಲಾಬ್‌ಸಿಂಗ್, ಅಪಾರ ಹಣ ನೀಡಿದರೂ ಸೆರೆಯಾದ ಆತ ಲಾಹೋರ್‌ಗೆ ಅವರೊಂದಿಗೆ ಚಲಿಸಿದ. ಅಲ್ಲಿ ಅವನು ತನ್ನೆಲ್ಲಾ ಹಣ, ದ್ರವ್ಯ, ಆಭರಣಗಳನ್ನು ನೀಡಿ, ಸೆರೆಯಿಂದ ಬಿಡಿಸಿಕೊಂಡು, ತಾನು ಸಿಖ್‌ರಿಗೆ ಆಜನ್ಮ ಸೇವಕನಾಗಿ ಸೇವೆಗೈಯ್ಯುವೆನೆಂದು ಆಶ್ವಾಸನೆ ನೀಡಿ, ಜಮ್ಮುವಿಗೆ ಹಿಂದಿರುಗಿದ. ಆದರೆ, ಸ್ವಸ್ಥಾನಕ್ಕೆ ಹಿಂದಿರುಗಿದ ಮೇಲೆ ತನ್ನ ಚಾಳಿ ಬಿಡಲಿಲ್ಲ. ಬ್ರಿಟಿಷ್‌ರೊಂದಿಗೆ, ಗುಡ್ಡಗಾಡು ಜನರೊಂದಿಗೆ ಬೆಟ್ಟ ಗುಡ್ಡ ಪ್ರದೇಶಗಳ ರಾಜ ಮಹಾರಾಜರೊಂದಿಗೆ ಪಂಜಾಬ್ ರಾಜ್ಯದ ವಿರುದ್ಧ ಪಿತೂರಿ ಎಸಗಲು ಪ್ರಾರಂಭಿಸಿದ.

ಇತ್ತ ಸಿಖ್ ಸಾಮ್ರಾಜ್ಯದಲ್ಲಿ, ಮತ್ತೊಂದು ಪಿಡುಗು ಅಂಟಿಕೊಳ್ಳಲು ಪ್ರಾರಂಭಿಸಿತ್ತು. ರಣಜಿತ್‌ಸಿಂಗ್‌ನ ಇನ್ನೊಬ್ಬ ಪುತ್ರ ರಾಜಕುಮಾರ ಪೆಶಾವರಾ ಸಿಂಗ್ ವಿದ್ರೋಹದ ಕಹಳೆ ಊದತೊಡಗಿದ್ದ. ಪಠಾಣರೊಂದಿಗೆ ಕೂಡಿ ಸಿಯಾಲ್‌ಕೋಟ್ ನಗರದಲ್ಲಿ ಸರಕಾರದ ವಿರುದ್ಧ ದಂಗೆ ಎದ್ದ. ಅವನ ವಿರುದ್ಧ ಕದನ ಜರುಗಿಸಿದ ಸಿಖ್‌ಸೈನ್ಯ ಅವನನ್ನು ಸೆರೆ ಹಿಡಿದು ಕೊಲೆ ಮಾಡಿತು.

ರಾಣಿಯ ಸಹೋದರ ಜವಾಹರ್ ಸಿಂಗ್, ಅಧಿಕಾರದ ಮತ್ತಿನಿಂದ ಕುಣಿಯತೊಡಗಿದ. ಪ್ರಧಾನಿಯಾದೊಡನೆ ಅವನು ಹರಿಸಿಂಗ್‌ನ ಮಾದರಿಯಲ್ಲೇ, ದುರಹಂಕಾರ, ಒಣಪ್ರತಿಷ್ಠೆ, ಸೇಡಿನ ಮನೋಭಾವ ಹೊತ್ತು, ರಾಜ್ಯಭಾರ ಮಾಡಲು ಯತ್ನಿಸಿದ. ಅವನಿಗೆ ಪ್ರತಿಸ್ಪರ್ಧಿ ಎನಿಸಿದ ರಾಜಕುಮಾರ; ಪೆಶಾವರ್ ಸಿಂಗ್‌ನ ಹತ್ಯೆ ಜರುಗಿಸಿದ ಆಪಾದನೆ ಹೊತ್ತ ಆತ, ಯುವ ಮಹಾರಾಜನೊಂದಿಗೆ ಬ್ರಿಟಿಷ್‌ರ ಸ್ನೇಹ, ಆಸರೆ ಪಡೆಯಲು ಯತ್ನಿಸಿದ. ಸುದ್ದಿ ಅರಿತ ಸಿಖ್ 'ಪಂಚ್'ರು ಕ್ರೋಧದಿಂದ ಕೆಂಡವಾದರು. ಅತೀವವಾಗಿ ಸ್ವಾತಂತ್ರ್ಯವನ್ನು ಪ್ರೀತಿಸುತ್ತಿದ್ದ ಅವರು ತಮ್ಮ ಪೂರ್ವಜರು ರಕ್ತ ಚೆಲ್ಲಿ ತಾವು ಕೂಡ ರಕ್ತ ಹರಿಸಿ ರಕ್ಷಿಸಿಕೊಳ್ಳಲು ಹೆಣಗುತ್ತಿರುವಾಗ, ಸಿಖ್‌ರ ನಾಯಕನಾಗಿ, ಉಂಡ ಮನೆಗೆ ಎರಡು ಬಗೆಯುವ ಹುನ್ನಾರದಲ್ಲಿದ್ದ ಜವಾಹರ್‌ಸಿಂಗ್‌ನ ನಡೆವಳಿಕೆ ಅವರನ್ನು ಕೆಂಗೆಡಿಸಿತು. ಅವನನ್ನು ಮಾತುಕತೆಗೆ ಬರಲು ತಮ್ಮ ಠಾಣೆಗೆ ಬರಲು ಆಹ್ವಾನಿಸಿದರು. ಸಿಖ್ ಸರದಾರರಿಗೆ ಭಯಪಟ್ಟ ಜವಾಹರ್ ಸಿಂಗ್, ತನ್ನ

ರಕ್ಷಣೆಗಾಗಿ, ಯುವಕ ಮಹಾರಾಜನನ್ನು ತನ್ನೊಂದಿಗೆ ಕರೆದೊಯ್ಯಲು ಯತ್ನಿಸಿದ. ಆದರೆ ಅದಕ್ಕೆ ಒಪ್ಪದ ಸಿಖ್ ಸರದಾರರು, ಪ್ರತ್ಯಕ್ಷವಾಗಿ ಒಬ್ಬನೇ ಬರಲು ಆಜ್ಞಾಪಿಸಿದರು. ಒಲ್ಲದ ಮನಸ್ಸಿನಲ್ಲಿ, ಭಯ, ಆತಂಕಗಳಿಂದ ಹೆಜ್ಜೆ ಇರಿಸಿದ ಜವಾಹರ್‌ಸಿಂಗ್, ಅವರೊಂದಿಗೆ ಮಾತುಕತೆಗೆ ಹಚ್ಚಿದಾಗ, ಅವನ ಮಾತುಗಳಿಗೆ ಉತ್ತರವಾಗಿ ತಮ್ಮ ಕತ್ತಿಗಳ ರುಚಿ ತೋರಿಸಿದರು ಸಿಖ್ ಸರದಾರರು. ಅವನ ಸಾವಿನಿಂದ ಖಾಲಿಯಾದ ಪ್ರಧಾನಿ ಹುದ್ದೆ ೧೮೪೫ರಲ್ಲಿ ರಾಜ ಲಾಲ್‌ಸಿಂಗ್‌ನನ್ನು ಪ್ರಧಾನಿಯನ್ನಾಗಿ ಮಾಡಲಾಯಿತು. ತೇಜ್‌ಸಿಂಗ್‌ನನ್ನು ಸಿಖ್‌ಸೈನ್ಯದ ಸೈನ್ಯಾಧಿಕಾರಿಯನ್ನಾಗಿ ಮಾಡಲಾಯಿತು. ೧೮ ರಾಣಿ ಜಿಂಡಾನ್‌ಳನ್ನು ಕ್ಷೇಮದಿಂದ ಇರಿಸಿದರು. ೧೯

ಲಾಲ್‌ಸಿಂಗ್‌ನ ಪಿತನ ಹೆಸರು ಜೆಸ್ಸಾ ಮಿಸ್ಸರ್ ಎಂದಾಗಿದ್ದು, ಆತ ಬ್ರಾಹ್ಮಣನಾಗಿದ್ದ. ಆತ ಪಂಜಾಬ್‌ನ ಸಂಗೋಮಿಯಾ ಎಂಬ ಒಂದು ಕುಗ್ರಾಮದಲ್ಲಿ ಒಂದು ಪಟ್ಟ ಅಂಗಡಿಯಿಟ್ಟುಕೊಂಡು ಜೀವನ ಸಾಗಿಸುತ್ತಿದ್ದ. ವ್ಯಾಪಾರದಲ್ಲಿ ನಷ್ಟ ಉಂಟಾಗಿ, ಚಿಲ್ಲರೆ ವ್ಯಾಪಾರಿಯಾಗಿ ಊರಿಂದ ಊರಿಗೆ, ಮನೆಯಿಂದ ಮನೆಗೆ ಸರಕು ಹೊತ್ತು ವ್ಯಾಪಾರ ಮಾಡಿಕೊಂಡು ಹೊಟ್ಟೆ ಹೊರೆಯಲು ಪ್ರಾರಂಭಿಸಿದ. ಅವನ ಈ ವ್ಯಾಪಾರದ ನೆಪದಲ್ಲಿ ರಾಜಧಾನಿ ಲಾಹೋರ್‌ಗೆ ತಲುಪಿ ಅಲ್ಲಿನ ಸಿಖ್ ಸರದಾರ ಮಹಾಸಿಂಗ್‌ನ ತೋಷ್‌ಖಾನಾದ ಮುಖ್ಯಸ್ಥನಾದ ಬಡ್ತೀರಾಮ್‌ನ ಪರಿಚಯ ದೊರೆಯಿತು. ಪರಿಚಯದಿಂದ ಅವನಿಗೆ ಅಲ್ಲೇ ನೌಕರಿ ದೊರೆಯಿತು. ಕ್ರಮೇಣ ರಣಜಿತ್‌ಸಿಂಗ್‌ನ ಅಧಿಕಾರದಲ್ಲಿ ನೌಕರಿ ಹಿಡಿಯಲು, ಅವನ ಡೋಗ್ರಾ ಮಂತ್ರಿ ಧ್ಯಾನ್‌ಸಿಂಗ್‌ನ ನೆರವು ಪಡೆದ. ಕಾಶ್ಮೀರವನ್ನು ಆಕ್ರಮಿಸಿದ ರಣಜಿತ್‌ಸಿಂಗ್, ಅಲ್ಲಿನ ಸಂಪತ್ತನ್ನು ಕೊಳ್ಳೆ ಹೊಡೆದದ್ದನ್ನು ಸಂಭಾಳಿಸಲು, ಲೆಕ್ಕಪತ್ರ ಇರಿಸಿಕೊಳ್ಳಲು, ಕ್ಷೇಮವಾಗಿರಿಸಲು ಒಬ್ಬ ದಕ್ಷ ಹಾಗೂ ನಂಬಿಕಸ್ಥ ನೌಕರನ ಅವಶ್ಯಕತೆಯನ್ನು ಜೆಸ್ಸಾ ಮಿಸ್ಸರ್ ನೀಡಿದ. ಅಂದಿನಿಂದ ಜೆಸ್ಸಾ ಮಿಸ್ಸರ್ ಜಮ್ಮೂ ಡೋಗ್ರಾ ರಾಜರ ಆಪ್ತನಾಗಿ ಮೆರೆದ. ಈ ಜೆಸ್ಸಾ ಮಿಸ್ಸರ್‌ನ ಮಗನೇ ಲಾಲ್‌ಸಿಂಗ್ ಹೆಸರನ್ನು ಹೊತ್ತ ಬ್ರಾಹ್ಮಣ !

೧೮೨೯ರಲ್ಲಿ ಜೆಸ್ಸಾ ಮರಣಿಸಿದಾಗ, ಮಗನನ್ನು ಧ್ಯಾನ್‌ಸಿಂಗ್ ಮತ್ತು ಗುಲಾಬ್‌ಸಿಂಗ್‌ರ ಸುಪರ್ದಿಗೆ ಮತ್ತು ಆರೈಕೆಗೆ ಒಪ್ಪಿಸಿದ. ರಣಜಿತ್ ಸಿಂಗ್‌ನ ಆಶ್ರಯ ಮತ್ತು ಡೋಗ್ರಾ ಸಹೋದರ ಅಭಯಹಸ್ತಗಳಿಂದ ಹಂತಹಂತವಾಗಿ ಮೇಲೇರಿದ ಲಾಲ್‌ಸಿಂಗ್, 'ರಾಜ' ಪದವಿ ಗಿಟ್ಟಿಸಿದ.

---

೧೮. P 542 History of sikh people by G.Singh

೧೯. P152-53 History of Khalsa Durbar by G.C. Smyth

ಅಧ್ಯಾಯ ೧೦
ಸಿಖ್‌ರ ಯುದ್ಧ – ಬ್ರಿಟಿಷ್‌ರ ವಿರುದ್ಧ

All your strength is in your Union; All your danger is in discord

ನಿಮ್ಮ ಎಲ್ಲ ಬಲವು ನಿಮ್ಮ ಒಕ್ಕೂಟದಲ್ಲಿದೆ; ನಿಮ್ಮ ಎಲ್ಲಾ ಅಪಾಯ ನಿಮ್ಮ ಒಡಕಿನಲ್ಲಿದೆ.

– ಲಾಂಗ್‌ಫೆಲೋ

Battles are the technical fire works of the historic drama; behind them are the loves and hates of men and woman, the toil and gambles of economic life, the defeats and triumphs of science, literature and art, the desperate longings of religious faith.

- Will Durant

ವಿವಿಧ ಇತಿಹಾಸಕಾರರು, ಅನೇಕ ತರಹದ ವಿಶ್ಲೇಷಣೆ, ಅಭಿಪ್ರಾಯ ಮತ್ತು ಅನಿಸಿಕೆಗಳನ್ನು ಸಿಖ್ ಬ್ರಿಟಿಷ್‌ರ ಮಧ್ಯೆ ಜರುಗಿದ ಯುದ್ಧಗಳ ಬಗ್ಗೆ ನೀಡಿರುತ್ತಾರೆ. ಈಗಾಗಲೇ ನಮೂದಿಸಿರುವಂತೆ, ೧೮೦೯ರಲ್ಲಿ ರಣಜಿತ್‌ಸಿಂಗ್‌ನೊಂದಿಗೆ ಬ್ರಿಟಿಷ್‌ರು ಸಹಿ ಹಾಕಿದ ಒಪ್ಪಂದದ ಪ್ರಕಾರ, ಸಿಖ್‌ರು ಸಟ್ಲೆಜ್ ನದಿಯ ಎಡ ದಂಡೆಯ ಗುಂಟ ಮತ್ತು ಅದರಾಚೆ ಪ್ರದೇಶಗಳ ಮೇಲೆ ತಮ್ಮ ಹಕ್ಕನ್ನು ಪ್ರತಿಪಾದಿಸದೆ, ಆ ಪ್ರದೇಶಗಳ ಮೇಲೆ ಬ್ರಿಟಿಷ್‌ರಿಗೆ ಇರುವ ಹಕ್ಕನ್ನು ಅವರು ಕಾದುಕೊಂಡಿರಬೇಕೆಂದಾಗಿತ್ತು. ಸಿಖ್‌ರು ಆ ಕರಾರನ್ನು ಅತ್ಯಂತ ಜಾಗರೂಕತೆಯಿಂದ ಕಾದುಕೊಂಡು, ಬ್ರಿಟಿಷ್‌ರಿಗೆ ಯಾವ ಉಪದ್ರ ನೀಡದೆ, ಅವರಿಗೆ ಸರ್ವ ರೀತಿಯಲ್ಲೂ ಸಹಕಾರ, ಸಹಾಯ, ಒಪ್ಪಂದ ನೀಡಿದ್ದರು. ಸಿಂಧ್ ಪ್ರಾಂತ್ಯದ ಮೇಲೆ ತಾವು ಅಧಿಕಾರ ಪಡೆಯಬಹುದಾಗಿದ್ದರೂ, ಬ್ರಿಟಿಷ್‌ರು ಆ ಪ್ರಾಂತ್ಯದ ಮೇಲೆ ಆಕ್ರಮಣ ಜರುಗಿಸಿ, ಆಳ್ವಿಕೆ ನಡೆಸಿದರೂ, ತಾವು ಪ್ರತಿರೋಧಿಸಲಿಲ್ಲ. ಆಫ್ಘಾನಿಸ್ಥಾನದ ಮೇಲೆ ಬ್ರಿಟಿಷ್‌ರು ಜರುಗಿಸಿದ ಆಕ್ರಮಣದಲ್ಲಿ ಸಿಖ್‌ರು ೧೮೪೮ರಲ್ಲಿ ಒಪ್ಪಂದ ಮಾಡಿಕೊಂಡು ಸಹಾಯ ನೀಡಿ ಸಹಕರಿಸಿದರು.ಆದರೂ ಕಾಬೂಲ್‌ನ್ನು ಆಕ್ರಮಿಸಿದ ಬ್ರಿಟಿಷ್‌ರು ಅಲ್ಲಿ ಸೋಲನ್ನು ಅನುಭವಿಸಿ, ಒಬ್ಬನೇ ಒಬ್ಬ ಬ್ರಿಟಿಷ್ ಸೈನಿಕ ಬದುಕಿ ಉಳಿಯದಿದ್ದುದು ಒಂದು ಐತಿಹಾಸಿಕ ಸತ್ಯವಾಯಿತು. ಕಾಬೂಲ್‌ನಲ್ಲಿದ್ದ ಬ್ರಿಟಿಷ್ ದೂತ ಕೂಡ ಹತ್ಯೆಗೀಡಾದ.

ಮಹಾರಾಜ ಶೇರ್‌ಸಿಂಗ್, ಬ್ರಿಟಿಷ್‌ರಿಗೆ, ಕಾಬೂಲ್‌ನ ವಿರುದ್ಧ ಸಮರಾಚರಣೆಗೆ ತನ್ನ ಸಿಖ್ ಸೈನ್ಯದ ನೆರವು ನೀಡಿ ಸಹಕರಿಸಿದ್ದ. ಆದರೆ ಇವೆಲ್ಲವೂ ಬ್ರಿಟಿಷ್‌ರಿಗೆ ಅನುಕೂಲಸಿಂಧುವಾಗಿ ಪರಿಣಮಿಸಿದ್ದವು.

ಸಿಖ್ ಮತ್ತು ಬ್ರಿಟಿಷ್‌ರ ಮಧ್ಯೆ ಜರುಗಿದ ಐತಿಹಾಸಿಕ ಯುದ್ಧಾಚರಣೆಗೆ ಮುಖ್ಯ ಕಾರಣಗಳನ್ನು ಈ ರೀತಿಯಾಗಿ ವಿವರಿಸಬಹುದಾಗಿದೆ. ಮೊದಲನೆಯದಾಗಿ, ಯಾವುದೇ ಸ್ವತಂತ್ರ ರಾಷ್ಟ್ರದಲ್ಲಿ, ಆಂತರಿಕ ವಿಪ್ಲವ, ಅಜಾಗರೂಕತೆ ಉಂಟಾದಾಗ, ಪರಕೀಯ ಶಕ್ತಿಗಳು ಮಧ್ಯೆ ಪ್ರವೇಶಿಸುವುದು ಸಾಮಾನ್ಯ. ಇತಿಹಾಸದುದ್ದಕ್ಕೂ ಇದರ ಉದಾಹರಣೆಗಳನ್ನು ನಾವು ಕಾಣಬಹುದಾಗಿದೆ. ಆಳುವ ರಾಜ ಮಹಾರಾಜರು ತಮ್ಮ ದುರಾಡಳಿತದಿಂದ, ರಾಜ್ಯವನ್ನು ನಾಶದೆಡೆಗೆ ಕೊಂಡೊಯ್ಯುವಾಗ, ನೆರೆಯ ರಾಷ್ಟ್ರಗಳು ಅದರ ಲಾಭ ಪಡೆದುಕೊಳ್ಳುವುದು ಸಾಮಾನ್ಯ ಹಾಗೂ ಸ್ವಾಭಾವಿಕ. ಪಂಜಾಬ್‌ನ ಪರಿಸ್ಥಿತಿಯೂ ಅದೇ ಹಾದಿಯಲ್ಲಿ ಸಾಗುತ್ತಿತ್ತು. ರಾಜ ದಿಲೀಪ್‌ಸಿಂಗ್ ಹಸುಳೆಯಾಗಿದ್ದು, ರಾಜನ ಅಧಿಕಾರ ಅವನ ತಾಯಿಗೆ, ಮತ್ತು ಸರದಾರರ ಕೈಗೆ ದೊರೆತು, ಅಧಿಕಾರ ಜರುಗಿಸುವುದರಲ್ಲಿ ಒಮ್ಮತ, ಐಕ್ಯತೆ, ನಿಷ್ಠೆ ಇರದೆ, ರಾಜ್ಯ ಅಜಾಗರೂಕತೆಯೆಡೆ ಸಾಗಿತ್ತು. 'ಇಬ್ಬರ ಜಗಳ ಮೂರನೆಯವರಿಗೆ ಲಾಭ' ಗಾದೆಯ ಪ್ರಕಾರ, ರಣಹದ್ದಿನಂತೆ ಕಾದು ಕುಳಿತ ಹಲವಾರು ಶಕ್ತಿಗಳಿಗೆ, ಪರಸ್ಪರ ಹೊಡೆದಾಡುತ್ತಿದ್ದ ಸಿಖ್‌ರನ್ನು ಬಗ್ಗು ಬಡಿದು ರಾಜ್ಯವನ್ನು ಕಬಳಿಸಲು ಸುಸಂದರ್ಭ ಒದಗಿ ಬಂದಿತ್ತು.

ಎರಡನೆಯದಾಗಿ, ಭಾರತದ ಬಹುತೇಕ ಪ್ರದೇಶಗಳಲ್ಲಿ, ತಮ್ಮ ಧ್ವಜವನ್ನು ಹಾರಿಸಿ, ಅಧಿಕಾರ ಸ್ಥಾಪಿಸಿ, ಸ್ವತಂತ್ರವಾಗಿ ಉಳಿದಿದ್ದ ಪಂಜಾಬ್‌ನ್ನು ಆಕ್ರಮಿಸಿ ಆಳುವಂತಾದರೆ, ಪ್ರಪಂಚದ ಇತರ ಪ್ರಭಾವಿ ರಾಜಕೀಯ ಶಕ್ತಿಗಳನ್ನು ಎದುರಿಸುವುದು ಸುಲಭ ಸಾಧ್ಯ ಎಂದು ಅರಿತಿದ್ದರು ಬ್ರಿಟಿಷರು. ಸಂಪದ್ಭರಿತ ಪಂಜಾಬ್‌ನ್ನು ಆಳುವಂತಾದರೆ, ಅಲ್ಲಿನ ಪ್ರಮುಖ ಧರ್ಮೀಯರಾದ ಹಿಂದೂ, ಮುಸ್ಲಿಮ್ ಮತ್ತು ಸಿಖ್‌ರು ಸ್ವಾಭಾವಿಕವಾಗಿ ಹೋರಾಡುವ ಮನೋಭಾವ ಹೊಂದಿದ್ದು, ಅವರ ಹುಮ್ಮಸ್ಸು, ಕೆಚ್ಚು, ಧೈರ್ಯಗಳ ಗುಣಗಳ ಉಪಯೋಗ ತಾವು ಮಾಡಿಕೊಂಡರೆ, ದೇಶದ ಮೇಲೆ ತಮ್ಮ ಅಧಿಕಾರವನ್ನು ಸುಸೂತ್ರವಾಗಿ ಇರಿಸಿಕೊಳ್ಳಬಹುದೆಂಬ ನಂಬಿಕೆ ಹೊತ್ತರು ಬ್ರಿಟಿಷರು. ಅವರ ದೂರದೃಷ್ಟಿಯ ಪ್ರತೀಕವಾಗಿ, ಬ್ರಿಟಿಷ್ ಇಂಡಿಯಾದ ಸೈನ್ಯದಲ್ಲಿ, ಮುಂಬರುವ ದಿನಗಳಲ್ಲಿ ವೀರ ಸಿಖ್‌ರನ್ನು ಸೈನ್ಯದಲ್ಲಿ ಸೇರಿಸಿಕೊಂಡು, ಅವರನ್ನು 'ಸಿಪಾಯಿ ದಂಗೆ' ಯಲ್ಲಿ ಮೊಘಲ್‌ರ ವಿರುದ್ಧ ಉಪಯೋಗಿಸುವುದರಲ್ಲಿ ಸಫಲರಾದರು. ಅದೇ ರೀತಿ ಪಂಜಾಬಿ ಮುಸ್ಲಿಮ್‌ರನ್ನು ತಮ್ಮ ಸೈನ್ಯದಲ್ಲಿ ಧಾರಾಳವಾಗಿ ಶಾಮೀಲು ಮಾಡಿಕೊಂಡು, ದೇಶ ಪರದೇಶಗಳಲ್ಲಿ ಜರುಗಿದ ಯುದ್ಧಗಳಲ್ಲಿ ಅವರನ್ನು ಉಪಯೋಗಿಸಿಕೊಂಡರು. ಪಂಜಾಬಿ ಮುಸ್ಲಿಮ್‌ರನ್ನು 'ಪಿ.ಎಮ್.' ಎಂದು ಕರೆದು ತನ್ನ ಸೈನ್ಯದ ಸಾಮಾನ್ಯ ಸೈನಿಕರ ಭರತಿಯನ್ನು ಅವರಿಂದ ಮಾಡಿಸಿಕೊಂಡು ಸೈನಿಕರ ಕೊರತೆಯನ್ನು ಅಳಿಯದಂತೆ ನೋಡಿಕೊಳ್ಳುವುದರಲ್ಲಿ, ಯಶಸ್ವಿಯಾದರು.

ಅದೇ ರೀತಿ ಹಿಂದೂ ನೇಪಾಳೀ ಗೂರ್ಖಾರನ್ನು ತಮ್ಮ ಸೈನ್ಯದಲ್ಲಿ ಸೇರಿಸಿಕೊಂಡು, ಅವರನ್ನು ಜಗತ್ತಿನೆಲ್ಲೆಡೆ ಜರುಗಿದ ಯುದ್ಧಾಚರಣೆಯಲ್ಲಿ ಉಪಯೋಗಿಸಿಕೊಂಡರು.

ಮೂರನೆಯದಾಗಿ, ಸಿಖ್ಖರೊಳಗೆ ಇದ್ದ ಅನೈಕ್ಯತೆಯ ವ್ಯಾಧಿ, ಅವರನ್ನು ಆಳುತ್ತಿದ್ದ ವಿವಿಧ ಅಧಿಕಾರಿಗಳಿಗೆ, ಗಣ್ಯರಿಗೆ ಪ್ರಧಾನಿಗೆ ಮತ್ತು ಸೈನ್ಯಾಧಿಕಾರಿಗಳಿಗೆ ಅಂಟಿಕೊಂಡು, ಅವು ರಾಜ್ಯದ ಹಿತಾಸಕ್ತಿಯನ್ನು ಮರೆತು, ಸ್ವಾರ್ಥತೆಯಿಂದ ಮೆರೆದು, ತಮ್ಮ ಹಿರಿಯರು ರಕ್ತ ಚೆಲ್ಲಿ ನಿರ್ಮಿಸಿದ ಸ್ವತಂತ್ರ ರಾಷ್ಟ್ರವನ್ನು ಬಲಿದಾನಗೈದರು.

This inherent feebleness of our adversaries, the inability to govern or defend their possessions, obviously explains why the English, who could do both, so rapidly made room for themselves in a country which, though rich and populous, was in a practical sense masterless. It must also be remembered that Bengal and the other provinces bordering on the sea in which the English won these facile triumphs, were far more defenceless than the inland country, partly through the dilapidation of the central power, partly because the people of those tracts are naturally less warlike than elsewhere, and partly by the accident that they were just then very ill governed.

For few years later our first campaigns against Hyder Ali in the south and the Marathas in the west showed us that under competent leadership the superior numbers of an Indian army might make it a very dangerous antagonist.

(P 132 British Dominion in India by Lyall)

ಸಿಖ್ ರಾಜಕಾರಣಿಗಳು, ರಾಜಮಾತೆ ಜಿಂದಾನ್ ರಾಣಿ, ತೇಜ್‌ಸಿಂಗ್ ಮತ್ತು ಲಾಲ್‌ಸಿಂಗ್, ಸಿಖ್ ಸರದಾರರರನ್ನು, ಸಿಖ್ ಸೈನ್ಯವನ್ನು ಪ್ರಚೋದಿಸಿ, ಬ್ರಿಟಿಷ್‌ರ ವಿರುದ್ಧ ಯುದ್ಧ ಜರುಗಿಸಲು ಅನುವು ಮಾಡಿಕೊಟ್ಟಿದ್ದನ್ನು ಇತಿಹಾಸಕಾರರು ದಾಖಲಿಸಿರುತ್ತಾರೆ, ಬ್ರಿಟಿಷರು, ಸಿಖ್ಖರ ಪ್ರಚೋದನೆಗೆ ಒಳಗಾಗಿ, ಅವರ ವಿರುದ್ಧ ಯುದ್ಧಾಚರಣೆ ಜರುಗಿಸಿದರೂ, ಬ್ರಿಟಿಷ್‌ರ ಒಳಮನಸ್ಸು ಮತ್ತು ಪಂಜಾಬ್‌ನ್ನು ಆಕ್ರಮಿಸಲು ಸಕಲ ಪೂರ್ವ ಸಿದ್ಧತೆ ಮಾಡಿಕೊಂಡಿದ್ದನ್ನು ಇತಿಹಾಸಕಾರರು ದಾಖಲಿಸಿದ್ದಾರೆ.

೧೮೪೪ರಲ್ಲೇ ಬ್ರಿಟಿಷ್‌ರು ಬಾಂಬೆ (ಮುಂಬೈ) ಮಜಗಾಂವ್ ನೌಕಾನೆಲೆಯಲ್ಲಿ

ಸಟ್ಲೆಜ್ ನದಿಯನ್ನು ದಾಟಲು ದೋಣಿಗಳ ನಿರ್ಮಾಣದ ಕಾರ್ಯ ಮಾಡಿದರು. ನೂರಾರು ಸೈನಿಕರನ್ನು ಯುದ್ಧ ಸಾಮಗ್ರಿಗಳನ್ನು ಸಾಗಿಸಲು ಸಮರ್ಥವಾದ ದೋಣಿಗಳು ನಿರ್ಮಾಣಗೊಂಡವು. ೨

ಬ್ರಿಟಿಷ್ ದಂಡಿನ ನಗರಗಳಾದ ಅಂಬಾಲಾ ಮತ್ತು ಲೂಧಿಯಾನಗಳಲ್ಲಿ ಸೈನ್ಯದ ಸಂಖ್ಯೆಯನ್ನು ಬಲಪಡಿಸಿಕೊಳ್ಳಲಾಯಿತು. ೩

ಫಿರೋಜ್‌ಪುರದಲ್ಲಿ ಬ್ರಿಟಿಷ್ ಸೈನ್ಯ ಬೀಡು ಬಿಟ್ಟಿತು. ಯುದ್ಧಾಚರಣೆಯಲ್ಲಿ ಅಪಾರ ಜ್ಞಾನ, ಪರಿಶ್ರಮ, ಜಾಣ್ಮೆಗಳಿದ್ದ ಬ್ರಿಟಿಷ್‌ರು ಯುದ್ಧದಲ್ಲಿ ಜಯ ಗಳಿಸಲು ಕುಟಿಲೋಪಾಯವನ್ನು ಧಾರಾಳವಾಗಿ, ಅತ್ಯಂತ ಮುತುವರ್ಜಿಯಿಂದ ನೆರವೇರಿಸಿದರು. ಇತಿಹಾಸದುದ್ದಕ್ಕೂ ಭಾರತೀಯರು ಮತ್ತು ಅವರನ್ನಾಳಿದ ರಾಜ ಮಹಾರಾಜರು ಮತ್ತು ಅಧಿಕಾರಿ ವರ್ಗದವರ ದುರಾಸೆ, ದ್ರವ್ಯಗಳಾಸೆ, ಹೆಂಡ, ಲಂಚ ರಿಶ್ವತ್ತುಗಳ ಮೋಹ ಎಲ್ಲವೂ ಬ್ರಿಟಿಷರಿಗೆ ನೆರವಾಗಿದ್ದವು. ಸಿಖ್ ಸಾಮ್ರಾಜ್ಯದಲ್ಲಿ ಜರುಗುತ್ತಿದ್ದ ಒಳಜಗಳ, ಅಧಿಕಾರಕ್ಕಾಗಿ ಕಚ್ಚಾಟ, ಜಾತಿ ಧರ್ಮ ಬೇಧ ಇತ್ಯಾದಿಗಳ ಅರಿವಿದ್ದ ಅವರು ಕುತಂತ್ರಿಗಳಾದ, ಸಿಖ್ಖರೇ ಆದ ತೇಜ್ ಸಿಂಗ್ ಮತ್ತು ಲಾಲ್ ಸಿಂಗ್‌ರಿಗೆ ಆಮಿಷ ತೋರಿಸಿ ಅವರನ್ನು ತಮ್ಮ ಬುಟ್ಟಿಯಲ್ಲಿ ಹಾಕಿಕೊಂಡಿದ್ದರೆ, ಜಮ್ಮೂ ಕಾಶ್ಮೀರದಲ್ಲಿ ರಾಜ್ಯಪಾಲರಾಗಿ ಸಿಖ್ಖರ ಸಾಮಂತರಾಗಿ ಆಡಳಿತ ಜರುಗಿಸುತ್ತಿದ್ದ ಗುಲಾಬ್ ಸಿಂಗ್‌ನಿಗೆ ಆ ರಾಜ್ಯಗಳ ಸಂಪೂರ್ಣ ಅಧಿಕಾರ ನೀಡುವ ಭರವಸೆ ನೀಡಿ, ಇದುವರೆಗೂ ಬ್ರಿಟಿಷ್‌ರ ವಿರುದ್ಧ ಕತ್ತಿ ಮಸೆಯುತ್ತಿದ್ದ ಆತನನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು ಬ್ರಿಟಿಷ್‌ರು. ರಾಣಿ ಜಿಂದಾನ್‌ಳಂತೂ ಸ್ವತಃ ತನ್ನ ಸಹೋದರರನ್ನು ಕೊಂದ ಸಿಖ್ ಸೈನ್ಯದ ಮೇಲೆ ಪ್ರತೀಕಾರ ಎಸಗಲು ಬ್ರಿಟಿಷ್‌ರ ಮೊರೆ ಹೋಗಿದ್ದಳು. ಇಷ್ಟೆಲ್ಲಾ ಅನುಕೂಲ, ಸುವರ್ಣಾವಕಾಶಗಳನ್ನು ಉಪಯೋಗಿಸದೆ ತೆಪ್ಪಗೆ ಕುಳಿತಿರಲು ಬ್ರಿಟಿಷ್‌ರು ಹುಂಬರಾಗಿರಲಿಲ್ಲ. ಅವರಿಗೆ ಪ್ರಾಣದ ಹಂಗು ತೊರೆದು ಹೋರಾಡುವ ಸ್ವಭಾವವಿದ್ದ ವೀರ ಸಿಖ್ ಸೈನಿಕರ ಬಗೆ ಭಯವಿದ್ದರೂ, ಸಿಖ್ ಸೈನಿಕರನ್ನು ಮುನ್ನಡೆಸುವ, ಸ್ಫೂರ್ತಿ ನೀಡಿ ಕಾದಾಡುವ ಸೈನ್ಯಾಧಿಕಾರಿಗಳ ಅಭಾವ ಅವರಿಗೆ ನೆಮ್ಮದಿ ತಂದಿತ್ತು. ಧೀರ ನಾಯಕರನ್ನು ಹೊಂದದ ಸಿಖ್ ಸೈನ್ಯ ಅಶಿಸ್ತು, ಧ್ಯೇಯ, ಗುರಿ ಸಾಧಿಸುವ ಕೆಚ್ಚು ಇಲ್ಲದೆ, ಕೇವಲ ಎದುರಾಳಿಗಳ ವಿರುದ್ಧ ಹೋರಾಡುವ ಗಟ್ಟಿತನ ಹೊಂದಿತ್ತು. ಯುದ್ಧ ತಂತ್ರ, ಸಮಯೋಪಾಯದಲ್ಲಿ ಸಾಕಷ್ಟು ಯುದ್ಧ ಸಾಮಗ್ರಿ, ಆಹಾರ ಸಾಮಗ್ರಿಗಳನ್ನು ಹೊಂದಿದ್ದು, ಅದನ್ನು ಸಕಾಲದಲ್ಲಿ ಉಪಯೋಗಿಸುವ ಕುಶಲತೆ ಎಲ್ಲವೂ ಕಾಣೆಯಾಗಿದ್ದವು. ರಾಜ್ಯದ ಖಜಾನೆ ಕೂಡ ಬರಿದಾಗಿದ್ದು, ಯುದ್ಧಾಚರಣೆಗೆ ಬೇಕಾಗುವ ಹಣ ಕೂಡ ಇಲ್ಲವಾಗಿದ್ದು, ಬ್ರಿಟಿಷ್‌ರಿಗೆ ಯುದ್ಧ ಗೆಲ್ಲಲು ಎಲ್ಲವೂ ಸಹಕಾರಿಯಾಗಿದ್ದವು.

---

೨. P 288 History of Sikhs by Cunningham

೩. The Country of Sikhs by Stein Bach

ಡಿಸೆಂಬರ್ ೧೩, ೧೮೪೫ ರಂದು ಸಿಖ್‌ಸೈನ್ಯ ಸಟ್ಲೆಜ್ ನದಿಯನ್ನು, ಹರಿ–ಕೆ–ಪಟ್ಟನ್ ಮತ್ತು ಕಸೂರ್‌ಗಳ ಮಧ್ಯೆ, ದಾಟಲಾರಂಭಿಸಿದವು. ಈ ಮೊದಲೇ ಈಸ್ಟ್ ಇಂಡಿಯಾ ಕಂಪನಿಯ ಗವರ್ನರ್ ಜನರಲ್ ಸರ್ ಹೆನ್ರಿ ಹಾರ್ಡಿಂಜ್ ಪಂಜಾಬ್‌ನ ವಿರುದ್ಧ ಯುದ್ಧ ಸಾರಿದ.

ಕುತಂತ್ರಿ, ದೇಶದ್ರೋಹಿ, ಕಪಟಿ ಲಾಲ್‌ಸಿಂಗ್ ತನ್ನ ಸಿಖ್ ಸೈನ್ಯವನ್ನು ಫಿರೋಜ್‌ಪುರದ ಬಳಿ ಬೀಡು ಬಿಟ್ಟರೂ, ಯುದ್ಧ ಜರುಗಿಸದೆ, ಬ್ರಿಟಿಷ್‌ರು ತಮ್ಮ ಸೈನ್ಯವನ್ನು ಜಮಾಯಿಸಲು ಸಮಯಾವಕಾಶ ಮಾಡಿಕೊಟ್ಟ. ಅವರಿಂದ ಲಂಚ ತಿಂದ ಸಿಂಗ್ ತನ್ನ ಸೈನಿಕರಿಗೆ ಸುಮ್ಮನಿರಲು ಬಿಟ್ಟ. ಅವನೇನಾದರೂ ಫಿರೋಜ್‌ಪುರದ ಮೇಲೆ ಆಕ್ರಮಿಸಿದ್ದರೆ, ಅಲ್ಲಿದ್ದ ಬ್ರಿಟಿಷ್ ಸೈನ್ಯವನ್ನು ಸುಲಭವಾಗಿ ಸೋಲಿಸಿ ಯುದ್ಧದ ರಂಗನ್ನೇ ಬದಲಾಯಿಸಬಹುದಾಗಿತ್ತು ಎಂದರು ಇತಿಹಾಸಕಾರರು. ೪ ೫

'....What moved as much by jealousy of one another as by a common dread of the army, the chief`s of the punjab had clung to wealth and ease rather than to honour and independence, and thus Maharaja Sher Singh, the Sindhwalas and others had been ready to become tributary, and to lean for support upon foreigners...'

ಡಿಸೆಂಬರ್ ೧೮, ೧೮೪೫ ರಲ್ಲಿ ಮುಸ್ಕಿ ಎಂಬಲ್ಲಿ ಜರುಗಿದ ಯುದ್ಧದಲ್ಲಿ ನಾಯಕನಿಲ್ಲದ ಸಿಖ್‌ರು ವೀರಾವೇಶದಿಂದ ಹೋರಾಡಿದರು. ಅಪಾರ ಬ್ರಿಟಿಷ್ ಸೈನಿಕರ ಹತ್ಯೆಯಾಗಿ, ಅವರು ಹಿಮ್ಮೆಟ್ಟಿದರು. ಸ್ವತಃ ಗವರ್ನರ್ ಜನರಲ್ ಹಾರ್ಡಿಂಜ್ ಸೈನ್ಯಾಧಿಕಾರಿಯ ಉಸ್ತುವಾರಿ ನೋಡಿಕೊಳ್ಳಬೇಕಾಗಿ ಬಂದು, ಯುದ್ಧಭೂಮಿಯಲ್ಲಿ ಧುಮುಕಿದ. ಆದರೆ ಅವರ ಸಹಾಯಕ್ಕೆ ಬಂದ ಇನ್ನೊಬ್ಬ ದೇಶದ್ರೋಹಿ, ನೀಚ ತೇಜ್‌ಸಿಂಗ್, ಈ ಮೊದಲೇ ಯುದ್ಧಾಚರಣೆಯಿಂದ ನೊಂದು ಬೆಂದಿದ್ದ. ಲಾಲ್‌ಸಿಂಗ್‌ನ ಸೈನ್ಯದ ನೆರವಿಗೆ ಬರದೆ, ತಟಸ್ಥನಾದ. ೬


'....The usual good fortune of the British prevailed however, and instead of seeing the Sikh reserve advance to the attack, they had the satisfaction of beholding them turn back. without firing a shot and follow their defeated comrades ward Sutlej. The British force was thus left in undisputed possetion

---

೪. P 553 History of Sikh People by G.Singh

೫. P 291 History of Sikhs by Cunningham


೬. P 169 The Secret History of the Khalsa Durbar by G.C. smyth




. ಲ್ಹೋರ್ ಕೋಟೆಯಲ್ಲಿನ ರಣಜಿತ್ ಸಿಂಗ್‌ನ ಪ್ರತಿಮೆ




ಫತೇಗಢ್ ಸಾಹಿಬ್ ಗುರುದ್ವಾರ



ತರನ್-ತರನ್ ಗುರುದ್ವಾರ



ದುಃಖ ನಿವಾರಣ್ ಗುರುದ್ವಾರ್ ಪಾಟಿಯಾಲಾ



ಮಲೇರ್‌ಕೋಟ್ಲಾ ಅರಮನೆ

of the field of Ferozeshuher, with the entrenched camp of the Sikhs and all their artillery. . '

ಬ್ರಿಟಿಷ್ ಸೈನ್ಯಕ್ಕೆ ಹೊಸ ಯುದ್ಧ ಪಡೆಗಳ ಆಗಮನದಿಂದ, ಸಿಖ್ ಸೈನ್ಯ ಹಿಮ್ಮೆಟ್ಟಿತು. ತೇಜ್‌ಸಿಂಗ್ ಈ ಮೊದಲೇ ಬ್ರಿಟಿಷ್‌ರೊಂದಿಗೆ ಮಾಡಿಕೊಂಡ ಕರಾರಿನಂತೆ ಯುದ್ಧಭೂಮಿ ತ್ಯಜಿಸಿ ಓಡಿಹೋದ. ೭

ದಿಕ್ಕೆಟ್ಟ ಸಿಖ್ ಸೈನಿಕರು, ಅ ಸಂದಿಗ್ಧ ಪರಿಸ್ಥಿತಿಯಲ್ಲೂ ವೀರಾವೇಷದಿಂದ ಹೋರಾಡಿ ರಕ್ತ ಚೆಲ್ಲಿದರು. ಆ ಯುದ್ಧದಲ್ಲಿ ಬ್ರಿಟಿಷ್‌ರ ೬೯೪ ಸೈನಿಕರು ಹತ್ಯೆಯಾದರೆ, ಸಿಖ್‌ರಲ್ಲಿ ೧೭೮೨ ಸೈನಿಕರು ಸಾವನ್ನಪ್ಪಿದರು. ೮

ಆ ಯುದ್ಧದಲ್ಲಿ ಸಿಖ್‌ರ ವಿರುದ್ಧ ದ್ವೇಶ, ಪ್ರತಿರೋಧ, ಯುದ್ಧಾಚರಣೆಯ ಅಪರಿಮಿತ ಉತ್ಸಾಹ ತೋರಿಸಿದ್ದ ಬ್ರಿಟಿಷ್ ಸೈನ್ಯಾಧಿಕಾರಿ ಮೇಜರ್ ಬ್ರಾಡ್‌ಫೂಟ್‌ನ ಮರಣವಾಯಿತು.

ಕುಟಿಲ ಸಿಖ್ ನೇತಾರರು ದ್ರೋಹ ಬಗೆದು, ಕಾದಾಡದೆ ಯುದ್ಧರಂಗದಿಂದ ಓಡಿದರೂ, ಸಾಮಾನ್ಯ ಸಿಖ್ ಸೈನಿಕರು ಕೆಚ್ಚಿನಿಂದ ಕಾದು ಬ್ರಿಟಿಷ್‌ರನ್ನು ಹಿಮ್ಮೆಟ್ಟಿಸಿದ್ದು ಅವರ ಅಪಾರ ಧೈರ್ಯ, ಕಾದಾಡುವ ಹುಮ್ಮಸ್ಸು ಮತ್ತು ವೀರಸ್ವರ್ಗವೇರುವ ಬಯಕೆಗಳಿಂದ ಎಂದರು ಇತಿಹಾಸಕಾರರು.

ಜನವರಿ ೨೧, ೧೮೪೬ ರಂದು, ಕೆಚ್ಚಿನ ರಣಜೋಧ್ ಸಿಂಗ್ ಮಜೀಥೀಯಾನ ನೇತೃತ್ವದಲ್ಲಿ, ಸಿಖ್ ಸೈನ್ಯ ಸಟ್ಲೆಜ್ ನದಿಯನ್ನು ದಾಟಿ, ಬದೋವಲ್ ಎಂಬಲ್ಲಿ ಬ್ರಿಟಿಷ್‌ರ ವಿರುದ್ಧ ಸಮರ ಸಾಗಿಸಿತು. ಆದರೆ, ಸಿಖ್ ಸೈನ್ಯ ಬ್ರಿಟಿಷ್‌ರ ವಿರುದ್ಧ ಸೆಣಸಿ, ಅವರನ್ನು ಸಂಪೂರ್ಣವಾಗಿ ಸೋಲಿಸುವ ಮೊದಲೇ, ನಾಯಕ ರಣಜೋಧ್ ಸಿಂಗ್ ಯುದ್ಧರಂಗದಿಂದ ಪಲಾಯನಗೈದ. ಬ್ರಿಟಿಷ್ ಸೈನ್ಯ ಸೋತ ಹಿಮ್ಮೆಟ್ಟುವ ಸ್ಥಿತಿಯಲ್ಲಿದ್ದುದನ್ನು ಬ್ರಿಟಿಷ್ ಇತಿಹಾಸಕಾರನ ಬರಹದಿಂದ ಅವರ ಹೀನಾಯ ಸ್ಥಿತಿಯನ್ನು ತಿಳಿಯಬಹುದಾಗಿದೆ.

"Sir Henry Hardinge thought it was all up and gave his sword, a presant from the Duke of Wellington and which once belonged to Napoleon, and his star of the Bath to his son, with direction to proceed to Ferozpur, remarking that if the day was lost he must fall" (Sir Hope Grant as quoted by Gopal Singh) ೯

---

೭. P 319 History of Sikhs by Cunningham
೮. P 555 History of Sikh People by G.Singh
೯. P 556 History of Sikh People by G.Singh

ಪಿತೂರಿಗಾರರು ಬ್ರಿಟಿಷ್ ಅಧಿಕಾರಿಗಳ ಜೊತೆ ಸಂಧಾನ ಜರುಗಿಸಿದರು. ಗುಲಾಬ್‌ಸಿಂಗ್ ಅದರಲ್ಲಿ ಪ್ರಮುಖ ಪಾತ್ರ ವಹಿಸಿದ. ಬ್ರಿಟಿಷ್‌ರು ಲಾಹೋರ್‌ನ ಮೇಲೆ ಇದ್ದ ಸಿಖ್ಖರ ಸ್ವಾಮಿತ್ವವನ್ನು ಒಪ್ಪಲು ಸಿದ್ಧರಾದರು. ಆದರೆ ಅವರು ಹಾಕಿದ ಶರತ್ತು ಮಾತ್ರ ವಿಚಿತ್ರವಾಗಿತ್ತು. ಸಿಖ್‌ಸೈನ್ಯದ ಹತೋಟಿ ಇರಿಸಿಕೊಳ್ಳದ ಅವರನ್ನು ನಿಶಸ್ತ್ರಗೊಳಿಸುವದಾಗಿತ್ತು ! ಅದಕ್ಕೆ ಗುಲಾಬ್ ಸಿಂಗ್ ಒಪ್ಪಲಿಲ್ಲ. ಕಾರಣ ಅವನಿಗೆ ಆ ಅಧಿಕಾರವಿರಲಿಲ್ಲ ಮತ್ತು ಸಿಖ್ ರಾಜ ಅಥವಾ ರಾಣಿ ಜಿಂದಾನ್‌ಗೂ ಕೂಡ ಆ ಶರತ್ತು ಒಪ್ಪುವ ಸ್ಥಿತಿಯಲ್ಲಿರಲಿಲ್ಲ. ಹಾಗಾದರೆ, ಬ್ರಿಟಿಷ್‌ರು ತಾವು ಸಿಖ್ ಸೈನ್ಯವನ್ನು ಸೋಲಿಸಲು ಸೈನ್ಯಾಚರಣೆ ನಡೆಸಿದಾಗ, ಪಿತೂರಿಗಾರರು ತಮ್ಮನ್ನು ತಡೆಯದೆ, ತಮಗೆ ಪ್ರತಿರೋಧ ತೋರಿಸದೆ, ಸಟ್ಲೆಜ್ ನದಿ ದಾಟಿ, ಲಾಹೋರ್‌ನತ್ತ ಸಾಗಲು ದಾರಿ ಸುಗಮವಾಗುವಂತೆ ನೋಡಿಕೊಳ್ಳಬೇಕೆಂದರು. ನೀಚ, ದೇಶದ್ರೋಹಿ, ಪಿತೂರಿಗಾರರು ಬ್ರಿಟಿಷ್‌ರ ಶರತ್ತಿಗೆ ಸಮ್ಮತಿಸಿದರು.

ಲಾಲ್‌ಸಿಂಗ್, ಬ್ರಿಟಿಷ್‌ರಿಗೆ ಸಿಖ್‌ಸೈನ್ಯದ ಸಾಮರ್ಥ್ಯ, ಸಂಖ್ಯಾಬಲ, ಅವರ ಠಾಣೆಗಳ ಅಸ್ತಿತ್ವ ಮತ್ತು ಇತರ ಮಹತ್ವದ ಮಾಹಿತಿ ಇತ್ತು ಸಹಕರಿಸಿದ. ಗುಲಾಬ್ ಸಿಂಗ್, ಸಿಖ್ ಸೈನ್ಯಕ್ಕೆ ಆಹಾರ ಸಾಮಗ್ರಿಗಳ ಸರಬರಾಜು ನಿಲ್ಲಿಸಿ ಅವರು ಹಸಿವೆಯಿಂದ ಕಂಗಾಲಾಗುವಂತೆ ಮಾಡಿದ. ಈ ಸಂದಿಗ್ಧ ಸಮಯದಲ್ಲಿ ಎಚ್ಚರಗೊಂಡ ರಾಣಿ ಜಿಂದಾನ್‌ಳು, ತನ್ನ ಸ್ಥಾನಕ್ಕೆ ಸಂಚಕಾರ ಬಂದಿರುವುದನ್ನು ಅರಿತು, ಪಿತೂರಿಗಾರರ ಮನಸ್ಥಿತಿಯನ್ನು ಕಂಡು ಕೆರಳಿದಳು. ಅವರನ್ನು ಹೇಡಿಗಳೆಂದು ಹಳಿದು, ತಾನೇ ಖುದ್ದಾಗಿ ರಣರಂಗಕ್ಕೆ ತೆರಳಿ ಹೋರಾಡುವಳೆಂದಳು. ಅವಳ ಉನ್ಮತ್ತ ಮಾತುಗಳಿಗೆ ಉತ್ತೇಜನಗೊಂಡ ಸಿಖ್ ಸರದಾರರು ಮತ್ತು ಗುಲಾಬ್‌ಸಿಂಗ್ ತಮ್ಮ ರಾಷ್ಟ್ರದ ಉಳಿವಿಗಾಗಿ ಹೋರಾಡುವೆವು ಎಂದು ಸಾರಿ ಲಾಹೋರ್‌ನ್ನು ರಕ್ಷಿಸಲು ಮುಂದಾದರು. ಗುಲಾಬ್ ಸಿಂಗ್, ತನ್ನ ಗುಡ್ಡಗಾಡಿನ ಸೈನಿಕರನ್ನು ಲಾಹೋರ್‌ಗೆ ಕರೆತಂದು ಅದರ ರಕ್ಷಣಾ ಕಾರ್ಯ ಮಾಡಿ, ಪ್ರಮುಖ ಸಿಖ್ ಪಡೆಯನ್ನು ರಣರಂಗಕ್ಕೆ ರವಾನಿಸಿದ. ಆದರೆ ಈ ಮೊದಲೇ ತಂತ್ರ ಹೂಡಿದ ಆತ, ಬ್ರಿಟಿಷ್ ಸೈನ್ಯ ಲಾಹೋರ್ ನಗರ ತಲುಪುವವರೆಗೆ, ಅವರನ್ನು ಮಧ್ಯದಲ್ಲೇ ಎದುರಿಸದೆ, ಕಾದದೆ, ಇರಗೊಟ್ಟ. ತೇಜ್‌ಸಿಂಗ್, ಸಟ್ಲೆಜ್ ನದಿಗೆ ಅಡ್ಡಲಾಗಿ ನಿರ್ಮಿಸಿದ್ದ ದೋಣಿಗಳ ಬ್ರಿಡ್ಜ್ (Pontoon Bridge) ನ್ನು ನಿರ್ನಾಮ ಮಾಡಿ, ಸಿಖ್ ಸೈನಿಕರು ವಾಪಸ್ಸು ಬರದಂತೆ, ಬ್ರಿಟಿಷ್ ಬಂದೂಕು, ತೋಪುಗಳಿಗೆ ಆಹಾರವಾಗುವಂತೆ ನೋಡಿಕೊಂಡ.

ಯುದ್ಧ ಮುಗಿದು, ಸಿಖ್ ಸೈನ್ಯ ಸೋಲನ್ನು ಅನುಭವಿಸಿದಾಗ, ೩೧೨೫ ಸಿಖ್ ಸೈನಿಕರು ಹತರಾಗಿದ್ದರೆ, ೩೨೦ ಬ್ರಿಟಿಷ್ ಸೈನಿಕರ ಹತ್ಯೆಯಾಗಿತ್ತು. ಆ ಯುದ್ಧದಲ್ಲಿ 'no sikh offered to submit and no son of Govind asked for quarter' ಎಂದು ಬ್ರಿಟಿಷ್ ಇತಿಹಾಸಕಾರ ಕನ್ನಿಂಗ್‌ಹ್ಯಾಮ್ ಅತ್ಯಂತ ಭಾವಪೂರ್ಣ ಹೇಳಿಕೆ ನೀಡಿದ. ೧೦ ೧೧

'. . . .The traitor Tej Singh indeed, instead of loading fresh men to sustain the failing strength of the troop on his right fled on the first assault, and either accidentally or by design, sank a boat in the middle of the bridge of communication... .'

'. . . .Yet, although assailed on either side by squadrons of horse and battlions of foot, no sikh offered to submit, and no disciple of Gobind asked for quarter. They everywhere showed a front to the victors, and stalked slowly and sullenly away, while many rushed singly forth to meet assured death by contending with a multitude.

P 288 ". . .The arrangement was a dexterous one, if reference be only had to the policy of reducing the power of the Sikhs; but the transaction scarcely seems worthy of the British name and greatness. . ' ೧೨

'. . . .They (Sikhs) had however, earned a good deal and unlearned much regarding the British, but as was shown later on, they were not yet subdued, although they had found it was not bravery, of which they had plenty, nor numbers and good arms alone, that made a successful army, but also good generals and good leaders. . . .' ೧೩

"The Prime Minister, Sir Robert Peel speaking in the House of Commons quoted a letter received by a brave vetern chief (Sir Hugh Gough) 'Policy precluded me from publicity recording my sentiments on the splendid gallantry of our fallen foe, or record the acts of heroism displayed not only individually

೧೦. P 558 History of Sikh People by G.Singh
೧೧. P 284 History of Sikhs by Cunningham
೧೨. P 63 The Sikhs by Gorden
೧೩. P114 The Sikh and The Sikh wars by Charles Gough

almost collectively by the sikh sardars and army; and I declare were it not from a deep conviction that my country`s good demanded the sacrifice, I could have wept to witness the fearfull slaughter of so devoted a body of men.' ೧೪

P 113 The Sikhs and The Sikh wars by Charles Gough

'. . .Insubordinate as they had been politically, their discipline, and steadiness on the field were admirable. Their muskets were the same as ours, their arillery usually superior and their fire directed with precision. Such a foe could not be beaten without heavy losses on our part. It would even seem that if they had shown the same capacity for attack as for defence, if Tej Singh had known what to do with his fresh army at Feroz Shah, the frontier force with the Governor General and the commander in chief might have been crushed on December 22nd. It is evident that if the nature of the struggle before us had been realized, if it had not been created that there was a real chance of averting the war altogether, and that the sikh troops were too insubordinate to be dangerous, so small a force ought never to have been left to bear unsupported the brunt of such a contest.' ೧೫

ಇಂಗ್ಲೆಷ್‌ನವರು ತಮ್ಮ ಶತ್ರುಗಳ ಶೌರ್ಯವನ್ನು ಗುಣಗಾನ ಮಾಡುವ ತಮ್ಮ ಪ್ರೀತಿಯ ಹವ್ಯಾಸವನ್ನು ಮತ್ತು ಅವರ ಶತ್ರುಗಳ ಬೇಡಿ ಬದುಕುವ ಅಭ್ಯಾಸವನ್ನು ಹೀಯಾಳಿಸಿ, ಖಂಡಿಸುವ ಗುಣವನ್ನು ಅಳವಡಿಸಿಕೊಂಡಿದ್ದನ್ನು ೧೯ನೆಯ ಶತಮಾನದ ವೇಲ್ಸ್ ಪ್ರಾಂತ್ಯದ ಹೆಸರಾಂತ ರಾಜಕಾರಣಿ ಮತ್ತು ಇಂಗ್ಲೆಂಡ್‌ನ ಪ್ರಧಾನಿಯಾಗಿದ್ದ ಜಾರ್ಜ್ ಲಾಯಡ್‌ನ(೧೮೬೩-೧೯೪೫) ಈ ಉವಾಚ ಉದಹರಿಸಲು ಯೋಗ್ಯವಾಗಿದೆ :

"You have to fight for what you want. The English are

೧೪. P 113 The Sikhs and The Sikh wars by Charles Gough
೧೫. P 69 Tempestuos Journey Llyod George - His life and Times

by Frack Owen.
strong race; they possess the qualities as well as the defects of strong people. They have a very healthy contempt for the cringing. The man who crawls and creeps about their feet and licks the dust, they spurn and kick - and from the bottom of my heart I admire them for it'

ಫೆಬ್ರವರಿ ೨೦, ೧೮೪೬ ರಂದು, ಬ್ರಿಟಿಷ್ ಸೈನ್ಯ ರಾಜಧಾನಿ ಲಾಹೋರ್‌ನ್ನು ಆಕ್ರಮಿಸಿತು.

ಮಾರ್ಚ್ ೯, ೧೮೪೬ ರಂದು, ೧೬ ಅಂಶಗಳ ಸಂಧಿಪತ್ರಕ್ಕೆ ಸಿಖ್ ರಾಜ, ಸರದಾರರಾದ ಭಾಯಿ ರಾಮ್‌ಸಿಂಗ್, ಲಾಲ್‌ಸಿಂಗ್, ತೇಜ್‌ಸಿಂಗ್, ಚತ್ತರ್‌ಸಿಂಗ್ ಅತ್ತರಿವಾಲಾ, ರಾಂಜೋಧ ಸಿಂಗ್ ಮಜೀಥೀಯಾ, ದಿವಾನ್ ದೀನಾ ನಾಥ್, ಮತ್ತು ಫಕೀರ್ ಅಜೀಜುದ್ದೀನ್ ಸಹಿ ಹಾಕಿದರು.

ಸಂಧಿಯ ಮುಖ್ಯಾಂಶಗಳಲ್ಲಿ, ಜಲಂಧರ್ ಪ್ರದೇಶ, ಬಿಯಾಸ್ ಮತ್ತು ಸಿಂಧೂ ನದಿಗಳ ಮಧ್ಯೆ ಇರುವ ಪ್ರದೇಶಗಳನ್ನು ಬ್ರಿಟಿಷ್‌ರ ಸ್ವಾಧೀನಕ್ಕೆ ಬಿಟ್ಟುಕೊಡುವುದಾಗಿತ್ತು.

ಗುಲಾಬ್‌ಸಿಂಗ್ ಬ್ರಿಟಿಷ್‌ರಿಗೆ ನೀಡಿದ ಸಹಾಯ, ಸಹಕಾರಗಳಿಗೆ ಉತ್ತರವಾಗಿ ಅವನಿಂದ ಒಂದು ಕೋಟಿ ರೂಪಾಯಿ ಹಣ ಪಡೆದುಕೊಂಡು, ಅವನಿಗೆ ಜಮ್ಮೂ ಮತ್ತು ಕಾಶ್ಮೀರ ಪ್ರದೇಶಗಳನ್ನು ನೀಡಿದ್ದಲ್ಲದೆ, ಅವನಿಗೆ ಆ ರಾಜ್ಯಗಳ 'ಮಹಾರಾಜ' ಪದವಿ ನೀಡಿದರು ಬ್ರಿಟಿಷ್‌ರು. ೧೬

'The Raja of Jammu did not care to be simply the master of his native mountains, but as two-thirds of the pecuniary indemnity required from Lahore could not be mode good, territory was taken instead of money, and Kashmir and the hill states from the Beas to the Indus vere cut off from the Punjab proper, and transferred to Gulab Singh as a separate sovereign for a million pounds sterling. The arrangement was a dexterous one, if reference be only had to the policy of reducing the power of the sikhs; but transaction scarcclly seems worthy of the British name and greatness, and the objections become stronger when it is considered

---

೧೬. History of Sikhs by Cunningham

that Gulab Singh had agreed to pay sixty - eight lakhs of rupees as a fine to his paramount before the war broke out, and the custom of the east as well as of the west requires the feudatory to aid his lord in foreign war and domestic strife. Gulab Singh ought thus to have paid the deficient million of money as a Lahore subject, instead of being put in possession of Lahore provinces as an an independent prince. . .'

ಸಿಖ್ ಸೈನ್ಯದಳದ ಸೈನಿಕರ ಸಂಖ್ಯೆಯನ್ನು ಕೇವಲ ೨೦೦೦೦ ಕ್ಕೆ ಇಳಿಸಲಾಯಿತು.

ಸಿಖ್‌ಸೈನ್ಯದ ವಶದಲ್ಲಿದ್ದ ಯುದ್ಧಸಾಮಗ್ರಿಗಳನ್ನು (೩೬ ಗನ್‌ಗಳು) ಮುಟ್ಟುಗೋಲು ಹಾಕಲಾಯಿತು.

ಪಂಜಾಬ್ ಪ್ರದೇಶದೊಳಗೆ ಬ್ರಿಟಿಷ್‌ರಿಗೆ ಮತ್ತು ಸೈನ್ಯಕ್ಕೆ ಸ್ವತಂತ್ರವಾಗಿ ಸಂಚರಿಸುವ, ಸಾಗುವ ಹಕ್ಕು ಪಡೆಯಲಾಯಿತು.

ಯಾವುದೇ ಬ್ರಿಟಿಷ್, ಯೂರೋಪಿಯನ್ ಮತ್ತು ಅಮೆರಿಕನ್ ಸೈನ್ಯಾಧಿಕಾರಿಗಳ ಸೇವೆಯನ್ನು ಪಡೆಯದಂತೆ ನಿರ್ಬಂಧನೆ ಹೇರಲಾಯಿತು.

ಬ್ರಿಟಿಷ್ ಸೈನ್ಯವನ್ನು ಲಾಹೋರ್‌ನಲ್ಲಿ ಒಂದು ವರ್ಷದವರೆಗೆ ಇರಿಸಿಕೊಳ್ಳುವ ಹಕ್ಕನ್ನು ಇರಿಸಿಕೊಳ್ಳಲಾಯಿತು. ಏಳು ವರ್ಷ ಆರು ತಿಂಗಳು ವಯಸ್ಸಿನ ಮಹಾರಾಜ ದಿಲೀಪ್ ಸಿಂಗ್ ಈ ಸಂಧಿಪತ್ರಿಕಾಕ್ಕೆ ಸಹಿ ಹಾಕಿದ್ದು ಒಂದು ವಿಶೇಷವಾಗಿತ್ತು.

ಮುಂದೆ ಒಂದು ಪ್ರತ್ಯೇಕ ಒಪ್ಪಂದದ ಪ್ರಕಾರ, ಬ್ರಿಟಿಷ್‌ರು ಗುಲಾಬ್‌ಸಿಂಗ್‌ನಿಂದ ೭೫ ಲಕ್ಷ ರೂಪಾಯಿ ಹಣ ಒಪ್ಪಿಸಿಕೊಂಡು ಜಮ್ಮೂ ರಾಜ್ಯ ಜೊತೆಗೆ ಕಾಶ್ಮೀರವನ್ನೂ ಅವನಿಗೆ ನೀಡಿದರು. ಇದರಿಂದ ಕೋಪಗೊಂಡ ರಾಣಿ ಜಿಂದಾನ್‌ಳು, ಜಲಂಧರ್ ಪ್ರದೇಶಗಳ ಕಮಿಶನರ್ ಆಗಿ ನೇಮಗೊಂಡಿದ್ದ ಹೆನ್ರಿ ಲಾರೆನ್ಸ್‌ಗೆ ಫಿರ್ಯಾದು ಮಾಡಿದಳು. ಅವಳ ಅನುರೋಧಕ್ಕೆ ಸೊಪ್ಪು ಹಾಕದ ಲಾರೆನ್ಸ್, ಗುಲಾಬ್ ಸಿಂಗ್ ನೀಡಿದ ಹಣಕ್ಕೆ ಪ್ರಾಮುಖ್ಯತೆ ನೀಡಿ, ರಾಣಿಯ ಹಕ್ಕನ್ನು ಕಡೆಗಾಣಿಸಿದ.

ಪಿತೂರಿಗಾರ, ದೇಶದ್ರೋಹಿ, ಲಂಚಕೋರ ಲಾಲ್‌ಸಿಂಗ್‌ನನ್ನು ಪಂಜಾಬ್‌ನ ಪ್ರಧಾನಿಯನ್ನಾಗಿ ನೇಮಿಸಿದರೂ, ಅವನು ತನ್ನ ಧಣಿಗೆ, ದೇಶಕ್ಕೆ ಮತ್ತು ಆತ್ಮಕ್ಕೆ ದ್ರೋಹ ಬಗೆದು, ಪರಕೀಯ ಬ್ರಿಟಿಷ್‌ರಿಗೆ ಸಹಾಯ ನೀಡಿದರೂ, ತನಗೆ ಗುಲಾಬ್‌ಸಿಂಗ್‌ನಿಗೆ ನೀಡಿದ ಸ್ಥಾನಮಾನ ಮತ್ತು ಪ್ರತ್ಯೇಕ ರಾಜ್ಯ ನೀಡಲಿಲ್ಲವೆಂದು ಕರುಬಿದ, ಹಲುಬಿದ ಮತ್ತು ಶೋಕಿಸಿದ. ೧೭

೧೭. P 322 History of Sikhs by Cunningham

'The base sycophant thus congratulated himself on the approaching success of all his treasures which had simply, for their object his own personal aggrandizement at the expense of Sikh independence. . .'

ಲಾಲ್‌ಸಿಂಗ್, ಕಾಶ್ಮೀರದ ರಾಜ್ಯಪಾಲನಾಗಿದ್ದ ಇಮಾಮುದ್ದೀನ್‌ನಿಗೆ, ಬ್ರಿಟಿಷ್‌ರು ಗುಲಾಬ್‌ಸಿಂಗ್ ನೀಡಿದ ಕಾಶ್ಮೀರದಿಂದಾಗಿ ಸ್ಥಾನಮಾನ ಪದವಿ ಬಿಟ್ಟು ಕೊಡಬೇಕಾಗುತ್ತದೆ ಎಂದು ಹೇಳಿ, ಆತ, ಕಾಶ್ಮೀರ ರಾಜ್ಯವನ್ನು ಗುಲಾಬ್‌ಸಿಂಗ್‌ನಿಗೆ ನೀಡುವುದನ್ನು ಪ್ರತಿಭಟಿಸಿ ನಿಲ್ಲಬೇಕೆಂಧು, ಅದಕ್ಕೆ ತಾನು ಬೆಂಬಲ ನೀಡುವುದಾಗಿ ಗುಪ್ತನಾಗಿ ತಿಳಿಸಿದ. ಆದರೆ ಇಮಾಮುದ್ದೀನ್, ಲಾಲ್‌ಸಿಂಗನ ಹಂಚಿಕೆಯನ್ನು ಬ್ರಿಟಿಷ್ ಅಧಿಕಾರಿ ಲಾರೆನ್ಸ್‌ನಿಗೆ ತಿಳಿಸಿದಾಗ ಆತ ಕೆರಳಿ ಕೆಂಡವಾದ. ಲಾಲ್‌ಸಿಂಗನನ್ನು ಸೆರೆಹಿಡಿದು, ಅವನ ಮೇಲೆ ಖಟ್ಲೆ ಹೂಡಿ, ತಪ್ಪಿತಸ್ಥ ಎಂದು ತೀರ್ಮಾನಿಸಿ, ಅವನ ಸಮಸ್ತ ಆಸ್ತಿಗಳನ್ನು ಮುಟ್ಟುಗೋಲು ಹಾಕಿ ಅವನನ್ನು ರಾಜ್ಯದಿಂದ ಗಡೀಪಾರು ಮಾಡಲಾಯಿತು. ನೀಚ ದೇಶದ್ರೋಹಿಯ ಅಂತ್ಯ ಹೀಗೆ ಅವಮಾನದ ರೀತಿಯಲ್ಲಿ ಕೊನೆಗೊಂಡಿತು.

ಇನ್ನೊಬ್ಬ ದೇಶದ್ರೋಹಿ ತೇಜ್‌ಸಿಂಗ್ ಕೂಡ ತನಗೆ ಒಂದು ಸ್ವತಂತ್ರ ಪ್ರದೇಶದ ರಾಜನಾಗುವ ಯತ್ನ ಮಾಡಿದ. ಆದರೆ ಅವನ ಪ್ರಯತ್ನಕ್ಕೆ ಬ್ರಿಟಿಷ್‌ರು ಯಾವ ಉತ್ಸುಕತೆ ತೋರಿಸದೆ ಅವನನ್ನು ಕಡೆಗಾಣಿಸಿದರು. ೧೮

They dishonored gratitude by regarding it as an attenuated form of slavery; according to them, by accepting a favor, one alienated in exchange a portion of one's liberty. If it was a great favor, the prevailing custom made it necessary to say to one's benefactor that one was his slave. They dishonored love: to be in love with anybody, for them, it meant either acquiring the beloved as one's property, or else, if that were not possible, submiting oneself to her slavishly in order to be able to satisfy the lusts of the flesh, even if it meant sharing her with ten or twelve others. They dishonored patriotism, by conceiving patriotism as the will to reduce all men to slavery who were not their compatriots. But it would be shorter to enumerate that they didn't dishonor. We should probably not find anything.

---

೧೮. P 272 The Need for Roots By Simon Veil

Among other things, they dishonored sovereignty. The ancient conception of legitimate sovereignty, as far as one is able to conjecture, seems to have been extremely beautifull. One can only form a conjecture, for it didn't exist among the Greeks. But very likely it is this conception which survived in Spain until the seventeenth century, and has survived to a much feebler extent in England upto the present time.

ಒಂದು ವರ್ಷದವರೆಗೆ ಬ್ರಿಟಿಷ್ ಸೈನ್ಯ ಲಾಹೋರ್‌ನಲ್ಲಿ ಠಿಕಾಣಿ ಹೂಡುವ ಹಕ್ಕನ್ನು ಪಡೆದ ಬ್ರಿಟಿಷ್‌ರಿಗೆ, ಸಿಖ್ ಸರದಾರರು, ಗಣ್ಯರು, ರಾಣಿ ಜಿಂದಾನ್‌ಳೂ ಕೂಡ, ಡಿಸೆಂಬರ್ ೧೮೪೬ರಲ್ಲಿ ಬ್ರಿಟಿಷ್ ಗವರ್ನರ್ ಜನರಲ್‌ಗೆ ಬ್ರಿಟಿಷ್ ಸೈನ್ಯ ಯುವ ಮಹಾರಾಜ ದಿಲೀಪ್‌ಸಿಂಗ್ ೧೮೫೪ರಲ್ಲಿ ಪ್ರಾಪ್ತ ವಯಸ್ಸಿಗೆ ಬರುವ ವರೆಗೆ ಇರಲು ಕೋರಿದರು. ಪಂಜಾಬ್‌ನ ಸಕಲ ವರ್ಗದ ಅಧಿಕಾರಿಗಳಲ್ಲಿ, ತಮ್ಮೊಳಗೆ ಇದ್ದ ಸಂಶಯ, ಭಯ, ಆತಂಕ, ವೈಮನಸ್ಸು, ಈರ್ಷೆ ಎಲ್ಲವೂ ಬ್ರಿಟಿಷ್‌ರ ಇರುವು, ಮಧ್ಯಸ್ಥಿಕೆ, ಆಸರೆ ಬೇಕಾಗಿದ್ದು, ಅವರ ನೇತೃತ್ವದಲ್ಲಿ ತಾವು ಕಲಹವಾಡದೆ ಕ್ಷೇಮದಿಂದಿರಬಹುದೆಂದು ನಂಬಿದರು. ಅವರ ಆ ನಂಬಿಕೆ ಬ್ರಿಟಿಷ್‌ರಿಗೆ ಅನುಕೂಲಸಿಂಧುವಾಗಿದ್ದು ಸಹಜವಾಗಿತ್ತು.

ಭಾರತದ ಇತಿಹಾಸದಲ್ಲಿ ಜರುಗಿದ ಇಂತಹ ಅನೇಕ ನಿದರ್ಶನಗಳನ್ನು ಇತಿಹಾಸಕಾರರು ನೀಡಿರುತ್ತಾರೆ. ನಮ್ಮ ಮೈಸೂರಿನಲ್ಲೇ ಅಗಲಿ, ಮರಾಠಾ ಇತಿಹಾಸದಲ್ಲೇ ಆಗಲಿ, ಪರಸ್ಪರ ಕಚ್ಚಾಟ, ಅಪನಂಬಿಕೆ ಈರ್ಷ್ಯೆ, ವೈಮನಸ್ಸು, ಹೇಡಿತನ, ಸ್ವಾರ್ಥತನ, ಎಲ್ಲವೂ ಬ್ರಿಟಿಷ್‌ರ ತೆಕ್ಕೆಗೆ ತಾವು ಓಡೋಡಿ ಬಿದ್ದು ತಮ್ಮ ಸ್ವಾತಂತ್ರ್ಯ, ಸ್ವಾಭಿಮಾನ, ಸ್ಥಾನಮಾನ, ಅಂತಿಮವಾಗಿ ಆತ್ಮವನ್ನೇ ಕಳೆದುಕೊಂಡು, ಶತಮಾನಗಳ ಕಾಲ ಅವರ ಗುಲಾಮರಾಗಿ ಕಳೆದಿದ್ದು ಐತಿಹಾಸಿಕ ಸತ್ಯವಾಯಿತು.

ಪೇಶ್ವೆ ಬಾಜಿರಾಯ ಒಬ್ಬ ನಿಷ್ಕ್ರಿಯ ಹಾಗೂ ನಾಲಾಯಕ್ ಪೇಶ್ವೆಯಾಗಿದ್ದವ. ಮರಾಠಾ ಸರದಾರರಾದ ಸಿಂಧಿಯಾ ಮತ್ತು ಹೋಲ್ಕರರು ಅವನ ವಿರುದ್ಧ ಯುದ್ಧ ಹೂಡಿದಾಗ, ಆತ ಬ್ರಿಟಿಷ್‌ರ ಮೊರೆಹೋಗಿ, (೧೮೦೨) ಅವರ ಸೈನ್ಯದ ತುಕಡಿಯನ್ನು ತನ್ನ ರಾಜ್ಯದಲ್ಲಿರಿಸಲು ಸಮ್ಮತಿಸಿದ್ದು, ಮರಾಠಾ ರಾಜ್ಯದ ಅವನತಿಗೆ ಕಾರಣವಾಯಿತು ಎಂದಿದ್ದಾರೆ ಇತಿಹಾಸಕಾರರು.

ಅದೇ ರೀತಿ, ಗುಲಾಬ್‌ಸಿಂಗ್, ಸಿಖ್ಖರ ಅನುಯಾಯಿ, ಸಾಮಂತನಾಗಿ ಆಳಿದರೂ, ಬ್ರಿಟಿಷ್‌ರಿಗೆ ತನ್ನ ಸಂಪೂರ್ಣ ಬೆಂಬಲ ನೀಡಿ, ಅವರು ಕಾಬೂಲ್‌ನಿಂದ, ಪಠಾಣರ ವಿರುದ್ಧ ಸೋತು ಹಿಮ್ಮೆಟ್ಟಿ ಬರುವಾಗ, ಅವರಿಗೆ (೧೯–೧–೧೮೪೨) ಸಕಲ ರೀತಿಯಲ್ಲಿ ಸಹಾಯ, ಸಹಕಾರ ನೀಡಿ ಅವರನ್ನು ಪಾರು ಮಾಡಿದ್ದಕ್ಕೆ, ಅವನಿಗೆ ಬ್ರಿಟಿಷ್‌ರು

ರಾಜ ಪದವಿ ನೀಡಿ ಜಮ್ಮೂ ರಾಜ್ಯದ ಜೊತೆಗೆ ಕಾಶ್ಮೀರವನ್ನು ಬಳುವಳಿಯಾಗಿ ನೀಡಿದರು. ಒಂದು ವೇಳೆ ಗುಲಾಬ್ ಸಿಂಗ್, ಬ್ರಿಟಿಷ್‌ರಿಗೆ ಸಹಾಯ ಮಾಡದೆ, ಸಿಖ್‌ರಿಗೆ ಸಹಾಯ ಎಸಗಿದ್ದರೆ, ಭಾರತದ ಇತಿಹಾಸದಲ್ಲಿ ಅವನು ಒಂದು ಹೊಸ ಅಧ್ಯಾಯ ಬರೆದು ಅವನ ಹೆಸರು ಸ್ಥಿರಸ್ಥಾಯಿಯಾಗಿ ನಿಲ್ಲುತ್ತಿತ್ತು.

ಸಿಖ್ ಗಣ್ಯರ ಅನುರೋಧಕ್ಕೆ ಮಣಿದು ಬ್ರಿಟಿಷ್‌ರು ಡಿಸೆಂಬರ್ ೧೬, ೧೮೪೬ರಲ್ಲಿ ಮತ್ತೊಂದು ಸಂಧಿಗೆ ಸಹಿ ಹಾಕಿದರು. ಅದರ ಪ್ರಕಾರ, ಮಹಾರಾಜ ದಿಲೀಪ್ ಸಿಂಗ್ ಪ್ರಾಪ್ತ ವಯಸ್ಸಿಗೆ ಬರುವ ತನಕ, ಅಂದರೆ ೧೮೫೪ರ ವರೆಗೆ ಬ್ರಿಟಿಷ್‌ರು ತಮ್ಮ ಸೈನ್ಯವನ್ನು ಲಾಹೋರ್‌ನಲ್ಲಿರಿಸಿದರು. ರಾಣಿ ಜಿಂದಾನ್‌ಳನ್ನು ರೀಜೆಂಟ್ ಪದವಿಯಿಂದ ಕೆಳಗಿಳಿಸಿ ಅವನಿಗೆ ಪಿಂಚಣಿ ನೀಡಿದರು. ಲಾರೆನ್ ಮಹಾಶಯನನ್ನು ಬ್ರಿಟಿಷ್ ರೆಸಿಡೆಂಟ್ ಆಗಿ ನೇಮಕ ಮಾಡಲಾಯಿತು. ಅವಳ ಬದಲಿಗೆ ರೆಜೆನ್ಸೀಯ ಎಂಟು ಮಂದಿಯ ಒಂದು ಪರಿಷತ್ತನ್ನು ನೇಮಿಸಲಾಯಿತು.

ಸಿಖ್ ಸಾಮ್ರಾಜ್ಯ ಸಂಪೂರ್ಣವಾಗಿ ಅತಂತ್ರವಾಯಿತು.

ಸಿಖ್‌ರು ಅಧಿಕಾರ ಕಳೆದುಕೊಂಡರೂ ಅಲ್ಲಲ್ಲಿ ದಂಗೆ ಪ್ರತಿರೋಧ, ಕದನ ಜರುಗಿಸುವುದನ್ನು ಕಡಿಮೆ ಮಾಡಲಿಲ್ಲ. ಬ್ರಿಟಿಷ್‌ರು ಕೂಡ ತಮ್ಮ ಸ್ವಾಭಾವಿಕ ಗುಣಗಳಿಂದ, ಕುಟಿಲತೆ, ಇಬ್ಬಗೆಯ ನೀತಿ, ಒಡೆದು ಆಳುವ ತಂತ್ರ ಎಲ್ಲವನ್ನೂ ಉಪಯೋಗಿಸಿ, ಸಿಖ್‌ರ ಪ್ರಾಬಲ್ಯವನ್ನು ತಗ್ಗಿಸಿದರು. ಬಹುಸಂಖ್ಯಾತ ಮುಸ್ಲಿಮ್ ಪಠಾಣರನ್ನು ಮತ್ತು ಪಂಜಾಬಿ ಮುಸ್ಲಿಮ್‌ರನ್ನು ಎತ್ತಿಕಟ್ಟಿ, ಸಿಖ್‌ರ ವಿರುದ್ಧ ಕುಟಿಲೋಪಾಯ ಸಮರ ಸಾಗಿಸಿದರು. ಸಿಖ್‌ರ ಸ್ವಾಯತ್ತದಲ್ಲಿದ್ದ ಮುಲ್ತಾನ್ ಮತ್ತು ಹಜಾರಾ ಪ್ರದೇಶಗಳ ಮೇಲೆ ತನ್ನ ಅಧಿಕಾರ ಸ್ಥಾಪಿಸಲು, ಅಲ್ಲಿನ ಸಿಖ್ ಸರದಾರರ ವಿರುದ್ಧ ನಾಗರೀಕರು ದಂಗೆ ಏಳುವಂತೆ ಮಾಡಿ, ತಮ್ಮ ಸೈನ್ಯವನ್ನು ಅಲ್ಲಿ ನುಗ್ಗಿಸಿ, ಸಿಖ್‌ರನ್ನು ಅಲ್ಲಿಂದ ಕಾಲ್ತೆಗೆಯುವಂತೆ ಮಾಡಿದರು. ಬ್ರಿಟಿಷ್ ಅಧಿಕಾರಿಗಳಲ್ಲಿ ಕ್ಯಾಪ್ಟನ್ ಅಬ್ಬಾಟ್‌ನ ಪಾತ್ರ ಅತ್ಯಂತ ಗಣನೀಯವಾಗಿತ್ತು ಎಂದಿದ್ದಾರೆ ಇತಿಹಾಸಕಾರರು. ಹಜಾರಾದ ಸಿಖ್ ರಾಜ್ಯಪಾಲ ಸರದಾರ್ ಚತ್ತರ್‌ಸಿಂಗ್ ಅತ್ತಾರಿವಾಲನನ್ನು ಅವಮಾನಗೊಳಿಸಿದ ಅವರ ಬ್ರಿಟಿಷ್ ಸಲಹೆಗಾರ ಅಬ್ಬಾಟ್. ಹಜಾರಾದ ಮುಸ್ಲಿಮ್ ಪ್ರಜೆಗಳು ಸರದಾರನ ವಿರುದ್ಧ ದಂಗೆ ಏಳುವಂತೆ ಮಾಡಿ ಅವನಿಗೆ ಉಪದ್ರವ ನೀಡಿ ಸುಖ ಪಟ್ಟ ಅಬ್ಬಾಟ್. (ಅಬ್ಬಾಟಾಬಾದ್ ಎಂದು ಅವನ ಹೆಸರಿನಲ್ಲಿ ಕರೆಯಲಾದ ನಗರ ಇಂದಿಗೂ ಆ ಪ್ರದೇಶದ ಮುಖ್ಯ ಜಿಲ್ಲಾ ನಗರವಾಗಿ ನಿಂತಿದೆ.) ೧೯

ಮುಲ್ತಾನ್‌ನ ರಾಜ್ಯಪಾಲ ಮುಲ್‌ರಾಜ್ ಜನಹಿತ ಕಾರ್ಯ ಮಾಡಿ ಪ್ರಜೆಗಳಿಂದ ಅಪಾರ ಮನ್ನಣೆ ಪ್ರೀತಿ ವಿಶ್ವಾಸ ಗಳಿಸಿದ್ದ. ಬ್ರಿಟಿಷ್‌ರು ಮುಲ್ತಾನ್ ಪ್ರದೇಶವನ್ನು

---

೧೯. P 565 History of Sikh People by G.Singh

ತಮ್ಮ ವಶ ತೆಗೆದುಕೊಳ್ಳುವ ಉದ್ದೇಶದಿಂದ ಅವನ ವಿರುದ್ಧ ಸಂಚು ಹೂಡಿದರು. ಮುಲ್‌ರಾಜನ ಸ್ಥಾನಕ್ಕೆ ಒಬ್ಬ ಸಿಖ್ ಸರದಾರ ಕಹಾನ್‌ಸಿಂಗ್ ಮಾನ್‌ನಿಗೆ ನೀಡಿದರು. ಆತ ಮುಲ್ತಾನ್‌ನಿಗೆ ಬಂದಾಗ ಉನ್ಮತ್ತ ಜನ ಹೋರಾಟಕ್ಕೆ ಸಿದ್ಧರಾದರು. ಮುಲ್‌ರಾಜ್ ಶಾಂತಿ ಮಂತ್ರ ಪಠಿಸಿ, ಪದವಿ ಬಿಟ್ಟುಕೊಡಲು ಸಿದ್ಧವಿದ್ದರೂ, ಜನ ಸುಮ್ಮನೆ ಕೂಡಲಿಲ್ಲ. ಆದರೆ ಬ್ರಿಟಿಷರ ಬಲ ಮತ್ತು ಲಾಹೋರ್‌ನ ಸಿಖ್ ಸೈನಿಕರ ಮುಂದೆ ಜನರ ಹೋರಾಟ ಸಾಗದೆ, ಮುಲ್‌ರಾಜ್‌ನ ಉಚ್ಚಾಟನೆ ಆಯಿತು.

ರಾಣಿ ಜಿಂದಾನ್‌ಳನ್ನು ಈ ವಿದ್ರೋಹಕ್ಕೆ ಕಾರಣವೆಂದು ಆಪಾದಿಸಿ ಆಕೆಯನ್ನು ಪಂಜಾಬ್‌ನಿಂದ ಗಡೀಪಾರು ಮಾಡಿ, ದೂರದ ಹಿಂದೂ ಪವಿತ್ರ ಕ್ಷೇತ್ರ ಬೆನಾರಸ್‌ಗೆ ಸಾಗಿಸಲಾಯಿತು. (ಮೇ ೧೫, ೧೮೪೮)

ಈಗಾಗಲೇ ಮಾರ್ಚ್ ೬, ೧೮೪೮ ರಂದು ನೂತನ ಗವರ್ನರ್ ಜನರಲ್ ಆಗಿ ಲಾರ್ಡ್ ಡಾಲ್‌ಹೌಸಿಯ ನೇಮಕವಾಗಿತ್ತು. ಫ್ರೆಡ್‌ರಿಕ್ ಕರೀ ಎಂಬಾತನನ್ನು ನೂತನ ರೆಸಿಡೆಂಟ್ ಆಗಿ ಲಾಹೋರ್‌ನಲ್ಲಿ ನೇಮಕ ಮಾಡಲಾಗಿತ್ತು. ಇಬ್ಬರ ಉದ್ದೇಶವೂ ಪಂಜಾಬ್‌ನ್ನು ಬ್ರಿಟಿಷ್‌ರ ಆಡಳಿತಕ್ಕೆ ವಶಪಡಿಸಿಕೊಳ್ಳುವುದಾಗಿತ್ತು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿಸ್ತೀರ್ಣದ ಅಭಿಲಾಶೆ ಇರಿಸಿಕೊಂಡ ಲಾರ್ಡ್ ಡಾಲ್‌ಹೌಸಿ ಕ್ರಮೇಣ ತನ್ನ ನಿಜರೂಪ ತೋರಿಸಿದ.

"Unwarned by precedents, Uninflamed by example, the Sikh nation had called for war and on my word, Sir, they shall have it with a vengeance- ೨೦

ಎಂದು ನುಡಿದ ಡಾಲ್‌ಹೌಸಿ, ಸಿಖ್ ಸಾಮ್ರಾಜ್ಯದ ಸರ್ವ ನಾಶಕ್ಕೆ ಸಿದ್ಧನಾದ.

ಹಜಾರಾ ಪ್ರದೇಶದ ರಾಜ್ಯಪಾಲ ಸರದಾರ್ ಚತ್ತರ್‌ಸಿಂಗ್ ತನ್ನ ಮಗಳನ್ನು ರಾಜಕುಮಾರ ದಿಲೀಪ್ ಸಿಂಗ್‌ನಿಗೆ ಲಗ್ನ ಮಾಡಿಕೊಡುವ ಇಚ್ಛೆಯನ್ನು ಬ್ರಿಟಿಷ್‌ರಿಗೆ ತಿಳಿಸಿ ಅವರಿಂದ ಸೂಕ್ತ ಅಂಗೀಕಾರದ ಸೂಚನೆಗೆ ಕಾದ. ಆದರೆ ಅವನ ಯಾವ ಪತ್ರ ಅಥವಾ ಸೂಚನೆಗೆ ಅವರು ಉತ್ತರ ನೀಡದ ಕಾರಣ ಅವನು ಬ್ರಿಟಿಷ್‌ರಿಗೆ ಒಂದು ವರ್ಷದೊಳಗೆ ಉತ್ತರ ಬರದಿದ್ದಲ್ಲಿ ತನ್ನ ಸ್ಥಾನ ತೊರೆದು ತೀರ್ಥಯಾತ್ರೆ ಕೈಗೊಳ್ಳುವನೆಂದು ತಿಳಿಸಿದ. ಆದರೆ, ಈ ಹಿಂದೆ ಜರುಗಿದ ಕದನದಲ್ಲಿ ಒಬ್ಬ ಅಮೆರಿಕನ್ ಯೋಧ ಕರ್ನಲ್ ಕೆನೋರಾನ ಹತ್ಯೆ ಮಾಡಿದ್ದರ ಪ್ರಯುಕ್ತ, ಚತ್ತರ್‌ಸಿಂಗ್‌ನ ಜಾಗಿರ್‌ನ್ನು ಜಪ್ತಿ ಮಾಡಿದರು. ಕೆರಳಿದ ಸಿಂಗ್ ಬ್ರಿಟಿಷ್‌ರ ವಿರುದ್ಧ ಸಮರ ಹೂಡಲು ನಿರ್ಧರಿಸಿದ. ಇದುವರೆಗೂ ಬ್ರಿಟಿಷ್‌ರ ಸ್ನೇಹಿತನಾಗಿ, ಅವರ ಸಾಮಂತನಾಗಿ 'ರಾಜ'ನೆಂಬ ಬಿರುದು ಪಡೆದಿದ್ದ ಅವನ ಮಗ ಶೇರ್‌ಸಿಂಗ್ ತಂದೆಯನ್ನು ಬೆಂಬಲಿಸಿ ತನ್ನ ಯೋಧರೊಂದಿಗೆ

---

೨೦. P 567 History of Sikh People by G.Singh

ಬ್ರಿಟಿಷ್ಖರ ವಿರುದ್ಧ ಹೋರಾಡಲು ಸಿದ್ಧನಾದ.

ವಿಚಿತ್ರವೆಂದರೆ, ಈ ಸಿಖ್ ಸರದಾರರು ಬ್ರಿಟಿಷ್ಖರ ವಿರುದ್ಧ ಸಮರ ಸಾಗಿಸಿದರೂ, ಅದು ತಮ್ಮ ಸಿಖ್ ಸಾಮ್ರಾಟನ ವಿರುದ್ಧವೂ ಆಗಿತ್ತು. ಯಾಕೆಂದರೆ, ಬ್ರಿಟಿಷ್ಖರು ರಾಜ ದಿಲೀಪ್‌ಸಿಂಗ್‌ನ ಪಂಜಾಬ್ ಪ್ರಾಂತ್ಯವನ್ನು ಸಂಪೂರ್ಣವಾಗಿ ತಮ್ಮ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳದೆ, ರಾಜನಿಗೆ ಮತ್ತು ರಾಜನ ಆಸ್ಥಾನಿಕರಿಗೆ ತಮ್ಮ ಪ್ರದೇಶಗಳನ್ನು ಆಳುವ ಸ್ವತಂತ್ರ ನೀಡಿದ್ದರು. ಈಗ ತಂದೆ ಮಗ ಹೂಡಿದ ಯುದ್ಧ ಒಂದು ರೀತಿಯಲ್ಲಿ ಬ್ರಿಟಿಷ್ಖರಿಗೆ ಪಂಜಾಬ್‌ನ್ನು ತಮ್ಮ ಹಿಡಿತದಲ್ಲಿರಿಸಿಕೊಳ್ಳಲು ಒಳ್ಳೆಯ ಅವಕಾಶ ಒದಗಿ ಬಂದಿತ್ತು. ಆ ಅವಕಾಶವನ್ನು ಅತ್ಯಂತ ಉಪಯುಕ್ತವಾಗಿ ಉಪಯೋಗಿಸಿಕೊಂಡ ಚಾಣಾಕ್ಷ ಡಾಲಹೌಸಿ.

ಚತ್ತರ್‌ಸಿಂಗ್ ಮತ್ತು ರಾಜ ಶೇರ್‌ಸಿಂಗ್ ತಮ್ಮ ಸಿಖ್ ಸೈನ್ಯದೊಂದಿಗೆ, ಗಡಿ ಪ್ರದೇಶಗಳಾದ ಬನ್ನೂ, ಪೆಶಾವರ್ ಮತ್ತು ಅಟ್ಟೋಕ್ ಕೋಟೆಗಳನ್ನು ವಶಪಡಿಸಿಕೊಳ್ಳುವದರಲ್ಲಿ ಸಫಲಗೊಂಡರು. ಅವರಿಗೆ ಸಂಪೂರ್ಣ ಸಹಕಾರ, ಸಹಾಯ ನೀಡಿದರು ಅವರ ಸೈನ್ಯದಲ್ಲಿದ್ದ ಪಠಾಣ ಸೈನಿಕರು.

ಬ್ರಿಟಿಷ್ ಸೈನ್ಯಾಧಿಕಾರಿ ಲಾರ್ಡ್ ಗೋಫ್ (Lord Gough) ನ ನೇತೃತ್ವದಲ್ಲಿ ಬ್ರಿಟಿಷ್ ಸೈನ್ಯ ಚಿನಾಬ್ ನದಿಯ ಬಲದಂಡೆಯ ಮೇಲೆ ಬೀಡು ಬಿಟ್ಟಿದ್ದ ರಾಜ ಶೇರ್‌ಸಿಂಗ್‌ನ ಸೈನ್ಯದ ಮೇಲೆ ದಾಳಿ ನಡೆಸಿದ (ನವೆಂಬರ್ ೨೨)

ಗುಜ್ರಾತ್ ಜಿಲ್ಲೆಯ ಜಲಿಯನ್‌ವಾಲಾ ಎಂಬಲ್ಲಿ ನಡೆದ ಘೋರ ಯುದ್ಧದಲ್ಲಿ ಎರಡೂ ಕಡೆ ಅಪಾರ ಸಾವು ನೋವು ಉಂಟಾಯಿತು. ಆ ಯುದ್ಧ ಸಿಖ್ ಯುದ್ಧಗಳಲ್ಲಿ ಜರುಗಿದ್ದ ಸಮರದಲ್ಲಿ ಅತ್ಯಂತ ಭಯಂಕರವಾಗಿತ್ತು ಎಂದರು ಇತಿಹಾಸಕಾರರು. ಒಂದೇ ದಿನದ ಯುದ್ಧದಲ್ಲಿ ೨೩೩೧ ಸೈನಿಕರು ಹತರಾದರು. ಭಾರತದಲ್ಲಿ ಇದುವರೆಗೂ ಜರುಗಿದ ಯಾವುದೇ ಯುದ್ಧರಂಗದಲ್ಲಿ ಸಿಖ್ಖರ ಅಪ್ರತಿಮ ಸಾಹಸ, ಜೀವ ಹಂಗು ತೊರೆದು, ಶತ್ರುಗಳ ಕತ್ತಿ, ಬಂದೂಕುಗಳಿಗೆ ತಮ್ಮ ಎದೆಗಳನ್ನು ಒಡ್ಡಿ ವೀರಾವೇಷದಿಂದ ಹೋರಾಡಿದ ಅನುಭವ ಬ್ರಿಟಿಷ್ಖರಿಗೆ ಆಗಿರಲಿಲ್ಲ. ಬ್ರಿಟಿಷ್ ಸೈನ್ಯ ಸೋತು ಹಿಮ್ಮೆಟ್ಟಿತು. ಸುದ್ದಿ ಅರಿತ ಬ್ರಿಟಿಷ್ ಜನಾಂಗ, ಲಂಡನ್‌ನ ಆಡಳಿತಗಾರರು ಭಯಭೀತರಾದರು. ಭಾರತದಲ್ಲಿ ತಮ್ಮ ಪಡೆ ಎಲ್ಲೆಲ್ಲೂ ಜಯಭೇರಿ ಗಳಿಸಿ, ದೇಶವನ್ನು ಆಕ್ರಮಿಸಿ, ಆಳಿ ವಿಜೃಂಭಿಸುವ ಸಮಯದಲ್ಲಿ ಸಿಖ್ಖರಿಂದ ಸೋಲು, ಸಾವು ನೋವು ಅನುಭವಿಸುವ ಸಂಗತಿ ಅವರಿಗೆ ಭ್ರಮೆ ಉಂಟಾಗಿತ್ತು. ಸೈನ್ಯಾಧಿಕಾರಿ ಗೋಫ್‌ನನ್ನು ಹಿಂದೆಗೆದು ಬೇರೊಬ್ಬನನ್ನು ನೇಮಿಸಬೇಕೆಂದು ಹುಯಿಲ್ಲೆಬ್ಬಿಸಿದರು.

ಈ ಮಧ್ಯೆ ಮುಲ್ತಾನ್ ಬ್ರಿಟಿಷ್ಖರ ಹಿಡಿತಕ್ಕೆ ಬಂದಿತು. ರಾಜ್ಯಪಾಲ ಮುಲ್‌ರಾಜ್‌ನನ್ನು ಸೆರೆ ಹಿಡಿದು, ಕಲ್ಕತ್ತಾಗೆ ಕೊಂಡೊಯ್ದು ಅವನಿಗೆ ಜೀವಾವಧಿ ಶಿಕ್ಷೆ ನೀಡಿದರು. ಅವನನ್ನು ಬನಾರಸ್‌ಗೆ ಕೊಂಡೊಯ್ಯುವಾಗ, ದಾರಿಯ ಮಧ್ಯದಲ್ಲೇ

ತನ್ನ ೩೬ನೆಯ ವಯಸ್ಸಿನಲ್ಲಿ ಆ ವೀರ ಅಸು ನೀಗಿದ. ೨೧

ಮುಲ್ತಾನ್‌ನ ಗೆದ್ದ ಬ್ರಿಟಿಷ್‌ರು ಅಲ್ಲಿಂದ ತಮ್ಮ ಸೈನ್ಯವನ್ನು ಗುಜ್ರಾತ್‌ನಲ್ಲಿ ಸೋತು ಹಿಮ್ಮೆಟ್ಟಿದ ತಮ್ಮ ಸೈನ್ಯದ ನೆರವಿಗೆ ಕಳುಹಿಸಿದರು. ಅದು ಅವರ ಅದೃಷ್ಟದ ಬಾಗಿಲು ತೆರೆದಂತಾಯಿತು. ತಂದೆ ಚತ್ತರ್‌ಸಿಂಗ್ ಮತ್ತು ಮಗ ಶೇರ್‌ಸಿಂಗ್ ಎಷ್ಟೇ ಸಾಹಸದಿಂದ ಹೋರಾಡಿದರೂ, ಬ್ರಿಟಿಷ್‌ರ ಉತ್ತಮ ಸೈನಿಕ ಬಲ, ಶಸ್ತ್ರಾಸ್ತ್ರಗಳ ಬಳಕೆ, ಅವರನ್ನು ಹಿಮ್ಮೆಟ್ಟಿಸಿತು. ಅನಾವಶ್ಯಕ ಸಿಖ್‌ರ ಜೀವ ತೆರುವುದು ತರವಲ್ಲ ಎಂದು ಬಗೆದ ತಮ್ಮನ್ನು ಹಿಂಬಾಲಿಸಿ ಬಂದ ಬ್ರಿಟಿಷ್‌ರಿಗೆ ರಾವಲ್‌ಪಿಂಡಿ ಬಳಿ ಮಾನ್ಕಿಯಾಲಾ ಎಂಬಲ್ಲಿ (ಈಗಿನ ಪಾಕಿಸ್ತಾನದ ನಗರ) ಅವರು ಬ್ರಿಟಿಷ್‌ರಿಗೆ ಶರಣಾದರು. ಚತ್ತರ್ ಸಿಂಗ್ ಮತ್ತು ಶೇರ್‌ಸಿಂಗ್‌ರನ್ನು ಸೆರೆಹಿಡಿದು ಅಲಹಾಬಾದ್‌ನಲ್ಲಿ ಸೆರೆಯಲ್ಲಿರಿಸಿದರು. ಅವರ ಪತ್ನಿಯರಿಗೆ ಪಿಂಚಣಿ ನೀಡಿದರು. ಸ್ವಲ್ಪ ಸಮಯದ ನಂತರ ಅವರನ್ನು ಕಲ್ಕತ್ತಾಗೆ ಕೊಂಡೊಯ್ದು ಅವರಿಗೂ ಪಿಂಚಣಿ ನೀಡಿದರು. ಚತ್ತರ್‌ಸಿಂಗ್ ದುಃಖಪೀಡಿತನಾಗಿ, ದೈಹಿಕ ಹಾಗೂ ಮಾನಸಿಕವಾಗಿ ಬೇನೆ ಬಿದ್ದ ಪರಿಣಾಮ ಜನವರಿ ೧೮, ೧೮೫೬ ರಂದು ಪ್ರಾಣ ತ್ಯಜಿಸಿದ. ಅವನ ಮಗ ಶೇರ್‌ಸಿಂಗ್ ಕೂಡ, ಎರಡೇ ವರ್ಷದ ಬಳಿಕ, ೭ನೆ ಮೇ ೧೮೫೮ ರಂದು ಅಸು ನೀಗಿದ. ೨೨

ತಂದೆ ಮಗ ಪಂಜಾಬ್‌ನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದ ಚರಿತ್ರೆಯನ್ನು ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರದಲ್ಲಿ ಬರೆಯುವಂತಹದಾಗಿದೆ.

ಚತ್ತರ್‌ಸಿಂಗ್ ಮತ್ತು ಮಗ ಶೇರ್‌ಸಿಂಗ್‌ರ ಹೋರಾಟದಲ್ಲಿ ಭಾಗಿಯಾದ ಮತ್ತೊಬ್ಬ ಸಿಖ್ ವೀರನ ಹೆಸರು ಭಾಯಿ ಮಹಾರಾಜ್ ಸಿಂಗ್. ಈತ ನೌರಂಗಾಬಾದ್‌ನ ಸಿಖ್ ಆಶ್ರಮ ಅಥವಾ 'ಡೇರಾ'ದ ಮುಖ್ಯಸ್ಥನಾಗಿದ್ದ. ಧಾರ್ಮಿಕ ಗುರುವಾಗಿ, ಸಿಖ್ ಧಾರ್ಮಿಕ ಪ್ರವಚನ ಮಾಡಿಕೊಂಡಿದ್ದ ಮಹಾರಾಜ್ ಸಿಂಗ್‌ನನ್ನು ಬ್ರಿಟಿಷ್‌ರು, ತಮ್ಮ ಲಾಹೋರ್ ರೆಸಿಡೆಂಟ್‌ನ ಕೊಲೆಯ ಅಪರಾಧ (ಏಪ್ರಿಲ್ ೨೧, ೧೮೪೭) ದಲ್ಲಿ ಸುಳ್ಳು ಅಪವಾದ ಹೂಡಿ ಅವನ ಮೇಲೆ ಖಟ್ಲೆ ಹೂಡಿದರು. ಕೆರಳಿದ ಮಹಾರಾಜ ಸಿಂಗ್ ತನ್ನ ಒಂದು ಸಾವಿರ ಸಿಖ್ ಸೈನಿಕರೊಂದಿಗೆ ಮುಲ್ತಾನ್‌ನತ್ತ ಸಾಗಿದ. ಆದರೆ, ಮುಲ್ತಾನ್‌ನ ರಾಜ್ಯಪಾಲ ಮೂಲ್ ರಾಜ್‌ನೊಂದಿಗೆ ಮನಸ್ತಾಪ ಉಂಟಾದಾಗ ಅವನು ಚತ್ತರ್‌ಸಿಂಗ್‌ನ ಪಡೆ ಸೇರಿದ. ಅವನೊಂದಿಗೆ ಬ್ರಿಟಿಷ್ ವಿರುದ್ಧ ಹೋರಾಡಿದ. ಆದರೆ ಗಜ್ರಾತ್‌ನಲ್ಲಿ ಚತ್ತರ್‌ಸಿಂಗ್ ಸೋಲುಂಡು, ಶರಣಾದರೂ, ಮಹಾರಾಜ ಸಿಂಗ್ ಮಾತ್ರ ಸೆರೆಯಾಗದೆ, ಬ್ರಿಟಿಷ್‌ರಿಂದ ತಪ್ಪಿಸಿಕೊಂಡು ರಾಜ್ಯದೆಲ್ಲೆಡೆ, ಪರಿಚಿತರಿಗೆ, ಅವರ ವಿರುದ್ಧ ದ್ವೇಷದ ಬೀಜ ಬಿತ್ತುವ ಕೆಲಸ ಮಾಡಿದ. ಜನಸಾಮಾನ್ಯರೊಂದಿಗೆ ಬೆರೆತು ಬ್ರಿಟಿಷ್‌ರ ವಿರುದ್ಧ ಹೋರಾಡಲು ಕರೆ ನೀಡಿದ.

---

೨೧. P 568 History of Sikh People by G.Singh
೨೨. P 569 History of Sikh People by G.Singh

ಆದರೆ, ನಿರಂತರ ಹೋರಾಟ, ಕಷ್ಟ ನಷ್ಟ ಅನುಭವಿಸಿದ ಜನತೆ ಶಾಂತಿಯನ್ನು ಬಯಸಿತ್ತು. ಅವನ ಕರೆಗೆ ಅಷ್ಟೇನೂ ಉತ್ತೇಜನಕರ ಪ್ರತಿಕ್ರಿಯೆ ದೊರಕದಿದ್ದರೂ, ಮಹಾರಾಜ ಸಿಂಗ್ ಮಾತ್ರ ಹಟ ಬಿಡದೆ ಬ್ರಿಟಿಷ್‌ರ ವಿರುದ್ಧ ಸಮರ ಸಾಗಿಸಿದ. ದುರದೃಷ್ಟವಶಾತ್, ಅವನು ಜಲಂಧರ್ ಬಳಿ ಓಡಾಡುತ್ತಿದ್ದಾಗ, ಬ್ರಿಟಿಷ್‌ರ ಕೈಗೆ ಸಿಕ್ಕಿಬಿದ್ದ. ಅವನಿಗೆ ಕೈಕೋಳ ಹಾಕಿ, ಕಲ್ಕತ್ತಾಕ್ಕೆ ಕೊಂಡೊಯ್ದು, ಏಕಾಂತ ಸೆರೆಮನೆವಾಸ ನೀಡಿದರು. ಅತಿ ಕಷ್ಟದ ದಿನಗಳನ್ನು ದೂಡಿದ ಮಹಾರಾಜ ಸಿಂಗ್‌ನಿಗೆ, ಬ್ರಿಟಿಷ್‌ರು ಅಮಾನವೀಯವಾಗಿ ದಂಡಿಸಿ, ಅವನನ್ನು ದೂರದ ಸಿಂಗಾಪುರಕ್ಕೆ ಸಾಗಿಸಿ ಅಲ್ಲಿ ಸೆರೆಮನೆಯಲ್ಲಿರಿಸಿದರು. ಅವರ ತೀಕ್ಷ್ಣ ದಂಡನೆಗೆ ಗುರಿಯಾದ ಮಹಾರಾಜ್ ಸಿಂಗ್ ಕಣ್ಣು ಕಳೆದುಕೊಂಡು, ಉಪವಾಸದಿಂದ ಬಳಲಿ, ಜುಲೈ ೫, ೧೮೬೬ ರಂದು ಪ್ರಾಣ ತ್ಯಜಿಸಿದ. ೨೩

ಮಹಾರಾಜ್ ಸಿಂಗ್‌ನ ಕರುಣಾಜನಕ ಕಥೆಯನ್ನು ಸಿಖ್ ಜನತೆ ಇಂದಿಗೂ ನೆನೆಸಿ, ದುಃಖಪಡುತ್ತಾರೆ. ಅವನ ಹೋರಾಟ ಬಲಿದಾನಗಳಿಗೆ ಅಶ್ರುತರ್ಪಣೆ ಅರ್ಪಿಸುತ್ತಾರೆ. ದೇಶದ್ರೋಹಿ, ಸಂಚುಕಾರ, ಸ್ವಾರ್ಥ ಸರದಾರರು, ರಾಜ ಮಹಾರಾಜರು, ಸೈನ್ಯಾಧಿಕಾರಿಗಳು, ರಾಜನ ಆಸ್ಥಾನದ ಗಣ್ಯರು ತಮ್ಮ ಪೂರ್ವಜರು ನೆತ್ತರು ಹರಿಸಿ, ತಮ್ಮ ಭುಜಬಲ, ಬಲಿದಾನಗಳಿಂದ ನಿರ್ಮಿಸಿದ ಸಿಖ್ ಸಾಮ್ರಾಜ್ಯವನ್ನು ಬ್ರಿಟಿಷ್‌ರಿಗೆ ನೀಡಿ, ಅವರ ಗುಲಾಮರಾಗಿ ಬಾಳಲು ಸರ್ವಸಿದ್ಧತೆ ಮಾಡಿಕೊಳ್ಳುವ ಹುನ್ನಾರದಲ್ಲಿದ್ದಾಗ, ಒಬ್ಬ ಸಿಖ್ ಸರದಾರ ಮಾತ್ರ ತನ್ನ ರಾಷ್ಟ್ರದ ನಾಶ ಮತ್ತು ಅವಮಾನಗಳಿಗೆ ತುತ್ತಾಗುವುದನ್ನು ಸಹಿಸಲಾಗದೆ, ಮತ್ತೊಬ್ಬ ದೇಶಾಭಿಮಾನಿ ಸೀಕ್ ಸಮರಕ್ಕೆ ಸಿದ್ಧನಾದ. ಆತನ ಹೆಸರು ಶಾಮ್‌ಸಿಂಗ್ ಅತ್ತಾರಿವಾಲಾ. ರಣಜಿತ್‌ಸಿಂಗ್‌ನ ಹತ್ಯೆಗೀಡಾದ ಮೊಮ್ಮಗ ನೌನಿಹಾಲ್ ಸಿಂಗ್‌ನಿಗೆ ಹೆಣ್ಣು ಕೊಟ್ಟ ಮಾವನಾಗಿದ್ದ. ಈತ, ಲಾಹೋರ್ ದರ್ಬಾರ್‌ನಲ್ಲಿ ಜರುಗುತ್ತಿದ್ದ ಅಧಿಕಾರಕ್ಕಾಗಿ ಕಚ್ಚಾಟ, ಐಕ್ಯತೆಯಿಲ್ಲದ ಆಸ್ಥಾನದ ಅಧಿಕಾರಿ ವರ್ಗ, ರಾಷ್ಟ್ರವನ್ನು ವಿನಾಶದತ್ತ ಎಳೆದೊಯ್ಯುತ್ತಿದ್ದ ರಾಜ ಕುಟುಂಬದವರ ಹೀನ ಕಾರ್ಯಗಳಿಗೆ ಬೇಸತ್ತು ಅಜ್ಞಾತವಾಸದಲ್ಲಿದ್ದ. ಆದರೆ ಈಗ ಸಂಪೂರ್ಣ ವಿನಾಶದತ್ತ ಸಾಗುತ್ತಿದ್ದ ಮತ್ತು ಶತ್ರುಗಳ ಕೈ ಮೇಲಾಗಿ, ಸಿಖ್‌ರ ಅವಮಾನಕರ ಸೋಲಾಗುತ್ತಿರುವ ಸುದ್ದಿ ಅರಿತ ಶಾಮ್‌ಸಿಂಗ್‌ನ ರಕ್ತ ಕುದಿಯಿತು. ಆತ ತನ್ನ ಅಲ್ಪ ಸ್ವಲ್ಪ ಸಿಖ್ ಸೈನ್ಯವನ್ನು ಹುರಿದುಂಬಿಸಿ, ಬ್ರಿಟಿಷ್‌ರ ವಿರುದ್ಧ ಹೋರಾಡಲು, ಯುದ್ಧರಂಗಕ್ಕೆ ದೌಡಾಯಿಸಿದ. ಘೋರ ಯುದ್ಧ ಜರುಗುತ್ತಿರುವಾಗಲೇ, ಹೇಡಿ, ಸಂಚುಗಾರರಾದ ಸಿಖ್ ಸೈನ್ಯಾಧಿಕಾರಿ ತೇಜ್‌ಸಿಂಗ್ ಮತ್ತು ಪ್ರಧಾನಿ ಲಾಲ್‌ಸಿಂಗ್, ಯುದ್ಧವಾಡದೆ, ಮಧ್ಯದಲ್ಲೇ ರಣರಂಗವನ್ನು ತ್ಯಜಿಸಿ ಓಡಿಹೋದಾಗ, ವೀರಯೋಧ ಶಾಮ್‌ಸಿಂಗ್ ಅತ್ತಾರಿವಾಲಾ, ಶ್ವೇತ ಅಶ್ವವನ್ನೇರಿ ಕೈಯಲ್ಲಿ ಕತ್ತಿಹಿಡಿದು, ತನ್ನ ಸಂಗಡಿಗರನ್ನು

೨೩. P 566 History of Sikh People by G.Singh

ಹುರಿದುಂಬಿಸಿ, ಎದುರಾಳಿ ಬ್ರಿಟಿಷ್ ಸೈನಿಕ ಪಡೆಯ ಮಧ್ಯೆ ನುಗ್ಗಿ ಅವರನ್ನು ಹಿಮ್ಮೆಟ್ಟಿಸಿದ. ಅವನ ವೀರಾವೇಷದ ಆಕ್ರಮಣದಿಂದ ಸ್ಥಂಭೀಭೂತರಾದ ಬ್ರಿಟಿಷ್ ಸೈನ್ಯ ದಿಕ್ಕಾಪಾಲಾಗಿ ಓಡಿತು. ಆದರೆ ಅಷ್ಟರಲ್ಲೇ ಅವರ ಸಹಾಯಕ್ಕೆ ಬಂದ ಇನ್ನೊಂದು ಇಂಗ್ಲಿಷ್ ಪಡೆ, ಶಾಮ್‌ಸಿಂಗ್‌ನನ್ನು ಸುತ್ತುವರಿದು ಅವನ ಹತ್ಯೆ ಮಾಡಿತು. ಶಾಮ್‌ಸಿಂಗ್‌ನ ಅನುಯಾಯಿಗಳಲ್ಲಿ ಒಬ್ಬ ಸೈನಿಕನೂ ಉಳಿಯಲಿಲ್ಲ. ಅವನ ಶೌರ್ಯ ಕಂಡ ಇಂಗ್ಲಿಷರು ಬೆಚ್ಚಿದರು. ಆದರೆ ಅವನ ಅಪ್ರತಿಮ ಸಾಹಸ, ವೀರಾವೇಶದಿಂದ ಕಾದಿದ ಅವನ ಶೌರ್ಯ, ಬ್ರಿಟಿಷ್ ಗವರ್ನರ್ ಜನರಲ್ ನಿಂದ ಮೆಚ್ಚಿಗೆಯ ನುಡಿಗಳು ಹೊರಬಂದವು.

ಸಿಖ್ ಸೈನ್ಯಾಧಿಕಾರಿ ತೇಜ್‌ಸಿಂಗ್ ಮತ್ತು ಪ್ರಧಾನಿ ಲಾಲ್‌ಸಿಂಗ್, ಬ್ರಿಟಿಷರಿಗೆ ನೆರವಾಗಲು, ಕುಟಿಲತೆಯಿಂದ ರಣರಂಗದಿಂದ ಓಡಿಹೋಗದೆ, ಕೆಚ್ಚೆದೆಯಿಂದ ಕಾದಿದ್ದರೆ, ರಣಧೀರನಿಗಿರುವ ರಣಕೌಶಲ ತೋರಿಸಿದ್ದರೆ, ಬ್ರಿಟಿಷ್‌ರ ಸೋಲುಂಟಾಗಿ, ಭಾರತದ ಇತಿಹಾಸದ ಪುಟಗಳಲ್ಲಿ ಅವರ ಹೆಸರು ಸುವರ್ಣಾಕ್ಷರಗಳಲ್ಲಿ ಬರೆಯಲ್ಪಡುತ್ತಿದ್ದವು. ಆದರೆ, ದುರಾದೃಷ್ಟವಶಾತ್, ಧನದಾಸೆ, ಪದವಿಯಾಸೆ, ರಾಜ್ಯದಾಹ ಅವರನ್ನು ಹೇಡಿಗಳನ್ನಾಗಿ ಮಾಡಿ, ರಾಜದ್ರೋಹ ಎಸಗುವಂತೆ ಮಾಡಿ, ದೇಶವನ್ನು ಪರಕೀಯರಿಗೆ ಮಾರಿಬಿಟ್ಟಿದ್ದನ್ನು ಮರೆಯುವಂತಿಲ್ಲ.

ಭಾರತದ ಇತಿಹಾಸದ ಪುಟಗಳಲ್ಲಿ ರಾಷ್ಟ್ರಾಭಿಮಾನದ ಕೆಚ್ಚನ್ನು ತೋರಿಸಿದ ಅಪರೂಪದ ವ್ಯಕ್ತಿಯಾಗಿ ತೋರ್ಪಡಿಸಿದ ಮಹಾರಾಜ್‌ಸಿಂಗ್ ಮತ್ತು ಶಾಮ್‌ಸಿಂಗ್ ಅತ್ತರಿವಾಲಾರ ಕಥೆಗಳು ನಿಜಕ್ಕೂ ಅಪರೂಪವಾಗಿವೆ. ಆದರೆ ರಾಷ್ಟ್ರಾಭಿಮಾನವೆಂದರೇನು?

What had never existed right up to recent times was some definite, circumscribed thing, permanently installed as an object of patriotic devotion. Patriotism was something diffuse, nomadic, which expanded or contracted according to degrees of similarly and common danger. It was mixed up with different kinds of loayalty-loyalty to other men, a lord, a king, or a city. The whole formed something very complicated, but also very human. To express the sense of obligation everyone feels toward his country, people would usually talk about "the public" or "the public good", an expression which can serve equally well to indicate a village, town, province, France, Christendom, or Mankind.

(The Need for Roots by Simone Veil)

---

೨೪. P 558 History of Sikh People by G.Singh

ಅಧ್ಯಾಯ ೧೧

"If a state is governed by the principles of reason, poverty and misery are subjects of shame; if a state is not governed by the principles of reason riches and honors are the subjects of shame."

ವಿವೇಚನೆ ಮತ್ತು ನ್ಯಾಯನ್ಯಾಯ ತತ್ವಗಳನುಸಾರ, ಒಂದು ದೇಶವನ್ನು ಆಳಿದಾಗ, ದಾರಿದ್ರ್ಯ ಮತ್ತು ದುರವಸ್ಥೆಗಳು ನಾಚಿಕೆಗೇಡಿನ ವಿಷಯಗಳಾಗುತ್ತವೆ. ಒಂದು ವೇಳೆ ಒಂದು ದೇಶ ವಿವೇಚನಾ ಶಕ್ತಿಯನುಸಾರ ಆಳದಿದ್ದಾಗ, ಐಶ್ವರ್ಯ ಮತ್ತು ಗೌರವಗಳು ನಾಚಿಕೆಗೇಡಿನ ವಿಷಯಗಳಾಗುತ್ತವೆ.

– ಹೆನ್ರಿ ಡೇವಿಡ್ ಥೊರೋ

೫ನೆಯ ಏಪ್ರಿಲ್ ೧೮೪೯ರಂದು, ಬ್ರಿಟಿಷ್‌ರು ಪಂಜಾಬ್‌ನ ಮಹಾರಾಜ ದಿಲೀಪ್‌ಸಿಂಗ್, ರಾಜ ತೇಜ್‌ಸಿಂಗ್, ರಾಜಾ ದಿನಾನಾಥ್, ಭಾಯಿ ನಿಧಾನ್‌ಸಿಂಗ್, ಫಕೀರ್ ನೂರುದ್ದೀನ್, ಗುಂದೂರ್‌ಸಿಂಗ್ ಮತ್ತು ಲಾಲ್‌ಸಿಂಗ್‌ರೊಂದಿಗೆ ಸಂಧಿ ಮಾಡಿಕೊಂಡರು. ಆ ಸಂಧಿಯ ಪ್ರಕಾರ ಸಂಪೂರ್ಣ ಪಂಜಾಬ್ ಪ್ರಾಂತ್ಯ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿಸಲಾಯಿತು. ದಿಲೀಪ್ ಸಿಂಗ್‌ನಿಗೆ 'ಮಹಾರಾಜ' ಪದವಿ ನಾಮ ಮಾತ್ರ ನೀಡಿ, ಅವನಿಗೆ ೫ ಲಕ್ಷ ವಾರ್ಷಿಕ ಭತ್ಯೆ ನೀಡಲಾಯಿತು. ೧

ಭಾರತ ದೇಶದಲ್ಲಿ, ಕೊನೆಯ ಸ್ವಾತಂತ್ರ ರಾಷ್ಟ್ರವಾಗಿ ಮೆರೆದಿದ್ದ ಸಿಖ್ಖರ ಪಂಜಾಬ್ ರಾಷ್ಟ್ರ ಅಂತಿಮವಾಗಿ ಬ್ರಿಟಿಷ್‌ರ ವಶವಾಗಿ ಸಂಪೂರ್ಣ ಭರತಖಂಡ ಅವರ ಅಧೀನವಾಯಿತು. ೨

'. . . .We had thus been compelled to break down with our own hands the very serviceable barrier against inroads from central Asia that had been set up for us fifty years earlier in north India by the Sikhs. It was impossible that we should leave the country vecant and exposed to an influx of foreign Mohamodans; and it had become a matter of growing

---

೧. P 570 History of Sikh People by G.Singh

೨. P 325 The Rise and Expansion of British Dominion in India by Lyall

importance that we should have the gates of India in our own custody; for the line of Russian advance toward the Oxus, though distant, was declared; and in the last war the Afghans had joined the Sikhs as auxiliaries. . .'

ಭಾರತದ ಗುಜರಾತ್ ಪ್ರಾಂತ್ಯದ ಸೂರತ್ ನಗರದಲ್ಲಿ ಪ್ರಪ್ರಥಮವಾಗಿ ಕಾಲಿಟ್ಟ ಬ್ರಿಟಿಷ್‌ರು, ಮೊಘಲ್ ಬಾದ್‌ಶಹಾ ಜಹಂಗೀರ್‌ನಿಂದ ಒಂದು ಪುಟ್ಟ ವಾಣಿಜ್ಯ ವ್ಯವಹಾರಗಳ ಸಂಸ್ಥೆಯನ್ನು ಪ್ರಾರಂಭಿಸಲು ಅಪ್ಪಣೆ ಪಡೆದರು. ೧೬೦೮ರಲ್ಲಿ ಜಹಂಗೀರ್‌ನಿಗೆ, ಬ್ರಿಟನ್‌ನ ರಾಜ ಒಂದನೇ ಜೇಮ್ಸ್ ಕ್ಯಾಪ್ಟನ್‌ನೆಂಬಾತನಿಂದ, ೨೫೦೦೦ ಚಿನ್ನದ ಮೆಹರ್‌ಗಳನ್ನು ಕೊಡುಗೆಯಾಗಿ ನೀಡಿದ ಪ್ರಯುಕ್ತ, ಅವನಿಂದ ಭಾರತದ ಪಶ್ಚಿಮ ಕರಾವಳಿ ಪ್ರದೇಶದಲ್ಲಿ ವಾಣಿಜ್ಯ ವಹಿವಾಟು ನಡೆಸಲು ಅಪ್ಪಣೆ ಪಡೆದರು ಬ್ರಿಟಿಷ್‌ರು. ೧೬೩೯ರಲ್ಲಿ ತಿರುಪತಿಯ ಬಳಿಯ ಅಳಿದುಳಿದ ವಿಜಯನಗರದ ರಾಜ ಚನ್ನಯ್ಯ ನಾಯಕನಿಂದ ದಕ್ಷಿಣದ ಪೂರ್ವ ಕರಾವಳಿ ಪ್ರದೇಶದ 'ಮದ್ರಾಸ್' ಪ್ರದೇಶದಲ್ಲಿ ಕೋಟೆ ನಿರ್ಮಿಸಲು ಒಪ್ಪಿಗೆ ಪಡೆದರು. 'ಡೇ' ಎಂಬ ಬ್ರಿಟನ್, ಅಲ್ಲಿ ಸೈಂಟ್ ಜಾರ್ಜ್ ಕೋಟೆ ನಿರ್ಮಿಸಿದ. (ಮದ್ರಾಸ್‌ನ್ನು ಈಗ ಚೆನ್ನ ನಾಯಕನ ಹೆಸರಿನಲ್ಲಿ 'ಚೆನ್ನೈ' ಎಂದು ಮರುನಾಮಕರಣ ಮಾಡಲಾಗಿದೆ.)

೧೬೯೦ ರಲ್ಲಿ ಉತ್ತರ ಭಾರತದ ಕರಾವಳಿ ಪ್ರದೇಶ ಬಂಗಾಳ ಕೊಲ್ಲಿಯ ಮುಖ ಪ್ರದೇಶದಲ್ಲಿ ಬ್ರಿಟಿಷ್‌ರು ಅಲ್ಲಿನ ನವಾಬನಿಂದ 'ಕಲ್ಕತ್ತಾ' ಎಂಬ ಹೆಸರಿರುವ ಪ್ರದೇಶದಲ್ಲಿ ಒಂದು ಕೋಟೆ ಕಟ್ಟಿ ತಳವೂರಿದರು. ಅದನ್ನು 'ಫೋರ್ಟ್ ವಿಲಿಯಮ್' ಎಂದು ಕರೆದರು.

೧೭೧೬ರಲ್ಲಿ ಸಿಖ್ಖರು ಬಂಡಾ ಬಾಹಾದೂರ್‌ನ ನೇತೃತ್ವದಲ್ಲಿ ಸಿಖ್ ಸಾಮ್ರಾಜ್ಯ ನಿರ್ಮಿಸಲು ಮೊಘಲ್‌ರ ವಿರುದ್ಧ ಹೋರಾಡುತ್ತಿರುವಾಗಲೇ, ಬ್ರಿಟಿಷ್‌ರು ಕೂಡ, ಅಳಿವು ಉಳಿವಿಗಾಗಿ ಪರಿಶ್ರಮಿಸುತ್ತಿದ್ದರು. ೧೭೧೬ರಲ್ಲಿ ಬಂದಾ ಬಹದ್ದೂರ್‌ನ ಹತ್ಯೆಯಾದಾಗ, ಅವರು ದೂರದ ಕಲ್ಕತ್ತಾದಲ್ಲಿ ತಮ್ಮ ವ್ಯಾಪಾರ ವಹಿವಾಟಿಗಾಗಿ, ಶ್ರಮಿಸುತ್ತಿದ್ದರು. ೧೭೫೭ ರ ವರೆಗೆ ಅವರು ಕೇವಲ 'ದಿವಾನಿ' ಅಂದರೆ ವಾರ್ಷಿಕ ಕಪ್ಪವನ್ನು ಮೊಘಲ್‌ರಿಗೆ ನೀಡಿ, ತಮ್ಮ ವ್ಯವಹಾರ ಸಾಗಿಸುತ್ತಿದ್ದರು. ಆದರೆ, ಮೊಘಲ್‌ರ ಸಾಮರ್ಥ್ಯ ಕುಗ್ಗಿ, ಅವರ ಆಡಳಿತದ ಪ್ರಭಾವ ಸಾಮಂತರಲ್ಲಿ ಕ್ಷೀಣಗೊಂಡು, ಅವರು ಸ್ವತಂತ್ರರಾಗಿ ಮೆರೆಯತೊಡಗಿದ್ದಾಗ, ಬ್ರಿಟಿಷ್‌ರು ಕೂಡ ತಮ್ಮ ಬಾಲ ಬಿಚ್ಚಿ, ತಾವು ಕೂಡ ಸಾಮಂತ ರಾಜ, ನವಾಬರ ಬಳಿ ಆಡಳಿತ, ಒಳಜಗಳ ಇತ್ಯಾದಿಗಳಲ್ಲಿ ತಲೆಹಾಕಿ ತಮ್ಮ ಸ್ವಾಭಾವಿಕ ಚಾಣಾಕ್ಷತೆಯ ಗುಣಗಳನ್ನು ಉಪಯೋಗಿಸತೊಡಗಿದರು. ಬಂಗಾಳದ ಮೊಘಲ್‌ರ ಸಾಮಂತನಾಗಿ ಆಳುತ್ತಿದ್ದ ಪಠಾಣ ರಾಜ್ಯಪಾಲ ಸಿರಾಜುದೌಲಾನೊಂದಿಗೆ ಹೋರಾಟ ಜರುಗಿಸಿ, ಪ್ರಸಿದ್ಧ ನಿರ್ಣಾಯಕ ಪ್ಲಾಸಿ ಕದನ ಜರುಗಿಸಿ ಬ್ರಿಟಿಷ್ ಸಾಮ್ರಾಜ್ಯ ಭಾರತದಲ್ಲಿ ಪ್ರಪ್ರಥಮವಾಗಿ ತನ್ನ ನೆಲೆಯನ್ನು

ಸ್ಥಾಪಿಸಿದ್ದು, ಸರ್ವರಿಗೂ ತಿಳಿದ ವಿಷಯವಾಗಿದೆಯಷ್ಟೆ. ಆ ಯುದ್ದದಲ್ಲಿ ಬ್ರಿಟನ್‌ನಿಂದ ಕಾರಕೂನನಾಗಿ ಬಂದ ರಾಬರ್ಟ್ ಕ್ಲೈವ್ ಮಹಾಶಯ, ಯೋಧನಾಗಿ, ಸಾಮ್ರಾಜ್ಯ ಸ್ಥಾಪಕನಾಗಿ, ತನ್ನ ಕುಟಿಲತನ, ದುರುಳತನ, ಮೋಸಗಾರಿಕೆ ಇತ್ಯಾದಿಗಳಿಂದ ಶತ್ರುಗಳನ್ನು ಸೋಲಿಸಿ ಕೀರ್ತಿ ಪಡೆದ. ಕೇವಲ ೮೦೦ ಯೂರೋಪಿಯನ್ ಸೈನಿಕರು ಮತ್ತು ೨೦೦೦ ಭಾರತೀಯ ಸೈನಿಕರ ನೆರವಿನಿಂದ, ನವಾಬ ಸಿರಾಜುದ್ದೀನ್‌ನ ೫೦೦೦೦ ಪಠಾಣರ ಪಡೆಯನ್ನು ಯುದ್ಧರಂಗದಲ್ಲಿ ಸೋಲಿಸಿದ್ದು ಮೋಸದಾಟದಿಂದ ! ನವಾಬ್‌ನ ಸೈನ್ಯಾಧಿಕಾರಿ ಮೀರ್ ಜಾಫರ್‌ನನ್ನು, ತನ್ನಲ್ಲಿ ಹಣವಿರದಿದ್ದರೂ, ಹಿಂದೂ ಸಾಹುಕಾರರಿಂದ ಸಾಲ ಪಡೆದು, ಯುದ್ಧದಲ್ಲಿ ಜಯಗಳಿಸಿದ ನಂತರ, ಲೂಟಿ ಹೊಡೆದ ಹಣದಿಂದ ಅವರ ಹಣ ತೀರಿಸುವೆನೆಂದು ನಂಬಿಸಿ, ಕ್ಲೈವ್ ಅವನಿಂದ ಹಣ ಪಡೆದು, ಮೀರ್ ಜಾಫರ್‌ನನ್ನು ಖರೀದಿಸಿದ. ಆದರೆ ಯುದ್ಧದಲ್ಲಿ ಗೆದ್ದನಂತರ, ಲೂಟಿ ಹೊಡೆದ ಹಣವನ್ನು ತಾನೇ ಪಡೆದು, ಇತರ ಸಂಚುಗಾರರಿಗೆ ಪಂಗನಾಮ ಹಾಕಿ ಬಂಗಾಳ, ಬಿಹಾರ ಮತ್ತು ಒಡಿಶಾ ಪ್ರಾಂತ್ಯಗಳನ್ನು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿಸಿದ ಕೀರ್ತಿ ಕ್ಲೈವ್‌ನದಾಯಿತು. ೩

---

3. Economic History of India by Ramesh Dutt

p.6 - Hastings stopped the stipulated tribute to the emperor of Delhi, he took away the emperor's possessions at Kora and Allahabad, and sold them to the nawabs of Oudh for 500000(Pounds); and he sent a English brigade to the same nawab to crush the Rohillas for another sum of 400000(Pounds)

p.32 - Every occasion for setting up a new Nawab was considered a suitable opportunity for shaking the proverbial pagoda-tree of East. When Mir Zafar was first made Nawab after the battle of Plassey in 1757, the British officers and troops had received a bonus of 1,238,575 out of which Clive himself had taken 36500 (Pounds) besides a rich jagir or estate in Bengal; when Mir Kasim was made Nawab in 1760, the presents to the British officers came to 200269 out of which Vansittart had taken 58333/-; when Jafar was made Nawab a second time in 1763, the presents amounted to 500165(pounds). Further presents came in to extent of 230356(Pounds). Besides these sums received in presents,

ಈ ನಿರ್ಣಾಯಕ ಪ್ಲಾಸೀ ಕದನದಲ್ಲಿ, ಕೇವಲ ೨೨ ಬ್ರಿಟಿಷ್ ಸೈನಿಕರ ಸಾವುಂಟಾಗಿ ಭಾರತ ರಾಷ್ಟ್ರ ಬ್ರಿಟನ್‌ನ ವಶವಾಗಿದ್ದು, ಒಂದು ಮಹಾನ್ ದುರಂತ ಎಂದು ಬಣ್ಣಿಸಬಹುದು.

ಪ್ಲಾಸಿ ಕದನದಿಂದ ದೊರೆತ ಜಯದಿಂದ ಭಾರತ ಪರಾಧೀನವಾದರೂ, ಬ್ರಿಟಿಷ್‌ರಿಗೆ ಮಾತ್ರ ತಾವು ಭಾರತಕ್ಕೆ ಕೇವಲ ವ್ಯಾಪಾರ ವಹಿವಾಟು ಜರುಗಿಸುವುದಕ್ಕಲ್ಲದೆ, ರಾಜ್ಯವನ್ನಾಳುವುದಕ್ಕಾಗಿ, ತಮ್ಮ ಎಲ್ಲಾ ಸಾಮರ್ಥ್ಯ, ಕುಟಿಲತೆ, ಪಿತೂರಿ, ರಾಜ, ನವಾಬ, ಪಾಳಯಗಾರರ ಮಧ್ಯೆ ವ್ಯಾಜ್ಯ ಹೂಡಿ, ಅವರು ಪರಸ್ಪರ ಹೋರಾಡುವಾಗ, ತಾವು ಮೂಗು ತೂರಿಸಿ, ಸಹಾಯ ಕೋರಿದ ಒಬ್ಬನ ಪರವಾಗಿ ಹೋರಾಡಿ, ಅವನನ್ನು ತಮ್ಮ ಅಧೀನನ್ನಾಗಿ ಮಾಡಿಕೊಂಡು, ಆಳತೊಡಗಿದ್ದನ್ನು ಇತಿಹಾಸದ

---

amounting within eight years to 2169665/-(Pounds), further sums were claimed and obtained as restitution within this period amounting to 37770833(Pounds).

p.46 - Between 1765 to 1767, total of 4,037, 152/- was remitted to Britain out of total revenue of 20,13,3579/- Total imports during 1766,67 & 68 - 624,375/- Pounds and exports 6,311,250/- Pounds which gives lamentable picture of how the country was bled of its resources.

'. . . .This East India company had come to buy and sell, and it found itself achieving a tremendous piracy. There was no one to challenge its proceedings. Is it any wonder that its captains and commanders and officials may, even its clerks and common soldiers, came back to England loaded with spoils? . . . .Englishmen at home were perplexed when presently these generals and officials came back to make dark accusations against each other of extortions and cruelties. Upon Clive, parliament passed a vote of censure. He committed suicide in 1774. In 1788 Warren Hastings a second great Indian adminis

ಪುಟಗಳಲ್ಲಿ ಓದಿದ್ದೇವೆ. ೪ & ೫

ಸಿಖ್‌ರ ಇತಿಹಾಸದಲ್ಲೂ ಇದೇ ಪುನರಾವರ್ತನೆಗೊಂಡು, ಅವರಲ್ಲಿದ್ದ ಒಳಜಗಳ, ಈರ್ಷ್ಯೆ, ರಾಜ್ಯದಾಹ, ಧನದಾಹ, ಸ್ವಾಭಿಮಾನದ ಕೊರತೆ, ಬ್ರಿಟಿನ್‌ರ ಸಾಮ್ರಾಜ್ಯ ವಿಸ್ತೀರ್ಣಾಕಾಂಕ್ಷಿಗಳಿಗೆ ಅವರು ಬಲಿಯಾದರು. ೬ & ೭

---

trator was impeached and acquitted *(1792)*. It was a strange and unprecedented situation in the world`s history. The English parliament found itself ruling over a London trading company. Which in its turn was dominating an empire far greater and more populous than all the domains of the British Crown. To the bulk of the English people, India was a remote, fantastic, almost inaccessible land, to which adventurous poor young men went out, to return after many years, very rich and very chloric old gentlemen/'

(P 235 A Short History of the World by H.G. Wells)

7. ಪ್ರಸಿದ್ಧ ಇಟಲಿಯ ಪ್ರವಾಸಿ ನಿಕೋಲೋ ಮನೂಚೀ ತನ್ನ ಪುಸ್ತಕ 'ಸ್ಟೋರಿಯಾ ದೊ ಮೊಗೋರ್'ನಲ್ಲಿ ಹಿಂದೂಗಳ ಅನೈಕ್ಯತೆಯ ಬಗ್ಗೆ ಹೀಗೆ ದಾಖಲಿಸಿದ್ದಾನೆ : '. . . .But they can do nothing against the Moghuls, for from of old time it has been the fashion of the Rajputs to dispute among themselves. If they were only of one mind they would be able to thrust out every other *tribe and race. . . .' (P 119 Part I)*

೪ & ೫. P 126 British Dominion in India by Lyall
೬ & ೭. P 133 British Dominion in India by Lyall

ಅಧ್ಯಾಯ ೧೨

ಅತಿ ಆಸೆ ಮತ್ತು ಸುಖ ಎರಡೂ ಭೇಟಿಯೇ ಆಗಿಲ್ಲ. ಅಂದ ಮೇಲೆ ಅವರಿಬ್ಬರಿಂಜ ಹೇಗೆ ಪರಸ್ಪರ ಪರಿಚಯವಾಗುತ್ತದೆ?

– ಬೆಂಜಮಿನ್ ಫ್ರಾಂಕ್ಲಿನ್

ಸಿಖ್ ಸಾಮ್ರಾಜ್ಯದ ಅವನತಿಯಾದರೂ, ಕೊನೆಯ ಮಹಾರಾಜ ದಿಲೀಪ್ ಸಿಂಗ್ ಮತ್ತು ಅವನ ಮಾಣಜ ರಾಣಿ ಜಿಂದಾನ್‌ರು ಬ್ರಿಟಿಷ್‌ರೊಂದಿಗೆ ತಮ್ಮ ಸಂಬಂಧ, ಸಂಪರ್ಕ ಇರಿಸಿಕೊಂಡು, ತಮ್ಮ ಹಕ್ಕು ಭಾದ್ಯತೆಗಳ ಬಗ್ಗೆ ಹೋರಾಟ ಸಾಗಿಸಿದ್ದನ್ನು ಇತಿಹಾಸಕಾರರು ನೀಡಿದ್ದಾರೆ.

ಬ್ರಿಟಿಷ್ ರೆಸಿಡೆಂಟ್ ಹೆನ್ರಿ ಲಾರೆನ್ಸ್‌ನ ಕೊಲೆ ಪಿತೂರಿಯಲ್ಲಿ ಗುಲಾಬ್‌ಸಿಂಗ್‌ನ ಸೇವೆಯಲ್ಲಿದ್ದ (ಎಡಿಸಿ) ಪ್ರೇಮ್‌ಸಿಂಗ್ ಮತ್ತು ಲಾಲ್‌ಸಿಂಗ್ ಅದಾಲತಿ ಶಾಮೀಲರಾಗಿದ್ದು, ೨೧ ಏಪ್ರಿಲ್ ೧೮೪೭ ರಲ್ಲಿ ಆ ಕಾರ್ಯ ಜರುಗಬೇಕಾಗಿತ್ತು. ಆದರೆ ಗುಪ್ತವಾಗಿ ನೆರವೇರಬೇಕಾಗಿದ್ದ ಕಾರ್ಯ ಬಯಲಾಗಿ, ಪಿತೂರಿಗಾರರನ್ನು ಸೆರೆ ಹಿಡಿಯಲಾಯಿತು. ಕ್ರೋಧಗೊಂಡ ಬ್ರಿಟಿಷ್‌ರು ಬಂಧಿತರೆಲ್ಲರನ್ನೂ ಕ್ರೂರವಾಗಿ ನಡೆಸಿಕೊಂಡರು.

ರಾಣಿ ಜಿಂದಾನ್‌ಳು ತಮ್ಮ ವಿರುದ್ಧ ಪಿತೂರಿಯಲ್ಲಿ ಭಾಗವಹಿಸಿದಳು ಎಂದು ಆಪಾದಿಸಿದರು ಬ್ರಿಟಿಷರು. ೧

ರಾಣಿ ಜಿಂದಾನ್‌ಳನ್ನು ಮಗ ದಿಲೀಪ್‌ಸಿಂಗ್‌ನಿಂದ ಬೇರ್ಪಡಿಸಿ, ಆಕೆಯನ್ನು ಪ್ರತ್ಯೇಕವಾಗಿ ಬಂಧನದಲ್ಲಿರಿಸಿದರು. ಪುತ್ರವಾತ್ಸಲ್ಯದಿಂದ ತುಂಬಿದ ಆಕೆಯ ಹೃದಯ ಅವನ ಅಗಲಿಕೆಯಿಂದ ಅಪಾರವಾಗಿ ನೊಂದಳು. ಆಕೆಗೆ ತನ್ನ ಪೂರ್ವಜರು ರಕ್ತ ಹರಿಸಿ, ತ್ಯಾಗ ಬಲಿದಾನಗಳಿಂದ ನಿರ್ಮಿಸಿದ ಸಾಮ್ರಾಜ್ಯ ಕಳೆದುಕೊಂಡಿದ್ದಕ್ಕಿಂತ ಪ್ರೀತಿಯ ಪುತ್ರನ ಸಾನಿಧ್ಯ ತಪ್ಪಿದ್ದು, ದುಃಖ ತಡೆಯಲಾರದಾಗಿತ್ತು. ತನಗೆ ರಾಜ್ಯದ ಅವಶ್ಯಕತೆಗಿಂತ, ಪುತ್ರನ ಅವಶ್ಯಕತೆ ಇದೆ ಎಂದು ರೆಸಿಡೆಂಟ್‌ಗೆ ಬರೆದ ಪತ್ರದಲ್ಲಿ ತನ್ನ ದುಃಖ ತೋಡಿಕೊಂಡಳು. ಆದರೆ ಅವಳ ಅನುರೋಧಕ್ಕೆ ಬ್ರಿಟಿಷ್‌ರು ಸೊಪ್ಪು ಹಾಕಲಿಲ್ಲ. ಅಂತಿಮವಾಗಿ ಆಕೆಯನ್ನು ರೆಸಿಡೆಂಟ್‌ನ ಕೊಲೆಯ ಪಿತೂರಿಯಲ್ಲಿ ಭಾಗಿಯಾಗಿದ್ದಳೆಂದು ಆಪಾದಿಸಿ, ಬನಾರಸ್‌ಗೆ ಗಡೀಪಾರು ಮಾಡಿದರು. ಆಕೆಯ ಪಿಂಚಣಿಯನ್ನು ಮಾಸಿಕ ಒಂದು ಸಾವಿರಕ್ಕೆ ಇಳಿಸಿದರು. (ಮೇ ೭, ೧೮೪೮) ಆಕೆಯನ್ನು ಮರಣದಂಡನೆಗೆ ಈಡು ಮಾಡದೆ, ಬಂಧನದಲ್ಲಿರಿಸಲು, ಬ್ರಿಟಿಷ್‌ರಿಗೆ

---

೧. P 97 History of Sikhs by Court

ಈಗಾಗಲೇ ಕಲ್ಕತ್ತಾದಲ್ಲಿ ಜರುಗಿದ ಒಂದು ಅಮಾನವೀಯ, ಅನ್ಯಾಯದ ಕಾರ್ಯದಿಂದ ಒಬ್ಬ ನಿರಪರಾಧಿಯ ಹತ್ಯೆ ಜರುಗಿಸಿದ್ದರಿಂದ ಪಾಠ ಕಲಿತದ್ದರಿಂದ ಎಂದು ಹೇಳಬಹುದು. ಆ ಘಟನೆಯ ವಿವರ ಹೀಗಿದೆ.

ಬ್ರಿಟಿಷ್ ಇಂಡಿಯಾದ ಕಂಪನಿ ಸರಕಾರ ಕಲ್ಕತ್ತಾ ನಗರದಲ್ಲಿ ೧೭೭೫ರಲ್ಲಿ ಮಹಾರಾಜ ನಂದಕುಮಾರ್‌ನ ವಿರುದ್ಧ ಜರುಗಿಸಿದ ಖಟ್ಲೆಯಲ್ಲಿ ನ್ಯಾಯ, ನಿಷ್ಠೆ, ಸತ್ಯ, ನೈತಿಕ ಮೌಲ್ಯಗಳನ್ನು ಗಾಳಿಗೆ ತೂರಿ, ಕೇವಲ ಸ್ವಾರ್ಥಸಾಧನೆಗೆ, ಧನಿ ಗವರ್ನರ್ ಜನರಲ್ ವಾರನ್ ಹೇಸ್ಟಿಂಗ್ಸ್‌ನಿಗೆ ನಿಷ್ಠೆ ತೋರಿಸಿ, ಅವನ ಅನ್ಯಾಯದ, ಅಮಾನವೀಯ, ಅತ್ಯಂತ ಹೀನಾಯ ಭ್ರಷ್ಟಾಚಾರಗಳಿಗೆ ಬೆಂಬಲ ನೀಡಿ, ಭ್ರಷ್ಟರ ನ್ಯಾಯಾಲಯದಲ್ಲಿ ನಿರಪರಾಧಿ ನಂದಕುಮಾರನನ್ನು ಅಪರಾಧಿ ಸ್ಥಾನದಲ್ಲಿರಿಸಿ, ಕ್ಷುಲ್ಲಕ ಕಾರಣಗಳಿಂದ ಅವನಿಗೆ ಮರಣದಂಡನೆಯ ನ್ಯಾಯ ನೀಡಿದ ಬ್ರಿಟಿಷ್ ನ್ಯಾಯವಾದಿ 'ಇಂಪಿ', ಮತ್ತು ಮುಖ್ಯ ನ್ಯಾಯಧೀಶ ಸರ್ ಜೇಮ್ಸ್ ಸ್ಟೀಫನ್‌ರ ಬಗ್ಗೆ ಬ್ರಿಟಿಷ್ ಇತಿಹಾಸಕಾರ ಬೆವರಿಡ್ಜ್ ಈ ರೀತಿ ದಾಖಲಿಸಿದ್ದಾನೆ. "The execution was iniquitous, even on the supposition of Nandakumar`s guilt and was the result of a plot to stifle inquiry into bribery and corruption." ೨

ಒಬ್ಬ ನಿರಪರಾಧಿ ಬ್ರಾಹ್ಮಣ ನಂದಕುಮಾರ್‌ನ ಮರಣದಂಡನೆಯನ್ನು ನೋಡಿದ ಕಲ್ಕತ್ತಾದ ಜನಸಾಮಾನ್ಯರು ಹೌಹಾರಿದರು. ಮರಣದಂಡನೆಗೆ ಗುರಿಯಾಗುವಷ್ಟು ಅಪರಾಧ ಎಸಗದಿದ್ದರೂ, ಆತನಿಗೆ ಕ್ಷಮಾದಾನ ನೀಡದಿದ್ದರೂ ಕೊನೇ ಪಕ್ಷ ಶಿಕ್ಷಾವಿಧಿಯನ್ನು ಕಡಿಮೆ ಮಾಡಿ, ಸೆರೆಮನೆವಾಸ ನೀಡುವ ಭಾಗ್ಯ ನೀಡದಿರುವುದು ಬ್ರಿಟಿಷ್ ನ್ಯಾಯ ಪದ್ಧತಿ ಮತ್ತು ಆಳುತಿದ್ದವರ ಕ್ರೂರತನ, ಅಮಾನವೀಯ, ಅನ್ಯಾಯಗಳ ಧೋರಣೆಗಳನ್ನು ಎದ್ದು ತೋರಿಸುತ್ತಿತ್ತು.

ಪ್ರಾಯಶಃ ರಾಣಿ ಜಿಂದಾನ್‌ಳನ್ನು ಹಿಡಿದು, ಕ್ಷುಲ್ಲಕ ಕಾರಣಗಳಿಗೆ, ಗಲ್ಲು ಶಿಕ್ಷೆ ನೀಡದೆ, ಗಡೀಪಾರು ಮಾಡುವ ಶಿಕ್ಷೆ ನೀಡಿದ ಕಾರಣ, ಕಲ್ಕತ್ತಾದಲ್ಲಿ ಜರುಗಿದ ನಿರಪರಾಧಿ ನಂದಕುಮಾರ್‌ನ ಗಲ್ಲು ಶಿಕ್ಷೆ ಮತ್ತು ಅದರಿಂದ ಬ್ರಿಟಿಷ್ ಜನತೆ ಮತ್ತು ಬುದ್ಧಿಜೀವಿಗಳಿಗೆ ಉಂಟಾದ ಮನೋಕ್ಲೇಷ ಮತ್ತು ಅಪರಾಧ ಮನೋಭಾವ. ಅದೇ ಕಾರಣದಿಂದ ಹೆಸರಾಂತ ಲೇಖಕ ಮಕಾಲೆ, ವಾರನ್ ಹೇಸ್ಟಿಂಗ್ಸ್‌ನ ಪದ-ವಿಚ್ಛೇದನ (Impeachment of Warran Hastings) ಬಗ್ಗೆ ಇತಿಹಾಸ ಪ್ರಸಿದ್ಧ ಲೇಖನ ಬರೆದು, ಬ್ರಿಟಿಷ್‌ರ ಮನ ಕಲಕಿದ. ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಎಡ್‌ಮಂಡ್ ಬರ್ಕ್, ಹೇಸ್ಟಿಂಗ್ಸ್‌ನ ಉಚ್ಚಾಟನೆಯ ಬಗ್ಗೆ ಮಾಡಿದ ಭಾಷಣ ಸದಸ್ಯರನ್ನು ಹುಚ್ಚೆಬ್ಬಿಸಿ, ಅವರ ಅಂತಃಕರಣಕ್ಕೆ ಕೆಚ್ಚೆಬ್ಬಿಸಿ, ವೀಕ್ಷಕರ ಹೃದಯ, ಮನಸ್ಸು ಬುದ್ಧಿಗಳಿಗೆ ನಾನಾ ತರಹದ ನೋವು, ಭ್ರಮೆ ಉಂಟುಮಾಡಿತು.

---

೨. P 100 Echoes from old Calcutta

ಮಗ ಮತ್ತು ರಾಜ್ಯ ಎರಡನ್ನೂ ಕಳೆದುಕೊಂಡ ರಾಣಿ ಜಿಂದಾನ್ ಹತಾಶಳಾದಳು. ಹೇಗಾದರೂ ಮಾಡಿ, ಮಗನನ್ನು ಪುನಃ ತನ್ನ ಸುಪರ್ದಿಗೆ ಪಡೆಯಲು ಹೋರಾಟ ಪ್ರಾರಂಭಿಸಿದಳು. ರಾಜಾ ಶೇರ್‌ಸಿಂಗ್‌ನಿಗೆ ಗುಪ್ತವಾಗಿ ಪತ್ರ ಬರೆದು ಬ್ರಿಟಿಷ್‌ರನ್ನು ಹೊಡೆದೋಡಿಸುವಂತೆ ಕರೆ ನೀಡಿದಳು. ಆ ಪತ್ರ ಬ್ರಿಟಿಷ್‌ರಿಗೆ ದೊರೆತ ಕಾರಣ, ಆಕೆಯನ್ನು ಬೆನಾರಸ್‌ನಿಂದ, ಬಳಿಯಲ್ಲಿದ್ದ ಚುನಾರ್ ಕೋಟೆಯಲ್ಲಿರಿಸಿದರು. ಬಂಧಿಸಲ್ಪಟ್ಟ ರಾಣಿ ಕೋಟೆಯಿಂದ ಪಾರಾಗಲು ಹಂಚಿಕೆ ಹೂಡಿದಳು. ಅಜ್ಞಾತವಾಸದಲ್ಲಿದ್ದೇನೆಂದು ಹೇಳಿ, ಮುಖ ಮುಚ್ಚಿಕೊಳ್ಳಲು 'ಪರ್ದಾ' ಧರಿಸತೊಡಗಿದಳು. ಒಂದು ದಿನ ತನ್ನ ಸೇವಕಳಿಗೆ ತನ್ನ ಉಡುಪು ಧರಿಸಿಕೊಳ್ಳುವಂತೆ ಹೇಳಿ, ಆಕೆಯ ಉಡುಪಿನಲ್ಲಿ ಕೋಟೆಯಿಂದ ಹೊರಬಂದು ಪಾರಾದಳು. ೧೯ನೆ ಏಪ್ರಿಲ್ ೧೮೪೯ರಂದು ಬೈರಾಗಿಯ ವೇಶದಲ್ಲಿ ಪಾರಾದ ಆಕೆ ನೇಪಾಳಕ್ಕೆ ಓಡಿಹೋಗಿ ಅಲ್ಲಿ ಆಶ್ರಯ ಪಡೆದಳು. ಆಕೆ ಬನಾರಸ್‌ನಲ್ಲಿ ಬಚ್ಚಿಟ್ಟಿದ್ದ ದ್ರವ್ಯ ಮತ್ತು ಚಿನ್ನಾಭರಣಗಳನ್ನು ಬ್ರಿಟಿಷ್‌ರು ಮುಟ್ಟುಗೋಲು ಹಾಕಿಕೊಂಡರು.

ನೇಪಾಳದ ರಾಜನಿಂದ ಆಶ್ರಯ ಪಡೆದ ರಾಣಿ ಜಿಂದಾನ್‌ಳನ್ನು ವಾಪಸ್ಸು ಕರೆಸಿಕೊಳ್ಳಲು ಬ್ರಿಟಿಷ್‌ರು ಪ್ರಯತ್ನಿಸಲಿಲ್ಲ. ನೇಪಾಳದಲ್ಲಿದ್ದಾಗಲೇ, ಬ್ರಿಟಿಷ್‌ರು ಮಹಾರಾಜ ದಿಲೀಪ್ ಸಿಂಗ್‌ನ ಪದಚ್ಯುತಿಯ ಸಂಗತಿ ಅರಿವಾಯಿತು. ಬ್ರಿಟಿಷ್‌ರು ದಿಲೀಪ್ ಸಿಂಗ್‌ನನ್ನು ಲಂಡನ್‌ಗೆ ಕೊಂಡೊಯ್ದ ಸಂಗತಿ ಅರಿತ ಆಕೆ ಅವನೊಂದಿಗೆ ಸಂಪರ್ಕ ಸಾಧಿಸಲು ಯತ್ನಿಸಿದಳು. ಅವಳು ಕಾಶ್ಮೀರಕ್ಕೆ ತೆರಳಿ, ಅಲ್ಲಿನ ರಾಜ ಗುಲಾಬ್‌ಸಿಂಗ್‌ನ ಸಹಾಯ ಪಡೆಯಲು ಯತ್ನಿಸಿದರೂ, ಅದು ಸಹಕಾರಿಯಾಗಲಿಲ್ಲ.

ಆದರೆ ೧೮೫೭ರಲ್ಲಿ ಬ್ರಿಟಿಷ್ ಸರಕಾರ ರಾಣಿ ಜಿಂದಾನ್‌ಳ ಬಗ್ಗೆ ಕನಿಕರಗೊಂಡು, ಆಕೆಗೆ ಲಂಡನ್‌ಗೆ ತೆರಳಲು ಅನುಮತಿ ನೀಡಿತು. ಆಕೆಯ ಜಪ್ತಿಯಾದ ಆಸ್ತಿ ಪಾಸ್ತಿಗಳನ್ನು ಮರುನೀಡಿದರು. ಆಕೆಯ ಪಿಂಚಣಿಯನ್ನು ಮಾಸಿಕ ೨೦೦೦ ರೂಪಾಯಿಗೆ ಏರಿಸಿದರು.

ಏಪ್ರಿಲ್ ೧೮೬೧ರಲ್ಲಿ ರಾಣಿ ಜಿಂದಾನ್ ಲಂಡನ್‌ಗೆ ತೆರಳಿದಳು. ಅಲ್ಲಿ ಎರಡೆ ವರ್ಷಗಳ ಕಾಲ ಜೀವಿಸಿದ್ದು, ಅನಾರೋಗ್ಯದಿಂದ ನರಳಿ, ಕಣ್ಣುಗಳನ್ನು ಕಳೆದುಕೊಂಡು, ದೈಹಿಕ ಹಾಗೂ ಮಾನಸಿಕವಾಗಿ ನರಳಿ ಪ್ರಾಣ ತ್ಯಜಿಸಿದಳು. ಆಕೆಯ ಅಂತಿಮ ಇಚ್ಛೆಯಾದ ತನ್ನ ಚಿತಾಭಸ್ಮವನ್ನು ಭಾರತೀಯ ನದಿಗಳಲ್ಲಿ ಹಾಕಬೇಕೆಂಬುದನ್ನು ಈಡೇರಿಸಲಾಯಿತು.೩

ರಾಣಿ ಜಿಂದಾನ್‌ಳ ಜೀವನದಲ್ಲಿ ಜರುಗಿದ ಘಟನೆಗಳಲ್ಲಿ ಹೃದಯವಿದ್ರಾವಕ ಘಟನೆ ಎಂದರೆ, ಆಕೆ ತನ್ನ ರಾಜ್ಯ ಮತ್ತು ಪುತ್ರ ಎರಡನ್ನೂ ಕಳೆದುಕೊಂಡದ್ದಾಗಿದೆ ಎಂದರು ಇತಿಹಾಸಕಾರರು.

---

೩. P 576 History of Sikhs by G.Singh

ಭಾರತೀಯರ ಯಾವುದೇ ವರ್ಗದ ಸ್ತ್ರೀಯರಿಗೆ, ಸಮಾಜದಲ್ಲಿ ಇದ್ದ ನಿಕೃಷ್ಟತೆ, ನಿರಕ್ಷತೆ, ಪ್ರೋತ್ಸಾಹವಿಹೀನತೆ ಮುಂತಾದವುಗಳಿಂದ ನೊಂದು ಬಸವಳಿದ ರಾಣಿ ಜಿಂದಾನ್‌ಳು, ಏಕೈಕಳಾಗಿ ಬ್ರಿಟಿಷ್‌ರ ವಿರುದ್ಧ ಹೋರಾಡಲಾಗದೆ, ಅಂತಿಮವಾಗಿ ಅವರ ಕೃಪಾಕಟಾಕ್ಷಕ್ಕೆ ಒಳಗಾಗಿ ಅವರಿಂದ ಪಿಂಚಣಿ ಪಡೆದು ಜೀವನ ಸಾಗಿಸಬೇಕಾಗಿ ಬಂದಿದ್ದು ಅತ್ಯಂತ ಶೋಚನೀಯ ಮತ್ತು ಅವಮಾನಕರವಾಗಿದೆ ಎನ್ನಬಹುದು.

ಭಾರತದ ಇತಿಹಾಸದಲ್ಲಿ ರಾಣಿ ಜಿಂದಾನ್‌ಳು ತನ್ನ ರಾಜ್ಯದ ಸ್ವಾತಂತ್ರ್ಯಕ್ಕೆ ಹೋರಾಡಿ ಜಯ ಸಾಧಿಸಲಾಗದೆ, ಅವಳು ಎಸಗಿದ ಅನೇಕ ಸಾಧನೆಗಳಿಗೆ ದೊರಕಬೇಕಾದ ಗೌರವ, ಕೀರ್ತಿ ದೊರಕದೆ, ಕೇವಲ ಅನ್ಯಮನಸ್ಕತೆ, ತಿರಸ್ಕಾರ, ನೀರಸ ಪ್ರತಿಕ್ರಿಯೆ ದೊರೆಯದಿದ್ದುದು ಬೇಜವಾಬ್ದಾರಿತನವೆಂದೇ ಹೇಳಬಹುದು.

ಅಧ್ಯಾಯ ೧೩
ಮಹಾರಾಜ ದಿಲೀಪ್ ಸಿಂಗ್ – ಅಂತಿಮ ದಿನಗಳು

The Strength of a nation derives from the integrity of the home.

ಒಂದು ದೇಶದ ಸಾಮರ್ಥ್ಯ, ಮನೆಯ ದೃಢತೆಯಲ್ಲಿದೆ.

– ಕನ್‌ಫ್ಯೂಶಿಯಸ್

ಮಹಾರಾಜ ದಿಲೀಪ್ ಸಿಂಗ್, ಸಿಂಹಾಸನವನ್ನೇರುವಾಗ ಅವನ ವಯಸ್ಸು ಆರು ಆಗಿತ್ತು. ಬ್ರಿಟಿಷ್‌ರು ಪಂಜಾಬ್‌ನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡು, ಅವನನ್ನು ಪದಚ್ಯುತಿಗೊಳಿಸಿದಾಗ ಅವನ ವಯಸ್ಸು ಹನ್ನೊಂದು ವರ್ಷ ವಯಸ್ಸಾಗಿತ್ತು.

ಲಾರ್ಡ್ ಡಾಲ್‌ಹೌಸಿಯ ಸಾಮ್ರಾಜ್ಯ ವಿಸ್ತೀರ್ಣಾಕಾಂಕ್ಷೆಯ ಘೋಷಣೆ, 'The power of the Sikh Government should not only be defeated but subverted and their dynasty abolished' ಕೆಲಸ ಮಾಡಲು ಪ್ರಾರಂಭಿಸಿತ್ತು.

ಏಪ್ರಿಲ್ ೫, ೧೮೪೯ ರಂದು ಬ್ರಿಟಿಷ್‌ರು ಸಿಖ್ ಸರದಾರರೊಂದಿಗೆ ಸಹಿ ಮಾಡಿದ ಸಂಧಿಯ ಪ್ರಕಾರ, ಪಂಜಾಬ್ ರಾಜ್ಯ ಸಂಪೂರ್ಣವಾಗಿ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿಸಿಕೊಳ್ಳಲಾಯಿತು. ಮಹಾರಾಜ ದಿಲೀಪ್‌ಸಿಂಗ್‌ನನ್ನು ಉತ್ತರ ಪ್ರದೇಶದ ಫತೇಗಢಕ್ಕೆ ಕೊಂಡೊಯ್ದು, ಸರ್ ಜಾನ್ ಲೋಗಿನ್ ಎಂಬ ಬಂಗಾಳದ ಸೈನ್ಯಾಧಿಕಾರಿಯ ಸುಪರ್ದಿಗೆ ನೀಡಲಾಯಿತು. ಅವನ ಪ್ರಭಾವದಿಂದ ೧೧ ವರ್ಷ ವಯಸ್ಸಿನ ದಿಲೀಪ್ ಸಿಂಗ್ ಕ್ರಿಸ್ತಮತವನ್ನು ಅವಲಂಬಿಸಿದ. ಅವನನ್ನು ೧೮೫೪ರಲ್ಲಿ ಇಂಗ್ಲೆಂಡಿಗೆ ಕರೆದೊಯ್ದು, ಲಂಡನ್ ನಗರದ ಬಳಿ ಸಫೋಕ್‌ನಲ್ಲಿ ವಾಸ್ತವ್ಯ ಹೂಡಿಸಿದರು. ಅವನಿಗೆ 'ಗಣ್ಯ ಮತ್ತು ಆಸ್ತಿವಂತ'ನೆಂಬ ಬಿರುದು ನೀಡಿ ಗೌರವಿಸಲಾಯಿತು.

ಇತ್ತ ನೇಪಾಳದಲ್ಲಿ ರಾಜಾಶ್ರಯದಲ್ಲಿದ್ದ ರಾಣಿ ಜಿಂದಾನ್ ಮಗನೊಂದಿಗೆ ಗುಪ್ತವಾಗಿ ಪತ್ರವ್ಯವಹಾರ ನಡೆಸಿ, ತಾನು ಅವನನ್ನು ಕಾಣಲು ಅವನೊಂದಿಗೆ ಇರಲು ಹಾತೊರೆಯುವ ಸಂಗತಿ ಅರುಹಿದರೂ, ಅದು ಉಪಯೋಗವಾಗಲಿಲ್ಲ. ದಿಲೀಪ್‌ಸಿಂಗ್, ಬ್ರಿಟಿಷ್‌ರ ಆಶ್ರಯದಲ್ಲಿದ್ದು, ಅವರಿಗೆ ವಿಧೇಯನಾಗಿರುವುದು ತನಗೆ ಕ್ಷೇಮಕರ ಎಂದು ಅರಿತಿದ್ದ. ತಾಯಿಯೊಡನೆ ಅತ್ಯಂತ ಜಾಗರೂಕತೆಯಿಂದ ವ್ಯಹರಿಸಿದ. ಆದರೆ, ೧೮೫೭ರ ಸಿಪಾಯಿ ದಂಗೆಯನ್ನು ಅಡಗಿಸಲು ಬ್ರಿಟಿಷರು ಸಿಖ್ ಸೈನಿಕರ ಸಹಾಯ ಪಡೆದುಕೊಂಡಿದ್ದರಿಂದ, ಅವರು ಸ್ವಲ್ಪ ಮೃದುಭಾವ ತಳೆದು, ಬಾಲಕ

ದಿಲೀಪ್ ಸಿಂಗ್‌ನಿಗೆ ತಾಯಿಯನ್ನು ಕಂಡು, ಆಕೆಯನ್ನು ಲಂಡನ್‌ಗೆ ಕರೆತರಲು ಅಪ್ಪಣೆ ನೀಡಿದರು. ೧೮೬೧ರಲ್ಲಿ ಅವನು ಕಲ್ಕತ್ತಾಗೆ ಬಂದಿಳಿದಾಗ, ಬ್ರಿಟಿಷ್ ಸೈನ್ಯದಲ್ಲಿ ಚೀನಾದ ವಿರುದ್ಧ ಹೋರಾಡಿದ ಸಿಖ್ ಸೈನ್ಯ ವಾಪಸ್ಸು ಭಾರತಕ್ಕೆ ಬಂದು ಕಲ್ಕತ್ತಾದಲ್ಲಿಳಿದಾಗ, ತಮ್ಮ ಆಗಿನ ಮಹಾರಾಜ ದಿಲೀಪ್ ಸಿಂಗ್ ನಗರದಲ್ಲಿ ತಂಗಿರುವ ಸುದ್ದಿ ಅರಿತು, ಅಲ್ಲಿಗೆ ದೌಡಾಯಿಸಿ, ತಮ್ಮ ಪ್ರೀತಿ ವಿಶ್ವಾಸಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸಿದ್ದನ್ನು ಕಂಡು ಹೆದರಿದ ಬ್ರಿಟಿಷ್‌ರು, ಕೂಡಲೇ ದಿಲೀಪ್‌ಸಿಂಗ್‌ನಿಗೆ ಲಂಡನ್‌ಗೆ ಹಿಂದಿರುಗುವಂತೆ ಆದೇಶಿಸಿದರು.

೧೮೬೪ರಲ್ಲಿ ದಿಲೀಪ್ ಸಿಂಗ್ ಪುನಃ ಭಾರತಕ್ಕೆ ಬಂದಿಳಿದ. ಕಾರಣ, ಅವನು ತನ್ನ ತಾಯಿಯ ಚಿತಾಭಸ್ಮವನ್ನು ತಂದು, ಪಂಜಾಬ್‌ನ ನದಿಗಳಲ್ಲಿ ವಿಸರ್ಜಿಸುವ ಕಾರ್ಯ ಮಾಡಲು ಇಚ್ಛಿಸಿದ. ಆದರೆ ತನ್ನ ತಾಯಿನಾಡು ಪಂಜಾಬ್‌ಗೆ ಕಾಲಿರಿಸಲು ಬ್ರಿಟಿಷ್‌ರು ಒಪ್ಪದ ಕಾರಣ ಅವನು ಮುಂಬೈಯಲ್ಲಿದ್ದು, ಗೋದಾವರಿ ನದಿಯಲ್ಲಿ ಚಿತಾಭಸ್ಮವನ್ನು ವಿಸರ್ಜಿಸಿ, ಲಂಡನ್‌ಗೆ ವಾಪಸ್ಸಾದ. ದಾರಿಯ ಮಧ್ಯದಲ್ಲಿ ಈಜಿಪ್ಟ್‌ನ ಅಲೆಕ್ಸಾಂಡ್ರಿಯಾ ನಗರದಲ್ಲಿ ಸ್ವಲ್ಪ ದಿನಗಳ ಕಾಲ ತಂಗಿದ. ಅಲ್ಲೇ ಅವನು ಬಂಬಾ ಮುಲ್ಲರ್ ಎಂಬಾಕೆಯನ್ನು ಲಗ್ನವಾದ. ಈಕೆಯ ತಂದೆ ಒಬ್ಬ ಜರ್ಮನ್ ವ್ಯಾಪಾರಿಯಾಗಿದ್ದು, ತಾಯಿ ಅಬಿಸ್ಸೀನಿಯಾದವಳಾಗಿದ್ದಳು. ೨

ದಿಲೀಪ್‌ಸಿಂಗ್‌ನಿಗೆ ತನ್ನ ಹೆಂಡತಿ ಬಂಬಾಳಿಂದ ಮೂರು ಗಂಡು ಮಕ್ಕಳು ಮತ್ತು ಮೂರು ಹೆಣ್ಣು ಮಕ್ಕಳನ್ನು ಪಡೆದ. ಅವರ ಹೆಸರುಗಳು ಇಂತಿವೆ. ವಿಕ್ಟರ್ ದಿಲೀಪ್‌ಸಿಂಗ್ (೧೮೬೦), ಫ್ರೆಡ್‌ರಿಕ್ ದಿಲೀಪ್ ಸಿಂಗ್ (೧೮೬೮), ಆಲ್ಬರ್ಟ್ ಎಡ್ವಾರ್ಡ್ ದಿಲೀಪ್ ಸಿಂಗ್ (೧೮೭೯), ಬಂಬಾ ಜಿಂದಾನ್ (೧೮೬೯), ಕ್ಯಾಥರಿನ್ (೧೮೭೧) ಮತ್ತು ಸೋಫಿಯಾ ಅಲೆಕ್ಸಾಂಡ್ರಾ (೧೮೭೪). ಇವರೆಲ್ಲರೂ ಕ್ರಮೇಣ ಲಗ್ನವಾದರೂ, ಒಬ್ಬರಿಗೂ ಸಂತಾನಭಾಗ್ಯ ದೊರಕಲಿಲ್ಲ. ಯಾರೊಬ್ಬರೂ ತಮ್ಮ ಜೀವನದಲ್ಲಿ ಏಳಿಗೆ ಪಡೆಯದೆ ಹೇಳಹೆಸರಿಲ್ಲದಂತೆ ಮಾಯವಾದರು. ೩

ಇಪ್ಪತ್ತು ವರ್ಷಗಳವರೆಗೆ, ದಿಲೀಪ್‌ಸಿಂಗ್, ಬ್ರಿಟಿಷ್ ಸರಕಾರದ ವಿರುದ್ಧ ಕಾನೂನು ಸಮರ ಜರುಗಿಸಿದ. ಅವನಿಗೆ ಅರಿವಿತ್ತು ತನ್ನ ರಾಜ್ಯ ತನಗೆ ಮರು ದೊರಕುವುದಿಲ್ಲ ಎಂದು. ಆದರೆ, ತನ್ನ ಪಿತ್ರಾರ್ಜಿತ ಆಸ್ತಿಗಳಾದ ಪಂಜಾಬ್‌ನ ಗುಜ್ರನ್‌ವಾಲಾದಲ್ಲಿದ್ದ ಜಮೀನು ಮತ್ತು ಪಿಂಡ್ ದಾದನ್‌ಖಾನ್‌ನಲ್ಲಿದ್ದ ಲವಣ ಗಣಿಗಳ ಮೇಲೆ ಇರುವ ತನ ಹಕ್ಕಿಗಾಗಿ ಬ್ರಿಟಿಷ್ ಕೋರ್ಟುಗಳಲ್ಲಿ ಕಾನೂನು ಸಮರ ಸಾಗಿಸಿದ. ಬ್ರಿಟಿಷ್ ಸರಕಾರದೊಂದಿಗೆ ತನಗೆ ನೀಡಲಾದ ಪಿಂಚಣಿಯ ಮೊತ್ತ ಸಾಲದೆಂದು ಅದನ್ನು ಹೆಚ್ಚಿಸ್ಸಬೇಕೆಂದ. ಅದನ್ನು ಸಮ್ಮತಿಸಲಾಗದಿದದ್ದರೆ, ಅದರ ಬದಲಿಗೆ ೨,೫೦,೦೦೦/

೨. P 573 History of Sikh People by G.Singh

೩. P History of Sikhs by G.Singh

– ಹಣವನ್ನು ನೀಡಬೇಕೆಂದು ಫಿರ್ಯಾದು ಸಮ್ಮತಿಸಿದ. ಬ್ರಿಟಿಷ್‌ರಿಂದ ಆ ಕೊಡುಗೆಗಳನ್ನು ಪಡೆಯಲು, ಅವರ ಮೇಲಿನ ಸ್ವಾಮಿಭಕ್ತಿಯನ್ನು ಪ್ರದರ್ಶಿಸಲು ಅವರ ಸೈನ್ಯದಲ್ಲಿ ಶಾಮೀಲಾಗಿ ಅವರ ಪರವಾಗಿ ಯಾವುದೇ ಯುದ್ಧರಂಗದಲ್ಲಿ ಹೋರಾಡುವೆನೆಂದ ! ಅವನು ಪಂಜಾಬ್‌ನ ರಾಜ ಪದವಿಯನ್ನು ಸಂಪೂರ್ಣವಾಗಿ ತಿರಸ್ಕರಿಸಿ, ಅದನ್ನು ಪುನಃ ಪಡೆಯುವ ಯಾವುದೇ ಆಸಕ್ತಿ, ಆಕಾಂಕ್ಷೆ ಅಥವಾ ಆಸೆ ಇರಿಸಿಕೊಂಡಿಲ್ಲವೆಂದು ಸಾರಿದ. ಬ್ರಿಟಿಷ್‌ರಿಗೆ ಅಡಿಯಾಳಾಗಿ, ಅವರಿಗೆ ನಿಷ್ಠಾವಂತ ಸೇವಕನಾಗಿ, ಜೀವನ ಸಾಗಿಸಲು ತನಗೆ ಸೂಕ್ತ ವರಮಾನ, ಪದವಿ, ಆಸ್ತಿಪಾಸ್ತಿಗಳನ್ನು ನೀಡಬೇಕೆಂದು ಪರಿಪರಿಯಾಗಿ ಪ್ರಾರ್ಥಿಸಿದ. ಅವನು ತನ್ನ ಫಿರ್ಯಾದುಗಳಲ್ಲಿ, ೧೮೪೯ರಲ್ಲಿ ಬ್ರಿಟಿಷ್ ಸಾಮ್ರಾಜ್ಯದೊಂದಿಗೆ ಪಂಜಾಬ್ ಪ್ರಾಂತ್ಯವನ್ನು ಸೇರಿಸಿಕೊಳ್ಳುವ ಒಪ್ಪಂದ (Treaty of Annexation) ದಲ್ಲಿ ಇತಿಹಾಸ ಪ್ರಸಿದ್ಧ 'ಕೋಹ್-ಇ-ನೂರ್' ವಜ್ರವನ್ನು ಬ್ರಿಟಿಷ್ ಮಹಾರಾಣಿಗೆ ನೀಡಲು ಒಪ್ಪಿದ ಒಂದು ಅಂಶವನ್ನು ಲಿಖಿಸಿದ್ದು, ಇತರ ಯಾವುದೇ ರಾಜ ರಾಣಿಯರ ಆಭರಣ ಅಥವಾ ಆಸ್ತಿಪಾಸ್ತಿಗಳನ್ನು ವಶಪಡಿಸಿಕೊಳ್ಳುವ ವಿವರವಿರದಿದ್ದುದರಿಂದ, ತನಗೆ ಸೇರಬೇಕಾದ ಪಿತ್ರಾರ್ಜಿತ ಆಸ್ತಿಗಳನ್ನು ತನಗೆ ನೀಡಬೇಕೆಂದು ಬೇಡಿದ.

ಜೆಲಿಯನ್‌ವಾಲಾ ಮತ್ತು ಗುಜ್ರಾತ್‌ಗಳಲ್ಲಿ ಜರುಗಿದ ವಿದ್ರೋಹ ಯುದ್ಧ ಪಂಜಾಬ್‌ನ ರಾಜ ಮನೆತನದ ವಿರುದ್ಧ ಜರುಗಿದ ಯುದ್ಧವಾಗಿದ್ದು, ಅದು ಆಂತರಿಕ ಕ್ಷೋಭೆಯಾಗಿದ್ದು, ಯಾವುದೇ ರೀತಿಯ ಕದನ, ಬ್ರಿಟಿಷ್‌ರ ವಿರುದ್ಧ ಜರುಗಿದ ಯುದ್ಧವಾಗಿಲ್ಲದಿದ್ದರೂ, ಬ್ರಿಟಿಷರು ಸಂಪೂರ್ಣ ಪಂಜಾಬ್‌ನ್ನು ಆಕ್ರಮಿಸಿ, ರಾಜಸತ್ತೆಯನ್ನು ನಿರ್ಮೂಲ ಮಾಡಿ ತನ್ನನ್ನು ಪದಚ್ಯುತಿ ಮಾಡಿದ್ದು ಅನ್ಯಾಯ ಮತ್ತು ಅಕ್ರಮ ಎಂದು ಸಾರಿ, ರಾಜಪದವಿಯನ್ನು ತನಗೆ ನೀಡುವಂತೆ ಬೇಡಿಕೊಳ್ಳದೆ, ಕೇವಲ ಆಸ್ತಿಪಾಸ್ತಿ ಹಣಗಳಿಗಾಗಿ ಬೇಡಿದ್ದು, ಕಾಡಿದ್ದು ಅತ್ಯಂತ ಶೋಚನೀಯ ಮತ್ತು ಖೇದಕರವಾಗಿತ್ತು ಎಂದರು ಇತಿಹಾಸಕಾರರು. ೪

ದಿಲೀಪ್‌ಸಿಂಗ್ ಬ್ರಿಟಿಷ್‌ರನ್ನು ಒಲಿಸಲು ತನ್ನ ಎಲ್ಲಾ ಅಸ್ತ್ರಗಳನ್ನು ಉಪಯೋಗಿಸಿದ. ಬ್ರಿಟಿಷ್‌ರು ತೆಗೆದುಕೊಂಡ ದಮನಕಾರ್ಯಗಳನ್ನು ಶ್ಲಾಘಿಸಿದ, ಅನುರೋಧಿಸಿದ, ಬೆಂಬಲಿಸಿದ. ಸಿಪಾಯಿ ದಂಗೆ, ಮೊಘಲ್‌ರ ವಿರುದ್ಧ ಜರುಗಿಸಿದ ಯುದ್ಧ, ಆಫ್ರಿಕಾದ ಸುಡಾನ್ ದೇಶದಲ್ಲಿ ಜರುಗಿಸಿದ ಯುದ್ಧಗಳಲ್ಲಿ ಸಿಖ್ ಯೋಧರನ್ನು ಉಪಯೋಗಿಸಿದ್ದನ್ನು ಬೆಂಬಲಿಸಿದ.

ಆದರೆ ಅವನ ಯಾವುದೇ ಅನುರೋಧಗಳು, ಬೇಡಿಕೆಗಳು, ದೈನ್ಯದ ಕೋರಿಕೆಗಳು ಬ್ರಿಟಿಷ್‌ರ ಮೇಲೆ ಪರಿಣಾಮ ಬೀರಲಿಲ್ಲ. ಹತಾಶನಾದ ದಿಲೀಪ್‌ಸಿಂಗ್ ತನ್ನ ದೇಶಾಭಿಮಾನವನ್ನು ತೋರಿಸಿ, ಭಾರತೀಯರ, ಮುಖ್ಯವಾಗಿ ಪಂಜಾಬೀ ಸಿಖ್‌ರ

೪. P 379 History of Sikhs by G. Singh

ಬೆಂಬಲ ಗಳಿಸಲು ಭಾರತಕ್ಕೆ ಮಾರ್ಚ್ ೧೮೮೬ರಲ್ಲಿ ಮರಳಲು ನಿರ್ಧರಿಸಿದ. ಸಿಖ್ಖರನ್ನು ಉದ್ದೇಶಿಸಿ ಹೇಳಿಕೆಗಳನ್ನು ನೀಡಿ, ಸಿಖ್ ಗುರುಗಳ ಮೇಲಿದ್ದ ನಂಬಿಕೆಯನ್ನು ಪ್ರದರ್ಶಿಸಿದ. ಸಿಖ್ಖರ ಕ್ಷಮೆ ಬೇಡಿದ.

ಭಾರತಕ್ಕೆ ಹಿಂದಿರುಗಬೇಕೆಂದರೂ ಬ್ರಿಟಿಷರು ಅವನನ್ನು ಭಾರತಕ್ಕೆ ಮತ್ತು ಪಂಜಾಬ್‌ಗೆ ತೆರಳಲು ಸಮ್ಮತಿಸಲಿಲ್ಲ. ಏಡನ್‌ನಲ್ಲೇ ಅವನನ್ನು ತಡೆಯಲಾಯಿತು. ಅವನು ಸಿಖ್ ಸರದಾರರನ್ನು ಭೇಟಿ ಮಾಡಿ ಅವರ ಸಹಾಯ, ಬೆಂಬಲವನ್ನು ಅಪೇಕ್ಷಿಸಿದ.

ಆದರೆ ಪಂಜಾಬ್‌ನಲ್ಲಿ ಸಿಖ್ ಸರದಾರರು, ಜಾಗಿರು ಪಡೆದ ಬ್ರಿಟಿಷ್ಠರ ಕೃಪಾಕಟಾಕ್ಷಕ್ಕೆ ಪಾತ್ರರಾಗಿ, ಕ್ಷೇಮದಿಂದಿದ್ದರು. ಅವರುಗಳು ಆರಾಮ ಜೀವನ ಸಾಗಿಸಿದ್ದರು. ದಿಲೀಪ್ ಸಿಂಗ್‌ನ ಕೋರಿಕೆಗೆ ಅವರು ಮರುಳಾಗಲಿಲ್ಲ. ಅವನನ್ನು ಹಿಂಬಾಲಿಸಿ, ಪುನಃ ಅವನನ್ನು ತಮ್ಮ ಧಣಿ ಎಂದು ಒಪ್ಪಲು ಹೋರಾಡಲು ತಯಾರಾಗಿರಲಿಲ್ಲ.

ಉತ್ತರ ಭಾರತದಲ್ಲಿ, ೧೮೮೫, ರಾಜಕೀಯ ಬಿರುಗಾಳಿ ಬೀಸುತ್ತಿದ್ದ ಸಮಯವಾಗಿತ್ತು. ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಸ್ಥಾಪನೆಗೊಂಡು, ಬ್ರಿಟಿಷ್ಠರು ಕೂಡ ಭಾರತದಲ್ಲಿ ಸ್ವಾಡಾಳಿತಗಳ ಪದ್ಧತಿಗಳ ಸ್ಥಾಪನೆಗೆ ಅನೇಕ ಕ್ರಮಗಳನ್ನು ಜಾರಿಗೆ ತರುವ ನಿಟ್ಟಿನಲ್ಲಿದ್ದರು. ಆದರೆ ಬ್ರಿಟನ್ ಮಾತ್ರ ತನ್ನ ನೆಲದಲ್ಲಿ ಪ್ರಜಾಸ್ವಾತಂತ್ರ್ಯಕ್ಕೆ ಬೆಲೆ ನೀಡಿ ಹೊರನಾಡಿನಲ್ಲಿ ತನ್ನ ಪ್ರಭುತ್ವ ಸ್ಥಾಪಿಸಿ ಅವರ ಸ್ವಾತಂತ್ರ್ಯ ಹರಣ ಮಾಡಿ ತನ್ನ ಬೂಟಾಟಿಕೆ ಹಾಜರುಪಡಿಸಿತ್ತು. ೫

The Theoretical alignment of democracy versus Fascism was predicated on the assumption that Britain and France are in reality democracies. That these two states are as imperalistic as Germany and Italy was overlooked. In their colonies - India, Morocco, Cochin, China - they have been pursuing a policy of ruthless exploitation of millions of human beings long before Mussuloni and Hitler appeared on the horizon.

(p 481 Days of Our Years by Van Paasen)

ಏಡನ್‌ನಲ್ಲಿ ದಿಲೀಪ್‌ಸಿಂಗ್, ಬ್ರಿಟಿಷ್ ವಿರೋಧಿ ಠಾಕರ್‌ಸಿಂಗ್ ಸಂಧಾನ್‌ವಾಲಿಯಾನನ್ನು ಭೇಟಿ ಮಾಡಿದ. ಅವನಿಂದ ಸಿಖ್ ಧರ್ಮವನ್ನು ಮರುಸ್ವೀಕಾರ ಮಾಡಿದ. ಆದರೆ ಅದರಿಂದ ಉಪಯೋಗವಾಗಲಿಲ್ಲ. ಸಂಧಾನ್‌ವಾಲಿಯಾ ಭಾರತಕ್ಕೆ ಹಿಂದಿರುಗಿದ, ಫ್ರೆಂಚ್ ಪಾಂಡಿಚೆರಿಯಲ್ಲಿ ಬೀಡು ಬಿಟ್ಟು, ಬ್ರಿಟಿಷ್ಠರ ವಿರುದ್ಧ ದಿಲೀಪ್‌ಸಿಂಗ್‌ನ ಪರ ಪ್ರಚಾರ ಸಾಗಿಸಿ, ೧೮೫೭ರಲ್ಲಿ ಪ್ರಾಣ ತ್ಯಜಿಸಿದ.

ಭಾರತದಲ್ಲಿ ತನ್ನ ಸಹಾಯ ಮತ್ತು ಬೆಂಬಲಕ್ಕೆ ಯಾವುದೇ ಉತ್ತಮ ಪ್ರತಿಕ್ರಿಯೆ ಕಾಣದ ದಿಲೀಪ್‌ಸಿಂಗ್ ಯೂರೋಪ್‌ನ ಬ್ರಿಟಿಷ್ ವಿರೋಧಿ ಫ್ರಾನ್ಸ್ ದೇಶದ ಸಹಾಯ ಮತ್ತು ಸ್ನೇಹ ಗಳಿಸಲು, ಪ್ಯಾರಿಸ್‌ಗೆ ಪಯಣಿಸಿದ. ಅಲ್ಲಿ ತಾನು ಪಂಜಾಬ್‌ನ ರಾಜನೆಂದು ಘೋಷಿಸಿಕೊಂಡು, ಒಂದು ಸರಕಾರ ರಚಿಸಿ, ಠಾಕೂರ್ ಸಿಂಗ್‌ನೆಂಬುವವನನ್ನು ಪ್ರಧಾನಿಯನ್ನಾಗಿ ನೇಮಕ ಮಾಡಿದ. (೧೮೫೭) ಆದರೆ, ಈ ಪ್ರಧಾನಿ ಅದೇ ವರ್ಷ ಕಾಯಿಲೆಯಿಂದ ನರಳಿ ಪ್ರಾಣಬಿಟ್ಟ !

ದಿಲೀಪ್ ಸಿಂಗ್, ಪ್ಯಾರಿಸ್‌ನಿಂದ ರಶಿಯಾದ ಮಾಸ್ಕೋ ನಗರಕ್ಕೆ ಪಯಣಿಸಿ ಅಲ್ಲಿನ ಸರಕಾರದ ಬೆಂಬಲ ಬೇಡಿದ. ಆದರೆ, ರಶಿಯಾದ ಜ್ಹಾರ್‌ನಿಂದಾಗಲೀ ಅಥವಾ ಯಾವುದೇ ಸಂಘ ಸಂಸ್ಥೆಗಳಿಂದ ಅವನಿಗೆ ಸಹಕಾರ, ಬೆಂಬಲ ದೊರಕದ ಕಾರಣ, ಅತ್ಯಂತ ದೀನಾವಸ್ಥೆಯಲ್ಲಿ ಕೇವಲ ಮಾಸಿಕ ೮೦ ರೂಪಾಯಿಗಳ ವರಮಾನದಿಂದ ದಿನಗಳನ್ನು ನೂಕಿದ. ತನ್ನಲ್ಲಿದ್ದ ಅಲ್ಪಸ್ವಲ್ಪ ಒಡವೆ ಮತ್ತು ಪದಕಗಳನ್ನು ಮಾರಿ ಜೀವನ ಸಾಗಿಸಿದ. ಆದರೆ ಈಗಾಗಲೇ ಅವನ ಹೆಂಡತಿಯ ಮರಣ ೧೮೮೭ರಲ್ಲಿ ಜರುಗಿದ್ದು, ಒಬ್ಬ ಇಂಗ್ಲಿಷ್ ಯುವತಿಯ ಜೊತೆಗೆ ಸಂಸಾರ ಹೂಡಿದ.

ಮಾಸ್ಕೋದಲ್ಲಿ ಜೀವನ ಸಾಗಿಸಲು ಕಷ್ಟವೆನಿಸಿ, ಅಲ್ಲಿ ಯಾವ ತರಹ ಬೆಂಬಲ ದೊರೆಯದ ಕಾರಣ, ದಿಲೀಪ್‌ಸಿಂಗ್ ಪ್ಯಾರಿಸ್‌ಗೆ ನವೆಂಬರ್, ೧೮೮೮ರಲ್ಲಿ ಹಿಂದಿರುಗಿದ. ಅವನ ಸ್ಥಿತಿ ಕರುಣಾಜನಕವಾಗಿತ್ತು. ಕೈಯಲ್ಲಿ ಕಾಸಿಲ್ಲದೆ, ಯಾವ ವರಮಾನವಿಲ್ಲದೆ, ಕೆಲಸವಿಲ್ಲದೆ, ಬ್ರಿಟಿಷ್ ಸರಕಾರದಿಂದ ಪಿಂಚಣಿಯ ಜೊತೆಗೆ ಅವನ ಸಕಲ ಚರ, ಪರ ಆಸ್ತಿಪಾಸ್ತಿಗಳ ಮುಟ್ಟುಗೋಲಾಗಿ, ಅವಮಾನಿತನಾಗಿ, ಬಂಧು ಬಳಗದವರಿಂದ ದೂರವಾಗಿ, ತನ್ನ ಧರ್ಮೀಯರಿಂದಲೇ ಕಡೆಗಣಿಸಿದಂತವನಾಗಿ, ಪಾರ್ಶ್ವವಾಯುವಿನಿಂದ ನರಳಿ, ೨೨ನೆಯ ಅಕ್ಟೋಬರ್ ೧೮೯೩ರಂದು ಪ್ರಾಣ ತ್ಯಜಿಸಿದ.

ದಿಲೀಪ್‌ಸಿಂಗ್‌ನ ಪಾರ್ಥಿವ ಶರೀರವನ್ನು ಭಾರತದಲ್ಲಿ ಹೂಳದೆ, ಇಂಗ್ಲೆಂಡಿನ ಸಾಫೋಕ್‌ನಲ್ಲಿ ಹೂಳಿದರು ಬ್ರಿಟಿಷ್‌ರು.

ಉಪಸಂಹಾರ

ಭಾರತವನ್ನು ೨೦೦ ವರ್ಷಗಳ ಕಾಲ ಪರಕೀಯ ತುರ್ಕಿಯರು, ಆಫ್ಘನ್‌ರು, ಮೊಘಲ್‌ರು ಆಳಿದರು. ಬಹುಸಂಖ್ಯಾತ ಸ್ಥಳೀಯ ರಾಜ ಮಹಾರಾಜರನ್ನು ಸೋಲಿಸಿ, ಅವರನ್ನು ತಮ್ಮ ಗುಲಾಮರನ್ನಾಗಿ ಮಾಡಿ ಆಳಿದರು. ಬ್ರಿಟಿಷ್‌ರು ಕೇವಲ ವ್ಯಾಪಾರ ಮಾಡುತ್ತಾ ಬಂದವರು, ಭಾರತವನ್ನು ತಮ್ಮ ವಶಕ್ಕೆ ಪಡೆದುಕೊಂಡು ಸುಮಾರು ೨೦೦ ವರ್ಷಗಳ ಕಾಲ ಆಳಿದರು. ಭಾರತ ಪರಕೀಯರ ವಶಕ್ಕೆ ಈಡಾಗಿದ್ದಕ್ಕೆ ಹಲವಾರು ಕಾರಣಗಳನ್ನು ಇತಿಹಾಸಕಾರರು, ಜ್ಞಾನಿಗಳು, ಪಂಡಿತರು, ರಾಜಕೀಯ ಧುರೀಣರು ನೀಡಿದ್ದಾರೆ. ಅವುಗಳಲ್ಲಿ ಪ್ರಮುಖವಾದ ಕಾರಣವೆಂದರೆ 'ಅನೈಕ್ಯತೆಯ ವ್ಯಾಧಿ.' ಅದು ಭಾರತೀಯರನ್ನು ಬಲವಾಗಿ ಅಂಟಿ ಕಾಡಿದ್ದಾಗಿದೆ.

ಆದರೆ ಈ 'ಅನೈಕ್ಯತೆಯ ವ್ಯಾಧಿ' ಭಾರತೀಯರಿಗೆ ಕಾಡಿದ್ದಾದರೂ ಏಕೆ ಎಂಬ ಪ್ರಶ್ನೆಗೆ ಉತ್ತರ ಹುಡುಕಲು ಸುಲಭ ಸಾಧ್ಯವಲ್ಲ. ಯಾವುದೇ ಖಂಡಗಳಲ್ಲಿ ಕಾಣುವಂತಹ ವೈವಿಧ್ಯತೆ ಭಾರತದ ಉಪಖಂಡದಲ್ಲೂ ಕಾಣಬರುತ್ತಿದೆ. ಯೂರೋಪ್, ಆಫ್ರಿಕಾ, ಅಮೆರಿಕಾ ಖಂಡಗಳಲ್ಲಿ ಕಾಣಬರುವ ಹಲವಾರು ಜಾತಿ, ಧರ್ಮ, ಪಂಗಡ, ಬುಡಕಟ್ಟು, ಸಂಸ್ಕೃತಿ, ಭಾಷೆ ಇತ್ಯಾದಿ ಭಾರತ ಉಪಖಂಡದಲ್ಲೂ ಕಂಡುಬರುತ್ತಿರುವುದು ಸಹಜ. ಯೂರೋಪ್ ಖಂಡದಲ್ಲಿನ ವೈವಿಧ್ಯತೆಯ ಪರಿಣಾಮ, ಅನಾದಿ ಕಾಲದಿಂದಲೂ, ಅದು ಅತ್ಯಂತ ಅನಾಗರೀಕ, ಅಸಂಸ್ಕೃತಿಕ ಕ್ರೂರ ಕಾಳಗಗಳಿಂದ ತತ್ತರಿಸಿತು. ಎರಡು ಮಹಾಯುದ್ಧಗಳನ್ನೇ ಹುಟ್ಟು ಹಾಕಿದ ಖಂಡ ಯೂರೋಪ್ ! ಆದರೆ ಇತ್ತೀಚೆಗಷ್ಟೇ ಅಲ್ಲಿ ಒಂದು ವಿಧವಾದ ರಾಜಕೀಯ ಮತ್ತು ವಾಣಿಜ್ಯ ಐಕ್ಯತೆಯನ್ನು ಕಂಡುಕೊಳ್ಳಲು ಕ್ರೂರ ಕಾಳಗಗಳನ್ನು ತಡೆಗಟ್ಟಿ, 'ಯೂರೋಪಿಯನ್ ಯೂನಿಯನ್' ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಅದೇ ಮಾದರಿಯಲ್ಲಿ 'ಆಫ್ರಿಕನ್ ಯೂನಿಯನ್' 'ಅಮರಿಕನ್ ಯೂನಿಯನ್'ಗಳೂ ಕಾರ್ಯ ನಿರ್ವಹಿಸುತ್ತಿವೆ. ಆದರೆ ಈ ಸಂಸ್ಥೆಗಳು ಎಷ್ಟರ ಮಟ್ಟಿಗೆ ತಮ್ಮ ಗುರಿಯನ್ನು ಸಾಧಿಸಲು ಶ್ರಮಿಸಿ, ಸಫಲತೆಯನ್ನು ಪಡೆಯುತ್ತಿವೆ ಎಂಬುದು ಸಂದೇಹಾಸ್ಪದವಾಗಿದೆ.

ಭರತಖಂಡ ಕೂಡ, ರಾಜಕೀಯವಾಗಿ, ಸಾಮಾಜಿಕವಾಗಿ ಐಕ್ಯತೆ ಪಡೆಯದೇ ಇದ್ದುದು ಸರ್ವವಿದಿತ. ಪ್ರಾಚೀನ ಕಾಲದ ಭಾರತದಲ್ಲಿ ಕೇವಲ ಮೌರ್ಯರು, ಇಡೀ ಭಾರತವನ್ನು ರಾಜಕೀಯವಾಗಿ ಒಂದು ರಾಷ್ಟ್ರವಾಗಿ ಆಳಿದ್ದನ್ನು ಇತಿಹಾಸಕಾರರು ಹೇಳಿದ್ದಾರೆ. ಆದರೆ, ಭಾರತ ಎಂದೂ ಒಂದು ರಾಷ್ಟ್ರವಾಗಿ, ಅಶೋಕ – ಅಕ್ಬರ್‌ರ ಕಾಲವೂ ಸೇರಿದಂತೆ ರೂಪುಗೊಳ್ಳಲಿಲ್ಲ. ೧೯ನೆಯ ಶತಮಾನದವರೆಗೆ,

'ಹಿಂದುಸ್ತಾನ'ವೆಂದರೆ ಉತ್ತರ ಭಾರತ, 'ದಖನೀ' ಎಂದರೆ 'ದಕ್ಷಿಣ ಭಾರತ'ವಾಗಿತ್ತು. ಪ್ರತಿಯೊಂದು ಖಂಡದಲ್ಲಿನ ದೇಶದಲ್ಲಿನ ಇತಿಹಾಸದಲ್ಲಿ ಕಾಣಬರುವ ರಾಜ ಮಹಾರಾಜರ ರಾಜ್ಯವಿಸ್ತೀರ್ಣಾಕಾಂಕ್ಷೆ, ಅಖಂಡ ವಿಶ್ವ ಸಾಮ್ರಾಜ್ಯ ಸ್ಥಾಪನೆ ಮಾಡುವ ಆಸೆ, ಹುಮ್ಮಸ್ಸು, ಛಲ, ಭಾರತದಲ್ಲಿಯೂ ಕಂಡುಬಂದಿತು. ಯೂರೋಪಿಯನ್‌ರು ಪರಸ್ಪರ ಕಚ್ಚಾಡಿ, ಕದನ ಜರುಗಿಸಿ, ರಕ್ತ ಹರಿಸಿದರೂ, ಅವರು ಪರಕೀಯ ರಾಷ್ಟ್ರಗಳ, ಪ್ರಮುಖವಾಗಿ ಆಫ್ರಿಕಾ ಮತ್ತು ಏಶಿಯಾ ಖಂಡಗಳ ರಾಷ್ಟ್ರಗಳ ಮೇಲೆ ಆಕ್ರಮಣ ಜರುಗಿಸಿ, ತಮ್ಮಲ್ಲಿನ ಒಳಜಗಳ, ದ್ವೇಷ, ಅಸೂಯೆ ಇತ್ಯಾದಿಗಳನ್ನು ಶಮನಗೊಳಿಸಿದರು. ಪಾಶ್ಚಾತ್ಯರು ಸಾಹಸಿಗಳು, ಮಾನವನ ಹುಟ್ಟುಗುಣಗಳಲ್ಲಿ ಒಂದಾದ ಪರರ ಮೇಲೆ ಆಕ್ರಮಣ ಎಸಗಿ ಪ್ರಭುತ್ವ ಜರುಗಿಸುವ ಗುಣಗಳನ್ನು ಬಲವಾಗಿ ಹೊಂದಿದ್ದು, ಕ್ರೂರತೆ, ಹಿಂಸೆ ಇತ್ಯಾದಿ ಗುಣಗಳನ್ನು ಬಲವಾಗಿ ಪ್ರತಿಪಾದಿಸಿ ಅವುಗಳನ್ನು ಜಾರಿಗೆ ತಂದು, ಇತರರ ಮೇಲೆ ತಮ್ಮ ಅಧಿಕಾರ ಸ್ಥಾಪಿಸಿದರು. ಮಾನವನ ಮತ್ತೊಂದು ಹುಟ್ಟು ಗುಣವಾದ 'ಅಹಂ' ಅಥವಾ ತಾನೇ ಎಲ್ಲರಿಗಿಂತ ಉತ್ತಮ, ಶ್ರೇಷ್ಠ, ಹೆಚ್ಚುಗಾರಿಕೆಯ ವ್ಯಕ್ತಿ ಎಂಬ ಅಹಂಭಾವ ಪಾಶ್ಚಿಮಾತ್ಯರನ್ನು, ಇತರ ಖಂಡಗಳ ದೇಶದ ಜನರನ್ನು ಕೀಳು, ಅನಾಗರೀಕ, ಅಸಭ್ಯರೆಂದು, ಅವರನ್ನು ತಮ್ಮ ವಶದಲ್ಲಿರಿಸಿಕೊಂಡು, ತಮ್ಮ ಗುಲಾಮರನ್ನಾಗಿ ಮಾಡಲು ಯೋಗ್ಯರೆಂದು ತೀರ್ಮಾನಿಸಿ, ತಮ್ಮಲ್ಲಿದ್ದ ಸರ್ವರೀತಿಯ ಅಸ್ತ್ರಗಳನ್ನು ಉಪಯೋಗಿಸಿ ಸಫಲರಾದರು.

ಆದರೆ ಪಾಶ್ಚಾತ್ಯ ದೇಶದವರಲ್ಲಿ ಇಂಗ್ಲಿಷ್‌ನವರ ಆಷಾಢಭೂತಿತನ ಮಾತ್ರ ಅತ್ಯಾಶ್ಚರ್ಯಕರವಾದ ರೀತಿಯಲ್ಲಿ ಕಾರ್ಯ ನಿರ್ವಹಿಸಿ, ಉಜ್ವಲ ನಾಗರೀಕತೆ ಮತ್ತು ವ್ಯಕ್ತಿ ಸ್ವಾತಂತ್ರ್ಯತೆಯ ಬಗ್ಗೆ ಬಲವಾದ ನಂಬಿಕೆ ಮತ್ತು ಅದಕ್ಕಾಗಿ ಹೋರಾಡಿ, ಜಯ ಸಾಧಿಸಿದರೂ ಪರರಾಷ್ಟ್ರಗಳನ್ನು ಆಕ್ರಮಿಸಿ, ತಮ್ಮ ವಶದಲ್ಲಿರಿಸಿಕೊಂಡು ಅಲ್ಲಿನ ಜನರನ್ನು ಕ್ರೂರವಾಗಿ ಅಮಾನವೀಯವಾಗಿ ಆಳತೊಡಗಿದ್ದು, ಒಂದು ಕ್ರೂರ ವಿಪರ್ಯಾಸ ಹಾಗೂ ವಿಷಮ ಆಷಾಢಭೂತಿತನದ ಪ್ರದರ್ಶನ, ನಡೆವಳಿಕೆಯಾಗಿತ್ತು.

ಇಂಗ್ಲೆಂಡ್‌ನಲ್ಲಿ ಶತಮಾನಗಳಿಂದ 'ಮ್ಯಾಗ್ನಾಕಾರ್ಟಾ' ಎಂಬ ಪ್ರಣಾಳಿಕೆ ಹೊರಡಿಸಿದನಂತರ ಪ್ರಾರಂಭವಾದ ಪ್ರಜಾಸ್ವಾತಂತ್ರ್ಯ ಚಳವಳಿ ಪಾರ್ಲಿಮೆಂಟ್ ವಿರುದ್ಧ ಚಕ್ರವರ್ತಿ, ಅದಕ್ಕಾಗಿ ಜರುಗಿದ ಅಂತರ್‌ಯುದ್ಧ ಎಲ್ಲವೂ ಅಭೂತಪೂರ್ವವಾಗಿವೆ. ವ್ಯಕ್ತಿ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಅವರ ಮೂಲಭೂತ ಹಕ್ಕುಗಳಾಗಿ, ಅವರು ಜರುಗಿಸಿದ ಹೋರಾಟ, ರಕ್ತ ಚೆಲ್ಲುವಿಕೆ, ಯುದ್ಧ ಮುಂತಾದವುಗಳು ಕೇವಲ ಬ್ರಿಟಿಷ್ ಪ್ರಜೆಗಳಿಗೆ ಮಾತ್ರ ಸೀಮಿತವಾಗಿದ್ದು, ಅವರು ಆಕ್ರಮಿಸಿ, ಆಳುತ್ತಿದ್ದ ಪರನಾಡಿನ ಜನರಿಗೆ ಆ ತತ್ವ ಅನ್ವಯಿಸಲಾಗದೇ, ಕ್ರೂರ ಗುಲಾಮಗಿರಿ ಪದ್ಧತಿಯನ್ನು ಎಲ್ಲೆಲ್ಲೂ ಹರಡಿ ಪರಿಪಾಲಿಸಿದರು.

ಕವಿ ರವೀಂದ್ರನಾಥ್ ಠಾಕೂರ್‌ರ ಮಾತುಗಳಲ್ಲಿ ಹೇಳುವುದಾದರೆ, 'ಹಿಂಸೆ, ಲೋಭ, ರಾಜಕೀಯಕೂಟ, ನೀತಿಯ ಕುಟಿಲತೆ – ಇವು ಪಾಶ್ಚಾತ್ಯ ದೊಡ್ಡ ದೊಡ್ಡ

ದೇಶಗಳಲ್ಲಿ, ಚರಿತ್ರೆಯ ಹಿಂದೆ ಎಂದೂ ಕಾಣದ ಪ್ರಜಾರೂಪವನ್ನು ಧರಿಸಿ, ಮನುಷ್ಯನ ಹಕ್ಕನ್ನು ನಿರ್ದಾಕ್ಷಿಣ್ಯವಾಗಿ ಮುರಿದು ಹಾಕುತ್ತಿವೆ.'

'ಹತ್ತೊಂಬತ್ತನೆಯ ಶತಮಾನದ ಆದಿ ಮತ್ತು ಮಧ್ಯಕಾಲಗಳಲ್ಲಿ ನಮಗೆ ಯೂರೋಪಿನ ನಾಗರೀಕತೆಯ ಮೊದಲು ಪರಿಚಯವಾದಾಗ, ನಮಗೆ ಅದರಲ್ಲಿ ಭಕ್ತಿಯೂ, ಆನಂದವೂ ಉಂಟಾದವು. ಈ ನಾಗರೀಕತೆಯು ಮನುಷ್ಯ ಸಾಮಾನ್ಯದಲ್ಲೇ ಶ್ರದ್ಧೆಯುಳ್ಳದ್ದಾಗಿ ಜಗತ್ತಿನಲ್ಲೇ ಹುಟ್ಟಿತೆಂದು ನಾವು ತಿಳಿದೆವು; ಸತ್ಯನಿಷ್ಠೆ, ನ್ಯಾಯಪರತೆ, ಮನುಷ್ಯ ಸಂಬಂಧವಾಗಿ ಒಂದು ದೊಡ್ಡ ಶ್ರೇಯೋಬುದ್ಧೊ – ಇವು ಇದರ ಲಕ್ಷಣಗಳೆಂದು ನಿಶ್ಚಯ ಮಾಡಿಕೊಂಡೆವು; ಈ ನಾಗರೀಕತೆಯು ಮನುಷ್ಯನನ್ನು ಅವನ ಬಾಹ್ಯ ಮತ್ತು ಆಂತರಿಕವಾದ ಎಲ್ಲಾ ಬಂಧನಗಳಿಂದಲೂ ಬಿಡುಗಡೆಯನ್ನು ತಂದುಕೊಡುವ ವ್ರತವನ್ನು ಕೈಕೊಂಡಿತ್ತೆಂದು ಭಾವಿಸಿದೆವು. ಆದರೆ ನೋಡುತ್ತಾ ನೋಡುತ್ತಾ ನಮ್ಮ ಜೀವಿತ ಕಾಲದಲ್ಲೇ ಅದರ ನ್ಯಾಯಬುದ್ಧಿ, ಮಾನವಮೈತ್ರಿ – ಇವು ಎಷ್ಟು ಕ್ಷೀಣಿಸಿಹೋದುವೆಂದರೆ, ಇಂದು ಈ ನಾಗರೀಕತೆಯ ವಿಚಾರ ಸಭೆಯಲ್ಲಿ ಬಲಹೀನ ಪೆಟ್ಟಿನಿಂದ ಪೀಡಿತನಾದವನಿಗೆ ನ್ಯಾಯದ ಭರವಸೆ ಎಲ್ಲಿಯೂ ದೊರೆಯುವ ಹಾಗಿಲ್ಲ. ಪಾಶ್ಚಾತ್ಯ ಭೂಖಂಡದಲ್ಲಿ ಈ ನಾಗರೀಕತೆಯ ಮುಖ್ಯ ಅನುಯಾಯಿಗಳಾದ ಪ್ರಸಿದ್ಧ ದೇಶಗಳು ಇಂದು ಒಬ್ಬರನ್ನೊಬ್ಬರು ಕಡಿದು ತುಂಡು ತುಂಡು ಮಾಡುವುದಕೋಸ್ಕರ, ಕ್ರೂರ ಗುರು ಕೋರೆದಾಡೆಗಳಲ್ಲಿ ಶ್ರೇಷ್ಠತೆಯನ್ನು ಸಾಧಿಸುವುದಕ್ಕೋಸ್ಕರ, ತಮ್ಮ ಬುದ್ಧಿ ಐಶ್ವರ್ಯಗಳನ್ನೆಲ್ಲಾ ವಿನಿಯೋಗಿಸುತ್ತಿದ್ದಾರೆ. ಮನುಷ್ಯನನ್ನು ಕಂಡರೆ ಮನುಷ್ಯನಿಗೆ ಇಷ್ಟು ಅಪರಿಮಿತವಾದ ಭಯ, ಇಷ್ಟು ದೃಢವಾದ ಅಪನಂಬಿಕೆ – ಇವು ಮತ್ತ್ಯಾವ ಯುಗದಲ್ಲಿಯೂ ಕಂಡುಬಂದಿಲ್ಲ. . . ಭೂಮಂಡಲವನ್ನೇ ತಮ್ಮ ನಿಷ್ಠುರ ಶಕ್ತಿಯಿಂದ ವಶಪಡಿಸಿಕೊಳ್ಳಲು ಜನ್ಮಸಿದ್ಧವಾದ ಹಕ್ಕನ್ನು ಪಡೆದು ಬಂದಿದ್ದೇವೆಂದು ಯಾರು ಗರ್ವಿಸುತ್ತಿದ್ದಾರೆಯೋ, ಅಂತಹ ಶಾಸಕ ಮತ್ತು ಶೋಷಕ ಜನಕ್ಕೆ ಈ ಪ್ರಯತ್ನವು ನಿಷ್ಪ್ರಯೋಜನವೆಂದು ಭಾವನೆ ... (ಪ್ರಬುದ್ಧ ಕರ್ನಾಟಕ – ೧೯೩೭ – ಪುಸ್ತಕಮನೆ ಪತ್ರಿಕೆಯಲ್ಲಿ ಪುನರ್‌ಮುದ್ರಣ) ಸಂಚಿಕೆ ೧೨ – ಆಗಸ್ಟ್ ೨೦೦೯

ಮನಶ್ಶಾಸ್ತ್ರದ ಅಭ್ಯಾಸ ಮಾಡಿದವರಿಗೆ ಅರಿವಾಗುವ ಅಂಶವೆಂದರೆ, ಮಾನವನೊಬ್ಬ ಆಕ್ರಮಣಕಾರಿ ಪ್ರಾಣಿ ಎಂದು ಎಲ್ಲಾ ಪ್ರಾಣಿಗಳಿಗೆ ಇರುವಂತಹ ಪರರ ಮೇಲೆ ಆಕ್ರಮಣ ಎಸಗಿ, ತನ್ನ ಸ್ವಾರ್ಥಸುಖಕ್ಕಾಗಿ, ತನ್ನ ಅಧಿಕಾರ ಚಲಾಯಿಸುವ ಸಲುವಾಗಿ, ತನ್ನ 'ಯಜಮಾನಿಕೆ'ಯನ್ನು ಪರರ ಮೇಲೆ ಹೇರುವುದಕ್ಕಾಗಿ, ತನ್ನೆಲ್ಲಾ ಸಾಮರ್ಥ್ಯ ಬುದ್ಧಿ, ಚತುರತೆ ಉಪಯೋಗಿಸುತ್ತಾನೆ. ಇದು ಮಾನವ ಸಹಜವಾದ ಗುಣ. ಮನೆಗೊಬ್ಬ ಯಜಮಾನ, ಹಳ್ಳಿಗೊಬ್ಬ ಪಟೇಲ, ಪ್ರಾಂತ್ಯಕ್ಕೊಬ್ಬ ಪಾಳೆಯಗಾರ, ದೇಶಕ್ಕೆ ಒಬ್ಬ ರಾಜ, ಅಖಂಡ ರಾಜ್ಯಕ್ಕೆ ಒಬ್ಬ ಚಕ್ರಾಧಿಪತಿ, ಸುಲ್ತಾನ್ ಅಥವಾ ಬಾದ್‌ಶಹಾ ಇತಿಹಾಸದುದಕ್ಕೂ ಕಂಡುಬರುವ ವಾಸ್ತವ ಅಂಶಗಳು. ಒಬ್ಬ ಯಜಮಾನ

ತನ್ನ ಮನೆ, ಸಂಸಾರ ಕುಟುಂಬಕ್ಕಷ್ಟೇ ತನ್ನ ಅಧಿಕಾರವನ್ನು ವ್ಯಾಪ್ತಿಯಲ್ಲಿರಿಸಿಕೊಂಡರೆ ಶಾಂತಿ, ಸುಖ, ತೃಪ್ತಿ ಉಂಟಾಗಬಲ್ಲುದು. ಆದರೆ ಮನುಷ್ಯ ಸ್ವಭಾವದಲ್ಲಿ ಆಕ್ರಮಣ ಬುದ್ಧಿ ಪುಟಿದೆದ್ದು, ಬಲಗೊಂಡು, ಆಸೆ ದುರಾಸೆಯಾಗಿ, ಪಕ್ಕದ ಮನೆ, ಸಂಸಾರ, ರಾಜ್ಯ, ರಾಷ್ಟ್ರಗಳ ಮೇಲೆ ತನ್ನ ಹತೋಟಿ ಇರಬೇಕೆಂಬ ಆಸೆ ಬಲವಂತವಾದಾಗಲೇ ಶಾಂತಿ ಕದಡಿ, ಸಮಸ್ಯೆ ಉದ್ಭವವಾಗಿ, ಅದರ ಪರಿಹಾರಕ್ಕೆ ಸಂಧಾನ, ಕದನ, ಮಹಾಯುದ್ಧಗಳೇ ಜರುಗಬಹುದು.

ಮನುಷ್ಯನಿಗೆ ದುರಾಕ್ರಮದ ಗುಣವಿದ್ದ ಹಾಗೆ, ತನ್ನ ವ್ಯಕ್ತಿ ಸ್ವಾತಂತ್ರ್ಯ ತನ್ನ ಪಾಡಿಗೆ ತಾನು ಹಾಯಾಗಿ ತನ್ನ ನೆಲದಲ್ಲಿ ನಿಂತು ಸಂತೃಪ್ತಿ ಪಡೆಯಬೇಕೆಂಬ ಗುಣವು ಇದೆಯಷ್ಟೆ. ಇಂತಹ ಗುಣಸಂಪನ್ನರೇ ಮಾನವ ಕುಲದಲ್ಲಿ ಹೆಚ್ಚಾಗಿದ್ದು, ಕೇವಲ ಮನುಷ್ಯರ ಹೃದಯ ಬುದ್ಧಿಗಳಲ್ಲಿ ಕಾಣಿಸಿಕೊಂಡ ಆಕ್ರಮಣಕಾರಿ ಗುಣ ಮನೋಭಾವವಿರುವದೊಂದಿಗೆ ಸಂಘರ್ಷಕ್ಕೆ ಒಳಗಾಗುತ್ತಾರೆ. ಈ ಎರಡು ಗುಣಗಳ ಮಧ್ಯೆ ವಿರಸ ಏರ್ಪಟ್ಟು ಸ್ವಾಭಾವಿಕವಾಗಿಯೇ, ಸ್ವಾಭಿಮಾನ, ದೇಶಾಭಿಮಾನ ವ್ಯಕ್ತಿಸ್ವಾಂತಂತ್ರ್ಯ, ದೇಶ ಸ್ವಾತಂತ್ರ್ಯ ಮುಂತಾದ ಭವನೆಗಳಿಗೆ ಹುಟ್ಟು ಹಾಕಿ ನಿರಂತರವಾಗಿ ಘರ್ಷಣೆಗಳಲ್ಲಿ ಏರ್ಪಟ್ಟಿವೆ.

ಮಾನವರೆಲ್ಲರೂ ಒಂದೇ, ಒಂದೇ ಕುಲದವರು, ಒಂದೇ ಜನಾಂಗದವರು ಎಂಬ ಭಾವನೆ ಬರಲಸಾಧ್ಯ. ಯಾಕೆಂದರೆ, ಮಾನವನ ಹುಟ್ಟುಗುಣಗಳಲ್ಲಿ ಸ್ವಾರ್ಥತೆಯೊಂದಿಗೆ ಉದಾರತೆ, ವ್ಯಕ್ತಿಸ್ವಾತಂತ್ರ್ಯದ ಜೊತೆಗೆ ಆಕ್ರಮಣಶೀಲತೆ, ದೇಶಾಭಿಮಾನದ ಜೊತೆಗೆ, ವಿಶ್ವಮಾನವತೆ, ಎಲ್ಲ ಅಡಗಿದ್ದರೂ ಅವನ ಪ್ರಕೃತಿಧರ್ಮಗಳಲ್ಲಿ ಒಂದಾದ ಪರಸ್ಪರ ಘರ್ಷಣೆ, ಹೊಡೆದಾಟ, ಕಾದಾಟ, ಸ್ಪರ್ಧಾಮನೋಭಾವ, ಅವನಲ್ಲಿ ಇರುವ ಭಯ, ದ್ವೇಷ, ಅನುಮಾನ, ಅಪನಂಬಿಕೆಗಳು ಹಾಸುಹೊಕ್ಕಾಗಿರುವಾಗ, ಒಬ್ಬ ಮಾನವ ಸರ್ವಸ್ವತಂತ್ರನಾಗಿರಲು ಅಥವಾ ಒಂದು ದೇಶ ಸರ್ವಸ್ವತಂತ್ರವಾಗಿರಲು ಅಸಾಧ್ಯ. ಎಲ್ಲಿಯವರೆಗೆ ಮಾನವನಲ್ಲಿ ಆಕ್ರಮಣಕಾರಿ, ಗುಣ, ಪರರ ಬಗ್ಗೆ ದ್ವೇಷ, ಅಸೂಯೆ, ಅಪನಂಬಿಕೆ, ಅತೀವ ಧರ್ಮ ಶ್ರದ್ಧೆ, ತಾನೇ ಅತ್ಯಂತ ಮೇಲನುಭವಿ, ಉಚ್ಚತೆಯ ಪರಮೋತ್ಸಾಹ ಇರುತ್ತವೆಯೋ, ಮತ್ತು ಮನುಷ್ಯ–ಮನುಷ್ಯನ ಮಧ್ಯೆ ದ್ವೇಷ, ತಿರಸ್ಕಾರ, ಹಿಂಸೆಯಂತಹ ಪಶುವೃತ್ತಿಯ ಭಾವನೆಗಳು ಇರುತ್ತವೆಯೋ, ಎಲ್ಲಿಯವರೆಗೆ ಅವರು ತಮ್ಮ ಧರ್ಮವೇ ಶ್ರೇಷ್ಠವೆಂದು ಅದಕ್ಕೆ ಹಿಂಸಾಚಾರ ಎಸಗುತ್ತಾರೋ, ಎಲ್ಲಿಯವರೆಗೆ ಮಾನವನ ಮೂಲಭೂತ ಗುಣಗಳ ಸಾಮ್ಯ ಮತ್ತು ವೈಷಮ್ಯಗಳು ಅವನ ಜೀವನದಲ್ಲಿ ತಾಂಡವವಾಡುತ್ತಾ ಇರುತ್ತವೆಯೋ, ಅಲ್ಲಿಯವರೆಗೂ ಈ ಲೋಕದಲ್ಲಿ ಹಿಂಸೆ, ಯುದ್ಧ ಕಲಹ ತಾಂಡವವಾಡುತ್ತಿರುತ್ತವೆ.

ಮಾನವನ ಮೂಲಭೂತ ಗುಣಗಳಾದ ಆಕ್ರಮಣಾಶೀಲತೆ, ಅಸಮಾಧಾನ, ಅತೃಪ್ತಿ, ದ್ವೇಷ ಮತ್ತು ಪರರ ಬಗ್ಗೆ ವೈರತ್ವಗಳ ವಿರುದ್ಧ ಉಪದೇಶಿಸಿದ ಸಂತರು,

ಜ್ಞಾನಿಗಳು, ದೇವತಾ ಪುರುಷರು ತಮ್ಮ ಜೀವಿತಕಾಲದಲ್ಲಿ ಪ್ರವಚನ ಮಾಡಿ ಜ್ಞಾನಯಜ್ಞ ಮಾಡಿ, ಜನರ ಮನಸ್ಸನ್ನು ಹದಗೊಳಿಸಿ, ಶುಚಿಗೊಳಿಸಿ, ಉಚ್ಛತೆಯೆಡೆ ತಿರುಗಿಸಲೆತ್ನಿಸಿದರು. ಆದರೆ ಅವರ ಯತ್ನ ಸಫಲತೆ ಪಡೆಯದೇ ಇದ್ದರೂ, ಅವರು ಮಾತ್ರ ಹುತಾತ್ಮತೆ ಗಳಿಸಿದ್ದು ಸತ್ಯವಾಯಿತು ! ಅವರ ಹುತಾತ್ಮತೆಯಿಂದ ಅವರು ಹೆಸರು ಗಳಿಸಿದರೂ, ಅವರ ವಿಚಾರಗಳು, ಧ್ಯೇಯಗಳು, ಗುರಿಗಳು ಮಾನವನ ಮನಸ್ಸುಗಳಲ್ಲಿ ಸ್ಥಿರವಾಗಿ ನಿಲ್ಲಲಿಲ್ಲ. ಈ ಭಾವೋದ್ರೇಕಿ ಮಾನವ ಮತ್ತು ತನ್ನ ಅಧಿಕಾರ ಲಾಲಸೆಗಾಗಿ, ಶಕ್ತಿ, ಯುಕ್ತಿ, ಧನ ದ್ರವ್ಯ, ಕುಟಿಲತೆ, ತಂತ್ರ ಮಂತ್ರಗಳಿಂದ ಮತ್ತೊಬ್ಬರ ಮೇಲೆ ದುರಾಕ್ರಮ ಎಸಗಿ ಅವರ ಸ್ವಾತಂತ್ರ್ಯ ಕಸಿದು ತನ್ನ ಅಧಿಕಾರ ಅವರ ಮೇಲೆ ಹೇರುವುದು ಸರ್ವೇಸಾಮಾನ್ಯವಾದ ಐತಿಹಾಸಿಕ ಸತ್ಯ !

ಹೌದು ! ಸಿದ್ಧಾಂತಿಗಳು, ಸಂತರು, ಜ್ಞಾನಿಗಳು, ಸಾರಿದ ಹಾಗೆ ಮಾನವ ತನ್ನ ಶ್ರೇಷ್ಠತೆಯನ್ನು ಹೊಡೆದೆಬ್ಬಿಸಬೇಕು. ನಾವು ದುರ್ಬಲರಾಗಿ, ಅಸಹಾಯಕರಾಗಿ, ಭಿಕ್ಷುಕರಾಗಿ, ಅನ್ಯರ ಕಾಲ ಬುಡದಲ್ಲಿ ಬೇಡಿ ಬದುಕುವ ಬಾಳಿಗಿಂತ, ಮಾನಸಿಕವಾಗಿ, ದೈಹಿಕವಾಗಿ ಶ್ರೇಷ್ಠತೆಯನ್ನು ಪಡೆಯುವಂತಾದರೆ, ನಮ್ಮ ಸ್ವಾತಂತ್ರ್ಯ, ಸ್ವಾಭಿಮಾನ, ಸುಖ ಸಂತೋಷ ಪಡೆಯಬಹುದು.

ಆದರೆ, ನಮ್ಮ ದೇಶದ ಜನಸಾಮಾನ್ಯರಲ್ಲಿ ರಾಜಕೀಯ ಪ್ರಜ್ಞೆ, ರಾಷ್ಟ್ರಾಭಿಮಾನ, ಸ್ವತಂತ್ರವಾಗಿ ಬಾಳಬೇಕೆಂಬ ಆಸೆ ಆಕಾಂಕ್ಷೆ, ಅದಕ್ಕಾಗಿ ಹೋರಾಟ ಜರುಗಿಸಿ, ರಕ್ತ ಚೆಲ್ಲುವಾಸೆ ಕಾಣುವುದು ದುರ್ಲಭವೆಂದೇ ಹೇಳಬಹುದು. ನಮ್ಮ ಕನ್ನಡ ಭಾಷೆಯಲ್ಲಿ 'ಯಾರು ಆಳಿದರೇನು ರಾಗಿ ಬೀಸೋದು ತಪ್ಪೀತೆ?' ಎಂಬ ಗಾದೆಯನ್ನು ಹುಟ್ಟುಹಾಕಿ, ನಮ್ಮ ಕೀಳರಿಮೆ, ಹತಾಶತೆ, ನಿರಾಸೆ, ನಿಷ್ಕ್ರಿಯತೆ, ಜಡತನ, ಸ್ವತಂತ್ರರಾಗಿ ಬಾಳಬೇಕೆಂಬ ಉತ್ಕಟ ಆಸೆಯ ಅಭಾವ. ಎಲ್ಲವನ್ನೂ ಹೊರಹಾಕಿದ್ದೇವೆ. ಶತಮಾನಗಳ ಕಾಲ ಪರಕೀಯರ ದಾಸ್ಯಕ್ಕೆ ಗುರಿಯಾಗಿ, ಬಾಳಿ ಬದುಕಿದ್ದು ಈ ನಿರಾಶಾ, ಹತಾಶೆಯ ನಿರುತ್ಸಾಹದ, ಜಡತನಗಳೇ ಕಾರಣ ಎನ್ನಬಹುದು. ಕೇವಲ ೨೨ ಇಂಗ್ಲಿಷ್ ಸೈನಿಕರ ಸಾವಿನಿಂದ, ರಾಬರ್ಟ್ ಕ್ಲೈವ್, ಪ್ಲಾಸೀ ಯುದ್ಧದಲ್ಲಿ ಜಯಗಳಿಸಿ, ಸಮೃದ್ಧ, ವಿಶಾಲ ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಸ್ಥಾಪಿಸಿದ್ದು, ಭಾರತೀಯರ ಪಾಲಿಗೆ ಒಂದು ಅವಮಾನಕರ ಐತಿಹಾಸಿಕ ಘಟನೆಯಾಗಿದೆ. ಸಂಪೂರ್ಣ ಭಾರತವನ್ನು ತಮ್ಮ ವಶಪಡಿಸಿಕೊಳ್ಳಲು ಅವರು ಸಿಖ್‌ರ ವಿರುದ್ಧ ಜರುಗಿಸಿದ ಯುದ್ಧಗಳಲ್ಲಿ ಕೇವಲ ೧೦೦೦೦ ಬ್ರಿಟಿಷ್ ಸೈನಿಕರ ಹತ್ಯೆಗೊಳಗಾಗಿದ್ದು, ಇನ್ನೊಂದು ಕ್ರೂರ ಐತಿಹಾಸಕ ಸತ್ಯವಾಗಿದೆ. ಶಿಸ್ತು, ಸಂಯಮ, ಯುದ್ಧ ತಂತ್ರ, ಯೋಜನೆ, ದೂರದೃಷ್ಟಿ, ಎಲ್ಲಕ್ಕಿಂತಲೂ ಮಿಗಿಲಾಗಿ ಕೆಚ್ಚು, ಧೈರ್ಯ, ರಕ್ತ ಚೆಲ್ಲಲು, ಸಾವಿಗಂಜದೆ ಇರುವುದು. ಇಂಗ್ಲಿಷ್‌ರ ಮುಖ್ಯ ಗುಣಗಳಾಗಿದ್ದರಿಂದ, ಅವರು ಅತಿ ಶೀಘ್ರದಲ್ಲೇ ಪುಕ್ಕಲು ಸ್ವಭಾವದ, ರಕ್ತ ಚೆಲ್ಲಲು ಹೆದರುವ ನಿರಾಶಾವಾದ, ಹತಾಶ ಮನೋಭಾವದ, ವಿಧಿ ಹಣೆಬರಹಗಳ ಮೇಲೆ ನಂಬಿಕೆ ಇಟ್ಟುಕೊಂಡು ಜೀವನ ಸಾಗಿಸುವ ಭಾರತೀಯರ ಮೇಲೆ ತಮ್ಮ

ಪ್ರಭುತ್ವ ಸ್ಥಾಪಿಸಲು ಅವರಿಗೆ ಕಷ್ಟವೇನು ಆಗಲಿಲ್ಲ. ಮೆಕಾಲೆ ಸಾಹೇಬ ಗುಲಾಮಗಿರಿಗೆ ಒಳಗಾಗಿಸಲು ತಕ್ಕ ಜನಾಂಗವೆಂದರೆ 'ಬಂಗಾಲಿಗಳು' ಎಂದು ಸಾರಿ ಆ ಜನಾಂಗ ಗುಣಗಾನವನ್ನು ಹೀನಾಯವಾಗಿ ವರ್ಣಿಸಿದ. *

"Inspite of the Mussalman despot, and of Maharatha free-booter, Bengal was known through the East as the garden of Eden, as the rich kingdom. The population multiplied exceedingly. Distant provinces were nourished from the over-flowing of its grannaries; and the noble ladies of London and Paris were clothed in the delicate produce of its looms. The race by which this rich tract was peopled, enervated by a soft climate and accustomed the peaceful employments, bore the same relation to other Asiatics which the Asiatics bear to the bold and energetic children of Europe. The castilians (Spain) have a proverb, that in Valencia the earth is water and the men women; and the description is at least equally applicable to the vast plain of the Lower Ganges. Whatever the Bengalee does he does languidly. His favourite pursuits are sedentary; he shrinks from bodily exertion; and, though voluable in dispute and singularly pertinacious in the war of chicane, he seldom engages in a personal conflict, and scarcely ever enlists as a soldier. We doubt whether there be a hundred genuine Bengalees in the whole army of the East India company. There never, perhaps, existed a people so throughly fitted by nature and by habit for a foreign yoke."

ಅವನ ಶಿಫಾರಿಸ್ಸಿನ ಮೇರೆಗೆ ಬಂಗಾಳಿಗಳು ಇಂಗ್ಲಿಷ್ ಕಲಿತು, ಅವರ ಕಾರಕೂನರಾಗಿ, ಬಾಬುಗಳಾಗಿ, ಸೇವಕರಾಗಿ, ಅಂತಿಮವಾಗಿ, ಇಂಗ್ಲಿಷ್ ಸಾಹಿತ್ಯದ ಅಭ್ಯಾಸದಿಂದ ಅವರ ಪ್ರಭಾವಕ್ಕೆ ಒಳಗಾಗಿ, ತಮ್ಮ ಜಡತನ, ಮೌಢ್ಯ, ಉದಾಸೀನ ಮನೋಭಾವ ತ್ಯಜಿಸಿ, ತಾವು ಬ್ರಿಟಿಷ್‌ರ ದಾಸ್ಯತನದಿಂದ ಬಿಡುಗಡೆ ಹೊಂದಬೇಕೆಂಬ ಪ್ರಜ್ಞೆ ಪಡೆದು, ರಾಷ್ಟ್ರ ವಿಮೋಚನಾ ಚಳವಳಿ, ಸಾಮಾಜಿಕ ಸುಧಾರಣಾ ಚಳವಳಿ, ಬಂಗಾಲೀ ಭಾಷಾಭಿವೃದ್ಧಿ ಮುಂತಾದ ಕಾರ್ಯಗಳಲ್ಲಿ ಮುಂದಾಳತ್ವ ವಹಿಸಿದರು.

'ರಕ್ತ ನೀಡಿರಿ, ನಾನು ಸ್ವತಂತ್ರ ಗಳಿಸಿಕೊಡುತ್ತೇನೆ' ಎಂದು ಘೋಷಿಸಿದ ನೇತಾಜಿಯ ಮಾತಿಗೆ ಮುಕ್ಕಲು ಭಾರತೀಯರು ಸ್ವತಂತ್ರತಾ ಸೇನೆಯನ್ನು ಸೇರಿ ಬ್ರಿಟಿಷ್ಖರ ವಿರುದ್ಧ ಹೋರಾಡಲಿಲ್ಲ. ಆದರೆ ವಿಪರ್ಯಾಸವೆಂದರೆ, ಅವರು ಬ್ರಿಟಿಷ್ ಸೈನ್ಯದಲ್ಲಿ ಸೇವೆ ಸಲ್ಲಿಸಿ, ದೂರದ ಯೂರೋಪ್‌ನಲ್ಲಿ ಪ್ರಾಣ ತೆತ್ತರು !

ದೆಹಲಿಯ ಪ್ರಸಿದ್ಧ 'ಇಂಡಿಯಾ ಗೇಟ್' ಸ್ಮಾರಕ ೭೦೦೦೦ ಭಾರತೀಯ ಸೈನಿಕರು ಮೊದಲನೆ ಮಹಾಯುದ್ಧದಲ್ಲಿ ಯೂರೋಪ್ ಯುದ್ಧರಂಗದಲ್ಲಿ ಕಾದು ಸಾವಿಗೀಡಾದ ಹೆಸರನ್ನು ಹೊತ್ತು ನಿಂತಿದೆ. ಭಾರತೀಯರಲ್ಲಿ ರಾಷ್ಟ್ರಾಭಿಮಾನ ಉಕ್ಕಿದ್ದರೆ, ಭಾರತದ ಸ್ವಾತಂತ್ರ್ಯಕ್ಕೆ ಹೋರಾಡಿದ್ದರೆ, ಆಗಲೇ ಸ್ವತಂತ್ರ ದೊರಕಬಹುದಾಗಿತ್ತು ! ೧೯೨೬ರಲ್ಲಿ ಕೇವಲ ೬೦೦೦೦ ಬ್ರಿಟಿಷ್ಖರು ಭಾರತದಲ್ಲಿದ್ದುಕೊಂಡು, ೨೯ ಕೋಟಿ ಭಾರತೀಯರನ್ನು ಆಳುತ್ತಿದ್ದ ಸಂಗತಿ ವಿಶ್ವದ ಯಾವುದೇ ದೇಶದ ಇತಿಹಾಸದಲ್ಲಿ ಜರಗಿದಂತಹ ಅತ್ಯಂತ ಹೇಯಕರ ಮತ್ತು ಅವಮಾನಕರಾದ ವಿಷಯವಾಗಿದೆ ಎಂದರು ಇತಿಹಾಸಕಾರರು.

ಬ್ರಿಟಿಷ್ ಗವರ್ನರ್ ಮನ್ರೋ ಮಹಾಶಯ, ಬ್ರಿಟನ್‌ಗೆ ಮರಳುವ ಮುನ್ನ ಭಾರತದ ಬಗ್ಗೆ ತನ್ನ ಅಭಿಪ್ರಾಯವನ್ನು ಈ ರೀತಿ ವರ್ಣಿಸಿದ; 'ಭಾರತೀಯರಿಗೆ ತಮ್ಮ ಧರ್ಮ ಕಾಪಾಡುವ ಮತ್ತು ಕರಭಾರ ನೀಗಿಸುವ ಯಾರೇ ನಾಯಕ, ಸಾಮ್ರಾಟ, ಯಾವುದೇ ಪಂಗಡ, ಜಾತಿ, ಜನಾಂಗ, ಅವರು ಪರಕೀಯರೇ ಆಗಲೀ, ಯಾರೇ ಅಗಲಿ, ಬಂದು ತಮ್ಮನ್ನು ಆಳಿದರೆ ತಮ್ಮ ಅಭ್ಯಂತರವೇನೂ ಇಲ್ಲ'

ಪ್ರಾಯಶಃ ಮನ್ರೋ ಮಾತುಗಳಲ್ಲಿ ಸತ್ಯಾಂಶವಿದೆ ಎಂದು ಹೇಳಬಹುದು.

ಅನಾದಿ ಕಾಲದಿಂದಲೂ ಧರ್ಮಕ್ಕಾಗಿ ತಾವು ಆಚರಿಸುತ್ತಿದ್ದ ಆಚಾರ ವಿಚಾರಗಳನ್ನು ತುಳಿಯಲೆತ್ನಿಸಿದ ಯಾವುದೇ ರಾಜ, ಮಹಾರಾಜ, ಸುಲ್ತಾನ್, ಬಾದ್‌ಶಹಾರ ವಿರುದ್ಧ ಜನ ದಂಗೆ ಎದ್ದು ವಿಪ್ಲವ ಜರುಗಿಸುತ್ತಿದ್ದುದು ಇತಿಹಾಸದುದ್ದಕ್ಕೂ ಕಾಣಬಹುದಾಗಿದೆ.

ಸಿಖ್ ಗುರು ಗೋವಿಂದ್ ಸಿಂಗ್ ಕೂಡ ಅದೇ ಮಾಡಿದ್ದು. ಯಾವಾಗ ಮೊಘಲ್‌ರು ಹಿಂದೂ ಸಿಖ್ಖರ ಮೇಲೆ ಕ್ರೂರವಾಗಿ ದಮನ ನಡೆಸಿ, ಅವರ ಧರ್ಮವನ್ನು ಹತ್ತಿಕ್ಕಲು ಪ್ರಯತ್ನಿಸಿದರೋ, ಆಗ ಗುರು ಗೋಬಿಂದ್‌ಸಿಂಗ್, 'ಖಾಲ್ಸಾ' ಪಂಥ ಪ್ರಾರಂಭಿಸಿ, ಶಾಂತಿಯುತ ಧರ್ಮ ಪಾಲಿಸುತ್ತಿದ್ದವ ಶಸ್ತ್ರ ಹಿಡಿದು ಹೋರಾಡಿದ.

ದಕ್ಷಿಣದಲ್ಲಿ ವಿಜಯನಗರ ಸ್ಥಾಪಿತಗೊಂಡಿದ್ದೇ ಮುಸ್ಲಿಮ್ಖರ ಕ್ರೂರ ಆಳ್ವಿಕೆ ಮತ್ತು ಹಿಂದೂ ಧರ್ಮದ ವಿರುದ್ಧ ಅವರ ದಮನಕಾರ್ಯದ ವಿರುದ್ಧ ಹೋರಾಡಲಿಕ್ಕೆ. ಮರಾಠಾ ರಾಜ್ಯ ಸ್ಥಾಪನೆ ಮತ್ತು ಮೊಘಲ್ಖರ ವಿರುದ್ಧ ಅವರು ಜರುಗಿಸಿದ ಹೋರಾಟ ಹಿಂದೂ ಧರ್ಮವನ್ನು ಸಂರಕ್ಷಿಸುವುದಕ್ಕೋಸ್ಕರವೇ ಹೊರತು ಮುಸ್ಲಿಮ್ ಸಾಮ್ರಾಜ್ಯದ ಉಳಿವಿಗಾಗಿ ಅಲ್ಲ ! ಕೊನೆಗೆ ಬ್ರಿಟಿಷ್ಖರ ವಿರುದ್ಧ ಸಿಪಾಯಿದಂಗೆ ಪ್ರಾರಂಭಿಸಿದ್ದು,

ಬಂದೂಕುಗಳಲ್ಲಿ ಹಂದಿ ಮಾಂಸದ ಎಣ್ಣೆ ಉಪಯೋಗದಿಂದ ತಮ್ಮ ಧರ್ಮಪಾಲನೆಗೆ ಚ್ಯುತಿ ಬರುವುದೆಂದು ಅರಿತಿದ್ದರಿಂದಲೇ ! ಅವರು ತಮ್ಮ ನಾಡನ್ನು ತಮ್ಮ ನೆಲವನ್ನು ತಮ್ಮ ಜಮೀನನ್ನು, ತಮ್ಮ ಸಕಲ ಸಂಪತ್ತನ್ನೂ, ಅಂತಿಮವಾಗಿ ತಮ್ಮ ಸ್ವಾತಂತ್ರ್ಯವನ್ನು ಕಸಿದುಕೊಂಡು ಆಳತೊಡಗಿದ ಬ್ರಿಟಿಷ್‌ರ ವಿರುದ್ಧ ಹೋರಾಟ ಜರುಗಿಸಿದ್ದು, ತಮ್ಮ ಧರ್ಮಾಚರಣೆಗೆ ಅವರು ಅಡ್ಡಿ ಮಾಡಿದರೆಂದು ಲಾರ್ಡ್ ಡಾಲ್‌ಹೌಸಿಯ ಆಡಳಿತಾ ಪದ್ಧತಿಯಲ್ಲಿ ರಾಜ ಮಹಾರಾಜರ ರಾಜ್ಯಗಳನ್ನು ದಕ್ಕಿಸಿಕೊಳ್ಳಲು ಅನೇಕ ಹಂಚಿಕೆ ಹಾಕಿದರ ಫಲದಿಂದ ಹಲವಾರು ರಾಜರು ತಮ್ಮ ಅಸ್ತಿತ್ವಕ್ಕಾಗಿ ಹೋರಾಡಿದ್ದು ಸಾಂದರ್ಭಿಕವಾಗಿತ್ತು.

ಶತಮಾನಗಳ ಕಾಲ ಪರಕೀಯರ ಆಳ್ವಿಕೆಗೆ ಆಳಲ್ಪಟ್ಟ ಭಾರತೀಯರು ತಮ್ಮ ಮೇಲೆ ಹೇರಲಾದ ಕರ, ಕಂದಾಯ, ಸುಂಕಗಳನ್ನು ನೀಡಲು ಪ್ರತಿರೋಧಿಸಿದರು. ಪರಕೀಯ ದಾಸ್ಯತನಕ್ಕೆ ಬೀಳಲು ಅವರಿಗೆ ಕಷ್ಟವೆನಿಸಲಿಲ್ಲ. ಆದರೆ ಹೊರಲಾರದಂತಹ ತೆರಿಗೆ, ಕರ ಅವರಿಗೆ ಸಹಿಸಲಸಾಧ್ಯವಾಗುತ್ತಿತ್ತು.

ಇದರ ಉದಾಹರಣೆಯಾಗಿ ಹತ್ತೊಂಬತ್ತನೇ ಶತಮಾನದಲ್ಲಿ ರೆ. ಹೆಬಾರ್ ಮಹಾಶಯ (ಕಲ್ಕತ್ತಾ ನಗರದ ಬಿಷಪ್) ತನ್ನ ಪ್ರವಾಸ ಕಥನದಲ್ಲಿ (೧೮೨೫) ಒಂದು ಘಟನೆಯನ್ನು ನಿರೂಪಿಸಿದ್ದಾನೆ.

ಕಾಶಿಯಲ್ಲಿ ಪ್ರವಾಸ ಮಾಡುತ್ತಿದ್ದಾಗ ಆತ ಬ್ರಿಟಿಷ್ ಸರಕಾರ ಅಲ್ಲಿನ ಬ್ರಾಹ್ಮಣರ ಮೇಲೆ ಮನೆಗಂದಾಯ ವಿಧಿಸಿದರು. ಆಗ ರೊಚ್ಚಿಗೆದ್ದು ಬ್ರಾಹ್ಮಣರು, ನಗರ ತ್ಯಜಿಸಿ ಊರ ಹೊರಗೆ ಬಯಲಿನಲ್ಲಿ ಉಪವಾಸ ಸತ್ಯಾಗ್ರಹ ಮಾಡಿ, ಮನೆಗಂದಾಯ ಹೇರಿದರ ವಿರುದ್ಧ ಸಮರ ಹೂಡಿದರು. ಪ್ರಾಯಶಃ ಗಾಂಧಿ ಹೂಡಿದ ಉಪವಾಸ ಸತ್ಯಾಗ್ರಹಕ್ಕೆ ಕಾಶಿ ಬ್ರಾಹ್ಮಣರು ಹೂಡಿದ ಸತ್ಯಾಗ್ರಹ ಉದಾಹರಣಾ ಪೂರ್ವಕದಾಗಿತ್ತೆನ್ನಬಹುದು !

ಭಾರತೀಯರ ರಾಷ್ಟ್ರಾಭಿಮಾನ ಕೇವಲ ಅವರ ಅಂಧ ಧರ್ಮಾಭಿಮಾನವಾಗಿದೆ ಎನ್ನಬಹುದು. ತಮ್ಮ ನಾಡಿನ ನೆಲದ ಮೇಲೆ ಪ್ರೀತಿ, ಭಕ್ತಿ, ಆದರವಿರಿಸಿಕೊಳ್ಳದೆ, ಅದನ್ನು ಯಾವ ಪರಕೀಯನೂ ಬಂದು ಆಕ್ರಮಿಸಿ ತಮ್ಮನ್ನು ಆಳಿದರೆ ತಮ್ಮ ಪ್ರತಿರೋಧ ತೋರಿಸದ ಭಾರತೀಯರು, ತಮ್ಮ ಧರ್ಮಾಚರಣೆಯ ವಿರುದ್ಧ ಕ್ರಮ ತೆಗೆದುಕೊಂಡ ಪಕ್ಷದಲ್ಲಿ ಆಡಳಿತಗಾರರ ವಿರುದ್ಧ ಹೋರಾಟ ಜರುಗಿಸುವುದು ತಮ್ಮ ಜನ್ಮಸಿದ್ಧ ಹಕ್ಕು ಎಂದು ಇಂದಿಗೂ ಭಾವಿಸುವುದನ್ನು ನಾವು ನೋಡಬಹುದು.

ವ್ಯಕ್ತಿ ಸ್ವಾತಂತ್ರ್ಯ, ರಾಷ್ಟ್ರಾಭಿಮಾನ, ಧರ್ಮನಿಷ್ಠೆ, ಸಾಂಸ್ಕೃತಿಕ ಸಬಲೀಕರಣ ಮುಂತಾದ ಕಾರ್ಯಗಳಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡವರು ಬಹಳ ಕಡಿಮೆ ಎಂದೇ ಹೇಳಬಹುದು. ವಿಪರ್ಯಾಸವೆಂದರೆ ನಮ್ಮ ಶಾಸ್ತ್ರಗಳು, ಪುರಾಣಗಳು, ರಾಮಾಯಣ, ಮಹಾಭಾರತ ಕಾವ್ಯಗಳು ಸಾಹಸ, ಧೈರ್ಯ, ಕೆಚ್ಚು, ಛಲ,

ಧರ್ಮಪಾಲನೆ, ಸಂಸ್ಕೃತಿಯಾಚರಣೆ ಮುಂತಾದ ಉದಾತ್ತ ಗುಣಗಳ ಪ್ರತಿಪಾದಕವಾಗಿದ್ದರೂ ಅವುಗಳ ಅನುಷ್ಠಾನದಲ್ಲಿ ನಾವು ಸೋತಿದ್ದೇವೆ. ಕನ್ನಡದ ಅಪೂರ್ವ ಆದಿಕವಿ ಪಂಪನ ಮಹಾಭಾರತದಲ್ಲಿ ಮತ್ತು ರನ್ನನ ಗದಾಯುದ್ಧದಲ್ಲಿ, ಸಾಮಾನ್ಯ ಜನರನ್ನು ಉನ್ಮತ್ತಗೊಳಿಸುವ, ಪ್ರಚೋದಿಸುವಂತಹ ಕಾವ್ಯಪ್ರತಿಭೆಯನ್ನು ಹರಿಸಿದ್ದರೂ ಅವನ್ನು ಪಠಿಸಿ, ಉರುಹೊಡೆದು ಪಾಠಮಾಡಿ ತೃಪ್ತಿ ಪಟ್ಟುಕೊಳ್ಳುವವರೇ ಹೆಚ್ಚು. ಕಾವ್ಯಗಳಿಂದ ಉದ್ರೇಕಗೊಂಡು, ಪ್ರಚೋದಗೊಂಡು, ಧೈರ್ಯ ವಹಿಸಿ ಹೋರಾಡುವ ಮನೋಭಾವ ಬೆಳೆಸಿಕೊಂಡಿದ್ದು ಅತ್ಯಂತ ದುರ್ಲಭ.

* ಪುಟ ೬೨ ಪಂಪ ಮಹಾಭಾರತ
ತೆಂಕಣ ಗಾಳಿ ಸೋಂಕಿದೊಡಂ, ಒಳ್ನುಡಿಗೇಳ್ದೊಡಂ ಇಂಪನಾಳ್ದಗೇ
ಯಂ ಕಿವಿವೊಕ್ಕಡಂ ಬಿರಿದ ಮಲ್ಲಿಗೆಗಂಡೊಡಂ, ಆದ ಕೆಂದಲಂ
ಪಂ ಗೆಡೆಗೊಂಡೊಡಂ ಮಧಮಹೋತ್ಸವಮಾದೊಡಂ ಏನನೆಂಬೆನ್ ಆ
ರಂಕುಪಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿದೇಶಮಂ ॥

ಎಂದು ಪಂಪನು ಹಾತೊರೆಯುತ್ತಿರುವುದು ಪಂಪನ ದೇಶವಾತ್ಸಲ್ಯದ ಪರಾಕಾಷ್ಠೆ ಇಲ್ಲಿ ಬಹು ಸ್ಪಷ್ಟವಾಗಿ ಎದ್ದು ಕಾಣುತ್ತದೆ' ಎಂದು ವಿಮರ್ಶಕ ಎನ್. ಅನಂತರಂಗಾಚಾರ ತಮ್ಮ ಉಪೋದ್ಘಾತ (ಪುಟ ೬೨ ಪಂಪಭಾರತಂ) ದಲ್ಲಿ ವಿವರಿಸಿದ್ದಾರೆ.

ಆದರೆ ಎಷ್ಟು ಜನ ಕವಿಗಳು, ಸಾಹಿತಿಗಳು, ಉದ್ದಾಮ ಪಂಡಿತರು, ಪಂಪಭಾರತವನ್ನು ಓದಿ, ಪ್ರಚೋದನೆಗೊಂಡು, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಾರೆ? ಬೆರಳಲ್ಲಿ ಎಣಿಸುವವರು ಮಾತ್ರ !

ಇದೇ ವಿಮರ್ಶಕರು ಪುಟ ೬೧ ರಲ್ಲಿ ಪಂಪನ ದೇಶಾಭಿಮಾನದ ಬಗ್ಗೆ ಹೊಗಳಿ ಬರೆದಿರುತ್ತಾರೆ. 'ಯಾವ ಕವಿಯಲ್ಲಿ ಈ ತೆರನಾದ ದೇಶಾಭಿಮಾನವಿರುವುದಿಲ್ಲವೋ ಅಂತಹವನು ಇಂತಹ ಕಾವ್ಯವನ್ನು ರಚಿಸಲಾರ. ರಚಿಸಿದರೂ ನಿರ್ಜೀವವೂ ಕಲಾರಹಿತವೂ ಆಗುತ್ತದೆ ಎಂದು ಹೇಳಿ ವರ್ಡ್ಸ್‌ವರ್ತ್ ಕವಿಯನ್ನು ದೇಶಾಭಿಮಾನಿಗಳ ಗುಂಪಿನಲ್ಲಿ ಸೇರಿಸಿದ. ಇದು ವಾಸ್ತವವಾದ ಅಂಶ. ಇಂತಹವರು ಯಾವಾಗಲೂ ದೇಶಕ್ಕಾಗಿ ಮಡಿಯಲು ಸಿದ್ಧರಾಗಿರುತ್ತಾರೆ.

ನಮ್ಮ ನಾಡಿನಲ್ಲಿ ಇಂತಹ ಕವಿಗಳು, ದೇಶಾಭಿಮಾನ ಇರಿಸಿ ಹೋರಾಟ ಜರುಗಿಸಿದವರು ಅತಿ ವಿರಳ. ಸರೋಜಿನಿ ನಾಯ್ಡುರವರನ್ನು ಹೊರತು ಪಡಿಸಿದರೆ, ಕವಿಗಳು, ಸಾಹಿತಿಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಂಪೂರ್ಣವಾಗಿ ಭಾಗವಹಿಸಿ, ಹೋರಾಡಿದ್ದ ಸಂಗತಿ ಬಲು ಅಪರೂಪ. ಹೀಗಿ ಹೋರಾಡಿ ಬ್ರಿಟಿಷ್‌ರ ಗುಂಡಿಗೆ ಬಲಿಯಾಗುವುದಾಗಲೀ, ನೇಣುಗಂಬಕ್ಕೆ ಏರುವುದಾಗಲೀ, ಲಾಟಿ ಏಟಿನ ರುಚಿ ಅನುಭವಿಸದವರಾಗಲಿ, ಯಾವ ಹೆಸರಾಂತ ಕವಿಗಳು, ಸಾಹಿತಿಗಳು, ಸಂತರು, ಸ್ವಾಮಿಗಳು, ಸಂನ್ಯಾಸಿಗಳು, ಸತ್ಯಾಗ್ರಹ ಮಾಡಿ ಸೆರೆಮನೆಗೂ ಕೂಡ ಹೋಗದವರು

ಈ ದೇಶದ ಮಹಾನ್ ದೇಶಾಭಿಮಾನಿಗಳು !

ದೇಶಕ್ಕಾಗಿ, ದೇಶದ ಸ್ವಾತಂತ್ಯಕ್ಕಾಗಿ ಪ್ರಾಣ ತೆತ್ತ ಭಾರತೀಯರು ಕೇವಲ ೧೮೬ ಮಂದಿ ಎಂದು ಇತಿಹಾಸಕಾರರು ಗುರುತಿಸಿದ್ದರೆ, ಸೆರೆಮನೆವಾಸ ಅನುಭವಿಸಿದವರು ೩೦ ಕೋಟಿ ಜನಸಂಖ್ಯೆಯಲ್ಲಿ ಕೇವಲ ೫೦೦೦೦ ಮಂದಿ ಮಾತ್ರ ! ಒಂದು ಪಕ್ಷ ಜನಸಂಖ್ಯೆಯ ಶೇ. ಒಂದರಷ್ಟಾದರೂ ಜನರು ಭಾಗವಹಿಸಿದ್ದರೆ, ೩ ಲಕ್ಷ ಜನ ಸೆರೆಮನೆವಾಸ ಅನುಭವಿಸುವಂತಾಗುತ್ತಿದ್ದರು. ಬ್ರಿಟಿಷ್ ಸೆರೆಮನೆಗಳಲ್ಲಿ ಅಷ್ಟೂ ಮಂದಿಗೆ ಜಾಗವಿರಲು ಅಸಾಧ್ಯವಾಗುತ್ತಿತ್ತು ! ದೇಶದ ಸ್ವಾತಂತ್ರ್ಯ ಪ್ರಾಯಶಃ ಬಹುಬೇಗ ದೊರೆಯುತ್ತಿತ್ತು !

ಆದರೆ ದೇಶಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ಲಕ್ಷಾಂತರ ಜನರ ರಕ್ತ ಚೆಲ್ಲುವಿಕೆ, ಸಾವುನೋವು ಸೆರೆಮನೆಯ ವಾಸದ ಕಟು ಅನುಭವಗಳಿಂದ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಲಭಿಸಿತು ಎಂದು ಜಂಬ ಕೊಚ್ಚುವ ನಾವು ಮೇಲಿನ ಅಂಕಿ ಅಂಶಗಳಿಂದ ನಿಜಾಂಶ ಬಯಲಾಗುವುದು ಸತ್ಯ !

ದೇಶಕ್ಕಾಗಿ ಮಡಿಯುವದಿರಲಿ, ಪುಕ್ಕಲುತನವನ್ನೇ ಮನೆಮಾಡಿಕೊಂಡು, ಪರಾಕ್ರಮ, ಶೂರತನ, ಧೈರ್ಯ ಮುಂತಾದವುಗಳನ್ನು ಕೇವಲ ವಿದ್ಯಾರ್ಥಿಗಳಾಗಿ, ಪಂಡಿತರಾಗಿ ವಿದ್ವಾಂಸರಾಗಿ ಪಾಠ ಪ್ರವಚನ ಮಾಡುವದರಲ್ಲೇ ತಮ್ಮ ಸಾಹಸಗಳನ್ನು ತೋರಿಸಿಕೊಂಡರು ನಮ್ಮ ವೀರಾಧಿವೀರ ಪಂಡಿತರು ! ಆದಿಕವಿ ಪಂಪನ ಜೀವನ, ಅವನು ರಚಿಸಿದ ಕಾವ್ಯಗಳನ್ನು ಓದಿ, ಅಭ್ಯಸಿಸಿ ಸ್ಫೂರ್ತಿಗೊಂಡವರು ಅತಿ ವಿರಳ ! ಪಂಪಭಾರತದ ಗದ್ಯಾನುವಾದ ಮಾಡಿದ ಅನಂತರಂಗಾಚಾರ್‌ರವರ ಉವಾಚವನ್ನು ಉದಹರಿಸಬಹುದು :

'....ಆದರೆ ಸಾಹಸಾಭರಣದ ಯುದ್ಧ ಕೌಶಲ್ಯವನ್ನು ವಿಸ್ತಾರವಾಗಿ ವರ್ಣಿಸಬೇಕೆಂದೋ ಸಮಸ್ತ ಭಾರತವನ್ನು ತಪ್ಪದೇ ಹೇಳಿರಬೇಕೆಂದೋ ಆ ಭಾಗವನ್ನು ವಿಸ್ತರಿಸಿದ್ದಾನೆ.. . . .ಪಂಪ ಕವಿ ವೃಷಭ. ಕವಿಯಾಗಿದ್ದಂತೆಯೇ ಕಲಿಯೂ ಆಗಿದ್ದವನು.. . . .ಜೀವನದ ವಿವಿಧ ಕ್ಷೇತ್ರಗಳ ಪ್ರತ್ಯಕ್ಷಾನುಭವವನ್ನುಳ್ಳವನು. . . .ರಸಿಕತೆಯನ್ನೂ ರಾಜಾಶ್ರಯವನ್ನೂ ಆತ್ಮಾಭಿಮಾನವನ್ನೂ ಆನಂದಾನುಭವವನ್ನೂ ಉಳ್ಳವನು. . .'

'. . .ಅವನ ಅನ್ಯಾದೃಶವಾದ ಲೋಕಾನುಭವವೇ ಇದಕ್ಕೆ ಕಾರಣ. ತನ್ನ ಕಾಲದ ಎಲ್ಲಾ ಕ್ಷೇತ್ರಗಳ ವಿವಿಧ ಪರಿಚಯವೂ ಅವನಿಗಿದೆ.. . .'

'ಸ್ವಯಂ ಯೋಧನಾಗಿ ಯುದ್ಧರಂಗದ ಪ್ರತ್ಯಕ್ಷಾನುಭವವಿದ್ದ ಪಂಪನಿಗೆ ಯುದ್ಧ ವರ್ಣನೆ ನೀರು ಕುಡಿದಂತೆ, ಅಲ್ಲಿ ಅವನು ಕಾಣದ ಕಾಣ್ಕೆಯಿಲ್ಲ, ನೋಡದ ನೋಟವಿಲ್ಲ. ತಿಳಿಯದ ತಂತ್ರವಿಲ್ಲ, ಅರಿಯದ ಆಯುಧಗಳಿಲ್ಲ. ಯುದ್ಧಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಯುದ್ಧ ಪ್ರಯಾಣ, ಸಿದ್ಧತೆ, ಭೇರಿ, ವೀರಾಲಾಪ, ಧೀರಪ್ರತಿಜ್ಞೆ,

ಬೀಳ್ಕೊಡುಗೆ, ಧ್ವಜಸಂಚಳತನ, ರಥಚೀತ್ಕಾರ, ಭಟರ ಸಿಂಹನಾದ, ಉತ್ಕಜ್ಯಾರವ, ಶರಾಸಾರದ ತೀವ್ರತೆ, ವೈವಿಧ್ಯ, ಚೋದಕರ ವೇಗ, ಹಸ್ತ್ಯಶ್ವರಥ್ ಪದಾತಿಗಳ ಯುದ್ಧ, ಪ್ರತಿಯುದ್ಧ, ಬಿದ್ದವರ ಕೊರಗು, ಎದ್ದವರ ಮೊಳಗು, ಪ್ರೇಕ್ಷಕರ ಪ್ರೇರಣೆ, ದೇವತೆಗಳ ಪುಷ್ಪವೃಷ್ಟಿ, ಇವು ಒಂದೊಂದರ ಅತಿ ವಿಶದ ವಿವರಗಳನ್ನು ಗ್ರಂಥದಲ್ಲಿ ಕಾಣಬಹುದು. . .'

ಅದರ ಬದಲಿಗೆ, ಕೇವಲ ಅಂತಃಕಲಹ, ಪಿತೂರಿ, ಈರ್ಷ್ಯೆ, ಲಂಚಗುಳಿತನ, ಭ್ರಷ್ಟಾಚಾರ ಮುಂತಾದ ದುರ್ಗುಣಗಳನ್ನು ಬೆಳೆಸಿಕೊಂಡು ನಾಡನ್ನು ಪುನಃ ದಾಸ್ಯತನಕ್ಕೆ ನೂಕುವುದನ್ನೇ ಕಾಣಬಹುದಾಗಿದೆ. ದೇಶದ ಜನರು ಬುದ್ಧಿ ಮತ್ತು ನೈತಿಕತೆಗಳನ್ನು ಹೊಂದಿದ್ದರೆ ಮಾತ್ರ ತಮ್ಮ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಬಲ್ಲರು. ಜ್ಞಾನ ಮತ್ತು ಉತ್ಕೃಷ್ಟತೆಗಳು ದೇಶದ ಜನರಲ್ಲಿ ಹರಡಿದಾಗ, ಆ ದೇಶವನ್ನು ಅತಂತ್ರಗೊಳಿಸುವುದು ಅಸಾಧ್ಯ ಎಂದು ಜಾನ್ ಅಡಾಮ್ಸ್ ಸಾರಿದ.

'The presentation of liberty depends upln the intellectual and moral character of the people. As long as knowledge and virtue are diffused generally among the body of a nation, it is impossible they shluld be enslaved. . . .Ambition is one of the more ungovernable passions of the human heart. The love of Power is insatiable and uncontrollable. . . .There is danger from all men. The only maxim of a free government ought to be to trust no man living with power to endanger the public liberty.'

'If the people are as wise and honest in the choice of their rulers, as they have been in framing a government, they will be happy, and I shall die content with the prospect for my Children.'

(P 70 & 224, John Adams the founding father of American Revolution)

ಆದರೆ, ಸ್ವಾರ್ಥಿಗಳಾಗಿ, ಹಣ ಸಂಪಾದನೆಯೇ ಮುಖ್ಯ ಗುರಿಯಾಗಿರಿಸಿಕೊಂಡು, ಐಶ್ವರ್ಯವಂತನಾಗಿ ಬಾಳಿ ಬದುಕಲಿಕ್ಕಾಗಿ, ನೈತಿಕತೆಯನ್ನು ಗಾಳಿಗೆ ತೂರಿ, ತನ್ನ ಬುದ್ಧಿ ಚಾತುರ್ಯವನ್ನು ಖರ್ಚು ಮಾಡಿ, ತನ್ನ ಹಿತವನ್ನು ಮಾತ್ರ ಬಯಸಿ, ಪರರ ಹಿತವನ್ನು ರಾಷ್ಟ್ರದ ಹಿತಚಿಂತನೆಯನ್ನು ಬದಿಗಿರಿಸಿ, ಮಾನವನಿಗೆ ಇರಬೇಕಾದ ಸರ್ವೋತ್ತಮ ಶ್ರೇಷ್ಠ ಗುಣಗಳನ್ನು ಕಡೆಗಣಿಸಿ, ಜೀವನ ಸಾಗಿಸುವ ಭಾರತೀಯರ

ಡಂಭಾಚಾರದ ಕಾರ್ಯವೈಖರಿಗೆ ಬಲವಾದ ಕಾರಣ ನೈತಿಕತೆಯ ಅಧಃಪತನ. ಇದರೊಂದಿಗೆ ಭಾರತೀಯರಲ್ಲಿ ಜನ್ಮಕ್ಕೆ ಅಂಟಿಕೊಂಡಂತಹ ಪುಕ್ಕಲುತನ. ಪುಕ್ಕಲುತನಕ್ಕೆ ಕಾರಣ ನಮ್ಮ ಮೌಢ್ಯ. ಮೌಢ್ಯಕ್ಕೆ ಕಾರಣ ನಮ್ಮ ಗುಲಾಮಗಿರಿ. ಶತಮಾನಗಳ ಕಾಲ ಪರಕೀಯರ ಆಳ್ವಿಕೆಯಲ್ಲಿದ್ದು, ನಮ್ಮ ಅಸ್ತಿತ್ವವನ್ನೇ ಕಳೆದುಕೊಂಡು ನಿರ್ವೀರ್ಯರಾಗಿದ್ದೇವೆ. ಆಳುವವರ ಬಗ್ಗೆ ಭಯ, ಅವರ ಅಧಿಕಾರಿಗಳ ಭಯ, ಅವರ ನೀತಿ ನಿಯಮಗಳ ಭಯ, ಅವರ ಕಾನೂನು, ಶಿಸ್ತು, ನಡತೆಗಳ ಭಯ, ನಮ್ಮನ್ನು ಪುಕ್ಕಲರನ್ನಾಗಿ ಮಾಡಿವೆ.

ಸ್ವತಂತ್ರ ಗಳಿಸಿಕೊಂಡಾದಮೇಲಾದರೂ, ನಾವು ಭಯಭೀತರಾಗದೆ, ನಮ್ಮ ಭಾಷೆ, ಸಂಸ್ಕೃತಿ, ನೀತಿ-ರೀತಿ, ಜನಹಿತ ಕಾನೂನುಗಳ ಬಗ್ಗೆ ಅರಿವು ಮೂಡಿಕೊಂಡು, ಅವನ್ನು ಆಚರಣೆಗೆ ತರಲು ಹೆಣಗಬೇಕಷ್ಟೆ. ಪುಕ್ಕಲುತನ ಹೋಗಲಾಡಿಸಬೇಕಾದರೆ, ನಾವು ಬೌದ್ಧಿಕ, ಸಾಂಸ್ಕೃತಿಕ, ನೈತಿಕ ಹಾಗೂ ರಾಜಕೀಯವಾಗಿ ಜ್ಞಾನಿಗಳಾಗಬೇಕು. ಜ್ಞಾನ ಅಭಾವವೇ ಹರಡಿರುವಾಗ, ಜ್ಞಾನ ಪಡೆಯಬೇಕೆಂಬ ಹಂಬಲವೇ ಇರದಿದ್ದಾಗ, ಜನರು ಜ್ಞಾನಿಗಳು ಹೇಗೆ ಆದಾರು ? ಓದುವುದು, ಅಭ್ಯಾಸ ಮಾಡುವುದು, ದೇಶ ಪರ್ಯಟನೆ ಮಾಡುವುದು ಮುಂತಾದ ಕಾರ್ಯವನ್ನು ಮೈಗೂಡಿಸಿಕೊಂಡು, ನಮ್ಮ ಕನ್ನಡದ ಗಾದೆ, 'ಕೋಶ ಓದು, ದೇಶ ಸುತ್ತು' ಎಂಬುದನ್ನು ಅಕ್ಷರಶಃ ಪಾಲಿಸಿದಾಗ ಮಾತ್ರ ನಾವು ದಿಟವಾಗಲು ನಮ್ಮ ದೇಶವನ್ನು ಪ್ರೀತಿಸಬಹುದು, ಬೆಳೆಸಬಹುದು ಮತ್ತು ರಕ್ಷಿಸಬಹುದು.

ಆದರೆ ಭಾರತೀಯರಾದ ನಾವು ಈಗ ಮಾಡುತ್ತಿರುವುದಾದರೂ ಎನು? ಪ್ರಸಿದ್ಧ ದಾರ್ಶನಿಕ ಥೋರೋವಿನ ಮಾತುಗಳನ್ನು ಉದಹರಿಸಿ, ನಮ್ಮ ನಡೆತೆ, ಗುಣಗಳನ್ನು ವರ್ಣಿಸಬಹುದು . . .

'. . . .What is the price-current of an honest man and a patriot today ? They hesitate, and they regret, and sometimes they petition ; but they do nothing in earnest and with effect. They will wait, well disposed for others to remedy the evil, that they may no longer have it to regret. At most, they give only a cheap vote, and a feeble countenance and God-speed,to the right, as if goes by them. There are nine hundred and ninetynine patrons of virtue to one virtuous man. But it is easier to deal with the real possessor of a thing than with a temporary guardian of it'. (p. 391 Civil Disobedience by Thoreau)

ಭಾರತೀಯರಲ್ಲಿ, ಪಂಜಾಬೀ ಸಿಖ್‌ರು ಅಸಮಾನ್ಯ ವೀರರಾಗಿ, ಪುಕ್ಕಲುತನವನ್ನು ಹೊಡೆದೋಡಿಸಿ, ಧೈರ್ಯ, ವೀರತನದಿಂದ, ರಕ್ತ ಹರಿಸಿ, ಅಪಾರ ತ್ಯಾಗ ಬಲಿದಾನ ಮಾಡಿ, ತಾವು ನಿರ್ಮಿಸಿದ ಸಾಮ್ರಾಜ್ಯವನ್ನು ಉಳಿಸಿಕೊಳ್ಳಲು ಅಪಾರವಾಗಿ ಶ್ರಮಿಸಿದರು. ಆದರೆ, ಅವರನ್ನು ಕೂಡ 'ಅನೈಕ್ಯತೆಯ ವ್ಯಾಧಿ' ಕಾಡದೇ ಬಿಡಲಿಲ್ಲ ! ಅದಕ್ಕೆ ಅವರು ಬಲಿಯಾದರು. ಐಕ್ಯತೆಯ ಬಹು ಅಮೂಲ್ಯ ಗುಣವನ್ನು ಮನಗಂಡ ಗುರು ಗೋಬಿಂದ್ ಸಿಂಗ್ ಜಾತಿ, ಮತ, ಧರ್ಮಗಳ ಸಂಕೋಲೆಗಳಿಂದ ಪಂಜಾಬಿಗಳನ್ನು ಬಿಡುಗಡೆ ಮಾಡಿ ಅವರನ್ನು ವೀರಯೋಧರನ್ನಾಗಿ ಪರಿವರ್ತಿಸಿದರೂ, ಭಾರತೀಯರ ಹುಟ್ಟುಗುಣಗಳಾದ, ಅನೈಕ್ಯತೆ, ಧನದಾಹ, ನೆಲದಾಹ, ಜಾತಿ ವ್ಯಾಮೋಹ, ಪುತ್ರಪುತ್ರಿಯರ ಮೇಲಿನ ವಾತ್ಸಲ್ಯ, ಮೋಹ, ಅಶಿಸ್ತು, ಅನೀತಿ ಇವುಗಳಿಂದ ನರಳಿ ವ್ಯಾದಿಗ್ರಸ್ಥರಾಗಿ, ಪರಕೀಯರ ಕೈಗೊಂಬೆಯಾಗಿ, ಅವರ ಗುಲಾಮರಾಗಿ ಬಾಳಿ ಬದುಕಿದ್ದು ದುರ್ದೈವವಾಯಿತು. ಲಂಚಗುಳಿತನ, ಸ್ವಾರ್ಥಸಾಧನೆ, ಮೌಢ್ಯತನ, ಹುಂಬುತನ ಇತ್ಯಾದಿ ದುರ್ಗುಣಗಳಿಂದ ಸಿಖ್‌ರು ತಮ್ಮ ಪೂರ್ವಜರು ನಿರ್ಮಿಸಿದ ಧರ್ಮಸಾಮ್ರಾಜ್ಯವನ್ನು ನಾಶ ಮಾಡಿಕೊಂಡರು.

ಈಗ ಭಾರತ ಸ್ವತಂತ್ರ ರಾಷ್ಟ್ರವಾಗಿದೆ. ಆದರೆ, ನಮ್ಮ ದೇಶದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕಾದರೆ, ಪ್ರಜೆಗಳ ಬೌದ್ಧಿಕ ಶಕ್ತಿ ಮತ್ತು ನೈತಿಕ ಗುಣಗಳ ಮೇಲೆ ಇದು ಅವಲಂಬಿಸಿದೆ. ಯಾವಾಗ ಜ್ಞಾನ ಮತ್ತು ವಿವೇಕ ಜನರಲ್ಲಿ ಹರಡುತ್ತದೆಯೋ ಆಗ ಯಾವ ಶಕ್ತಿಯೂ ನಮ್ಮ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾರದು. ಈ ಸ್ವಾತಂತ್ರ್ಯವನ್ನು ಕಾಪಾಡಲು ಒಂದು ಉತ್ತಮ ಮತ್ತು ದೃಢ ಸರಕಾರದ ಅವಶ್ಯಕತೆ ಇದೆ. ಸರಕಾರವೆಂದರೆ ಸಮಾಜದ ಒಕ್ಕೂಟದ ಒಂದು ಶಕ್ತಿ ಅಥವಾ ಪ್ರಜೆಗಳ ಒಟ್ಟು ಶಕ್ತಿಯ ಕೂಟ ಅಥವಾ ವ್ಯವಸ್ಥೆ. ಅದರ ಮುಖ್ಯ ಕರ್ತವ್ಯ ಪ್ರಜೆಗಳ ರಕ್ಷಣೆ, ಶಾಂತಿ, ನ್ಯಾಯ, ಕಾನೂನು ಪಾಲನಾ ವ್ಯವಸ್ಥೆ ಮತ್ತು ಸುಖ ನೆಮ್ಮದಿಗಳ ಪರಿಪಾಲನೆ ಎಸಗುವುದೇ ಆಗಿದೆ. ಪ್ರಜೆಗಳು ತಮ್ಮ ಪ್ರಜ್ಞಾಶಕ್ತಿ, ವಿವೇಕ ನೈತಿಕತೆ, ನ್ಯಾಯಪರತೆಗಳನ್ನು ಅಳವಡಿಸಿಕೊಂಡು, ಒಂದು ಸುಭದ್ರ ಸರಕಾರವನ್ನು ರಚಿಸಲು ಮುಂದಾದರೆ, ದೇಶ, ಶಾಂತಿ, ಸುಖ, ಸಮೃದ್ಧಿ ಕಾಣಲು ಸಂಶಯವೇ ಇಲ್ಲವಾಗುತ್ತದೆ.

ಎಲ್ಲದಕ್ಕಿಂತಲೂ ಮುಖ್ಯವಾಗಿ, ಭಾರತೀಯರು ತಮ್ಮ ಪೂರ್ವೇತಿಹಾಸದ ಹಾಳೆಗಳನ್ನು ಓದಿ, ಅಭ್ಯಸಿಸಿ, ತಮ್ಮ ಹಿರಿಯರು ಎಸಗಿದ ತಪ್ಪುಗಳನ್ನು ಅವರು ಗಳಿಸಿದ ಅನುಭವಗಳನ್ನು ಪಾಠಗಳನ್ನು ಅರಿತು ಅಭ್ಯಸಿಸಿ, ಪರಿಪಾಲಿಸಿದರೆ, ಪುನಃ ಪರಕೀಯರ ವಶವಾಗಿ ಪುನಃ ದಾಸ್ಯಕ್ಕೆ ಗುರಿಯಾಗುವುದನ್ನು ತಪ್ಪಿಸಿಕೊಳ್ಳಬಹುದು.

ಗುರು ಹರಗೋಬಿಂದ್‌ರು ಸಾರಿದ ತರಹ, 'ಜಾಹಿರ್ ಅಮೀರಿ, ಬಾತನ್ ಫಕೀರಿ:

ಗುರುನಾನಕ್ ನೆ ಮಾಯಾ ತ್ಯಾಗ ಥಿ; ಸಂಸಾರ್ ನಹೀ ತ್ಯಾಗ್ ಥಾ', ಪ್ರತಿಯೊಬ್ಬ ಭಾರತೀಯ 'ನಾನು ಬಾಹ್ಯದಲ್ಲಿ ರಾಜನಂತೆ, ಅಂತರಂಗದಲ್ಲಿ ಫಕೀರನಂತೆ' ಜೀವನ ಸಾಗಿಸಿ, ಭಗವದ್ ಗೀತೆ ಸಾರಿದಂತೆ, 'ತನ್ನ ಕರ್ತವ್ಯವನ್ನು ಯಾವ ಫಲಾಪೇಕ್ಷೆಯಿಲ್ಲದೆ' ಎಸಗಿದರೆ, ಪ್ರಾಯಶಃ ನಮ್ಮ ದೇಶ ಒಂದು ಉಜ್ವಲ, ಪ್ರತಿಭಾವಂತ, ಕೆಚ್ಚದೆಯ ವೀರರ ರಾಷ್ಟ್ರವಾಗುವುದರಲ್ಲಿ ಸಂಶಯವಿರದು. ಆದರೆ, ಇದು ಕೇವಲ ಒಂದು ಭ್ರಮೆ, ಆಶೆಯಾಗದೆ, ನಾಡು ಭವಿಷ್ಯದಲ್ಲಿ ಪುನಃ ಪರಕೀಯರ ವಶವಾಗದೆ ತನ್ನ ಸ್ವಾತಂತ್ರ್ಯ ಕಾಪಾಡಿಕೊಂಡು, ಸ್ವಾಭಿಮಾನ, ಕೆಚ್ಚು, ತ್ಯಾಗಗಳಿಂದ ವಿಜೃಂಭಿಸುತ್ತಿದೆ ಎಂಬ ಬಲವಾದ ನಂಬಿಕೆಯಿಂದ ನಾವು ಮುನ್ನಡೆಯಬೇಕಾಗಿದೆ.

****

BIBLIOGRAPHY

Adventurer in the Punjab - Language Dept. Punjab University - 1970.
Al - Badouni - Muntakabu - T Tawarikh- Renaissance publishing House, Jitarnagar, Delhi -5, 1986
Abul - Fazl Allami - The Ain-i-Akbari tr. H Blockman - Oriental Books Reprint Corporation, Delhi.
Alexander Gardner - The Fall of Sikh empire - National book Shop Chandni Chowk, Delhi - 6 - 1898.
Babarnama - Memoirs of Babar - Oriental Books reprint corp. Delhi 5, 1979.
Basham A.L. - A Cultural History of India - Oxford University press, New Delhi - 1975.
Bingley A.H. - The Sikhs - National Book Shop, Delhi 6, 1999
Bhagat Lakshman Singh - Sikh Mortyrs - Lahore Book Shop, Ludhiana 2006/
Busteed H.E. - Echoes from Old Calcutta - Asian educational services, N Delhi - 1999, First published in 1888
Charles Gough, Sir, Gen Mc Arthur and Arthur D Innes - The Sikhs and the Sikh wars - National Book Shop, Delhi - 6, 2005 - First Pub. 1897
Carmichael - Secret History of Khalsa Durbar - National Book Shop, Delhi - 6, 2002 First pub. 1847.
Cunningham Henry Steel (ed) The Spirit of Seventy Six - The Story of American Revolution as told by participants - Harper and Row Publishers, N.York, 1958.
Cunningham, Joseph Davery - A History of Sikhs - S. Chand and co. N Delhi 55, 1981 First Pub. Oxford - 1849
Dahiya, B.S. - Jats, The Ancient rulers - Sterling publishers P ltd. N Delhi 8. 1980
David Mc Cullough - John Adams - Simon and Schuster New York 2001
Dr. Gopal Singh - History of The Sikh People - World Sikh University Press, 12/3, Asaf Ali rd. New Delhi - 1979.
Dr. Gobind Singh Mansakhani - The Quintessence of Sikhism - Shiromani Gurudwara Parbandhak Committee, Amritsar, 1985.
Dutt, Ramesh - The Economic History of India under early British Rule - Rouetledge and Kegan Paul Ltd. London 1950.

Frawley David - The Rig Veda and History of India - Aditya Prakashan, New Delhi 33, 2001.
Gupta, Hari Ram - History of the Sikh Gurus - U.C.
Greval J.S. (ed) The Khasla - Manohar Pub and Distri. Delhi 2, 2004.
Gordon, General Sir John - The Sikhs - National Book Shop, Delhi 6, 1996 first Pub in 1883.
Greenless, Duncan - The Gospel of Peace - The Theosophical Pub. House, Madras - 1952.
Jayaswal K.P. - Hindu Polity - The B'lore Printing & Publishing co. Bangalore - 1978.
Keay John - India, A History - Harper collins - Publishers New Delhi 2000.
Kiernam, Victor G - Metcalfe's Mission to Lahore (1808-09) Languages Dept, Punjab - 1943.
Lyall, Sir Alfred - The Rise and expansion of the British Dominion in India - Shree Publishing House N Delhi 6, 1970.
Macauliffe - The Sikhs Religion - vol 1 to 8 Oxford, Clarendon press - 1909
Major Henry Court - History of the Sikhs -National Book Shop, Delhi - 6, 1988 First Pub. 1888.
Manucci Nicoleo - Storia Do Magor-Munshiram Manoharlal, N Delhi 55. First Publi 1905, Reprint 1981.
Mcleod - Early Sikh Tradition - Clarendon Press - Oxford - 1980
Mill, John Stuart - On Liberty - The Liberal Arts Press, N York 1956
Nehru, Jawaharlal - The Unity of India - Lindsay Drummond, London w 2 - 1941.
Nevis Allen - A Short History of America - The Modern Liberty N York 1942.
Owen, Frank - Tempestuous Journey - Lloyd George His Life and Times - McGrew Hill Book Co. Inc. N York 1955.
Pierre van Paasen - Days of our years - Garden city Publishing Co. Ltd. Garden city New York 1940.
Rawilson H.G. - Inercourse between India and the western world - Rai Book service, Delhi - 1977 first published 1925.
Romila Thaper - A History of India - Penguin Books, N. Delhi 1966
Segal Renald - The Crisis of India - Jaico Publishing House, Bombay 101.
Sen S.P. - The French in India - Munshiram Manorharlal, N. Delhi 1971.
Sergei Takeray - History of Religion - Progress Pub. Moscow, 1986
Simone Keil - The Need for Roots (preface by T.S. Eliot) The Beacon press, Burton, USA - 1952.
Sri Basaveshwara - by various authors, 8th Century commomeration Volume, Govt of Mysore, B'lore 1968.

Steinbech Henry - The Country of the Sikhs, Punjab, - National Book shop, Delhi - 6, 2002.

Thoreau, Henry David - Walden and Civil Disobedience - Penguin Books N York 1983, First published in 1854.

Wells H.G. - A Short History of the world - Penguin Books London 1922.

ಶಂಕರಯ್ಯ ಜಿ – ಪಾಶ್ಚಿಮಾತ್ಯ ಸಾಹಿತ್ಯ ವಿಮರ್ಶೆಯ ಪಕ್ಷಿನೋಟ – ಕನ್ನಡ ಸಾಹಿತ್ಯ ಪರಿಷತು, ಬೆಂಗಳೂರು – ೧೮, ೨೦೦೩.

ಪಂಪಮಹಾಕವಿ – ಪಂಪಭಾರತಂ, ಸಂ. ಎನ್. ಅನಂತರಂಗಾಚಾರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೨೦೦೨

ಇಂಡೆಕ್ಸ್

ಅನ್ವೇಷಕ ಪ್ರವಾಸಿ ಆಗುಂಬೆ ನಟರಾಜ್

ಉತ್ಸವದ ಮೂರ್ತಿ ರಥವಿಳಿದು ದೇವಾಲಯದ
ಮೂಲೆ ಕತ್ತಲಿನಲ್ಲಿ ಮುಗ್ಗುತಿಹುದು'
– ಎಂ. ಗೋಪಾಲಕೃಷ್ಣ ಅಡಿಗ

ಆಗುಂಬೆ ನಟರಾಜ್ (ಜನನ 1939) ಹಿರಿಯರು ಆಗುಂಬೆಯವರು, ಬೆಂಗಳೂರಿನಲ್ಲಿ ಬಾಲ್ಯ, ವಿದ್ಯಾಭ್ಯಾಸ, ವಾಣಿಜ್ಯ ಪದವೀಧರರಾದ ಮೇಲೆ ಕೆನರಾ ಬ್ಯಾಂಕಿನಲ್ಲಿ ಉದ್ಯೋಗ. ದಿವ್ಯ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಐತಿಹಾಸಿಕ ಸ್ಥಳಗಳ ಅನ್ವೇಷಣೆ ಆಗುಂಬೆ ನಟರಾಜರ ಹವ್ಯಾಸ. ಭಾರತದ ಹೆಚ್ಚಿನ ರಾಜ್ಯಗಳ ನೂರಾರು ಐತಿಹಾಸಿಕ ಅವಶೇಷಗಳಿಗೆ ಭೇಟಿ ನೀಡಿರುವ ಅವರು ಅಲೆಮಾರಿ ಅನ್ವೇಷಕ. 'ಇದು ದಿಲ್ಲಿ, ಇದು ದೆಹಲಿ', ಯಾತ್ರಾವಳಿ ಇದು ಕಾಶಿ ಇದು ವಾರಣಾಶಿ ಹೊರನಾಡಿನ ಮೂರು ಕರ್ನಾಟಕ ರಾಜ್ಯಗಳು – ಇಂಥ ಹಲವು ವಿನೂತನ ಪ್ರವಾಸ ಸಾಹಿತ್ಯ ಕೃತಿಗಳನ್ನು ಆಗುಂಬೆ ನಟರಾಜ್ ಬರೆದಿದ್ದಾರೆ.

ನಾಲ್ಕನೇ ಮುದ್ರಣ ಕಂಡಿರುವ ಹೊರನಾಡಿನ ಮೂರು ಕರ್ನಾಟಕ ರಾಜ್ಯಗಳು (ಮೊದಲ ಮುದ್ರಣ 1990) ಕರ್ನಾಟಕದ ರಾಜವಂಶಗಳ ಅಲಕ್ಷಿತ ಇತಿಹಾಸವನ್ನು ಅನಾವರಣಗೊಳಿಸಿರುವ ಕೃತಿ. ನೇಪಾಳದ ಮಿಥಿಲಾ ರಾಜ್ಯದ ರಾಜಧಾನಿಯಾಗಿ ನಾನ್ಯದೇವ ಕ್ರಿ.ಶ. 1097ರಲ್ಲಿ ರಾಜ್ಯ ಸ್ಥಾಪನೆ ಮಾಡಿದ್ದ. ಎಂಟು ಶತಮಾನಗಳ ಹಿಂದೆ ಬಂಗಾಳದ ನದಿಯಾ ಅಥವಾ ನಬೋದ್ವೀಪವನ್ನು ಕರ್ನಾಟಕ ಮೂಲದ ಸೇನರು ಆಳುತ್ತಿದ್ದರು. ಹೊಯ್ಸಳ ರಾಜವೀರ ಸೋಮೇಶ್ವರ (ಕ್ರಿ.ಶ. 1235) ತಮಿಳುನಾಡಿನ ಶ್ರೀ ರಂಗಂನಿಂದ ಹದಿನೈದು ಕಿಲೋಮಿಟರ್ ದೂರದಲ್ಲಿರುವ ಕಣ್ಣಾನೂರನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದ. ಅಲ್ಲಿ ಹೊಯ್ಸಳೇಶ್ವರ ದೇವಸ್ಥಾನ (ಭೋಜೇಶ್ವರ)ವಿದೆ. ಇಲ್ಲೆಲ್ಲ ಆಗುಂಬೆ ನಟರಾಜರನ್ನು ಭೂತಕಾಲದ ಭ್ರೂಣಗೂಢಗಳು ಕಾಡುತ್ತವೆ.

'ದಿಲ್ಲಿಯಿಂದ ತಾಮ್ದೀಸುರ್ಲಾಗೆ' ಪುಸ್ತಕವನ್ನು ಕುರಿತು ನನ್ನ ಸುತ್ತಾಟದಲ್ಲಿ ಕಂಡುಬಂದ ವಿಶೇಷ ಐತಿಹಾಸಿಕ ಸಂಗತಿಗಳ ಸಂಗ್ರಹವಿದು ಎನ್ನುತ್ತಾರೆ ಆಗುಂಬೆ ನಟರಾಜ. ದೆಹಲಿಯ ಬಲ್ಲೀಮರಾನ್‌ನಲ್ಲಿರುವ ಮಿರ್ಜಾ ಗಾಲಿಬ್‌ನ ಮನೆ, 'ದರ್ಬಾರಿ ಕಾನಡ', 'ಮಿಯಾ ಸಾರಂಗ್'ನಂಥ ಅಪೂರ್ವ ರಾಗಗಳ ಸಂಯೋಜಕ ತಾನ್‌ಸೇನರ ಹುಟ್ಟೂರು ಗ್ವಾಲಿಯರ್ ಸಮೀಪದ ಬೇಹಾಟ್, ಕಲ್ಕತ್ತಾದಲ್ಲಿರುವ ಟಿಪ್ಪುಸುಲ್ತಾನರ ವಂಶದವರ ಮನೆ, ದೆಹಲಿಯ ಬಜಾರ್‌ಸೀತಾರಾಮ್‌ನಲ್ಲಿ ಅನಾದರಕ್ಕೀಡಾಗಿರುವ ಕಮಲಾ ನೆಹರೂ ಅವರ ಮನೆ, ಈಸ್ಟ್ ಇಂಡಿಯಾ ಕಂಪೆನಿಯ ವಿರುದ್ಧ ಹೋರಾಡಿದ ಮುಂಬಯಿಯ ಮೊದಲ ಸ್ವಾತಂತ್ರ್ಯ ಸೇನಾನಿ ರಾಮ ಕಾಮತಿಯ ಮನೆ– ಇಲ್ಲಿಗೆಲ್ಲ ಆಗುಂಬೆ ನಟರಾಜರು ಭೇಟಿ ನೀಡಿದ್ದಾರೆ.

ಮೂರು ಐತಿಹಾಸಿಕ ಯುದ್ಧಗಳನ್ನು ಕಂಡ ಪಾಣಿಪತ್, ದೆಹಲಿಯಿಂದ ಅರವತ್ತು ಕಿಲೋಮೀಟರ್ ದೂರದಲ್ಲಿದೆ. (ಸಂಧಾನಕ್ಕೆ ಬಂದ ಕೃಷ್ಣ, ದುರ್ಯೋದನನಲ್ಲಿ ಕೇಳಿದ ಐದು ಗ್ರಾಮಗಳಲ್ಲಿ – ಪಾಣಿಪತ್ ಒಂದಾಗಿತ್ತಂತೆ). ದೆಹಲಿಯಿಂದ ನೂರುಕಿಲೋಮೀಟರ್ ದೂರದಲ್ಲಿರುವ ಹಸ್ತಿನಾಪುರ ಈಗ ಜೈನ ಬಸದಿಗಳ ಕೇಂದ್ರವಾಗಿದೆ. ಹಸ್ತಿನಾಪುರದ ಒಂದು ಮೂಲೆಯಲ್ಲಿರುವ ಶಿವಮಂದಿರದಲ್ಲಿ ಆಗುಂಬೆ ನಟರಾಜರಿಗೆ ಪಾಂಡವರ ಶಿಲಾಮೂರ್ತಿಗಳು ಕಾಣಸಿಗುತ್ತವೆ. ಕಾಶಿಯ ಗೋದೋಲಿ ರಸ್ತೆಯಲ್ಲಿರುವ ಕರ್ನಾಟಕದ ಜಂಗಮರ ಮಠದಲ್ಲಿ ಆ ಮಠಕ್ಕೆ ಔರಂಗಜೇಬ ನೀಡಿದ ದಾನದ ವಿವರಗಳನ್ನು ಲೇಖಕರು ನೋಡಿದ್ದಾರೆ. ಕ್ರಿಸ. 1543ರಲ್ಲಿ ಲಕ್ಷಗಟ್ಟಲೆ ಭಕ್ತರು ತಿರುಪತಿಯಲ್ಲಿ ಸೇರಿ ವೆಂಕಟರಮಣನನ್ನು ಸಂಕಟದಿಂದ (ಗೋವಾದ ಪೋರ್ಚುಗೀಸ್ ಗವರ್ನರ್ ಮಾರ್ಡಿಮ್ ಡಿಸೋಜಾರ ಆಕ್ರಮಣದಿಂದ) ಪಾರು ಮಾಡಿದ ಘಟನೆ ತಿರುಪತಿ–ಒಂದು ಚಾರಿತ್ರಿಕ ನೋಟದಲ್ಲಿದೆ.

ರಾಮೇಶ್ವರದ ಮೇರಿಕಾಡ್‌ನಲ್ಲಿ ಕ್ರಿಸ. 1542ರಲ್ಲಿ ಸೈಂಟ್ ಫ್ರಾನ್ಸಿಸ್ ಜೇವಿಯರ್ ಸ್ಥಾ ಸಿದ ಚರ್ಚ್ ಇದೆ. ಈ ಚರ್ಚ್‌ನ ಮುಂಭಾಗದಲ್ಲಿ ಗೋಡೆಯ ಮೇಲೆ ಮೂರು ಧರ್ಮಗಳ ಚಿಹ್ನೆಗಳಾದ ಕ್ರಿಶ್ಚಿಯನ್ ಕ್ರಾಸ್ (ಶಿಲುಬೆ), ಇಸ್ಲಾಂನ ಅರ್ಧ ಚಂದ್ರ, ಹಿಂದೂಗಳ ಧರ್ಮದೊಳಗಿನ ಅಶ್ವರೂಢ ರಾಮನನ್ನು ನಿರ್ಮಿಸಿದ್ದರು.

ಆಗುಂಬೆ ನಟರಾಜ್, ಗುಂ ನಲ್ಲಿ ಗೋವಿಂದನಾಗುವ ಟ್ರಾವೆಲ್ ಏಜೆನ್ಸಿ ಪ್ರವಾಸಿಯಲ್ಲ. ಕೃಷ್ಣಾನಂದ ಕಾಮತ್‌ರನ್ನು ನೆನ ಸುವ ಅನ್ವೇಷನೆ, ಸಂಶೋಧಕ ಪ್ರವೃತಿಯ ಪ್ರವಾಸಿ. ಈಗ ಮುದ್ರಣಗೊಳ್ಳುತ್ತಿರುವ ಇವರ ಹೊಸ ಇಂಗ್ಲಿಷ್ ಪುಸ್ತಕ – **SECULARISM.**

ಹಂಸ ಪ್ರಕಾಶನದ ಪುಸ್ತಕಗಳ ಮುದ್ರಣದ ಗುಣಮಟ್ಟ ತೃ ್ತಕರವಾಗಿಲ್ಲ. ಎಪ್ಪತ್ತರ ಹೊಸ್ತಿಲಲ್ಲಿರುವ ಆಗುಂಬೆ ನಟರಾಜರಿಗೆ ಇಪ್ಪತ್ತರ ಉತ್ಸಾಹ. 'ದಿಲ್ಲಿಯಿಂದ ತಾಮ್ಸೀ ಸುಲ್ತಾಗೆ' ಓದಿ, ಈ ಕನಸಿನ ಲೋಕದಲ್ಲಿ ಪ್ರವಾಸ ಮಾಡಿ ಖುಷಿಪಟ್ಟ ನಾನು ಆಗುಂಬೆ ನಟರಾಜರಿಗೆ ಫೋನ್ ಮಾಡಿ ಅಭಿನಂದನೆ ತಿಳಿಸಿ, ನಿಮಗೆ ಯಾವುದಾದರೂ ಪ್ರಶಸ್ತಿ ಬಂದಿದೆಯೇ? ಎಂದು ಕೇಳಿದೆ. 'ನೀವು ಫೋನ್ ಮಾಡಿ ಮಾತನಾಡಿದ್ದೇ ನನಗೆ ಪ್ರಶಸ್ತಿ' ಎಂದರು ಅವರು. ಹೌದು, 'ಜನ ಬದುಕಬೇಕೆಂದ ಕಾವ್ಯ ಮುಖದಿಂ ಪೇಳ್ದನ್ ಅನಪೇಕ್ಷೆಯಿಂದ ಕವಿ ರಾಘವಾಂಕ' ಪರಂಪರೆ ಮುಂದುವರೆಯುತ್ತಿದೆ.

(ಉದಯವಾಣಿ ಸಾಪ್ತಾಹಿಕ ತಾ. 19.10.08ರಲ್ಲಿ ಪ್ರಕಟವಾದ ಶ್ರೀ ಮುರಳೀಧರ ಉಪಾಧ್ಯಾಯರ ವಿಮರ್ಶೆಯ ಮರುಮುದ್ರಣ)

ಹೊರನಾಡಿನ ಕರ್ನಾಟಕ ರಾಜ್ಯಗಳು – ಒಂದು ವಿಮರ್ಶೆ

ಎ.ಎಸ್. ನಟರಾಜ್ ಬರೆದಿರುವ ಹೊರನಾಡಿನ ಕರ್ನಾಟಕ ರಾಜ್ಯಗಳು ನೂರೆಂಟು ಪುಟಗಳಲ್ಲಿ ಮೂಡಿ ಬಂದಿರುವ ಚಿಕ್ಕ–ಚೊಕ್ಕ ವೈಶಿಷ್ಟ್ಯ ಪೂರ್ಣ ಗ್ರಂಥ. ಮಿಥಿಲಾಧ ಕರ್ನಾಟಕ ರಾಜ್ಯ ಬಂಗಾಳದಲ್ಲಿ ಸೇನರ ರಾಜ್ಯ ಮತ್ತು ತಮಿಳುನಾಡಿನಲ್ಲಿ ಹೊಯ್ಸಳರ ರಾಜ್ಯ ಇವೇ ಮೂರು ಹೊರನಾಡಿನ ಕರ್ನಾಟಕ ರಾಜ್ಯಗಳು. ಲೇಖಕರು ಈ ಗ್ರಂಥದಲ್ಲಿ ಮಿಥಿಲಾದಲ್ಲಿ ರಾಜಧಾನಿ ಸಿಂಹರಾಯಗಢ (ನೇಪಾಳದಲ್ಲಿ), ಬಂಗಾಳದಲ್ಲಿ ಸೇನರ ರಾಜಧಾನಿ ನವದ್ವೀಪ (ನದಿಯಾ) ಮತ್ತು ತಮಿಳುನಾಡಿನಲ್ಲಿ ಹೊಯ್ಸಳ ರಾಜಧಾನಿ ಕಣ್ಣಾನೂರುಗಳಿಗೆ ತಾವು ಕೈಗೊಂಡ ಪ್ರವಾಸ ಅನುಭವಗಳನ್ನೂ ಹಾಗೂ ತಾವು ಕಂಡ ಐತಿಹಾಸಿಕ ಅವಶೇಷಗಳ ವಿವರಗಳನ್ನೂ ಹಾಗೂ ಮೂರು ರಾಜವಂಶಗಳ ರಾಜರ ಐತಿಹಾಸಿಕ ಅವಶೇಷಗಳ ವಿವರಗಳನ್ನೂ ಹಾಗೂ ಮೂರು ರಾಜವಂಶಗಳ ರಾಜರ ಆಳ್ವಿಕೆಯ ಕಾಲನಿರ್ದೇಶ, ವಂಶವೃಕ್ಷ, ಆಡಳಿತ ವ್ಯವಸ್ಥೆ, ಧರ್ಮ, ಕಲೆ, ಸಾಹಿತ್ಯ ಮುಂತಾದ ಸಾಂಸ್ಕೃತಿಕ ಸಾಧನೆಗಳು ಸಾಮಾಜಿಕ ಆರ್ಥಿಕ ವ್ಯವಸ್ಥೆ ಇವೆಲ್ಲದರ ಬಗ್ಗೆ ಮಾಹಿತಿಯನ್ನು ಆಧಾರಗಳ ಸಹಿತವಾಗಿ ನೀಡಿರುವುದು ಗ್ರಂಥದ ಮಹತ್ವವನ್ನು ಹೆಚ್ಚಿಸಿದೆ.

ಮಿಥಿಲಾ, ಬಂಗಾಳದ ಸೇನರು, ತಮಿಳುನಾಡಿನಲ್ಲಿ ಹೊಯ್ಸಳರು ಎಂಬ ಮೂರು ಶೀರ್ಷಿಕೆಗಳಲ್ಲಿ ಹೊರನಾಡಿನ ಕರ್ನಾಟಕ ರಾಜ್ಯಗಳ ಬಗ್ಗೆ ವಿವೇಚಿಸಲಾಗಿದೆ. ಮೂರೂ ರಾಜವಂಶಗಳ ಬಗ್ಗೆ ವಿವೇಚನೆ ೯ಠಕೆಯಿಂದ ಪ್ರಾರಂಭಗೊಳ್ಳುತ್ತದೆ. ೯ಠಿಕೆಯಲ್ಲಿ ಗ್ರಂಥಕರ್ತರು ಕ್ಷೇತ್ರ ಸಂದರ್ಶನದ ವಿವರಗಳನ್ನು ಒದಗಿಸಿದ್ದಾರೆ. ಮಿಥಿಲೆಯ ಕರ್ನಾಟಕ ರಾಜವಂಶದ ಬಗ್ಗೆ ಏಳು ಅಧ್ಯಾಯಗಳು ಬಂಗಾಳದ ಸೇನರ ಬಗ್ಗೆ ಮೂರು ಅಧ್ಯಾಯಗಳು ತಮಿಳುನಾಡಿನ ಹೊಯ್ಸಳರ ಬಗ್ಗೆ ಒಂದು ಅಧ್ಯಾಯವೂ ಇದ್ದು ಒಂದೊಂದು ರಾಜವಂಶದ ಕಥನದ ಕೊನೆಯಲ್ಲಿ ಆಧಾರಗ್ರಂಥಗಳ ಪಟ್ಟಿಯನ್ನು ಮತ್ತು ಪ್ರಮುಖ ಐತಿಹಾಸಿಕ ಸ್ಮಾರಕಾವಶೇಷಗಳ ಛಾಯಾಚಿತ್ರಗಳನ್ನು ಕೊಡಲಾಗಿದೆ.

ಈವರೆಗೆ ಹೇಳಿದ ಗ್ರಂಥಸ್ವರೂಪ ವಿವರಣೆಯಿಂದ ಈ ಗ್ರಂಥವನ್ನು ಅತ್ಯಂತ ಆಸಕ್ತಿದಾಯಕ ಐತಿಹಾಸಿಕ ಮಾಹಿತಿಯನ್ನೊದಗಿಸುವ ಗ್ರಂಥವೆಂದು ಪರಿಗಣಿಸಬಹುದಾಗಿದೆ. ಒಬ್ಬ ಬ್ಯಾಂಕಿನ ಉದ್ಯೋಗಿಯು ಬರೆದಿರುವ ಹವ್ಯಾಸಿ ಚಾರಿತ್ರಿಕ ಗ್ರಂಥವೆಂದು ತಿಳಿದುಬರುವುದು ತಮ್ಮ ಶುಭಾಷಯ ಲೇಖನದಲ್ಲಿ ಕೆ.ಟಿ. ಪಾಂಡುರಂಗಿಯವರು ಮಾಡಿರುವ ಪ್ರಸ್ತಾಪದಿಂದ ಮಾತ್ರ. ಇತಿಹಾಸದ ವಿದ್ಯಾರ್ಥಿಗಳಿಗೆ ಕ್ಷೇತ್ರ ಸಂಶೋಧಕರಿಗೆ ಮಾರ್ಗದರ್ಶನ ಪ್ರೇರಣೆಗಳೊದಗಿಸುವ ಅತ್ಯಮೂಲ್ಯ ಕೃತಿಯಾಗಿದೆ ಇದು. ಬರವಣಿಗೆ, ಭಾಷೆ, ಶೈಲಿ ಎಲ್ಲವೂ ಸರಳ ಮತ್ತು ಆಕರ್ಷವಾಗಿದೆ. ಆದರೆ ಈ ಗ್ರಂಥದಲ್ಲಿ ಮೂರು ರಾಜವಂಶಗಳ ಕಥನಕ್ಕೆ ಸಮಾನವಾಗಿ ಸ್ಥಳಾವಕಾಶವನ್ನು ನೀಡಲಾಗಿಲ್ಲ. ಮಿಥಿಲೆಯ ಕರ್ನಾಟಕ ರಾಜವಂಶದ ಬಗ್ಗೆ ದೀರ್ಘವಾದ ನಿರೂಪಣೆಯಿದೆ. ಪ್ರತಿಯೊಬ್ಬ ರಾಜನಿಗೆ ಸಂಬಂಧಿಸಿದ ವಿಚಾರವನ್ನು ಪ್ರತ್ಯೇಕ ಅಧ್ಯಾಯಗಳಲ್ಲಿ ನೀಡಲಾಗಿದೆ.

ರಾಜರ ಸಿಂಹಾಸನಾರೋಹಣದ ವರ್ಷ ಆಳ್ವಿಕೆಯ ಕಾಲಗಣನೆ ಉತ್ತರಾಧಿಕಾರಿತ್ವ ಮುಂತಾದ ವಿಷಯಗಳಿಗೆ ಸಂಭಂಧಿಸಿದಂತೆ ಆಧಾರ ಸಹಿತವಾಗಿ ಚರ್ಚೆ ನಡೆಸಲಾಗಿದೆ. ಇಂತಹ ಒಂದು ಚರ್ಚೆ ಸ್ವಾಭಿಪ್ರಾಯ ಮಂಡನೆ ಸೇನರ ಬಗ್ಗೆಯಾಗಲೀ ಹೊಯ್ಸಳರ ಬಗ್ಗೆಯಾಗಲೀ ಕಂಡುಬರುವುದಿಲ್ಲ. ಸೇನರು ಯಾವಾಗ ಯಾವ ಸಂದರ್ಭದಲ್ಲಿ ಬಂಗಾಳದಲ್ಲಿ ರಾಜ್ಯ ಸ್ಥಾಪನೆ ಮಾಡಿದರು ಎಂಬ ವಿಚಾರಸೂಕ್ತ ರೀತಿಯಲ್ಲಿ ನಿರೂ ಸಲ್ಪಟ್ಟಿದೆಯಾದರೂ ಮಿಥಿಲೆಯ ರಾಜರಿಗೆ ದೊರೆತಷ್ಟು ಪ್ರಾಶಸ್ತ್ಯ ಇವರಿಗೆ ದೊರೆತಿಲ್ಲವೆಂದೆನಿಸುತ್ತದೆ. ಇನ್ನು ತಮಿಳುನಾಡಿನ ಹೊಯ್ಸಳರ ಬಗ್ಗೆ ಕೇವಲ ಒಂದೇ ಅಧ್ಯಾಯದಲ್ಲಿ ಇಡೀ ರಾಜಕೀಯ ಇತಿಹಾಸ ಮತ್ತು ಸಾಧನೆಗಳನ್ನು ಆತುರಾತುರಾಗಿ ಸಂಕ್ಷಿಪ್ತವಾಗಿ ಹೇಳಿ ಮುಗಿಸಿದೆಯೆಂದೆನಿಸುತ್ತದೆ.

– ಬೆಂ. ಶಾ. ಶ್ಯಾಮಲಾ ರತ್ನಕುಮಾರಿ
ಕರ್ನಾಟಕ ಲೋಚನ ಪತ್ರಿಕೆಯ
ಡಿ. 2004ರಲ್ಲಿ ಪ್ರಕಟಗೊಂಡ ವಿಮರ್ಶೆ